ಆದಿಲಶಾಹಿ ಸಾಹಿತ್ಯ ಸಂಪುಟ : ೬

ಇಬ್ರಾಹೀಮ ನಾಮಾ • ಗುಲದಸ್ತಾಯೆ ಬಿಜಾಪುರ
ತಾರೀಖೆ ಹಪ್ತಕುರ್ಸಿ • ಘುತೂಹತೆ ಅಲಂಗೀರ್

ವಚನಪಿತಾಮಹ ಡಾ॥ ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರ
ಬಿ.ಎಲ್.ಡಿ.ಇ. ಸಂಸ್ಥೆ, ವಿಜಾಪುರ

ಆದಿಲಶಾಹಿ ಸಾಹಿತ್ಯ ಸಂಪುಟ : ೬

ಇಬ್ರಾಹೀಮ ನಾಮಾ
ಗುಲದಸ್ತಾಯೆ ಬಿಜಾಪುರ
ತಾರೀಖೆ ಹಫ್ತಕುರ್ಸಿ
ಫುತೂಹತೆ ಅಲಂಗೀರ್ (ಭಾಗಶಃ)

ಆದಿಲಶಾಹಿ ಸಾಹಿತ್ಯ ಸಂಪುಟ : ೬

ಇಬ್ರಾಹೀಮನಾಮಾ

ಅನು : ಮುಹಮ್ಮದ್ ಸಿಬ್ಘತ್‌ಉಲ್ಲಾಹ್

ಗುಲದಸ್ತಾಯೆ ಬಿಜಾಪುರ

ಅನು: ಕೃಷ್ಣ ಕೊಲ್ಹಾರಕುಲಕರ್ಣಿ– ಮೌಲಾನಾ ಮಹಬೂಬುರ್ ರಹಮಾನ ಮದನಿ

ತಾರೀಖೆ ಹಪ್ತಕುರ್ಸಿ

ಅನು: ಕೃಷ್ಣ ಕೊಲ್ಹಾರಕುಲಕರ್ಣಿ– ಮೌಲಾನಾ ಮಹಬೂಬುರ್ ರಹಮಾನ ಮದನಿ

ಘುತೂಹತೆ ಅಲಂಗೀರ್ (ಭಾಗಶಃ)

ಅನು: ಆರ್.ಕೆ. ಕುಲಕರ್ಣಿ

ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ.ಎಲ್.ಡಿ.ಇ. ಸಂಸ್ಥೆ, ಬಿಜಾಪುರ

Ibrahim Nama ■ Guladastae Bijapur ■ Tarikhe Haptakursi ■ Phutuhate Alamgir : Persian & Dakani works.
Kannada translation by Dr. Muhammad Sibghat Ullah, Dr. Krishna Kolharkulkarni, Moulana Mahabobur Rahman Madani & Dr. R.K. Kulkarni.

Published by : **Dr. P.G.Halakatti Research Centre,**
B.L.D.E. Association, Bijapur, Karnataka

Edition : **2014**

Pages : xviii + 342 = 360

Copies : **1000**

Price : Rs. 200.00

Typeset : **Dr. P. G. Halakatti Research Centre,** Bijapur

Printed : **Print Point,** Bengaluru. Mob : 9739067359

ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆರ್ಥಿಕ ಅನುದಾನದ ನೆರವಿನಿಂದ ಈ ಪುಸ್ತಕ ಪ್ರಕಟವಾಗಿದೆ.

ಇಬ್ರಾಹೀಮ ನಾಮಾ ■ಗುಲದಸ್ತಾಯೆ ಬಿಜಾಪುರ ■ತಾರೀಖೆ ಹಪ್ತಕುರ್ಸಿ ■ಫುತೂಹತೆ ಅಲಂಗೀರ್.
ಪರ್ಶಿಯನ್ ಮತ್ತು ದಖನಿ ಕೃತಿಗಳು.
ಅನುವಾದಕರು : ಡಾ. ಮುಹಮ್ಮದ್ ಸಿಬ್ಘತ್‌ಉಲ್ಲಾಹ್, ಡಾ. ಕೃಷ್ಣ ಕೊಲ್ಹಾರಕುಲಕರ್ಣಿ,
ಮೌಲಾನಾ ಮಹಬೂಬುರ್ ರಹಮಾನ ಮದನಿ ಮತ್ತು ಡಾ. ಆರ್.ಕೆ.ಕುಲಕರ್ಣಿ.

ಪ್ರಕಾಶಕರು : ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ,
ಬಿ.ಎಲ್.ಡಿ.ಇ. ಸಂಸ್ಥೆ, ಬಿಜಾಪುರ

ಆವೃತ್ತಿ : ಪ್ರಥಮ ೨೦೧೪

ಪುಟಗಳು : xviii + ೩೪೨ = ೩೬೦

ಪ್ರತಿಗಳು : ೧೦೦೦

ಬೆಲೆ : ರೂ. ೨೦೦.೦೦

ಡಿ.ಟಿ.ಪಿ. : ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ, ಬಿಜಾಪುರ

ಮುದ್ರಣ : ಪ್ರಿಂಟ್ ಪಾಯಿಂಟ್, ಬೆಂಗಳೂರು. ಮೊ. ೯೭೩೯೦೬೭೩೫೯

*

ಆದಿಲ್‌ಶಾಹಿ ಸಾಹಿತ್ಯ ಅನುವಾದ ಸಮಿತಿ

ಅಧ್ಯಕ್ಷರು

ಡಾ. ಎಂ.ಎಂ. ಕಲಬುರ್ಗಿ

ನಿರ್ದೇಶಕರು

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ಸದಸ್ಯರು

ಡಾ. ಬಿ.ಜಿ. ಮೂಲಿಮನಿ

ಡಾ. ರಹಮತ್ ತರೀಕೆರೆ

ಶ್ರೀ ರಂಜಾನ್ ದರ್ಗಾ

ಡಾ. ಎಚ್. ಜಿ. ದಡ್ಡಿ

ವಿಶೇಷ ಆಮಂತ್ರಿತ ಸದಸ್ಯರು

ಶ್ರೀ ಶಿವಯೋಗಿ ಎಸ್. ತಂಬಾಕೆ

ಡಾ. ಎಂ. ಎಸ್. ಮದಭಾವಿ

ಮೌಲಾನಾ ಮಹಬೂಬುರ್ ರಹಮಾನ ಮದನಿ

ಪದನಿಮಿತ್ತ ಸದಸ್ಯರು

ಜಿಲ್ಲಾಧಿಕಾರಿಗಳು, ಬಿಜಾಪುರ

ಸಹಾಯಕ ನಿರ್ದೇಶಕರು,

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬಿಜಾಪುರ

*

ಅಧ್ಯಕ್ಷರ ಮಾತು

ಎಂ. ಎಂ. ಕಲಬುರ್ಗಿ

ವಿಜಾಪುರದ ಬಿ.ಎಲ್.ಡಿ. ಶಿಕ್ಷಣಸಂಸ್ಥೆ ಇತ್ತೀಚಿನ ದಿನಗಳಲ್ಲಿ ಸಾಂಸ್ಕೃತಿಕ ಸಂಸ್ಥೆಯಾಗಿಯೂ ಬೆಳೆಯುತ್ತಲಿದೆ. ಈ ಸಂಸ್ಥೆಯ ಭಾಗವಾಗಿರುವ 'ವಚನಪಿತಾಮಹ ಡಾ॥ ಫ.ಗು. ಹಳಕಟ್ಟಿ ಸಂಶೋಧನ ಸಂಸ್ಥೆ'ಯ ಇಂದಿನ ಕಾರ್ಯ ಮತ್ತು ಕಾರ್ಯಕ್ರಮಗಳು ಇದಕ್ಕೆ ಉದಾಹರಣೆಯೆನಿಸಿವೆ.

ಡಾ॥ ಫ.ಗು. ಹಳಕಟ್ಟಿಯವರದು ಕೇವಲ ವ್ಯಕ್ತಿಕಲ್ಯಾಣಕೇಂದ್ರಿತ ವ್ಯಕ್ತಿತ್ವವಲ್ಲ, ಸಮಾಜಕಲ್ಯಾಣ ಕೇಂದ್ರಿತ ವ್ಯಕ್ತಿತ್ವ. ಇದಕ್ಕೆ ತಕ್ಕಂತೆ ಅವರ ಹೆಸರಿನ ಈ ಸಂಸ್ಥೆ ಎಲ್ಲ ಸಮಾಜಗಳನ್ನು-ಸಾಮಾಜಿಕರನ್ನು 'ಇವ ನಮ್ಮವ, ಇವ ನಮ್ಮವ, ಇವ ನಮ್ಮವ' ಎಂಬ ಆದರ್ಶದಲ್ಲಿ ಬೆಳೆಯುತ್ತಲಿದೆ. ಇದಕ್ಕೆ ಸಾಕ್ಷಿಯಾಗಿದೆ, ಈ ಸಂಸ್ಥೆ ಕೈಗೆತ್ತಿಕೊಂಡಿರುವ 'ಆದಿಲ್‌ಶಾಹಿ ಸಾಹಿತ್ಯ ಅನುವಾದ ಯೋಜನೆ'.

ಮಧ್ಯಕಾಲೀನ ಭಾರತೀಯ ಇತಿಹಾಸದಲ್ಲಿ ವಿಜಾಪುರದ ಆದಿಲ್‌ಶಾಹಿಗಳ ಹೆಸರು ಪ್ರಸಿದ್ಧವಾದುದು, ಸುಪ್ರಸಿದ್ಧವಾದುದು. ಏಕಕಾಲಕ್ಕೆ ಉತ್ತರದ ಮೊಗಲರೊಂದಿಗೆ, ದಕ್ಷಿಣದ ವಿಜಯನಗರದವರೊಂದಿಗೆ ಸಂಘರ್ಷ-ಸಮನ್ವಯದಿಂದ ೧೪೮೯-೧೬೮೬ರ ವರೆಗೆ ರಾಜ್ಯಭಾರಮಾಡಿದ ರಾಜಮನೆತನವಿದು. 'ದಿನೇ ಇಲಾಹಿ' ಖ್ಯಾತಿಯ ಮೊಗಲ್ ಮನೆತನದ ಅಕಬರನಂತೆ 'ದಾದೇ ಇಲಾಹಿ' ಖ್ಯಾತಿಯ ಆದಿಲ್‌ಶಾಹಿ ಮನೆತನದ ಜಗದ್ಗುರು ೨ನೆಯ ಇಬ್ರಾಹಿಮ್ ಬಾದಶಹನು ಸಮನ್ವಯಸಮಾಜ ಸ್ಥಾಪಿಸಲು ನಿರತನಾದುದು ಗಮನಾರ್ಹವೆನಿಸಿದೆ.

ಈ ಮನೆತನದ ಎಂಟು ಜನ ಅರಸರು ಸಾಹಿತಿಗಳು-ಸಾಹಿತ್ಯಪ್ರೇಮಿಗಳು. ಈ ಸಾಹಿತ್ಯ ಲೌಕಿಕ-ಧಾರ್ಮಿಕ ಎರಡೂ ಆಯಾಮಗಳಲ್ಲಿ ಬಿಚ್ಚಿ ಬೆಳೆದಿದೆ. ಹಿಂದೂಗಳದು ಪುರಾಣಪ್ರಜ್ಞೆಯಾದರೆ, ಮುಸಲ್ಮಾನರದು ಇತಿಹಾಸಪ್ರಜ್ಞೆ. ಈ ಪ್ರಜ್ಞೆಗೆ ಅನುಗುಣವಾಗಿ ಇವರ ಆಸ್ಥಾನದಲ್ಲಿ-ಇವರ ರಾಜ್ಯದಲ್ಲಿ ಸುಮಾರು ೨೦ ಕೃತಿಗಳು ಹುಟ್ಟಿಕೊಂಡಿವೆ.

ಸಮಕಾಲೀನ ರಾಜಕೀಯದೊಂದಿಗೆ ಜೀವನದ ಇತರ ಕ್ಷೇತ್ರಗಳನ್ನೂ ಚಿತ್ರಿಸಿದ ಈ ಸಾಹಿತ್ಯದ ಬಹುಭಾಗ ಪ್ರಕಟವಾಗದೆ, ಕನ್ನಡಕ್ಕೆ ಅನುವಾದವಾಗದೆ ಉಳಿದಿದ್ದಿತು. ಈ ದೊಡ್ಡ ಆಕರವನ್ನು ಕೈಬಿಟ್ಟು ಈವರೆಗೆ ಇತಿಹಾಸ ಬರೆದುದು ವಿಷಾದದ ಸಂಗತಿಯಾಗಿದೆ. ಇದಕ್ಕೆ ಕಾರಣ, ಈ ಸಾಹಿತ್ಯ ಪರ್ಶಿಯನ್, ದಖನಿ–ಉರ್ದು ಭಾಷೆಯಲ್ಲಿರುವುದು ಮತ್ತು ಈ ಅರಸರು ಅನ್ಯರೆಂದು ಭಾವಿಸಿರುವುದು. 'ವಚನಪಿತಾಮಹ ಡಾ॥ ಫ. ಗು. ಹಳಕಟ್ಟಿ ಸಂಶೋಧನ ಸಂಸ್ಥೆ' ಈ ಯಾವುದೇ ಭಿನ್ನತೆ ಪರಿಗಣಿಸದೆ ಪ್ರಸ್ತುತ ಯೋಜನೆಯನ್ನು ಕೈಗೆತ್ತಿಕೊಂಡಿದೆ.

ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆರ್ಥಿಕ ಅನುದಾನದ ನೆರವಿನಿಂದ ಈ ಯೋಜನೆ ಅಸ್ತಿತ್ವಕ್ಕೆ ಬಂದಿದೆ. ಇದನ್ನು ಒದಗಿಸುವಲ್ಲಿ ತೀವ್ರ ಆಸಕ್ತಿ ವಹಿಸಿದವರು ಈ ಹಿಂದೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾಗಿದ್ದ ಶ್ರೀ ಗೋವಿಂದ ಕಾರಜೋಳ ಅವರು. ಈ ಆಸಕ್ತಿಯನ್ನು ಮುಂದುವರಿಸುತ್ತಲಿರುವವರು ಇಂದು ಸಚಿವರಾಗಿರುವ ಶ್ರೀಮತಿ ಉಮಾಶ್ರೀ ಅವರು. ಸಹಕರಿಸಿದವರು ಈ ಇಲಾಖೆಯ ಅಧಿಕಾರಿಗಳು. ಇವರಿಗೆ ನಾವು ಕೃತಜ್ಞರಾಗಿದ್ದೇವೆ.

ಬಿ.ಎಲ್.ಡಿ ಶಿಕ್ಷಣ ಸಂಸ್ಥೆ ನಮಗೆಲ್ಲ ಹೆಮ್ಮೆಯ ಮಾದರಿ. ಈ ರೀತಿಯಲ್ಲಿ ಇದನ್ನು ಬೆಳೆಸುತ್ತಲಿರುವವರು ಅಧ್ಯಕ್ಷರಾದ ಶ್ರೀ ಎಂ.ಬಿ. ಪಾಟೀಲರು. ಈ ಸಂಸ್ಥೆಯ ಅಂಗವಾಗಿರುವ 'ವಚನಪಿತಾಮಹ ಡಾ॥ ಫ.ಗು. ಹಳಕಟ್ಟಿ ಸಂಶೋಧನ ಸಂಸ್ಥೆ'ಗಾಗಿ ತ್ರಿಕರಣಪೂರ್ವಕ ದುಡಿಯುತ್ತಲಿರುವವರು ಇದರ ಅಧ್ಯಕ್ಷರಾದ ಶ್ರೀ ಶಿವಯೋಗಿ ತಂಬಾಕೆಯವರು. ಇವರಿಬ್ಬರ ಪ್ರೋತ್ಸಾಹ–ನೆರವುಗಳಿಗೆ, ಈ ಯೋಜನೆಯ ಸಲಹಾಮಂಡಳಿಯ ಸದಸ್ಯರ ಮಾರ್ಗದರ್ಶನಕ್ಕೆ, ಅನುವಾದ ಕಾರ್ಯದಲ್ಲಿ ವಿದ್ವಾಂಸರು ನೀಡಿದ ಸಹಕಾರಕ್ಕೆ ಅಭಿನಂದನೆಗಳು.

ಸರಕಾರ ರೂಪಿಸಿದ ಸಲಹಾಮಂಡಳಿಯ ನಿರ್ದೇಶನದಂತೆ ಈ ಯೋಜನೆಗಾಗಿ ಡಾ॥ ಫ.ಗು. ಹಳಕಟ್ಟಿ ಭವನದಲ್ಲಿ ಒಂದು ಸ್ವತಂತ್ರ ಕಾರ್ಯಾಲಯವನ್ನು, ಅಗತ್ಯ ಸಿಬ್ಬಂದಿವರ್ಗವನ್ನು ಅಸ್ತಿತ್ವಕ್ಕೆ ತರಲಾಯಿತು. ಈ ಮಣಿಹಕ್ಕೆ ಡಾ॥ ಕೃಷ್ಣ ಕೊಲ್ಹಾರಕುಲಕರ್ಣಿ ಅವರು ನಿರ್ದೇಶಕರಾಗಿ ಲಭಿಸಿರುವುದು ಒಂದು ಸುಯೋಗವೆಂದೇ ಭಾವಿಸುತ್ತೇವೆ. ಮೊದಲಿನಿಂದಲೂ ಆದಿಲ್‌ಶಾಹಿ ಸಾಹಿತ್ಯ–ಸಂಸ್ಕೃತಿಗಳ ಅಧ್ಯಯನದಲ್ಲಿ ನಿಮಗ್ನರಾದ ಇವರು ಈ ಯೋಜನೆಗಾಗಿ ದುಡಿದ ರೀತಿ ಅನನ್ಯವಾದುದು. ಹಸ್ತಪ್ರತಿ–ಮುದ್ರಿತಪ್ರತಿಗಳ ಸಂಗ್ರಹ, ಸೂಕ್ತ ಅನುವಾದಕರ ಆಯ್ಕೆ, ಅವರಿಂದ ಕೆಲಸಮಾಡಿಸಿಕೊಳ್ಳುವ ರೀತಿ, ಅನುವಾದಗಳ ಪರಿಷ್ಕರಣ–ಪ್ರಕಟಣೆ ಇತ್ಯಾದಿಗಳಿಗಾಗಿ ಇವರು ತ್ರಿವಿಕ್ರಮಪ್ರಜ್ಞೆಯಿಂದ ಶ್ರಮಿಸಿದ್ದಾರೆ. ಇವರೊಂದಿಗೆ ಫ.ಗು. ಹಳಕಟ್ಟಿ ಸಂಶೋಧನ ಸಂಸ್ಥೆಯ ಕಾರ್ಯದರ್ಶಿಗಳಾದ ಡಾ॥ ಎಂ.ಎಸ್. ಮದಭಾವಿ ಅವರು ನಿರಪೇಕ್ಷ ಭಾವದಿಂದ ಹಗಲಿರುಳು ದುಡಿದಿದ್ದಾರೆ. ಇವರೊಂದಿಗೆ ಮಿಕ್ಕ ಸಿಬ್ಬಂದಿವರ್ಗದವರು ಸಹಕರಿಸಿದ ರೀತಿಯೂ ಸ್ಮರಣೀಯವಾಗಿದೆ. ಇವರೆಲ್ಲರಿಗೂ ಕೃತಜ್ಞತೆಗಳು.

■

*

ಪ್ರಸ್ತಾವನೆ

ಸಮಿತಿ ಸದಸ್ಯರು

ಮಧ್ಯಯುಗೀನ ಭಾರತದ ಚರಿತ್ರೆಯಲ್ಲಿ ಬಿಜಾಪುರದ ಆದಿಲಶಾಹಿಗಳ ಪಾತ್ರ ಬಹು ಮುಖ್ಯವಾಗಿದೆ. ದಕ್ಷಿಣ ಭಾರತದ ಬಹುಪಾಲು ಪ್ರದೇಶವನ್ನು ಅವರು ಬಿಜಾಪುರ ಕೇಂದ್ರದಿಂದ ಆಳಿದರು. ಇಂದಿನ ಅಖಂಡ ಕರ್ನಾಟಕವನ್ನು ಅವರು ಸುಮಾರು ಒಂದು ಶತಮಾನದಷ್ಟು ಕಾಲ ತಮ್ಮ ಅಂಕಿತದಲ್ಲಿ ಇಟ್ಟುಕೊಂಡಿದ್ದರು. ಹೀಗಾಗಿ ಆದಿಲಶಾಹಿಗಳ ಚರಿತ್ರೆಯನ್ನು ಅಭ್ಯಸಿಸದೆ ಕರ್ನಾಟಕದ ಚರಿತ್ರೆ ಪೂರ್ಣಗೊಳ್ಳುವುದಿಲ್ಲ.

ಈ ಆದಿಲಶಾಹಿಗಳ ರಾಜ್ಯವು ಕ್ರಿ.ಶ. ೧೪೮೯ರಿಂದ ೧೬೮೬ರ ವರೆಗೆ ಅಸ್ತಿತ್ವದಲ್ಲಿದ್ದಿತು. ೮ ಜನ ಬಾದಶಹರು ಆಳಿದರು. ಈ ಬಾದಶಹರುಗಳ ವ್ಯಕ್ತಿತ್ವ ವರ್ಣಮಯವಾಗಿದ್ದಿತು. ಸಾಹಿತ್ಯ, ಸಂಗೀತ, ಕಲೆ, ವಾಸ್ತುಶಿಲ್ಪ, ಧರ್ಮ ಜೊತೆಗೆ ರಾಜಕಾರಣ ಇವುಗಳಲ್ಲೆಲ್ಲ ಇವರು ತಮ್ಮದೇ ಆದ ಮುದ್ರೆಯನ್ನು ಒತ್ತಿ ಹೋಗಿದ್ದಾರೆ.

ಇಂದು ಜಗತ್ತಿನಲ್ಲೆಲ್ಲ ಓದುತ್ತಿರುವ ಭಾರತೀಯ ಮುಸಲ್ಮಾನರ ಚರಿತ್ರೆಯಾಗಿರುವ 'ತಾರೀಖೆ ಫರಿಶ್ತಾ' [ಪರ್ಶಿಯನ್] ಕೃತಿಯ ಕರ್ತೃ ಮುಹಮ್ಮದ್ ಕಾಸಿಮ ಫರಿಶ್ತಾ, ಎರಡನೆಯ ಇಬ್ರಾಹಿಮ ಆದಿಲಶಾಹ (ಕ್ರಿ.ಶ.೧೫೮೦–೧೬೨೬)ನ ಅಸ್ಥಾನದಲ್ಲಿದ್ದುಕೊಂಡು ಈ ಗ್ರಂಥವನ್ನು ಬರೆದನು. ಅದರಂತೆ ಇನ್ನೂ ಹಲವಾರು ಜನ ಇತಿಹಾಸಕಾರರು, ಕವಿಗಳು ಆದಿಲಶಾಹಿ ಆಸ್ಥಾನದಲ್ಲಿ ಇದ್ದುಕೊಂಡು ಕೃತಿಗಳನ್ನು ರಚಿಸಿದ್ದಾರೆ. ಅವುಗಳೆಲ್ಲ ಅಂದು ಪ್ರಚಲಿತದಲ್ಲಿದ್ದ ಪರ್ಶಿಯನ್ ಇಲ್ಲವೆ ದಖನಿ–ಉರ್ದು ಭಾಷೆಗಳಲ್ಲಿ ರಚಿತವಾಗಿವೆ.

ನಾಡಿನ ವಿಶ್ವವಿದ್ಯಾಲಯಗಳು, ಭಾರತೀಯ ಇತಿಹಾಸ ಅನುಸಂಧಾನ ಇತ್ಯಾದಿ ಸಂಸ್ಥೆಗಳು ಇತಿಹಾಸದ ಕೆಲಸ ಮಾಡುತ್ತಿದ್ದರೂ ಆದಿಲಶಾಹಿಗಳ ವಿಷಯದಲ್ಲಿ ಆಗಬೇಕಾದಷ್ಟು ಆಗಲಿಲ್ಲ. ಅದಕ್ಕೆ ಕಾರಣ, ಬಹುಶಃ ಅಧ್ಯಯನಕ್ಕೆ ಬೇಕಾಗುವ ಮೂಲ ಆಕರಗಳು ವಿಶ್ವದಾದ್ಯಂತ ಚದರಿ ಹೋಗಿರುವುದು ಮತ್ತು ಅವು ಪರ್ಶಿಯನ್, ದಖನಿ–ಉರ್ದು

ಭಾಷೆಗಳಲ್ಲಿರುವುದು. ಈ ಕೊರತೆಯನ್ನು ಗಮನಿಸಿ ಬಿಜಾಪುರ ಆದಿಲಶಾಹಿ ಕಾಲದ ಸಾಹಿತ್ಯವನ್ನು ಕನ್ನಡದಲ್ಲಿ ಪ್ರಕಟಿಸುವ ಪ್ರಯತ್ನವಾಗಿದೆ 'ಆದಿಲಶಾಹಿ ಸಾಹಿತ್ಯ ಅನುವಾದ ಯೋಜನೆ'.

ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ಸಂಲಗ್ನವಾಗಿರುವ ಬಿಜಾಪುರ ಬಿ.ಎಲ್.ಡಿ.ಇ. ಸಂಸ್ಥೆಯ ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರವು ಕಳೆದ ದಶಕದಿಂದ ಸಂಶೋಧನಕ್ಷೇತ್ರದಲ್ಲಿ ಅಪರೂಪದ ಕೆಲಸವನ್ನು ಮಾಡುತ್ತಿದೆ. ಡಾ. ಫ.ಗು. ಹಳಕಟ್ಟಿ ಅವರ ಸಮಗ್ರಸಾಹಿತ್ಯವನ್ನು ೧೫ ಸಂಪುಟಗಳಲ್ಲಿ ಸಂಪಾದಿಸಿ ಪ್ರಕಟಿಸಿದೆ. ೮ ವಿದ್ಯಾರ್ಥಿಗಳು ವಿವಿಧ ವಿಷಯಗಳಲ್ಲಿ ಪಿಎಚ್.ಡಿ ಪದವಿಗಳನ್ನು ಪಡೆದಿದ್ದಾರೆ. ಇನ್ನೂ ಹಲವರು ಪದವಿ ಪಡೆಯುವ ದಾರಿಯಲ್ಲಿದ್ದಾರೆ. ಇದಕ್ಕೆಲ್ಲ ಬಿ.ಎಲ್.ಡಿ.ಇ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಂ.ಬಿ.ಪಾಟೀಲ ಅವರ ನಿರಂತರ ಬೆಂಬಲವೇ ಕಾರಣವಾಗಿದೆ. ಅವರ ಆಸಕ್ತಿಯಂತೆ ಸಂಶೋಧನ ಕೇಂದ್ರವು 'ಆದಿಲಶಾಹಿ ಸಾಹಿತ್ಯ ಅನುವಾದ ಯೋಜನೆ'ಯನ್ನು ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಕಳಿಸಿತು. ಯೋಜನೆಯ ಮಹತ್ವವನ್ನು ಗುರುತಿಸಿ ಕರ್ನಾಟಕ ಸರಕಾರವು, ಡಾ. ಎಂ.ಎಂ. ಕಲಬುರ್ಗಿ ಅವರ ಅಧ್ಯಕ್ಷತೆಯಲ್ಲಿ ಡಾ. ಬಿ.ಜಿ.ಮೂಲಿಮನಿ, ಡಾ. ರಹಮತ್ ತರೀಕೆರೆ. ಶ್ರೀ ರಂಜಾನ್ ದರ್ಗಾ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಮತ್ತು ಡಾ. ಎಚ್.ಜಿ.ದಡ್ಡಿ- ಸದಸ್ಯರನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಿ ಇದಕ್ಕೆ ಅನುಮತಿ ನೀಡಿತು.

ದಿನಾಂಕ ೧೨-೩-೨೦೧೩ರಂದು ನಡೆದ ಸಮಿತಿಯ ಪ್ರಥಮ ಸಭೆಯಲ್ಲಿ ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರು ಈ ಯೋಜನೆಯ ನಿರ್ದೇಶಕರಾಗಿರಬೇಕೆಂದು, ಸಂಶೋಧನಕೇಂದ್ರದ ಅಧ್ಯಕ್ಷರಾದ ಶ್ರೀ ಶಿವಯೋಗಿ ತಂಬಾಕೆ ಮತ್ತು ಕಾಯದರ್ಶಿ ಡಾ. ಎಂ.ಎಸ್.ಮದಭಾವಿ ಅವರು ಸಮಿತಿಯ ಪದನಿಮಿತ್ತ ಸದಸ್ಯರಾಗಬೇಕೆಂದು ನಿರ್ಣಯಿಸಲಾಯಿತು.

ದಿನಾಂಕ ೧೫-೬-೨೦೧೩ರಂದು ನಡೆದ ಸಮಿತಿಯ ಎರಡನೆಯ ಸಭೆಯಲ್ಲಿ ಪರ್ಶಿಯನ್, ಅರೇಬಿಕ್, ದಖನಿ-ಉರ್ದು ಭಾಷೆಗಳಲ್ಲಿ ವಿದ್ವಾಂಸರಾದ ಮೌಲಾನಾ ಮಹಬೂಬುರ್ ರಹಮಾನ ಮದನಿ ಅವರನ್ನು ವಿಶೇಷ ಆಮಂತ್ರಿತ ಸದಸ್ಯರೆಂದು ತೀರ್ಮಾನಿಸಲಾಯಿತು.

ಇದು ಭಾರತದಲ್ಲಿಯೇ ಒಂದು ಅಪರೂಪದ ಯೋಜನೆ. ಮಧ್ಯಯುಗೀನ ಆದಿಲಶಾಹಿಗಳ ಕಾಲದಲ್ಲಿ ರಚಿತಗೊಂಡ ಎಲ್ಲ ಸಾಹಿತ್ಯವನ್ನು ಕನ್ನಡಕ್ಕೆ ತರುವುದು ಯೋಜನೆಯ ಮುಖ್ಯ ಉದ್ದೇಶ.

ಪ್ರಾರಂಭದಲ್ಲಿ ಆದಿಲಶಾಹಿ ಚರಿತ್ರೆಗೆ ಸಂಭಂಧಪಟ್ಟ ಈ ಕೆಳಗಿನ ಸಮಕಾಲೀನ ಕೆಲವು ಚರಿತ್ರ ಗ್ರಂಥಗಳ ಪಟ್ಟಿಯನ್ನು ಮಾಡಲಾಯಿತು. ಅವು ದೊರೆಯುವ ಸಂಭಾವ್ಯ ಸ್ಥಳಗಳನ್ನೂ ಹೀಗೆ ಗುರುತಿಸಲಾಯಿತು.

೧. **ಮುಹಮ್ಮದ ಕಾಸೀಮ ಫರಿಶ್ತಾ** : ತಾರೀಖೆ ಫರಿಶ್ತಾ [ಪರ್ಶಿಯನ್].
ಇಂಗ್ಲಿಷ್‌ಗೆ ಅನುವಾದ ಕ್ಯಾಪ್ಟನ್ ಬ್ರಿಗ್ಸ [ಕ್ರಿ.ಶ. ೧೮೭೯], ಮೂಲ ಪರ್ಶಿಯನ್ ಹಸ್ತಪ್ರತಿ ಮುಂಬಯಿ ಅರ್ಕೀವ್ಸ, ಸಾಲಾರ ಜಂಗ ವಸ್ತುಸಂಗ್ರಹಾಲಯ ಹೈದರಾಬಾದ ಇತ್ಯಾದಿಗಳಲ್ಲಿ ಲಭ್ಯ.

೨. **ಅಬ್ದುಲ್ಲಾ ದೆಹಲವಿ** : ಇಬ್ರಾಹಿಮನಾಮಾ [ದಖನಿ].
ಪ್ರಕಟವಾಗಿದೆ. ಮೂಲ ದಖನಿ ಹಸ್ತಪ್ರತಿ ಮುಂಬಯಿ ಅರ್ಕೀವ್ಸ ಮತ್ತು ಸಾತಾರಾದ ಔಂಧ ಅರ್ಕೀವ್ಸದಲ್ಲಿವೆ.

೩. **ಅಸದಬೇಗ** : ವಾಕಿಯಾತೆ ಅಸದಬೇಗ [ಪರ್ಶಿಯನ್].
ಚಾಪ್‌ಮನ್‌ನಿಂದ ಅನುವಾದವಾಗಿದೆ [೧೮ನೆ ಶತ]. ನಂತರ ಪಿ.ಎಂ.ಜೋಶಿ ಅವರಿಂದಲೂ, ಜೊತೆಗೆ ಇಲಿಯಟ್ ಮತ್ತು ಡೌಸನ್ ಸಂಪುಟ ೬ರಲ್ಲಿಯೂ ಭಾಗಶಃ ಅನುವಾದ. ಇದರ ಹಸ್ತಪ್ರತಿಯು ಆಂಧ್ರಪ್ರದೇಶ ಪ್ರಾಚೀನ ಹಸ್ತಪ್ರತಿಗಳ ಸಂಗ್ರಹ ಹೈದರಾಬಾದಿನಲ್ಲಿ ಲಭ್ಯ.

೪. **ಕಾಜಿ ನೂರುಲ್ಲಾ** : ತಾರೀಖೆ ಅಲಿ ಆದಿಲಶಹ [ಪರ್ಶಿಯನ್].
ಮೂಲ ಹಸ್ತಪ್ರತಿಗಳು ಮುಂಬಯಿ ಅರ್ಕೀವ್ಸ, ಇಂಡಿಯಾ ಆಫೀಸ ಲಾಯಬ್ರರಿ ಲಂಡನ್ ಮತ್ತು ಬ್ರಿಟಿಶ್ ಮ್ಯುಜಿಯಮ್ ಲಾಯಬ್ರರಿ ಲಂಡನ್, ಸಾಲಾರಜಂಗ ವಸ್ತುಸಂಗ್ರಹಾಲಯ(ಹೈದರಾಬಾದ್)ಗಳಲ್ಲಿ ಲಭ್ಯ.

೫. **ಜುಹೂರ್ ಬಿನ್ ಜುಹೂರಿ** : ಮುಹಮ್ಮದನಾಮಾ [ಪರ್ಶಿಯನ್].
ಹಸ್ತಪ್ರತಿಯು ಪ್ರಾಚ್ಯ ವಸ್ತುಸಂಗ್ರಹಾಲಯ ಬಿಜಾಪುರದಲ್ಲಿ ಲಭ್ಯ ಭಾಗಶಃ ಬಿ.ಡಿ. ವರ್ಮಾರಿಂದ ಇಂಗ್ಲಿಷನಲ್ಲಿ ಅನುವಾದ.

೬. **ನುಸ್ರತಿ** : ಅಲಿನಾಮಾ [ದಖನಿ].
ಪ್ರಕಟವಾಗಿದೆ. ಪ್ರತಿ ದುರ್ಲಭ.

೭. **ಮೌಲ್ವಿ ಬಶೀರುದ್ದೀನ ಅಹ್ಮದ** : ವಾಕಿಯಾತೆ ಮಮಲಿಕತ್ ಬಿಜಾಪುರ [ಉರ್ದು].
ಕರ್ನಾಟಕ ಉರ್ದು ಅಕಡೆಮಿಯಿಂದ ಪ್ರಕಟ. ಮೂಲಪ್ರತಿ ಸಾಲಾರಜಂಗ ಮ್ಯುಜಿಯಮ್ ಹೈದರಾಬಾದದಲ್ಲಿ ಲಭ್ಯ.

೮. **ಮುಹಮ್ಮದ ಹಾಶೀಮ ಘುಜೂನಿ**: ಘುತುಹತೆ ಆದಿಲಶಾಹಿ [ಪರ್ಶಿಯನ್].
ಮುಂಬಯಿ ಅರ್ಕೀವ್ಸ ಬ್ರಿಟಿಶ್ ಇಂಡಿಯಾ ಲಾಯಬ್ರರಿ ಲಂಡನ್‌ಗಳಲ್ಲಿ ಹಸ್ತಪ್ರತಿಗಳಿವೆ.

೯. **ಮೀರ್ ರಫೀಯುದ್ದೀನ ಶಿರಾಜಿ** : ತಜ್ಕಿದತುಲ್ ಮುಲೂಕ [ಪರ್ಶಿಯನ್].
ಸಾಲಾರಜಂಗ ವಸ್ತುಸಂಗ್ರಹಾಲಯ ಹೈದರಾಬಾದದಲ್ಲಿ ಹಸ್ತಪ್ರತಿ ಲಭ್ಯ.

೧೦. ಶೇಖ್ ಜೈನುದ್ದಿನ ಅಲ್ ಮಾಬಾರಿ : ತುಹಫತುಲ್ ಮುಜಾಹಿದೀನ [ಅರೇಬಿಕ್].
ಇಂಗ್ಲಿಷ್ ಅನುವಾದ ಪ್ರಕಟವಾಗಿದೆ.

೧೧. ಸೈಯದ ಅಲಿ ಬಿಲಗ್ರಾಮಿ : ತಾರೀಖೆ ದಖನ್ ೪ ಸಂಪುಟಗಳು [ಉರ್ದು].

೧೨. ಸಯ್ಯದ ಮೊಹಿಯುದ್ದೀನ ಪೀರಜಾದಾ: ಅಹವಾಲೆ ಸಲಾತೀನ ಬಿಜಾಪುರ[ಪರ್ಶಿಯನ್].
ಬ್ರಿಟಿಶ್ ವಸ್ತುಸಂಗ್ರಹಾಲಯ ಲಂಡನ್, ಹಸ್ತಪ್ರತಿ ಸಂಖ್ಯೆ ೨೬೭೨೦.

೧೩. ಫಿತೂರಖಾನ ವಲ್ಲದ ಅಸದಖಾನ ಲ್ಯಾರಿ : ತಾರೀಖೆ ಹಪ್ತಕುರ್ಸೀ [ಪರ್ಶಿಯನ್].
ಸಾಲಾರಜಂಗ ವಸ್ತು ಸಂಗ್ರಹಾಲಯ, ಹೈದರಾಬಾದ. ಇಂಡಿಯಾ ಆಫೀಸ ಲಾಯಬ್ರರಿ
ಲಂಡನ್‌ಗಳಲ್ಲಿ ಹಸ್ತಪ್ರತಿ ಲಭ್ಯ.

೧೪. ೨ನೆಯ ಇಬ್ರಾಹಿಮ ಆದಿಲಶಹ : ಕಿತಾಬೆ ನವರಸ [ದಖನಿ].
ಪ್ರಕಟವಾಗಿದೆ.

೧೫. ಮುಹಮ್ಮದ್ ಇಬ್ರಾಹಿಮ್ ಜುಬೇರಿ : ರೌಜತುಲ್ ಔಲಿಯಾ ಎ ಬಿಜಾಪುರ
[ಪರ್ಶಿಯನ್].
ಆಂಧ್ರಪ್ರದೇಶ ಪ್ರಾಚ್ಯ ಹಸ್ತಪ್ರತಿ ಸಂಗ್ರಹ ಹೈದರಾಬಾದದಲ್ಲಿ ಹಸ್ತಪ್ರತಿ ಲಭ್ಯ. ಸಂಖ್ಯೆ
೧೪೮೧೩.

೧೬. ಮುಹಮ್ಮದ್ ಇಬ್ರಾಹಿಮ್ ಜುಬೇರಿ : ಬಸಾತೀನೆ ಸಲಾತೀನ [ಪರ್ಶಿಯನ್].
ಮರಾಠೀ ಅನುವಾದದಿಂದ ಕನ್ನಡಕ್ಕೆ ಅನುವಾದ ಆಗಿದೆ. ಪರ್ಶಿಯನ್ ಹಸ್ತಪ್ರತಿ
ಸಾಲಾರಜಂಗ ವಸ್ತುಸಂಗ್ರಹಾಲಯ ಹೈದರಾಬಾದದಲ್ಲಿ ಲಭ್ಯ.

೧೭. ಮೀರ ಅಹಮದ ಅಲಿಖಾನ : ಗುಲದಸ್ತಾ ಎ ಬಿಜಾಪುರ [ದಖನಿ].
ಆಂಧ್ರಪ್ರದೇಶ ಆರ್ಕೀವ್ಸದಲ್ಲಿ ಹಸ್ತಪ್ರತಿ ಲಭ್ಯ. ಸಂಖ್ಯೆ ೧೯೩.

೧೮. ಅಬುಲ ಹಸನ ಕಾದಿರಿ : ಶಾಹಿಪತ್ ಇ ಹುದಾ [ಪರ್ಶಿಯನ್].
ಸಾಲಾರಜಂಗ ವಸ್ತುಸಂಗ್ರಹಾಲಯ ಹೈದರಾಬಾದದಲ್ಲಿ ಹಸ್ತಪ್ರತಿ ಲಭ್ಯ.

೧೯. ಆದಿಲಶಾಹಿಕಾಲದ ಫರ್ಮಾನುಗಳು ಮತ್ತು ಸನದುಗಳು : ಭಾರತ ಇತಿಹಾಸ ಸಂಶೋಧಕ
ಮಂಡಳ ಪುಣೆ, ಬಿಜಾಪುರ ವಸ್ತುಸಂಗ್ರಹಾಲಯ ಮತ್ತು ಇತರ ಸ್ಥಳಗಳಲ್ಲಿ ಲಭ್ಯ.

ಹೀಗೆ ಪಟ್ಟಿಮಾಡಿ, ಹಸ್ತಪ್ರತಿಗಳ ಶೋಧಕ್ಕೆ ತೊಡಗಲಾಯಿತು. ಸಾಲಾರಜಂಗ ವಸ್ತುಸಂಗ್ರಹಾಲಯ, ಆಂಧ್ರಪ್ರದೇಶ ಆರ್ಕೀವ್ಸ ಹೈದರಾಬಾದ, ಭಾರತೀಯ ಪುರಾತತ್ವ ಇಲಾಖೆ ವಸ್ತುಸಂಗ್ರಹಾಲಯ, ಗೋಳಗುಮ್ಮಟ ಬಿಜಾಪುರ– ಈ ಕೇಂದ್ರಗಳಿಂದ ಕೆಳಗಿನ ಹಸ್ತಪ್ರತಿಗಳು ದೊರೆತವು.

೧. ಕಾಜಿ ನೂರುಲ್ಲಾ : ತಾರೀಖೆ ಅಲಿ ಆದಿಲಶಹ [ಪರ್ಶಿಯನ್]

೨. ಮೀರ್ ರಫೀಯುದ್ದೀನ ಶಿರಾಜಿ : ತಜ್ಕಿದತುಲ್ ಮುಲೂಕ [ಪರ್ಶಿಯನ್]
೩. ಫಿತೂರಖಾನ ವಲ್ಲದ ಅಸದಖಾನ ಲ್ಯಾರಿ : ತಾರೀಖೆ ಹಪ್ತಕುರ್ಸಿ [ಪರ್ಶಿಯನ್]
೪. ಮೀರ ಅಹಮದ ಅಲಿಖಾನ : ಗುಲದಸ್ತಾ ಎ ಬಿಜಾಪುರ [ದಖನಿ]
೫. ಜುಹೂರ್ ಬಿನ್ ಜುಹೂರಿ : ಮುಹಮ್ಮದನಾಮಾ [ಪರ್ಶಿಯನ್]

ಹಸ್ತಪ್ರತಿಗಳನ್ನು ಒದಗಿಸಿದ ಮೇಲೆ ಕಾಣಿಸಿದ ಎಲ್ಲ ಸಂಸ್ಥೆಗಳ ಮುಖ್ಯಸ್ಥರಿಗೆ ನಮ್ಮ ಕೃತಜ್ಞತೆಗಳು. ಇದಲ್ಲದೆ, ಫರಿಶ್ತಾನ ತಾರೀಖೆ ಫರಿಶ್ತಾದ ಇಂಗ್ಲಿಷ್ ಮತ್ತು ಉರ್ದು ಅನುವಾದಗಳು, ಅಬ್ದುಲ್ಲಾ ದೇಹಲವಿಯ ಇಬ್ರಾಹೀಮನಾಮಾದ ಹಿಂದಿ ಮತ್ತು ಉರ್ದು ಅನುವಾದಗಳು, ಕವಿ ನುಸ್ರತಿಯ ಅಲಿನಾಮಾ, ಈಶ್ವರದಾಸ ನಗರ್‌ನ ಫುತೂಹತ್ ಅಲಂಗೀರ ಕೃತಿಯ ಇಂಗ್ಲಿಷ್ ಅನುವಾದ ಮತ್ತು ನೂರಾರು ಪರ್ಶಿಯನ್ ಮೂಲ ಮತ್ತು ಮರಾಠಿ ಅನುವಾದದ ಆದಿಲಶಾಹಿ ಫರ್ಮಾನುಗಳು ದೊರೆತವು. ಉಳಿದ ಹಸ್ತಪ್ರತಿಗಳನ್ನು ದೊರಕಿಸಬೇಕಾಗಿದೆ.

ಹೀಗೆ ಸಾಮಗ್ರಿಯನ್ನು ಸಂಗ್ರಹಿಸಿ ಅನುವಾದ ಕೆಲಸ ಪ್ರಾರಂಭ ಮಾಡಲಾಯಿತು. ಪರ್ಶಿಯನ್, ದಖನಿ ಮತ್ತು ಉರ್ದು ಭಾಷೆಗಳ ಈ ವಿದ್ವಾಂಸರನ್ನು ಕನ್ನಡ ಅನುವಾದ ಕಾರ್ಯದಲ್ಲಿ ತೊಡಗಿಸಿಕೊಳ್ಳಲಾಯಿತು.

೧. ಮೌಲಾನಾ ಮಹಬೂಬುರ್ ರಹಮಾನ ಮದನಿ, ಬಿಜಾಪುರ.
೨. ಶ್ರೀ ಬಿ. ಜಯಾಚಾರ್ಯ, ಯಾದಗಿರಿ.
೩. ಶ್ರೀಮತಿ ಬಾನು ಮುಷ್ತಾಕ್, ಹಾಸನ.
೪. ಡಾ. ಅಬ್ದುಲ್ ಹಮೀದ, ತಿಪಟೂರು.
೫. ಶ್ರೀ ಎಂ.ಎನ್ ನದಾಫ, ಬಿಜಾಪುರ
೬. ಪ್ರೊ. ವಸಂತ ಕುಷ್ಟಗಿ, ಗುಲಬರ್ಗಾ.
೭. ಶ್ರೀಮತಿ ರತ್ನಾ ಮಣ್ಣೂರ, ಗುಲಬರ್ಗಾ.
೮. ಡಾ. ಅಮೀರುದ್ದೀನ್ ಖಾಜಿ, ಬಿಜಾಪುರ.
೯. ಶ್ರೀ ಹಸನ ನಯೀಮ ಸುರಕೋಡ, ರಾಮದುರ್ಗ.
೧೦. ಡಾ. ಬಿ ರಘೋತ್ತಮರಾವ ದೇಸಾಯಿ, ಬೆಂಗಳೂರು.
೧೧. ಶ್ರೀಮತಿ ವಿದ್ಯಾ ಗುಮಾಸ್ತೆ, ಬಿಜಾಪುರ
೧೨. ಡಾ. ಆರ್.ಕೆ. ಕುಲಕರ್ಣಿ, ಬಿಜಾಪುರ

ಇವರ ಸಹಕಾರದಿಂದ ಮೊದಲ ಹಂತವಾಗಿ ೬ ಅನುವಾದ ಸಂಪುಟಗಳು ಈಗ ಪ್ರಕಟವಾಗುತ್ತಿವೆ.

೧. ತಾರೀಖೆ ಫರಿಶ್ತಾ: ೪ ಸಂಪುಟಗಳು.

೨. ಬಸಾತೀನೆ ಸಲಾತೀನ: ೫ನೆಯ ಸಂಪುಟ.

೩. ಇಬ್ರಾಹೀಮ ನಾಮಾ [ದಖನಿ], ಗುಲದಸ್ತಾಯೆ ಬಿಜಾಪುರ [ದಖನಿ], ತಾರೀಖೆ ಹಪ್ತಕುರ್ಸಿ [ಪರ್ಶಿಯನ್], ಫುತುಹತೆ ಅಲಂಗೀರ (ಭಾಗಶಃ) [ಪರ್ಶಿಯನ್]– ಇವೆಲ್ಲ ಸೇರಿ ೬ನೆಯ ಸಂಪುಟ.

ಹೀಗೆ ೬ ಸಂಪುಟಗಳಲ್ಲಿ ಸುಮಾರು ನಾಲ್ಕು ಸಾವಿರ ಪುಟಗಳ ಸಾಹಿತ್ಯ ಈಗ ಪ್ರಕಟವಾಗುತ್ತಿದ್ದು, ಉಳಿದವುಗಳ ಅನುವಾದಕಾರ್ಯ ಹಾಗೂ ಹಸ್ತಪ್ರತಿಗಳ ಶೋಧಕಾರ್ಯ ಮುನ್ನಡೆದಿದೆ. ಈ ೬ ಸಂಪುಟಗಳನ್ನು ಅನುವಾದಿಸಿದ ಎಲ್ಲ ಅನುವಾದಕರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

'ಆದಿಲಶಾಹಿ ಸಾಹಿತ್ಯ ಅನುವಾದ ಯೋಜನೆ'ಗೆ ಅನುದಾನ ನೀಡಿದ ಕರ್ನಾಟಕ ಸರಕಾರಕ್ಕೆ, ಯೋಜನೆಯನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸುವಲ್ಲಿ ಸಹಕರಿಸುತ್ತಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಅಧಿಕಾರಿಗಳಿಗೆ ಮತ್ತು ಈ ದಿಶೆಯಲ್ಲಿ ನಿರಂತರ ಸಹಾಯಹಸ್ತ ನೀಡುತ್ತಿರುವ ಬಿ.ಎಲ್.ಡಿ.ಇ. ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಂ.ಬಿ. ಪಾಟೀಲ ಅವರಿಗೆ ಕೃತಜ್ಞತೆಗಳು.

ಸಂಪುಟಗಳು ಪ್ರಕಟವಾಗುವ ಪ್ರತಿ ಹಂತದಲ್ಲಿ ಸಹಕಾರ ನೀಡಿದ, ಬಿಜಾಪುರ ಜಿಲ್ಲೆಯ ಅಂದಿನ ಜಿಲ್ಲಾಧಿಕಾರಿಗಳಾಗಿದ್ದ ಶ್ರೀ ಶಿವಯೋಗಿ ಕಳಸದ, ಇಂದಿನ ಜಿಲ್ಲಾಧಿಕಾರಿಗಳಾದ ಶ್ರೀ ರಿತ್ವಿಕ್ ರಂಜನ್ ಪಾಂಡೆ ಅವರನ್ನು, ಈ ಯೋಜನೆಯ ಸಲಹಾ ಸಮಿತಿ ಸದಸ್ಯರ ಮಾರ್ಗದರ್ಶನವನ್ನು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಡಾ. ಸೋಮಶೇಖರ ವಾಲಿ, ಬಿ.ಎಲ್.ಡಿ.ಇ. ಸಂಸ್ಥೆಯ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರದ ಸಂಯೋಜನಾಧಿಕಾರಿಗಳಾದ ಡಾ. ಎಂ.ಎಸ್. ಮದಭಾವಿ ಹಾಗೂ ಪ್ರಸ್ತುತ ಸಂಪುಟವನ್ನು ಪರಿಶೀಲಿಸಿದ ಡಾ. ರಹಮತ್ ತರೀಕೆರೆ ಅವರ ಶ್ರಮವನ್ನು ಪ್ರೀತಿಯಿಂದ ಸ್ಮರಿಸುತ್ತೇವೆ.

ಮುಖಪುಟ ವಿನ್ಯಾಸಗೊಳಿಸಿದ ಶ್ರೀ ಕೆ.ಕೆ. ಮಕಾಳಿ ಹಾಗೂ ಅಂದವಾಗಿ ಮುದ್ರಿಸಿದ ಬೆಂಗಳೂರಿನ ಪ್ರಿಂಟ್ ಪಾಯಿಂಟ್‌ನ ಶ್ರೀ ಬಿ.ಸಿ. ಪಾಟೀಲ (ಹೆಬ್ಬಾಳ) ಮತ್ತು ಅವರ ಸಿಬ್ಬಂದಿಯನ್ನು ನೆನೆಯುತ್ತೇವೆ.

■

*

ಪರಿವಿಡಿ

■

ಅಬ್ದುಲ್ ದೆಹಲ್ವಿ
ವಿರಚಿತ

ಇಬ್ರಾಹೀಮ ನಾಮಾ

ಭಾವಾನುವಾದ
ಡಾ. ಮುಹಮ್ಮದ್ ಸಿಬ್ಘತ್‌ಉಲ್ಲಾಹ್

*

ನಿರ್ದೇಶಕರ ಮಾತು

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

'ಇಬ್ರಾಹೀಮ ನಾಮಾ' ಕಾವ್ಯವನ್ನು ಬರೆದ ಅಬ್ದುಲ್ಲ ದೆಹಲ್ವಿಯು ಎರಡನೆಯ ಇಬ್ರಾಹಿಮ ಆದಿಲಶಹನ ಆಸ್ಥಾನದಲ್ಲಿದ್ದ ಕವಿ. ಮೂಲತಃ ದೆಹಲಿಯವನು. ಆತನ ಪೂರ್ವಚರಿತ್ರೆಯ ಬಗ್ಗೆ ಈವರೆಗೆ ವಿಶೇಷವಾಗಿ ದೊರೆತಿಲ್ಲ, ಆತನ ತಂದೆ, ತಾಯಿ, ಮನೆತನ ಯಾವುದರ ಬಗ್ಗೆಯೂ ತಿಳಿದಿಲ್ಲ. ದೆಹಲಿಯ ಮನೆತನದವನಾದ ಆತನು ಯಾವತ್ತು ಬಿಜಾಪುರಕ್ಕೆ ಬಂದನೆಂಬುದನ್ನೂ ಖಚಿತವಾಗಿ ಹೇಳಲು ಈವರೆಗೆ ಸಾಧ್ಯವಾಗಿಲ್ಲ. ಆತನು ತನ್ನ ಆಶ್ರಯದಾತನ ಕುರಿತು ಬರೆದ 'ಇಬ್ರಾಹಿಮ ನಾಮಾ'ದ ಕೊನೆಯಲ್ಲಿ ಲೇಖನದ ಕಾಲವನ್ನು ಹೇಳಿದ್ದಾನೆ. ಅವನು 'ಇಬ್ರಾಹಿಮ ನಾಮಾ' ಕಾವ್ಯವನ್ನು ಕ್ರಿ.ಶ. ಸು. ೧೬೦೦ರ ಹೊತ್ತಿಗೆ ಬರೆದು ಮುಗಿಸಿದನಂತೆ. ಕಥನ ಕಾವ್ಯ ಆಗಿರುವ 'ಇಬ್ರಾಹಿಮ ನಾಮಾ' ೭೧೨ ದ್ವಿಪದಿಗಳನ್ನು ಹೊಂದಿದೆ. ಅದರಲ್ಲಿ ೪೪ ಭಾಗಗಳನ್ನು ಮಾಡಿದೆ. ಜೊತೆಗೆ ಪ್ರಾರಂಭದಲ್ಲಿ ದೇವತಾ ಸ್ತುತಿ ಇದೆ. ಅದನ್ನೊಳಗೊಂಡು ೪೫ ಭಾಗಗಳು ಎನ್ನಬಹುದು.

ಕಾವ್ಯದ ಹೆಸರೆ ಹೇಳುವಂತೆ 'ಇಬ್ರಾಹಿಮ ನಾಮಾ' ಎರಡನೆಯ ಇಬ್ರಾಹಿಮ ಆದಿಲಶಹನನ್ನು ಕುರಿತಾದ ಕಥನ ಕಾವ್ಯವು, ಆತನ ರಾಜ್ಯಕಾಲ, ಆತನ ಗುಣಗಳು, ಉದಾರತೆ, ಆತನ ರಾಜಧಾನಿಯ ವೈಭವ ಇತ್ಯಾದಿಗಳನ್ನು ಅಬ್ದುಲ್ಲಾ ತನ್ನ ಕಾವ್ಯದಲ್ಲಿ ರಸಭರಿತವಾಗಿ ವರ್ಣಿಸಿದ್ದಾನೆ.

ಅಬ್ದುಲ್ಲಾ ದೆಹಲವಿಯು ಪರ್ಶಿಯನ್, ಅರೇಬಿಕ್ ಭಾಷೆಯ ಪಂಡಿತನೇನೂ ಆಗಿರಲಿಲ್ಲ. ಉರ್ದು, ದಖಣಿ ಹಿಂದಿ, ಪರ್ಶಿಯನ್ ಕವಿಗಳ ಚರಿತ್ರೆ ಅಥವಾ ಅವರ ಸಾಹಿತ್ಯದ ಚರ್ಚೆ ಬಂದಾಗಲೂ ಆತನ ಹೆಸರು ಬರುವುದಿಲ್ಲ. ಅದಕ್ಕೆ ಆತನು ಈ ಕವಿಗಳಲ್ಲಿ ಹೆಸರು ಮಾಡದಿದ್ದುದೇ ಕಾರಣವಾಗಿರಬಹುದು. ಅವನಿಗೆ ಪರ್ಶಿಯನ್,

ಅರೇಬಿಕ್ ಭಾಷೆಗಳಲ್ಲಿ ಗತಿ ಇರಲಿಲ್ಲವೆಂಬುದನ್ನು ಆತನೇ ತನ್ನ ಕಾವ್ಯದಲ್ಲಿ ಒಂದೆಡೆ ಹೀಗೆ ಹೇಳಿಕೊಂಡಿದ್ದಾನೆ.

'ಜಬಾ ಹಿಂದುಈ ಮುಂಜ ಸೋ ದೆಹಲವೀ ।
ನ ಜಾನೂ ಅರಬ ಔರ ಅಜಬ ಮಸ್ನವೀ' ॥ ೯೯ ॥

ತಾನು ದೆಹಲಿಯವನಾದುದರಿಂದ ತನ್ನ ಭಾಷೆ ಹಿಂದು ಈ ಎಂದು ಹೇಳಿಕೊಂಡಿದ್ದಾನೆ. ತನಗೆ ಅರಬ್ಬೀ ಹಾಗೂ ಪರ್ಶಿಯನ್ ಭಾಷೆಗಳ ಮಸ್ನವಿಗಳ ಪರಿಚಯವೂ ಇರಲಿಲ್ಲ ಎಂದು ಹೇಳಿಕೊಂಡಿದ್ದಾನೆ. ಮಸ್ನವಿ ಎಂದರೆ ಕಥನ ಕಾವ್ಯ. ಪರ್ಶಿಯನ್ ಮಸ್ನವಿಗಳಲ್ಲಿರುವಂತೆ ದಖಣಿ ಮಸ್ನವಿಗಳಲ್ಲೂ ಅಬ್ದುಲ್ಲನು ತನ್ನ ಕಾವ್ಯದ ಪ್ರಾರಂಭದಲ್ಲಿ ಅಲ್ಲಾಹನನ್ನು ಸ್ತುತಿಸಿ, ಬುದ್ಧಿ [ಅಕ್ಲ] ಮತ್ತು ವಿದ್ಯೆ [ಇಲ್ಮ]ಗಳ ವರ್ಣನೆಯನ್ನು ಮಾಡುತ್ತಾನೆ. ಬುದ್ಧಿ ಮತ್ತು ವಿದ್ಯೆ ಎಂದರೆ ಭಾರತೀಯ ಪರಂಪರೆಯಲ್ಲಿ ಗಣಪತಿ ಮತ್ತು ಸರಸ್ವತಿಯರ ಸ್ತುತಿಯಷ್ಟೆ. ಅಬ್ದಲ್ಲಾ, ಪ್ರಾರಂಭದ ೩೬ ದ್ವಿಪದಿಗಳಲ್ಲಿ ದೇವರನ್ನು ಸ್ತುತಿಸಿದ್ದಾನೆ.

'ಇಲಾಹೀ ಜಬಾನ ಗಂಜ ತೂಂ ಖೋಲ ಮುಂಜ ।
ಅಮೋಲಿಕ ಬಹಾಕರ ಯೂ ಕ್ಹು ಬೋಲ ಮುಂಜ ॥ ೧ ॥

'ಓ ದೇವರೆ, ನನಗೆ ವಾಣಿಯನ್ನು ಕೊಡು, ಅದರಲ್ಲಿಯ ಕೆಲವು ಶಬ್ದಗಳಿಂದ ಅಮೂಲ್ಯ ಸಾಹಿತ್ಯ ನಿರ್ಮಾಣವಾಗಲಿ.' ಪ್ರಾರಂಭದ ದ್ವಿಪದಿಯೇ 'ವಾಣಿ'ಯ ಆವಾಹನೆಯಾಗಿದೆ. ಅನಂತರದ ೧೪ ದ್ವಿಪದಿಗಳಲ್ಲಿ ಪವಿತ್ರ ಮಹಮ್ಮದ ಪೈಗಂಬರರನ್ನು ಸ್ತುತಿಸಿ, ಮುಂದಿನ ಹತ್ತು ದ್ವಿಪದಿಗಳಲ್ಲಿ ಅವರ ನಾಲ್ಕು ಜನ ಸಹಾಯಕರಾದ ಅಬೂಬಕರ, ಉಮರ, ಉಸ್ಮಾನ ಮತ್ತು ಅಲಿಗಳ ವಿಶೇಷತೆಯನ್ನು ಹೇಳುತ್ತಾನೆ. ಮುಂದಿನ ೮ ದ್ವಿಪದಿಗಳಲ್ಲಿ ಕಲಬುರ್ಗಿಯ ಬಂದಾನವಾಜ ಗೇಸೂದರಾಜರನ್ನು ಸ್ತುತಿಸಿ, ಅನಂತರ ವಾಡಿಕೆಯಂತೆ ಕಥಾ ನಾಯಕನನ್ನು ಸ್ತುತಿಸುತ್ತಾನೆ.

ಕಥಾನಾಯಕನಾದ ಎರಡನೆಯ ಇಬ್ರಾಹೀಮ ಆದಿಲಶಹನ [ಕ್ರಿ.ಶ. ೧೫೮೦–೧೬೨೭] ಗುಣಗಾನವನ್ನು ಮಾಡುತ್ತ ಒಂದೆಡೆ ಅವನನ್ನು ದೇವರ ಅಂಶವೆಂಬ ಹಾಗೆ ಚಿತ್ರಿಸಿದ್ದು, ಭಾರತೀಯ ಪರಂಪರೆಯ 'ನಾ ವಿಷ್ಣುಃ ಪೃಥಿವಿಪತಿ'ಗೆ ಅನುಗುಣವಾಗಿದೆ. ೩೦ ದ್ವಿಪದಿಗಳಲ್ಲಿ ಆತನನ್ನು ವರ್ಣಿಸುವಾಗ ಆತನ ವಿದ್ವತ್ತು, ಆತನು ರಚಿಸಿದ ನವರಸಕಾವ್ಯ ಹಾಗೂ ರಾಜ್ಯದ ತುಂಬೆಲ್ಲ ಇರುವ ಅದರ ಪ್ರಶಸ್ತಿಯನ್ನು ವರ್ಣಿಸಿದ್ದಾನೆ. ರಾಜನ ಹತ್ತಿರ ವಿದ್ಯೆ ಹಾಗೂ ಲಕ್ಷ್ಮೀ ಇಬ್ಬರೂ ವಾಸವಾಗಿದ್ದಾರೆಂದು ಹೇಳುತ್ತಾನೆ.

'ನ ಐಸಾ ಕೌಂ ಸೋ ದೇಖಾ ಅಯಾನ ।
ವಿದ್ಯಾ ಲಚ್ಚಮೀ ಜೋರ ದೇವೆ ದೋ ದಾನ' ॥ ೮೫ ॥

ಅನಂತರ ಮತ್ತೆ ೨೦ ದ್ವಿಪದಿಗಳಲ್ಲಿ, ವಾಣಿಯನ್ನು ನೇರವಾಗಿ ಸ್ತುತಿಸುತ್ತಾನೆ. ಈ ಸೃಷ್ಟಿಯ ಎಲ್ಲ ಜಡ ಮತ್ತು ಚೇತನಗಳ ವಿಕಾಸವು ಗೂಢವಾದ ವಾಣಿಯಿಂದಲೇ ಆವಿಷ್ಕೃತವಾಗಿದೆ. ಈ ಸೃಷ್ಟಿಯ ಆದಿ ಅಂತ್ಯಗಳು ವಾಣಿಯ ಅಧೀನದಲ್ಲಿವೆ ಎಂದು ಹೇಳುತ್ತಾನೆ.

ವಚನ ದರ್ಮಿಯಾನ ರಹ ಅಜಲ ಔರ ಅಬದ
ರಚ್ಯಾತೀನ ತಿಲೋರ್ಕ ಲಾ ಕರ ಸಬದ ॥ ೧೨೧ ॥

ಹೀಗೆ ೧೪೫ ದ್ವಿಪದಿಗಳನ್ನು ಕಾವ್ಯದ ಪ್ರಾರಂಭಕ್ಕೆ ಉಪಯೋಗಿಸಿ, ಅನಂತರ ಮೂಲ ಕಥಾನಾಯಕ ಎರಡನೆಯ ಇಬ್ರಾಹೀಮ ಆದಿಲಶಹನ ಚರಿತ್ರೆಯನ್ನು ಹೇಳಲು ತೊಡಗುತ್ತಾನೆ. ಇಬ್ರಾಹೀಮನ ಉದಾರತೆಯನ್ನು ವರ್ಣಿಸುವಾಗ 'ರಾಜನ ಉದಾರ ರೂಪವಾದ ಮೇಘವರ್ಷವು, ಜಗದ ದರಿದ್ರರೂಪದ ಅಗ್ನಿಯನ್ನು ಶಾಂತ ಮಾಡಿತು' ಎನ್ನುತ್ತಾನೆ. ಇನ್ನೊಂದೆಡೆ ರಾಜನ ಉದಾರತೆಯಿಂದ ಮತ್ತೊಮ್ಮೆ ಬಲಿ ಚಕ್ರವರ್ತಿ ಹಾಗೂ ಕುಂತೀಪುತ್ರ ಕರ್ಣರು ಜೀವಂತರಾದರು ಎಂದು ಭಾರತೀಯ ಪೌರಾಣಿಕ ವ್ಯಕ್ತಿಗಳೊಂದಿಗೆ ಹೋಲಿಸಿದ್ದು ವಿಶೇಷವಾಗಿದೆ.

ಹೋ ಶಹ ದಾನ ಅವತಾರ ದಾನಿಕ ಅಪಾರ ।
ಸೋ ಬಲ ಔರ ಕರನ ನಾವೂ ಜಗ ಆಶಕಾರ ॥ ೨೦೦ ॥

ಹೀಗೆ ಸುಮಾರು ೧೫೦ಕ್ಕಿಂತ ಅಧಿಕ ದ್ವಿಪದಿಗಳಲ್ಲಿ ಬಾದಶಹನನ್ನು ವರ್ಣಿಸಿ ಮುಂದಿನ ೧೦೦ ದ್ವಿಪದಿಗಳಲ್ಲಿ ರಾಜಧಾನಿ ಬಿಜಾಪುರ ನಗರದ ವೈಭವವನ್ನು ವರ್ಣಿಸುತ್ತಾನೆ. ಬಿಜಾಪುರವನ್ನು ಕಾವ್ಯದುದ್ದಕ್ಕೂ ಅವನು ವಿದ್ಯಾಪುರವೆಂದು ಕರೆದಿದ್ದಾನೆ. ಬಿಜಾಪುರದ ವರ್ಣನೆಯಲ್ಲಿ ಅಲ್ಲಿಯ ಕೋಟೆ, ಕೊತ್ತಲಗಳು, ಮಹಲು. ಬಜಾರುಗಳು ಇತ್ಯಾದಿ ಚಿತ್ರ ಸುಂದರವಾಗಿ ಬಂದಿದೆ. ರಾಜನ ದರ್ಬಾರು, ಆತನ ಆಶ್ರಯದಾತರು, ಕವಿ ಸಾಹಿತಿಗಳು, ಆತನ ದಿಕ್ ದಿಗಂತಗಳ ಕೀರ್ತಿ, ಆತನಿಗಿರುವ 'ಜಗತ್ ಗುರು' ಉಪಾಧಿ, ಆತನ ಆಸ್ಥಾನದ ಮುಂದೆ ಇಂದ್ರನ ಆಸ್ಥಾನವೂ 'ಪೀಚು'. ಆದಿಲಶಹನು ಇಂದ್ರನಿಗಿಂತ ಎಷ್ಟೋ ಪಟ್ಟು ಅಧಿಕ ಶ್ರೇಷ್ಠನಾಗಿದ್ದಾನೆ.

ಇಂದರ ಏಕ ಅಂಬರಾವತೀ ರಹನ ಥಾರ
ವಿದ್ಯಾಪುರ ನಗರ ಶಹ ವೈಸೆ ಥಪ ಹಜಾರ ॥

ಕವಿ ಅಬ್ದುಲ್ಲಾ ದೆಹಲವಿಯು ಭಾರತೀಯ ಪುರಾಣಗಳ ಅಭ್ಯಾಸವನ್ನು ಮಾಡಿದ್ದನೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ಅಲ್ಲದೆ ಅನೇಕ ಸಂಸ್ಕೃತ ಕಾವ್ಯಗಳನ್ನೂ ಓದಿರಬೇಕು. ಅಂತೆಯೇ ಉಭಯ ಭಾಷೆಗಳನ್ನು ಬಲ್ಲ ಕೆಲವು ವಿದ್ವಾಂಸರು ಅಬ್ದುಲ್ಲಾನನ್ನು ಸಂಸ್ಕೃತದ ಮಹಾಕವಿ 'ಬಾಣಭಟ್ಟ'ನಿಗೆ ಹೋಲಿಸಿದ್ದಾರೆ.

‘ಇಬ್ರಾಹೀಮ ನಾಮಾ’ ಕಾವ್ಯವನ್ನು ೧೯೬೮ರಲ್ಲಿ ಹೈದರಾಬಾದಿನ ಡಾ. ಮಾಸೂದ ಅಲಿಖಾನರು ಉರ್ದುವಿನಲ್ಲಿ ಸಂಪಾದಿಸಿ ಪ್ರಕಟಿಸಿದ್ದರು. ೧೯೭೩ರಲ್ಲಿ ಈ ಕಾವ್ಯವನ್ನು ದೇವಿಸಿಂಗ ಚೌಹಾನರು ದೇವನಾಗರಿ ಲಿಪಿಯಲ್ಲಿ ಸಂಪಾದಿಸಿ ಪ್ರಕಟಿಸಿದರು. ಉರ್ದುವಿನಲ್ಲಿ ಸಂಪಾದಿತ ಕಾವ್ಯವನ್ನು ಡಾ. ಸಿಬಘತುಲ್ಲಾ ಅವರು ೧೯೯೯ರಲ್ಲಿ ಕರ್ನಾಟಕ ಉರ್ದು ಅಕಾಡೆಮಿ ಪರವಾಗಿ ಸಂಪಾದಿಸಿ ಪ್ರಕಟಿಸಿದರು. ಪ್ರಸ್ತುತ ಗದ್ಯಾನುವಾದವನ್ನು ಡಾ. ಸಿಬಘತುಲ್ಲಾ ಅವರು ಮಾಡಿದ್ದಾರೆ. ಡಾ. ರಹಮತ್ ತರೀಕೆರೆ ಅವರು ಸಂಪುಟವನ್ನು ಪೂರ್ತಿಯಾಗಿ ಪರಿಷ್ಕರಿಸಿದ್ದಾರೆ. ಉಭಯತರಿಗೂ ಕೃತಜ್ಞತೆಗಳು.

■

*

ಸಂಪಾದಕರ ಮಾತು

ಮಸೂದ್ ಹುಸ್ಸೈನ್ ಖಾನ್

ಬಿಜಾಪುರ ಶಾಲೆಯ ಮೊದಲ ಸಾಹಿತ್ಯಿಕಕೃತಿ ಇಬ್ರಾಹಿಮ ನಾಮಾ. ಅದರ ಲೇಖಕ ಅಬ್ದುಲ್ ದೆಹಲ್ವಿ, ಇಮ್ಮಡಿ ಇಬ್ರಾಹೀಂ ಆದಿಲ್ ಶಾಹನ (ಕ್ರಿ ಶ ೧೫೮೦-೧೬೨೭) ಆಸ್ಥಾನ ಕವಿ ಮತ್ತು ಗೊಲ್ಕೊಂಡದ ಮುಲ್ಲಾ ವಜ್ಹಿಯ ಸಮಕಾಲೀನ. ಇದೊಂದು ಆಕರ್ಷಕ ನಿಜಾಂಶವೆಂದರೆ ಹಳೇ ಉರ್ದು ಭಾಷೆಯ ಎರಡು ರಚನಾತ್ಮಕ ಮಸ್ನವಿಗಳು, ಮುಲ್ಲಾ ವಜ್ಹಿಯ ಖುತುಬ್ ಮುಶ್ತರಿ ಮತ್ತು ಅಬ್ದುಲ್ ದೆಹ್ಲವಿಯ ಇಬ್ರಾಹಿಮ ನಾಮಾ ಎರಡು ವರ್ಷಗಳ ಅಂತರದಲ್ಲಿ ಕ್ರಮವಾಗಿ ಕ್ರಿ. ಶ. ೧೬೦೯/೧೦ ಮತ್ತು ೧೬೧೧/೧೨ರಲ್ಲಿ ಬರೆಯಲ್ಪಟ್ಟವು. ಎರಡೂ ಕೂಡ ಒಂದು ರೀತಿಯ 'ಶಾಹನಾಮಾ'ಗಳಿದ್ದ ಹಾಗೆ. ಖುತುಬ್ ಮುಶ್ತರಿಯ ಕೇಂದ್ರ ಪಾತ್ರ ಗೊಲ್ಕೊಂಡದ ಯುವರಾಜ ಮುಹಮ್ಮದ ಖುಲಿಯಾದರೆ ಅಬ್ದುಲ್‌ನ ಪ್ರಶಂಸ ಪಾತ್ರನಾದವನು ಪ್ರಸಿದ್ಧ ಆದಿಲ್‌ಶಾಹಿ ಅರಸ ಇಮ್ಮಡಿ ಇಬ್ರಾಹೀಮ್ ಆದಿಲ್‌ಶಾಹನಾಗಿದ್ದಾನೆ. ಒಂದು ಕಥೆ ರೂಪದಲ್ಲಿದ್ದರೆ ಮತ್ತೊಂದು ಐತಿಹಾಸಿಕ ರೂಪದಲ್ಲಿದ್ದು, ಇಬ್ಬರೂ ಕವಿಗಳು ತಮ್ಮ ತಮ್ಮ ಪ್ರಶಂಸಕರ ಗುಣಗಳನ್ನು ವರ್ಣಿಸುತ್ತಾರೆ. ವಜ್ಹಿಗೆ ಹೋಲಿಸಿದಾಗ, ಅಬ್ದುಲ್‌ಗೆ ತನ್ನ ಕಲೆಯನ್ನು ತೋರಿಸಬೇಕಾದರೆ ಅನೇಕ ಪರೀಕ್ಷೆಗಳನ್ನು ಎದುರಿಸಬೇಕಾಯಿತು, ಏಕೆಂದರೆ ಅವನಿಗೆ ಐತಿಹಾಸಿಕ ನಿಜಾಂಶಗಳನ್ನು ಮುಂದಿಡಬೇಕಾಗಿತ್ತು. ಇದರ ವಿರುದ್ಧವಾಗಿ ವಜ್ಹಿ ನಿಜವಾದ ಹಾಗೂ ಐತಿಹಾಸಿಕ ಪಾತ್ರವನ್ನು ಕಥೆಯ ಇಂದ್ರಜಾಲದಲ್ಲಿ ಸಿಲುಕಿಸಿದ್ದಾನೆ. ಬಹುಶಃ ಅವನು ಇತಿಹಾಸವನ್ನು ಕಥೆ ಮಾಡಬೇಕೆಂದಿರಬಹುದು. ಏಕೆಂದರೆ ಮಸ್ನವಿಯಲ್ಲಿ ಒಂದು ಕಥೆ ಇದೆ, ಒಂದು ಪ್ಲಾಟ್ ಇದೆ. ಅಬ್ದುಲ್‌ನ ಮಸ್ನವಿಯು ಅಸಲಿಗೆ ತೌಸೀಫ್ ನಾಮ ಅಥವ ಖಸೀದ (ಪ್ರಶಂಸೆ ಪದ್ಯ) ಆಗಿದ್ದು ಅದರ ಅಂಗಾಂಗಗಳು ಐತಿಹಾಸಿಕ ನಿಜಾಂಶಗಳಿಂದ ತುಂಬಲಾಗಿವೆ. ನಿಜಾಂಶದಲ್ಲಿ ಇದು ಶಾಹನಾಮಾ. ಆದರೂ ಸಹ ಶಾಹನಾಮಾ ದಖನ್‌ದಲ್ಲಿ ಬರೆಯುವ ಹೆಮ್ಮೆ ಮಲಿಕುಶ್ಶೊರ ನುಸ್ರತಿಗೆ ಸೇರಿದ್ದು. ಅವನು ಕ್ರಿ. ಶ. ೧೬೬೫/೬೬ರಲ್ಲಿ ಅಲಿನಾಮಾ

ಬರೆದು ಇಮ್ಮಡಿ ಅಲಿ ಆದಿಲ್ ಶಾಹನನ್ನು ಅಮರ ಮಾಡಿದ. ಆದರೂ ನುಸ್ರತಿಯು ಅಬ್ದುಲನನ್ನು ಸಂಪೂರ್ಣ ಅಲಕ್ಷಿಸಿದ್ದಾನೆ. ಅಲಿ ನಾಮಾ ಬರೆದ ಹಿನ್ನೆಲೆಯಲ್ಲಿ ಇಬ್ರಾಹಿಮ ನಾಮಾದ ಕಲ್ಪನೆ ಅವಶ್ಯ.

ಲೇಖಕ:

ಇಬ್ರಾಹಿಮ ನಾಮಾದ ಲೇಖಕ ಅಬ್ದುಲ್ ದೆಹಲ್ವಿ ಇಬ್ರಾಹಿಮ ನಾಮಾದ ಆಂತರಿಕ ಸಾಕ್ಷಿಗಲ್ಲದೆ ಹಳೇ ಉರ್ದುವಿನ ಈ ಮುಖ್ಯ ಕವಿ ಮತ್ತು ಬಿಜಾಪುರ ಶಾಲೆಯ ಸರ್ದಾರನ ಬಗ್ಗೆ ಇಲ್ಲಿಯ ವರೆಗೆ ಯಾವರೀತಿಯ ಸಮಾಚಾರವೂ ಲಭ್ಯವಾಗಿಲ್ಲ. ಬಿಜಾಪುರದ ಎಲ್ಲ ಸಮಕಾಲೀನ ಇತಿಹಾಸಗಳು ಮತ್ತು ಉತ್ತರ ಮತ್ತು ದಕ್ಷಿಣದ ಎಲ್ಲಾ ಜೀವನ ಚರಿತ್ರೆಗಳು ಇವನ ಪ್ರಸ್ತಾಪವನ್ನು ಮಾಡುವುದಿಲ್ಲ. ಬಿಜಾಪುರ ಶಾಲೆಯ ಮುಂದಿನ ಪೀಳಿಗೆಯು ಸಹ ಅವನ ಸಾಹಿತ್ಯ ರಚನೆಗಳಿಂದ ದೂರವಾಗಿವೆ ಎಂದು ಕಾಣಿಸುತ್ತದೆ. ಆದರೆ ಬಿಜಾಪುರದ ಕವಿಗಳು ಗೋಲ್ಕೊಂಡದ ಆದಿ ಕವಿಗಳನ್ನು ಪ್ರಶಂಶಿಸುತ್ತಾರೆ. ನುಸ್ರತಿ ಅಂತಹ ಕವಿಯೂ ಸಹ ಅಬ್ದುಲ್ ಬಗ್ಗೆ ಮೌನ ತಾಳಿದ್ದಾನೆ. ಬಹುಶಃ ಅಬ್ದುಲ್ ಬಗ್ಗೆ ಈ ಅಲಕ್ಷ್ಯ ಅವನು ದೆಹಲ್ವಿಯವನಾದದ್ದರಿಂದ ಇರಬಹುದು. ಅಬ್ದುಲ್‌ನು ಇಬ್ರಾಹಿಮ ನಾಮಾದಲ್ಲಿ ತಾನು ದೆಹಲ್ವಿಯಾಗಿರುವ ಬಗ್ಗೆ ಪ್ರಸ್ತಾಪಿಸಿದ್ದಾನೆ ಮತ್ತೆ ತನ್ನ ಭಾಷೆಯನ್ನು 'ಹಿಂದವಿ' ಹೆಸರಿನಿಂದ ಸ್ಮರಿಸಿದ್ದಾನೆ.

ಜ಼ಬಾನೆ ಹಿಂದವಿ ಮುಝ್, ಸೊ ಹೂರ್ ದೆಹಲ್ವಿ
ನ ಜಾನೂರ್ ಅರಬ್ ಔರ್ ಅಜಂ ಮಸ್ನವಿ (೯೯)

ಡಾ. ಜ಼ೋರ್‌ರವರು ಸಾಲಾರ್ ಜಂಗ್ ಲಾಯಿಬ್ರರಿಯ ಪ್ರತಿಯ ನಕಲನ್ನು ತಮ್ಮ ಹಸ್ತದಿಂದ ಮಾಡಿ, 'ಇದಾರಯೆ ಅದ್ಬಿಯಾತೆ' ಉರ್ದುವಿನಲ್ಲಿ ಸುರಕ್ಷಿಸಿ ಇಟ್ಟಿದ್ದಾರೆ. ಅದರಲ್ಲಿ ಮೊದಲನೆಯ ಪಂಕ್ತಿಯನ್ನು ಹೀಗೆ ಓದಲಾಗಿದೆ, "ಜ಼ಬಾನೆ ಹಿಂದವಿ ಮುಝ್ ಸೂಂ ಹೌರ ದಹೆಲ್ವಿ" ಇದರ ನಂತರ ಈ ನಿರ್ಧಾರಕ್ಕೆ ಬಂದಿದ್ದಾರೆ. ಅಬ್ದುಲ್‌ಗೆ ಕೇವಲ ಹಿಂದವಿ ಮತ್ತು ಬಿಟ್ಟರೆ ಬೇರೆ ಭಾಷೆಗಳು ಉದಾಹರಣೆಗೆ ಅರಬ್ ಅಥವ ಅಜಂ ತಿಳಿದಿಲ್ಲ. ಸಂಪಾದಕರು ಸಾಲಾರ್ ಜಂಗ್ ಲಾಯಿಬ್ರರಿಯ ಹಸ್ತಪ್ರತಿಯನ್ನು ಪರಿಶೀಲಿಸಿದಾಗ ಅದರಲ್ಲಿ ಸ್ಪಷ್ಟವಾಗಿ "ಹೌರ್" ಬದಲು "ಹೂರ್" ಬರೆಯಲಾಗಿದೆ. ಪ್ರಸ್ತಾಪಿಸಿದ ಪಂಕ್ತಿಯಲ್ಲಿ "ಹೂರ್" ಎಂಬ ಶಬ್ದದ ದೃಢೀಕರಣ ಅವಧ್ ಪ್ರತಿಯಿಂದಲೂ ಸಹ ಆಗುತ್ತದೆ ಅಲ್ಲಿಯೂ ಸಹ "ಹೂಂ" ನೂನ್ ಚುಕ್ಕಿ ಸಹಿತ ಬರೆಯಲಾಗಿದೆ. ಆದ್ದರಿಂದ ಪಂಕ್ತಿಯ ಸ್ವಚ್ಛ ಅರ್ಥ ಹೀಗಿದೆ: ಅಬ್ದುಲ್, ಇಮ್ಮಡಿ ಇಬ್ರಾಹಿಮ ಆದಿಲ್ ಶಾಹನ ನಿವೇದನೆಗೆ ತನ್ನ ನಿಸ್ಸಹಾಯಕತೆಯ ಮನವಿ ಮಾಡಿಕೊಳ್ಳುತ್ತಾನೆ. 'ಓ ಜಗತ್ ಗುರು! ನಾನು ಯಾವ ಭಾಷೆಯಲ್ಲಿ ಕವನ ಹೇಳಲಿ? ಏಕೆಂದರೆ ನನ್ನ ಭಾಷೆ ಹಿಂದವಿಯಾಗಿದೆ (ಜ಼ಬಾನೆ ಹಿಂದವಿ ಮುಝ್) ಮತ್ತು ನಾನು ದೆಹಲ್ವಿ (ಸೊ ಹೂರ್ ದೆಹಲ್ವಿ)', ಈ ನಕಾರಾತ್ಮಕ "ಸೂರ್"ಯ ಉದಾಹರಣೆಗಳು ಸಮಕಾಲೀನ ಸಾಹಿತ್ಯದಲ್ಲಿ ಹೇರಳವಾಗಿ ಸಿಗುತ್ತವೆ. : "ಜೊ ಕುಛ್ ಮುಹಮ್ಮದ್ ನೆ

ಪಾಯಾ ಸೂರ್ ಅಲಿ ಕೂರ್ ಸಂರ್ಝಾಯಾ" (ವಜ್ಹಿ: ಸಬ್ರಸ್ ಪುಟ ೬, ಸಾಲು ೧೬, ಎರಡನೇ ಮುದ್ರಣ.)

ವಿಶ್ಲೇಷಣೆಯ ಬೆಳಕಿನಲ್ಲಿ ಈ ಮಾತು ಸಾಬೀತಾಗಿರುವುದೇನೆಂದರೆ, ಅಬ್ದುಲ್ ದೆಹಲಿಯವನಾಗಿದ್ದನು. ಅವನು ದಖನಿಯಾಗದೆ ಇರುವುದಕ್ಕೂ ಒಂದು ಸಾಕ್ಷಿ ಇದು ಕೂಡ. ಅಂದರೆ ದಖನಿ ಉರ್ದುವಿನಲ್ಲಿ ಕೆಲವು ಮುಖ್ಯವಾದ ವ್ಯಾಕರಣ ವಿಶೇಷತೆಗಳಿವೆ. ಉದಾಹರಣೆಗೆ "ಚೀಂ" ತಾಕೀದಿ "ನಕ್ಕೋ" "ಆಕೋ" "ಜಾಕೋ" (ಬದಲಾಗಿ ಆಕೆ, ಅಥವ ಆಕರ್, ಜಾಕೆ ಅಥವಾ ಜಾಕರ್) ಇಬ್ರಾಹಿಮ ನಾಮಾದಲ್ಲಿ ಮಾಯವಾಗಿವೆ. ಆದರೆ ಭಾಷೆಯ ವ್ಯಾಕರಣದ ಸಾಮಾನ್ಯ ಅಚ್ಚು/ ಅಂದಾಜು ಮತ್ತು ನಿಘಂಟು ದಖನಿ ಉರ್ದುವಿನ ಸಮಕಾಲೀನ ಕವಿಗಳಾದ ವಜ್ಹಿ ಅಥವಾ ಸನ್‌ಅತಿಯವರಲ್ಲಿ ಇರುವ ಹಾಗೆ ಸಿಗುತ್ತದೆ. ವಿಶೇಷವಾಗಿ ಹಿಂದಿ ನಿಘಂಟಿನ ಮಿಥ್ಯಾರೋಪಣ, ಬಿಜಾಪುರ ಶಾಲೆಯ ಪ್ರಸಿದ್ಧ ವಿಶೇಷತೆ ಅಬ್ದುಲ್ ಬಳಿಯೂ ಸಹ ಸಿಗುತ್ತದೆ. ಹಿಂದಿ ನಿಘಂಟಿನ ಹೇರಳತೆಯ ಒಂದು ಕಾರಣ ಇದು ಸಹ ಎಂದು ಕಲ್ಪಿಸಬಹುದು, ಏನೆಂದರೆ ಉತ್ತರ ಭಾರತದಲ್ಲಿಯೂ ಸಹ ಕ್ರಿ ಶ ೧೬೦೦ರ ಸುತ್ತ ಮುತ್ತದ ಭಾಷೆ ಇವುಗಳಿಂದ ತುಂಬಿತ್ತು. ಉದಾಹರಣೆಗೆ ಮುಹಮ್ಮದ ಅಫ್ಜಲ್, ಅಫ್ಜಲ್‌ನ ಬಿಕಟ್ ಕಹಾನಿ (ಬಾರ ಮಾಸ) ಭಾಷೆಯಲ್ಲಿ ಕಾಣಬಹುದು. ದಕ್ಷಿಣದಲ್ಲಿ ಇಂತಹ ಪದಗಳ ಸಮರ್ಥನೆ ಹಿಂದ್, ಆರಿಯಾಯಿ, ಮರಾಠಿಯಿಂದಲೂ ಆಗುತ್ತಿರುತ್ತದೆ. ಇದರ ಪ್ರಭಾವ ಬಿಜಾಪುರ ಶಾಲೆಯ ಮೇಲೆ ಆಳವಾಗಿದೆ. ಅಬ್ದುಲ್ ಬಿಜಾಪುರದಲ್ಲಿ ಪರದೇಸಿಯಾಗಿದ್ದನೋ ಎಂಬ ಮಾತು ಈಗ ಚರ್ಚೆಯ ವಿಷಯ. ಅವನ ದೆಹಲ್ವಿಯ ಸಂಬಂಧ ಕೇವಲ ಒಂದು ಕೌಟುಂಬಿಕ ಹೆಮ್ಮೆಯಾಗಿ ಉಳಿದಿತ್ತು, ಅವನ ತಂದೆತಾಯಿ ದೆಹಲಿಯಿಂದ ಬಿಜಾಪುರಕ್ಕೆ ವಲಸೆ ಬಂದಿರಬಹುದು ಹಾಗೂ ಅವನೂ ಸಹ ಬಿಜಾಪುರದಲ್ಲಿ ಹುಟ್ಟಿರಬಹುದು. ಚಿಕ್ಕ ವಯಸ್ಸಿನಲ್ಲಿ ಅವರ ತಂದೆತಾಯಿಗಳೊಡನೆ ಬಿಜಾಪುರ ತಲುಪಿರಲು ಸಾಧ್ಯ. ಏಕೆಂದರೆ ಅವನು ಕವಿಯಾಗಿ ಪ್ರವೀಣತೆಯಿಂದ ದೊಡ್ಡ ವಯಸ್ಸಿನಲ್ಲಿ ದೆಹಲಿಯಿಂದ ವಲಸೆ ಬಂದಿದ್ದರೆ ಅಲ್ಲಿಯೂ ಸಹ ಸ್ವಲ್ಪ ಮಟ್ಟಿಕ್ಕಾದರೂ ಪ್ರಸಿದ್ಧತೆಯನ್ನು ಪಡೆದಿರುತ್ತಿದ್ದ ಹಾಗೂ ಆದಿ ಕವಿಗಳ ಕೆಲವು ಜೀವನಚರಿತ್ರೆಗಳಲ್ಲಿ ಬಿಕಟ್ ಕಹಾನಿಯ ಲೇಖಕ ಮುಹಮ್ಮದ್ ಅಫ್ಜಲಿನ ಹಾಗೆ ಅವನ ಬಗ್ಗೆಯೂ ಸಹ ಪ್ರಸ್ತಾವನೆ ಜರೂರಾಗಿ ಮಾಡಲ್ಪಡಲಾಗುತ್ತಿತ್ತು. ಇಬ್ರಾಹಿಮನ ಆಸ್ಥಾನದಲ್ಲಿ ಕವಿಗಳು ಮತ್ತು ಸಂಗೀತಗಾರರು ಹಿಂಡು ಹಿಂಡಾಗಿ ದೇಶದ ದೂರ ದೂರ ಭಾಗಗಳಿಂದ ಬಿಜಾಪುರಕ್ಕೆ ಆಗಮಿಸಿದ್ದರೆಂಬ ಮಾತು ಸಾಬೀತುಗೊಂಡಿದೆ. ಇದರ ಸಾಕ್ಷಿ ಆಧಾರಗಳು ಇತಿಹಾಸಕಾರರಲ್ಲೂ ಸಹ ಸಿಗುತ್ತವೆ. ಸೆಹ್ ನಸರ್ ಬರೆದ ಜ಼ಹೂರಿಯಲ್ಲಿ ಹಾಗೂ ಅಬ್ದುಲ್‌ನೂ ಸಹ ಈ ಪದಗಳಲ್ಲಿ ಕೊಟ್ಟಿದ್ದಾನೆ

ಐಸಾ ಶಹ ಗರ್ ದೇಖ್ ಆ ಜಗ್ ಸರಣ್
ಸಹಾಸನ್ ಬಿಛಾ, ಬೈಠ್ ದಖ್ಖನ್ ಧರನ್

ಅಬ್ದುಲ್ ಬಗ್ಗೆ ಮತ್ತೊಂದು ಮುದಗೊಳಿಸುವ ಚರ್ಚೆ ಎಂದರೆ ಅವನ ಪೂರ್ಣ ಹೆಸರು, ಅಬ್ದ್ ಪದ ಲೆಕ್ಕವಿಲ್ಲದಷ್ಟು ಇಸ್ಲಾಮಿ ಹೆಸರುಗಳಿಂದ ಜೋಡಿಸಲ್ಪಟ್ಟಿವೆ. ಉದಾಹರಣೆಗೆ ಅಬ್ದುಲಾಹ್, ಅಬ್ದುಲ್ ಅಲಿ, ಅಬ್ದುಲ್ ಘನಿ, ಅಬ್ದುಲ್ ಖ಼ಾದರ್ ಇತ್ಯಾದಿ. ಅಬ್ದುಲ್‌ನ ಪೂರ್ಣಹೆಸರು ಇದರಲ್ಲೇ ಯಾವುದಾದರೂ ಇರಬಹುದು. ಮತ್ತೆ ಅಬ್ದುಲ್ ಕೇವಲ ಉಪನಾಮವಾಗಿ ತೆಗೆದುಕೊಂಡಿರಬಹುದು, ಬಂಗಾಲಿಯಲ್ಲಿ ಇಂದೂ ಸಹ ಲೇಖ ನಝ಼ರುಲ್ ಇಸ್ಲಾಂ ಗೆ ನಝ಼ರುಲ್ (ಇಲ್ಲವೆ ಬಜ್ರುಲ್)ಎಂಬ ಹೆಸರಿಂದ ಸ್ಮರಿಸುತ್ತಾರೆ. ಅಬ್ದುಲ್‌ನು ಈ ಹೆಸರನ್ನು 'ಇಬ್ರಾಹಿಮ ನಾಮಾ'ದಲ್ಲಿ ಕಾವ್ಯನಾಮದ ಹಾಗೆ ಸುಮಾರು ಅರ್ಧ ಡಝ಼ನ್ ಮೇಲೆ ಉಪಯೋಗಿಸಿದ್ದಾನೆ. ಇದರಲ್ಲಿ ಒಂದು ಜಾಗದಲ್ಲಿ (ಪಂಕ್ತಿ ೩೬) ಎರಡೂ ಹಸ್ತಪ್ರತಿಗಳಲ್ಲಿ (ಇಮ್ಲಾ)ಉಕ್ತಲೇಖನ "ಅಬ್ದುಲ್" 'ಅ' ಪದದಿಂದ ಸಿಗುತ್ತದೆ. ಬಾಕಿ ಎಲ್ಲಾ ಜಾಗಗಳಲ್ಲಿ ಸರಿಯಾದ ಅಕ್ಷರ ಸಂಯೋಜನೆ (ಐನ್) ಬರೆಯಲಾಗಿದೆ.

ಇಬ್ರಾಹಿಮ ನಾಮೆಯ ಕೊನೆಯ ಭಾಗದಲ್ಲಿ (ಪಂಕ್ತಿ ೨೬೪) ಅಬ್ದುಲ್ ಕಾವ್ಯನಾಮ "ಕೆತ್ತಿ" (ಕಿತ್ನಿ) ಪದದ ಜೊತೆಯಲ್ಲಿ ಬರೆಯಲಾಗಿದೆ. ಪ್ರತಿ(ಅ)ನ ಉಕ್ತಲೇಖನ ಸ್ವರಗಳ ಜೊತೆಯಲ್ಲಿ "ಅಬ್ದುಲ್ಕೆತ್ತೆ" ಇದೆ ಮತ್ತು ಪ್ರತಿ(ಸ)ನಲ್ಲಿ "ಅಬ್ದುಲ್ಕೆತ್ತಿ" ಇದೆ. ದ್ವಿಪದಿ ಹೀಗಿದೆ

ಅಬ್ದುಲ್ ಕೆತ್ತೆ ಸಿಫ಼ತ್ ಶಃಕರ್ ಬಯಾರ್ ́
ರಹೆ ಹೈ ಸೊಭರ್ ಕರ್ ಜ಼ಮೀ಼ ಆಸ್ಮಾ಼

ನಸೀರುದ್ದೀನ್ ಹಾಷ್ಮಿ[೧] ಮತ್ತು ಡಾ.ಝೋರ್‌ರವರ[೨] ಮುಂದೆ ಕೇವಲ ಪ್ರತಿ (ಸ) ಇದ್ದಿದ್ದರಿಂದ ಪಂಕ್ತಿಯ ಮೊದಲನೆಯ ಸಾಲಿನ ಉಕ್ತಲೇಖನದ ಮೇಲೆ ಇಬ್ಬರೂ ಕೂಡ ಹೀಗೆ ಊಹಿಸಿದ್ದಾರೆ. ಅಬ್ದುಲ್ಕೆತಿ= ಅಬ್ದುಲ್ ಕನಿ= ಅಬ್ದುಲ್ ಗನಿ= ಅಬ್ದುಲ್ ಘನಿ ಹೀಗೆ ಅವರಿಬ್ಬರ ಸಲಹೆಯಂತೆ ಕವಿಯ ಪೂರ್ಣ ಹೆಸರು ಅಬ್ದುಲ್ ಘನಿಯಾಗುತ್ತದೆ. ಡಾ. ನಝೀರಅಹ್ಮದ್‌ರವರೂ ಕೂಡ ಇದನ್ನು ಪುಷ್ಟೀಕರಿಸಿದ್ದಾರೆ.[೩] ಆದರೆ ಅವಧ್ ಪ್ರತಿಯ ಇರುವಿಕೆಯಲ್ಲಿ ಹೆಸರಿನ ಈ ಶಾಸ್ತ್ರಬದ್ಧ ಓದುವಿಕೆ ಖಂಡಿತವಾಗಿಯೂ ತಪ್ಪಾಗುತ್ತದೆ. ಈ ದ್ವಿಪದಿಯು ಶಾಸ್ತ್ರಬದ್ಧ ಅಸಲಿಗೆ ಕೆಳಕಂಡಂತಿದೆ:

ತು ಅಬ್ದುಲ್ ಕೆತ್ತಿ ಸಿಫ಼ತ್ ಶಃ ಕರ್ ಬಯಾರ್ ́
ರಹೆ ಹೈ ಸೊಭರ್ ಕರ್ ಜ಼ಮೀ಼ ಆಸ್ಮಾ಼

(ಓ ಅಬ್ದುಲ್!ನೀನು ಶಾಹನ ಎಷ್ಟೊಂದು ಗುಣಗಾನ ಮಾಡುವೆಯಾ, ಅದು ಇಡೀ ಭೂಮಿ ಆಕಾಶದಲ್ಲಿ ತುಂಬಿ ತುಳುಕಾಡುತ್ತಿದೆ.)

ಸಂಪಾದಕನು ಪ್ರತಿ(ಸ)ದ ಈ ದ್ವಿಪದಿಯನ್ನು ಪರಿಶೀಲಿಸಿದಾಗ ಈ ಪ್ರತಿಯಲ್ಲೂ ಸಹ ಕೂಲಂಕುಶವಾಗಿ "ತ" ಮೇಲೆ ಎರಡು ಚುಕ್ಕಿಗಳ ಜೊತೆಯಲ್ಲಿ ಬರೆಯಲಾಗಿದೆ. ತಪ್ಪುಭಾವನೆಯ ಅಸಲು ಕಾರಣ "ಲಾಂ" ಬದಲಾಗಿ "ಅಲಿಫ಼ ಲಾಂ" ಬಳಸಲಾಗಿದೆ. ಪ್ರತಿ (ಅ)ನ "ಅಬ್ದುಲ್ ಖೆತ್ತೆ" ಮೇಲೆ ಸ್ವರಗಳನ್ನು ಹಚ್ಚಿಸಲಾಗಿದೆ. ಈ ಸ್ವರ ಚಿನ್ಹೆಗಳ ಮತ್ತು

"ತೆ"ಯ ಎರಡೂ ಚುಕ್ಕಿಗಳ ಇರುವಿಕೆಯಲ್ಲಿ ಇದನ್ನು ಯಾವುದೇ ರೀತಿಯಲ್ಲಿ ಅಬ್ದುಲ್ ಕನಿ ಹಾಗೂ ಅದರ ನಂತರ ಅಬ್ದುಲ್ ಗನಿ(ಅಬ್ದುಲ್ ಘನಿ) ಓದಲೂ ಸಾಧ್ಯವಿಲ್ಲ. ಇನ್ನೂ ಹೆಚ್ಚೆಂದರೆ ಈ ದ್ವಿಪದಿಗೆ ಅಬ್ದುಲ್ ಘನಿ ಕಾವ್ಯನಾಮ ಹಾಕಿ ಓದಿದರೆ ಇದರ ಅರ್ಥ ಕ್ರಿಯೆಯ ಕರ್ಮಣಿ ಪ್ರಯೋಗವಾಗುತ್ತದೆ. ಅರ್ಥ ಹೀಗಾಗಬಹುದು "ಓ ಅಬ್ದುಲ್!ನೀನು ಶಾಹನ ಗುಣಗಾನ ಮಾಡು (ಅದು) ಆಕಾಶ ಮತ್ತು ಭೂಮಿಯಲ್ಲಿ ತಿರುಗಾಡುತ್ತಿದೆ". ಆದರೆ ಕೆತ್ತಿ (ಕಿತ್ನಿ)ಪದ ಇಟ್ಟು ಓದಿದರೆ ದ್ವಿಪದಿ ಇನ್ನೂ ಅರ್ಥಪೂರ್ಣವಾಗುತ್ತದೆ. ಅಬ್ದುಲ್‌ನು ಈ ದ್ವಿಪದಿಯನ್ನು ತನ್ನ ಲೇಖನದ ಮುಕ್ತಾಯದಲ್ಲಿ ಬರೆಯುತ್ತಿದ್ದಾನೆ. ಅವನು "ಸಿಫ್ಟತೆ ಶಾಹ" ಶಾಹನ ಗುಣವಾಚನೆಯನ್ನು ಸಾಧ್ಯವಾದ ಮಟ್ಟಿಗೆ ಹೇಳಿ ಮುಗಿಸಿದ್ದಾನೆ. ಆದ್ದರಿಂದ ಈ ಶಾಸ್ತ್ರಬದ್ಧ ಓದುವಿಕೆ ಸೂಕ್ತವಾಗಿರುತ್ತದೆ. ಅಂದರೆ "ಓ ಅಬ್ದುಲ್ ನೀನು ಶಾಹನ ಗುಣಗಾನ ಎಷ್ಟೊಂದು ಮಾಡಿದರೂ ಸಹ (ಅದು ಮುಗಿಯುವುದಿಲ್ಲ) ಏಕೆಂದರೆ ಅದು ಭೂಮಿ ಮತ್ತು ಆಕಾಶದಲ್ಲಿ ತುಂಬುತ್ತಲಿದೆ."

ಇಷ್ಟಾದರೂ ಸಹ ಅಬ್ದುಲ್‌ನ ಪೂರ್ಣ ಹೆಸರೇನಿರಬಹುದೆಂದು ಪ್ರಶ್ನೆ ಉಳಿದುಕೊಳ್ಳುತ್ತದೆ. ಅಬ್ದುಲ್ಲಾಃ ಬಹುಶಃ ಅವನ ಹೆಸರಿರಬೇಕೆಂದು ಸಂಪಾದಕರ ಊಹೆ. ಅಬ್ದುಲ್ ಬಹಳಷ್ಟು ಇಸ್ಲಾಮಿ ಹೆಸರುಗಳ ಮೊದಲನೆಯ ಭಾಗವಾಗಿರುತ್ತದೆ. ಆದರೆ ಸಾಮಾನ್ಯವಾಗಿ ಅಬ್ದುಲ್ಲಾಃ ಹೆಸರಿರುವಂತಹ ಜನರ ಉಪನಾಮ ಅಬ್ದುಲ್ ಎಂದು ದೊರೆಯುತ್ತದೆ. ಇದರ ಕಾರಣವೆಂದರೆ ಅಬ್ದುಲ್ ಖ಼ಾದರ್, ಅಬ್ದುಲ್ ಹಕೀಂ, ಅಬ್ದುಲ್ ಖ಼ದೀರ್‌ರವರಿಗೆ ಖ಼ಾದರ್, ಹಕೀಂ ಮತ್ತು ಖ಼ದೀರ್ ಹೆಸರುಗಳಿಂದ ನೆನೆಯಬಹುದು. ಅಬ್ದುಲ್ಲಾಃ ಹೆಸರಿರುವವನಿಗೆ ಎಂದೂ ಸಹ "ಅಲ್ಲಾಃ"ನ ಹೆಸರಿನಿಂದ ಕರೆಯಲಾಗುವುದಿಲ್ಲಾ. ಅಬ್ದುಲ್ಲಾಃ ಹೆಸರಿರುವ ಜನರಿಗೆ ಇಂದೂ ಸಹ ಬಹಳಷ್ಟು ಸಲ ಅಬ್ದುಲ್ ಎಂಬ ಹೆಸರಿನಿಂದ ಕರೆಯಲ್ಪಡುತ್ತದೆ. ಅಬ್ದುಲ್ ಅಲಿಯ ಹೆಸರಿನ ವ್ಯಕ್ತಿಯನ್ನೂ ಸಹ ಅಬ್ದುಲ್ ಎಂಬ ಹೆಸರಿಂದ ಕರೆಯುವ ಉದಾಹರಣೆಯನ್ನೂ ಸಂಪಾದಕರು ಕೊಡುತ್ತಾರೆ. ಇದರ ಕಾರಣವು ಇದೇಯಾಗಿದೆ. ಅಂದರೆ ಕೇವಲ 'ಅಲಿ' ಹೆಸರಿನಿಂದ ಕರೆಯಲು ಸರಿಯಲ್ಲ ಎಂದು ತಿಳಿದಿದ್ದಾರೆ. ಇದನ್ನು ರದ್ದುಪಡಿಸಲು ಇಷ್ಟು ಹೇಳಬಹುದು. ಕೇವಲ ಅಲಿ ಹೆಸರು ಅನೇಕ ಸಲ ಸಿಗುತ್ತದೆ. ಆದರೆ "ಅಲ್ಲಾಃ" ಹೆಸರಿನಿಂದ ಎಂದೂ ಯಾವ ವ್ಯಕ್ತಿಗೂ ನೆನಸಲಾಗುವುದಿಲ್ಲ. ಈ ಭಾಷಾಶಾಸ್ತ್ರ ಆಧಾರಗಳ ಮೇಲೆ ನಾವು ಇಷ್ಟಂತೂ ಹೇಳಬಹುದು, ಅಬ್ದುಲ್‌ನ ಪೂರ್ಣ ಹೆಸರು ಅಬ್ದುಲ್ಲಾಃನೇ ಇರಬೇಕು.

'ಇಬ್ರಾಹೀಂ ನಾಮಾ'ದ ಆಂತರಿಕ ಆಧಾರಗಳ ಮೇಲೆ ಅಬ್ದುಲ್‌ನ ವ್ಯಕ್ತಿತ್ವ ಮತ್ತು ಸಾಮರ್ಥ್ಯದ ಬಗ್ಗೆ ಮತ್ತೆ ಕೆಲವು ತಿಳುವಳಿಕೆಗಳು ಸಿಗುತ್ತವೆ. ತನ್ನ ಗುರು ಇಬ್ರಾಹೀಮನ ಹಾಗೆ ಅಬ್ದುಲ್ ಸಹ ಸುನ್ನಿ ಪಂಥದಲ್ಲಿ ದೃಢಭಕ್ತಿ ಇಡುವನಾಗಿದ್ದ. ನಾತೆ ರಸೂಲ್ ಬರೆದ ತಕ್ಷಣವೇ ಅವನು "ದರ್ ಮದ್‌ಹೆ ಯಾರಾನೆ ರಸೂಲ್ (ಸೊಲ್ಲಲಾಹು ಸಲ್ಲಂ)" ಎಂಬ ಶೀರ್ಷಿಕೆಯಲ್ಲಿ ಹತ್ತು ದ್ವಿಪದಿಗಳಲ್ಲಿ "ಚಾರ್ ಯಾರ್"ರವರ ಪ್ರಶಂಸೆಯಲ್ಲಿ ತುಂಬ

ಭಕ್ತಿಯುಳ್ಳ ಶೈಲಿಯಲ್ಲಿ ಬರೆದಿದ್ದಾನೆ. ಖ಼ಲೀಫ಼ಾಗಳ ಪ್ರಶಂಸೆಯ ನಂತರ ಅವನು ಖ್ವಾಜಾಬಂದೆ ನವಾಜ಼ ಗೇಸುದರಾಜ಼ರವರ ಪ್ರಶಂಸೆಯಲ್ಲೂ ಕೆಲವು ದ್ವಿಪದಿಗಳನ್ನು ರಚಿಸಿದ್ದಾನೆ. ಬಂದೆನವಾಜ಼ರವರ ಭಕ್ತಿ ಬಿಜಾಪುರದ ಜನಗಳ ಮನದಲ್ಲಿ ಆದಿ ಕಾಲದಿಂದಲೂ ನಡೆದು ಬಂದಿದೆ. ಹಜ್ರತ್‌ರವರ ಪವಾಡಗಳನ್ನು ಹೇಳುತ್ತ ಅಬ್ದುಲ್‌ನು ಭಿಕ್ಷುಕನಾಗಿದ್ದ ಅಹ್ಮದ್ (ಅಹ್ಮದ್ ಶಾಹ, ಸುಲ್ತಾನ್ ಬಹಮನಿ)ನಿಗೆ ಶಾಹ/ಸುಲ್ತಾನನನ್ನಾಗಿ ಮಾಡಿದ ಪ್ರಸಂಗವನ್ನು ಬರೆದಿದ್ದಾನೆ.

ಇಷ್ಟೆಲ್ಲ ಆದರೂ ಅಬ್ದುಲ್ ಜಗತ್‌ಗುರು ಮುಂದೆ ತನ್ನ ವಿನಯ ಭಾವನೆಯನ್ನು ಪ್ರಸ್ತಾಪಿಸುತ್ತಾನೆ. ಆದರೆ ಅವನು ಎಲ್ಲ ವಿದ್ಯೆಗಳಲ್ಲಿ ವಿಶೇಷವಾಗಿ ಕಾವ್ಯ ಮತ್ತು ಸಂಗೀತದ ಕಲೆಯಲ್ಲಿ ಸಂಪೂರ್ಣ ಮಾಹಿತಿಯನ್ನು ಪಡೆದಿದ್ದ. ಇಬ್ರಾಹೀಂ ನಾಮಾದ ಕೊನೆಯ ಭಾಗದಲ್ಲಿ ಅವನು ಗಾಯಕರು ಮತ್ತು ನರ್ತಕಿಯರ ಪ್ರಸ್ತಾವನೆಯನ್ನು ಇಡುತ್ತಾನೆ, ಅಲ್ಲಿಯೇ ಅವನು ಒಬ್ಬ ಪರಿಣಿತ ಶೈಲಿಯಲ್ಲಿ ಸಂಗೀತದ ತಾಂತ್ರಿಕ ಅರ್ಥಉಳ್ಳ ಪದಗಳು, ತಾಲ್, ಸುರ್, ತಂತ್ ವ ತಂತ್, ಜಾಮೂನಿ, ಬಾವೇಸ್ ಸುರ್ತಿಯಾಂ, ಆರು ರಾಗ ಮತ್ತು ೩೬ ರಾಗಿಣಿಯರುಗಳು 'ದರತ್', ಲಘು ಗುರು ಮತ್ತು ಪಲ್ತ, ಏಳು ಗುಣಗಳ ಬಳಕೆಯನ್ನು ಸಂಕೋಚವಿಲ್ಲದೆ ಮಾಡುತ್ತಾ ಹೋಗುತ್ತಾನೆ. ಅವನು ಕುದುರೆಗಳ ಜಾತಿ ಮತ್ತು ಅದರ ಗುಣಗಳ ಬಗ್ಗೆಯೂ ಸಹ ಚೆನ್ನಾಗಿ ಬಲ್ಲವನಾಗಿದ್ದ. ಅದರ ಜಾತಿಗಳ ಬಗ್ಗೆ ಹೇಳಲು ಪ್ರಾರಂಭಿಸಿದ್ದರೆ ಬೋರ, ಕಮೀತ, ಗರ್ಜ಼ೇ, ಕರನ್ಸಕ್, ನಖ಼್ರೆ, ಜ಼ರ್ದೇ, ಹಾನ್ಸಲೀ, ಅಬ್ಲಖ಼, ಮಂಕ್ಸಿ, ದಿನಾರೆ, ಕಬೂತ್, ಮಶ್ಕಿ, ಎಫ಼ಜ಼್, ಲಾಸಾನಿ, ಆರಬ್ ನಿಶಾನ್, ಇರಾಖ಼ಿ, ಬದಖ಼ಶಾನಿ, ಕಥೀ, ಹೀಗೆ ಅನೇಕ ಜಾತಿ ಕುದುರೆಗಳ ಹೆಸರುಗಳನ್ನು ಹೇಳುತ್ತಾ ಹೋಗುತ್ತಾನೆ.

ಅಬ್ದುಲ್‌ಗೆ ಬಿದ್ಯಾಪುರ್‌ನಗರ, ಬಿಜಾಪುರದ ಶ್ರೇಷ್ಠತೆ ಮತ್ತು ಮನಮೆಚ್ಚುವ ರೀವಿಯ ಪೂರ್ಣಪ್ರಜ್ಞೆ ಇದೆ. ಇದು ವಿದ್ಯಾವಂತರ, ಕಲಾವಿದರ ಮತ್ತು ಕುಶಲಕರ್ಮಿಗಳ ಕಾಬಾ(ಮಾನ್ಯ)ವೆಂದು ಸಹ ಅವನಿಗೆ ತಿಳಿದಿದೆ. ಅವನು ಜಗತ್ ಗುರುವಿನ ಕಲಾಪೋಷಕತನ ಮತ್ತು ಅವನ ಗುರುವಿಕೆ ಬಗ್ಗೆಯೂ ಹೇಳಿದ್ದಾನೆ. ಆದರೆ ವಜ್ಹಿ ಅಥವಾ ನುಸ್ರತಿರವರ ಹಾಗೆ ದಕ್ಖನ್ ಭೂಮಿ ಬಗ್ಗೆ ತನ್ನ ಪ್ರೀತಿಪೂರ್ವಕ ಶ್ರದ್ದೆಯನ್ನು ವ್ಯಕ್ತಪಡಿಸಲಿಲ್ಲ. ಈ ದೇಶಭಕ್ತಿಯ ಕೊರತೆಯಿಂದಲೂ ಅಬ್ದುಲ್‌ನು ಬಿಜಾಪುರದಲ್ಲಿ ಹೊಸದಾಗಿ ಆಗಮಿಸಿದ್ದನೆಂಬ ಅನಿಸಿಕೆಯ ಸಮರ್ಥನೆಯಾಗುತ್ತದೆ. ಜ಼ಹೂರಿ ಮತ್ತು ಮಲಿಕ್‌ಖ಼ುಮಿರವರ ಹಾಗೆ ಅವನಿಗೆ ಪ್ರೀತಿಪಾತ್ರನಾದವನು ದಖನ್ನಿನ ಅರಸನೇ ಹೊರತು ದಕ್ಷಿಣ ಭೂಮಿ ಅಲ್ಲ.

ಕೃತಿ ರಚನೆ

ಸಬ್ ರಸ್‌ನ ಹಾಗೆ ಇಬ್ರಾಹೀಮ್ ನಾಮಾದಲ್ಲೂ ಸಹ ಕೃತಿ ರಚನೆಯ ಬಗ್ಗೆ ಕೃತಿಯೊಳಗೆ ಲೇಖಕನೇ ಹೇಳಿದ್ದಾನೆ. ಖ಼ುತುಬ್ ಶಾಹಿ ಆಸ್ಥಾನವಿರಲಿ, ಅಥವಾ ಆದಿಲ್‌ಶಾಹಿ

ಲೇಖಕರಿಗೆ ಮತ್ತು ಕವಿಗಳಿಗೆ ಶಾಹಿ ಆದೇಶದ ಪರಿಪಾಲನೆಯ ಕಲ್ಪನೆ ಒಂದೇ ರೀತಿಯಾಗಿದೆ. ವಜ್ಹಿ, ಸಬ್ರಸ್‌ನಲ್ಲಿ ಅಬ್ದುಲ್ಲಾ ಖುತುಬ್ ಶಾಹನ ಆಜ್ಞೆಯ ಪ್ರಸ್ತಾಪವನ್ನು ಹೀಗೆ ಮಾಡುತ್ತಾನೆ. "ಸಬಾಹ್ ಕೆ ವಖ್ತ್ ಬೈಠೆ ತಖ್ತ್, ಎಕಾಯೆಕ್ ಘೈಬ್ ನೆ ಕುಛ್ ರಂಝ ಪಾಕರ್, ದಿಲ್ ಮೆ ಅಪ್ನೆ ಕುಛ್ ಲ್ಯಾಕರ್, ವಜ್ಹಿ ನಾದಿರ್ ಮನ್ ಕರ್ೂ, ದರ್ಯಾದಿಲ್ ಗೌಹರ್ ಸುಖನ್ ಕರ್ೂ, ಹುಜ್ಹೂರ್ ಪಾನ್ ದಿಯೆ, ಭೌತ್ ಮಾನ್ ದಿಯೆ, ಹೌರ್ ಫ಼ರ್ಮಾಯೆ ಕೆ ಇನ್ಸಾನ್ ಕೆ ಉಜೂದೀಚ್ ಮೆ ಕುಛ್ ಇಷ್ಕ್ ಕಾ ಬಯಾನ್ ಕರ್ನಾ, ಅಪ್ನಾ ನಾವುಂ ಅಯಾರ್ ಕರ್ನಾ, ಕುಛ್ ನಿಷಾನ್ ಧರ್ನಾ.........." (ಬೆಳಗ್ಗೆ ಸಮಯ ಸಿಂಹಾಸನದ ಮೇಲೆ ಕುಳಿತಿರುವಾಗ ಆಕಸ್ಮಿಕವಾಗಿ ಅಗೋಚರದಿಂದ ಸನ್ನೆಗಳನ್ನು ತಿಳಿದು, ತಮ್ಮ ಮನಸಲ್ಲಿ ಏನೋ ತಂದು, ವಜ್ಹಿಯಂತಹ ಅಪರೂಪದ ಮನಉಳ್ಳ, ಅಮೂಲ್ಯ ಕವನದ ದಾನಿಗೆ, ಹುಜ್ಹೂರ್ ವೀಳ್ಯದೆಲೆ ಕೊಟ್ಟು, ತುಂಬ ಮರ್ಯಾದೆ ನೀಡಿ ಹೇಳಿದರು, ಮಾನವನ ಅಸ್ತಿತ್ವದಲ್ಲಿರುವ ಸ್ವಲ್ಪ ಪ್ರೀತಿ ವ್ಯಾಮೋಹ ಬಗ್ಗೆ ಹೇಳಿ, ನಿನ್ನ ಹೆಸರನ್ನು ಪ್ರಕಟಿಸಿ ಏನಾದರು ಗುರುತನ್ನು ಬಿಡು........)

ಇಬ್ರಾಹೀಮ ನಾಮಾದ ಕೃತಿ ರಚನೆ ಬಗ್ಗೆ ಅಬ್ದುಲ್‌ನ ಹೇಳಿಕೆ ಸ್ವಲ್ಪ ಇದೇ ರೀತಿಯಾಗಿದೆ

ಇನ್ಹಿ ಶಾಹ ಉಸ್ತಾದ್ ಕರ್ ಸೊ ನಝರ್
ಬುಲಾಯಾ ಜೊ ಅಬ್ದುಲ್ ಕರ್ೂ ಸರ್ ಹಾಥ್ ಧರ್
ನವಿ ಬಾತ್ ಮಜ್ಮೂನ್ ಕರ್ ಎಕ್ ಕಿತಾಬ್
ನಕು ಫ಼ಿಕ್ರ್ ಗೂಂದಿಯಾ ಹೈ ತಿಸ್ ಕಾ ಜವಾಬ್
ನ ಬಾಖಿ ರಹೆ ಕುಛ್ ತೊ ಆಲಂ ನಿಶಾನ್
ಅಗರ್ ಕುಛ್ ರಹೆ ತೊ, ಬಚನ್ ಶೆರ್ ಜಾನ್
ಶೆರ್ ಶಾಹೊ ಕಾ ತು ಸೊ ಹೈ ಯಾದ್ಗಾರ್
ರಖೆ ನಾವುಂ ಆಲಂ ಮೆ ಜಿವ್ತಾ ಖರಾರ್. (೯೩–೯೬)

ಅಂದರೆ ಅಬ್ದುಲ್ಲಾ ಖುತುಬ್ ಶಾಹ ಮತ್ತು ಇಮ್ಮಡಿ ಇಬ್ರಾಹೀಮ ಆದಿಲ್ ಶಾಹ ಇಬ್ಬರೂ ಕೂಡ ದ್ವಿಪದಿಯ ಮಹತ್ವ, ಅದು ಲೋಕದಲ್ಲಿ ಅವರ ಗುರ್ತಾಗಿರುತ್ತದೆ ಎಂದು ತಿಳಿದಿದ್ದರು. ಶಾಹ ಮತ್ತು ಕವಿ ಇಬ್ಬರ ಗುರುತು ಇದರಿಂದಲೇ ಚಿರಕಾಲ ಉಳಿಯುತ್ತದೆ ಎಂದು ಅವರು ಚೆನ್ನಾಗಿ ಬಲ್ಲವರು. ಅಬ್ದುಲ್ಲಾ ಖುತುಬ್ ಶಾಹ ಪ್ರೀತಿ ವ್ಯಾಮೋಹದ ಬಗ್ಗೆ ಸೂಚನೆಯನ್ನು ಕೊಟ್ಟಿದ್ದ, ಜಗತ್‌ಗುರು ಇಬ್ರಾಹೀಮನು 'ಶಾಹ್‌ಗಳ ದ್ವಿಪದಿ' ಮತ್ತು ಅದರ 'ಯಾದ್ಗಾರ್' ಅಗುವಂತಹ ಸವಿವರ ಸೂಚನೆಯಿಂದ ಅಬ್ದುಲ್‌ನ ಮೇಲೆ ಇದನ್ನು ಪ್ರಕಟಿಸಿದ್ದನು. ಅವನ ಬರಹದ 'ವಿಷಯ' ಮತ್ತು 'ನವಿಬಾತ್' ಸ್ವತಃ ಅವನದೇ ಅಸ್ತಿತ್ವದ್ದಾಗಿತ್ತು. ವಿಷಯ ಖಚಿತವಾದ ನಂತರ ಅವನ ಮುಂದೆ ಮಾಧ್ಯಮದ ಪ್ರಶ್ನೆ ಉದ್ಭವಗೊಂಡಿತು. ಇಬ್ರಾಹೀಮನ ಆಸ್ಥಾನದಲ್ಲಿ ಘ಼ಫೂರಿ, ಮಲಿಕ್‌ಖುಮಿ, ಹೈದರ್‌ಜಹ್ನಿ,

ಬಾಖಿರ್ ಕಾಶಿ ಅಂತಹ ಪರ್ಶಿಯನ್ ಭಾಷೆಯ ಶ್ರೇಷ್ಠ ಕವಿಗಳ ಸಮೂಹವೇ ಇತ್ತು. ಅವರೆಲ್ಲರೂ ಆದಿಲ್‌ಶಾಹಿ ಆಸ್ಥಾನವನ್ನು ಅಲಂಕರಿಸಿದ್ದರು. ಹೀಗಿರುವಾಗ ಇಂತಹ ಪರಿಸರದಲ್ಲಿ ಅಬ್ದುಲ್‌ನಂತಹ ದೇಸಿ ಕವಿಗೆ ಉಸಿರುಗಟ್ಟಿರಬೇಕು. ಅವನು ಇಂಥ ಪರಿಸರದಲ್ಲಿ ತನ್ನ ಕವಿತೆಗಳಿಂದ ಪ್ರಭಾವಿಸಲಾರೆ ಎಂಬುದು ಸಹ ಅವನನ್ನು ಕಾಡುತಿತ್ತು. ಅವರ ಪ್ರೋತ್ಸಾಹ ಮತ್ತು ಶ್ರೇಷ್ಠತೆಯ ಕೇವಲ ಒಂದೇ ಯುಕ್ತತೆಯ ಕಾರಣ ಇಬ್ರಾಹೀಮನ ಹಿಂದವಿ ಭಾಷೆಯ ಅಭಿರುಚಿ. ಇಬ್ರಾಹೀಮನ ಫ಼ಾರ್ಸಿ ಜ್ಞಾನದ ಚರ್ಚೆ[೪] ಇದ್ದರೂ ಸಹ ಅವನು ಪ್ರಕಟಿಸುವ ಮಾಧ್ಯಮ ಅಭಿರುಚಿ ಹಿಂದವಿಯಾಗಿತ್ತು. 'ಕಿತಾಬೆ ನೌರಸ್' ಇದರ ಗುರುತು ಮತ್ತು ಜಾಮೀನು. ಸಂಗೀತದ ಜೊತೆ ಜೊತೆಯಲ್ಲಿ ಅವನ ಹಿಂದಿ ಕಾವ್ಯದ ಆಸಕ್ತಿ ಅತ್ಯಂತ ಪರಿಣತಿ ಹೊಂದಿತ್ತು. ಅವನದೇ ಆದ ಹಿಂದಿ ಕವನ ರಚನೆಗಳಲ್ಲಿ ಕತೆಯ ಕಡೆ ಸಂಕೇತಗಳು, ಉಪಮೆ, ರೂಪಕಾಲಂಕಾರಗಳು ಒಳಗೊಂಡಿರುತ್ತವೆ. ಜ಼ಹೂರಿ ಮತ್ತು ಮಲಿಕ್ ಖ಼ುಮಿರವರ ಪೋಷಕತೆ ಇದ್ದರು ಸಹ ಅವನು ತನ್ನ ಕಾಲದ ಪರ್ಶಿಯನ್ ಕಾವ್ಯರಚನೆಯ ಪರಿಸರದಿಂದ ಎಷ್ಟೊಂದು ಹತ್ತಿರವಾಗಿದ್ದನೆಂಬ ಸಂದರ್ಭವೂ ಸಹ ನಮ್ಮ ಮುಂದೆ ಇದೆ. ಆಸ್ಥಾನದ ಈ ಎರಡು ಬಣ್ಣದ ಪರಿಸರದಲ್ಲಿ ಇಬ್ರಾಹೀಮ, ಒಂದು ಹಿಂದಿ ದ್ವಿಪದಿಗೆ ವಿಷಯಸೂಚಿ ಕೊಟ್ಟು ಅಬ್ದುಲ್‌ನನ್ನು ಹುರಿದುಂಬಿರುವಂಥ ಕೆಲಸವಾಗಿರಲೂ ಸಾಧ್ಯವಿದೆ. ಕಾವ್ಯದ ವಿಷಯ ನಿರ್ಣಯದ ನಂತರ ಜಗತ್ ಗುರುವನ್ನುದ್ದೇಶಿಸಿ ಅಬ್ದುಲ್‌ನ ಮೊದಲನೆಯ ಪ್ರಶ್ನೆ ಇದು:

> ಸೊ ಯುರ್ೂ ಬಚನ್ ಸುನ್ ಶಾಹ ಉಸ್ತಾದ್ ಕರ್ಾ
> ಪೂಛ್ಯಾ ಜಗತ್ ಗುರ್ ಶೆರ್ ಕಹ್ ಕಿಸ್ ಜ಼ಬರ್ಾ
> ಜ಼ಬರ್ಾ ಹಿಂದಿ ಮುರ್ಝ್, ಸೊ ಹುರ್ೂ ದೆಹಲ್ವಿ
> ನ ಜಾನುರ್ೂ ಅರಬ್ ಹೌರ ಅಜಂ ಮಸ್ನವಿ[೫] (೯೧–೯೮)

'ಅರಬ್ ಔರ ಅಜಂ' ಮಸ್ನವಿಯ ಪರದೆಯಲ್ಲಿ ಅಸಲಿಗೆ ಅಬ್ದುಲ್ ತನ್ನ ಫ಼ಾರ್ಸಿಯ ದೀನಭಾವನೆಯನ್ನು ವ್ಯಕ್ತಪಡಿಸುತ್ತಿದ್ದಾನೆ, ಅವನು ತನ್ನ ಹಿಂದವಿ ಭಾಷೆ ಮತ್ತು ತಾನು ದೆಹಲ್ವಿಯಾಗಿರುವ ಸಂಬಂಧದ ದೃಢೀಕರಣ, ಜ಼ಹೂರಿ ಮತ್ತು ಮಲಿಕ್‌ಖ಼ುಮಿರವರಿಂದ ತಪಾಸಣೆ ಮಾಡಬೇಕಿಂದಿದ್ದಾನೆ. ಅವರ ಮುಂದೆ ಇವನ ಪರ್ಶಿಯನ್ ಭಾಷೆ ತುಚ್ಛವಾಗಿತ್ತು. ಅವನ ಮುಂದೆ ಫ಼ಿರ್ದೊಸಿಯ 'ಶಾಹನಾಮಾ' ಆ ಪೂರ್ವಚರಿತ್ರೆಯೂ ಸಹ ಇದ್ದಿರಬಹುದು, ಅದರ ತಪಾಸಣೆಯನ್ನು ಹಿಂದವಿ ಭಾಷೆಯಿಂದ ಮಾಡಲು ಅವನಿಂದ ಸಾಧ್ಯವಿರಲಿಲ್ಲ. ಈ ಪುಣ್ಯ 'ಅಲಿ ನಾಮಾ'ದ ಕವಿ, ನುಸ್ರತಿಯ ಭಾಗದಲ್ಲಿ ಬರಬೇಕಾಗಿತ್ತು ಅಂದರೆ ಆ ಶಾಹನಾಮಾ ದಂತೆ ದಖನ್‌ದಲ್ಲಿ (ಅಲಿ ನಾಮ) ಗ್ರಂಥ ರಚಿಸಲಿ.

> ಕೆ ಯು ಶಾಂ ನಾಮ ದಕನ್ ಕಾ ಹೈ ಜಾನ್

ಶಾಹ ಉಸ್ತಾದ್‌ನ ಈ ಉತ್ತರ ಅಬ್ದುಲ್‌ನಿಗೆ ಅವನ ನಿರೀಕ್ಷೆಗಿಂತ ಬಹಳಷ್ಟು ಜಾಸ್ತಿ ಇತ್ತು.

ಕಹ್ಯಾ ಶಾಹ ಉಸ್ತಾದ್ ಅಬ್ದುಲ್ ಸೆ ಯ್ಯೂಁ
ತುಁ ಹರ್‌ಎಕ್ ಝ಼ಬಾನ್ ಕರ್ ಶೆರ್ ಬಾತ್ ಕ್ಯೂಁ
ಶೆರ್ ಫ಼ನ್ ಸಬ್ ಮುಲ್ಕ ಮೆ ಏಕ್ ಧಾತ್
ಇಶ್ಪ ಏಕ್ ಪ್ರಗಟ್, ಛಪ್ಪನ್ ರೂಪ್ ಬಾತ್[೬]
ಝ಼ಬಾಁ ರೂಪ್ ಪ್ರಗಟ್ ಜೊ ಜಿಸ್ ಮುಲ್ಕ ಕರ್
ಉಸೀ ಬಚನ್ ಸ್ಯೂಁ ಶಾಯೆರಿ ಬೋಲ್ (೧೦೧-೨೦೦)

ಇದರ ನಂತರ ಇಬ್ರಾಹೀಮನು ಅಬ್ದುಲ್‌ಗೆ ದ್ವಿಪದಿಯ ಕಲೆ ಬಗ್ಗೆ ಸೂಚನೆಗಳನ್ನು ನೀಡುತ್ತಾನೆ. ಮತ್ತು 'ಬಚನ್' 'ಅರ್ಥ್'ದ ಪರಸ್ಪರ ಸಂಬಂಧದ ಮೇಲೆ ಬೆಳಕು ಚೆಲ್ಲುತ್ತಾ 'ಉಪಮಾ', 'ಸುಖ಼ನ್', ಮತ್ತು 'ಬುಧ್ಧಿ', 'ತುಕ್' ಮತ್ತು ಸಬ್ದ್(ಶಬ್ದ)ದ ಅಂತರಾಳದಲ್ಲಿ ಹೋಗುತ್ತಾನೆ. ಕೃತಿಯ ಈ ಭಾಗ ಇಬ್ರಾಹೀಮನ ಮುಖ್ಯ ರೂಪ ಲಾವಣ್ಯಗಳ ಕಲ್ಪನೆಗಳನ್ನು ಹೊಂದಿದೆ. ಝ಼ಹೂರಿಯ ಸೆಹ್‌ನಸರ್‌ನಲ್ಲೂ ಸಹ ಇಬ್ರಾಹೀಮನ ಸೂಕ್ಷ್ಮತೆಯ ಅನೇಕ ಸಾಕ್ಷಿಗಳು ದೊರೆಯುತ್ತವೆ.[೭] ಯಾವ ವ್ಯಕ್ತಿಯು "ಖ಼ಫ಼ಾಯಿ ರಾ ಝ಼ಹೂರಿ ಸಾಖ಼ತ" ಅವನದೇ ಸೂಕ್ಷ್ಮ ಮೆಚ್ಚುವಿಕೆಯು ಅಬ್ದುಲ್‌ನಿಗೆ ದ್ವಿಪದಿಯ ಕಲೆ ಬಗ್ಗೆ ಒಂದು ರೀತಿಯ ರೂಪಲಾವಣ್ಯದ ಚಿಂತನೆಯೂ ಕೊಟ್ಟಿತು. ಇವುಗಳ ಮೂಲ ಸಂಬಂಧಗಳು ಆರ್ಯ ಸಂಸ್ಕೃತಿಯಲ್ಲಿ ದೂರ ದೂರದವರೆಗೆ ಹರಡಿಕೊಂಡಿವೆ. ಇಬ್ರಾಹೀಮನ ಕಾಲದ ಆದಿಲ್‌ಶಾಹಿ ಪರ್ಶಿಯನ್ ದರ್ಬಾರ್ ಮತ್ತು ಪರ್ಷಿಯನ್ ಕವಿಗಳ ಉಪಸ್ಥಿತಿಯಲ್ಲೂ ಸಹ ಬುನಾದಿ ಹಂತದಲ್ಲಿ ಭಾರತೀಯ ರೂಪಲಾವಣ್ಯಗಳ ಕಲ್ಪನೆಗಳಿಂದ ತಂಬಿತ್ತು ಇದರಲ್ಲೇ ಗುರು ಮತ್ತು ಶಿಷ್ಯರೆಲ್ಲರೂ ಅದೇ ಬಣ್ಣದಲ್ಲಿ ಮುಳುಗಿದ್ದರು. ಮತ್ತು ಈ ಮಹಾಕೊಡುಗೆ ಆ ವ್ಯಕ್ತಿತ್ವದ್ದಾಗಿತ್ತು. ಅಬ್ದುಲ್‌ನ ಹೇಳಿಕೆ ಪ್ರಕಾರ, ಅವನು ಉಸ್ತಾದ್ ಆಗಿದ್ದ ಮತ್ತು ಜಗತ್ ಗುರು ಸಹ. ಮತ್ತೆ ಝ಼ಹೂರಿಯ ಹೇಳಿಕೆ ಪ್ರಕಾರ

'ಅದಬ್ ದರ್ ಪೇಶ್ಗಾಹಷ್ ಪೇಶ್ಕಾರೆ'

ಅಸಲಿಗೆ 'ಇಬ್ರಾಹೀಮ ನಾಮಾ', 'ಶಾಹ ಉಸ್ತಾದ್'ನ ವೈಭವದಲ್ಲಿ ಒಂದು ಉದ್ದನೆಯ ಪ್ರಶಂಸಾ ಕಾವ್ಯ, ಅದನ್ನು ಮಸ್ನವಿ ರೂಪದಲ್ಲಿ ಬರೆಯಲಾಗಿದೆ. ಇದರ ವಿಷಯ ಸ್ವತಃ 'ಶಾಹೆ ದಖನ್'ನಿನ ವ್ಯಕ್ತಿತ್ವ, ಅವನ ಪಟ್ಟಣ, ಅವನ ಕೋಟೆ, ಅವನ ಸೈನ್ಯ, ಅವನ ನ್ಯಾಯ, ಅವನ ಉದಾರತೆ, ಅವನ ಸಾಹಿತ್ಯ ಪೋಷಣೆ, ಅವನ ಸಭೆಯ ಅಲಂಕಾರ, ಇವು ಯಾವುದೇ ಐತಿಹಾಸಿಕ ಮಸ್ನವಿಯಲ್ಲಿ ಇರುವುದಿಲ್ಲ. ಆದರೂ ಇದರಲ್ಲಿ ಇಬ್ರಾಹೀಮನ ವ್ಯಕ್ತಿತ್ವದ ಚಿತ್ರ ಏನು ಉದ್ಭವಿಸುತ್ತದೆಯೋ ಅದರಲ್ಲಿ ಐತಿಹಾಸಿಕ ನಿಜಾಂಶಗಳ ದರ್ಶನವಾಗುತ್ತದೆ. ನುಸ್ರತಿಯ 'ಅಲಿನಾಮಾ'ದ (ಅದರ ಪ್ರೇರಣೆ ಬಹುಶಃ 'ಇಬ್ರಾಹೀಮ ನಾಮಾ'ವೇ ಆಗಿರಬೇಕು) ಎದುರಾಗಿ ಇದೊಂದು ಸಾಮರಸ (ಬಜ಼್ಮಿಯ=ಸಭೆಗೆ ಸಂಬಂಧಿಸಿದ ಗೀತೆ) ಮಸ್ನವಿಯಾಗಿದೆ. ಇದು ಸಹ ನಿಜಾಂಶ, ಇಬ್ರಾಹೀಮನ ರಾಜ್ಯದ ರಕ್ಷಣೆಗಾಗಿ ಕೆಲವು ಯುದ್ಧಗಳಾಗಿದ್ದರೂ ಸಹ ಅವನ ಜೀವನದಲ್ಲಿ ಯುದ್ಧಕ್ಕಿಂತ ಕಾವ್ಯ ಕಲಾಸಭೆಯು

ಶ್ರೇಷ್ಠತೆಯನ್ನು ಪಡೆದಿತ್ತು. ಅವನು ಸಾಮಾನ್ಯವಾಗಿ ತಾವೂಸ್ ಮತ್ತು ರಬಾಬಿನ ಮನುಷ್ಯನಾಗಿದ್ದ. ಅವನ ಕೃತಿ 'ಕಿತಾಬೆ ನೌರಸ್'ನಲ್ಲಿ ಖಡ್ಗ ಮತ್ತು ತುದಿಯ ಪ್ರಸ್ತಾಪ ಎಲ್ಲೂ ಸಿಗುವುದಿಲ್ಲ. ಸಿಗುವುದಾದರೂ ಮೋತಿ ಖ಼ಾನ್ (ತಂಬೂರಿ) ಆತಿಶ್ ಖ಼ಾನ್ (ಸ್ವಂತ ಸವಾರಿಯ ಆನೆ) ಸರಸ್ವತಿ. ತನ್ನಷ್ಟಕ್ಕೆ ತಾನೇ ಭಾವನೆಯಲ್ಲಿ ಅವನು ತನ್ನ ಮಾರ್ಗದ ಬಗ್ಗೆಯೂ ಸಹ ಹೇಳಿದ್ದಾನೆ.

ಇಸ್ ಜಗ್ ಮೆ ದೊ ಕುಛ್ ಲೀಜಿಯೆ
ಏಕ್ ತಂಬೂರ ಏಕ್ ಕಾಮಿನಿ ಕೀಜಿಯೆ

(ಈ ಲೋಕದಲ್ಲಿ ಕೇವಲ ಎರಡು ವಸ್ತುಗಳು ಮಾತ್ರ ಬೇಕು, ಒಂದು ತಂಬೂರಿ ಮತ್ತೊಂದು ಸುಂದರಿ.)

ಪ್ರಶಂಸಿಲ್ಪಟ್ಟವನು = ಇಮ್ಮಡಿ ಇಬ್ರಾಹೀಮ ಆದಿಲ್ ಶಾಹ

ಅಬ್ದುಲ್‌ನಿಂದ ಪ್ರಶಂಸಿಲ್ಪಟ್ಟವನು ಆದಿಲ್‌ಶಾಹೀ ಕುಟುಂಬದ ಆರನೆಯ ಬಾದ್‌ಶಾಹ್, ಮುಹಮ್ಮದ್ ಖು಼ಲಿ ಖು಼ತುಬ್ ಶಾಹ ಮತ್ತು ಅಕ್ಬರ್, ಜಹಾಂಗೀರನ ಸಮಕಾಲೀನ, ಇಮ್ಮಡಿ ಇಬ್ರಾಹೀಮ್ ಆದಿಲ್‌ಶಾಹ. ಇವನ ಕಾಲ ಕ್ರಿ ಶ ೧೫೮೦ – ೧೬೨೭ (ಹಿಜರಿ ೯೮೮ – ೧೦೩೭). ಅವನು ಬಹಳ ಹಿರಿಮೆ ಮತ್ತು ವೈಭವದಿಂದ ರಾಜ್ಯವನ್ನು ಆಳಿದನು. 'ಇಬ್ರಾಹಿಮ್ ನಾಮಾ'ದಲ್ಲಿ ಅಬ್ದುಲ್‌ನು ಅವನನ್ನು ಶಾಹ ಇಬ್ರಾಹೀಂ, ಶಾಹ್ ಉಸ್ತಾದ್, ಶಾಹೆ ನೌರಸ್, ಶಾಹ್ ಆಲಂ, ಆಲಂ ಪನಾಃ, ಶಾಹೆ ದಖನ್ ಮತ್ತು ಜಗತ್‌ಗುರು ಎಂಬ ಹೆಸರು ಮತ್ತು ಬಿರುದುಗಳಿಂದ ಜ್ಞಾಪಿಸಿಕೊಂಡಿದ್ದಾನೆ. ಇಬ್ರಾಹೀಮ್ ಕೇವಲ ೯ನೇ ವರ್ಷದಲ್ಲಿ ತನ್ನ ಚಿಕ್ಕಪ್ಪ ಮೊದಲನೆಯ ಅಲಿ ಆದಿಲ್‌ಶಾಹನ ನಿಧನದ ನಂತರ ಕ್ರಿ. ಶ. ೧೫೮೦ ರಲ್ಲಿ ಬಿಜಾಪುರದ ಸಿಂಹಾಸನವನ್ನು ಅಲಂಕರಿಸಿದ. ಚಿಕ್ಕ ವಯಸ್ಸಿನ ಕಾರಣಕ್ಕಾಗಿ ಕ್ರಿ ಶ ೧೫೯೦ರವರೆಗೆ ಸಾಮ್ರಾಜ್ಯದ ಸಂರಕ್ಷಕರು ನಾಲ್ವರು, ಕಾಮಿಲ್ ಖ಼ಾನ್, ಕಿಶೋರ್ ಖ಼ಾನ್, ಇಖ್ಲಾಸ್ ಖ಼ಾನ್ ಮತ್ತು ದಿಲಾವರ್ ಖ಼ಾನ್‌ರವರ ಕಿರುಕುಳವನ್ನು ಸಹಿಸಿದ. ಅವನಿಗೆ ಮೊದಲನೆಯ ತರಬೇತಿ ನೀಡಿದ್ದು ಅವನ ಚಿಕ್ಕಮ್ಮ, ಅಹ್ಮದ್ ನಗರದ ಸುಪ್ರಸಿದ್ಧ ಯುವರಾಣಿ ಮತ್ತು ಮೊದಲನೆಯ ಅಲಿ ಆದಿಲ್‌ಶಾಹನ ಪತ್ನಿ ಚಾಂದ್‌ಬೇಬಿ ಸುಲ್ತಾನ್‌ಳ ಉಸ್ತುವಾರಿಯಲ್ಲಾಯಿತು, ಅವಳಿಗೆ ಇಬ್ರಾಹೀಮನು ಮನಸಾರೆ ವಿಶ್ವಾಸ ವ್ಯಕ್ತಪಡಿಸುತ್ತಿದ್ದನು ಹಾಗೂ ಅವಳ ಪ್ರಶಂಸೆಯಲ್ಲಿ ಒಂದು ದೊಡ್ಡ ಪದ್ಯವನ್ನೇ ಬರೆದಿರುವನು. ಮೇಲೆ ಹೇಳಿರುವ ಹಾಗೆ ತನ್ನ ಆಳ್ವಿಕೆಯ ಮೊದಲನೆಯ ಹತ್ತುಹನ್ನೊಂದು ವರ್ಷಗಳ ಕಾಲ ಅವನು ಸಾಮ್ರಾಜ್ಯದ ಸಂರಕ್ಷಕರ ಕನಿಕರ ಮತ್ತು ಕೃಪೆ ಮೇಲಿದ್ದ, ಅವರಲ್ಲಿ ಕೆಲವರಿಂದ ಚಾಂದ್‌ಬೀಬಿ ಸುಲ್ತಾನಳೂ ಸಹ ಅವಮಾನ ಸಹಿಸಬೇಕಾಯಿತು. ಮತ್ತೆ ಕೊನೆಗೆ ಅವಳನ್ನು ಬಂಧಿಸಿ ಸೆರೆವಾಸ ಮಾಡಲಾಯಿತು. ಇಬ್ರಾಹೀಮನ ಮೂಲ ಪ್ರಭುತ್ವ, ಸಾಮ್ರಾಜ್ಯದ ಕೊನೆಯ ಸಂರಕ್ಷಕ ದಿಲಾವರ್‌ಖಾನನ ಪತನದ ನಂತರ ಕ್ರಿ. ಶ ೧೫೯೦/೯೧ರಲ್ಲಿ ಪ್ರಾರಂಭವಾಗುತ್ತದೆ. ಅಧಿಕಾರ ಕೈಗೆ ಬಂದ

ತಕ್ಷಣ ಅವನ ೪೬ ವರ್ಷಗಳ ಅಲ್ಪ ಅವಧಿಯಲ್ಲಿ ಯುದ್ಧದ ಮಾರ್ಗವಾಗಿ ಸಾಮ್ರಾಜ್ಯವನ್ನು ಸುಭದ್ರಗೊಳಿಸಿದ. ತದನಂತರ ತನ್ನ ಪೂರ್ತಿ ಗಮನವನ್ನು ವಿದ್ಯೆ ಮತ್ತು ಕಲೆಗಳ ಮೇಲೆ ಹರಿಸಿದ, ಅದರಿಂದ ರಾಜಧಾನಿ ಬಿಜಾಪುರ ಲಲಿತ ಕಲೆಗಳ ಕೇಂದ್ರಬಿಂದುವಾಯಿತು. ಅಲ್ಲಿ ಪ್ರಪಂಚದ ಎಲ್ಲಾ ಭಾಗಗಳಿಂದ ಸಂಗೀತಗಾರರು, ಕವಿಗಳು ಮತ್ತು ಕಲಾವಿದರು ಬಂದು ಸೇರಲಾರಂಭಿಸಿದರು. ಸ್ ೧೬೦೩ ಇಸವಿ/ ಹಿಜ್ರಿ ೧೦೧೨ರಲ್ಲಿ ಅವನು ರಾಜಧಾನಿಯ ಹೆಸರು ಬಿಜಾಪುರದ ಬದಲಾಗಿ ಬಿದ್ಯಾಪುರವೆಂದು[೮] ಬದಲಿಸಿದನು.ಇದರ ಪ್ರಸ್ತಾಪ 'ಇಬ್ರಾಹೀಂ ನಾಮಾ'ದಲ್ಲಿ ಹೀಗೆ ಮಾಡಲಾಗಿದೆ. ದರ್ ತಲರೀಫ಼್ ಶಹರೆ ಬಿಜಾಪುರ್ ಗೋಯೆದ್. (ಬಿಜಾಪುರ ನಗರದ ಪ್ರಶಂಸೆಯಲ್ಲಿ)

ಸುನೊಂ ಅಬ್ ಸಿಫ಼ತ್ ಶಃ ರಹನ್ ತಖ಼ತ್ ಠಾವ್ರ್
ಬಿದ್ಯಾಪುರ್ ನಗರ್ ಹೈ ಭಿ ಉಸ್ಕಾ ಜೊ ನಾವ್ರ್

(ಈಗ ಕೇಳಿ ಬಾದಶಾಹ ಇರುವ ಸಿಂಹಾಸನದ ಜಾಗ, ಬಿದ್ಯಾಪುರ ನಗರ ಅದರ ಹೆಸರಾಗಿದೆ.)

ರಾಜಧಾನಿಯ ಈ ಹೆಸರಿನ ಬದಲಾವಣೆಯ ಹಿನ್ನೆಲೆಯಲ್ಲಿ ಆ ಅಡಗಿರುವ ಕೆಲಸಗಳಿದ್ದವು, ಅದರಿಂದಲೇ ಇಬ್ರಾಹೀಮನ ಕಾಲದಲ್ಲಿ ಬಿಜಾಪುರ ವಿದ್ಯೆ ಮತ್ತು ಕಲೆಗಳ ಎಲ್ಲಕ್ಕಿಂತ ದೊಡ್ಡ ಕೇಂದ್ರಬಿಂದುವಾಯಿತು ಹಾಗೂ ಕವಿಗಳು ಮತ್ತು ಕರಕುಶಲ ಕಾರ್ಮಿಕರ ಬಹು ದೊಡ್ಡ ಆಸರೆ ಮತ್ತು ಮರಳಿ ಬರುವಂತಹ ಮನೆಯಾಗಿತ್ತು. ಬಿಜಾಪುರದ ಈ 'ಹರ್ ದೇಸಿ ಪನ್'ನಿನ (ಎಲ್ಲರ ದೇಶದ ಭಾವನೆ) ಪ್ರಸ್ತಾಪ ಅಬ್ದುಲ್‌ನು ಈ ಪದಗಳಲ್ಲಿ ವರ್ಣಿಸಿದ್ದಾನೆ.

ಬಸೆ ಶಹರ್ ದರ್ಮಿಯಾನ್ ಸಬ್ ದೇಸ್ ಕಾ
ರಹೆ ಲೋಗ್ ಸುಖ್ ಸೂಂ ಛಪ್ಪನ್ ದೇಸ್ ಕಾ
ಜಕು ಮುಲ್ಕೆ ಆಲಂ ಮೆ ದೆಖ್ಯಾ ಫಿರಾಯೆ
ಬಿದ್ಯಾಪೂರ್ ನಗರ್ ಮೆ ರಹೊ ಸುಖ್ ಸೂರ್ ಆಯೆ

(ಈ ಪಟ್ಟಣದಲ್ಲಿ ಎಲ್ಲಾ ರೀತಿ ಜನ ವಾಸಿಸಿದ್ದಾರೆ, ಐವತ್ತಾರು ದೇಶದ ಜನ ಇಲ್ಲಿ ಸುಖವಾಗಿ ಬಾಳುತ್ತಿದ್ದಾರೆ. ಯಾರು ಲೋಕವೆಲ್ಲ ಸುತ್ತಿ ನೋಡಿರುವನೋ, ಅವನು ಬಿದ್ಯಾಪುರ ನಗರದಲ್ಲಿ ಸುಖವಾಗಿರಲು ಬಯಸುವನು)

ಇಬ್ರಾಹೀಮನ ಮುಖಭಾವ ಮತ್ತು ಸ್ವಭಾವ

ಜ಼ಹೂರಿಯ್ ಹಾಗೆ ಅಬ್ದುಲ್ ಸಹ ಇಬ್ರಾಹೀಮನ ನ್ಯಾಯ ಮತ್ತು ಉದಾರತೆಯನ್ನು ವಿಸ್ತಾರವಾಗಿ ಪ್ರಸ್ತಾಪ ಮಾಡಿದ್ದಾನೆ. ಇದೆ ರೀತಿಯಾಗಿ ಅವನು ಅವನ ಸುಂದರ ಮುಖಭಾವ ಮತ್ತು ಯೂಸುಫ಼ಿಯತ್ (ಪ್ರವಾದಿ ಯೂಸುಫ಼್‌ರವರು ಇಡೀ ಮಾನವ

ಜನಾಂಗದಲ್ಲೇ ಅತಿ ಸುಂದರರಾಗಿದ್ದವರು) ಸಹ ಅತಿಯಾಗಿ ಸಮ್ಮತಿಸುತ್ತಾನೆ. ಇಬ್ರಾಹೀಮನ ಸುಂದರಮುಖ ಮತ್ತು ಸ್ವಭಾವದ ಪ್ರಸ್ತಾಪ ಅಬ್ದುಲ್ ಕೇವಲ ಪ್ರಶಂಸೆ ಪದ್ಯಕ್ಕೆ ಮಾತ್ರ ಬಳಿಸುತ್ತಿಲ್ಲ. ಅದರಲ್ಲಿ ಐತಿಹಾಸಿಕ ಸಾಕ್ಷಿಆಧಾರಗಳು ಇವೆ. ಬಸಾತೀನಿನ ಬರಹಗಾರನು ಈ ಬಗ್ಗೆ ಹೀಗೆ ಬರೆಯುತ್ತಾನ. "ಇಬ್ರಾಹೀಮ ಆದಿಲ್ ಶಾಹ ಬಾದಶಾಹ ಬುವದ್ ಮೌಸೂಫ಼್ ಬ ಜಮಾಲೆ ಸೂರತ್ ವೊ ಬ ಆರಾಸ್ತಗಿ ಸೀರತ್ ಜಾಮೆ ನೆಕೊಯಿಹಾ, ಮುಸ್ತಜ್ಮ ಖ಼ೂಬೀಹಾ, ಆದಿಲ್ ದಾದ್‌ಗರ್ ಬುಲಂದ್‌ಹಿಮ್ಮತ್, ರೈಯತ್ ಪರ್ವರ್, ಖ಼ದ್ರದಾನೆ ಉಲೆಮಾ ವೊ ಫ಼ೊಜ಼್ಲಾ..........."

ಉಪಮೆ ಮತ್ತು ರೂಪಕಾಲಂಕಾರದ ಭಾಷೆಯಲ್ಲಿ ಇದೇ ಅರ್ಥ ಅಬ್ದುಲ್ ಬಳಿ ಹೇಗಿದೆ ನೋಡಿ.

ಯೂಂ ಶಹ ರೂಪ್ ಕಿ ಸುನ್ ಕಹಾನಿ ತಮಾಮ್
ನ ರಹ್ ಕರ್‌ಸಕ್ಯಾ ಮಿಸ್ರೆ ಯೂಸುಫ಼್ ಮುದಾಂ

(ಬಾದಶಾಹನ ರೂಪದ ಕಥೆ ಎಲ್ಲ ಈಗ ಕೇಳು ಈಜಿಪ್ಟಿನ ಯೂಸುಫ್ ಸಹ ಸತತ ಸುಮ್ಮನಿರಲಾರ)

ಕೆ ಮುಝ್ ರೂಪ್ ಥೆ ಹೊ ಅಧಿಕ್ ಶಹ ದಖನ್
ಕಲಾ ರೂಪ್ ಭರ್ ಕರ್ ಸೊ ಚೌಸಠ್ ಲಖನ್

(ಓ ದಕ್ಷಿಣದ ಬಾದೆಶಾಹ ನನಗಿಂತಲೂ ರೂಪದಲ್ಲಿ ಅಧಿಕವಾಗಿರುವೆ. ರೂಪದಲ್ಲಿ ಕಲೆ ತುಂಬಿದೆ ಅದರಲ್ಲಿ ಅರವತ್ತು ನಾಲ್ಕು [ಲೆಕ್ಕವಿಲ್ಲದಷ್ಟು] ಲಕ್ಷಣಗಳಿವೆ.)

ಭೂಲಿ ಮುಝ್ ಹುಸ್ನ್ ಏಕ್ ಜ಼ುಲೇಖ಼ಾ ಮುದಾಂ
ಸೊ ಶಹ ದೇಖ್ ಕರ್ ಭೂಲ್ ಆಲಂ ತಮಾಮ್

(ನನ್ನ ಸೌಂದರ್ಯವನ್ನು ನೋಡಿ ಜ಼ುಲೇಖ಼ಾ ತನ್ನನ್ನು ಮರೆತಳು. ಇದೇ ರೀತಿಯಾಗಿ ಬಾದಶಾಹನನ್ನು ನೋಡಿದರೆ ಇಡೀ ಲೋಕವೇ ಮರೆತು ಹೋಗುತ್ತದೆ)

ಮತ್ತೊಂದು ಜಾಗದಲ್ಲಿ ಶಹೆ ದಖನ್‌ನಿನ ಅಡಿಯಿಂದ ಮುಡಿಯವರೆಗಿನ ವಿವರಗಳು ಈ ಕೆಳಕಂಡಂತಿವೆ:

ಕುನ್ದನ್ ಶಾಹ ಕಾ ರಂಗ್ ಹೊ ಜ಼ಾತ್ ಭರ್
ಹರೆಕ್ ಠಾವುಂ ಪರ್ ರತನ್ ಮಲ್ ಜೋತ್ ಧರ್ (೩೬೦)

(ಬಾದಶಾಹನ ವ್ಯಕ್ತಿತ್ವವೆಲ್ಲ ಅಪರಂಜಿ ಬಣ್ಣದಿಂದ ತುಂಬಿದೆ.
ಪ್ರತಿಯೊಂದು ಜಾಗದಲ್ಲಿ ರತ್ನಗಳ ಜ್ಯೋತಿ ಹರಡುತ್ತಿದೆ)
ಲಗೆ ಪಾಚ್ ಶಹ ಖ಼ತ್ೆ ಝ಼ಬಾ ಸುಹಾಯೆ
ಜಗೆಂ ಲಾಲ್ ರುಖ಼್ಸಾರೆ ಮಾನಕ್ ದೊ ಆಯೆ (೩೬೧)

(ಶಾಹನ ಗಡ್ಡ ಪಚ್ಚೆ ಜೋಡಿಸಿದಂತೆ ಸುಂದರವಾಗಿ ಕಾಣುತ್ತದೆ.
ಎರಡು ಕೆಂಪನೆಯ ಕೆನ್ನೆಗಳು ಎರಡು ಮುತ್ತುಗಳಂತೆ ಹೊಳೆಯುತ್ತಿವೆ.)
ಸುಹೆಂ ಆಂಖ್ ದೀದೆ ಸುಫೇದಿ ಮಿಲಾಯೆ
ಜಡತ್ ಜೋತ್ ಮೋತಿ ಮೆ ಲೀಲಂ ನಮಾಯೆ (೩೬೧)

(ಕಣ್ಣಿನ ನೇತ್ರಗಳ ಬಿಳುಪಿನ ಮಿಶ್ರಣದಿಂದ ಸುಂದರವಾಗಿ ಕಾಣಿಸುತ್ತಿದೆ.
ನೀಲಮಣಿಯಲ್ಲಿ ಹೊಳೆಯುವಂಥ ಮುತ್ತು ಜೋಡಿಸಿದ ಹಾಗೆ ಕಾಣಿಸುತ್ತಿದೆ.)
ದಿಸೆ ನಾಕ್ ದೀದ್ವರ್ ಸೂತರ್ ದರಮಿಯಾನ್
ರಹೆ ಮುಖ್ ಊಪರ್ ಖ್ವೊಯೆ ಹೀರೋಂ ಕಿ ಖಾನ್ (೩೬೩)

ಮೂಗು ದೀದುರಿಯ (ಒಂದು ಬೆಲೆಬಾಳುವ ಹೊಗೆ ಬಣ್ಣದ ರತ್ನ. ಅದರ ಮೇಲೆ ಮೂರು ಗೆರೆಗಳಿರುತ್ತವೆ. ಅದು ಶ್ರೇಷ್ಠವೆಂದು ಭಾವಿಸಲಾಗುತ್ತದೆ) ರತ್ನದ ಮಧ್ಯದಗೆರೆ ಹಾಗೆ ಕಾಣಿಸುತ್ತದೆ. ಮುಖದ ಮೇಲೆ ಬೆವರಿನ ಹನಿಗಳು ರತ್ನಗಳ ಗಣಿಯಾಗಿ ಕಾಣಿಸುತ್ತಿದೆ.

ಖಹೀಂ ಲಾಲ್ ಮೆಹಂದಿ ನಖೊ ಪರ್ ಧರೆ
ದಿಸೆ ಜಿವ್ ಸೊ ಗೊಮೀದ್ ಮಾನಕ್ ಜಡೆ (೩೬೪)

(ಕೆಂಪು ಬಣ್ಣದ ಮೆಹಂದಿ ಉಗುರುಗಳ ಮೇಲಿದೆ. ಅದು ಹಳದಿಮಿಶ್ರಿತಕೆಂಪು ಬಣ್ಣದ ಹರಳಿನ ಜೊತೆಯಲ್ಲಿ ಮುತ್ತು ಜೋಡಿಸಿದಂತಿದೆ.)

ಅಬ್ದುಲ್ ಬಿಡಿಸಿರುವ ಚಿತ್ರದ ತಪಾಸಣೆ 'ಕಿತಾಬೆ ನೌರಸ್'ನ ಗೀತ್ ನಂ ೫೬ರಿಂದ ಹೋಲಿಸಿ ನೋಡಿ. ಅಲ್ಲಿ ಇಬ್ರಾಹೀಮನ ಪರಿಪೂರ್ಣ ಚಿತ್ರವನ್ನು ಈ ಪದಗಳಲ್ಲಿ ವಿವರಿಸಲಾಗಿದೆ:

'ಏಕ್ ಹಾಥ್ ಮೆ ಸಾಜ಼್ ಹೈ, ದೂಸ್ರೆ ಹಾಥ್ ಮೆ ಕಿತಾಬ್ ಹೈ ಜಿಸ್‌ಕೊ ವೊಹ್ ದೇಖತಾ ಹೈ ಔರ್ ನೌರಸ್ ಕೆ ಗೀತ್ ಗಾತಾ ಜಾತಾ ಹೈ ಉಸ್ಕಾ ಲಿಬಾಸ್ ಜ಼ಫ಼್ರಾನಿ ಹೈ, ದಾಂತ್ ಕಾಲೆ ಔರ್ ನಾಖ಼ುನ್ ಪರ್ ಮೆಹಂದಿ ಲಗಿ ಹುಯಿ ಹೈ.........'

(ಒಂದು ಕೈಯಲ್ಲಿ ವಾದ್ಯವಿದೆ, ಮತ್ತೊಂದು ಕೈಯಲ್ಲಿ ಪುಸ್ತಕವಿದೆ, ಅದನ್ನು ಅವನು ನೋಡುತ್ತಾ ನೌರಸಗೀತೆಗಳನ್ನು ಹಾಡುತ್ತ ಇರುತ್ತಾನೆ ಅವನ ಉಡುಪು ಕೇಸರಿ ಬಣ್ಣದ್ದು, ಕರಿಹಲ್ಲು, ಉಗುರುಗಳಿಗೆ ಮೆಹಂದಿ ಹಚ್ಚಲಾಗಿದೆ.)

ಇಬ್ರಾಹೀಮನ ಕಲೆ ಮತ್ತು ಕಲಾವಿದರ ಪೋಷಣೆಯ ಪ್ರಸ್ತಾಪ ಇತಿಹಾಸಕಾರರು, ಜ಼ಹೂರಿ ಮತ್ತು ಅಬ್ದುಲ್ ಎಲ್ಲರೂ ಒಂದೇ ರೀತಿಯಲ್ಲಿ ಮಾಡಿದ್ದಾರೆ. ಏಕೆಂದರೆ ಇಬ್ರಾಹೀಮ ಸ್ವತಃ ಒಬ್ಬ ಸೃಜನಶೀಲ ಕಲಾವಿದನಾಗಿದ್ದ. ಅವನು ಕಲಾವಿದರ ಕೇವಲ ಪ್ರಶಂಸಕನೇ ಅಲ್ಲ ಉಸ್ತಾದ್ ಹಾಗು ಗುರು ಸಹ ಆಗಿದ್ದ, ಮತ್ತೆ ಲಲಿತಕಲೆಯಲ್ಲಿ ಕಲಾವಿದರಿಗೆ ತರಬೇತಿ ನೀಡುವುದು ತನ್ನ ಕರ್ತವ್ಯವೆಂದು ಭಾವಿಸಿದ್ದ. ಸೆಹ ನಸರ್

ಝಹೂರಿಯಲ್ಲಿ ಅವನ ಸೂಕ್ಷ್ಮ ಮಾತುಗಳ ತಿಳುವಳಿಕೆ ಹಾಗು ಮೆಚ್ಚುವಿಕೆಯ ಅನೇಕ ಸಂಗತಿಗಳನ್ನು ಬರೆದಿದ್ದಾನೆ ಹಾಗು ಅವನ ಚಿಂತನೆ ಮತ್ತು ದೃಷ್ಟಿಯನ್ನು ಅಭಿನಂದಿಸಿದ್ದಾನೆ:

ಝರೆ ಖ಼ಾಲಿಸ್ ಸುಖ಼ನ ಬದೌಲತೆ ಊ
ಫ಼ಿಕ್ರೆ ಮಸ್ ಕೀಮಿಯಾ ತಬೀಲತೆ ಊ
(ಅವನಿಂದಲೇ ಅಪರಂಜಿಯಂತಹ ಮಾತು, ಅವನ ಚಿಂತನೆಯ ಸ್ಪರ್ಶವೇ ಪರಿಣಾಮಕಾರಿ ಅದೇ ಅವನ ಸ್ವಭಾವ.)

ಅಬ್ದುಲ್ ಸಹ ಇದೇ ಅರ್ಥದ ದ್ವಿಪದಿಗಳನ್ನು ರಚಿಸಿದ್ದಾನೆ:
ನಝರ್ ಶಾಹ ಉಸ್ತಾದ್ ಜಿಸ್ ಪರ್ ಜೊ ಹೊಯೆ
ಹರ್ ಏಕ್ ರೂಪ್ ಬಿದ್ಯಾ ಮೆ ಉಸ್ ಸರ್ ನ ಕೊಯೆ
(ಬಾದಶಾಹ ಉಸ್ತಾದನ ದೃಷ್ಟಿ ಯಾರ ಮೇಲೆ ಬೀಳುತ್ತದೆಯೋ
ಅವನು ಎಲ್ಲಾ ಎಲ್ಲಾರೀತಿಯ ವಿದ್ಯೆಗಳಲ್ಲಿ ಪರಿಣಿತ ಆಗುವನು)
ಸೊ ಶಹ ಜಗತ್ ಗುರು ಹೈ ಪರಸ್ ಜ್ವಿಂ ನಿಶಾನ್
ಮಿಲೆ ಓಹ್ ಶಾಗಿರ್ದ್ ಚೌ ತರಫ಼್ ಜಾನ್

(ಜಗತ್ ಗುರು ಪರಶುಮಣಿ (ತಾಮ್ರವನ್ನು ಚಿನ್ನ ಮಾಡುವಂತಹ ಕಲ್ಲು) ಇದ್ದ ಹಾಗೆ. ಅವನ ಸುತ್ತಲೂ ಯಾವಾಗಲೂ ಅವನ ಶಿಷ್ಯರಿತ್ತಾರೆ.)

ಓಹ್ ಲೇಕಿನ್ ಪರಸ್ ಮಿಲ್ ಕಂಚನ್ ಮೋಲ್ ಹೋಯೆ
ನಝರ್ ಶಾಹ ಪಡ್ತೆಂ ಕುನ್ದನ್ ತೋಲ್ ಹೋಯೆ
(ಆದರೆ ಅದು ಪರುಶಮಣಿ ಜೊತೆ ಸೇರಿ ಚಿನ್ನದ ಬೆಲೆಯನ್ನು ಪಡೆಯಿತು.
ಶಾಹನ ದೃಷ್ಟಿ ಬೀಳುತ್ತಿದ್ದ ಹಾಗೆ ಅದು ಶುದ್ಧ ಚಿನ್ನದ ತೂಕ ಪಡೆಯುತ್ತದೆ.)

ಯಾವ ಪರಶಮಣಿಯ ಸ್ಪರ್ಶ ಪಡೆದು ಅಬ್ದುಲ್‌ನ ಕಬ್ಬಿಣ ಕುಂದಣವಾಗಿತ್ತೋ, ಅವನ ತರಬೇತಿಯ ಸೂರ್ಯದ ಕರುಣೆಯ ಆಶ್ರಯವು ವೃದ್ಧ "ಖಿಫ಼ಾಯಿ ರಾ ಝಹೂರಿ ಸಾಖತ" ಝಹೂರಿ ಈ ಬಿನ್ನವತ್ತಳೆಯ ನಂತರ ಬರೆಯುತ್ತಾನೆ: "ಬಾವುಜೂದ್ ಶೊಘ್ಲೆ ಮುಲ್ಕ್‌ಗೀರಿ ವೊ ರಿಆಯತೆ ಅಹ್ವಾಲೆ ರಿಆಯಾ ವೊ ಲಶ್ಕರಿ ಬಾರ್ ಜಗತ್ ಗರುಯಿ ಯನಿ ಉಸ್ತಾದಿ ಆಲಂ ಬರ್ ಗರ್ದನ್ ಗಿರಫ಼್ತನ್ ವೊ ಝಹ್ಮತೆ ತರ್ಬಿಯತೆ ಶಾಗಿರ್ದಾನ್ ಕಷೇದನ್ ಫ಼ರಝೆ ಇಲತೆಫ಼ಾತ್ ವೊ ಮರ್ಹಮತ್ ಅಸ್ತ್..."[೨]

[ಬಾದಶಾಹನಿಗೆ ಸಾಮ್ರಾಜ್ಯದ ಅನೇಕ ಕೆಲಸ ಅಂದರೆ ಆಡಳಿತ, ಪ್ರಜೆಗಳ ಅಹವಾಲು ಸ್ವಿಕಾರ, ಸೈನ್ಯದ ಉಸ್ತುವಾರಿ ಇವುಗಳ ಭಾರದಲ್ಲಿ ಕತ್ತು ಸಿಕ್ಕಿಹಾಕಿ ಕೊಂಡಿದ್ದರೂ ಸಹ (ದೊಡ್ಡ ಜವಾಬ್ದಾರಿ ಇದ್ದರೂ ಸಹ) ಜಗತ್ ಗುರು ಅಂದರೆ ಲೋಕದ ಶಿಕ್ಷಕ, ಅವನು ತನ್ನ ಶಿಷ್ಯರ ತರಬೇತಿಯನ್ನು ತುಂಬ ಪ್ರೀತಿ ವಾತ್ಸಲ್ಯದಿಂದ ಮಾಡುತ್ತಿದ್ದ..."]

ಇಬ್ರಾಹೀಮನ ವ್ಯಕ್ತಿತ್ವದ ಎಲ್ಲಕ್ಕಿಂತ ದೊಡ್ಡ ವಿಶೇಷತೆ ಅಬ್ದುಲ್ ಹೀಗೆ ಹೇಳುತ್ತಾನೆ:

ಜಕೊ ಆವೊ ಜಿಸ್ ಕಾಜ್ ನಿಸ್ ದಾದ್ ದೆ
ಮರ್ಮ್ ಬಾತ್ ಕಾ ಪೂಂಛ್ ದಿಲ್ ಹಾಥ್ ಲೆ

ಯಾವನು ಯಾವ ಕೆಲಸಕ್ಕೆ ಬಂದಿರುತ್ತಾನೋ ಅವನು ಆ ಕೆಲಸ ಮುಗಿದ ನಂತರ ಸಂತೃಪ್ತನಾಗಿ ಪ್ರಶಂಸಿಸುತ್ತಾನೆ.

ಅವನ ಮಾತಿಗೆ ಮುಲಾಂ ಹಚ್ಚಿ ಅವನ ಹೃದಯವನ್ನು ಗೆದ್ದವನು (ಬಂದಿರುವ ಫಿರ್ಯಾದಿ ಬಾದಶಾಹನಿಂದ ನ್ಯಾಯ ಪಡೆದುಹೋಗುತ್ತಿದ್ದನು).

ಕಲಾವಿದರೊಂದಿಗೆ ಅವನ ಬಾಂಧವ್ಯ ಗುರುಶಿಷ್ಯರ ಹಾಗಿತ್ತು. ಈ ಸಂಬಂಧದಲ್ಲಿ ಅವನ ಮಾರ್ಗ 'ದಿಲ್ ಬದಸ್ತ್ ಆವರ್' (ಹೃದಯ ಅಂಗೈಯಲ್ಲಿದೆ) ಹಾಗಿತ್ತು, ಅವನು ಕಲಾವಿದರನ್ನು ಗೌರವಿಸುವವನಾಗಿದ್ದ, ಹಾಗೆಯೇ ಕಲಾವಿದರು ಅವನ ಆರಾಧಕರಾಗಿದ್ದರು. ಅವನು ಅವರ ಸಭೆಗಳಲ್ಲಿ ಭಾಗವಹಿಸುತ್ತಿದ್ದನು. ತನ್ನ ಆಳ ಅಂತರ್ದೃಷ್ಟಿಯಿಂದ ಅವರಿಗೆ ಮಾರ್ಗದರ್ಶನ ನೀಡುತ್ತಿದ್ದ. ಇದು ಸಹ ಅವನ ಸಜ್ಜನ ಸಹವಾಸದ ಮಹಾಕೊಡುಗೆ. ಅಬ್ದುಲ್‌ನಂತಹ ಒಬ್ಬ ಅನಾಮಧೇಯ ಕವಿ ಒಂದು ಮುಖ್ಯವಾದ ಸಾಹಿತ್ಯದ ಅಸಾಧಾರಣ ಕೆಲಸವನ್ನು ಸ್ಮಾರಕವಾಗಿ ಬಿಟ್ಟುಹೋದ. ವಯಸ್ಸಾದ ಹಾಗೆ ಅವನಿಗೆ ಸಂಗೀತ ಮತ್ತು ದಕನಿ ಉರ್ದು ಕಾವ್ಯದಿಂದ ಅತ್ಯಂತ ಪ್ರೀತಿ ಹೆಚ್ಚಾಗಿರಬಹುದು. ಸನ್ ೧೬೧೨ರವರೆಗೆ ಆಸ್ಥಾನದ ಸಾಹಿತ್ಯದ ಪರಿಸರ ಮೇಲೆ ಝಹೂರಿ, ಮಲಿಕ್ ಖುಮಿ ಆವರಿಸಿದ್ದರು ಆದರೆ ಅವರಿಬ್ಬರೂ ವೃದ್ಧರಾಗಿದ್ದರು. ಆದ್ದರಿಂದ ಇಬ್ರಾಹೀಮನ ಗಮನದ ಕೇಂದ್ರ ಈಗ ಹೊಸ ಕವಿಗಳು, ವಿಶೇಷವಾಗಿ ಹಿಂದವಿ ಭಾಷೆಯ ಕವಿಗಳು ಆಗುವವರಿದ್ದರು. ಅಬ್ದುಲ್ ಹೇಳಿಕೆಯಂತೆ ಈ ಉದ್ಯಾನದಲ್ಲಿ ಹೊಸ ಹೂ ಅರಳುತ್ತಿದ್ದವು.

ಬೈಠೆ ಮಜ್ಲಿಸಿ ಲೋಗ್ ಹರ್ ಏಕ್ ಫನ್
ಖಿಲೆ ಫೂಲ್ ಹರ್ ಜಿನ್ಸ ದೌಲತ್ ಚಮನ್
(ಸಭೆಯಲ್ಲಿ ಎಲ್ಲ ಕಲೆಗಳ ಜನ ಕುಳಿತಿರುವರು
ಈ ಉದ್ಯಾನದಲ್ಲಿ ಎಲ್ಲಾ ಜಾತಿಯ ಹೂಗಳು ಅರಳಿವೆ)
ಎಕಸ್ ಏಕ್ ಥೀಂ ಖೂಬ್ ಬಿದ್ಯಾವಂತ್ ನಿಗಾರ್
ಹರೆಕ್ ಬಾತ್ ಬೂಝುಕ್ ಸೊ ನೌನೌ ಹಜ಼ಾರ್
(ಒಬ್ಬರಿಂದ ಒಬ್ಬರು ಅತಿ ವಿದ್ಯಾವಂತರು
ಪ್ರತಿಯೊಂದು ಮಾತಿನ ಒಂಬತ್ತು ಒಂಬತ್ತು ಸಾವಿರ ಅರ್ಥ ತಿಳಿದಿರುವವರು)

ನಝರ್ ಶಾಹ ಫಿರ್ ಭರ್ವರ್ ಹರ್ ಫೂಲ್ ಪರ್
ಬಚನ್ ಪಾಸ್ ರಸ್ಲೆ ಕಲಿಯೋಂ ಮುಖ್ ಉಪರ್

(ಬಾದಶಾಹನ ದುಂಬಿ ದೃಷ್ಟಿ ಪ್ರತಿಯೊಂದು ಹೂವಿನ ಮೇಲೆ ಬೀಳುತ್ತದೆ.
ಮಾತಿನಬಳಿ ರಸಹೀರಿ ಮೊಗ್ಗಿನ ಮುಖದ ಮೇಲೆ ಕುಳಿತ.)

[ಭಾವರ್ಥ: ಅರಳಿದಹೂವಿನ ಕಾಲಾವಕಾಶ ಕೇವಲ ತುಸು ಸಮಯದ್ದು, ಅಂದರೆ ಅವನ ಆಸ್ಥಾನ ವೃದ್ಧಕವಿಗಳು ಅರಳಿದ ಹೂವುಗಳಿದ್ದ ಹಾಗೆ. ಅವರಿಂದ ಬಾದಶಾಹನು ದುಂಬಿಯ ಹಾಗೆ ಮಾತಿನ ರಸಹೀರಿ ಅರಳಿರುವ ಮೊಗ್ಗು ಅಂದರೆ ಹೊಸ ಕವಿಗಳಿಗೆ ಮಾರ್ಗದರ್ಶನ ನೀಡುತ್ತಿದ್ದನು.][೧೩]

ಇಬ್ರಾಹೀಮ ದಖನಿ ಉರ್ದುವಿನಲ್ಲೂ ಸಹ ಪದ್ಯ ಬರೆಯತ್ತಿದ್ದನೆಂದು ಇಬ್ರಾಹೀಮ ನಾಮಾದಿಂದ ತಿಳಿಯುತ್ತದೆ. ಅಬ್ದುಲ್‌ನು 'ಕಿತಾಬೆ ನೌರಸ್' ಅಲ್ಲದೆ ದ್ವಿಪದಿ ನಂ ೫೮೩ ರಲ್ಲಿ ಅವನ ಮತ್ತೊಂದು ಕೃತಿ ರಚನೆ 'ಬುಧ್ ಪ್ರಕಾಶ್' ಬಗ್ಗೆಯೂ ಹೇಳಿದ್ದಾನೆ, ಅದರ ಗೀತೆಗಳನ್ನು ವಾರ್ಷಿಕೋತ್ಸವದ ಅಂಗವಾಗಿ ಖಿವ್ವಾಲ್ ಮತ್ತು ಢಾಡೀ ಹಾಡುತ್ತಿದ್ದರು. 'ಕಿತಾಬೆ ನೌರಸ್'ನ ಗೀತೆಗಳು ದೊರೆತ ನಂತರ ಇಬ್ರಾಹೀಮನ ದಕನಿ ಉರ್ದುವಿನ ಮತ್ತಷ್ಟು ಕಾವ್ಯ ಇನ್ನೂ ಹೆಚ್ಚಿರಬಹುದೆಂಬ ಮಾತು ಖಚಿತವಾಗುತ್ತದೆ[೧೪].ಇದರ ಬಗ್ಗೆ ಮತ್ತಷ್ಟು ಸಾಕ್ಷಿಆಧಾರ ಎಚ್.ಎಫ್.ಸಿಲಕೋಕಿನ ಇಬ್ರಾಹೀಮನ ಒಂದು ಗೀತೆಯ ಆಂಗ್ಲ ತರ್ಜುಮೆಯಾಗಿದೆ. ಅದು ಮುಂಬಯಿ ಗೆಜ಼ಿಟಿಯರ್‌ನ ಫುಟ್‌ನೋಟ್ ಪುಟ ೪೩೪ರಲ್ಲಿ ಸಂರಕ್ಷಿಸಲ್ಪಟ್ಟಿದೆ.

ಈ ಪದ್ಯ ಅಥವ ಗೀತೆಯ ಮೂಲ ಮುಖ್ಯ ವಿಷಯ ದೊರೆತಿಲ್ಲ. ಆದರೆ ಅದರ ಆಂಗ್ಲ ತರ್ಜುಮೆ ಎಚ್.ಎಫ್.ಸಿಲಕೋಕ್ ಎಂತಹ ಹಸ್ತಪ್ರತಿಯಿಂದ ಮಾಡಿದ್ದಾನೆಂದರೆ ಅದರ ಮೇಲೆ ಇಬ್ರಾಹೀಮನ ಮುಹರ್ (ಮುದ್ರೆ) ಹಾಕಲಾಗಿತ್ತು, ಬಹುಶಃ ಅದು ಅವನದೇ ಬರವಣಿಗೆಯಲ್ಲಿರಬಹುದು. ಬಿಜಾಪುರದ ಒಂದು ಮುಸ್ಲಿಂ ಕುಟುಂಬದಲ್ಲಿ ಈ ಹಸ್ತಪ್ರತಿ ಸನ್ ೧೮೮೪ರವರೆಗೂ ಸುರಕ್ಷಿತವಾಗಿತ್ತು. ಈ ಗೀತೆ ಸ್ಪಷ್ಟವಾಗಿ ಚಾಂದ್‌ಬೀಬಿ ಸುಲ್ತಾನಳ ಪ್ರಸಂಶೆಯಲ್ಲಿದೆ. ಅವಳನ್ನು ಇಬ್ರಾಹೀಮನು ಮಾಂ (ಮದರ್) ಶಬ್ದದಿಂದ ಜ್ಞಾಪಿಸಿದ್ದಾನೆ. ಆದ್ದರಿಂದ ಇದರ ಸಂಬೋಧನೆ ಇಬ್ರಾಹೀಮನ ಮಲಿಕ ಮತ್ತು ಪ್ರಿಯೆ ಮಲಕಯೆ ಜಹಾಂ (ಅವರಿಗೆ ಚಾಂದ್ ಸುಲ್ತಾನ್ ಸಹ ಹೇಳಲಾಗಿತ್ತು) ಎಂದು ಆಗಲು ಸಾಧ್ಯವಿಲ್ಲ, ಅವರ ಕಿತಾಬೆ ನೌರಸಿನ ಅನೇಕ ಗೀತೆಗಳಲ್ಲಿ ಮಾಡಲಾಗಿದೆ. (ನೋಡಿ. ಹಾಡು ನಂ ೨೨) ಸಂಬೋಧಿಸಿರುವ ಶೈಲಿಯಿಂದಲೂ ಈ ಮಾತು ವ್ಯಕ್ತವಾಗುತ್ತದೆ, ಚಾಂದ್‌ಬೇಬಿ ಸುಲ್ತಾನಳು ಸನ್ ೧೬೦೦ನ ಅಹ್ಮದ್‌ನಗರದ ಮುತ್ತಿಗೆಯಲ್ಲಿ ಕೊಲೆಯಾದ ನಂತರ ಇದನ್ನು ಬರೆಯಲಾಗಿದೆ. ಈ ಗೀತೆಯೂ ಸಹ 'ಕಿತಾಬೆ ನೌರಸಿ'ನ ಯಾವುದಾದರೂ ಹಸ್ತಪ್ರತಿಯಲ್ಲಿ ಸೇರಿರಬಹುದು ಅಥವಾ 'ಬುಧ್ ಪ್ರಕಾಶ'ದ[೧೫] ಭಾಗವಿರಲೂ ಸಾದ್ಯತೆ ಇದೆ.

In the gardens of the blest, where the happy howris dwell
In the palaces of men where earths' fairest ones are seen,

There is none who can compare in beauty or in grace.
With the noble Chand Sultana, Bijapur's beloved queen.
As the champak flower in fragrance in the sweetest flower that blooms.
As the cypress tree in form all other trees excel,
So in disposition tender, in beauty without peer,
Was the gracious Queen whose praise no human tongue can tell,
In memory of that mother who with watchful tender care
Ever guard her poor orphan in a weary troubled land,
Ibrahim the Second, these feeble line indite,
To the honour of that Princess, the noble Lady Chand.[16]

ಬಿಜಾಪುರ ಮತ್ತು ಅದರ ಕೋಟೆ:–

ಯಾವ ಬಿಜಾಪುರ ಅಥವಾ ಬಿದ್ಯಾಪುರದಲ್ಲಿ ಸುಖವಾಗಿ ಬಂದು ಬಾಳಲು ಅಬ್ದುಲ್ ೫೬ ದೇಶಗಳ ಜನರಿಗೆ ಸಾರ್ವಜನಿಕ ಕರೆ ನೀಡುತ್ತಿದ್ದಾನೆಯೋ ಅದು ಮತ್ತು ಅದರ ಕೋಟೆ, ಅರಕ್ ಖಿಲಾ ತನ್ನ ಕಾಲದ ವಿಚಿತ್ರ ವಸ್ತುಗಳಾಗಿದ್ದವು. ಅವುಗಳ ಸೌಂದರ್ಯ ಮತ್ತು ವಿಶಾಲತೆ, ಒಳ್ಳೆಯ ನೀರು, ವಾಯುಗುಣಗಳ ಪ್ರಸ್ತಾಪವನ್ನು ಆ ಕಾಲದ ಇತಿಹಾಸಕಾರರು ಸಡಗರದಿಂದ ಮಾಡಿದ್ದಾರೆ. ಕಲ್ಲಿನ ಕೋಟೆಯ ವ್ಯಾಸ ಆರೂಕಾಲು ಮೈಲಿಗಳಿವೆ. ಮತ್ತೆ ಅದರಲ್ಲಿ ೨೬ ಬುರ್ಜ್,[೧೭] ಐದು ಭವ್ಯವಾದ ದ್ವಾರಗಳಿದ್ದವು, ಇಂದಿಗೂ ಸಹ ಭವ್ಯತೆ ಮತ್ತು ಮೆಚ್ಚುಗೆ ಪಡೆಯುವಂತಾಗಿದೆ. ನಗರ ಸುತ್ತಿದ ಗೋಡೆ (ಕೋಟೆಯ) ಗೋಡೆಯ ಮೇಲೆ ಅಗಲವಾದ ಕಟ್ಟೆಗಳ ಮೇಲೆ ತೋಪುಗಳು ಇಡಲಾಗುತ್ತಿದ್ದವು.[೧೮] ಕೋಟೆಯ ಸುತ್ತ ಮುತ್ತ ಆಳ ಹಾಗೂ ಅಗಲವಾದ ಖಂದಕವಿತ್ತು.[೧೯] ಪಟ್ಟಣದ ಕೇಂದ್ರ ಅದರ ಕೋಟೆ ಮತ್ತು ಅರಮನೆಗಳಾಗಿದ್ದವು. ಅವು 'ಅರಕ್ ಖಿಲಾ' ಹೆಸರಿಂದ ಪ್ರಖ್ಯಾತವಾಗಿವೆ. ವಿವಿಧ ಬಾದಶಾಹರುಗಳ ಕಾಲಗಳಲ್ಲಿ ಅರಮನೆಗಳ ಸಂಖ್ಯೆ ಹೆಚ್ಚಾಗುತ್ತ ಹೋಯಿತು. ಈ ಕೋಟೆಯ ವ್ಯಾಸ ಸುಮಾರು ಒಂದು ಮೈಲಿ ಇದೆ, ಅಲ್ಲಲ್ಲಿ ಬುರ್ಜಗಳ ನಿರ್ಮಾಣವಾಗಿದೆ. ಇದು ಸಹ ಆಳವಾದ ಖಂದಕದಿಂದ ಸುತ್ತುವರಿದಿದೆ. ಅರಕ್ ಖಿಲಾ ಮೊದಲನೆಯ ಇಬ್ರಾಹೀಂ ಆದಿಲ್‌ಶಾಹ (೧೫೩೪–೧೫೫೮)ನ ಕಾಲದಲ್ಲಿ ಪೂರ್ಣಗೊಂಡಿತ್ತು. ಆದರೆ ಮೊದಲನೆಯ ಅಲಿ ಆದಿಲ್ ಶಾಹ (೧೫೫೮–೧೫೮೦) ನ ಕಾಲದಲ್ಲಿ ಬಿಜಾಪುರ ಪಟ್ಟಣದ ಕಲ್ಲಿನ ಕೋಟೆ ಪೂರ್ಣಗೊಂಡ ನಂತರ ಅದರ ಸುರಕ್ಷಾತ್ಮಕ ಸ್ಥಾನಮಾನ ಮುಗಿದು ಹೋಗಿತ್ತು. ಅದು ಕೇವಲ ಆರಮನೆಗಳ ಆವರಣವಾಗಿತ್ತು. ಇದರ ಕಟ್ಟಡಗಳಲ್ಲಿ 'ಆನಂದ್ ಮಹಲ್' ಮತ್ತು 'ಸಾತ್ ಮಂಜ಼ಿಲ್ ಅಥವ ಸಾತ್‌ಖನ್'[೨೦] ನಿನ ಅರಮನೆಗಳು ಇಬ್ರಾಹೀಮನ ಕಾಲದ ಕಟ್ಟಡಗಳು. ಅಬ್ದುಲ್‌ನು ಬಿಜಾಪುರ ಪಟ್ಟಣದ ವರ್ಣನೆ ನೀಡುವಾಗ ಅರಮನೆಗಳ

ಪಕ್ಷಿನೋಟವನ್ನು ತೋರಿಸಿರುವುದೆಲ್ಲವೂ ಅರಕ್‌ಖಿಲೆಯ ಅರಮನೆಗಳಾಗಿವೆ. ಅದರಲ್ಲಿ ವಾಸವಾಗಿದ್ದವನು ಅವನ ಪ್ರಶಂಸಾಪಾತ್ರನಾದ ಇಮ್ಮಡಿ ಇಬ್ರಾಹೀಮನಾಗಿದ್ದ.

ಬಿಜಾಪುರ ಪಟ್ಟಣದ ಭವ್ಯತೆ ಮತ್ತು ಸಂಭ್ರಮ ಸಡಗರದ ಬಗ್ಗೆ ಹಲವಾರು ಇತಿಹಾಸಕಾರರು ಮತ್ತು ಪರ್ಯಟಕರು ಪ್ರಸ್ತಾವನೆ ಮಾಡಿದ್ದಾರೆ. ಸ್ವತಃ ಇಮ್ಮಡಿ ಆದಿಲ್‌ಶಾಹನ ಕಾಲದಲ್ಲಿ ಇಬ್ಬರು ಆಂಗ್ಲ ಪ್ರವಾಸಿಗ ಫ಼ಿಚ್ (Fich) ಮತ್ತು ನಿವ್‌ಬೆರ್ರಿರವರು (Newberry) ೧೫೮೩ರಲ್ಲಿ ಇದನ್ನು ಒಂದು ಮಹಾನ ಮತ್ತು ಐಶ್ವರ್ಯವಂತ ಪಟ್ಟಣವಾಗಿ ಕಂಡಿದ್ದರು. ಅದರ ಮನೆಗಳು ಎತ್ತರವಾದ ಮತ್ತು ಭವ್ಯವಾಗಿದ್ದು ಕಲ್ಲಿನಿಂದ ನಿರ್ಮಾಣವಾಗಿದ್ದವು. ಈ ಪಟ್ಟಣದಲ್ಲಿ ಅನೇಕ ಆನೆಗಳು ಕಾಣಿಸುತ್ತಿದ್ದವು. ಚಿನ್ನ, ಬೆಳ್ಳಿ ಮತ್ತು ಬೆಲೆಬಾಳುವಂತಹ ಮುತ್ತು ರತ್ನಗಳಿಂದ ನಿರ್ಮಿಸಲ್ಪಟ್ಟ ವಸ್ತುಗಳಿಂದ ರತ್ನ ವ್ಯಾಪಾರಿಗಳ ಅಂಗಡಿಗಳು ತುಂಬಿದ್ದವು.[೨೧] ಸ್ಕ೧೬೦೪ರಲ್ಲಿ ಇಮ್ಮಡಿ ಇಬ್ರಾಹೀಮನ ಕಾಲದಲ್ಲಿ ಮುಘಲ್ ರಾಯಭಾರಿ ಅಸದ್ ಬೇಗ್‌ನಿಗೆ ಈ ಪಟ್ಟಣ ನೋಡುವ ಅವಕಾಶ ದೊರಕಿತ್ತು. ಅವನು ಮುಘಲ್ ಇತಿಹಾಸಕಾರರ ಸ್ವಜನಪಕ್ಷಪಾತದ ಶಿಕಾರಿಯಾಗಿದ್ದಾನೆ. ಇಮ್ಮಡಿ ಇಬ್ರಾಹೀಮ ಆದಿಲ್‌ಶಾಹನನ್ನು ಕೇವಲ 'ಆದಿಲ್ ಖಾನ್'ಹೆಸರಿನಿಂದ ಕರೆಯುತ್ತಾನೆ. ಆದರೂ ಸಹ ಅವನು ಬಿಜಾಪುರದ ಠೀವಿಯಿಂದ ಪ್ರಭಾವಿತನಾಗದೇ ಇರಲು ಸಾಧ್ಯವಾಗಲಿಲ್ಲ. ಅವನೂ ಸಹ ಯೂರೋಪಿಯನ್ ಪರ್ಯಟಕರ ಹಾಗೆ ಅವರ ಮಾತಿಗೆ ಸಾಕ್ಷಿ ನೀಡುತ್ತಾನೆ, ಇಡೀ ಪಟ್ಟಣ ಭವ್ಯವಾದ ಅರಮನೆಗಳಿಂದ, ಅವುಗಳ ಮುಂದೆ ಶಾಮಿಯಾನ ಅಥವಾ ಚಪ್ಪರಗಳಿವೆ. ಅವನು ಪಟ್ಟಣವನ್ನು ವಸಂತ ಋತುವಿನ ವಾತಾವರಣದಿಂದ ತುಂಬಿದೆ ಮತ್ತು ಅದರ ನೀರು, ಗಾಳಿ ಆರೋಗ್ಯಕರವೆಂದು ಹೇಳಿದ್ದಾನೆ.[೨೨] ಖಾಸಗಿ ಸಂತೆಗಳ ವಿಶಾಲವಾದ ಮಾರ್ಗಗಳ ಎರಡೂ ಬದಿಯಲ್ಲಿ ನೆರಳು ನೀಡುವ ಗಿಡಮರಗಳ ಸಾಲುಗಳಿದ್ದವು. ಪಟ್ಟಣದ ಅಂಗಡಿಗಳು ಎಂತಹ ವಿಚಿತ್ರ ವಸ್ತುಗಳಿಂದ ತುಂಬಿದ್ದುವೆಂದರೆ, ಇದಕ್ಕಿಂತ ಮೊದಲು ಅವುಗಳನ್ನು ಯಾರೂ ನೋಡಿರಲು ಸಾಧ್ಯವಿರಲಿಲ್ಲ. ಬಟ್ಟೆ, ಮುತ್ತು ರತ್ನ, ಪಾನಿಯಗಳು, ಸುಗಂಧದ್ರವ್ಯ, ತಾಜಾ ಹಣ್ಣಿನ ಅಂಗಡಿಗಳು ಮತ್ತು ರೊಟ್ಟಿ ಮಾಡುವವರ ಅಂಗಡಿಗಳು ಅಸಂಖ್ಯಾತವಿದ್ದವು. ಇದಲ್ಲದೆ ಅವನು ನೃತ್ಯ ಸಂಗೀತಗಾರರ ತಂಡಗಳು, ಸುಂದರ ಮನಮೋಹಕ ರಮಣಿಯರ ಪ್ರಸ್ತಾಪವನ್ನೂ ಮಾಡಿದ್ದಾನೆ. ಅವರು ಎಲ್ಲ ಕಡೆಗೆ ಸಿಂಗರಿಸಿಕೊಂಡು ಓಡಾಡುತ್ತಿದ್ದರು,[೨೩] ಅಂದರೆ ಎಲ್ಲ ಕಡೆ ಸುಖ ಶಾಂತಿಯ ವಾತಾವರಣವಿತ್ತು. ಬಿಜಾಪುರದಿಂದಲೇ ಅಸದ್ ಬೇಗ್ ತಂಬಾಕು ಆಗ್ರಾಕ್ಕೆ ತೆಗೆದುಕೊಂಡು ಹೋದನು. ನಂತರ ಅದು ಅಲ್ಲಿ ತುಂಬ ಜೋರಾಗಿ ಚಾಲ್ತಿಯಲ್ಲಿ ಬಂದಿತು. ಸಂಗೀತ ನೃತ್ಯವಿಲಾಸ ಈ ವಾತಾವರಣವನ್ನು ಕಣ್ಣಾರೆ ಕಂಡ ವಿಚಾರ ಇತಿಹಾಸಕಾರರಿಂದ ಕೇಳಿದ ನಂತರ, ಈಗ ಅಬ್ದುಲ್‌ನ ಕವಿಕಲ್ಪನೆ ಇದಕ್ಕೆ ಯಾವ ಬಣ್ಣ ಕೊಟ್ಟಿತೆಂದು ನೋಡೋಣ. ಅದರ ವಿವರಣೆ ಕೆಳಕಂಡಂತಿದೆ:

ಅಜಬ್ ಶಹರ್ ದಿಸ್ತಾ ಅರಾಬ ನಿಗಾರ್
ಜ಼ಮೀಂ ಬಾಹಿಯಾ ಗುಲ್ ಪದಕ್ ಕರ ಸಿಂಗಾರ್

(ಈ ವಿಸ್ಮಯ ಪಟ್ಟಣವನ್ನು ಸುತ್ತಿದ ಗೋಡೆ, ಅದರ ಮೇಲೆ ಅಗಲವಾದ ಕಟ್ಟೆಗಳು, ಭೂಮಿ ಕೊರಳಲ್ಲಿ ಪದಕ ಹಾಕಿಕೊಂಡು ಸಿಂಗರಿಸಿದಂತೆ ಕಾಣಿಸುತ್ತದೆ.)

ದಿರ್ಸೇ ಬುರ್ಜ್ ಬಿಚ್ ಬಿಚ್ ಅಜಬ್ ಯೂ ನುಮಾಯೆ
ಜಡೆ ಪಾಚ್ ಅಲಮಾಸ್ ಕೆ ಖ಼ರ್ಷ್ ಲಾಯೆ

(ಮಧ್ಯ ಮಧ್ಯದಲ್ಲಿ ಬುರ್ಜ್‌ಗಳು ಹೇಗೆ ಕಾಣಿಸುತ್ತವೆಂದರೆ
ಪಚ್ಚೆ ಮತ್ತು ದೊಡ್ಡ ವಜ್ರಗಳನ್ನು ಹಚ್ಚಿದಂತಿವೆ.)

ವರ್ಹೀ ಶಹರ್ ದರ್ಮಿಯಾಂ ಕಾ ಕೋಟ್ ಜಾನ್
ದಿಸೆ ದೂಸ್ರಾ ದೌರ ಮೋತಿಯೋಂ ಮಿಯಾನ್

ಅಲ್ಲೇ ನಗರದ ಮಧ್ಯದ ಕೋಟೆಯ ಎರಡನೆಯ ಆವರಣ ಇನ್ನೊಂದು ಮುತ್ತಿನ ಹಾರವನ್ನು ಹಾಕಿದಂತೆ ಕಾಣಿಸುತ್ತದೆ.

(ಅಂದರೆ ಬಿಜಾಪುರ ನಗರದ ಸುತ್ತಿನ ಕೋಟೆಯೊಳಗಿನ ಮತ್ತೊಂದು ಕೋಟೆ)

ಹುವಾ ಮಧ್ ಸೂರ್ ನಾಯಕ್ ಮಹಲ್ ಶಾಹ ಕಾ
ಕುಂಡಲ್ ತಾರೆ ಹೊರಖ್ ಸೊ ಘರ್ ಮಾಹ್ ಕಾ

(ಬಾದಶಾಹನ ಅರಮನೆ ಸುಂದರ ರತ್ನ ಅಥವಾ ಮುತ್ತಿನ ಹಾಗಿದೆ, ಅದು ಆಕಾಶದಲ್ಲಿ ಚಂದ್ರನ ಮನೆ ಸುತ್ತಿಕೊಂಡಿರುವ ನಕ್ಷತ್ರಗಳ ವರ್ತುಲದಂತೆ ಕಾಣಿಸುತ್ತದೆ.)

ದಿಸೆ ಶಹರ್ ಮೆ ಕೋಟ್ ಬಿಚ್ ಶಾಹ ಘರ್
ಮಹಲ್ ಚಾಂದ್ ದೌಲತ್ ಖುಲಾ ಕೋಟ್ ಕರ್[೨೪]

(ನಗರದ ಕೋಟೆ ಮಧ್ಯದಲ್ಲಿ ಬಾದಶಾಹನ ಮನೆ ಹೇಗೆ ಕಾಣಿಸುತ್ತದೆಂದರೆ ಅರಮನೆಯ ಮೇಲೆ ಚಂದ್ರನು ಐಶ್ವರ್ಯದ ಕೋಟೆಯನ್ನು ತೆರೆದ ಹಾಗೆ ಕಾಣಿಸುತ್ತದೆ.)

ದಿಸೆ ಶಹರ್ ಹರ್ ಜಿನ್ಸ ಮಅಮೂರ್ ಮಾಂಹ್
ಮಗರ್ ಬಿಹಿಷ್ತ್ ಕಾ ಅಕ್ಸ್ ಪಡೆಯಾ ಹೈ ಛಾಂ

(ನಗರ ಮಧ್ಯದಲ್ಲಿ ಎಲ್ಲಾ ವಸ್ತುಗಳಿಂದ ತುಂಬಿದಂತೆ ಕಾಣಿಸುತ್ತದೆ ಅಂದರೆ ಸ್ವರ್ಗದ ನೆರಳಿನ ಪ್ರತಿಬಿಂಬ ಬೀಳುತ್ತಿದೆ.)

ಹವಾ ಬಖ಼ಷ್ ಹರ್ ಠಾವುಂ ಮಾಢಿಯೊಂ ಉಪರ್
ನ ಬಾಖ಼ಿ ಶಹರ್ ಯೂಂ ಸೊ ಶಾಹೋಂ ಕೆ ಘರ್.

(ಅರಮನೆಗಳ ಮೇಲೆ ವಾಯು ವಿಹಾರಕ್ಕಾಗಿ ತೆರೆದ ಛಾವಣಿಗಳಿವೆ ಈ ರೀತಿಯ ಬಾದಶಾಹರ ಮನೆಗಳು ಅನ್ಯ ನಗರದಲ್ಲಿ ಸಿಗಲಾರವು)

ಗಲೆ ಬಾಃ ಕಂಠ್ಮಾಲ್ ಬಾಝಾರ್ ಹಾರ್
ಪದಕ್ ಜೋಡ್ ಮಸ್ಜಿದ್ ಸೊ ದರ್ಮಿಮಿಯಾನ್ ಠಾರ್

(ಸಂತೆಯು ಕೊರಳಲ್ಲಿ ಹಾರ ತೊಟ್ಟಿರುವ ಹಾಗೆ ಕಾಣುತ್ತದೆ, ಅದರ ಮಧ್ಯದಲ್ಲಿ ಜುಮಾ ಮಸೀದಿ ಹಾರದಲ್ಲಿ ಪದಕ ಜೋಡಿಸಿದಂತೆ ಕಾಣುತ್ತದೆ.)

ಝಮಾನ್ಯಾ ಅಜಬ್ ಯೋಜನಾ ಪೋಂಗ್ಡಾ
ಬಿದ್ಯಾಪುರ್ ನಗರ್ ರೂಪ್ ಹೋಕರ್ ಖಡಾ
(ಕಾಲ ವಿಚಿತ್ರ, ತರುಣ ಕಿಶೋರನಾಗಿ ನಿಂತ ಬಿದ್ಯಾಪುರ ನಗರ ರೂಪಧರಿಸಿ ನಿಂತ.)

ಭಾವಾರ್ಥ: ಕಾಲಕಳೆದಂತೆ ಬಿದ್ಯಾಪುರ ನಗರವು ಸುಂದರ ಯುವ ಹುಡುಗನ ಹಾಗೆ ಬೆಳೆದು ನಿಂತಿತು.

ಅಬ್ದುಲ್‌ನ ಕಾಲದ ಈ 'ಪೊಂಗಡೆ'ಯ ಸಂತೆಗಳಲ್ಲಿ ಯೂರೋಪಿಯನ್ ಪರ್ಯಟಕರು ಹಾಗೂ ಅಸದ್‌ಬೇಗ್‌ನು ನೀಡಿದ ಸಾಕ್ಷಿಗಳೆಲ್ಲವನ್ನು ನೋಡಲು ಸಿಗುತ್ತಿದ್ದವು, ಅಂದರೆ 'ರತ್ನಗಳ ರಾಶಿ'. ಐವತ್ತೆರಡು ನಗರಗಳಿಗೆ ಹರಡುವಂತಹ ಸುಗಂಧ ದ್ರವ್ಯದ ಅಂಗಡಿಗಳು, ಮಾಣಿಕ್ಯ, ಹಸಿರು ಮೂಡಿದ ನೀಲಿರತ್ನ, ನೀಲರತ್ನಗಳ ರಾಶಿ. ಬಿದ್ಯಾವಂತರ, ನರ್ತಕರ ಮತ್ತು ಕಲಾವಿದರ ಸಂದಣಿ(ಗುಂಪು) ಜಿಂಕೆ ಕಣ್ಣಿರುವ ಸುಂದರಿಯರು, ಒಂದು ರೀತಿಯ ಗುಜರಾತಿ ರೇಶ್ಮೆ ಸೀರೆಗಳನ್ನುಟ್ಟು, ಬೆಳ್ಳಿಯ ತಗಡಿನಲ್ಲಿ ಸುತ್ತಿದ ಪಾನ್ ಬೀಡಾ ಬಾಯಲ್ಲಿಟ್ಟುಕೊಂಡು ಗಹಗಹಿಸಿ ನಗುತ್ತಾ ಮುತ್ತಿನಂತಹ ದಂತಗಳನ್ನು ಮಿನುಗಿಸುತ್ತಾ ಅಪ್ಸರೆಯರಂಥ ಸುಂದರಿಯರು ಸಂಗೀತದ ಅರ್ಥ ಮತ್ತು ಅದರ ವಿಧಗಳನ್ನು ಬಲ್ಲಿದ ಚತುರರು, "ಕೋಕ್ ಕಲಾ" (ಗಿಳಿ ಶಾಸ್ತ್ರ) ಪರಿಣಿತ ಸುಂದರಿಯರು ಇವರೆಲ್ಲರೂ ಇದ್ದರು.[೨೫]

ಇಸೀ ಜಿನ್ಸ್ ಸಬ್ ರೂಪ್ ಬಿದ್ಯಾ ಭರಿಯಾ
ಬಿದ್ಯಾಪೂರ್ ನಗರ್ ಮೆ ಬಿದ್ಯಾರ್ನಸಗ್ ಖಡಿಯಾ

(ಈ ರೀತಿಯ ಎಲ್ಲ ಕಲಾವಿದರಿಂದ ಬಿದ್ಯಾಪುರ ತುಂಬಿದೆ ಬಿದ್ಯಾಪುರ ನಗರ ಅನೇಕ ವಿದ್ಯೆಗಳ ಬಣ್ಣಗಳಿಂದ ತುಂಬಿ ನಿಂತಿದೆ.)

ವಿವಿಧ ಬಣ್ಣಗಳಿಂದ ಅಲಂಕರಿಸಿದ ಈ ಸುಂದರ ಲೋಕದಲ್ಲಿ ಎಲ್ಲಕ್ಕಿಂತ ಉತ್ಕೃಷ್ಟತೆ ಎಂದರೆ ಇಲ್ಲಿ ಶಾಂತಿ ಇತ್ತು. ಇದನ್ನು ಅಸದ್ ಬೇಗನು ಸಹ ಅನುಭವಿಸಿದ್ದನು ಹಾಗೂ ಅಬ್ದುಲ್ ಸಹ ಇದರ ಸಾಕ್ಷಿ ನೀಡುತ್ತಾನೆ.

ನ ಇಸ್ ಶಹರ್ ಮೆ ನಯನ್ ಆಂಝೂ ಝಡೇಕ್
ಸೊ ಬನ್ ಮೇಘ್ ಧಾರಾರ್ ನ ಹೊ ಕುಛ್ ಪರ್ಡೆ

(ಈ ನಗರದಲ್ಲಿ ಯಾರೂ ಸಹ ನಯನಗಳಿಂದ ಕಣ್ಣೀರನ್ನು ಸುರಿಸುವುದಿಲ್ಲ, ಮೇಘಗಳು ಧಾರಾಕಾರವಾಗಿ ಸುರಿವುದನ್ನು ಬಿಟ್ಟರೆ ಏನೂ ಸುರಿಯುವುದಿಲ್ಲ.)

ನ ಇಸ್ ಶಹರ್ ಮೆ ಕೊಯಿ ದರ್ದೂಂ ಹರ್ಕಾರ್
ಸೊ ಬಿನ್ ಪಾಯೆ ಶಹನಾಯಿ ನಾ ಕೋಯಿ ಪುಕಾರ್

(ಈ ನಗರದಲ್ಲಿ ನೋವಿನ ಯಾವ ಹಾಹಾಕಾರವಿಲ್ಲ, ಮುರಳಿ ಹಾಗೂ ಶಹನಾಯಿಯ ಧ್ವನಿಯನ್ನು ಬಿಟ್ಟರೆ ಮತ್ತೇನೂ ಕೇಳಿಸುವುದಿಲ್ಲ.)

ನ ಪಡ್ತಾ ಶಹರ್ ಮೆ ಕೂ ಬಾಂಧಿಯಾ ನಜ಼ರ್
ಸೊ ಬಿನ್ ಮೋತಿಯೋ಼ ಹೌರ್ ಫೂಲೊ ಕಿ ಲಡ್

(ಈ ನಗರದಲ್ಲಿ ಯಾರೂ ಸಹ ಬರಿಕತ್ತಲ್ಲಿ ಓಡಾಡಿದ್ದನ್ನು ಕಾಣಲಾರೆ, ಎಲ್ಲರ ಕತ್ತಲ್ಲಿ ಮುತ್ತುಗಳ ಮತ್ತು ಹೂವಿನ ಹಾರಗಳಿರುತ್ತವೆ.)

ನ ಇಸ್ ಶಹರ್ ಮೆ ಕೊಯಿ ರಗಡೆ ಕಸೆ
ಸೊ ಬಿನ್ ಜ಼ಅಫ಼್ರಾಂ, ಮುಶ್ಕ್ ನಾ ಕುಛ್ ದಿಸೆ

(ಈ ನಗರದಲ್ಲಿ ಜಗಳ ಮಾಡುವವರು ಯಾರೂ ಇಲ್ಲ, ಕೇಸರಿ ಮತ್ತು ಕಸ್ತೂರಿಯನ್ನು ಬಿಟ್ಟರೆ ಮತ್ತೇನು ಕಾಣಿಸುವುದಿಲ್ಲ.)

ನ ಇಸ್ ಶಹರ್ ಮೆ ಕೊಯಿ ಮಾರೆ ಕಿಸೆ
ಸೊ ಬಿನ್ ಧಾವ್ ಮಂಡಲ್ ನ ದುಸ್ರಾ ದಿಸೆ

(ಈ ನಗರದಲ್ಲಿ ಯಾರೂ ಯಾರನ್ನೂ ಹೊಡೆಯುವುದಿಲ್ಲ, ಮಂಡಲದ (ನಗಾರಿ ರೀತಿಯ ಒಂದು ವಾದ್ಯ) ಹೊಡೆತವನ್ನು ಬಿಟ್ಟರೆ ಮತ್ತೇನು ಕಾಣಿಸುವುದಿಲ್ಲ.)

ಇಬ್ರಾಹೀಮನ ಈ ಜಗಳರಹಿತ ಪಟ್ಟಣದ ಪ್ರಶಂಸೆಯಲ್ಲಿ ಅಬ್ದುಲ್‌ನು ತನ್ನ ಕಾವ್ಯಾತ್ಮಕ ಸಾಮರ್ಥ್ಯದ ಯಾವ ಸಾಕ್ಷಿ ಕೊಟ್ಟಿದ್ದಾನೋ, ಅದು ಅವನು ದೆಹಲಿಯವನಾದರೂ ಸಹ ಬಿಜಾಪುರವನ್ನು ಜ಼ಹೂರಿ ತರಹ ಸಂಪೂರ್ಣವಾಗಿ ತನ್ನಲ್ಲಿ ಅಳವಳಿಸಿಕೊಂಡಿದ್ದನೆಂಬ ಮಾತು ಇದಕ್ಕೆ ಸಾಕ್ಷಿಯಾಗಿದೆ. ಐತಿಹಾಸಿಕ ನಿಜಾಂಶವನ್ನು ಕಾವ್ಯದ ನಿಜಾಂಶದಲ್ಲಿ ಅಳವಳಿಡಿಸಿರುವಂತಹ ಯಾವುದಾದರೂ ಸರಿಸಮನಾದ ಉದಾಹರಣೆ ಸಿಗುವುದಾದರೆ ಅಬ್ದುಲ್ ರೀತಿಯಲ್ಲಿ ಒಬ್ಬ ಪರದೇಶಿ ಕವಿ ಜ಼ಹೂರಿಯಲ್ಲಿ ಸಿಗುತ್ತದೆ.

ದಿಲ್ ಶುದ ವಾಲಹು ದಕನ್ ನಮೀ ಕುನಂದ್
ಖ಼ಿಬ್ಲ ಅಗರ್ ಶವದ್ ರವೊ ಬವತನ ನಮೀ ಕುನಂದ್(ದೀವಾನ್)

ಮಸ್ಕನೆ ಅಯೇಶೊ ಇಶ್ರತಸ್ತ್ ದಕನ್
ಲಬೆ ಬಸ ಘುರ್ಬತ್ ಫ಼ತದ್ ಜ಼ೆ ಹರಫ಼ೆ ವತನ್ (ಸೆಹ್ ನಸ್ರ್ ೫೯೦)

ನೌರಸ್ ಪುರ ಮತ್ತು ನೌರಸ್ ಮಹಲ್

ರಾಜಧಾನಿ ಬಿಜಾಪುರದ ಹೆಸರು ಬದಲಾವಣೆ ಜೊತೆಜೊತೆಯಲ್ಲಿ ಇಮ್ಮಡಿ ಇಬ್ರಾಹೀಮನು ತನ್ನ ಸಮಕಾಲೀನ ಮಹಾನ್ ಅಕ್ಬರ್‌ನ ರೀತಿಯಲ್ಲಿ ಒಂದು ಹೊಸ ಪಟ್ಟಣ ನೌರಸ್‌ಪುರದ ಸ್ಥಾಪನೆ ಬಗ್ಗೆಯೂ ಯೋಚಿಸಿದ. ಸ್ ೧೫೯೯–೧೬೦೦/೧೦೦೮ ನೇ ಹಿಜರಿಯಲ್ಲಿ ಬಿಜಾಪುರದಿಂದ ಸುಮಾರು ನಾಲ್ಕು ಮೈಲಿ ದೂರದಲ್ಲಿ ಪಶ್ಚಿಮ ದಿಕ್ಕಿನಲ್ಲಿ ಅವನು ಹೊಸ ನಗರದ ಬುನಾದಿಯನ್ನು ಹಾಕಿದನು. ಅರಮನೆಗಳ ನಿರ್ಮಾಣ ಮತ್ತು ಶಾಹಿಕಟ್ಟಡಗಳು, ನಗರದ ಕೋಟೆಯ ಕೆಲಸವನ್ನು ಶಹನವಾಜ಼ಖಾನ್‌ಗೆ ಒಪ್ಪಿಸಲಾಯಿತು. ಈ ಪಟ್ಟಣದಲ್ಲಿ ಬಾದಶಾಹನು ತನಗಾಗಿ ಸುಂದರವಾದ ಅರಮನೆ ಕಟ್ಟಿಸಿದ್ದನು. ಅದನ್ನು ಚಿನ್ನ ಮತ್ತು ನೀಲಮಣಿ ಬಣ್ಣಗಳ ಮಿಶ್ರಣದಿಂದ ಅಲಂಕರಿಸಲಾಗಿತ್ತು. ಆಸ್ಥಾನದ ಮುಂದಿನಿಂದ ಬಿಜಾಪುರದವರೆಗೆ ವಿಶಾಲ ರಸ್ತೆ ಎರಡು ಬದಿಗಳಲ್ಲಿ ಎರಡು ಮಹಡಿಯ ಅಂಗಡಿಗಳಿದ್ದವು. ಮಧ್ಯದಲ್ಲಿ ಸುಂದರವಾದ ಚೌಕವಿತ್ತು, ಅದರ ಹೆಸರು 'ಮಾನಕ್ ಚೌಕ್'. ಅದರಿಂದ ನಾಲ್ಕಾರು ಕಡೆ ರಸ್ತೆ ನಿರ್ಮಿಸಿ ಅಲಂಕೃತ ಅಂಗಡಿಗಳನ್ನು ನಿರ್ಮಿಸಲಾಗಿತ್ತು.[೨೬] ಈ ಪಟ್ಟಣದ ಹೆಸರು ನೌರಸ್‌ಪುರ ಎಂದು ಮತ್ತು ಅರಮನೆಯ ಹೆಸರು ನೌರಸ್ ಮಹಲ್ ಎಂದು ಇಡಲಾಗಿತ್ತು. ಈ ಕಾಲವೆಂದರೆ ಇಬ್ರಾಹೀಮನು ನೌರಸ್ ಪದದ ಮೇಲೆ ಮೋಹಿತನಾಗಿದ್ದ ಮತ್ತು ಆ ಪದ ತನಗಾಗಿ ಒಂದು ಶುಭ ಶಕುನವೆಂದು ಭಾವಿಸಿದ್ದ. ಅಬ್ದುಲ್‌ನೂ ಸಹ "ದರ್ ತರೀಫ಼ೆ ನೌರಸ್ ಮಹಲ್ ಹಜ಼್ರತ್ ಶಾಹ" ಎಂಬ ಶೀರ್ಷಿಕೆಯಿಂದ ಕೆಲವು ದ್ವಿಪದಿಗಳನ್ನು ಈ ಅರಮನೆಯ ಪ್ರಸಂಶೆಯಲ್ಲಿ ಬರೆದಿದ್ದಾನೆ. ಈ ಅರಮನೆ ಸಂಗೀತ್ ಮಹಲ್ ಎಂಬ ಹೆಸರಿನಿಂದಲೂ ಪ್ರಸಿದ್ಧವಾಗಿತ್ತು. ಇಮ್ಮಡಿ ಇಬ್ರಾಹೀಂ ಆದಿಲ್ ಶಾಹನ ಕೃತಿ 'ಕಿತಾಬೆ ನೌರಸ್'ದಲ್ಲೂ ಸಹ ನೌರಸ್‌ಪುರದ ಪ್ರಸ್ತಾಪ ಸಿಗುತ್ತದೆ.

ಇಬ್ರಾಹೀಂ ಆಖಿಂ ಯು ಕವಿತ್ ನೌರಸ್, ನೌರಸ್ ಪೂರ್ ಗುಣ್ ನಗರ್.[೨೭]

(ಇಬ್ರಾಹೀಂನು ನೌರಸಿನ ಈ ಕವಿತೆಗಳನ್ನು ಗುಣವಂತ ನಗರ ನೌರಸ್ ಪುರದಲ್ಲಿ ಬರೆದಿರುವನು.)

ಗದ್ಯ ಮೂರರಲ್ಲಿ ಜ಼ಹೂರಿಯೂ ಸಹ ಈ ನಗರ ಬೆಟ್ಟದ ತಪ್ಪಲಲ್ಲಿರುವ ಬಗ್ಗೆ, ಭೂಮಿಯ ಸೊಬಗು, ಜಲವಾಯುವಿನ ಗುಣ, ಕರಿ ಕಣ್ಣಿನ ಸುಂದರಿಯರ ಬಣ್ಣದ ದೃಷ್ಟಿ, ಆರಾಧಕರಿಗೂ ಮೋಸಗೊಳಿಸುವಂತಹ ಹಿಂದುಸ್ತಾನದ ನಿವಾಸಿಗಳ ವಿವರವನ್ನು ಪ್ರಸ್ತಾಪಿಸಿದ್ದಾನೆ[೨೮]. ಸ್ ೧೬೫೦ರಲ್ಲಿ ಫ಼ಜ಼ೂನಿ ಅಸ್ತರಾಬಾದಿ ನೌರಸಪುರದ ಪ್ರವಾಸಕ್ಕೆ ಬಂದಾಗ, ನೌರಸಪುರವು ಅವಶೇಷವಾಗಿರುವುದನ್ನು ಕಂಡಿದ್ದನು. ಆದರೂ ಸಹ ನೌರಸಪುರದ

ಅರಮನೆಗಳ ಅವಶೇಷಗಳಿಂದ ಪ್ರಭಾವಿತನಾಗಿ ಹೀಗೆ ಬರೆಯುತ್ತಾನೆ. "ಈ ಸುಂದರ ಕಟ್ಟಡಗಳಲ್ಲಿ ಸುಲ್ತಾನನ ಅರಮನೆಯೂ ಸಹ ಇದೆ, ಅದು ವರ್ಣನಾತೀತ. ನೌರಸಪುರದ ಕಟ್ಟಡಗಳನ್ನು ಆಗ್ರಾ, ದೆಹಲಿ ಮತ್ತು ಲಾಹೋರಿನಲ್ಲಿ ನಿರ್ಮಿಸಿರುವ ಕಟ್ಟಡಗಳಿಂದ ಹೋಲಿಸಿದಾಗ ನಾನು ಈ ನಿರ್ಧಾರಕ್ಕೆ ಬಂದಿದ್ದೇನೆಂದರೆ ಮೊದಲು ಹೇಳಿದಂತಹ ಕಟ್ಟಡಗಳು ಅಸಾಧಾರಣವಾಗಿ ಉನ್ನತವಾಗಿವೆ"[೨೯].(ಫ಼ರೋನಿ ಅಸ್ತರಾಬಾದಿ: ಫ಼ುತೂಹಾತೆ ಆದಿಲ್ ಶಾಹಿ. ಪು.೧೫೭. ಉಲ್ಲೇಖ ಜ಼ಹೂರಿ– ಲಾಯಿಫ಼್ ಅಂಡ್ ವರ್ಕ್ಸ್. ಡಾ.ನಜ಼ೀರ್ ಅಹ್ಮದ್)

ಇತಿಹಾಸಕಾರನ ಕಣ್ಣುಗಳು ಅವಶೇಷಗಳ ರೂಪದಲ್ಲಿ ಏನೇನು ಕಂಡಿದ್ದನೋ, ಅದನ್ನೇ ಕವಿಯ ಕಣ್ಣು ನೋಡಿರುವ ನೌರಸ್ ಮಹಲಿನ ನೋಟ ನೋಡಿ:

ಸುನೋ ಅಬ್ ಸಿಫ಼ತ್ ಶಾಹ ಮಹಲ್ ರಹನ್ ಠಾವ್ರ್
ಧರಿಯಾ ನಾವ್ರಂ ನೌರಸ್ ಮಹಲ್[೩೦] ತಿಸ್ ಜೊ ಪಾವ್ರ್

(ಅರಮನೆಯ ಗುಣವನ್ನು ಕೇಳಿ ಅದು ಬಾದಶಾಹನು ಇರುವ ಸ್ಥಳ. ಅಲ್ಲಿ ಕಾಲಿಡುತ್ತದ್ದ ಹಾಗೆ ಅದಕ್ಕೆ ನೌರಸ್‌ಮಹಲ್ ಎಂದು ನಾಮಕರಣವನ್ನು ಮಾಡಿದ.)

ವಲೆ ಮಹಲ್ ನೌರಸ್ ಧರಿಯಾ ನಾವ್ರ್ ಯ್ರೋ
ಭರಿಯಾ ರಂಗ್ ನೌರಸ್ ನಿತ್ ಆಠ್ ರೂಪ್ ಜಿಯ್ರೋ

(ನೌರಸ್ ಎಂದು ಹೆಸರು ಇಟ್ಟ ನಂತರ ಅದನ್ನು ನಿತ್ಯ ಎಂಟು ರೂಪದಂತಹ ನೌರಸಿನ ಬಣ್ಣಗಳಿಂದ ತುಂಬಿದ.)

ವಲೆ ಮಹಲ್ ನೌರಸ್ ಹುವಾ ಯ್ರೋ ಉಠಾನ್
ದಿಸೆ ಗಗನ್ ಆಗನ್ ಹೊ ಇಸ್ಕಾ ನಿಶಾನ್

(ಈ ರೀತಿಯಾಗಿ ನೌರಸ್ ಅರಮನೆಯ ನಿರ್ಮಾಣವಾಯಿತು. ಇದನ್ನು ನೋಡಿದರೆ ಗಗನ ಅದರ ಅಂಗಳವಾಗಿ ಕಾಣಿಸತೊಡಗಿತು.)

ಗಗನ್ ಸಾತ್ ಸೀಢಿಹೊ ಮಿಲ್ ಜೋಡ್ ಕರ್
ನ ಲಗ್ ಮಹಲ್ ನೌರಸ್ ಕೆ ಏಕ್ ಖನ್ ಉಪರ್

(ಗಗನಕ್ಕೆ ಏಳು ಏಣಿಗಳನ್ನು ಜೋಡಿಸಿದರೂ ಸಹ ನೌರಸ್‌ಮಹಲಿನ ಒಂದು ಮಹಡಿ ಸರಿಸಮಾನ ಆಗುವುದಿವಿಲ್ಲ.)

ಇದರ ನಂತರ ಅಬ್ದುಲ್ ಬರೆಯುತ್ತಾನೆ ಆಕಾಶ, ಅವನ ಅರಮನೆಗಾಗಿ ತಾನೆ ಸ್ವತಃ ಉಪಕರಣಗಳಲ್ಲಿ ಪರಿವರ್ತಿಸಿಕೊಂಡಿತು ಹಾಗು ನೌರಸ್‌ಮಹಲಿನ ಕಮಾನವಾಯಿತು. ಅದು ಹಗಲು ಮತ್ತು ರಾತ್ರಿಯ ಎರಡು ಕೂಲಿ ಆಳುಗಳನ್ನು ನೇಮಿಸಿತು. ನಂತರ ನೌರಸ್‌ಮಹಲಿನ ಬುನಾದಿ ಇಡಲಾಯಿತು. ಹಗಲು ಆಕಾಶದ ಬುಟ್ಟಿ ತಲೆಮೇಲೆ

ಹೊತ್ತುಕೊಂಡಿತು, ಸೂರ್ಯನೂ ರತ್ನಗಳ ಇಟ್ಟಿಗೆಗಳನ್ನು ಅದರಲ್ಲಿ ತುಂಬಿದನು. ಹೀಗೆಯೇ ರಾತ್ರಿ ಚಂದ್ರನು ತನ್ನ ತಲೆ ಮೇಲೆ ಸುಣ್ಣ ಮತ್ತು ಮುತ್ತುಗಳ ಗಾರೆ ತೆಗೆದುಕೊಂಡು ಬಂದನು. ಆದರೆ ಗಾರೆಯ ಬುಟ್ಟಿ ಅದರ ತಲೆ ಮೇಲಿಂದ ಬಿದ್ದುಹೋಯಿತು, ಅವೇ ನಕ್ಷತ್ರಗಳಾಗಿ ಆಕಾಶದಲ್ಲಿ ಹರಡಿ ಕೊಂಡವು. ಈ ಅರಮನೆಯ ಪ್ರತಿಯೊಂದು ಕಂಬಗಳ ಮೇಲೆ ರತ್ನಖಚಿತದ ಕೆಲಸವಿದೆ. ನೆಲ ಮತ್ತು ಕಟ್ಟೆಗಳು ಕುಂದನ್ ಮತ್ತು ರತ್ನಗಳಿಂದ ಮಾಡಲಾಗಿವೆ. ಅವುಗಳಲ್ಲಿ ತರಾವರಿ ಹರಳುಗಳನ್ನು ಕೂರಿಸಲಾಗಿದೆ. ಕೊನೆಗೆ ಅಬ್ದುಲ್ ಬರೆಯುತ್ತಾನೆ

ಜಿತಾ ರಾಸ್ ಆಲಂ ಖ಼ುದಾ ಸಬ್ ಕರಿಯಾ
ನ ಇಸ್ ಮಹಲ್ ಕಿ ಜೋಡ್ ನಜ್ರೋಂ ಪಡಿಯಾ

(ಭಗವಂತ ಅಷ್ಟೊಂದು ದೊಡ್ಡ ಪ್ರಪಂಚವನ್ನು ಸೃಷ್ಟಿಸಿದ, ಆದರೂ ಈ ರೀತಿಯ ಅರಮನೆಯ ಜೋಡಿ ಎಲ್ಲೂ ನಾನು ಕಾಣಲಿಲ್ಲ.)

ಇಬ್ರಾಹೀಮನ ದರ್ಬಾರ್ ಮತ್ತು ಅವನ ಸೈನ್ಯ:

ಇಬ್ರಾಹೀಮನ ಜೀವನದಲ್ಲಿ (ಬಜ಼್ಮಿಯ) ಸಾಮರಸ್ಯದ ಅಂಗ ಎದ್ದು ಕಾಣಿಸುತ್ತದೆ, ಅವನು ತನ್ನ ಅವಧಿಯ ಅಭಿರುಚಿಗೆ ತಾನೇ ಸ್ವತಃ ನೀರುಣಿಸಿದ್ದಾನೆ, ಆದರೆ ಇತಿಹಾಸ ಅವನ ವೀರರಸ ಯುದ್ಧಕ್ಕೆ ಸಂಬಂಧಿಸಿದ ಅಸಾಧಾರಣ ಕೆಲಸಗಳಿಂದ ಖಾಲಿ ಇಲ್ಲ. ದಿಲಾವರ್‌ಖಾನನ ಪತನದ ನಂತರ ಖುತುಬ್ ಶಾಹಿ ಮತ್ತು ನಿಜ಼ಾಂಶಾಹಿಗಳ ಜೊತೆಗಿನ ಅವನ ಕಾಳಗ ಬಿಜಾಪುರದ ಇತಿಹಾಸದ ಒಂದು ಉಜ್ವಲ ಅಧ್ಯಾಯವಾಗಿದೆ. ಅವನ ದರ್ಬಾರಿನ ವೈಭವ, ಅವನ ಅಸಂಖ್ಯಾತ ಸೈನ್ಯದ ಪ್ರವಾಹ, ಅವನ ಆನೆಗಳು, ಕುದುರೆಗಳು ಮತ್ತು ಶಸ್ತ್ರ ಸೈನಿಕರ ಗುಂಪು, ಇವುಗಳ ಬಗ್ಗೆ ಇತಿಹಾಸವು ಸಾಕ್ಷಿಯಾಗಿದೆ.[೨೧]

ಖಡೆ ಭೌತ್ ಉಸ್ಪತ್, ಗಜಪತ್ ರಾವೊ
ಕೆ ನಿರ್ಪತ್ ಖತೀಂ ನ ಕುಛ್ ಗಿನತ್ ಆವೊ

(ಬಹಳಷ್ಟು ಕುದುರೆಸವಾರರು (ಮಾಲೀಕರು), ಆನೆ ಸವಾರರು (ಆನೆ ಮಾಲೀಕರು) ಬಾದಶಾಹ ಇವೆಲ್ಲವನ್ನು ನೋಡಿ ಹೇಳುತ್ತಾನೆ –ಇವುಗಳನ್ನು ಎಣಿಸಲು ಸಾಧ್ಯವಿಲ್ಲ.)

ಖಡೆ ಮಸ್ತ್ ಝೂಲೆ ತೊ ಹತ್ತಿ ಅಪಾರ್
ಗಗನ್ ಶಾಹ ದೆಹಲೀಜ಼ ತಿಲ್ ಜಿರ್ಯೊ ಪಹಾರ್

(ತೂಗುತ್ತಾ ಬಾದಶಾಹನ ಹೊಸ್ತಿಲಿನ ಮುಂದೆ ಆನೇಕ ಆನೆಗಳು ಮಗ್ನವಾಗಿ ನಿಂತರೆ ಅವು ಬೆಟ್ಟಗಳ ಹಾಗೆ ಕಾಣುತ್ತವೆ.)

ಆನೆಗಳ ಮಿಡತೆಯ ಹಿಂಡು ಹೇಗೆ ಕಾಣಿಸುತ್ತದೆಂದರೆ
ಉಠಿಯಾ ಹೊ ಸೊ ಜ಼ುಲ್ಮಾತ್ ಮೌಜ್ಹಾ ತೂಫ಼ಾ

ಅಂಧಃಕಾರದ ಚಂಡಮಾರುತ ಅಲೆಗಳು ಎದ್ದಂತೆ ಕಾಣಿಸುತ್ತದೆ

ಅವುಗಳ ಘರ್ಜನೆ, ಅವುಗಳ ಬಿಳಿ ದಂತಗಳು, ಕರಿಮೋಡಗಳಲ್ಲಿ ಮಿಂಚು ಮಿನುಗುವಂತೆ! ವಿಧವಿಧವಾದ ಹಾಗೂ ಎಲ್ಲಾ ದೇಶಗಳ ಆರೋಗ್ಯಶಾಲಿ ಕುದುರೆಗಳು, ಅವುಗಳ ಚತುರತೆ, ಒಂಟೆಗಳ ಸಾಲು, ಶಸ್ತ್ರಸೇನೆಯ ಗುಂಪು, ಅದರಲ್ಲಿ ಅನೇಕ ದೇಶಗಳ ಯುವರಾಜರು ಮತ್ತು ಸವಾರರಿದ್ದಾರೆ. ಇಬ್ರಾಹೀಮನ ಭವ್ಯತೆ ಹಾಗೂ ವೈಭವದ ಈ ಹಿಂದಿ ಭಾಷೆಯ ಒಂದು ಮುಖ್ಯವಾದ ಸಾಕ್ಷಿ ಇದರ ಉತ್ತರ ಕೇವಲ ಝಹೂರಿ ಬಳಿ ಸಿಗುತ್ತದೆ.

ಅಗರ್ ಬಜ್ಮಸ್ತ್ ಅಷ್ತಾಂ ಜ಼ೆಜಾಮಷ್
ವಗರ್ ರಜ್ಮಸ್ತ್ ರಂಗೀನ್ ಅಜ಼್ ಹಾಮಷ್ (ಸೆಃ ನಸರ್)

(ಸಮರಸದ ಭೋಗವಿಲಾಸದಲ್ಲಿದ್ದರೆ ಮದ್ಯಬಟ್ಟಲಿನ ಹಾಗೆ, ವೀರರಸದ ಯುದ್ಧದಲ್ಲಿದ್ದರೆ ಖಡ್ಗದ ಬಣ್ಣದ ಹಾಗೆ.)

ಇಬ್ರಾಹೀಮನು ತನ್ನ ಸಾಮರಸ್ಯದ ಜೊತೆ ಜೊತೆಯಲ್ಲಿ ಶಿಕಾರಿನಲ್ಲೂ ತುಂಬ ಆಸಕ್ತಿ ಹೊಂದಿದವನು. ಇದರ ಸಾಕ್ಷಿ ಝಹೂರಿ ಸಹ ನೀಡಿದ್ದಾನೆ. ಅಬ್ದುಲ್‌ನು "ದರ್ ತರೀಫ್ ರಫ್ತನ್ ಶಿಕಾರ್" ಶೀರ್ಷಿಕೆಯಲ್ಲಿ ಈ ಒಲವಿನ ಬಗ್ಗೆ ತುಂಬ ವ್ಯವಸ್ಥಿತವಾಗಿ ಬರೆದಿರುವನು. ಅವನು ಶಿಕಾರಿಗೆ ಹೊರಡುತ್ತಿದ್ದ ಹಾಗೆ ನಗಾರಿಗಳು ಬಾರಿಸಲ್ಪಡುತಿದ್ದವು, ಧ್ವಜ(ನಿಶಾನ್) ಘರ್ಜಿಸುತ್ತಿದ್ದವು. ಆ ನಾದಗಳ ಕಂಪನ ಆಕಾಶ ಮತ್ತು ಭೂಮಿ ಮೇಲೆ ಬೀಳುತ್ತಿದ್ದ ಹಾಗೆ, ಆಕಾಶ ಸೀಳುತ್ತಾ ಕೆಂಪು ಮಿಂಚಿನ ಆಕಾರದಲ್ಲಿ ಅದರ ಯಕೃತ್ತು (ಕಲೀಜ) ಹೊರಗಡೆ ಬರುತ್ತಿತ್ತು. ಹೊಳೆ ಹಾಗೂ ಸಮುದ್ರಗಳಲ್ಲಿ ಅಲೆಗಳುಂಟಾಗಿ, ಭೂಮಿಯ ರಕ್ತ ನೀರಿನ ರೂಪ ಧರಿಸಿ ಎಲ್ಲಾ ಕಡೆ ಹರಡುತ್ತಿತ್ತು. ವೃಕ್ಷಗಳ ರೆಂಬೆಗಳು ಕೇಶಗಳ ಹಾಗೆ ಹರಡುತ್ತಿದ್ದವು, ಭೂಮಿಯ ರೋಮಗಳು ಗರಿಕೆ ಹುಲ್ಲಾಗಿ ಅದರ ಮೈ ಮೇಲೆ ನಿಂತುಕೊಳ್ಳುತ್ತಿದ್ದವು.

ಬಿಖರ್ ಬಾಲ ತನ ಝೂಡ್ ಹರೆಕ್ ಧರ್
ಖಡೆ ರೋಂಗಟೆ ಘಾಸದ ಸಬ್ ಅಂಗ್ ಭರ್

ಇಬ್ರಾಹೀಂ ನಾಮಾದ ಸಾಹಿತ್ಯಿಕ ಮಹತ್ವ:

ವಜ್ಹಿಯ ಖುತುಬ್ ಮುಷ್ತರಿಯಲ್ಲದೆ, ಇಬ್ರಾಹೀಂ ನಾಮಾ ಪ್ರಾಚೀನ ಉರ್ದು ಭಾಷೆಯ ಸಾಹಿತ್ಯಿಕ ಮಸ್ನವಿ (ಪ್ರತಿಚರಣದಲ್ಲಿ ಎರಡೆರಡು ಪ್ರಾಸಗಳುಳ್ಳ ದ್ವಿಪದಿ). ಇದರ ಹಿಂದಿನ ಮಸ್ನವಿಗಳು, ನಿಜ಼ಾಮಿಯ 'ಕದಮ್ ರಾವೊ ಪದಮ್ ರಾವೊ, ಅಷ್ರಫ಼್‌ನ 'ನೌಸರ್ ಹಾರ್', ಮತ್ತು ಬುರ್ಹಾನುದ್ದೀನ್ ಜಾನಂನ 'ಇರ್ಷಾದ್ ನಾಮಾ', ನೈತಿಕ, ಧಾರ್ಮಿಕ ಹಾಗೂ ಸೂಫಿ಼ ವಿಷಯಗಳನ್ನು ಹೊಂದಿವೆ. ಇವುಗಳ ವಿಷಯ ಸಾಹಿತ್ಯವೂ ಅಲ್ಲ ಅಥವ ಬರೆಯುವ ಶೈಲಿಯೂ ಅಲ್ಲ. ಖುತುಬ್ ಮುಷ್ತರಿ ಮತ್ತು ಇಬ್ರಾಹೀಂ ನಾಮಾ, ಕ್ರಮವಾಗಿ ಗೋಲ್ಕೊಂಡಶಾಲೆ ಮತ್ತು ಬಿಜಾಪುರಶಾಲೆಯ ಮೊದಲನೆಯ

ಸಾಹಿತ್ಯಿಕ ಮಸ್ನವಿಗಳು, ಎರಡರಲ್ಲೂ ಒಂದು ರೀತಿ ಗಾಢವಾದ ಹೊಂದಾಣಿಕೆಯೂ ಇದೆ. ಎರಡೂ ಸಹ ತನ್ನ ಕಾಲದ ಹೆಸರಾಂತ ಸುಲ್ತಾನರ ಪ್ರಸಂಶೆಯಲ್ಲಿ ಬರೆಯಲಾಗಿವೆ. ಖುತುಬ್ ಮುಷ್ತರಿಯಲ್ಲಿ ಕಲ್ಪನೆ ಇದೆ, ಅದರ ಕೇಂದ್ರ ಪಾತ್ರ ಕೇವಲ ಯುವರಾಜ ಮುಹಮ್ಮದ್ ಖುಲಿ ಶಾಹನ ಐತಿಹಾಸಿಕತೆ ಬಿಟ್ಟರೆ ಬಾಕಿ ಎಲ್ಲವೂ ಕಟ್ಟುಕಥೆಯಾಗಿದೆ.

ವಜ್ಹಿಯ ಮುಂದೆ, ಮುಹಮ್ಮದ್ ಖುಲಿಯ ಪ್ರಸಂಶೆ ಇದ್ದರೂ ಅವನಿಗೆ 'ಮುಹಮ್ಮದ್ ಖುಲಿ ನಾಮಾ' ಮಾಡುವ ಉದ್ದೇಶವಿರಲಿಲ್ಲ. ಇದರ ಎದುರಾಗಿ ಅಬ್ದುಲ್ ತನ್ನ ಪ್ರಶಂಸಕ ಇಮ್ಮಡಿ ಇಬ್ರಾಹೀಮ ಆದಿಲ್ ಶಾಹನ ಒಂದು (ರಜ್ಮಿಯ) ಯುದ್ಧಗೀತೆ ಮಸ್ನವಿ ರಚಿಸಿದ್ದಾನೆ. ಮಸ್ನವಿಯ ರೂಪದಲ್ಲಿ ಇದು ನಿಜಾಂಶದಲ್ಲಿ ಇಬ್ರಾಹೀಮನ ಕಸೀದಾ (ಪ್ರಶಂಸಾ ಪದ್ಯ) ಅದರಲ್ಲಿ ಅವನ ಸುಂದರ ಮುಖ ಹಾಗೂ ಸ್ವಭಾವ, ಅವನ ಪಟ್ಟಣ ಬಿಜಾಪುರ ಮತ್ತು ನೌರಸಪುರ, ಅವನ ಕುದುರೆಗಳ ಹಿಂಡು ಮತ್ತು ಸೇವಕರು ಮತ್ತು ಅವನ ಸಾಹಿತ್ಯ ಹಾಗೂ ಕಲಾ ಗೌರವದ ಪ್ರಸ್ತಾವನೆ ಇದೆ. ವಜ್ಹಿಯು ಬಹುಶಃ ಐತಿಹಾಸಿಕ ನಿಜಾಂಶದ ಮೇಲೆ ಕಥೆಯ ತೆರೆ ಎಳೆಯಲು ಪ್ರಯತ್ನಿಸಿದ್ದಾನೆ. ಅಬ್ದುಲ್‌ನು ಐತಿಹಾಸಿಕ ನಿಜಾಂಶಕ್ಕೆ ಕಲ್ಪನೆಯ ಸಹಾಯದಿಂದ ಕಥೆಯನ್ನು ಯಥಾರ್ಥತೆಯಲ್ಲಿ ಅಳವಡಿಸಿದ್ದಾನೆ. ಅಬ್ದುಲ್‌ನ ಪ್ರಶಂಸಕ, ಇಬ್ರಾಹೀಮ, ಅವನ ನಗರ ಬಿಜಾಪುರ, ಅವನ ಆಸ್ಥಾನ, ಅವನ ವೀರ ಹಾಗೂ ಯುದ್ಧಗೀತೆ ಇವೆಲ್ಲವೂ ಐತಿಹಾಸಿಕ ನಿಜಾಂಶಗಳು, ಇವೆಲ್ಲವನ್ನು ಅಬ್ದುಲ್‌ನು ಕಾವ್ಯಾತ್ಮಕ ನಿಜಾಂಶಗಳಾಗಿ ಮಾಡಿ ಪ್ರಸ್ತಾಪಿಸಿದ್ದಾನೆ. ಅಬ್ದುಲ್‌ನ ಕಲ್ಪನೆಯ ಸಮರ್ಥ ಉಪಮೆಯ ಶೈಲಿ, ಇಬ್ರಾಹೀಮ್ ನಾಮಾದ ಕೊನೆಯ ಭಾಗದಲ್ಲಿ ಪ್ರಕಟವಾಗುತ್ತದೆ, ಅಲ್ಲಿ ಅವನು ಬಸಂತ್ ರಾವೊ (ಶಾಹ ಬಹಾರ್) ಪ್ರಸ್ತಾಪಿಸಿದ್ದಾನೆ. ಅವನು ಹೇಗೆ ತನ್ನ ವಸಂತ ಋತುವಿನ ಸೈನ್ಯದೊಡನೆ ಸಾಷ್ಟಾಂಗ ನಮಸ್ಕಾರ ಮಾಡಲು ಹಜ್ರತ್ ಆಲಂ ಪನಾಹರವರಿಗೆ ಹಾಜರಾಗುತ್ತಾನೆ. ಮಸ್ನವಿಯ ಈ ಭಾಗ ಅಪ್ಪಟ ಕಾಲ್ಪನಿಕ. ಇಲ್ಲದಿದ್ದರೆ ಬಸಂತ್ ರಾವಿನ ಅತಿಥಿ ಸತ್ಕಾರದ ಮಹೋತ್ಸವ, ನೃತ್ಯಗಾತಿಯರ ಜೋಡಿಗಳು, ಗುಂಗುರುಕೂದಲು, ಕಣ್ಣಿನ ಕಾಡಿಗೆ, ಕೆಂಪು ಹರಳಿನಂತಹ ಎಲೆತುಟಿ, ಮಾನಖಂಡ, ಪಾದ, ಸ್ತನದ ವಿವರಗಳನ್ನು ಇಬ್ರಾಹೀಮನ ಆಸ್ಥಾನದಲ್ಲಿ ಸ್ವತಃ ನೋಡಿರುವನು.

'ಒಂದು ಹೊಸ ವಿಷಯದ ಮೇಲೆ ಕೃತಿ ರಚಿಸು,' (ನವಿ ಬಾತ್ ಮಝ್ಮೂನ್ ಕರ್ ಎಕ್ ಕಿತಾಬ್) ಎಂಬ ಇಬ್ರಾಹೀಮನ ಈ ಬೇಡಿಕೆ ಮೇರೆಗೆ ಅಬ್ದುಲ್‌ನ ಮೊದಲನೆಯ ಪ್ರಶ್ನೆ ನಾನು ಯಾವ ಭಾಷೆಯಲ್ಲಿ ಕವಿತೆ (ದ್ವಿಪದಿ) ರಚಿಸಲಿ? ಎಂಬುದಾಗಿದೆ, ಏಕೆಂದರೆ ಅವನು 'ಅರಬಿ ಮತ್ತು ಅಜಮಿಯ ಮಸ್ನವಿ' ಯ ಭಾಷೆ ಹಾಗೂ ಶೈಲಿ ಬಲ್ಲವನಲ್ಲ. ಅಬ್ದುಲ್‌ನ ದೌರ್ಬಲ್ಯತೆಯ ಕಾರಣ ಅವನ ಮುಂದೆ ಫಿರ್ದೌಸಿಯ 'ಶಾಹನಾಮಾ' ದಂಥ ಅತ್ಯಂತ ಮಹತ್ಕಾರ್ಯ ಅಥವ ಝುಹೂರಿ ಮತ್ತು ಮಲಿಕ್ ಖುಮಿನಂತಹ ಪಾಂಡಿತ್ಯ ಹೊಂದಿರುವರ ಕವನ ಸಂಕಲನದಲ್ಲಿ ಅರ್ಥವಾಗಿರಬಹುದು, ಸೃಜನತೆಗಳಿರಬಹುದೆಂದು ಈ ಮಾತಿನ (ಭಾಷೆ ಹಾಗೂ ಶೈಲಿ) ಅವನಿಗೆ ಸಾಧ್ಯವಿರಲಿಲ್ಲ.

ಇದ್ದು ನಂತರದ ಕಾಲದಲ್ಲಿ ಮಲಿಕುಷ್ಪೊರಾ ನುಸ್ರತಿಯ ಕೃತಿಯಲ್ಲಿ ಅದನ್ನು ಅರ್ಥೈಸಿಕೊಳ್ಳಲು ಬಂದಿತು:

ಅಬ್ದುಲ್‌ನಿಗೆ ತನ್ನ ದಾರಿಯನ್ನು ತಾನೇ ಸ್ವತಃ ಮಾಡಬೇಕಾಗಿತ್ತು, ಆದ್ದರಿಂದ ಒಂದು ಅಸಾಧಾರಣ ಸಾಹಿತ್ಯರಚನೆಯ ಸಮಯದಲ್ಲಿ ಅವನು ಸಂದೇಹದಲ್ಲಿ ಸಿಕ್ಕಿಹಾಕಿಕೊಂಡಿರುವ ಹಾಗೆ ಕಾಣಿಸುತ್ತದೆ. ರೂಪಲಾವಣ್ಯತೆಯ ಕಲ್ಪನೆಯ ದೃಷ್ಟಿಯಿಂದ ಅವನು ನಿಜವಾಗಿಯೂ ಜಗತ್‌ಗುರುವಿನ ನಿಜವಾದ ಶಿಷ್ಯನಾಗಿ ಕಾಣುತ್ತಾನೆ. ಸುಖನ್(ಮಾತು), ಶೇರ್(ದ್ವಿಪದಿ)ಯ ಅರ್ಥ ಹೇಳುವಾಗ ಅವನು ಯಾವ ಅನಿಸಿಕೆಗಳನ್ನು ವ್ಯಕ್ತ ಪಡಿಸಿದ್ದಾನೊ ಅದರಲ್ಲಿ ಅವನು ಇಬ್ರಾಹೀಮನಿಂದ ಲಾಭ ಪಡೆದಿರುವುದನ್ನು ಸ್ಪಷ್ಟವಾಗಿ ಕಾಣುತ್ತೇವೆ. ಈ ಕಲ್ಪನೆಗಳ ಮೇಲೆ ಹಿಂದೂ ರೂಪಲಾವಣ್ಯತೆಗಳ ಆಳವಾದ ಪ್ರಭಾವವಿದೆ. ವಿಶೇಷವಾಗಿ ಅಬ್ದುಲ್ ಬುದ್ಧಿ ಮತ್ತು ಪದ(ಬಚನ್)ಗಳ ಪರಸ್ಪರ ಸಂಬಂಧದ ಪ್ರಸ್ತಾಪವನ್ನು ವಿವರವಾಗಿ ಮಾಡಿದ್ದಾನೆ. ಅವನ ವಿಚಾರದಲ್ಲಿ ದ್ವಿಪದಿಯ ಪದಬಂಧ ವಿವೇಚನೆ, ಮತ್ತು ಅದರ ಮೂಲ 'ಪದ' ಆಗಿದೆ.

ಬಚನ್ ಬಿಚ್ ಹೈ ಅಖ಼ಲ್ ಕಿ ಮೋಲ್ಕಾ
ಬಚನ್ ಬಾಸ್ ಹೈ ಅಖ಼ಲ್ ಕೆ ಫೂಲ್ ಕಾ
ಪದಗಳ ಮಧ್ಯ ವಿವೇಕದ ಮೌಲ್ಯವಿದೆ
ಪದವೇ ವಿವೇಕದ ಹೂವಿನ ಸುಗಂಧ

ಪದಗಳಿಂದ ಎಲ್ಲಾ ಕಲೆಗಳ ರಚನೆಯಾಗುತ್ತವೆ, ಪದದಿಂದಲೇ ಆದಿ ಹಾಗೂ ಅಂತ್ಯದ ರೇಖೆಗಳು ಸೇರುತ್ತವೆ. ಅದರಿಂದಲೇ 'ತ್ರಿಲೋಕ್' ಜನ್ಮ ತಾಳುತ್ತವೆ. ರತ್ನ ವ್ಯಾಪಾರಿ ಹೇಗೆ ಗುಣದೋಷ ಪರೀಕ್ಷಿಸುತ್ತಾನೋ ಹಾಗೆಯೇ ಕವಿಯೂ ಸಹ ಪದಗಳ ಗ್ಯಾನಿಯಾಗಿರಬೇಕು. ಪದ ಹಾಗೂ ಅರ್ಥದ ಬಗ್ಗೆ ಅವನ ವಿಚಾರವೆಂದರೆ ಪದ ಒಂದು ಮರ ಮತ್ತು ಅರ್ಥ ಅದರ ಹಣ್ಣು. ದಾಳಿಂಬರೆ ಹೇಗೆ ಬೀಜಭರಿತವಾಗಿರುತ್ತದೆಯೋ ಹಾಗೆಯೇ ಪದ ಅರ್ಥಭರಿತವಿರಬೇಕು.

ತುರ್ಕ ಕರ್ ಹರ್ಫ಼್ ಝಾಡು ಕೊ ಸಬ್ ಬಾರ್ದಾರ್
ಭರೆ ಖ಼ೂಬ್ ಮಅನೆ ಸೊ ಫಲ್ ಆಶ್ಕಾರ್
ನೀನು ಪದದ ಮರವನ್ನು ಹಣ್ಣುಗಳಿಂದ ತುಂಬು
ಹಣ್ಣುಗಳನ್ನು ಕಂಡೊಡನೆ ಅವುಗಳನ್ನು ಅರ್ಥಗಳಿಂದ ತುಂಬು
ತುರ್ಥ ಭರ್ ಬೀಚ್ ಮಅನಿ ಸೂ ಜಿಯೊರ್ಕ ಬಿಜ್ ಅನಾರ್
ಹರಫ಼್ ಬೋಲ್ ಥೋಡಾ, ಅರ್ಥ್ ಬೆ ಷುಮಾರ್

ದಾಳಿಂಬರೆಯಲ್ಲಿ ಹೇಗೆ ಬೀಜಗಳು ತುಂಬಿರುತ್ತವೋ ಹಾಗೆ ಅರ್ಥವನ್ನು ತುಂಬು

ಕೆಲವೇ ಪದಗಳು ಹೇಳು, ಅರ್ಥ ಲೆಕ್ಕವಿಲ್ಲದಷ್ಟಿರಬೇಕು

ಈ ಆಧಾರದಿಂದ ವಜ್ಹಿ ಅಬ್ದುಲ್‌ನ ವಿಚಾರ ಸಮರ್ಥಕನಾಗಿದ್ದಾನೆ[೩೨]
ಹುನರ್ ಮುಷ್ಕಿಲ್ ಇಸ್ ಶೆರ್ ಮೆ ಯೂಚ್ ಹೈ
ಕೆ ಥೋಡೆ ಅಥೇಂ ಹರ್ಫ್ಲ ಮಅನಿ ಸೊ ಲೆ.

ಈ ದ್ವಿಪದಿಯಲ್ಲಿ ಕಷ್ಟಕರ ಕಲೆ ಉಪಯೋಗಿಸಲ್ಪಟ್ಟಿದೆ ಅಂದರೆ ಪದಗಳು ಕೆಲವೇ ಇದ್ದರೂ ಸಹ ಅದರ ಅರ್ಥಗಳು ಅನೇಕ.

ಅಬ್ದುಲ್‌ನ ಮಸ್ನವಿಯಲ್ಲಿ ವಾಕ್‌ಚಾತುರ್ಯದ ಅಂಶ ಫ಼ವಾಸಿ, ಹಾಗೂ ವಿಚಾರಗಳ ಕೋಮಲತೆ, ಸ್ವರ ಹಾಗೂ ಸಪ್ಪಳದಲ್ಲಿ ನುಸ್ರತಿಯ ಸರಿಸಮಾನತೆ ಇಲ್ಲದೇ ಇರುವುದರಲ್ಲಿ ಏನೂ ಸಂದೇಹವಿಲ್ಲ, ಸುಲಭತೆಯಲ್ಲಿ ಅವನ ಸಮಕಾಲೀನ ವಜ್ಹಿಯ ಖ಼ುತುಬ್ ಮುಷ್ತರಿಯಿಂದಲೂ ಕೆಳಮಟ್ಟದ್ದಾಗಿದೆ. ಏಕೆಂದರೆ ಅಬ್ದುಲ್ ಬಳಿ ಕವಿತೆಯಲ್ಲಿ ಕಾವ್ಯಸ್ಫೂರ್ತಿಯ ಆ ವಾಸ್ತವಿಕತೆ, ಅವು ಈ ಕವಿಗಳ ಕಾವ್ಯ ವಿಶೇಶತೆ, ವಾಸ್ತವಿಕತೆ ಏನಿದೆಯೋ ಅದು ಸಿಗುವುದಿಲ್ಲ. ಅಬ್ದುಲ್‌ನ ಕಷ್ಟದಿಂದ ಅರ್ಥವಾಗುವಂಥ ಕವನ ಮತ್ತು ಅರ್ಥಗರ್ಭಿತ ಉಪಮೆಗಳ ಶೈಲಿಯ ಹೊಂದಾಣಿಕೆ ಮುಹಮ್ಮದ್ ಖ಼ುಲಿ ಖ಼ುತುಬ್ ಶಾಹನ ಕಾವ್ಯದಲ್ಲಿ ಸಿಗುತ್ತದೆ. ಇವೆಲ್ಲವನ್ನು ನೋಡಿದರೆ ಹದಿನೇಳನೇ ಶತಮಾನದ ಮೊದಲನೆಯ ದಶಕದವರಿಗೆ ಉರ್ದು ಭಾಷೆ ಹಾಗೂ ಶೈಲಿಗಳ ಮೇಲೆ ಹಿಂದಿಯ ದಟ್ಟ ಪ್ರಭಾವವಿತ್ತೆಂದು ಕಾಣಿಸುತ್ತದೆ. ಆದರೆ ಗೋಲ್ಕೊಂಡದಲ್ಲಿ ವಜ್ಹಿಯ ಖ಼ುತುಬ್ ಮುಷ್ತರಿ ಹಾಗೂ ಬಿಜಾಪುರದಲ್ಲಿ ಸನತಿಯ 'ಖಿಸ್ಸಯೆ ಬೆ ನಜ಼ೀರ್'ದಿಂದ ಭಾಷೆ ಮತ್ತು ಶೈಲಿ ಎರಡೂ ಸಹ ಸಂಪೂರ್ಣವಾಗಿ ಬದಲಾಗುತ್ತವೆ. ವಜ್ಹಿಯ ಹೇಳಿಕೆಯಂತೆ "ಬೈತೆ ಸಲೀಸ್"ನ(ಸುಲಭ ಕಾವ್ಯ) ಕಾಲ ಪ್ರಾರಂಭವಾಗುತ್ತದೆ. ಬಿಜಾಪುರ ಶಾಲೆಯಲ್ಲಿ ಅಬ್ದುಲ್‌ನಿಂದ ಮುಂಚೆ ಮುಖ್ಯ ಸಾಹಿತ್ಯ ರೂಪ ಶಾಹ ಬುರ್ಹಾನುದ್ದೀನ್ ಜಾನಂನಿಂದ ಸ್ಮರಿಸಲಾಗುತ್ತದೆ? ಅವರ ಮಸ್ನವಿ "ಇರ್ಶಾದ್ ನಾಮಾ" ಹಿಂದಿ ಸೂಫಿ ಪಾರಿಭಾಷಿಕ ಅರ್ಥವುಳ್ಳ ಪದಗಳಿಂದ ಭಾರವಾಗಿವೆ. ಅಬ್ದುಲ್‌ನ ಮುಂದೆ ಮತ್ತೊಂದು ಮಾದರಿ ತನ್ನದೇ ಆದ ಶಾಹ ಉಸ್ತಾದ್ ಇಬ್ರಾಹೀಮನ ಕೃತಿ "ಕಿತಾಬೆ ನೌರಸ್" ಇತ್ತು. ಅದು ಭಾಷೆ ಹಾಗೂ ವರ್ಣನೆ(ಬಯಾನ್)ಯ ದೃಷ್ಟಿಯಿಂದ ಅನೇಕ ಲಿಪಿರಹಿತ ಭಾಷೆಯ ಮಿಶ್ರಣ ಹಾಗೂ ಸಂಗೀತದ ಪಾರಿಭಾಷಿಕ ಅರ್ಥವುಳ್ಳ ಪದಗಳಿಂದ ತುಂಬಿವೆ. ಅಬ್ದುಲ್‌ನಿಗೆ ಇದೇ ಕಷ್ಟಕರ ಭಾಷೆಯಲ್ಲಿ ವ್ಯಕ್ತಪಡಿಸುವ ಪ್ರಯತ್ನ ಮಾಡಬೇಕಾಯಿತು. ಈ ಕಾರಣದಿಂದ ಇಬ್ರಾಹೀಮ ನಾಮಾ ಸುವ್ಯಕ್ತತೆ, ವಾಕ್ಚಾತುರ್ಯತೆಯ ಆ ಮಾದರಿ ಕೊಡುವುದಿಲ್ಲ, ಅದು ಅಬ್ದುಲ್‌ನ ತಕ್ಷಣ ಹಿಂದೆ ಬರುವ ಕವಿ ಸನತಿ ಬಿಜಾಪುರಿಯ "ಖಿಸ್ಸಯೆ ಬೆ ನಜ಼ೀರ" (೧೬೪೫/೧೦೫೫)ರಲ್ಲಿ ಸಿಗುತ್ತದೆ. ಸನತಿಯ ಮಸ್ನವಿಯು ಇಬ್ರಾಹೀಮ ನಾಮಾದ ಕೇವಲ ೩೪ ವರ್ಷದ ನಂತರ ರಚನೆಯಾಗಿತ್ತು. ಆದರೆ ಭಾಷೆ, ಹೇಳಿಕೆ, ಸರಳತೆ, ಹರಿವು, ಇವುಗಳ ದೃಷ್ಟಿಯಿಂದ ಫ಼ವಾಸಿಯ ಮಸ್ನವಿಗಳ ಸರಿಸಮಾನವಾಗಿವೆ.

ಸನತಿಯು ಬಿಜಾಪುರ ಶಾಲೆಯ ಕಾವ್ಯ ಶೈಲಿಗಳಿಗೆ ಹೊಸ ತಿರುವು ಕೊಡುವಾಗ ಈ ಭಾವನೆಗಳನ್ನು ವ್ಯಕ್ತಪಡಿಸಿದ್ದಾನೆ.

ರಖಿಯಾ ಕಮ್ ಸಂಸ್ಕೃತ್ ಕೆ ಇಸ್ಮೆ ಬೋಲ್
ಅದಿಕ್ ಬೋಲ್ನೆ ತೆ ರಖಿಯಾ ಹೂಂ ಅಮೋಲ್
(ಇದರಲ್ಲಿ ಸಂಸ್ಕೃತ ಭಾಷೆಯ ಪದಗಳನ್ನು ಕಡಿಮೆ ಬಳಸಲಾಗಿದೆ
ಜಾಸ್ತಿ ಹೇಳುವ ಬದಲು ಅಮೂಲ್ಯ ಮಾತನ್ನು ಹೇಳಿದ್ದೇನೆ.)

ಜಿಸೆ ಫ಼ಾರ್ಸಿ ಕಾ ನ ಕುಛ್ ಜ್ಞಾನ್ ಹೈ
ಸೊ ದಖನಿ ಝ಼ಬಾನ್ ಉಸ್ಕೊ ಆಸಾನ್ ಹೈ
(ಯಾರಿಗೆ ಪರ್ಷಿಯನ್ ಭಾಷೆಯಲ್ಲಿ ಜ್ಞಾನವಿಲ್ಲವೋ
ಅವರಿಗಾಗಿ ದಖನಿ ಭಾಷೆಯನ್ನು ಸರಳ ಪಡಿಸಿದ್ದೇನೆ.)

ಸೊ ಇಸ್ಮೆ ಸಂಸ್ಕೃತ್ ಕಾ ಹೈ ಮುರಾದ್
ಕಿಯಾ ಉಸ್ತೆ ಆಸಾನ್ನಿ ಕಾ ಸವಾದ್
(ಇದರಲ್ಲಿ ಬರುವ ಕಠಿಣ ಸಂಸ್ಕೃತ ಪದಗಳ ಬದಲಾಗಿ
ಸರಳವಾದ ಪದಗಳನ್ನು ಬಳಿಸಿ ಅಭಿರುಚಿಯನ್ನು ಹೆಚ್ಚಿಸಿದ್ದೇನೆ.)

ಕಿಯಾ ಉಸ್ನೆ ದಖ್ನಿ ಮೆ ಆಸಾನ್ ಕರ್
ಜೊ ಜ಼ಾಹೆರ್ ದಿಸೆಂ ಉಸ್ಮೆ ಕೈ ಕೈ ಹುನರ್[೩೩]
(ಅವುಗಳನ್ನು ದಖನಿ ಪದಗಳನ್ನು ಬಳಸಿ ಸುಲಭ ಮಾಡಿದ್ದೇನೆ
ಇದರಿಂದಾಗಿ ಅನೇಕಾನೇಕ ಕಲೆಗಳು ಪ್ರಕಟವಾಗುವವು.)

'ಸಂಸ್ಕೃತ'ದಿಂದ ದಖನಿಯ ಕಡೆ ಈ ಓಟ ಬಿಜಾಪುರ ಶಾಲೆಯ ಭಾಷೆ ಮತ್ತು ಸಾಹಿತ್ಯ ಶೈಲಿಯಲ್ಲಿ ಒಂದು ದೊಡ್ಡ ಬದಲಾವಣೆಯನ್ನು ಪ್ರಕಟಿಸುತ್ತದೆ. ಉರ್ದು ಭಾಷೆ ಜಗತ್‌ಗುರುವಿನ ಆಸ್ಥಾನ ಮತ್ತು ಅವನ ಹೆಸರಾಂತ ಕವಿ ಅಬ್ದುಲ್‌ನ ಪದ ಪೂಜೆಯಿಂದ ಸ್ವತಂತ್ರಗೊಂಡಿರುವುದನ್ನು ಈ ಪ್ರಕಟಣೆ ಸಾರುತ್ತಿದೆ. ಸುಮಾರು ಈ ರೀತಿಯ ಬದಲಾವಣೆ ವಜ್ಹಿ ಮತ್ತು ಘ಼ವಾಸಿಯವರ ಕಾರಣದಿಂದಾಗಿ ಗೋಲ್ಕೊಂಡ ಶಾಲೆಯಲ್ಲಿ ಕಾಣಲಾರಂಭಿಸುತ್ತಿತ್ತು. ಅಲ್ಲಿ ಮುಹಮ್ಮದ್ ಖುಲಿ ಖುತುಬ್ ಶಾಹನ ಕಷ್ಟಕರ ಭಾಷೆ ಮತ್ತು ಸಾಹಿತ್ಯದಿಂದ ಪಲಾಯನ ಮಾಡಲಾಗಿತ್ತು. ಇಬ್ರಾಹೀಮ ನಾಮಾದ ಕಾವ್ಯಶೈಲಿ ತನ್ನ ವೈಯಕ್ತಿಕತೆ ಇದ್ದರೂ ಸಹ ಇಬ್ರಾಹೀಮನ 'ಕಿತಾಬೆ ನೌರಸಿ'ನ ಕಾವ್ಯ ಸಂಪ್ರದಾಯದೊಂದಿಗೆ ಸಂಬಂಧಿಸಿದೆ. ಇದರಲ್ಲಿ ಸರಳತೆ ಮತ್ತು ವಾಕ್ಚಾತುರ್ಯದ ಎದುರಾಗಿ ಭಾವನೆಯ ಅಲಂಕಾರ, ಕಾಲ್ಪನಿಕ ಕಸೂತಿ ಕೆಲಸ ಸಿಗುತ್ತದೆ. ಕಾವ್ಯ ಸ್ಫೂರ್ತಿಯ ಬದಲಾಗಿ ಕೃತ್ರಿಮ (ಆವುರ್ದ್, ಬನಾವಟ್)ಯ ಸಂವೇದನೆ ಉಂಟಾಗುತ್ತದೆ. ಭಾಷೆಯಲ್ಲಿ ರುಚಿಯ ಬದಲು ಪದಗಳ ಕುಸುರು ಕೆಲಸದ ಒಲವು ಸಿಗುತ್ತದೆ. ಇದು ಮಸ್ನವಿ

ರೂಪದ ಪ್ರಶಂಸಾ ಪದ್ಯ. ಆದರೆ ಇದರಲ್ಲಿ ಕಸೀದಕ್ಕೆ ಬೇಕಾಗಿರುವ ಅಂಶ ವೈಭವವಾಗಲಿ ಅಥವಾ ಮಸ್ನವಿಯಲ್ಲಿರುವ ಹರುವಿಕೆಯಾಗಲಿ ಇರುವುದಿಲ್ಲ. ಆದರೂ ಅದರ ಕಾಲ ಹಿಂದಿ ಕಾವ್ಯದ ಭಕ್ತಿ ಕಾಲಕ್ಕೆ ಸಮಾನವಿದೆ, ಆದರೆ ಈ ಮಸ್ನವಿಯ ಮನೋಭಾವ (ರೀತಿ, ರಿವಾಯತಿ?) ಸಾಂಪ್ರದಾಯಕ ಕಾಲದ್ದಾಗಿದೆ ಅಂದರೆ 'ಭಾವನೆ', ಮತ್ತು ಭಾವನೆಯ ಬದಲಾಗಿ ಪದಪೂಜಿಕೆ ಮತ್ತು ಕಲಾಕೌಶಲ್ಯದ ಒಲವು ಸಿಗುತ್ತದೆ. ಕಲಾಕೌಶಲ್ಯದಲ್ಲಿ ಒತ್ತು ಉಪಮೆ, ರೂಪಕಾಲಂಕಾರ ಮತ್ತು ಹೋಲಿಕೆ ಮೇಲಿದೆ. ವಿಶೇಷವಾಗಿ ಮಸ್ನವಿಯ ಕೊನೆಯ ಭಾಗದಲ್ಲಿ ವಸಂತ ಋತುವನ್ನು ಬಸಂತ್ ರಾವೊ ರೂಪದಲ್ಲಿ ರೂಪಗೊಳಿಸಿರುವುದು, ಶುದ್ಧವಾಗಿ ಉಪಮಾನದ ಸ್ವರೂಪ. ಮಸ್ನವಿಯ ಅಂತ್ಯದಲ್ಲಿ ಅಬ್ದುಲ್, ವಜ್ಹಿಯ ಹಾಗೆ ಆಟವಾಡುವುದಿಲ್ಲ ಮತ್ತು ಮಿಲನದ 'ಫಾಂಗ್ರ ಫೋಲ್'ನಿಂದ ಅವನು ಶುದ್ಧವಿದ್ದಾನೆ. ಇಷ್ಟಾದರೂ ಅಂತ್ಯದಲ್ಲಿ ನರ್ತಕಿಯರ ಯೌವನ ಮತ್ತು ಸೌಂದರ್ಯದ ಚಿತ್ರೀಕರಣದಲ್ಲಿ ರುಚಿ ಏನೋ ಸಿಗುತ್ತದೆ, ಅದು ಅಂತಹ ಶಾಹನ ಸ್ವಭಾವಕ್ಕೆ ತಕ್ಕುದಾಗಿದೆ, ಅವನ ಮಾರ್ಗವೇ ಇದು:

"ಏಕ್ ಹಸೀನ್ ಔರತ್ ಔರ್ ತಂಬೂರ ಚಾಹಿಯೆ"[೩೪]
ಒಬ್ಬ ಸುಂದರ ಮಹಿಳೆ ಮತ್ತು ತಂಬೂರಿ ಬೇಕು.

ಮೇಲೆ ಹೇಳಿದ ಹಾಗೆ ಅಬ್ದುಲ್‌ನ ಕಾವ್ಯ ಶೈಲಿಯ ಎಲ್ಲಕ್ಕಿಂತ ದೊಡ್ಡ ಆಕರ್ಷಣೆಯೆಂದರೆ ಅವನ ವಿವರಣಾ ಕೌಶಲ್ಯ ವಿಸ್ಮಯಕರ ಉಪಮೆಗಳು ಮತ್ತು ಹಿಂದು ಪೌರಾಣಿಕ ಸಂಕೇತಗಳ ಉಪಯೋಗದಲ್ಲಿ ಅಡಗಿವೆ. ಉದಾಹರಣೆಗೆ ನೌರಸ್ ಮಹಲಿನ ನಿರ್ಮಾಣ ಈ ಪದಗಳಲ್ಲಿ ಮಾಡುತ್ತಾನೆ:

ಕೆ ಯಾ ರಾತ್ದಿನ್ ಕೆ ದೊ ಮಜ್ದೂರ್ ಧರ್
ನೌರಸ್ ಮಹಲ್ ಕ ಕಾನ್ನಂ ಬುನಿಯಾದ್ ಕರ್
(ಈ ರೀತಿಯಾಗಿ ಇಬ್ಬರು ಕೆಲಸದಾಳಗಳನ್ನು ಇಡಲಾಯಿತು
ಇವರಿಗೆ ನೌರಸ್ ಮಹಲಿನ ಬುನಾದಿ ಇಡುವ ಕೆಲಸ ಒಪ್ಪಿಸಲಾಯಿತು.)

ಲಿಯಾ ಗಗನ್ ಕಾ ಟೋಕ್ರಾ ದೀಸ್ ಸರ್
ಸುರಜ್ ಈಂಟ್ ಮಾನಕ್ ಸೊ ಧರ್ ಚರ್‍ಪ ಭರ್
(ಹಗಲು ತನ್ನ ತಲೆ ಮೇಲೆ ಗಗನ ಬುಟ್ಟಿಯನ್ನು ಹೊತ್ತಿಕೊಂಡಿತು.
ಸೂರ್ಯನು ರತ್ನಗಳ ಇಟ್ಟಿಗೆಗಳನ್ನು ಇದರಲ್ಲಿ ತುಂಬಿದ.)

ನಿತ್ ಉತ್ ದೊ ಹೊವೆ(ವೊ) ದರ್ಯಾ ಮಂಝೂರ್
ಚೊವೆ ನೀರ್ ಪ್ರಗಟ್ ಹೊ ಕಿರ್ನಾ ಕಿ ಧಾರ್
(ಆಗಲೇ ಎರಡು ಹೊಳೆಗಳು ಪ್ರಕಟವಾಗಿ
ನೀರು ಹರಿಸಲಾರಂಭಿಸಿದಾಗ ಅವು ಕಿರಣಗಳ ಧಾರೆಯಾಗಿ ಪ್ರಕಟವಾಯಿತು.)

ಯಹೀಂ ರಾತ್ ಭಿ ಸೀಸ್ ಆಪನ್ ಧರೆ
ಗಿಲಾವಾ ಮೊತಿರ್ಯೋ ಚಾಂದ್ ಚೂನಾ ಕರೆ
(ಇದೇ ರೀತಿಯಾಗಿ ರಾತ್ರಿಯೂ ತನ್ನ ತಲೆ ಮೇಲೆ ಇಟ್ಟಿಕೊಂಡು
ಚಂದ್ರನ ಸುಣ್ಣ ಮತ್ತು ಮುತ್ತುಗಳ ಗಾರೆ.)

ಗಿರಾ ಟೊಕ್ರಾ ಭಿ ಜೊ ಸಟ್ ಲಯಾಯೆ ಕರ್
ಪಡಿಯಾಂ ಉಛಲ್ ಛಪ್ಪಾ ಹೊ ತಾರೆ ಬಿಖರ್
(ಗಾರೆಯ ಬುಟ್ಟಿ ತಲೆಮೇಲಿಂದ ಜಾರಿ ಬಿತ್ತು
ಕೆಳಗೆ ಬಿದ್ದಮೇಲೆ ಅವೇ ನಕ್ಷತ್ರಗಳಾಗಿ ಆಕಾಶದಲ್ಲಿ ಹರಡಿದವು.)

ಸುಮಾರು ಇದೇ ರೂಪಾಲಂಕಾರ 'ದರ ತರೀಫ್ಲೆ ಮಜ್ಲಿಸ ಹಜ್ರತ್ ಶಾಹ ಆಲಂ ಪನಾಃ' ವೊ "ದರ್ ತರೀಫ್ಲ್,ಕೆ ಶಬ್ ಗಸ್ತ ವೊ ರೋಜ್ಹೆ ಖ಼ುದ್ ಆರಾಸ್ತ ಕರ್ದ ಬ ಮಜ್ಲಿಸ್ ಶಾಹ ಆಮದ್" ನಲ್ಲಿ ಸಿಗುತ್ತದೆ. ಮುಂಜಾನೆಯ ಆಗಮನವನ್ನು ರೂಪಕಾಲಂಕಾರ ಮತ್ತು ಇಶಾರೆಯ ಭಾಷೆಯಲ್ಲಿ ನೋಡಿ:

ಉಡಿ ರಾತ್ ಕೊಬಲ್ ಗಗನ್ ಬನ್ ಉಪರ್
ನಿಕಲ್ ದೀಸ್ ಕಾ ಬಾಜ಼ ಸಜ್ ಸುಬಹ್ ಪರ್
(ರಾತ್ರಿಯ ಕೋಗಿಲೆ ಗಗನ ಬನದ ಮೇಲೆ ಹಾರಿತು
ಆಗ ಹಗಲಿನ ಬಾಜ಼್(ಗಿಡಗ) ಶೃಂಗರಿಸಿಕೊಂಡು ಬೆಳಗಿನ ಮೇಲೆ ಬಂದ.)

ಪಕಡ್ ಸುರಜ್ ಚುಂಗಲ್ ಸೂಂ ನಖ್ ಕಿರಣ್ ರಾತ್
ದಿಸ್ಯಾ ಲಾಲ್ ಲುಹೂ ಶಫ಼ಖ಼ ಗಗನ್ ಧಾತ್.
(ಸೂರ್ಯನನ್ನು ರಾತ್ರಿ ತನ್ನ ಮುಷ್ಟಿಯಲ್ಲಿ ಹಿಡಿದಿದ್ದರಿಂದ ಅದರ ಕಿರಣಗಳಿಗೆ ಉಗುರು ತಾಕಿತ್ತು. ಆದ್ದರಿಂದ ದಿಗಂತದಲ್ಲಿ ಗಗನ ಕೆಂಪು ರಕ್ತದಹಾಗೆ ಕಾಣಿಸ ತೊಡಗಿತು.)

ಒಟ್ಟಾರೆ ಹೇಳುವುದಾದರೆ 'ಇಬ್ರಾಹೀಂನಾಮಾ'ದಲ್ಲಿ ಏನು ಕುಶಲತೆ ಸಿಗುತ್ತದೆಯೋ ಅದರ ಉತ್ತರ ಹಳೇ ಉರ್ದು ಸಾಹಿತ್ಯದಲ್ಲಿ ಎಲ್ಲೂ ಸಿಗುವುದಿಲ್ಲ. ಅಬ್ದುಲ್ ತನ್ನ ಶೈಲಿಯ ತಾನೇ ಸ್ಥಾಪಕನಾಗಿದ್ದಾನೆ. ಅವನ ಈ ಪ್ರತಿಭಟನಾ ಕೆಲಸವನ್ನು ನೋಡಿದರೆ ಅವನ ಮಸ್ನವಿಯಲ್ಲಿ ಹರಿವಿಕೆ ಇಲ್ಲದಿರುವುದು, ಫ಼ಊಲುನ್, ಫ಼ಊಲುನ್, ಫ಼ಊಲುನ್, ಫ಼ಊಲುನ್ ನಂತಹ ಪ್ರಚಲಿತ ಸಿದ್ಧಾಂತ (ಅರಕಾನ್)ವುಳ್ಳ ಕವಿತೆಯ ವೃತ್ತವನ್ನು ಉಪಯೋಗಿಸಿಲ್ಪಟ್ಟರೂ ಸಹ ಮಸ್ನವಿಯಲ್ಲಿ ಮೆಲ್ಲಮೆಲ್ಲನೆ ಮುಂದುವರಿಕೆ, ಸಂಕೋಚದ ಇರುವಿಕೆ, ಅತಿಶಯೋಕ್ತಿಯ ಅಧಿಕ ಬಳಕೆ, ಇವೆಲ್ಲವೂ ಏಕೆಂದರೆ ಅಬ್ದುಲ್‌ಗೆ ಎಂತಹ ಭಾಷೆಯಲ್ಲಿ ಬರೆಯಬೇಕಾಯಿತೆಂದರೆ, ಅದು ಸಾಹಿತ್ಯ ಶೈಲಿಯಿಂದ ಇನ್ನೂ ಅಪರಿಚಿತವಾಗಿತ್ತು. ಅದು ಇನ್ನೂ ಶಿಲ್ಪಗೊಳ್ಳದ ನೀಚ ಭಾಷೆಯಲ್ಲಿ 'ಶಾಹ ನಾಮಾ' ಬರೆಯಲು ಪ್ರಯತ್ನಿಸುತ್ತಿದ್ದಾನೆ, ಆ ಭಾಷೆಗೆ ಅರಬ್ ಮತ್ತು ಅಜಂ ಮಸ್ನವಿಗಳ

ಶೈಲಿಯ ಅನುಭವವಿರಲಿಲ್ಲ. ಆದರೂ ಸಹ ಅಬ್ದುಲ್‌ನ ಸ್ಥಾನಮಾನ ಕೇವಲ ಐತಿಹಾಸಿಕ ಅಲ್ಲ. ಇಬ್ರಾಹೀಮ್ ನಾಮಾ ಸ್ವತಃ ಒಂದು ಕಾವ್ಯದ ಅಸಾಧಾರಣ ಕೆಲಸ. ಅದು ಸೃಜನಶೀಲ ಹಾಗೂ ನಿರೂಪಣೆ ಹಾಗೂ ಉಪಮಾ ಶೈಲಿಯ ಬುನಾದಿಯೂ ಸಹ, (ಮೂಲಸ್ವರೂಪ). ನುಸ್ರತಿ ಫವಾಸಿಯನ್ನು ಸದಾಪ್ರಶಂಸಿಸುತ್ತಾನೆ. ಆದರೆ ಅವನು ತನ್ನ ಶಾಲೆಯ ಸಂಸ್ಥಾಪಕ ಮತ್ತು ಹಿರಿಯನಾದ ಅಬ್ದುಲ್‌ನನ್ನು ಸಂಪೂರ್ಣವಾಗಿ ಅಲಕ್ಷಿಸುತ್ತಾ ಅಹಂಕಾರಪಡುತ್ತಿದ್ದಾನೆ. ಅಬ್ದುಲ್‌ನು ಅವನಿಗೆ ಹಾದಿ ಸುಗಮ ಮಾಡಿ ಕೊಡದಿದ್ದರೆ ಅವನು ಅಲಿನಾಮಾವನ್ನು ರಚಿಸಲು ಸಾಧ್ಯವಾಗುತ್ತಿತ್ತೇ ಎಂಬುದನ್ನು ಹೇಳುವುದು ಕಷ್ಟ ಸಾಹಿತ್ಯದ ಇತಿಹಾಸದಲ್ಲಿ ಇದೊಂದು ಗುಟ್ಟು ಅಡಗಿದೆ. ದಖನಿನ ಯಾವ ಕವಿಯಾಗಲಿ ಅಥವಾ ಜೀವನ ಚರಿತ್ರೆಗಾರನೇ ಆಗಲಿ ಪ್ರದೇಶವನ್ನು ಅಲಂಕರಿಸಿದ ಅಬ್ದುಲ್ ದೆಹಲ್ವಿಯ ಈ ಸಾಹಿತ್ಯ ಸಾಧನೆಯ ಪ್ರಸ್ತಾವನೆಯನ್ನು ಮಾಡಿರುವುದಿಲ್ಲ. ಇದರ ಶಾಸ್ತ್ರಬದ್ಧ ಓದುವಿಕೆ ಒಂದು ಬುದ್ಧಿಯ ಶ್ರಮವೂ ಹಾಗೂ ಸಂತೋಷದ ಕಾರಣವಾಗಿದೆ.

ಇಬ್ರಾಹೀಂ ನಾಮಾದ ಭಾಷೆ:

ಇಬ್ರಾಹೀಮ ನಾಮಾದ ಭಾಷೆಯ ವಿಶ್ಲೇಷಣೆ ಮಾಡುವ ಮುನ್ನ ಕೆಲವು ಮಾತುಗಳನ್ನು ಗಮನಿಸಬೇಕಾಗಿದೆ.

ಈ ಬಗ್ಗೆ ಮೊದಲನೆಯ ಮಾತು ಅಬ್ದುಲ್ ತನ್ನ ಭಾಷೆ 'ಹಿಂದವಿ' ಹಾಗೂ ತನ್ನನ್ನು ದೆಹಲ್ವಿ ಎನ್ನುತ್ತಾನೆ. ಝಬಾನೆ ಹಿಂದವಿ ಮುಝ್ ಸೊ ಹೂರ್ ದೆಹಲ್ವಿ.

ನಾವು ಮೊದಲೇ ಹಿಂದಿನ ಪುಟಗಳಲ್ಲಿ ಪುನರ್ವಿಮರ್ಶೆ ಮಾಡುತ್ತಾ ದೆಹಲ್ವಿಯ ಈ ಸಂಬಂಧ ಯಾವ ರೀತಿಯದೆಂದು ಸಂಕೇತಿಸಿದ್ದೇವೆ. ಇದರ ಬಗ್ಗೆ ಚರ್ಚೆಯಾಗಬೇಕಾಗಿದೆ. ಅವನು ಬಿಜಾಪುರದಲ್ಲಿ ಹೊಸದಾಗಿ ಆಗಮಿಸಿರಬಹುದು, ಏಕೆಂದರೆ ತನ್ನ ಹೇಳಿಕೆಯಂತೆ ಇಬ್ರಾಹೀಂ ಜಗತ್ ಗುರುವಿನ ಸಾಹಿತ್ಯ ಪೋಷಣೆಯ ಸುಪ್ರಸಿದ್ಧತೆಯನ್ನು ಕೇಳಿ 'ಐವತ್ತಾರು ದೇಶ'ದ ಕಲಾವಂತರು ಹಾಗೂ ವಿದ್ಯಾವಂತರೂ ದೂರ ದೂರ ಪ್ರಾಂತ್ಯ ಹಾಗೂ ದೇಶಗಳಿಂದ ಬಂದು ವಾಸವಾಗಿದ್ದರು. ಅಬ್ದುಲ್‌ನ ದೆಹಲಿಯ ಸಂಬಂಧದ ಬಗ್ಗೆ ಮತ್ತೊಂದು ಉಹೆ ಎಂದರೆ ಅವನ ಹಿರಿಯರಲ್ಲಿ ಯಾರಾದರೂ ಬಂದು ಇಲ್ಲಿ ವಾಸಿಸಿರಬಹುದು, ಹೇಗೆಂದರೆ ಇಲ್ಲಿಯವರೆಗೂ ಅನೇಕ ಕುಟುಂಬಗಳು ತನ್ನ ಹೊರಸಂಬಂಧದ ಬಗ್ಗೆ ಹೆಮ್ಮೆ ಪಡುತ್ತಾರೆ, ಅಬ್ದುಲ್ ತನ್ನನು ದೆಹಲ್ವಿ ಎಂದು ಹೇಳಿಕೊಳ್ಳುವುದು ಸಹ ಹೀಗೆಯೇ ಇರಬೇಕು. ಅವನು ತನ್ನ ತಂದೆತಾಯಿಯರೊಡನೆ ಬಾಲ್ಯದಲ್ಲೇ ಬಿಜಾಪುರಕ್ಕೆ ಬಂದಿರಬಹುದು, ಹಾಗೂ ಇದರಿಂದಾಗಿ ಅವನ ಸಾಹಿತ್ಯ ಅಭಿರುಚಿ ಮತ್ತು ಭಾಷೆಯ ವಿವೇಚನೆಯ ತೊಟ್ಟಿಲು ಈ ನಗರವಾಗಿರಬೇಕು.

ಈ ಸಮಸ್ಯೆಗಳನ್ನು ಬಗೆಹರಿಸಬೇಕಾದರೆ ಅಬ್ದುಲ್‌ನ ಬಾಷೆಯ ವಿಶ್ಲೇಷಣೆಯಿಂದ ಬಹುಮಟ್ಟಿಗೆ ಸಹಾಯ ಪಡೆಯಬಹುದು, ಅವನ ಮುಂದಿರುವ ಬಿಜಾಪುರದ ಲೇಖಕ

ಶಾಹ್ ಬುರ್ಹಾನುದ್ದೀನ್ ಜಾನಂನ ದೃಢೀಕೃತ ಕೃತಿ 'ಇರ್ಷಾದ್ ನಾಮಾ', ಮತ್ತು ಅದರ ನಂತರದ ಮತ್ತೊಂದು ಅಧಿಕೃತ ಕೃತಿ ಸನತಿ ಬಿಜಾಪುರಿಯ 'ಖಿಸ್ಸಯೆ ಬೆನಜೀರ್'ನ ಭಾಷೆಯಿಂದ ಹೋಲಿಕೆ ಅಧ್ಯಯನ ಮಾಡಿದರೆ ಅಬ್ದುಲ್‌ನ ಭಾಷೆ ಬಿಜಾಪುರ ಶಾಲೆಯ ಭಾಷೆಯಿಂದ ಎಷ್ಟರ ಮಟ್ಟಿಗೆ ಹೋಲಿಕೆ ಅಥವಾ ವಿರೋಧವಾಗುತ್ತದೆಂದು ಸುಲಭವಾಗಿ ನಿರ್ಣಯ ಮಾಡಬಹುದು. ಈ ಹೋಲಿಕೆ ಅಧ್ಯಯನವನ್ನು ವಿಸ್ತರಿಸಿ ಒಂದು ವೇಳೆ ಅಬ್ದುಲ್‌ನ ಸಮಕಾಲೀನ ಮತ್ತು ಗೊಲ್ಕುಂಡದ ಹೆಸರಾಂತ ಸಾಹಿತಿ ಮುಲ್ಲಾ ವಜ್ಹಿಯ ಭಾಷೆಯು ಸಹ ಇದರಲ್ಲಿ ಸೇರಿಸಿಕೊಂಡರೆ ಅಬ್ದುಲ್‌ನ ಭಾಷೆಯ ಆ ಎಲ್ಲ ವಿರೋಧಗಳು ಸ್ಪಷ್ಟಗೊಳ್ಳಬಹುದು, ಅದು ಅಬ್ದುಲ್‌ನು ದೆಹಲ್ವಿಯಾಗುವುದರಿಂದ ಉಂಟಾಗಬಹುದು, ಜಾನಂ, ಸನತಿ, ವಜ್ಹಿ ಮತ್ತು ಅಬ್ದುಲ್‌ನ ಭಾಷೆ ಸಂಯುಕ್ತ ಮೂಲಾಂಶಗಳ ಹೇರಳತೆ ಆಗಿವೆ. ಅದರ ವಿವರವಾದ ಸಮೀಕ್ಷೆ ನಾವು ಮುಂದಿನ ಪುಟಗಳಲ್ಲಿ ತೆಗೆದುಕೊಳ್ಳುತ್ತೇವೆ. ಇಲ್ಲಿ ಕೆಲವು ಮೂಲಭೂತ ಭಾಷಾಶಾಸ್ತ್ರದ ವಿರೋಧಗಳನ್ನು ವ್ಯಕ್ತ ಪಡಿಸುತ್ತಿದ್ದೇವೆ ಅವು ಅಬ್ದುಲ್‌ನನ್ನು ದಕನಿ ಭಾಷಾಶಾಸ್ತ್ರದ ಸಂಪ್ರದಾಯದಿಂದ ಬೇರ್ಪಡಿಸುತ್ತವೆ.

೧) ಜಾನಂ, ವಜ್ಹಿ ಮತ್ತು ಸನತಿಯ ಪ್ರತಿಕೂಲವಾಗಿ ಅಬ್ದುಲ್‌ನ ಭಾಷೆಯಲ್ಲಿ(ಚ್) ಒತ್ತಾಯದ ಅಕ್ಷರ ಅದನ್ನು ದಕನಿ ಭಾಷೆಯ ಚಾವಿ ಎಂದು ಹೇಳಬಹುದು, ಮತ್ತೆ ಉತ್ತರ ಮತ್ತು ದಕ್ಷಿಣ ಉರ್ದುವಿನಲ್ಲಿ ತಾರತಮ್ಯ, ಒಂದು ಉದಾಹರಣೆಯೂ ಸಹ ಸಿಗುವುದಿಲ್ಲ. ದಕನಿಯಲ್ಲಿ ಈ (ಚ್)ಒತ್ತಾಯ ಅಕ್ಷರ ಮರಾಠಿಯಿಂದ ಎರವು ಪಡೆದ ಅಕ್ಷರ, ಮತ್ತು ಉತ್ತರ ಭಾರತದ ನಾಡನುಡಿಗಳಲ್ಲಿ ಮಾಯವಾಗಿವೆ. ಗುಜರಾತಿಯಲ್ಲಿ (ಹಿ)ಯ ಜೊತೆಜೊತೆಯಲ್ಲಿ (ಚ್) ಒತ್ತಾಯ ಅಕ್ಷರವೂ ಉಪಯೋಗಿಸಲ್ಪಡುತ್ತದೆ. ದಕನಿ ಉರ್ದುವಿನಲ್ಲಿ (ಚ್)ವತ್ತಾಯ ಅಕ್ಷರ (ಹಿ)ಜೊತೆಯಲ್ಲಿ ಮಿಶ್ರಣವೂ ಸಹ ಆಗುತ್ತದೆ ಆಗ ಅದರ ಉಚ್ಚಾರಣೆ (ಇ) ಅಗುತ್ತದೆ[೩೫]

೨) ಮರಾಠಿಯಿಂದ ಯರವು ಪಡೆದ ಮತ್ತೊಂದು ಅಕ್ಷರ ಅದು ದಕನಿಯ ಚಾವಿಯೂ ಹೌದು, ಹಾಗೂ ಹಳೇ ಮತ್ತು ಹೊಸದರಲ್ಲಿ ಅದರ ಸಂಬಂಧ ಜಾರಿಯಲ್ಲಿರುವುದೆಂದರೆ ನಕಾರ ಅಕ್ಷರ "ನಕ್ಕೋ" ಅದು ನಃ, ನ, ನಯಿಂ ಮತ್ತು ನಾನಹೀಂ ಇತ್ಯಾದಿಗಳೊಡನೆ ಹೇರಳವಾಗಿ ಉಪಯೋಗಿಸಲ್ಪಡುತ್ತ ಬಂದಿದೆ. ಅಬ್ದುಲ್‌ನು ಈ ಅಕ್ಷರ ಇಬ್ರಾಹೀಮ ನಾಮಾದಲ್ಲಿ ಸಂಪೂರ್ಣವಾಗಿ ಬಳಸಲೇ ಇಲ್ಲ.[೩೬]

ಮೇಲೆ ಹೇಳಿದ ಎರಡು ಪ್ರಾರಂಭಿಕ ಭಿನ್ನಾಭಿಪ್ರಾಯಗಳು ಕೆಳಕಾಣಿಸಿದ ವಿಬಿನ್ನತೆಗಳೂ ಸಹ ಅಬ್ದುಲ್‌ನ ಭಾಷಾಶಾಸ್ತ್ರದ ಪರಕೀಯತೆಯ ಸಾಕ್ಷಿ ನೀಡುತ್ತದೆ. [ಇದರ ಇಂಡೋಆರ್ಯನ್ ಮೂಲದ ಬಗ್ಗೆ ಒಂದರಿಂದ ಜಾಸ್ತಿ ಅಭಿಪ್ರಾಯಗಳಿವೆ. ಕೆಳಗೆ ಎಲ್ಲಕ್ಕಿಂತ ದೃಢೀಕರಿತ ಒಂದು ಪದದಿಂದ ಬೇರೆ ಪದ ಮಾಡುವುದನ್ನು ನಮೂದಿಸಲಾಗಿದೆ.: ಸಂಸ್ಕೃತ: ನ ಖಲ್ – ಪ್ರಾಕೃತ್: ನಕ್ಖೊ ಮರಾಠಿ: ನಕ್ಕೊ, ದಕ್ನಿ:=ನಕ್ಕೊ– ಈ ನಕಾರ

ಶಬ್ದದ ಯಾವುದೇ ಉದಾಹರಣೆ ಉತ್ತರ ಭಾರತದ ನಾಡನುಡಿಯಲ್ಲೂ ಇಲ್ಲಿಯವರಿಗೂ ಸಿಕ್ಕಿಲ್ಲ. ದಕನಿ ಹಸ್ತಪ್ರತಿಯನ್ನು ಗುರುತಿಸಲು ಇದೊಂದು ಸದೃಢ ಸಾಕ್ಷಿ.]

೧) ದಕನಿಯ ಕ್ರಿಯಾಪದಗಳ ರೂಪಗಳು ಕರ್‍ಕೊ(ಕರ್ ಕೆ ಬದಲು) ಜಾಕೊ (ಜಾಕೆ ಬದಲು) ಇವುಗಳು ವಿಶೇಶವಾಗಿ 'ಖ಼ಿಸ್ಸಯೆ ಬೆನಜ಼ೀರ್' ರಲ್ಲಿ ಹೇರಳವಾಗಿವೆ, ಅಬ್ದುಲ್‌ನ ಭಾಷೆಯಲ್ಲಿ ಸಿಗುವುದಿಲ್ಲ.

೨) ಅಬ್ದುಲ್‌ನು ಪದ ಆಯೆ, ಜಾಯೆ ಬದಲಾಗಿ ಬಿರ್ಜ್ ಭಾಷೆಯ "ಆವೊ" ಜಾವೊ" ಉಪಯೋಗಿಸಿದ್ದಾನೆ.

೩) ಪದಗಳ ಉಪಾಯಗಳಿಂದ ಸಂಪರ್ಕದ ಉಚ್ಚಾಟನೆ ಹಳೆ ಉರ್ದುವಿನ ಸಾಮಾನ್ಯ ವಿಶೇಷತೆಯಾಗಿದೆ. ಅದು ದಕನಿನ ಬೇರೆ ಸಾಹಿತಿಗಳ ಬಳಿ ಸಿಗುತ್ತದೆ. ಆದರೆ ಅಬ್ದುಲ್‌ನು ಇಂತಹ ಉಪಾಯಗಳನ್ನು ಬಳಸಿದ್ದಾನೆಂದರೆ ಇವುಗಳ ಉದಾಹರಣೆ ಬೇರೆಯವರ ಬಳಿ ಸಿಗುವುದಿಲ್ಲ. ಉದಾಹರಣೆಗೆ: ಜ಼ಬಾನ್ ಗಂಜ್ (ಭಾಷೆಯ ಖಜಾನೆ),– ಚಿತ್ ಜನಾವರ್ (ಹೃದಯದ ಪಕ್ಷಿ), ಶಾಖ಼್ ಗ್ಯಾನ್ (ವಿದ್ಯೆಯ ಶಾಖೆ), ರಾತ್ ಪರ್ದಾ (ರಾತ್ರಿಯ ಪರದೆ), ಶಾಹ ತೇಜ಼ಿ (ಬಾದಶಾಹನ ಕುದುರೆ) ತಖ಼್ತ ಠಾವುಂ (ಸಿಂಹಾಸನದ ಜಾಗ, ರಾಜಧಾನಿ) ಭಂವರ್ ನಯನ್ (ನಯನದ ದುಂಬಿ) ಈ ಭಾಷಾಶಾಸ್ತ್ರದ ಸಾಕ್ಷಿಗಳ ಬೆಳಕಲ್ಲಿ ನಾವು ಊಹಿಸಬಹುದೇನೆಂದರೆ, ಅಬ್ದುಲ್‌ನು ಬಿಜಾಪುರದಲ್ಲಿ ಹೊಸದಾಗಿ ಆಗಮಿಸಿದ್ದ ಎಂದರೂ ತಪ್ಪು ಆಗಲಾರದು. ಈ ಆಧಾರಗಳಿಂದ ಫಲಿತಾಂಶ ದೊರೆಯುವು ದೇನೆಂದರೆ ಅಬ್ದುಲ್‌ನ ಹಿಂದವಿ(ದೆಹಲ್ವಿ) ಬಿಜಾಪುರದ ಆಸ್ಥಾನದಲ್ಲಿ ಭಾಷಾಶಾಸ್ತ್ರದ ಆಧಾರದಿಂದ ಸ್ವೀಕೃತ ಯೋಗ್ಯ. ಇದು ಈ ಮಾತಿನಿಂದಲೂ ಸಾಬೀತಾಗಿದೆ, ಅಂದರೆ ಮಹಾರಾಷ್ಟ್ರ ಮತ್ತು ಅದರ ದಕ್ಷಿಣದವರೆಗೂ, ದೆಹಲಿಯ ಸುತ್ತ ಮುತ್ತದ ಒಂದರಿಂದ ಅಧಿಕ ನಾಡನುಡಿಗಳವರಿಗೂ ಇದರ ಪ್ರಭಾವ ತಲುಪಿತ್ತು. ಅವುಗಳಲ್ಲಿ ಸಾಹಿತ್ಯದ ಭಾಷೆಗಳ ಅನುಸಾರ ಕೃಷ್ಣ ಭಕ್ತಿಯ ಭಾಷೆ ಬಿರ್ಜ್ ಭಾಷೆಯಾಗಿತ್ತು. ಜೋಗಿಗಳ ಸಂತರ ಭಾಷೆ 'ಸಧ್ಗಡಿ' ಖಡಿ ಬೋಲಿ. ಬಿಜಾಪುರ ಶಾಲೆಯ ಮೇಲೆ ಬಿರ್ಜ್ ಭಾಷೆಯ ಸಾಹಿತ್ಯದ ಸಂಪ್ರದಾಯದ ಹಿಡಿತವಿತ್ತು. ಇವುಗಳ ಉದಾಹರಣೆಗೆ ಶಾಹ ಮೀರಾಂಜಿ ಶಂಸುಲುಷ್ಷಾಖ಼್, ಶಾಹ ಬುರ್ಹಾನುದ್ದೀನ್ ಜಾನಂ (ಸುಖ಼್ ಸಹೇಲ) ಇಮ್ಮಡಿ ಇಬ್ರಾಹೀಮ ಆದಿಲ್‌ಶಾಹನ ಗೀತೆಗಳ ಸಂಕಲನದ ಭಾಷೆಯವರೆಗೆ ತಲಪುತ್ತದೆ. 'ಕಿತಾಬೆ ನೌರಸ್'ನಲ್ಲಿ ಬಿರ್ಜ್ ಮತ್ತು ಖಡಿ ಬೋಲಿಯ ಮಿಶ್ರಣ ಸಿಗುತ್ತದೆ. 'ಇಬ್ರಾಹೀಮ ನಾಮಾ'ದ ರೀತಿಯಲ್ಲಿ ಇದರಲ್ಲಿಯೂ ಸಹ (ಚ್) ಒತ್ತಾಯ ಅಕ್ಷರದ ಉಪಯೋಗ ಸಿಗುವುದಿಲ್ಲ, ಇಮ್ಮಡಿ ಇಬ್ರಾಹೀಮ ಆದಿಲ್‌ಶಾಹನ ಕಾಲದಲ್ಲಿ ಅಸಲಿಗೆ ಬಿಜಾಪುರ ಶಾಲೆಯಲ್ಲಿ ಅನೇಕ ನಾಡನುಡಿಗಳಲ್ಲಿ ಕಣ್ಣುಮುಚ್ಚಾಲೆ ಆಗುತ್ತಿತ್ತು. ಸ್ವತಃ ಬಿಜಾಪುರ ಪಟ್ಟಣ ಕನ್ನಡ ಪ್ರಾಂತದಲ್ಲಿದೆ ಅದರೆ ಈ ಪಟ್ಟಣದ ಮೇಲೆ ಹಳೇ ಕಾಲದಿಂದಲೂ ಮರಾಠಿ ಮತ್ತು ಮರಾಠರ ಪ್ರಭಾವ ಇದ್ದೇ ಇದೆ. ಮುಘ಼ಲ್ ರಾಯಭಾರಿ ಅಸದ್ ಬೇಗ್‌ನ ಸಾಕ್ಷಿಯಂತೆ

ಇಬ್ರಾಹೀಮ ತನ್ನ ಅನೇಕ ಆಸ್ಥಾನಿಕರೊಡನೆ ಮರಾಠಿಯಲ್ಲಿ ಸಂಕೋಚವಿಲ್ಲದೆ ಮಾತನಾಡುತ್ತಿದ್ದ.

ಸಾಹಿತ್ಯ ಮಟ್ಟದಲ್ಲಿ ಈ ಭಾಷಾಶಾಸ್ತ್ರದ ವೈವಿಧ್ಯತೆ ಇದ್ದರೂ ಸಹ ದಕನ್‌ನಲ್ಲಿ ಸಾಮಾನ್ಯ ಮಾತನಾಡುವ ಭಾಷೆ ಮತ್ತು ಸಂಪರ್ಕದ ಭಾಷೆಯ ಯೋಗ್ಯತೆಯಿಂದ ದೆಹಲ್ವಿ ಭಾಷೆಯ (ಅದು ಹಳೇ ಹರ್ಯಾನಿ ಮತ್ತು ಖಡಿ ಬೋಲಿಮೇಲೆ ಆಧಾರಿತ) ಸಾಮಾನ್ಯ ಚಲಾವಣೆ. ಬಹುಶಃ ಶಾಹ ಬುರ್ಹಾನುದ್ದೀನ್ ಜಾನಂನು 'ಸುಖ್ ಸಹೇಲ' ಬಿರ್ಜ್‌ನಲ್ಲಿ ಬರೆದಿದ್ದರೆ 'ಇರ್ಷಾದ್ ನಾಮಾ'ಗಾಗಿ ದೆಹಲ್ವಿ ಭಾಷೆ (ಅದನ್ನು ಅವರು ಗೋಜರಿ ಮತ್ತು ಹಿಂದವಿ ಹೆಸರಿನಿಂದ ಸ್ಮರಿಸುತ್ತಾರೆ) ಉಪಯೋಗಿಸಿದ್ದಾರೆ. ಅದಾಗ್ಯೂ ಸಂಗೀತ ಮತ್ತು ಗೀತೆಗಳಿಗೆ ಬಿರ್ಜ್ ಭಾಷೆ ನಿರ್ದಿಷ್ಟವಾಗಿದ್ದರೂ ಸಹ ಇಬ್ರಾಹೀಮನ 'ಕಿತಾಬೆ ನೌರಸ್' ವರೆಗೆ ಕೆಲವು ಗೀತೆಗಳು ಶುದ್ಧ ದಕನಿ ಉರ್ದುವಿನಲ್ಲಿವೆ. ಗೊಲ್ಕೊಂಡಶಾಲೆಯಲ್ಲಿ ಅಬ್ದುಲ್ಲಾ ಖುತುಬ್ ಶಾಹನ ಗೀತೆಗಳು ಇದರ ಪ್ರಸಿದ್ಧ ಉದಾಹರಣೆಗಳಾಗಿವೆ.

ಮೇಲೆ ಪ್ರಸ್ತಾಪಿಸಿದ ಹಿನ್ನೆಲೆಯಲ್ಲಿ ಅಬ್ದುಲ್‌ನ 'ಹಿಂದವಿ'ಯ ಸಮೀಕ್ಷೆ ಮಾಡುವುದಾದರೆ ಧ್ವನಿಶಾಸ್ತ್ರದ ಆಧಾರದಿಂದಾಗಲಿ ಮತ್ತು ವ್ಯಾಕರಣಾಧಾರಿತವಾಗಲಿ ತನ್ನ ಸಮಕಾಲೀನರ ಭಾಷೆಯಿಂದ ಅವನು ಬಹಳಷ್ಟು ಭಿನ್ನವೇನಲ್ಲ. ಇದರ ಎರಡು ಕಾರಣಗಳಾಗಬಹುದು. ಮೊದಲನೆಯದೆಂದರೆ ಬಹುಶಃ ಅಬ್ದುಲ್‌ನ ವ್ಯಾಸಂಗ ಬಿಜಾಪುರದಲ್ಲಿ ಆಗಿರಬಹುದು. ಎರಡನೆಯದೆಂದರೆ ಸ್ ೧೬೦೦ರ ಹತ್ತಿರ ಉತ್ತರ ಉರ್ದು ಮತ್ತು ದಕನಿ ಉರ್ದುವಿನಲ್ಲಿ ಗಣನೀಯ ಭೇದ ಪ್ರಸಿದ್ಧವಾಗಿಲ್ಲದಿರುತ್ತಿತ್ತು.

ಧ್ವನಿಶಾಸ್ತ್ರದ ವಿಶೇಷತೆಯ ಸಂಬಂಧದ ಬಗ್ಗೆ ಹೇಳುವುದಾದರೆ ಅಬ್ದುಲ್‌ನ ಭಾಷೆ ಮತ್ತು ಇತರೆ ಸಮಕಾಲೀನ ಲೇಖಕರ ದಕನಿ ಭಾಷೆಯಲ್ಲಿ ಯಾವುದೇ ವಿಶೇಷ ಭೇದ ಕಾಣಿಸುವುದಿಲ್ಲ.:

(ಅ) ಹಕಾರಿ ಉಚ್ಚಾರ: ಖೋಟ್ (ಕೋಟ್) ಖೋ (ಕೋ) ಖಯಾ (ಕಹಾ) ಅರ್ಹಥ್ (ಅರ್ಥ್)=ಅರ್ಥ

(ಆ) ಹಕಾರೇತ ಉಚ್ಚಾರ: ಬಾಂಥ್ (ಬಾಂಧ್ನಾ) ಚಡ್ನ (ಚಢ್ನಾ) ಇತ್ಯಾದಿ.

(ಇ) ಅನ್ಫಿ (ಮೂಗಿನಿಂದ ಹೊರಡುವ) ಉಚ್ಚಾರ: ಕಾಂ (ಕ) ಕುಂ–ತುಂ–ಪೀತೀಂ (ಪೀತೆ)

(ಈ) ಅನ್ಫಿ ರಹಿತ: ಚಾರೊ (ಚಾರೋ=ನಾಲ್ವರು)–ಕಿರ್ನಾ (ಕಿರ್ನಾ = ಕಿರಣ) – (ಉಂಗ್ಲಿಯ(ಉಂಗ್ಲಿಯಾ=ಬೆರಳುಗಳು)– ಝಾಡು (ಝಾಡೋ =ಮರಗಳು) ಚೌಸ್ಥ್ (ಚೌಸಠ್=ಅರವತ್ತುನಾಲ್ಕು)– ಸೊ (ಸು=ಇಂದ) ತಾರೊ(ತಾರೋ=ನಕ್ಷತ್ರಗಳು) ಢೂಡ್ನಾ (ಢೂಂಡ್ನಾ=ಹುಡುಕುವುದು) – ಅಗನ್ (ಆಗನ್=ಅಂಗಳ)

(ಉ) ಕಡಿತವಾದ ಶಬ್ದಗಳು: ಸಿರ್ಜ್(ಸೂರಜ್=ಸೂರ್ಯ), ಬಿಜ್ಜ್ (ಬೀಚ್=ಮಧ್ಯ), ಕಹ್ಕಷ್ (ಕಹ್ಕರ್ಶಾ=ಆಕಾಶಗಂಗೆ).

(ಊ)ಹೆಚ್ಚುವರಿಶಬ್ದಗಳು: ಜಾಲ್ನಾ(ಜಲ್ನಾ=ಹುರಿಯುವುದು) ಮೂರಝ್ (ಮುರಝ್=ನಾನು ನನ್ನದು) ಸಾಚ(ಸಚ್ಚಾ=ಸತ್ಯವಾದಿ) ಚಾಖ್ನಾ (ಚಖ್ನಿ = ರುಚಿನೋಡುವುದು) ಅಖಿಲ್(ಬುದ್ಧಿ) ಇಷ್ಕ್ (ಪ್ರೇಮ)

ಎಲ್ಲಿಯವರೆಗೆ ವ್ಯಂಜನಾಕ್ಷರಗಳ ಸಂಬಂಧವಿದೆಯೋ, ವಜ್ಹಿಯ ಖುತುಬ್ ಮುಷ್ತರಿಯ ಹಾಗೆ (ಖ಼ಾಫ಼್)ನ ಅಕ್ಷರ ಸಂಯೋಜನೆ (ಫ಼ೈನ್) ಅಂತೂ ಬರೆದಿಲ್ಲ. ಆದರೆ ಒಂದು ಜಾಗದಲ್ಲಿ 'ಲಗಾಂ' ಬದಲಾಗಿ[೩೭] 'ಲಘ಼ಾಮಿ' ಬರೆಯಲಾಗಿದೆ. (ಗಾಫ಼್)ನ (ಫ಼ೈನ್)ಗೆ ಬದಲಾಗುವುದು ದಕನಿ ಉರ್ದುವಿನ ವಿಶೇಷತೆ, ಹಾಗೂ ಉತ್ತರ ಭಾರತದ ನಾಡನುಡಿಯೂ ಸಹ, ಉದಾಹರಣೆ: ಉಘ಼ಾಲ್ದಾನ್ (ಉಗಾಲ್ದಾನ್), ಬೇಘ಼ಂ (ಬೇಗಂ), ಘ಼ುಂಡ (ಗೂಂಡ), ಘ಼ುಟರ್ ಘ಼ೂಂ (ಗುಡಗುಂ) ಇತ್ಯಾದಿ. ಇದೇ ರೀತಿ ಶ್ರವಣ ಪದಗಳ ಜೋಡನೆಯ ಅಶ್ರವಣದಲ್ಲಿ ಬದಲಾಗುವುದು. ಹಳೇ ಉರ್ದುವಿನ ಒಂದು ಸಾಮಾನ್ಯ ವಿಶೇಷತೆ, ಅದು ಅಬ್ದುಲ್ ಬಳಿಯೂ ಸಹ ಸಿಗುತ್ತದೆ ಉದಾಹರಣೆ: ಪ್ರಗಟ್ ಅಥವಾ ಪ್ರಕಟ್, ಲಾದ್ ಅಥವಾ ಲಾತ್. ಮತ್ತೆ ಇದೇ ರೀತಿ (ಪೆ) ಮತ್ತು (ಬೆ)ಗಳಿಂದ ಮಿಶ್ರಿತ ಕೆಲವು ಪದಗಳು.

ವ್ಯಂಜನಗಳ ಬಗ್ಗೆ ಒಂದು ಮುಖ್ಯವಾದ ಧ್ವನಿ ವಿಶೇಷತೆಯ ಸರಿಯಾದ ನಿರ್ಣಯ ಬರಹಗಾರ[ಕಾತಿಬ್]ನ ಬರವಣಿಗೆಯ ಶೈಲಿಯ ಆಧಾರದ ಮೇಲೆ ಕಷ್ಟಕರವಾಗಿದೆ ಅದೇನೆಂದರೆ [ರೆ] ಮತ್ತು [ಡೆ] ಯ ಸಮಸ್ಯೆ. ಬರಹಗಾರ ಅನೇಕಸಲ [ರೆ] ಮತ್ತು [ಡೆ]ಯ ಬರವಣಿಗೆಯಲ್ಲಿ ಯಾವುದೆ ರೀತಿಯ ವ್ಯತಾಸ ಮಾಡುವುದಿಲ್ಲ, ಪರ್, ಪಡ್, ಝುಡ್ನಾ, ಝುರ್ನಾ ಒಂದೇ ಶೈಲಿಯಲ್ಲಿ ಬರೆಯತ್ತಾ ಹೋಗುತ್ತಾನೆ. ಕೆಲವೊಮ್ಮೆ ಅವನು [ಡೆ] ಗೆ [ರೆ] ಕೆಳಗೆ ಮೂರು ಚುಕ್ಕಿ ಇಟ್ಟು ಸಹ ಬರೆಯುತ್ತಾನೆ. ಆದ್ದರಿಂದ ಸಂಪಾದಕನಿಗೆ ಈ ಸಮಸ್ಯೆ ಚರ್ಚೆಯ ವಿಷಯವಾಗಿಯೇ ಉಳಿಯತ್ತದೆಂದರೆ ಅವನು [ಝುರ್]ಗೆ, ಅದು[ಪರ್] ಜೊತೆ ಪ್ರಾಸಪದ ಮಾಡಲಾಗಿದೆ [ಝುಡ್] ಓದುವುದೇ ಅಥವಾ [ಝುರ್]. ಒಮ್ಮೆ ಬಿರ್ಜ್ ಭಾಷೆಯ ಉಚ್ಚಾರ ಮುಂದಿಟ್ಟುಕೊಂಡರೆ [ರೆ] ಜೊತೆ ಉಚ್ಚರಿಸಬೇಕಾಗುತ್ತದೆ. ಮತ್ತೆ ಒಮ್ಮೆ ಖಡಿ ಬೋಲಿ ಮತ್ತು ಹರಿಯಾನಿ ನಾಡನುಡಿಯ ಉಚ್ಚಾರ ಮುಂದಿಟ್ಟುಕೊಂಡರೆ [ಡೆ] ಜೊತೆ. ಅಂದರೆ ಆ ಕಾಲದಲ್ಲಿ ಈ ಎಲ್ಲಾ ನೆರೆಹೊರೆ ನಾಡುನುಡಿಗಳ ಉಚ್ಚಾರದ ಪ್ರಭಾವ ಉರ್ದು ಉಚ್ಚಾರದ ಮೇಲೆ ಬೀಳುತ್ತಿದ್ದುದರಿಂದ ಲೇಖಕನ ಮುಂದೆ ಯಾವ ಉಚ್ಚಾರವಿತ್ತೆಂದು ಹೇಳುವುದು ಕಷ್ಟ. ಹಳೇ ಉರ್ದುವಿನ ಪ್ರಾಸಪದಗಳಲ್ಲಿರುವ ಈ ಗಡಿಬಿಡಿಯಿಂದಲೇ ಹಾತಿಂರವರು ತನ್ನ 'ದೀವಾನ ಜ಼ಾದೆ'ಯ ಮುನ್ನುಡಿಯಲ್ಲಿ [ರೆ]ಯಿಂದ ಮುಗಿಯುವ ಅಕ್ಷರಗಳ[ಡೆ]ಯಿಂದ ಮುಗಿಯುವ ಅಕ್ಷರಗಳ ಜೊತೆಯಲ್ಲ ಪ್ರಾಸ ಮಾಡುವುದು ಅಕ್ರಮವಲ್ಲ ಎಂದು ಬರೆದಿದ್ದರು.

ಕೆಳಕಂಡ ನಾಮಪದಗಳು ಆ ಕಾಲದ ಲೇಖಕರು ಜಾನಂ, ವಜ್ಹಿ, ಮತ್ತು ಸನತಿ ಮೊದಲಾದವರು ಅಬ್ದುಲ್‌ನ ಜೊತೆ ಸೇರಿಕೊಂಡು ಉಪಯೋಗಿಸಿದ್ದಾರೆ.

ಆಂಬ್. ಅಂಝು, ಜಿಗ್ನಿ (ಜುಗ್ನು=ಮಿಂಚುಹುಳ), ದಸನ್ (ದಾ್ತ್=ದಂತ), ಧರ್ತ್ (ಧರ್ತಿ=ಭೂಮಿ) ದೀಸ್(ದಿನ್=ದಿನ), ಡೋಂಗರ್(ಪಹಾಡ್=ಪರ್ವತ), ಗಗನ್ (ಗಗನ=ಆಕಾಶ) ಢಿಗ್ (ಢೇರ್=ರಾಶಿ,ಹೇರಳ,ಗುಟ್ಟೆ), ಪೋಗ್ಡಾ (ಲಡ್ಕಾ= ಬಾಲಕ), ಪುದಕ್ (ಕಂಠ ಮಾಲೆ), ನವಾ(ನಯಾ=ಹೊಸದು), ನೀರ್ (ಪಾನಿ=ನೀರು), ಕಾಲವಾ (ನಾಲೆ=ಕಾಲ್ವೆ), ಅಪಾರ್(ಬೆ ಹದ್=ಮಿತಿಮೀರಿದ), ಜನಾವರ್(ಜಾನ್ವರ್=ಪಶು), ಝಾಡ್(ದರಖ್ತ್=ಮರ) ಕಹ್ಕಷ್ (ಕಹ್ಕಶಾಂ= ಆಕಾಶಗಂಗೆ) ನಾವೊ(ನಾಮ್=ಹೆಸರು), ಪಾನ್(ಎಲೆ) ಸೂರ್ (ಸೂರಜ್= ಸೂರ್ಯ) ಪ್ರಕಟ್(ಜ಼ಾಹಿರ್=ಪ್ರಕಟ) ನಿಸ್(ರಾತ್=ರಾತ್ರಿ).

ಅಬ್ದುಲ್‌ನು ಸಾಮಾನ್ಯವಾಗಿ ದಕನಿ ಉರ್ದುವಿನದೇ ನಾಮಪದ ಸರ್ವನಾಮ ಉಪಯೋಗಿಸಿದ್ದಾನೆ. ಆದರೆ ಬಿರ್ಜ್ ಭಾಷೆಯ ಒಂದು ಸರ್ವನಾಮ 'ಕು' ಅರ್ಥದಲ್ಲಿ 'ಕೊಯಿ'ಯನ್ನು ಹೇರಳವಾಗಿ ಉಪಯೋಗಿಸುತ್ತಾನೆ, ಅದು ಅವನ ಸಮಕಾಲೀನ ಲೇಖಕರಲ್ಲಿ ಕಾಣಿಸುವುದಿಲ್ಲ. ಅಬ್ದುಲ್‌ನು ಅನ್ಯ ಸರ್ವನಾಮಗಳು ಉಪಯೋಗಿಸಿರುವುದು ಹೀಗಿವೆ. ಮುಝ್, ಮೂಝ್(ನನ್ನದು), ತೂ, ತುಝ್(ನಿನ್ನದು) ಹಮನ್(ನಾವು), ಅಪಸ್(ತನ್ನತಾನೆ), ತುಮ್ಹನ್, ತುಮಃ (ತುಮ್=ನೀನು) ಉನ್ಹನಃ(ವೊಹ್ ನ ಬಹುವಚನ), ಯು (ಇದು) ನಾಮಪದ ಬಹುವಚನ: ಅದಾಗ್ಯೂ ದಕನಿ ಉರ್ದು[ಅಲಿಫ಼್+ನೂನೆ ಘುನ್ನ=ಅ]ಯ ಬಹುವಚನದ[ವೊಹ್]ದ ಬಹುವಚನಕ್ಕೆ ಆದ್ಯತೆ ನೀಡುತ್ತದೆ. ಅದಾಗ್ಯೂ (ವೊಹ್)ನ ಉಪಯೋಗ ದಕನ್‌ನಲ್ಲಿ ಸಿಗುವುದಿಲ್ಲ ಎಂಬುವುದು ತಪ್ಪು ಕಲ್ಪನೆ. ಅಫ಼್ಜ಼ಲ್‌ನ ನೌಸರ್ಹಾರ್‌ನಿಂದ ವಜ್ಹಿಯ ಸಬ್ರಸ್‌ವರಿಗೂ ಸುಮಾರು ಎಲ್ಲಾ ಲೇಖಕರು[ವಹ್]ನ ಬಹುವಚನ ಉಪಯೋಗಿಸಿದ್ದಾರೆ. ಆದರೂ ಈ ಉಪಯೋಗ [ಅ] ನ ಎದುರಾಗಿ ಯಾವಾಗಲೂ ವಿರಳವಾಗಿದೆ. [ಅ] ನ ಬಹುವಚನದ ಮೂಲ ಹರಿಯಾನಿ ಹಾಗೂ ಖಡೀ ನಾಡನುಡಿಗಳು ಇವು ಅಲ್ಲಿ, ಇಲ್ಲಿಯವರಿಗೂ ಪ್ರಚಲಿತವಾಗಿವೆ. ದೆಹಲಿಯ ಹಳೇ ಕವಿಗಳಲ್ಲಿ ಇವುಗಳ ಉದಾಹರಣೆಗಳು ಅಪರೂಪವಾಗಿ ಸಿಗುತ್ತವೆ, ದೆಹಲಿಯ ಆಡು ಮಾತುಗಳಲ್ಲಿ ಈ ವಿಶೇಷ ರೀತಿಗಳು ಹಾಗೂ ಭಾಷಾ ರೀತಿಗೆ ತಕ್ಕ ಬಳಕೆ ಇಂದು ಸಹ ಕೇಳಿಬರುತ್ತದೆ. ಅಬ್ದುಲ್‌ನು ಎರಡೂ ರೀತಿಯಲ್ಲಿ ಬಹುವಚನ ಉಪಯೋಗಿಸಿದ್ದಾನೆ, ಕೆಲವೊಮ್ಮೆ ಒಂದೇ ದ್ವಿಪದಿಯಲ್ಲಿ ಅಥವಾ ಹತ್ತಿರದ ದ್ವಿಪದಿಗಳಲ್ಲಿ (ನೋಡಿ ಮೇಖ್(ಮೊಳೆ)ನ ಬಹುವಚನ ಮೇಖ಼ಾ ಮತ್ತು ಮೇಖೋ, (ಕ್ರಮವಾಗಿ ದ್ವಿಪದಿಗಳ ಸಂಖ್ಯೆ ೪೪೩ ಮತ್ತು ೪೪೭ರಲ್ಲಿ). ಒಟ್ಟಾರೆ ಹೇಳುವುದಾದರೆ ಅಬ್ದುಲ್‌ನು [ಒಹ್]ನ ಬಹುವಚನದ ತನ್ನ ಸಮಕಾಲೀನ ಲೇಖಕರ ಎದುರಾಗಿ ಅಧಿಕವಾಗಿ ಉಪಯೋಗಿಸಿದ್ದಾನೆ. [ಅ]ನ ಬಹುವಚನ ಒಂದು ರೀತಿಯ ಚಾವಿಯಹಾಗೆ, ಯಾವ ಲೇಖಕನ ಪೂರ್ವಜರು ಉತ್ತರಭಾರತದ ಯಾವ ಭಾಗದಿಂದ ಬಂದಿರುವುದಕ್ಕೆ ಆಧಾರವಾಗುತ್ತದೆ. [ಅ]ನ

ಸಮರ್ಥನೆ ಪಂಜಾಬಿ, ಹರಿಯಾನಿ ಹಾಗೂ ದೊಆಬ (ಎರಡು ನದಿಗಳ) ಖಡಿಯಿಂದ ಆಗುತ್ತದೆ.

ದಖನಿಯ ವಿಶೇಷ ಕ್ರಿಯಾಪದಗಳ (ಅಫ್‌ಆಲ್) ಉಪಯೋಗದಲ್ಲಿ ಮೇಲೆ ಪ್ರಸ್ತಾಪಿತ ಲೇಖಕರು ಮತ್ತು ಅಬ್ದುಲ್‌ನ ಭಾಷೆಯಲ್ಲಿ ಪಾಲುದಾರಿಕೆ ಸಿಗುತ್ತದೆ. ಅಹೆ(ಅಬ್ದುಲ್ ಬಳಿ ಅತ್ಯಲ್ಪ), ಅತ್ಥಾ (ಅಬ್ದುಲ್ ಬಳಿ ಅತ್ಯಲ್ಪ),ಸಪಡ್ನಾ (ಅಬ್ದುಲ್ ಬಳಿ ಅತ್ಯಲ್ಪ), ಸಟ್ನಾ(ಎಸೆಯುವುದು)ಥಾನ, ಸರ್ನಾ, ನಪಾನ, ಫಾಲ್ನಾ, ಸಂಜ್ನಾ (ಶೇಖರಿಸುವುದು).

ಕನಿಷ್ಠ ಒಂದೇ ಒಂದು ಕ್ರಿಯೆ ಎಂಥದೆಂದರೆ ಅದರ ಉದಾಹರಣೆ ಇಲ್ಲಿಯವರೆಗೂ ಬೇರೆ ಯಾವುದೇ ದಕನಿ ಲೇಖಕರಲ್ಲಿ ಸಿಗುವುದಿಲ್ಲ. ಅಬ್ದುಲ್‌ನು ಫ಼ಾರ್ಸಿಯ ಗುಣವಾಚಕ 'ನಮೂದನ್' ನಿಂದ ಉರ್ದು ಕ್ರಿಯಪದ 'ನಮಾನ' ಪ್ರಕಟಿಸುವುದು, ತೋರಿಸಿವುದು ಅರ್ಥದಲ್ಲಿ ಮಾಡಿದ್ದಾನೆ ಹಾಗೂ ಹೇರಳವಾಗಿ ಬಳಸಿದ್ದಾನೆ.

ಅಬ್ದುಲ್‌ನು ಕ್ರಿಯಾಪದ ಚಿನ್ಹೆ 'ಸೀ'ಯೂ ಸಹ ಬಳಸಿದ್ದಾನೆ ಆದರೆ ವಿರಳವಾಗಿ, ಉದಾಹರಣೆ: ದಮಾಮಿಯೊಂ ಧಮಕ್ ಸುನ ನ ರಹ್ ಸೀ ಸಂಭಾಲ್(೪೩೩)

ಅಬ್ದುಲ್‌ನ ಭಾಷೆಯ ಮೇಲೆ ಬಿರ್ಜ್ ಭಾಷೆಯ ಪ್ರಭಾವ:

ದಕನಿ ಉರ್ದುವಿನ ಹಾಸು ಹೊಕ್ಕಾಗಿ ಬಿರ್ಜ್‌ಭಾಷೆಯ ನೆಯ್ಗೆಯ ಉದ್ದನೂಲು ಹದಿನೇಳನೇ ಶತಮಾನದ ಮೊದಲನೆಯ ಇಪ್ಪತ್ತೈದು ವರ್ಷಗಳವರೆಗೆ ಚೆನ್ನಾಗಿ ಕೂಡಿತ್ತು. ಅಬ್ದುಲ್‌ನ ಭಾಷೆಯೂ ಇದರಿಂದ ಮುಕ್ತವಾಗಿಲ್ಲ. ಭವಿಷ್ಯತ್‌ಕಾಲದ ಕ್ರಿಯೆಗಳ ವ್ಯಾಕರಣಗಳಲ್ಲಿ ಅಬ್ದುಲ್ [ಗಾ,ಗಿ,ಗೆ]ಯ ರೂಪಗಳಲ್ಲದೆ ಬಿರ್ಜ್‌ನ [ಹೆ]ಯಿಂದ ಮಿಶ್ರಿತ ಕಾಲಸೂಚಕ ವ್ಯಾಕರಣದ ರೂಪಗಳನ್ನು ಸಹ ಅಲ್ಲಲ್ಲಿ ಬಳಸುತ್ತಾನೆ ಉದಾಹರಣೆ:

೧) ಜೊ ಲಗ್ ತುಮ್ ನ ದೇಖಿಯೋ ಶಃಕಾ ದೀದಾರ್ (೪೮೮)

೨) ಮುಯೆ ಝೂಡ್ ಜೀವೇಂ ತೊ ದೇಖಯೆಂ ದೀದಾರ್ (೪೯೧)

ಈ ಪಂಕ್ತಿಗಳಲ್ಲಿ ದೆಖಿಯೋ= ದೇಖೋಗೆ(ನೋಡಲಿದ್ದೀರಿ) ಮತ್ತು ದೇಖಯೆಂ=ದೇಖೇಂಗೆ (ನೋಡಿದರೆ), ಇದೇ ರೀತಿಯಾಗಿ 'ಮಿಲಾ' ಮತ್ತು 'ಮಿಲೆ'ಗಳಿಗಾಗಿ ಬಿರ್ಜ್ ಭಾಷೆಯಲ್ಲಿ 'ಮಿಲೊ'ಯ ರೂಪ ಸಿಗುತ್ತದೆ. ಅಬ್ದುಲ್ ಸಹ ಈ ರೂಪ ಬಳಸಿದ್ದಾನೆ :

ಬಿದ್ಯಾವಂತ್, ಜಿತಾ ಲೋಕ್ ಆಲಂ ಮಂಝೂರ್
ಮಿಲೊ ಆಯೆ ಕರ್ ಬಾರ್‌ಗಃ ಶಹೆ ತಿಲ್ಹಾರ್ (೫೭೧)

ಬಿರ್ಜ್‌ನ ಮತ್ತೊಂದು ರೂಪ ಅದು ಅಬ್ದುಲ್ ಹೇರಳವಾಗಿ ಬಳಸಿರುವುದೆಂದರೆ ಆವೊ (ಆಯೆ ಅಥವ ಆವೇ, ಬದಲಾಗಿ), ಬಜಾವ್(ಬಜಾಯೆ ಅಥವಾ ಬಜಾವೆ, ಬದಲಾಗಿ)

ಮಿಲ್ಯಾ ಝೂಡ್ ಲಷ್ಕರ್ ಹರೆಕ್ ಜಿನಸ್ ಆವೊ(೫೨೩)
ಸತರ್ ಬಾಂಧ್ ಅರ್ವಾಹ್ ಪಕ್ಕಿ ಖಲಾವೊ(೧೦)
ಅಗರ್ ಹಾಥ್ ಧರ್ ಕುಛ್ ಜೊ ಬಾಜೆ ಬಜಾವೊ(೨೮೦)

ಅಬ್ದುಲ್‌ನು ದಕನಿಯ ಅನ್ಯ ಲೇಖಕರ ಹಾಗೆ ಕೆಲವು ಸಲ ಬಿರ್ಜ್ ಭಾಷೆಯ ಗುಣವಾಚಕಗಳನ್ನೂ ಸಹ ಬಳಸಿದ್ದಾನೆ. ಉದಾಹರಣೆ: ಖೇಲನ್(೪೧೩) ಇತ್ಯಾದಿ.

ಎಲ್ಲಿಯವರೆಗೆ ಪದಗಳ ಸಂಬಂಧವಿದೆಯೋ ಅನ್ಯ ಲೇಖಕರ ಹಾಗೆ ಲಯೆ(ಬಹುತ್=ಜಾಸ್ತಿ) ಹೌರ್, ಜುರ್ಮ್(ಹಮೇಶ=ನಿತ್ಯ), ಸತಿ(ಸೆ=ಇಂದ) ಇತ್ಯಾದಿಗಳು ನಿಸ್ಸಂಕೋಚವಾಗಿ ಬಳಸುತ್ತಾನೆ. ಆದರೂ ಅವನು 'ಸೊ'(ಸೆ)ಗೆ 'ಸೂರ್' ಅಥವಾ 'ಸೀರ್' ಬದಲಾಗಿ ಅಧಿಕವಾಗಿ ಬಳಕೆಯಲ್ಲಿ ತಂದಿದ್ದಾನೆ.

ಮೇಲ್ಕಂಡ ಪ್ರಸ್ತಾಪಿತ ಭಾಷಾಶಾಸ್ತ್ರದ ವಿಶ್ಲೇಷಣೆಯ ಪ್ರಕಾರ ಅಬ್ದುಲ್‌ನು ದೆಹಲ್ವಿ ಆಗುವ ಸಾಕ್ಷಿಗಳು ದೊರೆಯತ್ತವೆ. ಅವನ ಭಾಷೆಯ ಮೇಲೆ ಬಿರ್ಜ್ ಭಾಷೆಯ ಪ್ರಭಾವ, ದಕನಿಯ ಕೆಲವು ಮುಖ್ಯ ಅಕ್ಷರ(ನಕ್ಕೊ, ಚ್ ಒತ್ತಾಯ ಅಕ್ಷರ ಇತ್ಯಾದಿ)ಯ ಇಲ್ಲದಿರುವಿಕೆ, [ವೊರ್]ಯ ಬಹುವಚನ[ಅರ್]ನ ಜೊತೆಜೊತೆಗೆ ಹೇರಳ ಉಪಯೋಗ, ಇವೆಲ್ಲ ಕವಿ ಹೊಸದಾಗಿ ಆಗಮಿಸಿರುವುದರ ಬಗ್ಗೆ ಸಾಕ್ಷಿ ನೀಡುತ್ತಿದೆ. ಆದರೆ ಅಬ್ದುಲ್ ಮತ್ತು ಸಮಕಾಲೀನ ಲೇಖಕರ ನಿಘಂಟು ಮತ್ತು ವ್ಯಾಕರಣದ ರೂಪಗಳ ಅಸಾಧ್ಯ ಜೋಡಣೆ; ಅವನ 'ನಾರಿಯಲ್' ಗೆ (ತೆಂಗಿನ ಕಾಯಿ) 'ನಾಲೇರ್' ಎಂದು ಬರೆಯುವುದು ಅದು ಇಲ್ಲಿಯವರಿಗೂ ಗುಜರಾತಿ ಭಾಷೆಯ ಸನದುಧಾರಿ ಪದವಾಗಿದೆ ಮತ್ತು ನಿಘಂಟನಲ್ಲೂ ಸಿಗುತ್ತದೆ, ಈ ಮಾತನ್ನು ಸಾಬೀತು ಪಡೆಸುವುದೇನೆಂದರೆ ಈ 'ದೆಹಲ್ವಿ'ಗೆ ದಕ್ಷಿಣ ಭೂಮಿಯಲ್ಲಿ ತಂಗಿದ್ದು ಬಹಳ ಕಾಲ ಕಳೆದಿರಬಹುದು, ಅವನು ಇಲ್ಲಿ ಹೊಸದಾಗಿ ಆಗಮಿಸಿರುವವನಲ್ಲ, ಅದಾಗ್ಯೂ ಅವನ ತಂದೆ ತಾಯಿಯರು ಬಿಜಾಪುರದಲ್ಲಿ ಬಂದು ವಾಸವಾಗಿರಬೇಕು ಹಾಗೂ ಅವನು ಇಲ್ಲೇ ಹುಟ್ಟಿರಬಹುದು, ಅಥವಾ ಬಾಲ್ಯದಲ್ಲಿ ಅವನು ತನ್ನ ತಂದೆ ತಾಯಿಯರೊಡನೆ ಇಲ್ಲಿ ಬಂದಿರಬಹುದು.

ಇಬ್ರಾಹೀಮನಾಮಾದ ಕೃತಿ ರಚನೆಯ ತಾರೀಖು :

ಇಬ್ರಾಹೀಂ ನಾಮಾದ ಎರಡು ಕೈಬರಹ ಪ್ರತಿಯ ಅಂತ್ಯದಲ್ಲಿ ಕವಿ ಕೃತಿರಚನೆಯ ದಿನಾಂಕವನ್ನು ಈ ಪದಗಳಲ್ಲಿ ವರ್ಣಿಸಿದ್ದಾನೆ:

ಬಚನ್ ಘೂಲ್ ಗೂರ್ದ್ ಯೂರ್ ಇಬ್ರಾಹೀಮ್ ನಾಮ್
ಕಿಯಾ ಸಹಸ್ ಪರ್ ಬರಸ್ ಬಾರ ತಮಾಮ್

ಈ ರೀತಿಯಾಗಿ 'ಇಬ್ರಾಹೀಮ ನಾಮೆ'ಯ ಕೃತಿ ರಚನೆಯ ವರ್ಷ ಸ್ರ ೧೦೧೨ಹಿಜರಿ ನಿಶ್ಚಯವಾಗುತ್ತದೆ. ನಸೀರುದ್ದೀನ್ ಹಾಷ್ಮಿ, ಡಾ.ಜೋರ್. ಡಾ.ನಜೀರ್ ಅಹ್ಮದ್ ಮತ್ತು

ಅನ್ಯ ಸಂಶೋಧಕರು ಇದನ್ನು ಹಿಜರಿ ಸನ್ ಎಂದು ಊಹಿಸಿದ್ದಾರೆ, ಇದರ ಈಸ್ವಿ ಸನ್ ೧೬೦೩/೪ ಬರುತ್ತದೆ. ಬಹುಶಃ ಈ ಸಂಶೋಧಕರ ದೃಷ್ಟಿ ಮಸ್ನವಿಯ ಕೊನೆ ಶೀರ್ಷಿಕೆ ಮೇಲೆ ಬೀಳದಿರಬಹುದು, ಅದು ಎರಡು ಪ್ರತಿಗಳಲ್ಲಿ ಈ ರೀತಿಯಾಗಿದೆ: "ದರ್ ತವಾರೀಖೆ ಖತ್ಮೆ ಕಿತಾಬ್ ಇಬ್ರಾಹೀಮ ಶಹೂರ್ ಸ್ ೧೦೧೨".[೩೮] ಈ ಸನೆ ಶಹೂರಿಗೆ ಹಿಜರಿ ಸ್‌ನಲ್ಲಿ ಬದಲಾಯಿಸಿದ ನಂತರ ಇಸವಿ ಸ್ ತೆಗೆದರೆ ೧೬೧೧/೧೨ ಬರುತ್ತದೆ ಮತ್ತೆ ಅದೇ 'ಇಬ್ರಾಹೀಂ ನಾಮಾ' ರಚನೆಯಾಗಿರುವ ಸ್ ಆಗಿದೆ.

'ಇಬ್ರಾಹೀಂ ನಾಮಾ'ದ (೧೦೨೦-೨೧ಹಿಜರಿ/ಪ್ರಕಾರ೧೬೧೧-೧೨) ಕೃತಿ ರಚನೆಯಾಗಿರುವುದನ್ನು ಕೆಳಕಂಡ ಒಳ ಸಾಕ್ಷಿಗಳಿಂದಲೂ ಸಾಬೀತಾಗುತ್ತದೆ.

೧) ಬಿಜಾಪುರದ ಹೆಸರು ವಿದ್ಯಾಪುರವೆಂದು ೧೦೧೨ಹಿ/೧೬೦೩-೪ ಇಸವಿಯಲ್ಲಿ ಇಡಲಾಗಿತ್ತು. ಅಬ್ದುಲ್‌ನು ಬಿದ್ಯಾಪುರ ಅಥವಾ ಬಿದ್ಯಾ ಬಳಸಿದ್ದಾನೆ, ಆದರೆ ಇದು ಬಿಜಾಪುರದ ಮತ್ತೊಂದು ಹೆಸರೆಂದು ನಿಷ್ಠ ರೀತಿಯಲ್ಲಿ ಬರೆಯುತ್ತಾನೆ. ಇದರ ಅರ್ಥವೆಂದರೆ ಅಲ್ಲಿಯವರೆಗೆ ನಗರದ ಈ ಎರಡೂ ಹೆಸರುಗಳು ಪ್ರಚಲಿತವಿರಬಹುದು. "ದರ್ ತಅರೀಫೆ ಶಹರೆ ಬಿಜಾಪುರ್ ಗೋಯದ್" ಶೀರ್ಷಿಕೆ ಕೆಳಭಾಗದಲ್ಲಿ ಬರೆಯತ್ತಾನೆ.

ಸುನೋಂ ಅಬ್ ಸಿಫ಼ತ್ ಶಃ ರಹನ್ ತಖ಼ತ್ ಠಾರ್ವೊ
ವಿದ್ಯಾಪುರ್ ನಗರ್ ಹೈ ಭಿ ಉಸ್ಕಾ ಜೊ ನಾರ್ವೊ

ಇಬ್ರಾಹೀಂ ನಾಮಾದ ರಚನೆಯವರೆಗೆ ಈ ಹೆಸರು ಪ್ರಚಲಿತವಾಗಿ ಸುಮಾರು ಏಳು(೭) ವರ್ಷಗಳ ಕಾಲವಾಗಿತ್ತು ಮತ್ತು ಇದು ತುಂಬ ಪ್ರಸಿದ್ಧವಾಗಿತ್ತು.

೨) ನೌರಸಪುರದ ಬುನಾದಿ ಹಿಜರಿ ೧೦೦೮/೧೫೯೯-೧೬೦೦ ಇಸವಿಯಲ್ಲಿ ಇಡಲಾಗಿತ್ತು. ಬಹುಶಃ ಇಬ್ರಾಹೀಮ ನಾಮಾದ ರಚನೆಯ ವರ್ಷ ಸ್ ಹಿಜರಿ ೧೦೧೨/ ೧೬೦೨-೩ ಇಸವಿ ಒಪ್ಪಿಕೊಂಡರೂ, ಹೊಸ ನಗರ ಮತ್ತು ಅದರ ನಿರ್ಮಾಣ ಅಲ್ಲಿಯವರೆಗೂ ಮುಗಿದಿತ್ತೆಂದು ಸಹ ಒಪ್ಪಿಕೊಳ್ಳಬೇಕಾಗುತ್ತದೆ, ಏಕೆಂದರೆ ನೌರಸಪುರದ ವಿವರಗಳನ್ನು ತಿಳಿಸಲಾಗಿದೆ. ಆದರೆ ವಾಖೆಆತೆ ಮುಮ್ಲುಕತೆ ಬಿಜಾಪುರದವರ ಹೇಳಿಕೆಯಂತೆ, "ಈ ನಗರದ ತಯಾರಿಕೆಯಲ್ಲಿ ಸಡಲಿಕೆ ಇದ್ದಕ್ಕಿದ್ದಹಾಗೆ ಏಕೆ ಬಂದಿತೆಂದರೆ ಬಾದಶಾಹನಿಗೆ ಜೋತಿಷಿಗಳು ಹೇಳಿದರಂತೆ, ಬಿಜಾಪುರದಿಂದ ರಾಜಧಾನಿಯನ್ನು ಬದಲಿಸಿದರೆ ಅದು ಅಷ್ಟು ಸರಿಯಾಗದು, ಹಾಗೂ ಏನಾದರೂ ದೊಡ್ಡ ಅನಾಹುತ ಆಗೇ ಆಗುತ್ತದೆ.........[೩೯] ಆದ್ದರಿಂದ ಸನ್ ಹಿಜರಿ ೧೦೧೨ಗೆ ಕೃತಿ ರಚನೆಯ ವರ್ಷ ನಿಗದಿ ಪಡೆಸುವುದು ತಪ್ಪು. ಏಕೆಂದರೆ ಎರಡು ಹಸ್ತಲಿಪಿ ಪ್ರತಿಗಳ ಕೊನೆ ಶೀರ್ಷಿಕೆಯಲ್ಲಿ ನಮೂದಿಸಿರುವ ಈ ೧೦೧೨ ಸನೆ ಷಹೂರ್ ಆಗಿದೆ, ಆದ್ದರಿಂದ 'ಇಬ್ರಾಹೀಂ ನಾಮಾ'ದ ಕೃತಿರಚನೆ ಸನ್ ೧೦೨೦-೨೧ ಹಿಜರಿ/೧೬೧೧-೧೨ಇಸವಿ ನಿಶ್ಚಯವಾಗುತ್ತದೆ. ಇದರ ಪ್ರಕಾರ ಹಳೇ ಉರ್ದುವಿನ ಸಾಹಿತ್ಯದ ಮಸ್ನವಿಗಳಲ್ಲಿ ವಜ್ಹಿಯ ಖುತುಬ್ ಮುಷ್ತರಿ(ಸ್ ೧೦೧೮ ಹಿ/

ಕ್ರಿ ಶ ೧೬೮೯-೧೦)ಗೆ 'ಇಬ್ರಾಹೀಂ ನಾಮಾ'ದ ಮೇಲೆ ಎರಡು ವರ್ಷಗಳ ಮುಂದಾಣಿಕೆ ಸಿಕ್ಕಿದೆ.

ಇಬ್ರಾಹೀಮ ನಾಮಾದ ಹಸ್ತಪ್ರತಿಗಳು:

ಇಲ್ಲಿಯವರೆಗೆ 'ಇಬ್ರಾಹೀಂ ನಾಮಾ'ದ ಎರಡು ಹಸ್ತಪ್ರತಿಗಳು ಶೋಧನೆಯಾಗಿವೆ. ಇದರಲ್ಲಿ ಎಲ್ಲಕ್ಕಿಂತ ಹಳೇ ಪ್ರತಿ, ಇದರ ಆಧಾರದಮೇಲೆ ಪ್ರಸಕ್ತ ಗ್ರಂಥದ ಮುಖ್ಯ ವಿಷಯದ ಬುನಾದಿಯ ಮೇಲೆ ಇದೆ, ಕೆಲವು ಕಾಲ ಹಿಂದಿನವರೆಗೂ ಅವಂಧ್ ರಾಜ್ಯದ, ಮಹಾರಾಷ್ಟ್ರದ ಚೀಫ್ ಸಾಹೆಬರು ಪಂತ್ ಪ್ರತಿನಿಧಿಯವರ ಗ್ರಂಥಾಲಯದ ಅಲಂಕಾರವಾಗಿತ್ತು. ಕೆಲವು ವರ್ಷಗಳ ಮುನ್ನ ಇದು ಬಾಂಬೆಯಲ್ಲಿ ಆರ್ಕೀವ್ಸ ಅಯೆಂಡ್ ಹಿಸ್ಟಾರಿಕಲ್ ಮಾನುಮೆಂಟ್ಸ್ ಗೆ ವರ್ಗಾಯಿಸಲಾಯಿತು. ಈ ಪ್ರತಿಯ ಬಗ್ಗೆ ಮೊಟ್ಟ ಮೊದಲನೆಯದಾಗಿ ಒಂದು ಸಣ್ಣ ಪ್ರಬಂಧದ ಮೂಲಕ ಶ್ರೀ ಭಾಗವತ್ ದಯಾಲ್ ವರ್ಮಾರವರು ಪರಿಚಯ ಮಾಡಿಸಿದ್ದರು.[೪೦]

ಈ ಪ್ರತಿ ನಸ್ಖ ಕೈಬರಹದಲ್ಲಿದೆ. ಇದರ ಸಾಯಿಜ಼್ ೬"ಉದ್ದ, ೪" ಅಗಲವಾಗಿದೆ ಹಾಗೂ ಇದು ೮೩ ಹಾಳೆಗಳನ್ನು ಹೊಂದಿದೆ. ಪ್ರತಿ ಪುಟದಲ್ಲಿ ೯ ಸಾಲುಗಳಿವೆ. ಶೀರ್ಷಿಕೆ ಎದ್ದು ಕಾಣುವ ದಪ್ಪಅಕ್ಷರಗಳಿಂದ ಬರೆಯಲಾಗಿದೆ. ಬರವಣಿಗೆ ಶುದ್ದವಾದ ಹಾಗೂ ಪದಗಳ ಮೇಲೆ ಸ್ವರಚಿನ್ಹೆಗಳನ್ನು (ಹ್ರಸ್ವ, ದೀರ್ಘ) ಕೊಟ್ಟಿರುವುದರಿಂದ ಆ ಕಾಲದ ಬರವಣಿಗೆಯ ಆಧಾರದಂತೆ ವಿಶೇಷ ಕಾಳಜಿ ವಹಿಸಲಾಗಿದೆ. ಕೊನೆಯಲ್ಲಿ ಬರಹಗಾರ ತನ್ನ ಹೆಸರು ಸೈಯದ್ ಯೂಸುಫ಼್‌ರವರ ಮಗ ಸೈಯದ್ ಅಬ್ದುರ್ ರಹೀಂ ಎಂದು ಕೊಟ್ಟಿದ್ದಾನೆ. ಮುರಖ್ಖಾಯೆ ಆದಿಲ್ ಶಾಹಿಯಲ್ಲಿ ನಾಲ್ವರು ಬರಹಗಾರರ ಮಾದರಿಗಳು ಶಾಮಿಲಾಗಿವೆ ಅದರಲ್ಲಿ ಒಬ್ಬನ ಹೆಸರು ಯೂಸುಫ಼್ ಬ್ರಾಹೀಂ ಸಹ ಇದೆ.[೪೧]

ಸೈಯದ್ ಅಬ್ದುರ್ ರಹೀಂ ಇದೇ ಆಸ್ಥಾನ ಬರಹಗಾರನ ಮಗ. ಒಮ್ಮೆ ಅವನ ತಂದೆ ಯಾರೋ ಅಪ್ರಸಿದ್ಧ ಯೂಸುಫ಼್ ಆಗಿದ್ದರೆ ಅವನು ಬಹುಶಃ ತನ್ನ ಪಿತೃನಾಮವನ್ನು ಈ ರೀತಿಯಾಗಿ ಪ್ರಕಟನೆ ಮಾಡುತ್ತಿರಲಿಲ್ಲ. ಪ್ರತಿಯ ಕೊನೆಯಲ್ಲಿ ಬರವಣಿಗೆಯ ದಿನಾಂಕ ನಮೂದಿಸಿಲ್ಲ. ಆದರೆ ಒಮ್ಮೆ ಸೈಯದ್ ಅಬ್ದುರ್ ರಹೀಂನ ಮುರಖ್ಖಾ ಆದಿಲ್ ಶಾಹಿಯ ಯೂಸುಫನ ಮಗ ಎಂದು ಖಚಿತವಾದರೆ ಬರಹಗಾರ ಇಬ್ರಾಹೀಂ ಆದಿಲ್ ಶಾಹನ ಕಾಲದಿಂದ ಸಂಬಂಧ ಇಟ್ಟಿರುತ್ತಾನೆ ಹಾಗೂ ಬಹುಶಃ ಈ ಪ್ರತಿ ಬಾದಶಾಹನ ಆಜ್ಞೆಯ ಮೇರೆಗೆ ತಯಾರಿಸಿರಬಹುದು. ಈ ಪ್ರತಿಯ ಬರವಣಿಗೆಯ ಮುಖ್ಯವಾದ ವಿಶೇಷತೆಗಳು ಹೀಗಿವೆ:

೧) ಪೂರ್ತಿ ಪ್ರತಿಯಲ್ಲಿ ಸ್ವರಚಿನ್ಹೆಗಳು(ಹ್ರಸ್ವ, ದೀರ್ಘ) ಕೊಡಲಾಗಿದೆ. ಇದು ದಕನಿ ಉರ್ದುವಿನ ಬಹಳ ಹಳೇ ಹಸ್ತಪ್ರತಿಗಳ ಸಾಮಾನ್ಯ ಪದಗಳ ಜೋಡಣೆಯ ಶೈಲಿ. ('ಕಿತಾಬೆ ನೌರಸ್', 'ಖುತುಬ್ ಮುಷ್ತರಿ', 'ಕುಲ್ಲಿಯಾತೆ ಮುಹಮ್ಮದ್ ಖುತುಬ್ ಶಾಹ' ಹಸ್ತಪ್ರತಿಗಳನ್ನು ನೋಡಿ)

೨) ಸ್ವರಚಿನ್ಹೆಗಳ ಸಂಬಂಧದಲ್ಲಿ 'ಇಬ್ರಾಹೀಂ ನಾಮಾ'ದ ಈ ವಿಶೇಷತೆ ಪ್ರಸ್ತಾಪಾರ್ಹ ಅಂದರೆ ಪದಗಳ ಅಂತ್ಯ ಹ್ರಸ್ವಾಕ್ಷರ(ಸಾಕಿನ್)ವಲ್ಲ ಇದರ ವಿರುದ್ಧವಾಗಿ 'ಅ'ಕಾರ (ಫ಼ತಹ=ಜ಼ಬರ್) ಜೋಡಿಸಿ ಚಲಿಸುವ ಹಾಗೆ ಬರೆಯಲಾಗಿದೆ. ಉದಾಹರಣೆ: ತೂರ್ನ= ತೂನ, ಖೋಲ್=ಖೋಲ, ಬೂಂದ್=ಬೂಂದ. ಬಹುಶಃ ಇದು ದೇವನಾಗರಿ (ಅಥವಾ ಮರಾಠಿ) ಅಕ್ಷರಜೋಡನೆಯ ಅನುಸರಣೆಯಲ್ಲಿ ಮಾಡಲಾಗಿದೆ. ಅದರಲ್ಲಿ ಅಂತ್ಯದಲ್ಲಿ ಹ್ರಸ್ವಾಕ್ಷರದ ಕಲ್ಪನೆ ಸಿಗುವುದಿಲ್ಲ ಏಕೆಂದರೆ ಕ,ಚ,ತ ಇತ್ಯಾದಿ ಸಂಸ್ಕೃತದ ಅಕ್ಷರಜೋಡಣೆ ಶೈಲಿಯ ಸಂಪ್ರದಾಯದಲ್ಲಿ ಚಲಿಸುವ ಶಬ್ದಗಳಿರುತ್ತವೆ, ಕೆಲವೊಮ್ಮೆ ಬರಹಗಾರನೂ ತಪ್ಪು ಸ್ವರಚಿಹ್ನೆಗಳನ್ನು ಸಹ ಅಂಟಿಸುವುದುಂಟು ಅದರಿಂದ ಪದ ಪ್ರಾಸದಿಂದ ಬೇರ್ಪಡಿಸುವ ಹಾಗೆ ಮಾಡಲಾಗುತ್ತದೆ. ಉದಾಹರಣೆ: ರಹೆ ಕಹೊ ಇಷ್ಟ ಮೆ ಜಿ ಸೊ ಉನಃಕೆ ದ್ವಾರ್ (ಇಲ್ಲಿ ಸರಿಯಾದ ಅಕ್ಷರ ಜೋಡಣೆ ಇಷ್ಟ್, ಅದು ಪದ ಪ್ರಾಸಕ್ಕೆ ಹೋಲುತ್ತದೆ) ಅಥವಾ ಬೈಠೆ ದೊ ತರಫ಼್ ರಾಜ್ ಕರ್ ತಾಖ಼ ಹೊ (ಇಲ್ಲಿ ಸರಿ ಅಕ್ಷರ ಜೋಡನೆ ತರ್ರಫ಼್, ಅದು ಪದ ಪ್ರಾಸಕ್ಕೆ ಹೋಲುತ್ತದೆ.)

೩) ಗಾಫ಼್ ಮತ್ತು ಕಾಫ಼್ ಎರಡರಲ್ಲೂ ಬರಹಗಾರ ಒಂದೇ ಗೆರೆ ಕೊಡುತ್ತಾನೆ ಉದಾಹರಣೆ: ಕ್ಯಾನ (ಗ್ಯಾನ್),ಜಕತ್ (ಜಗತ್)

೪) [ಬೆ] ಮತ್ತು [ಪೆ] ಎರಡಕ್ಕೂ ತಪ್ಪು ತಪ್ಪಾಗಿ ಮಿಶ್ರಿಸಲಾಗಿದೆ. ಉದಾಹರಣೆ ಫಕ್ಡಿ (ಪಂಖಡಿ)ಗೆ ಭಕ್ಡಿ ಮತ್ತು ಫಿರಾಯೆಗೆ ಭರಾಯೆ ಬರೆದಿದ್ದಾನೆ. ಇದರ ಪ್ರತಿಯಾಗಿ ಭೋರ್ (ಭಂವ್ರಾ)ಗೆ ಫೋರ್ (ಪಂಕ್ತಿ೩) ಮತ್ತು ಭೇದ್ ಗೆ ಫೇದ್ ಬರೆದಿದ್ದಾನೆ (ಪಂಕ್ತಿ ೩೯)

೫) [ಡಾಲ್] ಮತ್ತು [ದಾಲ್] ಎರಡಕ್ಕೂ ಸಹ ಕೆಳಗೆ ಮೂರು ಚುಕ್ಕಿ ಕೊಟ್ಟು ಪ್ರಕಟಿಸುತ್ತಾನೆ. ಒಮ್ಮೊಮ್ಮೆ [ಡೆ]ಗೆ ಕೇವಲ[ರೆ] ಬರೆಯುತ್ತಾನೆ. ಹಳೇ ಉರ್ದು ಗ್ರಂಥದ ಮುಖ್ಯ ವಿಷಯದ ಸಂಬಂಧದಲ್ಲಿ ಈ ಸಮಸ್ಯೆ ಚರ್ಚೆಯಲ್ಲಿರುತ್ತೆ ಅಂದರೆ ಹಳೇ ಉರ್ದು ಎಲ್ಲಿಯವರೆಗೆ [ಡಾಲ್] [ಡೆ] ಮತ್ತು [ರೆ]ಗಳಲ್ಲಿ ತಾರತಮ್ಯ ಮಾಡುತ್ತದೆ. ದೆಹಲಿ ಸುತ್ತಮುತ್ತ ಅನೇಕ ನಾಡನುಡಿಗಳಲ್ಲಿ ಒಂದೇ ಪದ ಮೂರು ರೀತಿಯಲ್ಲಿ ಉಚ್ಚಾರವಾಗುತ್ತಲೇ ಇದೆ. ಆದ್ದರಿಂದ ಆ ಪದದಲ್ಲಿ [ಡಾಲ್] ಮತ್ತು ಆ ಪದದಲ್ಲಿ [ಡೆ ಅಥವಾ ರೆ] ಎಂದು ಸಾಬೀತು ಪಡೆಸಬೇಕಾದರೆ ನಾಡನುಡಿಗಳ ಸೂಕ್ಷ್ಮ ವ್ಯತ್ಯಾಸಗಳ ಮೇಲೆ ನಿಗಾ ಇಡಬೇಕಾಗುತ್ತದೆ. ಇಬ್ರಾಹೀಮನಾಮಾದಲ್ಲಿ ಉಚ್ಚಾರಗಳ ನಿರ್ಣಯದ ಈ ಸೂಕ್ಷ್ಮತೆಗಳು ಅನೇಕ ಜಾಗಗಳಲ್ಲಿ ಬರುತ್ತವೆ.

೬) [ಜೀಂ] ಹಾಗೂ[ಚೀಂ]ನ ವ್ಯತ್ಯಾಸವೂ ಸಹ ಬರಹಗಾರ ಅನೇಕ ಸಮಯಗಳಲ್ಲಿ ಕಡೆಗಾಣಿಸುತ್ತಾನೆ.

೭) ಪೇಶ್ ['ಅ' ಕಾರವನ್ನು 'ಉ' ಕಾರ ಮಾಡುವ ಚಿಹ್ನೆ] ಮತ್ತು ವಾವೆ ಮಜ್ಹೂಲ್

(ಈ ವಾವ್‌ದಿಂದ ನಿರ್ಮಿಸುವ ಅಕ್ಷರಗಳು ಹಳೇ ರೀತಿಯಲ್ಲೇ ಓದಲಾಗುತ್ತದೆ, ಉ: ಬೋಲ್, ತೋಲ್ ಝೋಲ್, ತೋಡ್), ಯಾಯೆ ಮಅರೂಫ್ (ಈ ವಾವ್‌ನಿಂದ ನಿರ್ಮಿಸುವ ಅಕ್ಷರಗಳ ಮೊದಲನೆಯ ಅಕ್ಷರ ಮೇಲೆ 'ಉ'ಕಾರ ಚಿಹ್ನೆ ಪೇಶ್ ಮತ್ತೆ ಮಧ್ಯೆ ಬರುವ ವಾವ್ ಗೆ ಉಲ್ಟಾ ಪೇಶ್(') ಕೊಡಲಾಗುತ್ತದೆ ಉದಾಹರಣೆ: ದೂರ್, ಜೂರ್, ಹೂರ್, ತೂಲ್, ನೂರ್ ಇತ್ಯಾದಿ), ಮತ್ತು ಯಾಯೆ ಮಜ್ಹೂಲ್(ಪದಗಳ ಮಧ್ಯೆಬರುವ ಯೆ ಉ: ತೇಲ್, ರೇತ್, ಖೇಲ್ ಇತ್ಯಾದಿ) ಮಿಶ್ರಣದ ಉದಾಹರಣೆಗಳಂತೂ ಪ್ರತಿಯೊಂದು ಪುಟದಲ್ಲಿ ಸಿಗುತ್ತದೆ. ಉದಾಹರಣೆ: ಮುಲ್ಕ್‌ಗೆ ಮೂಲಕ್ (ಶೆರಃ) ಬರೆಯಲಾಗಿದೆ.

'ಇಬ್ರಾಹೀಮ ನಾಮಾ'ದ ಮತ್ತೊಂದು ಹಸ್ತಪ್ರತಿ ಸಾಲಾರ್ ಜಂಗ್ ಲೈಬ್ರೆರಿ, ಹೈದ್ರಾಬಾದ್‌ನಲ್ಲಿ ಸುರಕ್ಷಿತವಾಗಿದೆ. ಇದರ ಕ್ರಮ ಸೂಚಿ ಅಂಕ ಜೇಂ ೧೦೦೧, ಇದು ೬೨ ಪುಟಗಳ ಆಧಾರಿತ, ಸಾಯಿಝ್ ೮"ಉದ್ದ, ೫"ಅಗಲ, ಪ್ರತಿ ಪುಟದಲ್ಲಿ ೧೨ ಸಾಲುಗಳಿವೆ. ಕಾಗದ ದೇಸಿ ಹೈದ್ರಾಬಾದಿ. ಈ ಹಸ್ತಪ್ರತಿಯ ಒಂದು ನಕಲು ಡಾ. ಜ಼ೋರ್‌ರವರು ತಾವೆ ಸ್ವತಃ ಮಾಡಿ, ಇದಾರಯೆ ಅದ್ಬಿಯಾತೆ ಉರ್ದು (ಹೈದ್ರಾಬಾದ್)ನ ಗ್ರಂಥಾಲಯದಲ್ಲಿ ಸಂರಕ್ಷಿಸಿದರು. ಅದನ್ನು ಯಥಾಸ್ಥಿತಿಯಲ್ಲಿ ಪ್ರಕಟಿಸುವ ಅಸಫಲ ಪ್ರಯತ್ನ ಸಹ ಮಾಡಿದ್ದರು. ಈ ಹಸ್ತಪ್ರತಿ ನಸ್ತಾಲೀಖ಼ ಬರಹದಲ್ಲಿದೆ, ಸುಮಾರು ನೂರು ನೂರಿಪ್ಪತ್ತೈದು ವರ್ಷಗಳ ಹಿಂದಿನ ಬರವಣಿಗೆ ಕಾಣುವುದಿಲ್ಲ, ಏಕೆಂದರೆ ಇದರಲ್ಲಿ ಉರ್ದುವಿನ ಕೂಝಶಬ್ದಗಳು (ಟೆ,ಡಾಲ್,ಡೆ ಇತ್ಯಾದಿ)ಗಳಿಗೆ ಹಳೇ ಮೂರು ಚುಕ್ಕಿ (?) ಅಲ್ಲದೆ ತೊಯ್ (?)ಯ ಚಿಹ್ನೆಯೂ ಸಹ ಸಿಗುತ್ತದೆ. ಕೂಝ ಶಬ್ದಗಳಗೆ ತೊಯ್‌ನ ಚಿಹ್ನೆ ಮೊಟ್ಟಮೊದಲಿಗೆ ಫ಼ೋರ್ಟ್ ವಿಲಿಯಂ ಕಾಲೇಜಿನ ಮುದ್ರಣದಿಂದ ಪ್ರಾರಂಭವಾಗಿತ್ತು. ಆದ್ದರಿಂದ ಈ ಹಸ್ತಪ್ರತಿಯು ಸ್ ೧೮೦೦ರ ನಂತರ ಬರೆಯಲಾಗಿದೆ ಎಂದು ಸಾಬೀತಾಗುತ್ತದೆ. ಜನಾಬ್ ಅಫ್ಸರ್ ಸಾಹೆಬರ (ಗ್ರಂಥಾಲಯ ಸಾಲಾರ್ ಜಂಗ್ ಮ್ಯುಝಿಯಂ) ಸಾಕ್ಷಿಯಂತೆ ಈ ಹಸ್ತ ಪ್ರತಿಯ ಕಾಗದ ಸ್ ೧೨೩೦ ಹಿ/೧೮೩೪ ಇಸ್ವಿ ಮಧ್ಯದಲ್ಲಿ ಹೈದ್ರಾಬಾದಿನಲ್ಲೇ ತಯಾರಿಸಿದೆ. ಈ ಸಾಕ್ಷಿಯಿಂದಲೂ ಫ಼ೋರ್ಟ್ ವಿಲಿಯಂ ಪ್ರಸಾರಾಂಗದ ಪ್ರಕಟಣೆಗಳು ಪ್ರಸಿದ್ಧವಾದ ನಂತರ ಇದರ ಬರವಣಿಗೆ ಎಂದು ಸಾಬೀತಾಗುತ್ತದೆ. ಬರಹಗಾರನು ನಿಪುಣಕಾಲದಿಂದ ಸಂಬಂಧ ಪಟ್ಟಿರುವನು ಅಂದರೆ [ತೊಯೆ) ಚಿಹ್ನೆ ಕೂಝ್ ಶಬ್ದಗಳಿಗೆ ಇನ್ನೂ ಪ್ರಸಿದ್ಧವಾಗಿರಲಿಲ್ಲ ಮತ್ತು ಮೂರು ಚುಕ್ಕಿಯ ಚಿನ್ಹೆ ಇನ್ನೂ ಸಂಪೂರ್ಣವಾಗಿ ತ್ಯಜಿಸರಿಲಿಲ್ಲವಾದ್ದರಿಂದ ಅವನು ಕೆಲವು ಜಾಗಗಳಲ್ಲಿ ಬಹುಶಃ ಓದುವವನ ಬುದ್ಧಿಚಾತುರ್ಯ ಭರವಸೆ ಮಾಡಿ ಎರಡೂ ಚಿನ್ಹೆಗಳ ಒಂದೇ ಪದದ ಮೇಲೆ ಒಂದೇ ಸಮಯ ಬಳಸಿದ್ದಾನೆ. ಉದಾಹರಣೆ: ಲೆಜಾ ಆರಿಫ಼ೋರ್ ಕಿ ದಿಖಾ ನಜ಼ರ್ ಹಾತ್ ಅಥವಾ ಪಡೆ ಝತ್ರ ಝುಡ್ ಡಾಢ್ ಸಿಯಾಹಿ ಭರ್ರಾ

ಅರ್ವಾಥ್ ಹಸ್ತಪ್ರತಿ (ಅ) ಮತ್ತು ಸಾಲಾರ್ ಜಂಗ್ ಹಸ್ತಪ್ರತಿ (ಸ) ಮೊದಲೇ ಹೇಳಿದ

ಹಾಗೆ ಬಹಳ ಅಂತರದಿಂದ ಬರಿಯಲಾಗಿದೆ. ಎರಡರ ಮಧ್ಯೆ ಸುಮಾರು ಇನ್ನೂರು ವರ್ಷಗಳ ಕಾಲ ಕಳೆದಿದೆ. ಗ್ರಂಥದ ಮುಖ್ಯ ವಿಷಯದ ಲೆಕ್ಕವಿಲ್ಲದಷ್ಟು ಒಡಕುಗಳಿಂದ ಈ ಮಾತು ಖಚಿತವಾಗಿ ಸಾಬೀತಾಗುವುದೇನೆಂದರೆ ಹಸ್ತಪ್ರತಿ(ಸ), ಹಸ್ತಪ್ರತಿ(ಅ)ನಿಂದ ನಕಲುಮಾಡಿಲ್ಲ, ಆದರೂ ಎರಡೂ ಪ್ರತಿಗಳಲ್ಲಿ ಹತ್ತಿರ ಸಂಬಂಧವಿದೆ. ಎರಡರಲ್ಲೂ ಹೊಂದಾಣಿಕೆಯ ಎಂತಹ ಅಂಶಗಳು ಸಿಗುತ್ತದೆಂದರೆ ಅದರ ಅಧಾರದ ಮೇಲೆ ನಾವು ಈ ನಿರ್ಧಾರಕ್ಕೆ ಬರಬಹುದೆಂದರೆ ಪ್ರತಿ(ಅ)ನ ಯಾವುದೋ ನಕಲಿನ ನಕಲೆಂದು ಹೇಳಬಹುದು. ಬಹುಶಃ ಮಧ್ಯದಲ್ಲಿ ಒಂದೇ ಕೊಂಡಿ ಇರಬಹುದು. ಅಥವಾ ಒಂದರಿಂದ ಜಾಸ್ತಿಯೂ ಇರಬಹುದು. ಇದರ ಬಗ್ಗೆ ಕೆಲವು ಕೆಳಕಂಡ ಕಾರ್ಯಗಳು ಗಮನಿಸಬೇಕಾಗಿದೆ.

೧) ಎರಡು ಪ್ರತಿಗಳಲ್ಲೂ ಒಂದೇ ದ್ವಿಪದಿ (ನಂ.೪೯)ರಲ್ಲಿ ಅಬ್ದುಲ್‌ನ ಇಮ್ಲಾ (ಅಕ್ಷರಜೋಡಣೆ) 'ಐನ್' ಬದಲಾಗಿ 'ಅ'ಅಕ್ಷರ ಬಳಸಲಾಗಿದೆ 'ಅಬ್ದುಲ್' ಬಾಕಿ ಎಲ್ಲಾಕಡೆ ಸರಿಯಾದ ಇಮ್ಲಾ ಸಿಗುತ್ತದೆ.

೨) ಎರಡೂ ಪ್ರತಿಗಳಲ್ಲಿ "ಗೆಸೂದರಾಜ಼್"ನ ಇಮ್ಲಾ "ಗಸ್ ಅದ್ದರಾಜ಼್" ಬರೆಯಲಾಗಿದೆ. ಅದಾಗ್ಯೂ ಎರಡರಲ್ಲೂ ಶೀರ್ಷಿಕೆಯಲ್ಲಿ ಸರಿಯಾದ ಇಮ್ಲಾ ಬರೆಯಲಾಗಿದೆ(ದ್ವಿಪದಿ ೬೧)

೩) ಎರಡೂ ಪ್ರತಿಗಳಲ್ಲಿ ದ್ವಿಪದಿ ನಂ ೧೦೦೦ದ ಎರಡನೆಯ ಪಂಕ್ತಿ ಒಂದೇ ರೀತಿಯ ತಪ್ಪು ಪದಬಂಧದಲ್ಲಿದೆ:

ತುರ್ಕ ಹರೇಕ್ ಜ಼ಬಾನ್ ಕರ್ ಶೆರ್ ತುರ್ಕ ಬಾತ್ ಕುರ್ಕ

೪) ದ್ವಿಪದಿ ನಂ ೧೨೩ ರಲ್ಲಿ ಎರಡೂ ಪ್ರತಿಗಳಲ್ಲಿ "ಘವಾಸ್"(ಸ್=ಸ್ವಾದ್)"ನ ಇಮ್ಲಾ ಘವಾಸ್(ಸ್=ಸೀನ್) ಬರೆಯಲಾಗಿದೆ.

ಈ ರೀತಿಯ ಉದಾಹರಣೆಗಳು ಹೆಚ್ಚುಕಡಿಮೆ ಎರಡು ಡಜ಼ನ್‌ಗಿಂತ ಜಾಸ್ತಿ ಇವೆ, ಇವುಗಳಿಂದ ಎರಡು ಪ್ರತಿಗಳ ಪರಸ್ಪರ ಸಂಬಂಧದ ಬಗ್ಗೆ ಬೆಳಕು ಬೀಳುತ್ತದೆ, ಬದಿಟಿಪ್ಪಣಿಯಲ್ಲಿ ಅಲ್ಲಲ್ಲಿ ಅವುಗಳನ್ನು ಪ್ರಸ್ತಾಪಿಸಲಾಗಿದೆ.

'ಇಬ್ರಾಹೀಂ ನಾಮಾ'ದ ಸಂಪಾದನೆ ಹಾಗೂ ಶೃಂಗರಿಸುವ ಕೆಲಸ, ಪ್ರೊ. ನಜೀಬ್ ಅಷ್ರಫ಼ಿ ನದವಿರವರು ಕಾಳಜಿವಹಿಸಿ ಮತ್ತು ತನ್ನ ವತಿಯಿಂದ ಅರ್ವಥ್ ಪ್ರತಿಯ ಫೋ಼ಟೋ, ಲಾಲ್ ಬೊಂಬಾಯಿ ಆರ್ಕೀವ್ಜ಼ನಿಂದ ಪಡೆಯದಿದ್ದರೆ ಈ ಕೆಲಸ ಪೂರ್ಣಗೊಳ್ಳುತ್ತಿರಲಿಲ್ಲ. ವೃದ್ಧಾಪ್ಯದಲ್ಲೂ ಯಾವ ಯುವಸಾಹಸ ಹಾಗೂ ಸಂತೋಷಮಯವಾಗಿ ನದ್ವಿಸಾಹೆಬರು ಜ್ಞಾನ ಹಾಗೂ ಸಂಶೋಧನೆಯ ಕೆಲಸದಲ್ಲಿ ಬೇರೆಯವರಿಗಾಗಿ ಜೀವದ ಹಂಗು ತೊರೆದು ಹೋರಾಡುತ್ತಾರೋ, ಅದು ಕೇವಲ ಹಿಂದಿನ ಕಾಲದ ಹಿರಿಯರಲ್ಲಿ ವಿಶೇಷವಾಗಿತ್ತು, ಇಲ್ಲದಿದ್ದರೆ ಇಂದು ಜ್ಞಾನ ಔದಾರ್ಯ ಮತ್ತು ಕೃತಜ್ಞತೆ ಎರಡೂ ಸಹ ತೀರ ಕಡಿಮೆ.

ನನ್ನ ವಿಭಾಗದ ಸಹೋದ್ಯೋಗಿ ಜ಼ೀನತ್ ಸಾಜಿದರವರಿಗೂ ನಾನು ಚಿರಋಣಿಯಾಗಿದ್ದೇನೆ ಅವರು ತಮ್ಮ ಬಳಿ ಇದ್ದ ಸಾಲಾರ್ ಜಂಗ್ ಲೈಬ್ರೆರಿ ಪ್ರತಿಯ ಸಂಪೂರ್ಣ ನಕಲು, ನಿರ್ದಾಕ್ಷಿಣ್ಯವಾಗಿ ನನಗೆ ನೀಡಿದರು, ಇದರಿಂದಾಗಿ ನನಗೆ ಪದೆ ಪದೆ ಲೈಬ್ರೆರಿಗೆ ಹೋಗುವ ಕಷ್ಟ ತಪ್ಪಿತು. ಹೀಗೆ ಸಮಯವೂ ಉಳಿಯಿತು. ಕೊನೆಯಲ್ಲಿ ಎಚ್‌ಇಎಚ್‌ವಿ ನಿಜ಼ಾಂ ಚಾರಿಟೆಬಲ್ ಟ್ರಸ್ಟ್‌ರವರ ಧನ ಸಹಾಯವಿಲ್ಲದಿದ್ದರೆ ಖದೀಂ ಉರ್ದುವಿನ ವಿಶೇಶ ಸಂಚಿಕೆಯಲ್ಲಿ ಹಿಂದಿನ ಸಂಪ್ರದಾಯದಂತೆ ಪ್ರಕಟಿಸಲು ಸಾಧ್ಯವಾಗುತ್ತಿರಲಿಲ್ಲ, ಇದೇ ಟ್ರಸ್ಟಿನ ಧನಸಹಾಯದಿಂದ ಖದೀಂ ಉರ್ದುವಿನ ಎರಡನೆ ಸಂಚಿಕೆಯು ಸಹ ಪ್ರಕಟವಾಗಿತ್ತು, ಪ್ರಸ್ತುತ ಸಂಚಿಕೆಯು ಸಹ ಅದರದೇ ಉಪಕೃತ. ನಾನು ಟ್ರಸ್ಟಿನ ಸದಸ್ಯರೆಲ್ಲರಿಗೂ ವಿಶೇಷವಾಗಿ ಅದರ ಸೆಕ್ರೆಟರಿ ದಿವಗಂತ ಸೈಯದ್ ಸಾಬಿರ್ ಅಲಿ ಹಾಷ್ಮಿರವರಿಗೆ ಕೃತಜ್ಞತೆಯನ್ನು ಅರ್ಪಿಸುತ್ತೇನೆ. ಅವರ ಸಿಫಾರಿಷ ಮತ್ತು ಜ್ಞಾನ ಪೋಷಣೆಯಿಂದಾಗಿ ಈ ಸಂಚಿಕೆ ಹೊರಬರಲು ಕಾರಣವಾಯಿತು. ಹಾಷ್ಮಿಸಾಹೇಬರಿಗೆ ದಿವಂಗತ ಎಂದು ಬರೆಯುವಾಗ ಲೇಖನಿ ಕಂಪಿಸುತ್ತಿದೆ, ಏಕೆಂದರೆ ಕೇವಲ ಇಪ್ಪತ್ತುನಾಲ್ಕು ಗಂಟೆಯ ಮುಂಚೆ ಅವರು ಆರೋಗ್ಯಕರ ಹಾಗೂ ಶಕ್ತಿಯ ಜೀವಂತ ಪುತ್ತಳಿಯಾಗಿದ್ದರು, ಅವರ ಆಕಸ್ಮಿಕ ಮರಣದಿಂದ ಖದೀಂ ಉರ್ದುವಿನ ಒಬ್ಬ ಸಂರಕ್ಷಕ ಹಾಗೂ ಉಪಕಾರಿಯನ್ನು ನಾವು ಕಳೆದು ಕೊಂಡಿದ್ದೇವೆ. ಅವರ ಮನಸಲ್ಲಿ ಖದೀಂ ಉರ್ದುವಿನ ಬಗ್ಗೆ ಅನೇಕ ಯೋಜನೆಗಳಿದ್ದವು, ಅವರು ತನ್ನ ಜೀವನದಲ್ಲಿ ಅವುಗಳನ್ನು ಕಾರ್ಯರೂಪಕ್ಕೆ ತರಲು ಸಾಧ್ಯವಾಗಲಿಲ್ಲದಿರುವುದು ವಿಷಾದಕರ ಸಂಗತಿ. ಖ಼ದೀಂ ಉರ್ದುವಿನ ಸಂಸ್ಥೆ ತನ್ನ ಉಪಕಾರಿಯವರ ಶೋಕದಲ್ಲಿ ದಿವಂಗತರ ಕುಟುಂಬ ಹಾಗೂ ಸಂಬಂಧಿಕರೊಡನೆ ಸರಿಸಮಾನವಾಗಿ ಭಾಗಿಯಾಗಿದೆ.

■

ಅಡಿಟಿಪ್ಪಣಿಗಳು :

೧. ದಕನ್ ಮೇ ಉರ್ದು (ಆರನೇ ಮುದ್ರಣ) ಪು ೧೯. ೧೯೬೩ ಮತ್ತು ಉರ್ದು ಹಸ್ತಪ್ರತಿಗಳ ವಿಸ್ತೀರ್ಣ ವಿಷಯಸೂಚಿ. (ಸಾಲಾರ್ ಜಂಗ್ ಲೈಬ್ರರಿ ಪು.೮೦೦

೨. ತಜ಼್ಕಿರ ಉರ್ದು ಮಖ಼ತೂತಾತ್ (ಸಂಪುಟ ೧) ಪು. ೨೬೬,

3. Zahuri; Life and works p.144 (1953)

೪. ಫರಿಶ್ತನ ಹೇಳಿಕೆಯಂತೆ ಮೊದಲನೇ ಸಲ ಪರ್ಶಿಯನ್ ವಿದ್ಯೆಯ ಕಡಗೆ ಇಬ್ರಾಹೀಮನ ಗಮನ ಶಾಹ್ನವಾಜ಼್ ಖ಼ಾನ್ ಮಂತ್ರಿಯು ೧೦೦೪/ಕ್ರಿ.ಶ. ೧೫೮೩ ಹಿಜರಿಯಲ್ಲಿ ಸೆಳೆದಿದ್ದನು, ಹಾಗೂ ಅದಕ್ಕಾಗಿ ಶಿಕ್ಷಕರನ್ನು ನೇಮಿಸಿದ್ದ. ಹೀಗಿದ್ದರೂ ಸಹ ಅಸದ್ ಬೇಗ್ ಕ್ರಿ.ಶ. ೧೬೦೦ ರಲ್ಲಿ ಮುಘಲ್ ರಾಯಭಾರಿಯಾಗಿ ಬಿಜಾಪುರಕ್ಕೆ ಹೋಗಿದ್ದನು. ಅವನು ಹೀಗೆ ಬರೆಯುತ್ತಾನೆ 'ಪರ್ಶಿಯನ್ ಚೆನ್ನಾಗಿ ತಿಳಿಯುತ್ತಿದ್ದ ಆದರೆ ಮಾತುಗಳಲ್ಲಿ ಉತ್ತರ ಕೊಡಲು ಬರುತ್ತಿರಲಿಲ್ಲ. ಸಾಧ್ಯವಾದಷ್ಟು ತೊದಲಿಸಿ ಮಾತನ್ನಾಡುತ್ತಿದ್ದ. (ವಖ಼ಾಯೆ ಅಸದ್ ಬೇಗ ಅಬ್ದುಲ್‌ಗೆ ಹಸ್ತಪ್ರತಿ ನಂ. ೨೬೦/ ೪೦ ಫ಼, ಅಬ್ದುಸ್ಸಲಾಂ ಕಲೆಕ್ಷನ್ ಮೌಲಾನ ಆಜ಼ಾದ್ ಲೈಬ್ರೆರಿ ಅಲಿಗಢ್)

೫. ಶೇಖ಼ ಖೂ ಮುಹಮ್ಮದ್ ಚಿಶ್ತಿರವರು 'ಅಮ್ವಾಜೆ ಖ಼ೂಬಿ' (ರಚನೆ ಕ್ರಿ.ಶ. ೧೫೫೩)ಯಲ್ಲಿ ಇದರ ಹಾಗೆಯೇ ಉಪಯೋಗಿಸಿದ್ದಾರೆ. ಜ್ವಿಂ ದಿಲ್ ಅರಬ್ ಅಜಂ ಕಿ ಬಾತ್ ಸುನ್ ಬೋಲೆ ಬೋಲಿ ಗುಜ್ರಾತ್.

೬. ಕಿತಾಬೆ ನೌರಸ್‌ನಲ್ಲಿ ಇದೇ ವಿಷಯವನ್ನು ಹೀಗೆ ಹೇಳಿದ್ದಾನೆ, ಭಾಕಾ ನ್ಯಾರಿ ನ್ಯಾರಿ, ಭಾವೊ ಏಕ್, ಕಹಾ ತುರ್ಕ್, ಕಹಾ ಬ್ರಾಹ್ಮಣ.

೭. 'ಇಬ್ರಾಹೀಂ ನಾಮಾ'ದಲ್ಲಿ ಬಚನ್ ಮತ್ತು ಅರ್ಥದ ಬಗ್ಗೆ ಇಬ್ರಾಹೀಮ ಏನು ಹೇಳಿದ್ದಾನೆಯೋ ಅದರ ಸಮೀಕ್ಷೆ ಪದ ಹಾಗೂ ಅರ್ಥದ ಚರ್ಚೆಯಾಗಿದೆ (ಸೆಹ್ ನಸರ್ ಜ಼ಹೂರಿ ಪು. ೧೭ ನವಲ್ಕಿಷೋರ್ ಎಡಿಷನ್)

೮. ಬಿಜಾಪುರ ವಿಜಯಪುರದ ತದ್ಭವ. ವಿಜಯದ ಅರ್ಥ ಜಯಗಳಿಸುವು ದೆಂದಾಗುತ್ತದೆ. ಇದೇ ರೀತಿಯಾಗಿ ಬಿದ್ಯಾಪುರ, ವಿದ್ಯಾಪುರದ ತದ್ಭವ. ವಿದ್ಯೆಯೆಂದರೆ ವಿದ್ಯೆ ಮತ್ತು ಕಲೆ. ಅಬ್ದುಲನು ಬಿಜಾಪುರ ಪಟ್ಟಣದ ಉಪಾಯ ಪುರ ಬಿದ್ಯಾಪುರ ನಗರವೆಂದು ಬಳಸಿದ್ದಾನೆ ಅಸಲಿಗೆ ಪುರ ಮತ್ತು ನಗರ ಒಂದೇ ಅರ್ಥಕೊಡುವ ಶಬ್ದಗಳು...... ಒಂದು ಕಡೆ ಕೇವಲ "ಬಿದ್ಯಾ"ಎಂಬ ಹೆಸರಿಂದಲೂ ಸ್ಮರಿಸಿದ್ದಾನೆ. ಬಿದ್ಯಾ, ಬಿದ್ಯಾದ ಹಕಾರ ರೂಪ ಅದು ಹಳೇ

೯. ನೋಡಿ: ಸೆಹ ನಸರ್ ಅಧ್ಯಾಯ ಏಳು(೭) "ಸೂರತೆ ಜ಼ೇಬಾ ವ ತಲತ ಜಹಾಂಆರಾ" ಮತ್ತು ಅಧ್ಯಾಯ ಎಂಟು(೮) ಸೀರತೆ ಪಸಂದೀದ ವ ಅತಾರೆ ಬರ್ಗಜ಼ೀದ) ಉರ್ದುವಿನ ಉಚ್ಚಾರಕ್ಕೆ ಸರಿಯಾಗಿದೆ.

೧೦. ಇಬ್ರಾಹೀಮನ ಮುಖದ ಮೃದುವಾದ ರೋಮದ ಪ್ರಸ್ತಾಪದಿಂದ ತಿಳಿಯುದೇನೆಂದರೆ, ಅವನಿಗೆ ಇಲ್ಲಿಯವರೆಗೂ ಕರಿಕೂದಲೇ ಇತ್ತು. ಏಕೆಂದರೆ ೯ ನೇ ವರ್ಷದಲ್ಲೇ ಕ್ರಿ ಶ ೧೫೮೦ ರಲ್ಲಿ ಗದ್ದಿಗೆ ಏರಿದ್ದ. ಇಬ್ರಾಹೀಮ ನಾಮದ ರಚನೆ ೧೬೧೧/೧೨ರಲ್ಲಿಯಾಗಿದೆ. ಆದ್ದರಿಂದ ಅವನ ವಯಸ್ಸು ಈ ಕೃತಿರಚನೆಯ ಸಮಯದಲ್ಲಿ ೩೯ ವರ್ಷವಿರಬಹುದು.

೧೧. ಕಿತಾಬೆ ನೌರಸ್ ಪು. ೧೪.

೧೨. (ಸೆಹ ನಸರ್, ೩೭-೩೮)

೧೩. ಶಾಹ್ ಆಲಂ ಪನಾಹ್‌ರವರ ವಾರ್ಷಿಕೋತ್ಸವ ಪ್ರಸ್ತಾಪಿಸುತ್ತಾ ಅಬ್ದುಲ್ ಬರೆಯುತ್ತಾನೆ. ಈ ಸಂದರ್ಭದಲ್ಲಿ ಕಹೀಂ ಮಿಲ್ ಖ಼ವ್ವಾಲ್ ಥಾಡಿ ಸೊ ಆಯೆ ನೌರಸ್, ಬುಧ್ ಪ್ರಕಾಸ್ ಗಾವೇಂ ಉಘಾಯೆ

೧೪. ಡಾ. ನಜ಼ೀರ್ ಅಹಮದ್‌ರವರು 'ಕಿತಾಬೆ ನೌರಸ್' ಸಂಪಾದಿಸಿ ಪ್ರಕಟಿಸಿದ ನಂತರ ಮತ್ತಷ್ಟು ಗೀತೆಗಳು ದೊರಕಿವೆ.

೧೫. ಹೊಸ ಸಂಶೋಧನೆಯ ಪ್ರಕಾರ 'ಬುಧ್ ಪ್ರಕಾಶ್' ತಾನ್‌ಸೇನನ ಒಂದು ಕೃತಿ ಹೆಸರು ಅದನ್ನು ಹಕೀಂ ಮುಹಮ್ಮದ್ ಅಫ್‌ಜ಼ಾನಿರವರು ಇದಕ್ಕೆ ಪರ್ಷಿಯನ್ ಉಡುಪನ್ನು ಕೊಟ್ಟಿದ್ದರು (ಮಜ಼ಾಮೀನೆ ಆಸಿಫ಼ಾ ಜ಼ಮಾನಿ ಲಖ್ನವೊ ೧೯೯೨.

16. (Gazetteer Bombay presidency Vol xxIII p. 424, 1884)

೧೭. ಇಬ್ರಾಹೀಮ್ ನಾಮದಲ್ಲಿ 'ದರ್ ತರೀಫ಼ೆ ಅರಾಬ ವ ಬಯಾನೆ ಹಿಸಾರ್ ವ ಮಹಲ್' ಎಂಬ ಶೀರ್ಷಿಕೆಯ ಅಡಿಯಲ್ಲಿ ಬಿಜಾಪುರದ ನಗರ ಸುತ್ತಿದ ಗೋಡೆ ಮತ್ತು ಅರಕ್ ಖಿಲ್ಲಾದ ಅರಮನೆಗಳ ಪ್ರಸ್ತಾವನೆ ಬಂದಿದೆ. ಪದ ಅರಾಬ ಈ ಕೃತಿಯಲ್ಲಿ ಎರಡು ರೀತಿಯಲ್ಲಿ ೧.ಅಈನ್ ೨.ಅಲಿಫ಼್ ಗಳೊಡನೆ ಬರೆಯಲಾಗಿದೆ. ಆದ್ದರಿಂದ ಈ ಪದದ ಸ್ವಾಸ್ಥ್ಯ ಮತ್ತು ವಿವರಣೆ ಅವಶ್ಯವಿದೆ. ಅಈನ್ ನಿಂದ ಅರಾಬ ಮೇಲ್ಕಂಡ ಶೀರ್ಷಿಕೆಯಲ್ಲಿ ನಮೂದಿಸಿದೆ. ಇದರ ವಿರುದ್ಧವಾಗಿ ಅಲಿಫ಼್ ನಿಂದ ಅರಾಬ ದ್ವಿಪದಿ ೨೩೫,೨೩೭,೨೪೪ ಮತ್ತು ೩೪೦ ರಲ್ಲಿ ನಿರಂತರವಾಗಿ ಬಂದಿದೆ.

ಅರಾಬ ಅಥವಾ ಅರಾಬ ಅಬ್ದುಲ್‌ನು ಅಪ್ಪಟ ದಖನಿ ಉರ್ದುವಿನ ಅರ್ಥದಲ್ಲಿ ನಗರಸುತ್ತಿದ ಗೋಡೆಗಳ ಜಗಲಿ ಅಥವ ಕಟ್ಟೆ/ಅಡ್ಡೆಗಳಿಗಾಗಿ ಉಪಯೋಗಿಸಿದ್ದಾನೆ. ಅವು ತೋಪುಗಳು ಮತ್ತು ಮ್ಯಾಗಜ಼ೈನ್ ಇತ್ಯಾದಿಗಳಿಗೆ ಉಪಯೋಗಿಸಲ್ಪಡ ಲಾಗುತ್ತಿತ್ತು. ಅರಾಬದ ನಿಘಂಟದ ಅರ್ಥ ದ್ವಿಯ್ಯ ಚಕ್ರದಗಾಡಿ. "ಗರ್ದೂಂ ಚೋಬೆ ಕೆ ಬರ್ಆ ಬಾರ್ ಕುನಂದ್" (ಬಹಾರೆ ಅಜಂ). ನಂತರ ತೋಪ್ಗಾಡಿಯ ಅರ್ಥವೂ ಆಯಿತು. (forbs, plates, stengas) ಮೊದಲ ಅಲಿ ಆದಿಲಶಾಹನ ಕಾಲದ ಒಂದು ಶಿಲಾಶಾಸನ (ಶಿಲಾಲೇಖನ ದರೀಚ ಸಾಡ್ವಾಡ್ ದೊಡ್ಡಿ) ೯೭೭ನೇ ಹಿಜರಿಯಲ್ಲಿ ಈ ಪದ ಇದೇ ಅರ್ಥದಲ್ಲಿ ಉಪಯೋಗಿಸಲಾಗಿದೆ.

ಈ ಪದ ಅಲಿಫ಼್ ಮತ್ತು ಅಈನ್ ಎರಡರಿಂದಲೂ ಬರೆಯಲ್ಪಡುತ್ತದೆ. ಅರಾಬ ಪದದ ವಿವರಣೆ ಬಹಾರೆ ಅಜಂನವರು ಹೀಗೆ ಮಾಡಿದ್ದಾರೆ: "ಬಜ಼ೆ ದರ್ ರಸ್ಮೆ ಅರಾಬ ಬ ಅಈನ್ ನವೀಸಂದ್ ವ ಈಂ ಘಲತೆ ಆಂಅಸ್ತ್ ವ ಸಹೀ ಅರಾದ ಬ ಅಈನ್ ವ ದಾಲ್ ಮುಹ್ಮಿಲ್ತ್‌ಆ."

೧೮. Bombay gazette p.568. ವಾಖಿಆತೆ ಮುಮಲಿಕತೆ ಬಿಜಾಪುರ್ (ಭಾಗ ೨) ಪು. ೮

೧೯. Bombay gazette p.568 to 584.

೨೦. ಸಾತ್ ಖನ್ (ಸಪ್ತ ಖನ್)ನಿನ ಪ್ರಸ್ತಾವನೆ ಕಿತಾಬೆ ನೌರಸಿನ ಗೀತೆ ಸಂಖ್ಯೆ ೪೧ರಲ್ಲೂ ಸಹ ಬಂದಿದೆ.

೨೧. Bombay gazetter p. 585.

೨೨. ಹವಾಯೆ ಕಜ್ದ ಆಬೆ ಹ್ಯವಾ್ ಚಕದ್ (ಸೆಹ್ ನಸರ್ ಜ಼ಹೂರಿ ಪು. ೬೪.)

೨೩. Eliot and Down son (vi 103- 104)

೨೪. ಅಗರ್ ಅಕ್ಸೀರ್‌ಸರ್ ದರ್ಸೂರ್ ಸಾಜ಼ಂದ್ ಜ಼ೆ ಖಾಕೆ ಪಾಕ್ ಬಿಜಾಪೂರ್ ಸಾಜ಼ಂದ್ (ಸೆಹ್ ನಸರ್ ಜ಼ಹೂರಿ ಪು. ೯)

೨೫. ಸಿಹ್ ಚಷ್ಮೆ ಸಬ್ಜಾನೆ ರಂಗೀನ್ ನಿಗಾ ಬಶೋಎ ನಮಕ್ ಅಜ಼್ ಶಕರ್ ಬಾಘ಼ ಖ್ವಾಹ್ ಬದಿಲ್ ಅಜ಼್ ದೀದ ಪೈಘಾಂ ದೆಹ್ ಪುರ್ ಅಜ಼್ ಬೊಸ ಲಬ್ವಾಯೆ ದುಷ್ನಾಂ ದೆಹ್ (ಸೆಹ್ ನಸರ್ ಪು.೬೨–೬೩)

೨೬. ವಾಖೆಆತೆ ಮಮ್ಲಿಕತೆ ಬಿಜಾಪುರ್ ಭಾಗ ೧–ಪು.೨೦೮–೨೦೯

೨೭. ಕಿತಾಬೆ ನೌರಸ್ ಪುರ್.೯೯ – ೧೯೫೫

೨೮. ಸೆಹ್ ನಸರ್ ಜ಼ಹೂರಿ: ಜ಼ಹೂರಿ ಗದ್ಯ ಮೂರು, ಪು.೬೦–೬೪

೨೯. ಫ಼ರೋನಿ ಅಸ್ತರಾಬಾದಿ: ಫ಼ುತೂಹಾತೆ ಆದಿಲ್ ಶಾಹಿ. ಪು.೧೫೭. ಉಲ್ಲೇಖ ಜ಼ಹೂರಿ– ಲಾಯಿಫ಼್ ಅಯೆಂಡ್ ವರ್ಕಸ್. ಡಾ. ನಜ಼ೀರ್ ಅಹ್ಮದ್.

೩೦. ಜ಼ಹೂರಿ ಗದ್ಯ ಮೂರರಲ್ಲಿ ನೌರಸ್ಪುರದ ಬಗ್ಗೆ ಅನೇಕ ಪುಟಗಳನ್ನು ಬರೆದಿದ್ದಾನೆ ಆದರೆ ನೌರಸ್ ಮಹಲಿನ ವಿವರಣೆ ನೀಡಿಲ್ಲ.

೩೧. ಇತಿಹಾಸಕಾರರು ಇಬ್ರಾಹೀಮನ ಸೈನ್ಯದ ಸಂಖ್ಯೆ ೫೨ ಸಾವಿರ ಸವಾರಿ ಸೈನ್ಯ, ಒಂದು ಲಕ್ಷ ಅಹ್ಷಾಂ= ಸೇವಕರು ಮಾಲೀಕನ ವಹಿಸಿಕೊಂಡು ಕೋಪ ಮಾಡುವವರು ಹಾಗೂ ಯುದ್ಧಮಾಡುವವರು) = (ಪ್ಯಾದೆ ಸಿಪಾಯಿಗಳು) ಹಾಗೂ ೯೫೫ ಆನೆಗಳು ಎಂದಿದ್ದಾರೆ. (ವಾಖಿಆತೆ ಮುಮ್ಲಿಕತೆ ಬಿಜಾಪುರ್, ಭಾಗ ೧ ಪು.೨೨೬). ಅಬ್ದುಲ್ ಸಹ ಇದರ ಸಾಕ್ಷಿ ನೀಡಿದ್ದಾನೆ.

೩೨. ಖ಼ುತುಬ್ ಮುಷ್ತರಿ ಪು.೧೫

೩೩. ಖಿಸ್ಸಯೆ ಬೆ ನಜ಼ೀರ್. ಸಂಪಾದಕರು ಅಬ್ದುಲ್ ಖಾದರ್ ಸರ್ವರಿ

೩೪. ಕಿತಾಬೆ ನೌರಸ್

೩೫. ಮರಾಠಿಯಲ್ಲಿ ಈ ಅಂತ್ಯಪ್ರತ್ಯಯ (ಚ) (ಚಿ) ಹಾಗೂ(ಚೀ) ಮೂರು ರೂಪದಲ್ಲಿ ಸಿಗುತ್ತದೆ ಇದರ ಮೂಲಸ್ವರೂಪ ಹೀಗಿದೆ ಸಂಸ್ಕೃತ=ಚ ಇ+ಯು: ಚಯು: ಪ್ರಾಕೃತ್:ಚಿ+ಅ–ಚ್–ಚ

ಈ ಅಂತ್ಯ ಪ್ರತ್ಯಯದ ಉಪಯೋಗ ಇಲ್ಲಿಯವರಿಗೂ ಉತ್ತರ ಭಾರತದಲ್ಲಿ ಯಾವುದೇ ಆಡುಭಾಷೆಯಲ್ಲಿ ಸಿಗಲಿಲ್ಲದಂತಹದು ಆದರೆ ವರ್ತಮಾನದಲ್ಲಿ ಡಾ.ಮಾತಾ ಪ್ರಸಾದ್ ಗುಪ್ತರವರು ೧೬ನೇ ಶತಮಾದ ಪ್ರಾರಂಭದ ಒಂದು ಹಿಂದಿ ಕಾವ್ಯ ಕೃತಿ 'ಕುತುಬ್ ಶತಕ್' ಸಂಪಾದಿಸಿ ಪ್ರಕಟಿಸಿದ್ದಾರೆ.ಅದರಲ್ಲಿ (ಚೀಂ) ತಾಕೀತಿಯ ಉಪಯೋಗ ಎರಡು ಕಡೆಯಾಗಿದೆ. ಈ ಕೃತಿಯ ಬರಹಗಾರನ ಹೆಸರೂ ತಿಳಿದಿಲ್ಲ ಹಾಗೂ ಕೃತಿ ರಚನೆಯ ಸನ್ ಸಹ ತಿಳಿದಿಲ್ಲ. ಆದರೂ ಈ ಪ್ರತಿಯಮೇಲೆ ಕೃತಿ ಬರವಣಿಗೆಯನ್ನು ಬರೆಯಲಾಗಿದೆ ಅದು ೧೬೩೪ ಸಂಬತ್, ಅದು ಕ್ರಿ.ಶ ೧೫೭೭ರ ಸಮಾನ. ಆದ್ದರಿಂದ ಕುತುಬ್ ಶತಕಿನ ಈ ತಾರೀಖಿನ ಮುನ್ನ ಬರೆಯಲ್ಪಟ್ಟಿರುವುದನ್ನು ಒಪ್ಪುವಂತಹದೇ. ಈ ಉದ್ದನೆ ಕವಿತೆ (ಶತಕ= ನೂರು)ದೆಹಲಿಯ ಶಹಿನ್ಷಾಹ ಫ಼ೈರೋಜ಼್ ಶಾಹನ ಯುವರಾಜ 'ಖ಼ುತ್ಬುದ್ದೀನ್' ಮತ್ತು ದೆಹಲಿಯ ಖ಼ಾಜ಼ಿ ದಾನಿಷ್ಮಂದ್ ರವರ ಪುತ್ರಿ 'ಸಾಹಿಬ'ರ ಅನುರಾಗದ ಕಥೆ ಇದೆ. ಖ಼ುತ್ಬುದ್ದೀನ್ ಮತ್ತು ದಾನಿಷ್ಮಂದ್ ಇವರಿಬ್ಬರ ಇರುವಿಕೆ ಇತಿಹಾಸದಿಂದ ಸಾಬಿತಾಗಿಲ್ಲ. ಈ ಕೃತಿಯ ಭಾಷೆ ಮತ್ತು ದಖನಿಯಲ್ಲಿ ಅಸಾಧಾರಣ ಹೋಲಿಕೆ ಇದೆ, ಅದು ನನ್ನ ದೃಷ್ಟಿಕೋಣವನ್ನು ಸರ್ಮಥಿಸುತ್ತದೆಂದರೆ ದಖನಿ ಹಳೇ ಉರ್ದುವಿನ ಸ್ಥಳೀಯ ಹೆಸರು ಮತ್ತು ಅದು ಯಾವುದೇ ಬೇರೆ ಭಾಷೆಯ ಅಸ್ತಿತ್ವ ಹೊಂದಿರುವುದಿಲ್ಲ. ೧೪ರಿಂದ ೧೬ನೇ ಶತಮಾನದವರೆಗೆ ಉತ್ತರದಿಂದ ದಕ್ಷಿಣದವರೆಗೂ ಒಂದೇ ಭಾಷೆ ಪ್ರಚಲಿತವಿತ್ತು ಅದನ್ನು ಬಾಜನ್ ರವರು 'ದೆಹಲ್ವಿ'ಯ ಹೆಸರಿಂದ ಕರೆದರು

ಹಾಗೂ ದಕ್ಷಿಣದ ಪ್ರಾಥಮಿಕ ಬರಹಗಾರರು ಅಬ್ದುಲ್ ಸೇರಿದಂತೆ ಹಿಂದಿ ಅಥವ ಹಿಂದವಿಯ ಹೆಸರಿಂದ.

ಕುತುಬ್ ಶತಕಲ್ಲಿ (ಚೀಂ)ತಾಕೀತು ಎರಡು ಜಾಗದಲ್ಲಿ ಬಳಿಸಲಾಗಿದೆ.೧. ಫಿರ್ ಏಕ್ ಚಾರಾತ್ ಬೀತಿ (೩೮) ೨. ಪರ್ಥ್ಮಾ ಚಿ ಸಿಂಗಾರಿ ಬೋಲಿ(೯೨). (ಚೀಂ) ತಾಕೀತಿ ಇನ್ನಷ್ಟು ಉಧಾರಣೆಗಳು ಸಿಕ್ಕಿದರೆ ಉತ್ತರ ಭಾರತದ ಆಡು ಭಾಷೆಗಳ ಪುರಾತನ ಸಾಹಿತ್ಯದಲ್ಲಿ ಸಿಕ್ಕಿದರೆ ಈ ಅಂತ್ಯಪ್ರತ್ಯಯ ದಖನಿಯು ಮರಾಠಿಯಿಂದ ಎರವು ತಂದಿರುವಂತೆ ಒಪ್ಪಿರುವಂತಹ ಸಲಹೆಯನ್ನು ಬದಲಾಯಿಸಬೇಕಾಗುತ್ತದೆ. ಹೀಗಿರುವಾಗ ಕೇವಲ ಇಷ್ಟು ಹೇಳಬಹುದೆಂದರೆ ದಖನಿ ವ್ಯಾಕರಣದ ಈ ವಿಶೇಷತೆಯು ಸಹ ಅನ್ಯ ಭಾಷೆಗಳ ವಿಷೇಶತೆಗಳ ಹಾಗೆ ಉತ್ತರದಿಂದ ಬಂದಿದೆ. ಇದರ ಸಮರ್ಥನೆ ಮರಾಠಿಯಿಂದಲೂ ಆಗುತ್ತದೆ. ಆದರೆ ಕೇವಲ ಒಂದೇ ಒಂದು ಕೃತಿಯ ಭಾಷಾ ಸಾಕ್ಷಿಯ ಆಧಾರದ ಮೇಲೆ ಯಾವುದೇ ಸಾಮಾನ್ಯ ನಿಯಮ ಖಾಯಂಗೊಳಿಸುವುದು ಹೊತ್ತಿನ ಮುಂಚೆಯಾಗಬಹುದು.

೩೬. ಇದರ ಇಂಡೊಆರ್ಯನ್ ಮೂಲದ ಬಗ್ಗೆ ಒಂದರಿಂದ ಜಾಸ್ತಿ ಅಭಿಪ್ರಾಯಗಳಿವೆ. ಕೆಳಗೆ ಎಲ್ಲಕ್ಕಿಂತ ದೃಢೀಕರಿತ ಒಂದು ಪದದಿಂದ ಬೇರೆ ಪದ ಮಾಡುವುದನ್ನು ನಮೂದಿಸಲಾಗಿದೆ.: ಸಂಸ್ಕೃತ: ನ ಖಲ್ – ಪ್ರಾಕೃತ್: ನಕ್ಖೊ ಮರಾಠಿ: ನಕ್ಕೊ, ದಖಣಿ:=ನಕ್ಕೊ– ಈ ನಕಾರ ಶಬ್ದದ ಯಾವುದೇ ಉದಾಹರಣೆ ಉತ್ತರ ಭಾರತದ ನಾಡನುಡಿಯಲ್ಲೂ ಇಲ್ಲಿಯವರಿಗೂ ಸಿಕ್ಕಿಲ್ಲ. ದಕನಿ ಹಸ್ತಪ್ರತಿಯನ್ನು ಗುರಿತಿಸಲು ಇದೊಂದು ಸದೃಢ ಸಾಕ್ಷಿ.

೩೭. ಪರ್ಷಿಯನ್ ನಲ್ಲೂ ಸಹ 'ನಘಾಂ' ಇದೆ. (ಅಸ್ತಿಂಗಾಸ್)

೩೮. (ರ್ಸ ೧೦೧೨ ಷಹೂರ್ ೨೫ ಮೇ ೧೬೧೧ಇಸವಿಗೆ ಪ್ರಾರಂಭವಾಗುತ್ತದೆ, ಅದು ೨೨ ರಬಿಯಲ್ ಅವ್ವಲ್ ೧೦೨೦ ಹಿಜರಿಯಲ್ಲಿ ಮುಗಿಯುತ್ತದೆ. ೨೪ ಮೇ ರ್ಸ ೧೬೧೨ ಇಸವಿ/ಸಮಾನ ೩ ರಬೀಯಸ್ಸಾನಿ ಸನ್ ೧೦೨೧ ಹಿಜರಿ. ಝಿಯಾಉದ್ದೀನ್ ದೇಸಾಯಿ ಸಾಹೆಬರು ಆರ್ಕಿಲಾಜಿಕಲ್ ಸರ್ವೆ ಅಫ಼್ ಇಂಡಿಯ ರವರ ಕೃಪೆ) ೨ [ಸನ್ ಷಹೂರಿನ ಬಗ್ಗೆ ಮತ್ತಷ್ಟು ತಿಳಿಯಬೇಕಾದರೆ ನೋಡಿ "ಹೈದ್ರಾಬಾದ್ ಫ಼ಖ್ರ್ಖುಂದ ಬುನಿಯಾದ್": ಸತ್ಗುರು ಪ್ರಸಾದ್, ಪು.೧೬೬]

೩೯. ಬಷೀರುದ್ದೀನ್ ಅಹ್ಮದ್: ವಾಖಿಆತೆ ಮುಮ್ಲಿಕತೆ ಬಿಜಾಪುರ್ ಭಾಗ ೧ ಪು.೩೧೦–೩೧೧. see also M.Nazim: Bijapur inscriptions p.93- 102

೪೦. ರಿಸಾಲ ಹಿಂದುಸ್ತಾನಿ(ಇಲಾಃ ಆಬಾದ್)ಜನವರಿ ರ್ಸ ೧೯೩೨ ಇಸವಿ ನೋಡಿ.

೪೧. ಸಾಲಾರ್ ಜಂಗ್ ಮ್ಯುಝಿಯಂ ಹೈದ್ರಾಬಾದಿನ ಸ್ವತ್ತು.

■

ಇಬ್ರಾಹೀಮ ನಾಮಾ

*

ಇಬ್ರಾಹೀಮ ನಾಮಾ

ದೇವಸ್ತುತಿ
(ದ್ವಿಪದಿ ೧ರಿಂದ ೩೬ ವರೆಗೆ)

ಓ ಭಗವಂತನೇ! ನನ್ನ ನುಡಿಯ ಸಂಗ್ರಹ ತೆರೆದು ಅಮೂಲ್ಯವನ್ನೇ ಹರಿಸು, ನನ್ನ ಈ ಕ್ಷುಲ್ಲಕಕಾವ್ಯ ಏನೇನೂ ಅಲ್ಲ. ಮೊದಲಿಗೆ ನಿನ್ನ ಹೆಸರು ಹೇಳುವೆ. ಅದು ಅಲ್ಲಾಹ್. ಬರಲಿ. ಮುಖದ ಮೊಗ್ಗು ಅರಳಿ ನಾಲಿಗೆಯ ಪಕಳಿ ಅಲುಗಾಡಲಿ. ಮಾತಿನ ಸಿಹಿರಸ ಹನಿಯಾಗಿ ಬರಲಿ. ಸುಗಂಧ ಹರಡಲಿ. ದೇವಭಕ್ತರ ಕಿವಿಯ ದುಂಬಿ ಮರುಳಾಗಲಿ, ಹೃದಯದ ಪ್ರಾಣಿ ಹಾರಾಡಲು ಸಾಧ್ಯವಿಲ್ಲ. ಮರದ ಗುಣ ಬೆಳೆಯುವುದು. ಅದರ ರೆಂಬೆ, ನಿನ್ನದೆಯಾದ ಒಂದು ಎಲೆ. ಬುದ್ಧಿಯ ರೆಕ್ಕೆ ಎಷ್ಟೊಂದು ಹರಡಿಕೊಂಡು ಚಿಂತನೆಯಿಂದ ಹಾರಾಡಿದರೂ ಕೂಡ, ಅದು ನಿನ್ನ ಅಂತ್ಯದ ದಿವ್ಯಜ್ಞಾನದ ರೆಂಬೆಯನ್ನು ಸೆರೆಹಿಡಿಯಲು ಎಂದಿಗೂ ಸಾಧ್ಯವಿಲ್ಲ. ನೀನೆ ನಿನ್ನಿಂದಾಗಿ ಇಡೀ ಜಗತ್ತನ್ನೇ ಪೂರ್ಣಗೊಳಿಸಿದೆ. ನೀನೇ ವಿಶ್ವದರೂಪದೊಳಗೆ ಅಧಿಕವಾಗಿ ನಿನ್ನನ್ನು ತುಂಬಿದೆ ಅಡಕಿರುವ ಸಂಗ್ರಹದಿಂದ ಪ್ರಕಟಿಸಿದೆ. ಈ ಜಗತ್ತಿನಲ್ಲಿ ಏನೇನು ಬೆಳಕಿಗೆ ಬಂದಿರಲಿಲ್ಲವೋ, ಅವೆಲ್ಲವನ್ನು ನೀನು ಮಾಡಿದೆ. ಅಸಂಖ್ಯಾತ ಸಮುದ್ರಗಳನ್ನು ನಿರ್ಮಿಸಿದ ನಂತರ ಈ ಪ್ರಪಂಚವನ್ನು ಸುಂದರವಾಗಿ ಎಲ್ಲ ಕಡೆ ಹರಡಿಸಿದೆ. ರಾತ್ರಿಯ ಪರದೆಯಲ್ಲಿ ದೀಪವನ್ನಿಟ್ಟು ಹಗಲನ್ನು ತಂದೆ. ಮಂತ್ರದ ಚಿಕ್ಕಪೆಟ್ಟಿಗೆಯಲ್ಲಿ ದೇವಬಲದ ಖಜಾನೆ ತುಂಬಿ ತಿರುಗಿಸಿದೆ. ಗೊಂಬೆಗಳಿಗೆ ಆತ್ಮಗಳ ಸೂತ್ರಕಟ್ಟಿ ಆಡಿಸಿದೆ. ಪ್ರತಿಯೊಂದು ಜಾತಿಯ ರೂಪ, ಎಲ್ಲ ವಸ್ತುಗಳನ್ನು ತೋರಿಸಿದೆ. ಆ ಸೂತ್ರದ ಬುನಾದಿ ಎಲ್ಲಿದೆ ಎಂದು ತಿಳಿಯಲಾರದೆ ತುಂಬ ತಡಕಾಡಿದರೂ ಅದರ ಸುದ್ದಿ ತಿಳಿಯಲಿಲ್ಲ. ಬುದ್ಧಿ ಚಕಿತನಾಗಿ ಪ್ರಪಂಚದಲ್ಲಿ ನಿಂತಿದೆ. ಅದರ ಜ್ಞಾನವನ್ನೆಲ್ಲ ಹರಡಿಸಿ ನೋಡಿದರೂ ಅದಕ್ಕೆ ದಾರಿ ಕಾಣದು. ನೀನು ಭೂತಕಾಲವೆಲ್ಲ ಹೇಗೆ ಕಳೆದೆ ಎಂದು ಚಿಂತನೆ ಮಾಡಿದರೂ ಸ್ಥಿತಿಗಳು ತಿಳಿಯಲಿಲ್ಲ. ಅನೇಕ ದೊಡ್ಡ ಸವಾರೆರಲ್ಲರೂ

ಆ ದಾರಿಗೆ ಬಂದರು. ಧೂಳಾಗಿ ಹಾರಿದರು. ಅವರದೇನು ಸುದ್ದಿಯೇ ಇಲ್ಲ. ಅವನು ತನ್ನಲ್ಲಿ ಆ ರೀತಿಯ ಮಹಿಮಾವಂತ, ಜ್ಞಾನ ಬಲ್ಲವನು ಅವನು, ಈ ಪ್ರಪಂಚವನ್ನೇ ಚರಕದ ಹಾಗೆ ತಿರುಗಿಸುತ್ತಿರುವನು, ನೀನು ಬಲ್ಲೆಯಾ ಜಾದೂಗಾರ. ಯಾವ ರೀತಿಯಲ್ಲಿ ಕಾಲ ತೋರುವುವನೋ ಅವನು ಆಟ ಆಡಿ ಈ ಪ್ರಪಂಚದ ಸಂತೆಯನ್ನೇ ಸೃಷ್ಟಿಸಿದ. ಹಗಲು ರಾತ್ರಿಗಳನ್ನು ಎರಡು ಕೈಯಲ್ಲಿ ಹಿಡಿದು ತಿರುಗಿಸಿ ಸೂರ್ಯ ಚಂದ್ರವೆಂಬ ಲೋಟಗಳಲ್ಲಿ ಅಮೃತ ಹಾಗೂ ವಿಷವನ್ನು ಬೆರಸುವನು. ಒಮ್ಮೆ ಚಂದ್ರನ ಲೋಟದಿಂದ ಎಲ್ಲೋ ವಿಷ ರಾತ್ರಿಯಾಗಿ ಉದುರುತ್ತದೆ. ಅದನ್ನು ಕುಡಿದು ಇಡೀ ಜಗತ್ತೇ ಸಾಯುತ್ತದೆ. ಒಮ್ಮೆ ಸೂರ್ಯನ ಲೋಟದಿಂದ ಅಮೃತ ಕುಡಿದು ಇಡೀ ಪ್ರಪಂಚ ಮತ್ತೊಮ್ಮೆ ಜೀವಿಸುತ್ತದೆ. ರಾತ್ರಿ ಹೆಣ್ಣು ಕೃಷ್ಣಸರ್ಪದ ಹಾಗೆ ಓಡುತ್ತಿದೆ. ಗಗನದ ಕೋಟೆ ಹತ್ತಿ ಮಲಗುತ್ತದೆ. ಚಂದ್ರಬೆಳಕಿನ ಹಾಲು ಕುಡಿದು ಕಪ್ಪಾಗಿ ಕಾಣಿಸುತ್ತದೆ. ಅದೇ ಮತ್ತೆ ಮಾರನೆಯದಿನ ಬೆಳಗಾಗಿ ಪ್ರಕಟಿಸುತ್ತದೆ. ಅದಾಗಿ ಹಗಲು ತಂದೆ ಜೊತೆ ಸೇರಿ ರಾತ್ರಿಯ ತಾಯಿ ಜನಿಸಿದ ಬಾಲಕ ಚಂದ್ರ ನಿರ್ಮಲ ರತ್ನವಾಯಿತು. ಗಗನಕ್ಕೆ ತೊಟ್ಟಿಲನ್ನು ಹಾಕಿ ತೂಗಿಸಿರುವುದಕ್ಕೆ ಆಕಾಶಗಂಗೆಯ ದಾರ ಕಟ್ಟಿ ಅಲುಗಾಡಿಸಿತು. ಕಣ್ಣೀರು ಸುರಿಸುತ್ತಾ ಬಿದ್ದಿದ್ದ ಆ ಹನಿಗಳೇ ನಕ್ಷತ್ರಗಳಾಗಿ ಹರಡಿದವು. ಕತ್ತಲೆಯ ಲೋಟ ತೆಗೆದುಕೊಂಡು ಔಷಧಿ ಕುಡಿಸಿದರು. ಅದೇ ಚಂದ್ರನ ಮುಖದ ಮಧ್ಯದಲ್ಲಿ ಮಸಿಯಾಯಿತು. ಅದಲ್ಲದೇ ದಿನದ ಹುಡುಗನಿಗೆ ಗಗನ ಬಂಧಿಸಿ ಸೂರ್ಯ ಅಪ್ರಷ್ಟಿಯನ್ನು ಅದರ ಕತ್ತಿಗೆ ಲಡಿಯಾಗಿ ಹಾಕಿದ. ರಾತ್ರಿಯು ಭಯಾನಕ ರೂಪದ ಸ್ತ್ರೀ ಇದ್ದಹಾಗೆ. ಅದು ಹೆದರುವುದಿಲ್ಲ. ಆ ರೀತಿಯವಳನ್ನು ತೆಗೆದುಕೊಂಡು ಆಕಾಶ ಹಗಲನ್ನು ತರುವನು. ಅದಾಗಿ ಬರಹಗಾರನ ರೂಪ ಧರಿಸಿ ಅದರ ಶಕ್ತಿಯಾಗಿ ಪುಣ್ಯ ಮತ್ತು ಪಾಪವನ್ನು ಮೂಲ ಪದಾರ್ಥದ ಹಾಳೆ ಮೇಲೆ ಬರೆಯುವನು. ಬಿಳುಪನ್ನು ಚಂದ್ರದ ಮಸಿಕುಡಿಕೆಯಲ್ಲಿ ತುಂಬಿ ಆಕಾಶಗಂಗೆಯ ಲೇಖಣಿಯಿಂದ ಪದಗಳನ್ನು ನಕ್ಷತ್ರವಾಗಿ ಬರೆಯಲಾಯಿತು. ನಾಣ್ಯವನ್ನು ಅಚ್ಚುಹಾಕಲು ಸೂರ್ಯನು ಚಿನ್ನದ ನೀರನ್ನು ಹಚ್ಚಿಸಿದ. ತನ್ನ ರಾಜ್ಞೆಯನ್ನು ಇಡೀ ಪ್ರಪಂಚಕ್ಕೆ ಸುತ್ತಾಕಿಸಿದ. ಹೀಗಿರುವನು ಆ ಮಹಿಮಾವಂತ. ತನ್ನಿಂದ ತಾನೆ ಜ್ಞಾನ ಪಡೆದು ಆಕಾಶವನ್ನು ಚರಕದ ಹಾಗೆ ಸುತ್ತಿಸಿ ಈ ಪ್ರಪಂಚಕ್ಕೆ ಒಂದು ಗುರುತು ಕೊಟ್ಟ. ಮೇಘಗಳು ಎಷ್ಟೊಂದು ಹನಿಗಳನ್ನು ಧಾರೆಯಾಗಿ ಬೀಳಿಸುತ್ತದೆಯೋ ಪ್ರತಿಯೊಂದು ಹನಿ ಮತ್ತೆ ಸಮುದ್ರವಾಗುತ್ತದೆ. ನಾವು ಅದೇ ಸಮುದ್ರಗಳನ್ನು ಮಸಿಮಾಡಿಕೊಂಡು ಮಸಿಕುಡಿಕೆಯಲ್ಲಿ ತುಂಬಿ ಪ್ರಪಂಚದ ಸುತ್ತಲೂ ತುಂಬಿದರೆ ಇಡೀ ಗಗನದ ಹಾಳೆ ತುಂಬ ಅರ್ಷ್‌ಕುರ್ಚಿ ಎಂದು ಬರೆಯಲು, ಆದಿ ಮತ್ತು ಅಂತ್ಯ ಮಧ್ಯದಲ್ಲಿ ಅಭ್ಯಾಸಿಸಬೇಕು. ತ್ರಿಲೋಕದ ಎಲ್ಲಾ ಬರಹಗಾರರು ಸೇರಿ ಒಂದೇ ಒಂದು ವಿಚಾರವನ್ನು ಸಂಪೂರ್ಣವಾಗಿ ಬರೆಯಲು ಸಾಧ್ಯವಿಲ್ಲ. ಆದ್ದರಿಂದ ಅಬ್ದುಲ್‌ನ ಒಂದೇ ನಾಲಿಗೆ ಅವನ ಗುಣಗಾನವನ್ನು ಮಾಡಲು ಹೇಗೆ ಸಾಧ್ಯ. ಗುಬ್ಬಚ್ಚಿ ಸಮುದ್ರದಿಂದ ಒಂದು ಹನಿ ನೀರು ಕುಡಿದರೆ, ಸಮುದ್ರ ಮುಗಿದು ಹೋಗುತ್ತದೆಯೆ?

ಹಜ್ರತ್ ರಿಸಾಲತ್ ಸಲ್ಲಲಾಹು ಅಲೈಹಿ ವ ಸಲ್ಲಂರವರ ಪ್ರಶಂಸೆ
(ದ್ವಿಪದಿ ೩೭ ರಿಂದ೫೦ ವರೆಗೆ)

ಒಡೆಯನೊಬ್ಬನೇ ಇದ್ದ ಮತ್ತೇನು ಇರಲಿಲ್ಲ. ಮುಹಮ್ಮದರವರನ್ನು ಸೃಷ್ಟಿಸಿ ಲಕ್ಷ ಜಗತ್ತನ್ನು ಪ್ರಕಟಿಸಿದ.

ಯಾವ ಸಂಗ್ರಹವು ಗುಟ್ಟಾಗಿದ್ದವೋ, ಅವೆಲ್ಲ ಪ್ರಕಟಿಸಿ ತೋರಿಸಿದ. ಅನುರಾಗ ಕನ್ನಡಿ **ಮೀಂ ಮಿಗಿಸುವ** ಯಂತ್ರ ತಿರುಗಿಸಿದ. **ಅಹದ್** ದೂರ ಮಾಡಿ ಮೀಂ ಅಹ್ಮದ ಮಾಡಿದ ನಾಲ್ಕು ಅಕ್ಷರ ಸೇರಿ ನಾಲ್ಕು ಗುಟ್ಟನ್ನು ಕೊಟ್ಟವು. ಷರೀಅತ್, ತರೀಖತ್, ಹಖೀಖತ್ ಪ್ರವಚನ, ಮರಿಫತಿನ ಐನ್‌ನನು, ಅದರ ಮೇಲೆ ಪ್ರಕಟಿಸಿದ/ಬಹಿರಂಗಪಡಿಸಿದ. ಆಕಾಶವು ಅವರ ದ್ವಾರದಮೇಲೆ ಸರತಿಯ ಮೇಲೆ ಪಹರೆಯನ್ನು ಕೊಡುವದು. ಆಕಾಶಗಂಗೆಯು ಸೊಂಟ ಬಿಗಿದುಕೊಂಡು ಸದಾ ಸೇವೆಗಾಗಿ ಆ ಜಾಗದಲ್ಲಿ ನಿಂತಿರುತ್ತದೆ. ಹಗಲು ಅವರ ದ್ವಾರಪಾಲಕನಾಗಿ ನಿಂತುನಿಂತು ವೃದ್ಧ ರಾತ್ರಿಯ ಕರಿ ಕೋಲನ್ನು ಹಿಡಿದು ಅಂಚು ಹಿಡಿದ ಹಬಷಿ (ಕಪ್ಪು) ರಾತ್ರಿ ದೇವಿಯ ರೂಪ ಧರಿಸಿ ಬೆಳಕನ್ನು ಹಿಡಿದು ಪ್ರಕಾಶದ ದೀಪ ಹಿಡಿದು ಹಗಲು ಬಂತು. ನಿಜವಾದ ದಿನ ಜಗತ್ತಿನ ಹೃದಯದ ಮೇಲೆ ಪ್ರಭಾವ ಬೀರಿತು. ಸೂರ್ಯನು ಶ್ರದ್ದೆಯ ರೂಪ ಧರಿಸಿದ. ಆ ಜಾತಿಯನ್ನು ಜಗತ್ತಿಗೆ ಪ್ರಕಟಿಸಿ ಜಗವನ್ನೆಲ್ಲ "ಲೌಲಾಕ"ದ ಕೂಗಿ ಕೇಳಿಸಿದ. ತಾನೆ ಪ್ರಿಯಕರ ಮತ್ತು ಪ್ರಿಯನಾದ. ತನ್ನದೆ ರೂಪ ತನ್ನ ದೃಷ್ಟಿಯಿಂದ ನೋಡಿದ. ಅನುರಾಗ ಇದರಿಂದಲೇ ಎಲ್ಲ ಗುಟ್ಟನ್ನು ತಿಳಿದ. ಆಗ ಅವನ ಹೆಸರು ಖ಼ಾತಮುಲ್ ಅಂಬಿಯಾ ಆಯಿತು. ಏಳು ಸಮುದ್ರಗಳನ್ನು ಬೆರಳುಗಳಿಂದ ಕ್ಷುಲ್ಲಕಮಾಡಿ ತಂದರೂ ಸಹ ನಿನ್ನ ಗುಣ ದೊಡ್ಡ ಪುಸ್ತಕಗಳ ಹಾಳೆಯಲ್ಲೂ ಸಹ ತುಂಬಲು ಸಾಧ್ಯವಿಲ್ಲ. ಪ್ರತಿಯೊಂದು ಕೂದಲಿಗೆ ಸಾವಿರಾರು ನಾಲಿಗೆಯಾದರೂ ಅಬ್ದುಲ್ ನೀನು ಅವರ ಒಂದು ಗುಣವನ್ನು ವಿಚಾರ ಮಾಡಲಾರೆ. ಆದ್ದರಿಂದ ನೀನು ಅವರ ಕುಟುಂಬದವರಿಗೂ ಮತ್ತು ಅವರ ಜೊತೆಗಾರರನ್ನು ಜೊತೆ ಮಾಡಿಕೊ. ಪಂಜ್ತನ್‌ರವರ ದಾರ ನನ್ನ ಕೈಗೆ ಕೊಡು.

ಪ್ರವಾದಿ ಸೊಲ್ಲಲಾಹಯ ಅಲೈಹಿ ವ ಸಲ್ಲಂ ರವರ ಸ್ನೇಹಿತರ ಪ್ರಶಂಸೆ
(ದ್ವಿಪದಿ ೫೧ ರಿಂದ ೬೦ ವರೆಗೆ)

ನಬಿರವರ ನಾಲ್ಕು ಪ್ರೀತಿಯ ಸ್ನೇಹಿತರಿದ್ದರು ಕೇಳಿ. ಆದರೆ ಆ ನಾಲ್ಕು ರತ್ನಗಳು, ನಾಲ್ಕು ಮೂಲೆಗಳು ಧರ್ಮದ ಸಭೆಯಲ್ಲಿ ಪದಕದ ಹಾಗೆ ಜೋಡಿಸಿದ್ದವು. ಸತ್ಯದ ಅಪ್ಪಟ ಚಿನ್ನದಿಂದ ಅವು ಸುರಕ್ಷಿತವಾಗಿರುವ ಹಾಗೆ ಕಾಣುತ್ತದೆ. ಇವರ ಮಧ್ಯದಲ್ಲಿ ನಬಿರವರು ಸರ್ದಾರರಾದರು. ಅವರ ಜ್ಯೋತಿ ಬಂದ ನಂತರ ಎರಡೂ ಪ್ರಪಂಚಗಳು ಪೂರ್ಣಗೊಂಡವು. ಮೊದಲನೆಯ ರತ್ನ ಅಬುಬಕರ್ ಎಂದು ತಿಳಿ. ಅವರ ನಿಷ್ಪಾಪಟ್ಯವನ್ನು ಪ್ರವಚಿಸಲು ಸಾಧ್ಯವಿಲ್ಲ. ಎರಡನೆಯ ನಿಜವಾದ ರತ್ನವೆಂದರೆ ಉಮರ್ ಬಿನ್ ಖತ್ತಾಬ್. ಅವರ ನ್ಯಾಯದಿಂದ ಧರ್ಮ ಬೇಗನೆ ಆವರಿಸಿತು. ಮೂರನೆಯ ರತ್ನವೆಂದರೆ ಉಸ್ಮಾನ್

ಬಿನ್ ಅಫ್ಘಾನ್ ಎಂದು ತಿಳಿ. ನಾಚಿಕೆಯ ಕೊನೆಕಾಣಿಸಿದವರು, ಖ಼ುರಾನಿನ ಸಂಪಾದಕರು. ನಾಲ್ಕನೆಯ ರತ್ನವೆಂದರೆ ಅಲಿರವರೆಂದು ತಿಳಿ. ಉದಾರತೆ, ಪಾಲನೆ, ದೇವಪ್ರಿಯ ಮುಹಮ್ಮದರವರು ಬೇರಾದರೆ ಅಲಿರವರು ಮರವೆಂದು ತಿಳಿ. ಇವರಿಂದ ಹದಿನಾಲ್ಕು ಸೂಫಿಸಂತತಿಗಳ ಶಾಖೆಗಳಾದವು. ಜಗತ್ತಿನ ಇಡೀ ಖಿಲಾಫ಼ತ್ ಅವರು ಪಡೆದರು. ತದನಂತರ ಬೈಅತಿನ ಹೂವುಗಳರಳಿ, ಸತ್ಯದ ಹಣ್ಣು ಕಚ್ಚಿದವು. ಯಾರಾದರೂ ತನ್ನ ಗುರುವಿಗೆ ತಿರಸ್ಕರಿಸಿದರೆ ಅವನು ಬಹುದೇವ ತಾರಾಧಕನಾಗುವುದರಲ್ಲಿ ಸಂದೇಹವಿಲ್ಲ.

ಮುರ್ಷಿದ್ ಷಹ್ಬಾಜ಼್ ಸಯ್ಯದ್ ಮುಹಮ್ಮದ್ ಗೇಸೂ ದರಾಜ಼್‌ರವರ ಪ್ರಶಂಸೆ
(ದ್ವಿಪದಿ ೬೧ ರಿಂದ೬೮ ವರೆಗೆ)

ಓ ನಾಲಿಗೆಯೇ ಈಗ ಧರ್ಮಗುರು ಶಾಹ್‌ರವರ ಧ್ವನಿಯನ್ನು ತೆಗೆಯಲು ಶೃಂಗರಿಸಿಕೊ. ಅವರು ಬೇರೆ ಯಾರೂ ಅಲ್ಲ, ಮುಹಮ್ಮದ್ ಹುಸೈನಿ ಗೇಸುದರಾಜ಼್‌ರವರು. ಅವರು ಅಲಿರವರ ವಂಶದ ದೀಪ. ಅವರೇ ನಬೀರವರ ಸಂತಾನದ ವಿಶೇಷ ತೋಟ. ಅವರೇ ಅನುರಾಗಿಯರಲ್ಲಿ ನಿಜವಾದ ವ್ಯಾಮೋಹದವರು. ಅವರಿಗೆ ನಿಜವಾಗಿಯೂ ಮೋಹದ ಅಹಂಭಾವ ತಿಳಿದಿದೆ. ಅವರೇ ಅನುರಾಗದ ರೂಪ ಧರಿಸಿ ಪ್ರಪಂಚದಲ್ಲಿ ಬಂದವರು. ದೇವಪ್ರಿಯರಲ್ಲಿ ಪಾಲನೆಯ ಬೆಳಕಾಗಿ ಪ್ರಕಟಿಸಿದವರು. ಆ ಶಾಹನ ಹಾಗೆ ಮಹಾಪಾಲನೆಯವರು ಯಾರೂ ಇಲ್ಲ, ಅಂದರೆ ಯಾವ ಶಾಹನಿಗೆ ಶಾಹಿ ಕೊಟ್ಟರೋ ಅವರೇ ಆದರು. ಫ಼ೈರೋಜ಼ಿನ ಮನೆಯಿಂದ ಶಾಹಿಯನ್ನು ದೂರ ಮಾಡಿದರು ಅಹ್ಮದ್‌ನಂತಹ ತಿರುಕನಿಗೆ ಶಾಹನನ್ನಾಗಿ ಮಾಡಿ ಕೃಪೆತೋರಿದವರು ಶಾಹ್‌ರವರೇ. ಇದೇ ರೀತಿ ನನಗೂ ಸಹ ಕೃಪೆತೋರಿಸಿರಿ, ನಾನು ಈಗ ನಿಮ್ಮ ಬಳಿ ನನ್ನ ಈ ಬಚ್ಚಿಟ್ಟಿರುವ ಗುಟ್ಟು ರಟ್ಟಾಗಿಸುವೆ, ನೀವು ನನ್ನ ಪ್ರತಿ ದ್ವಿಪದಿಗೂ ಸಹ ಸುಂದರ ಪ್ರಪಂಚ ನೀಡಿ, ಅದು ಶಾಹ ಉಸ್ತಾದ್ ರವರ ದೃಷ್ಟಿಯಲ್ಲಿ ಮೆಚ್ಚುಗೆ ತರಲಿ.

ಹಜ಼್ರತ್ ಉಸ್ತಾದ್ ಆಲಂ ಪನಾಃ ಇಬ್ರಾಹೀಂ ಆದಿಲ್ ಶಾಹ ಖ಼ಲ್ಲದಲ್ಲಾಹು ಮುಲಕಹು ವ ಸುಲ್ತಾನಹು ರವರ ಪ್ರಶಂಸೆ
(ದ್ವಿಪದಿ ೬೯ ರಿಂದ ೯೯ ವರೆಗೆ)

ಹೃದಯ ಬುದ್ಧಿಯ ಕೈಯಿಂದ ಚಿಂತನೆಯ ಕಿವಿ ಹಿಡಿದು ಶಾಹ ಉಸ್ತಾದನ ಬುದ್ಧಿ ಜ್ಞಾನವನ್ನು ಸ್ಮರಿಸಿತು. ನನಗೆ ಸಿಕ್ಕಿರುವಂತಹ ಶಾಹ ಉಸ್ತಾದ್ ಮತ್ತ್ಯಾರಿಗೂ ಸಿಕ್ಕಿಲ್ಲ. ಅವರು ಎಂತಹ ಉಪಮೆಗಳನ್ನು ಕೊಡುವರೆಂದರೆ, ಅದರ ಉದಾಹರಣೆ ಎಲ್ಲೂ ಸಿಗುವುದಿಲ್ಲ. ಅವನೇ ಅಲ್ಲೇ ಇದೆ, ನಿಜವಾಗಿಯೂ ನೀನು ಪರಮಪಾವನನಾದವನು. ಅವನೇ ಜಗದ್ಗುರು, ಶಾಹ ಸುಲ್ತಾನ. ಪರಮಪಾವನನಾದವನ ಯಾವ ರೂಪ ಅಡಗಿಕೊಂಡಿತ್ತೋ ಅದು ಜಗತ್ತಿನ ರೂಪದಲ್ಲಿ ಪ್ರಕಟವಾಯಿತು. ಉಪಾಧಿ 'ಶಾಹ ಆದಿಲ್ ಬರಾಹೀಂ' ಸಿಕ್ಕಿದೆ. ಓ ದೇವರೆ ಒಂಬತ್ತು ಅಕ್ಷರಗಳು (ಶಾಹ ಇಬ್ರಾಹೀಮನ ೯ ಅಕ್ಷರಗಳು) ಸೇರಿ ಎಂತಹ ಪದವಾಗಿದೆ. ಜಗತ್ತಿನಲ್ಲಿ ಒಂಬತ್ತು ಕಾಣುವಂತಹ ಎಲ್ಲ

ಭೇದಗಳನ್ನು ಸೃಷ್ಟಿಸಿ ಅವೆಲ್ಲವನ್ನು ಭಗವಂತ ಶಾಹ್ ರವರಿಗೆ ಸಾಕಷ್ಟು ನೀಡಿದ. ಅದರಿಂದ ನೌರಸ್ ಅವತಾರ ರೂಪತಾಳಿತು. ಹೊಸ ರೂಪ ಪ್ರಕಟಗೊಂಡು ಒಂಬತ್ತು ಬುದ್ಧಿ ವಿಚಾರಗಳು ಬಂದವು. ಚತುರನಾದ ಶಾಹ ನೌರಸನೂ ಅವುಗಳಲ್ಲಿ ವಿಧವಿಧವಾದ ಬಣ್ಣಗಳನ್ನು ತುಂಬಿದ. ಭೂಮಿ ಮೇಲೆ ಆಕಾಶವನ್ನು ತಂದು ಅದನ್ನು ಪರೀಕ್ಷಿಸಿದ. ಒಂಬತ್ತು ಗಗನಗಳ ಮೇಲೆ ನವಗ್ರಹಗಳನ್ನು ತಂದು, ಭೂಮಿಯ ಒಂಬತ್ತು ಭಾಗಗಳ ಮೇಲೆ ಒಂಬತ್ತು ರತ್ನಗಳನ್ನು ಜೋಡಿಸಿದ. ಇನ್ನಿತರ ದಿನಗಳಲ್ಲಿ ಒಂಬತ್ತು ದಿನಗಳನ್ನು ಇಟ್ಟವೆಂದು ತಿಳಿ. ರಾತ್ರಿಗಳಲ್ಲಿ ನವರಾತ್ರಿಯ ರೂಪ ತಂದನು. ಸಂಗೀತದ ವಿದ್ಯೆಯಲ್ಲಿ ಒಂಬತ್ತು ಸುರಗಳನ್ನು ರಚಿಸಿದ. ಒಳ್ಳೆಯ ಕಣದಲ್ಲಿ ನವರಸಗಳ ರೂಪವನ್ನು ಸ್ಥಾಪಿಸಿದ. ಮೊದಲಿಂದಲೇ ಭಗವಂತ ಇವುಗಳನ್ನು ವ್ಯಕ್ತಪಡಿಸಿದ್ದ, ಅದು ಜಗದ್ಗುರು, ಶಾಹ ನೌರಸ್‌ನ ಚಿತ್ರವಾಯಿತು. ಅದರಿಂದಾಗಿ ಆ ಶಾಹನ ಗುಣಗಳು ಹೂವಾಗಿ ಏಕೆ ಬರಲಾರವು? ನಾಲಿಗೆಯ ತೋಟಗಾರ್ತಿ ಮಾತಿನ ಹಾರಗಳನ್ನು ಕಟ್ಟಿದಳು. ಬುದ್ಧಿ ಬುಟ್ಟಿಯಲ್ಲಿ ತುಂಬುವಂತಹ ವಸ್ತುವಲ್ಲ. ಚಿಂತನೆ ಕೈ ಇಡುತ್ತಿದ್ದ ಹಾಗೆ ಆ ಹೂಗಳು ಉದುರುತ್ತವೆ. ಬುದ್ಧಿಯ ಮಾಲಿಯ ಗುಣ ಹೇಗೆ ಹೂಗಳನ್ನು ರಾಶಿ ಮಾಡುವುದು, ದುಂಬಿಯು ವಿಚಾರಗಳನ್ನು ನಾದಿಸಿ, ವಾಸನೆ ಕಡೆ ತಿರುಗಿತು. ಅದಾಗಿಯೂ ಅದು ಶಾಹನ ಮಟ್ಟದ ತುರಾಯಿ ಅಲ್ಲವಾದರೂ ಸಹ, ಸಭೆಯಲ್ಲಿ ಕುಳಿತು ಅವುಗಳನ್ನು ಪೋಣಿಸಿದ. ಇದನ್ನು ಎಲ್ಲೂ ಕಾಣಲಿಲ್ಲ. ಎಲ್ಲೂ ಕೇಳಲಿಲ್ಲ. ವಿದ್ಯೆ ಹಾಗೂ ಲಕ್ಷ್ಮಿ ಎರಡರ ದಾನ ಮಾಡುವುದು ನಿನ್ನ ಬಳಿ ಇದ್ದಿದ್ದರಿಂದ ಎರಡೂ ಸಹ ಬಂದವು. ಸೌಖ್ಯ ಹಾಗೂ ಸುದೈವ ಗಳಿಸಿ ಕಣ್ಣು ತುಂಬ ನೋಡಿದೆ. ಇಂತಹ ಶಾಹ ಗುರುವಿನ ಚರಣದಲ್ಲಿ ಬಂದು ನೋಡಿ. ಅವನು ದಕ್ಷಿಣದಲ್ಲಿ ಸಿಂಹಾಸನ ಹಾಸಿ ಕುಳಿತಿರುವನು. ಅವನ ಆಸ್ಥಾನದಲ್ಲಿ ಅನೇಕ ಕಲಾವಿದರು, ಲುಖ್ಮಾನಿನಂತಹ ಬುದ್ಧಿವಂತರಿದ್ದಾರೆ. ಸೂರ್ಯನ ಹಾಗೆ ಶಾಹ ಉಸ್ತಾದನ ಒಂದು ವಿಚಾರ, ಎಷ್ಟೊಂದು ವಿದ್ಯಗಳ ಪಂಡಿತರು ಬುದ್ಧಿವಂತರು ಮಹಾಪಾಂಡಿತ್ಯ ಹೊಂದಿದವರಿದ್ದಾರೆಯೋ, ಅವರ ಬುದ್ಧಿ ಶಾಹ ಉಸ್ತಾದನ ಬುದ್ಧಿಯ ಕಣಕ್ಕೂ ಸಮಾನವಿಲ್ಲ. ಶಾಹ ಉಸ್ತಾದನ ದೃಷ್ಟಿ ಯಾರ ಮೇಲೆ ಬೀಳುತ್ತದೆಯೋ ಪ್ರತಿಯೊಂದು ವಿದ್ಯೆಯಲ್ಲೂ ಅವನಿಗೆ ಸರಿಸಮಾನ ಯಾರೂ ಇರುವುದಿಲ್ಲ. ಆದ್ದರಿಂದ ಶಾಹ ಜಗದ್ಗುರು ಪರುಷಕಲ್ಲಿನ ಗುರುತಿದ್ದ ಹಾಗೆ. ಅವನ ಶಿಷ್ಯರೆಲ್ಲರೂ ಕಬ್ಬಿಣದ ಹಾಗೆ ಸುತ್ತ ಅಂಟಿಕೊಂಡಿರುತ್ತಾರೆ, ಆದರೆ ಪರುಷದ ಜೊತೆ ಸೇರಿ ಅಪರಂಜಿಯ ಬೆಲೆ ಆಗುತ್ತದೆ. ಶಾಹನ ದೃಷ್ಟಿ ಬೀಳುತ್ತಿದ್ದ ಹಾಗೆ ಅಪರಂಜಿ ತೂಕ ಧರಿಸುತ್ತದೆ. ಅದೇ ಶಾಹ ಉಸ್ತಾದ್ ರವರು ಕೃಪೆ ಮಾಡಿ, ಅಬ್ದುಲ್‌ನಿಗೆ ಕರೆದು ಕರುಣೆಯ ಕೈ ತಲೆ ಮೇಲೆ ಇಟ್ಟು ಹೊಸ ವಿಷಯವನ್ನು ತೆಗೆದುಕೊಂಡು ಒಂದು ಪುಸ್ತಕ ಬರಿ, ಯಾರೂ ಸಹ ಆ ವಿಷಯದ ಬಗ್ಗೆ ಮುಂಚೆ ಚಿಂತನೆ ಮಾಡಿರಬಾರದು. ಪ್ರಪಂಚದಲ್ಲಿ ನೀನು ನಿನ್ನ ಗುರತನ್ನು ಬಿಡಬೇಕೆಂದರೆ, ಅದು ಕೇವಲ ಮಾತು ಹಾಗು ದ್ವಿಪದಿ ಎಂದು ತಿಳಿದುಕೊ. ದ್ವಿಪದಿಯಿಂದಲೇ ಗುರುತು ಬಿಡಲು ಸಾಧ್ಯ. ಪ್ರಪಂಚದಲ್ಲಿ ನಿನ್ನ ಹೆಸರು ಜೀವಂತವಿರುತ್ತದೆ. ಎಲ್ಲಿಯವರೆಗೆ ಪ್ರಪಂಚ

ಬ್ರಹ್ಮಾಂಡದಲ್ಲಿರುತ್ತದೆ. ಭರಿತ ದ್ವಿಪದಿ ಅಲ್ಲಿಯವರೆಗೂ ಪ್ರಪಂಚದಲ್ಲಿ ಗುರುತಾಗಿರುತ್ತದೆ. ಶಾಹ ಉಸ್ತಾದನ ಈ ಮಾತು ಕೇಳಿ, ನಾನು ಜಗದ್ಗುರುವಿಗೆ ಯಾವ ಭಾಷೆಯಲ್ಲಿ ದ್ವಿಪದಿ ಹೇಳಲೆಂದು ಕೇಳಿದೆ. ಏಕೆಂದರೆ ನನ್ನ ಭಾಷೆ ಹಿಂದವಿ, ನಾನು ದೆಹಲಿಯವನು. ಮಸ್ನವಿ ಹೇಳಲು ಅರಬಿ ಅಥವ ಅಜಮೀ ಭಾಷೆ ಬಲ್ಲನವನಲ್ಲ.

ಹಜ್ರತ್ ಉಸ್ತಾದ್‌ರವರ ದ್ವಿಪದಿಯ ಬಗ್ಗೆ ಉಪದೇಶ
(ದ್ವಿಪದಿ ೧೦೦ ರಿಂದ ೧೧೨ ವರೆಗೆ)

ಶಾಹಉಸ್ತಾದ್ ಅಬ್ದುಲನಿಗೆ ಉದ್ದೇಶಿಸಿ ಹೇಳಿದನು. ನೀನು ಎಲ್ಲ ಭಾಷೆಗಳ ಮಾತುಗಳನ್ನು ಕಾವ್ಯದ ಭಾಷೆಯಲ್ಲಿ ಬರಿ. ದ್ವಿಪದಿಯ ಕಲೆ ಎಲ್ಲ ದೇಶಗಳಲ್ಲಿ ಒಂದೇ ರೀತಿ ಇರುತ್ತದೆ. ವ್ಯಾಮೋಹ ಒಂದೇ, ಅನೇಕ ರೂಪಗಳಲ್ಲಿ ಪ್ರಕಟವಾಗುತ್ತದೆ. ಯಾವ ದೇಶದಲ್ಲಿದ್ದಿಯಾ, ಅಲ್ಲಿಯ ಭಾಷೆಯ ರೂಪ ಪ್ರಕಟಿಸು. ಅದೇ ಮಾತಿನಲ್ಲಿ ನೀನು ಕಾವ್ಯ ರಚಿಸು. ಪ್ರತಿಯೊಂದು ಅಂಗಡಿಯಿಂದ ಅಮೂಲ್ಯವಾದ ರತ್ನ ತೆಗೆದುಕೊ. ಚೆನ್ನಾಗಿ ದೃಷ್ಟಿಯಿಟ್ಟು ಹುಡುಕಾಡಿ ನೀನು ಗುರುತನ್ನು ಮಾಡು. ನೀನು ಪ್ರತಿಯೊಂದು ಭಾಷೆಯಲ್ಲಿ ದ್ವಿಪದಿ ಈ ರೀತಿಯಾಗಿ ಹೇಳು. ಅರ್ಥ, ಜ್ಯೋತಿ ತುಂಬಿದ ರತ್ನಗಳ ಹಾಗೆ ತೂಗು. ಚಿಂತನೆ ಮಾಡುತ್ತಾ ದ್ವಿಪದಿಯ ಮೈದಾನದಲ್ಲಿ ಬಾ. ಬುದ್ಧಿಯ ಕುದುರೆಯನ್ನು ಓಡಿಸುತ್ತಾ ದಾಳಿಮಾಡು. ನೀನು ಮುಖದಲ್ಲಿ ಲಗಾಂ ಹಾಕು, ಬುದ್ಧಿಯನ್ನು ಕಾಲಿನಿಂದ ಅದುಮಿ ಕುದುರೆಯನ್ನು ಓಡಿಸು. ವಿವೇಕದ ಕಾಲುಗಳಿಂದ ಗಟ್ಟಿಯಾಗಿ ನಡಿ. ಅಲ್ಲಿಯವರೆಗೆ ಅನೇಕ ರೀತಿಯ ದಂಗು ಬಡಿಸುವ ತಮಾಶೆ ಮಾಡು. ಉಪಮೆಯ ಮಾತನ್ನು ಜೋಡಿಸಿ ಏಕೆ ಸುತ್ತಾಡುವೆ. ಓ ಚಾಟಿ ಸವಾರನೇ, ನಾಲಿಗೆ ಗಟ್ಟಿಯಾಗಿ ಹಿಡಿದು ಮಾತಿನ ರೂಪವನ್ನು ತಿರುಗಿಸಿ ಚಾಟಿ ಹೊಡೆ. (ನೀನು ಬರೆದಿರುವುದನ್ನು) ಬಲ್ಲವರ ಹತ್ತಿರ ತೆಗೆದುಕೊಂಡು ಹೋಗಿ ತೋರಿಸು. ಆಗ ನಿನಗೆ ಅದರಲ್ಲಿರುವ ಲೋಪದೋಷಗಳು ತಿಳಿಯುತ್ತವೆ. ಲಕ್ಷ ಬೆಲೆಬಾಳುವ ಅಮೂಲ್ಯವಾದ ಜ್ಯೋತಿ ತುಂಬಿದ ರತ್ನವಿದ್ದರೂ ಅದನ್ನು ಗುಣದೋಷ ಪರೀಕ್ಷಕ ಅಲ್ಲದೇ ಬೇರೆ ಯಾರೂ ತಿಳಿಯಲು ಸಾಧ್ಯವಿಲ್ಲ. ಹಸಿರು ಗಾಜು ಮತ್ತು ಹಸಿರುಬಣ್ಣದ ರತ್ನ ತೂಕದಲ್ಲಿ ಒಂದೇ ಆಗಿರುತ್ತದೆ. ಆದರೆ ತಿಳಿಯುವವನಿಗೆ ಮಾತ್ರ ಅದರ ಮೌಲ್ಯ ತಿಳಿಯುತ್ತದೆ. "ಅಬ್ದುಲ್" ನಿನ್ನ ಈ ಮಾತು ಗಾಜಿದ್ದ ಹಾಗೆ, ಅದನ್ನು ಶಾಹ ಉಸ್ತಾದನಿಗೆ ತೋರಿಸು ಅವು ರತ್ನಗಳಾಗುವವು.

ದ್ವಿಪದಿಯಲ್ಲಿ ಮಾತು ಹಾಗೂ ಪದಗಳ ಪ್ರಶಂಸೆಯ ಬಗ್ಗೆ ಹೇಳುವೆ
(ದ್ವಿಪದಿ ೧೧೩ ರಿಂದ ೧೩೩ ವರೆಗೆ)

ಹೃದಯದ ಕೊಠಡಿಯ ಅನುಮಾನದ ಬೀಗ ತೆರೆದು ಹೇಳುವೆ. ವಿವೇಕದ ಚಾವಿಯಿಂದ ಬುದ್ಧಿಯನ್ನು ಇಟ್ಟು, ಕೈ ತೂಗಿ ನನ್ನ ಮುಖದ ಮೇಲೆ ಬುದ್ಧಿ ಪ್ರಕಟವಾಗಿ ನಾಲಿಗೆ ಉನ್ನತಸ್ಥಾನ ಪಡೆದು, ಚಿಂತನೆಯ ಹಾಸಿಗೆ ಹಾಸಿ, ರತ್ನಕಂಬಳಿ ಹಾಸಿ, ಸ್ವಭಾವವನ್ನು ಸರಿ ಪಡಿಸಿ ಶೃಂಗರಿಸಿ ಹೊಸ ವಿಷಯದ ಮಾತಿನಿಂದ ಸಭೆ ಅಲಂಕರಿಸಿದೆ. ಶಾಹರವರು

ಮಾತಿನ ರೂಪ ಧರಿಸಿ ಮಧ್ಯದಲ್ಲಿ ಬಂದರು. ನಿಂತುಕೊಂಡು ಪ್ರಾಸಪದಗಳನ್ನು ಜೋಡಿಸಿದರು. ಅರ್ಥ ಭೇದದ ಸುಗಂಧ ಹರಡಿ, ಕವಿ ಸಮ್ಮೇಳನದಲ್ಲಿ ಕಾವ್ಯದಿಂದ ಹರ್ಷ ಉಲ್ಲಾಸ ಉಂಟಾಯಿತು. ಕಾವ್ಯದಲ್ಲೇ ಬುದ್ಧಿಯ ಮೂಲ್ಯವಿದೆ. ಕಾವ್ಯವೇ ಬುದ್ಧಿಯ ಹೂವಿನ ಸುಗಂಧ, ಕಾವ್ಯ ರೂಪಧರಿಸಿ ಜಗವನ್ನೇ ರಚಿಸಿದೆ. ಕಾವ್ಯದ ಜ್ಯೋತಿ ಪ್ರಕಟವಾಗಿ, ಸೃಷ್ಟಿಯ ರತ್ನವಾಯಿತು. ಮಾತಿನಿಂದಲೇ ಲೋಕದಲ್ಲಿ ಎಲ್ಲರೀತಿಯ ಕಲೆಗಳು ರಚಿಸಲಾಯಿತು. ಮಾತಿನ ರೂಪವಾಗಿ ಕುನ್ ಫಯಕೂನ್ ಪ್ರಕಟವಾಯಿತು. ಮಾತಿನ ಮಧ್ಯದಲ್ಲಿ ಆದಿ ಹಾಗೂ ಅಂತ್ಯವಿದೆ. ಶಬ್ದಗಳಿಂದ ತ್ರಿಲೋಕವನ್ನು ರಚಿಸಿದ. ಜ್ಞಾನದ ಹೊಳೆಯಿಂದ ಒಂದು ಮಾತಿನ ಹನಿ ಹೊರಟು, ನನ್ನ ಹೃದಯದ ಸಮುದ್ರದಿಂದ ಅಲೆಯ ಅಭಿರುಚಿಯಾಗಿ ಮೇಲೆದ್ದಿತು. ಮುಳುಗುವವನಾಗಿ ಬುದ್ಧಿ, ಮಧ್ಯದಲ್ಲಿ ಓಡಾಡುವನು. ವಿವೇಕ ಚಿಂತನೆಯ ಚಿಪ್ಪನ್ನು ತೆಗೆದುಕೊಂಡು ಬರುವನು. ನಾಲಿಗೆಯನ್ನು ಹಿಡಿದು ತುಟಿಯ ಕೊನೆಗೆ ಹಿಡಿ ಮಾತಿನ ಮುತ್ತುಗಳು ವಿಷಯವಾಗಿ ತುಟಿಯಲ್ಲಿ ಉದುರುವವು. ಮುತ್ತು ರತ್ನಗಳ ವ್ಯಾಪಾರಿ ಗಣಿಯಿಂದ ವಿಚಾರಗಳನ್ನು ಆರಿಸಿಕೊಳ್ಳುವನು. ಹೊಸ ವಿಚಾರಗಳ ಹಾರವನ್ನು ಕಟ್ಟಿ ಬಹಿರಂಗ ಪಡಿಸುವನು. ಅದನ್ನು ತೆಗೆದುಕೊಂಡು ಹೋಗಿ ಸಂತೆಯಲ್ಲಿ ಬಲ್ಲವರಿಗೆ ತೋರಿಸು. ಅರ್ಥಗರ್ಭಿತ ಪ್ರತಿಯೊಂದು ರೂಪದ ಜ್ಯೋತಿ ತೋರಿಸು. ಮಾತಿನ ವಿಡಂಬ ಧರಿಸಿ ನಾನು ಬಂದರೆ, ನೌರತ್ನಗಳೂ ಸಹ ಅದನ್ನು ನೋಡಿ ನಾಚಿಕೆ ಪಡುತ್ತವೆ. ರತ್ನ ಮತ್ತು ಮಾತು ಒಂದೇ ತಕ್ಕಡಿಯಲ್ಲಿ ತೂಗಿದರೆ, ರತ್ನಕ್ಕಿಂತ ಮಾತಿನ ಮೂಲ್ಯ ಅಧಿಕವಾಗಿರುತ್ತದೆ. ಸಹಸ್ರಾರು, ಲಕ್ಷಾಂತರ ಅಮೂಲ್ಯವಾದ ರತ್ನಗಳು ಸಿಗಬಹುದು. ಒಂದೇ ಒಂದು ಮಾತಿನ ವಿಚಾರದ ಮೇಲೆ ಅವುಗಳನ್ನು ನಿವಾಳಿಸಿ ಎಸೆಯಬೇಕು. ಆದರೆ ಆ ಹೊಸರತ್ನ ಕಲ್ಲಿನ ಗಣಿ ಎಂದು ತಿಳಿ. ಅಮೂಲ್ಯವಾದ ಮಾತು ಹೃದಯಮಧ್ಯದಿಂದ ಹೊರ ಬರುತ್ತದೆ. ಬುದ್ಧಿಯ ಕೈಗೆ ಚಿಂತನೆಯ ಚಿಕ್ಕ ಗುದ್ದಲಿ ಕೊಡು. ವಿವೇಕದ ಕಣ್ಣುಗಳಿಂದ ದೃಷ್ಟಿಯ ಜ್ಞಾನವನ್ನು ಹುಡುಕಿ, ಕೇವಲ ಅದನ್ನು ಮಾತ್ರ ತಗೆದು ಕೊಂಡು ಒಂದು ಜಾಗದಲ್ಲಿ ಕುಳಿತು ಅಮೂಲ್ಯವಾದ ಮಾತಿನ ನಗವನ್ನು ಬುದ್ಧಿಯ ಹಾರದ ಪದಕ ಜೋಡಿಸುವೆ. ಆದರೆ ನಾನು ಜಗತ್ತಿನಲ್ಲಿ ಕಾಗದವನ್ನು ಅಲಂಕರಿಸಿ ಮಾತಿನ ಜ್ಯೋತಿಮಾಣಿಕ್ಯ ಪಡೆದು ಅದನ್ನು ನನ್ನ ಬಳಿ ಇಡುವೆ.

ಲೇಖಣಿ, ಕಾಗದ ಹಾಗೂ ಪದಗಳ ಪ್ರಶಂಸೆ

(ದ್ವಿಪದಿ ೧೩೪ ರಿಂದ ೧೪೪ವರೆಗೆ)

ಕಾಗದ ರೂಪ ಕರ್ಪೂರದ ಮೈದಾನದಂತೆ ಕಾಣಿಸುತ್ತದೆ. ಲೇಖಣಿ ಕಸ್ತೂರಿ ಜಿಂಕೆಯ ಹಾಗೆ ಮಧ್ಯದಲ್ಲಿ ಓಡುವುದು. ಬುದ್ಧಿಯ ಶಿಕಾರಿ ಅದನ್ನು ನೋಡಿ ಹೃದಯದ ಗುಟ್ಟಿನ ಮರೆಯಲ್ಲಿ ಚಿಂತನೆಯ ಬಿಲ್ಲನ್ನು ತೆಗೆದುಕೊಂಡು ಮಾತಿನ ಬಾಣ ಹೊಡೆಯವನು. ತುದಿ ಕಸ್ತೂರಿಜಿಂಕೆಗೆ ತಗಲಿದಾಗ ಓಡಿ ಹೋಯಿತು. ಅದರ ರಕ್ತವು ಧಾರೆಯಾಗಿ ಬಿದ್ದು,

ಪದಗಳ ಕಸ್ತೂರಿ ಉದುರಿತು. ದುಂಬಿಯ ಕಣ್ಣುಗಳು ಅದನ್ನು ನೋಡಿ ಅದರ ಮೇಲೆ ಓಡಾಡಿ, ಅರ್ಥಗಳ ಸಂತೋಷ ಪಡಿಸುವ ಸುವಾಸನೆ ರೆಕ್ಕೆಗಳ ಮೇಲೆ ಉಳಿಯಿತು. ಈಕಡೆ ಕಾಗದವು ಅಮೃತದ ತೊಟ್ಟಿ ತುಂಬಿ ಅದರ ಮಧ್ಯ ಲೇಖಣಿ ಹಾವಿನ ಹಾಗೆ ಬಿದ್ದಿದೆ. ಲೇಖಣಿಯ ತುದಿ ನಾಲಿಗೆಯ ಹಾಗೆ ಅದನ್ನು ನೆಕ್ಕುತ್ತಾ ಗಾಬರಿಗೊಂಡಿತು. ವಿಷ ದವಡೆಗಳಿಂದ ಮಸಿಯನ್ನು ತುಂಬಿಕೊಂಡು ಉದುರಿಸಿತು. ಆದರೆ ಹಾವಿನ ವಿಷದೊಂದಿಗೆ ಸೇರಿ ಜಗಳಾಡಿದಾಗ ಮೂರು ಪದಗಳ ಅರ್ಥವನ್ನು ನೋಡಿ ಓದಿದರು. ವಿಷ ಏರಿದ ವಿಚಾರವನ್ನು ತಿಳಿಯದೆ ಧೈರ್ಯವನ್ನು ಕಳೆದು ಕೊಂಡು ಹೃದಯ ಕಳವಳಗೊಂಡರು. ಓ ಭಗವಂತನೇ! ಪದಗಳ ಕಣ್ಣಿನಲ್ಲಿ ಅರ್ಥ ಕಾಣಿಸುತ್ತವೆ ದೃಷ್ಟಿಯ ಪುಟ್ಟ ಕನ್ನಡಿಯಲ್ಲಿ ಮುಖ ನೋಡಿದ ಹಾಗೆ ಕಾಣುತ್ತವೆ. ನೀನು ಪದದ ಮರವನ್ನು ಹಣ್ಣು ತುಂಬಿದ ಹಾಗೆ ಮಾಡು. ಅವುಗಳಲ್ಲಿ ಪೂರ್ಣ ಅರ್ಥಗರ್ಭಿತ ಹಣ್ಣುಗಳನ್ನು ಪ್ರಕಟಿಸು. ನೀನು ಅರ್ಥಗಳ ಬೀಜವನ್ನು ದಾಳಿಂಬರೆಯ ಬೀಜಗಳ ಹಾಗೆ ತುಂಬು. ಪದಗಳು ಕಡಿಮೆ ಇರಲಿ, ಅರ್ಥ ಅನೇಕವಿರಲಿ.

ಹಜ್ರತ್ ಶಾಹ ಆಲಂಪನಾಹರವರ ಗುಣಗಾನದಿಂದ ಇಬ್ರಾಹೀಮ ನಾಮಾ ಕೃತಿಯ ಆರಂಭ
(ದ್ವಿಪದಿ ೧೪೫ ರಿಂದ ೧೯೭ವರೆಗೆ)

ಇಬ್ರಾಹೀಮ ನಾಮಾವನ್ನು ಪ್ರಾರಂಭಿಸುತಿದ್ದೇನೆ. ಅವನ ಗುಣ ಇಡೀ ಪ್ರಪಂಚದಲ್ಲೇ ತುಂಬಿದೆ. ಸ್ವರ್ಗ, ಮೃತ್ಯುಲೋಕ, ಪಾತಾಳ, ಭೂಮಿಯ ಎಲ್ಲಕಡೆ, ಇಡೀ ಪ್ರಪಂಚದಲ್ಲಿ ಎಲ್ಲಕ್ಕಿಂತ ಉನ್ನತ ಮಟ್ಟದ ರೂಪದಲ್ಲಿ ತುಂಬಿದೆ. ಆಮೆಯ ಬೇರನ್ನು ಹಿಡಿದು ಶೇಷನಾಗವು ನಿಂತಿದೆ. ಪೃಥ್ವಿ ಕಮಲದ ಹಾಗೆ ಕಾಣಿಸಿಕೊಂಡು ಎಂಟು ದಿಸೆಗಳಾದುವು. ಅದರ ಮಧ್ಯದಲ್ಲಿ ಮೇರು ಪರ್ವತವನ್ನು ವರೆಸಿ ಇಟ್ಟನು. ಹನಿರಸ ಆ ಸದಾ ಹರಿಯುವ ನದಿಯಲ್ಲಿ ಬಿದ್ದು, ಸುತ್ತಲೂ ಹರಡಿತು. ಶಾಹನ ಗುಣದ ಸುಗಂಧದ ಸುಪ್ರಸಿದ್ಧತೆ ಎಲ್ಲಕಡೆ ತುಂಬಿತು. ಆಕಾಶದ ದುಂಬಿಯು ಹಗಲು ರಾತ್ರಿಯ ಮಧ್ಯದಲ್ಲಿ ಓಡಾಡಿತು. ಆದರೂ ಸಹ ಶಾಹನ ಸ್ವಲ್ಪ ಗುಣಗಳನ್ನು ತಿಳಿ. ಅದು ಮರದ ಹಾಗೆ ಭೂಮಿ ಆಕಾಶದಲ್ಲಿದ್ದ ಎಂಟು ದಿಶೆಯಲ್ಲಿ ಕೊಂಬೆಗಳು, ಗಗನವೂ ಎಲೆ ಇದ್ದ ಹಾಗೆ, ಸೂರ್ಯ, ಚಂದ್ರ, ಎಲೆ, ಹಣ್ಣು ಗುರುತಾಗಿ ಕಾಣಿಸುತ್ತವೆ. ಆ ಮರದ ಗುಣಗಾನ ಮಾಡಲು ಯಾರಿಂದಲೂ ಸಾಧ್ಯವಿಲ್ಲ. ಎಲ್ಲಿಯವರೆಗೆ ನಾಲಿಗೆ ನದಿಯ ಗುಣ ಹೊಂದುವುದಿಲ್ಲವೋ, ಅದನ್ನು ನೋಡಿ ಬುದ್ಧಿ ಬಡಪಾಯಿ ಆಶ್ಚರ್ಯ ಪಟ್ಟಿತು. ಶಾಹನ ಗುಣದ ಮರದ ಕೊಂಬೆಯನ್ನು ಹೇಗೆ ಹಿಡಿಯುವುದು? ಹೃದಯದ ಮೇಲೆ ತಲೆ ಇಟ್ಟು, ಬುದ್ಧಿ ಚಿಂತನೆಯ ಕಾಲು ನಾಲಿಗೆ ಸವಾರನಾಗಿ ಮಾತಿನ ಕೈ ಹಿಡಿದು ಓಡಿತು. ಈ ರೀತಿಯ ಗುಣದ ಪ್ರಕಾಶದ ಕೆಲಸವನ್ನು ಹಿಡಿದ ಇಬ್ರಾಹೀಮ ಆದಿಲ್ ಶಾಹನ ರಾಜ್ಯದ ಅದೇ ಚಂದ್ರಮ, ಶಾಹ ಜಗತ್ತಿನ ಬೆಳದಿಂಗಳು. ಅದೇ ಚಂದ್ರಬೆಳಕಿನ ನೆರಳು ಜಗತ್ತೆಲ್ಲ ಚಂದ್ರ ಬೆಳಕು. ಅದೇ ರೂಪದ ಮೇಲೆ ಸೂರ್ಯ ಚಂದ್ರ ಮರೆತು ಹಗಲು ರಾತ್ರಿಯಾಗಿ ಅದರ

ಸುತ್ತಲೂ ಸುತ್ತುತ್ತಿವೆ. ಆ ರೂಪದ ಮೇಲೆ ಲಕ್ಷಾಂತರ ಸೂರ್ಯ ಚಂದ್ರಗಳು ಹೀಗೆ ಓಡಾಡುತ್ತವೆ. ಆ ಶಾಹನನ್ನು ನೋಡಲು ಹಗಲು ರಾತ್ರಿ ಜಪ ಮಾಡುತ್ತಿವೆ. ಬೆಳಗಿನ ಸೂರ್ಯ ಬೂದಿ ಬಡೆದು ಕೊಂಡು ಜೋಗಿಯಾದ ತಲೆಯ ಕಿರಣಗಳನ್ನು ಹರಡಿಸಿಕೊಂಡು ಕಣಿವೆಯಲ್ಲಿ ಓಡಾಡಿಸುತ್ತಿದೆ. ಸಂಜೆಯಾದ ಕೂಡಲೆ ಅದು ನದಿಯಲ್ಲಿ ಹೋಗುತ್ತದೆ (ಮುಳುಗುತ್ತದೆ). ಮುಂಜಾನೆ ಬಂದು ಅದು ಶಾಹನ ಕಾಲು ಹಿಡಿದು ಬೇಡುತ್ತದೆ. ಓ ಶಾಹೆ ಆಲಂ, ನೀನು ಸೂರ್ಯ ರೂಪ ದಾನವಾಗಿ ನೀಡು. ನನ್ನ ದೇಹದ ಜ್ಯೋತಿಯಿಂದ ಇಡೀ ಲೋಕವೆಲ್ಲ ಬೆಳಕಾಗಲಿ. ನನ್ನ ತೇಜದ ರೂಪ ಸಹಿಸಲಾರದೆ, ಸೂರ್ಯನ ನೇತ್ರ ಕಿರಣಗಳಿಂದ ರಾತ್ರಿಯೂ ಬಚ್ಚಿಟ್ಟುಕೊಳ್ಳುತ್ತದೆ. ಎರಡನೆಯದೇನೆಂದರೆ ಚಂದ್ರನೂ ಸುಟ್ಟುಕೊಂಡು ತನ್ನ ರೂಪ ಅಲಂಕರಿಸುವನು. ಗಗನ ಬೆಟ್ಟ ಹತ್ತಿ ರಾತ್ರಿಯಾಗಿ ಕುಳಿತುಕೊಂಡಿತು. ಊಟ ಬಿಟ್ಟು ಪೂರ್ಣವಾಗಿ ಕಂಗಾಲಾಗಿ ದೂರನಾದ. ಅದರಿಂದಾಗಿ ಅದರ ಮೈ ತೆಳುವಾಗಿ ಹಗಲು ರಾತ್ರಿ ಕ್ಷೀಣನಾಗಿದ್ದ. ಮರದ ರಸ ಕುಡಿದ, ಮುಖದ ಮೇಲೆ ಮಸಿ ತಗಲಿತು. ಅದರ ಗುರುತು ಇಲ್ಲಿಯವರೆಗೂ ಚಂದ್ರನ ಮೇಲೆ ಕಾಣಿಸುತ್ತಿದೆ.

ಕೈಯಲ್ಲಿ ಕಿರಣಗಳ ರತ್ನಗಳ ಮಾಲೆ ಹಿಡಿದು ಜಪ ಮಾಡುತ್ತ ನಕ್ಷತ್ರಗಳ ಹಾರಗಳನ್ನು ಪೋಣಿಸಿ ಜಪದ ಭಾಗ ಮಾಡಿದ. ಬೇಡಿದರೆ, ಶಾಹ್ ಆಲಂ ಬಣ್ಣವನ್ನು ದಾನವಾಗಿ ಕೊಡುವನು. ಅದರಿಂದ ನನ್ನ ಕಲೆ ಜ್ಯೋತಿ ಆ ಬಣ್ಣದಿಂದ ಪೂರ್ಣಗೊಳ್ಳುತ್ತದೆ. ಚಿತ್ರಕಾರ ಗಗನದ ಹಾಳೆ ಕೈಯಲ್ಲಿ ತೆಗೆದುಕೊಂಡು ಬಂದು, ಶಾಹನ ರೂಪದ ಬಣ್ಣ ತುಂಬಿದ್ದ ರೀತಿಯನ್ನು ನೋಡಿ ಚಂದ್ರ ಸೂರ್ಯ ಹನಿಯಾಗಿ ಅದನ್ನು ಪರೀಕ್ಷಿಸಿದರು. ಇಡೀ ಜಗತ್ತಿನಲ್ಲೆ ಬೆಳಕನ್ನು ಪ್ರಕಟಿಸಿದ, ಆದರೆ ಚಂದ್ರ ಹಾಗೂ ಸೂರ್ಯನನ್ನು ಸರಿಸಮಾನ ಹೇಗೆ ಮಾಡಲಿ? ಶಾಹನ ಸುಂದರತೆಯ ಉದಾಹರಣೆ ಹೇಗೆ ಕೊಡಲಿ? ಉಷ್ಣದಿಂದ ಸೂರ್ಯನೇನೋ ಜಗದಲ್ಲಿ ಅಗ್ನಿಯ ಕೆಂಡ ಆದ.

ಚಂದ್ರ ಕ್ಷೀಣನಾಗಿ ಮುಖಕ್ಕೆ ಮಸಿ ಅಂಟಿಸಿಕೊಂಡ. ಸೂರ್ಯ ರೂಪ ಧರಿಸಿ ದಾರಿಗೆ ಬಂದರೆ ಚಂದ್ರನೂ ಅಮವಾಸ್ಯೆಯಲ್ಲಿ ಬಿದ್ದು ಮರೆಯಾಗುವನು. ಸೂರ್ಯನು ಹಗಲಿನಲ್ಲಿ ಹುಟ್ಟಿದರೆ ರಾತ್ರಿಯಲ್ಲಿ ಅಸ್ತಿತ್ವದಲ್ಲಿ ಕಳಂಕವಿದೆ. ಸೂರ್ಯನ ಜ್ಯೋತಿಯಲ್ಲಿ ೧೨ ಕಲೆಗಳಿವೆ, ಎರಡನೆಯದು ಚಂದ್ರದಲ್ಲಿ ೧೬ ಕಲೆಗಳಾಗುತ್ತವೆ. ಸೂರ್ಯ ಚಂದ್ರ ಎರಡೂ ಸೇರಿದರೆ ಒಟ್ಟು ೨೮ ಕಲೆಗಳಾಗುತ್ತವೆ. ಶಾಹನು ಸಂಗೀತ ಕಲೆಯ ಉಸ್ತಾದ್ ಆದ್ದರಿಂದ ೬೪ ಕಲೆಗಳನ್ನು ಹೊಂದಿದ್ದಾನೆ. ಇಲ್ಲಿ ಬಾದಶಾಹನ ರೂಪ ಬ್ರಹ್ಮಾಂಡದಲ್ಲಿ ತುಂಬಿಕೊಂಡಿದೆ. ಸೂರ್ಯ, ಚಂದ್ರ, ನಕ್ಷತ್ರಗಳ ಮಧ್ಯದಲ್ಲಿ ಬಿದ್ದಿದೆ. ಶಾಹನ ಸೌಂದರ್ಯ ಸಮುದ್ರದಲ್ಲಿ ಸೂರ್ಯ ಚಂದ್ರವಾಗಿ ಓಡಾಡುತ್ತವೆ. ಕೈಗಳನ್ನು ಜೋಡಿಸಿ ತನ್ನ ಕಲೆಗಳನ್ನು ತೋರಿಸುತ್ತವೆ. ಜಗತ್ತಿನ ರೂಪವಂತ ಬಂದು ಒಂದು ಸಲ ಭೇಟಿಯಾದರೆ ಶಾಹನ ಸೌಂದರ್ಯಕ್ಕೆ ಸ್ವಲ್ಪವೂ ಸರಿಸಮಾನವಾಗಿರುವುದಿಲ್ಲ. ಸಹಸ್ರಾರು ಲಕ್ಷ ಸೇರಿ ಪೈಪೋಟಿಗೆ ಬಂದರೂ ಸಹ ಸೂರ್ಯನ ತಟ್ಟೆಯ ಒಂದು ಕಿರಣಕ್ಕೂ ಸರಿಸಮಾನವಾಗಲು ಸಾಧ್ಯವಿಲ್ಲ.

ಹೀಗೆ ಸೂರ್ಯ ಶಾಹನ ಜ್ಯೋತಿಯನ್ನು ನೋಡಿ ಜಗತ್ತಿನಿಂದ ಮರೆಯಾದ. ಅನೇಕ ಚಂದ್ರನಂತಹ ರೂಪವಂತರು ಪ್ರಪಂಚದಲ್ಲಿ ಲಜ್ಜಿತರಾದರು. ಈ ರೀತಿಯ ಶಾಹನ ರೂಪದ ಕಥೆಯನ್ನೆಲ್ಲ ಕೇಳಿ ಮಿಸ್ರ್ (ಈಜಿಪ್ಟ್) ಯೂಸುಫ್ ಸಹ ಸುಮ್ಮನಿರಲಾರದೆ ಹೇಳಿದ. ಓ ದಕ್ಷಿಣ ಬಾದಶಾಹ ನನ್ನ ರೂಪದಿಂದಲೂ ನಿನ್ನ ರೂಪ ಅಧಿಕವಿದೆ. ಕಲೆಯ ಅರವತ್ತು ನಾಲ್ಕು ಲಕ್ಷಣಗಳನ್ನು ತುಂಬಿದೆ. ನನ್ನ ಸೌಂದರ್ಯವನ್ನು ನೋಡಿ ಝುಲೇಖಾ ಒಬ್ಬಳೇ ತನ್ನನು ಮರೆತಳು, ಆದರೆ ಬಾದಶಾಹನ ರೂಪ ನೋಡಿ ಇಡೀ ಪ್ರಪಂಚವೇ ಮರೆಯಿತು. ಅವನು ನ್ಯಾಯದಿಂದ ಇಡೀ ದೇಶವನ್ನೇ ಆಳುತ್ತಿದ್ದಾನೆ. ಶಾಹ ಆಲಂನು ಹೀಗೆಂದು ಜಗತ್ತು ತಿಳಿದಿದೆ. ಅವನ ನ್ಯಾಯದಿಂದ ಗುಬ್ಬಚ್ಚಿಗೂ ಸಹ ಹೆದರಿಕೆ ಇಲ್ಲ. ಬಾಝ್ ಅಂತಹ ಹಕ್ಕಿಯ ಕಣ್ಣಲ್ಲಿ ಅದು ತನ್ನ ಗೂಡು ಕಟ್ಟಿಕೊಳ್ಳುತ್ತದೆ. ಪೃಥ್ವಿ ಮುದುಡಿಕೊಂಡು, ಸಮುದ್ರದಲ್ಲಿ ಎಣ್ಣೆ ನೀರಿನ ಹಾಗೆ ತುಂಬಿಕೊಡಿದೆ. ಈ ಮಧ್ಯೆ ಮೇರು ಪರ್ವತ ಮರ್ಯಾದೆಯನ್ನು ಕಾಪಾಡಿದ. ದೀಪದ ಜ್ಯೋತಿಯ ಪ್ರಕಾಶ ಇಡೀ ದೇಶದಲ್ಲಿ ಹರಡಿತು. ಸೂರ್ಯ ರೂಪವನ್ನು ತಾಳಿ ಮಧ್ಯದಲ್ಲಿ ಬಂದು ಹೂ ಉದುರಿಸಿತು. ಆ ಹೂಗಳು ಉದುರಿ ಗಗನದ ಮೇಲೆ ಬಿದ್ದವು. ದಿಗಂತದ ರೂಪಧರಿಸಿ ಬೆಂಕಿಯನ್ನು ಸುರಿಸಿತು. ಹೊಗೆಬಣ್ಣವಾಗಿ ಗಗನ ಸುಟ್ಟು ಮೈ ಮೇಲೆ ಬೊಬ್ಬೆ ಬಂದಿತು. ಆ ಬೊಬ್ಬೆಗಳೇ ರಾತ್ರಿಯ ಬಣ್ಣದಲ್ಲಿ ನಕ್ಷತ್ರಗಳು ಹೊಳೆಯುತ್ತವೆ. ಆ ಬೊಬ್ಬೆಗಳಿಂದ ಬಹಳ ನೀರು ಸುರಿದು, ಬೆಳಗ್ಗಿನ ರೂಪಧರಿಸಿ ಗಗನದ ಕೆರೆ ತುಂಬಿತು. ಸೂರ್ಯ ಆಮೆ ರೂಪದಲ್ಲಿ ಆ ನೀರಲ್ಲಿ ತೇಲಿತು. ಪಾಚಿಯೂ ರಾತ್ರಿಯಲ್ಲಿ ಹೊರಗೆ ಬಂದು ಸಂತೋಷದಿಂದ ಓಡಾಡಿತು. ಈ ರೀತಿಯಾಗಿ ಶಾಹ ಆಲಂ ರವರ ಹೆಸರು ಜಗತ್ತಲ್ಲಿ ಪ್ರಸಿದ್ಧವಾಯಿತು. ಸಿಕಂದರ್ ಝುಲ್‌ಖರನೈನಿನ ಕಾಲ ಮರಳಿ ಬಂದಿದೆ. ನೌಷೇರ್ವಾನ್ ಏನೋ ಒಳ್ಳೆಯ ಹೆಸರನ್ನು ಗಳಿಸಿದ. ಆದರೆ ಅವನ ಹೃದಯದಲ್ಲಿ ಎಂದೆಂದಿಗೂ ಕಪಟವಿತ್ತು. ನಾನು ಶಾಹನ ಮುಂದೆ ಬಂದು ಹೇಗೆ ತಲೆ ಎತ್ತಲಿ? ಲಕ್ಷಾಂತರ ನೌಷೇರ್ವಾನರು (ಶಾಹನ) ನ್ಯಾಯದ ಮುಂದೆ ಲಜ್ಜಿತರಾದರು. ಯಾರು ಯಾವ ಕೆಲಸಕ್ಕೆ ಶಾಹನ ಬಳಿ ಬರುತ್ತಾನೆಯೋ, ಅವನು ಬೇಶ್ ಅನ್ನುತ್ತಾನೆ. ತನ್ನ ಮಾತಿನ ಉಪಾಯ ಪಡೆದು ಸಂತೃಪ್ತನಾಗುತ್ತಾನೆ. ಒಂದು ಸಲ ಬಾಯಿಯಿಂದ ಯಾವ ಮಾತು ಬರುತ್ತದೆಯೋ ಏನು ಹೇಳಿದ್ದನೋ ಆ ಮಾತಿನಿಂದ ಎಂದೂ ಹಿಂದಿರುಗಿದವನಲ್ಲ.

ಹಜ್ರತ್ ಶಾಹ ಆಲಂ ಪನಾಃ ಅಬುಲ್ ಮುಝಫ್ಫರ್ ಇಬ್ರಾಹೀಮ ಆದಿಲ್ ಶಾಹನ ಉದಾರತೆಯ ಪ್ರಶಂಸೆಯಲ್ಲಿ

(ದ್ವಿಪದಿ ೧೯೮ರಿಂದ ೨೧೭ ವರೆಗೆ)

ಶಾಹನ ಉದಾರತೆ ಜಗತ್ತಿಗೆ ಪ್ರಕಟವಾಯಿತು. ಕರುಣೆ ಮೋಡಗಳಾಗಿ ಉದಾರತೆಯ ಧಾರೆಗಳಾಗಿ ಸುರಿಯಿತು. ಅಗ್ನಿಯ ರೂಪ ದಾರಿದ್ರ್ಯವನ್ನು ಸುಟ್ಟು ಹಾಕಿತು. ಅತ್ಯಧಿಕ ದಾನ ನೀರಾಗಿ ಹರಿದು ಪ್ರತಿಯೊಂದು ವಸ್ತು ಅರಳಿತು. ಶಾಹನು ದಾನ ಮಾಡಿದ

ನಂತರ ಕೈ ತೋಳೆದರೆ, ಭೂಮಿ ದುಂಡಾಗಿ ಎರಡು ತುಂಡಾಗುತ್ತದೆ. ಶಾಹನು ದಾನದ ಅವತಾರನಾಗಿ ಅಪಾರ ದಾನ ಮಾಡುವವನಾದ. ಅದರಿಂದ ಬಲಿ ಮತ್ತು ಕರ್ಣರ ಹೆಸರು ಜಗತ್ತಿನಲ್ಲಿ ಪ್ರಸಿದ್ಧರಾದರು. ಎಷ್ಟೊಂದು ದಾನಮಾಡಿ ಜಗತ್ತಿನ ಒಳ್ಳೆಯವರಾಗಿ ಎನ್ನಿಸಿಕೊಂಡಿದ್ದಾರೆಯೋ ಅವರೆಲ್ಲರೂ ದಾನದ ರಾಶಿಗಳಿಂದ ದಾನಿ ಜನರಾದರು. ಶಾಹನ ದಾನದ ನದಿ ಅಪಾರವಾಗಿದೆ. ಅದರ ಮಧ್ಯದಲ್ಲಿ ಅವನ ಕೈ ಕಮಲದಂತೆ ಪ್ರಕಟವಾಗುತ್ತದೆ. ಎಲ್ಲಾ ಜೀವಿಗಳು ಜಗತ್ತನ್ನೇ ಮರೆತು ನಗುತ್ತಿದ್ದಾರೆ. ಕಮಲದಿಂದ ಹೊಸ ಹೊಸ ರತ್ನಗಳು ಉದುರುವುದೇ ಆಶ್ಚರ್ಯಕರವಾದುದು. ಗಗನ ಆ ನವರತ್ನಗಳನ್ನು ದಾನ ಕೊಡುವುದನ್ನು ನೋಡಿ ಹಗಲು ಮತ್ತು ರಾತ್ರಿ ಎರಡೂ ಬಗ್ಗಿ ಕೈ ಚಾಚುತ್ತಿವೆ. ಅತಿಯಾಸೆ ಶಾಹನ ಬಳಿ ಬಂದು ದಾನ ಕೇಳಿ ರತ್ನಗಳನ್ನು ನವಗ್ರಹವನ್ನಾಗಿ ಮಾಡಿ ತಲೆ ಇಟ್ಟು ಮಲಗಿತು. ಬಾದಶಾಹನ ದಾನದ ಭಯದಿಂದ ಹಿಮಗಿರಿ ಹೆದರಿ, ಬೆಳಕನ್ನು ಎಸೆದು ನದಿಯಲ್ಲಿ ಮಾಯವಾಯಿತು. ಇಂದ್ರಲೋಕದವರು ಹೆದರಿ ಹೀಗೆ ಪರಸ್ಪರ ಹೇಳಿದರು. ಪರ್ವತವೇ ಮಾಯವಾದರೆ ನಾವು ಎಲ್ಲಿರಬೇಕು. ಆದರೆ ಒಂದು ಮಾತನ್ನು ಕೇಳಿದವರೆಲ್ಲ ಸಂತೋಷ ಪಟ್ಟರು. ಮನದಲ್ಲೇ ಅತಿ ಸಂತೋಷಪಟ್ಟು ತುಂಬ ಮೋಸಹೋದರು. ಸ್ವಲ್ಪವೂ ದಾನವಿಲ್ಲದೆ ಸುಮರ ಪರ್ವತ ಶಾಹ ನಮ್ಮ ಮಧ್ಯೆ ಮತ್ತೆ ರಾತ್ರಿ ಬಿಟ್ಟು ಹೋಗುತ್ತದೆ. ಮತ್ತೆ ಶಾಹನ ದಾನ ಪ್ರಸಾದ ಕೆಳಗೆಲ್ಲ ಹರಡಿ ನಿತ್ಯವೂ ಹಗಲೇ ಇರಲು ಸಾಧ್ಯವಿಲ್ಲ. ನಾವು ಎಲ್ಲಿ ಸೇರುವುದು? ಶಾಹನು ಚಿನ್ನದಾನ ಮಾಡಿದರೆ ಸಮುದ್ರ ತುಂಬುತ್ತದೆ. ನೃತ್ಯ ಮಾಡುವಾಗ ಮೀನಿನ ಕೈಯಲ್ಲಿ ರತ್ನ ಸುತ್ತಾಡುತ್ತದೆ. ವಿಚಿತ್ರವಾದ ಐದು ಮುಖವುಳ್ಳ ಒಂದು ಮೀನು ಬಾಯಿ ತೆಗೆದು ಸದಾಕಾಲ ಚಿನ್ನದ ಧಾರೆಯನ್ನೇ ಉಗುಳುತ್ತದೆ. ಈ ರೀತಿಯ ಶಾಹನನ್ನು ಯಾರೂ ನೋಡಲೂ ಇಲ್ಲ ಕೇಳಲೂ ಇಲ್ಲ.

ಶಾಹನಿಗೆ ಹೊಂದಿಸುವಂತಹ ಅನ್ಯ ಉದಾಹರಣೆ ತರಲು ಸಾಧ್ಯವಿಲ್ಲ. ಶಾಹನ ಗುಣಗಳು ನದಿತುಂಬಿ ಹರಿಯುವ ಹಾಗೆ. ಜಗತ್ತಿನಲ್ಲೆಲ್ಲ ಹಕ್ಕಿಯ ಹಾಗೆ ಪ್ರಶಂಸೆ ಪಡೆಯಿತು. ಹಕ್ಕಿಗೆ ತುಂಬ ಬಾಯಾರಿಕೆಯಾಗಿದ್ದಲ್ಲಿ ಇಡೀ ನದಿಯನ್ನೇ ಹಾಗೆ ಕುಡಿಯಲು ಸಾಧ್ಯವಿಲ್ಲ. ಇರುವೆಗೆ ಸಹಸ್ರಾರು ಲಕ್ಷ ರೆಕ್ಕೆಯಿದ್ದರೂ ಸಹ ನಿತ್ಯಹರಿಯುವ ನದಿಯನ್ನು ಹಾರಿ ಮತ್ತೊಂದು ತೀರ ಹೋಗಲು ಸಾಧ್ಯವೇ? ಹೀಗೆ "ಅಬ್ದುಲ್" ಶಾಹನ ಗುಣಗಳ ನದಿಯನ್ನೇ ಹರಿಸಿದ. ಎಷ್ಟೊಂದು ಪ್ರಶಂಸಿದರೂ ಒಂದು ತಪ್ಪನ್ನು ಮಾಡಿದ.

■

*

ಬಿಜಾಪುರ ನಗರದ ಪ್ರಶಂಸೆಯ ಬಗ್ಗೆ

(ದ್ವಿಪದಿ ೨೧೮ರಿಂದ ೨೨೫ವರೆಗೆ)

ಶಾಹನ ರಾಜಧಾನಿಯ ಗುಣಗಳನ್ನು ಈಗ ಕೇಳಿ. ಅದರ ಮತ್ತೊಂದು ಹೆಸರು ಬಿದ್ಯಾಪುರವೂ ಹೌದು.

ಧನ್ಯ ಈ ಪೃಥ್ವಿಯ ಜಾಗ ತುಂಬ ಅದೃಷ್ಟಶಾಲಿಯಾದಂತಹದು. ಅದರ ತಲೆಯಿಂದ ಬಿದ್ಯಾಪುರ ನಗರ ನೆಲೆಸಿತು. ಆದರೆ ಪೃಥ್ವಿ ಎಷ್ಟೊಂದು ವಿಶಾಲವಾಗಿದೆಯೋ ಅಷ್ಟು ಈ ನಗರದ ಮಧ್ಯದಲ್ಲಿರುವ ಒಂದು ಚೌಕವಿದೆ. ಅಂದರೆ ಅದನ್ನು ಈ ನಗರದ ಛಜ್ಜೆ ಎಂದು ತಿಳಿ. ಏಳು ಅಂತಸ್ತಿನ ಅರಮನೆಯ ರೂಪ ಗಗನದಲ್ಲಿ ದ್ವಜವಾಗಿ ಕಾಣಿಸುತ್ತದೆ. ಸೂರ್ಯ ಚಿನ್ನದ ಹಾಳೆ ಜೋಡಿಸಿರುವುದು ಸೂಕ್ತವಾಗಿದೆ. ಕಿರಣಗಳು ದಾರ ಕಟ್ಟಿರುವ ಹಾಗೆ ಕಾಣಿಸುತ್ತದೆ. .ಮಣ್ಣಿನ ಕುಂಡದ ತೇಜೊವಲಯ ನೀರು ತುಂಬಿ ಇಟ್ಟಿರುವ ಹಾಗೆ ಕಾಣಿಸುತ್ತದೆ. ಬೆಳ್ಳಿಯ ಮನೆಯಲ್ಲಿ ಪೂರ್ಣಮಾಸಿಯ ಚಂದ್ರ ನಿಂತಿರುವನು. ನಕ್ಷತ್ರಗಳು ಮಾಣಿಕ್ಯದ ಹಾರಗಳನ್ನು ಎಣಿಸುತ್ತಿವೆ ಆಕಾಶಗಂಗೆಯ ಜಾಗದಲ್ಲಿ ಹವಳಗಳನ್ನು ತಂದಿಟ್ಟ ಈ ಪಟ್ಟಣದ ಸುತ್ತಲೂ ಖಂದಖ ತೋಡಿಸಿ ನೀರು ತುಂಬಿಸಿದ, ಅದರಲ್ಲಿ ಆಕಾಶ ನೀರಿನ ಗುಳ್ಳೆಗಳ ಹಾಗಿದೆ.

ಕೋಟೆಯ ಮೇಲೆ ತೋಪುಗಾಡಿಯ ಜಗಲಿ ಹಾಗೂ ಕೋಟೆ ಮಧ್ಯಭಾಗ ಮತ್ತು ಅರಮನೆಯ ಪ್ರಶಂಸೆ

(ದ್ವಿಪದಿ ೨೨೬ರಿಂದ ೨೬೮ವರೆಗೆ)

ಈ ವಿಸ್ಮಯ ಪಟ್ಟಣ ಸುತ್ತಿದ ಗೋಡೆ, ಅದರ ಮೇಲೆ ಅಗಲವಾದ ಕಟ್ಟೆಗಳು, ಪೃಥ್ವಿ ತನ್ನ ಕೊರಳಲ್ಲಿ ಪದಕ ಹಾಕಿಕೊಂಡು ಶೃಂಗರಿಸಿದ ಹಾಗೆ ಕಾಣುತ್ತದೆ. ಅರಾಬ ಮಧ್ಯೆ ಗರಗಸದಾಕಾರದಲ್ಲಿ ಮಾಡಿದ ಕೆಲಸ ಸೇರಿ ಮಾಣಿಕ್ಯ ಜೋಡಿಸಿದ ಎರಡು ಲಡಿಗಳ

ಹಾಗೆ ಕಾಣಿಸುತ್ತದೆ. ನಡುನಡುವೆ ಗೋಪುರಗಳು ವಿಸ್ಮಯವಾಗಿ ಕಾಣಿಸುತ್ತವೆ. ಪಚ್ಚೆ ಮತ್ತು ದೊಡ್ಡ ವಜ್ರ ಮುತ್ತುಗಳಿಂದ ಜೋಡಿಸಿದ ಹಾಗೆ ಅಲ್ಲೇ ನಗರದ ಮಧ್ಯದಲ್ಲಿರುವ ಕೋಟೆಯಲ್ಲಿ ಎರಡನೆಯ ಸುತ್ತಿನ ಗೋಡೆ ಮುತ್ತುಗಳ ಹಾಗೆ ಕಾಣಿಸುತ್ತದೆ. ಬಾದಶಾಹನ ಅರಮನೆ ಸುಂದರ ರತ್ನ-ಮುತ್ತಿನ ಹಾಗಿದೆ. ಅದು ನಕ್ಷತ್ರಗಳು ವರ್ತುಲ ಆಕಾರದಲ್ಲಿ ಚಂದ್ರನ ಮನೆ ಸುತ್ತಿಕೊಂಡಿವೆ. ನಗರದ ಕೋಟೆ ಮಧ್ಯದಲ್ಲಿ ಬಾದಶಾಹನ ಮನೆ ಹೇಗೆ ಕಾಣಿಸುತ್ತದೆಂದರೆ ಅರಮನೆಯ ಮೇಲೆ ಚಂದ್ರ ಐಶ್ವರ್ಯದ ಕೋಟೆಯನ್ನೇ ತೆರೆದಹಾಗೆ ಕಾಣಿಸುತ್ತದೆ. ಕೋಟೆಯೊಳಗಿಂದ ಅರಾಬ ಸೇರಿಸಿ ನೋಡಿದರೆ ಚಂದ್ರನ ಮೇಲೆ ಮತ್ತೊಂದು ಸೂರ್ಯ ಅರಳಿದ ಹಾಗೆ ಕಾಣಿಸುತ್ತದೆ, ಅಥವಾ ಐಶ್ವರ್ಯ ಉಡಪನ್ನು ಧರಿಸಿ ನಿಂತಿದೆ. ಜೋಡಿ ಕೋಟೆಯ ಕೊರಳಲ್ಲಿ ಸುಂದರವಾದ ಆಭರಣವನ್ನು ಧರಿಸಿದೆ. ಅದೇ ಕೊರಳಿನ ಆಭರಣದ ನೆರಳೆಂದು ಮತ್ತೊಂದು ಸಹ ತಿಳಿ. ಸುತ್ತಲೂ ಅದರ ಗುರುತಾಗಿವೆ. ಅರಾಬನ ಕೈ ನೆಲವನ್ನು ಸುತ್ತಿ ಹಿಡಿದಿದೆ ಏಕೆಂದರೆ ಈ ನಗರಕ್ಕೆ ದೃಷ್ಟಿ ತಾಗದಿರಲೆಂದು. ಈ ನಗರದಲ್ಲಿ ಎಲ್ಲಾ ದೇಶದವರು ವಾಸಿಸಿದ್ದಾರೆ. ಐವತ್ತಾರು ದೇಶದ ಜನ ಸುಖ ಸಂತೋಷದಿಂದ ಇದ್ದಾರೆ. ನಗರ ಮಧ್ಯದಲ್ಲಿ ಎಲ್ಲಾ ರೀತಿಯ ವಸ್ತುಗಳಿಂದ ತುಂಬಿದಂತೆ ಕಾಣಿಸುತ್ತದೆ ಅಂದರೆ ಸ್ವರ್ಗದ ನೆರಳಿನ ಪ್ರತಿಬಿಂಬ ಬೀಳುತ್ತಿದೆ. ಅರಮನೆಗಳ ಮೇಲೆ ವಾಯು ವಿಹಾರಕ್ಕಾಗಿ ತೆರೆದ ಚಾವಣಿಗಳಿವೆ. ಈ ರೀತಿಯ ಬಾದಶಾಹರ ಮನೆಗಳು ಅನ್ಯ ನಗರಗಳಲ್ಲಿ ಸಿಗಲಾರವು. ಇಡೀ ನಗರದ ಎಲ್ಲಾ ಜಾಗಗಳು ತುಂಬಿ ತುಳುಕಾಡುತ್ತಿವೆ. ನಗರದ ಎಲ್ಲ ವಸ್ತುಗಳು ಅತಿಯಾಗಿ ಶೃಂಗರಿಸಿ ಸುಂದರವಾಗಿ ನಿಂತಿವೆ. ಸಂತೆಯು ಕೊರಳಲ್ಲಿ ಹಾರತೊಟ್ಟಿರುವ ಹಾಗೆ ಕಾಣುತ್ತದೆ. ಅದರ ಮಧ್ಯದಲ್ಲಿ ಜುಮಾ ಮಸೀದಿ ಹಾರದಲ್ಲಿ ಪದಕ ಜೋಡಿಸಿದಂತೆ ಕಾಣುತ್ತದೆ. ಎಲ್ಲ ಕಡೆಯೂ ಅನೇಕ ಸಂತೆಗಳಿವೆ. ತುರಾಯಿ ಸಿಹ್ರಾ ಮುತ್ತುಗಳ ಲಡಿಗಳಿಂದ ತುಂಬಿವೆ.

ತಲೆಯಲ್ಲಿ ಹೂವ ಮುಡಿದ ಹಾಗೆ ರಾಜನ ಅರಮನೆ, ಅರಮನೆ ಮುಂದಿರುವ ಬುರ್ಜನಲ್ಲಿ ಗಂಟೆ ಬಾರಿಸುವ ಶಬ್ದ ಕೇಳಿಸುತ್ತದೆ. ಆದರೆ ಪ್ರತಿಯೊಂದು ಗಂಟೆಗೆ ಈ ಗಂಟೆ ಬಾರಿಸುತ್ತದೆ. ರಾಜ ಪ್ರತಿ ಗಂಟೆ ಪ್ರತಿ ಮಾಸ ರಾಜ್ಯ ಆಳುತ್ತಾನೆ. ಕಾಲ ವಿಚಿತ್ರ, ತರುಣ ಕಿಶೋರನಾಗಿ ನಿಂತ ಬಿದ್ಯಾಪುರ ನಗರದ ರೂಪ ತಾಳಿ ನಿಂತ. (ಕಾಲ ಕಳೆದಂತೆ ಬಿದ್ಯಾಪುರ ನಗರ ಸುಂದರ ಯುವ ಹುಡುಗನಾಗಿ ನಿಂತ) ತಾಶೆ ಗಂಟೆಯ ಜೊತೆ ಸೇರಿ ಹೇಗೆ ಕಾಣಿಸುತ್ತದೆಂದರೆ, ನಗರ ತನ್ನ ಕೊರಳಲ್ಲಿ ಅಷ್ರಫಿ ಕಟ್ಟಿರುವ ಹಾಗೆ ಕಾಣಿಸುತ್ತದೆ. ಅಂದರೆ ದೇವತೆಗಳು ಹಗಲು ರಾತ್ರಿ ಗಗನದಿಂದ ಇಬ್ಬರು ಬಂದು ಬಿದ್ಯಾಪುರ ನಗರವನ್ನು ನೋಡಿ ದೃಷ್ಟಿ ತಾಕಿಸಿದರು. ಸೂರ್ಯ ಚಂದ್ರ ಕಣ್ಣು ತೆರೆದು ನೋಡಲು ಸಾಧ್ಯವಿಲ್ಲ. ಕೊರಳಲ್ಲಿ ಬಿದ್ದಿರುವ ಅಷ್ರಫಿ ತಾಷೆಯಾಗಿ ದೃಷ್ಟಿಗೆ ಅಡ್ಡವಾಗಿದೆ.

ಗಗನ ತನ್ನ ಕೈಯಲ್ಲಿ ಹಗಲೂ ರಾತ್ರಿ ತಾಷೆಯ ತಟ್ಟೆಯನ್ನು ಹಿಡಿದು ಗಂಟೆಗೊಮ್ಮೆ

ಡಂಗೂರ ಬಾರಿಸತೊಡಗಿತು. ಪ್ರಪಂಚದಲ್ಲಿ ಯಾರು ದುಃಖದಲ್ಲಿ ಮುಳುಗಿ ಓಡಾಡಿದ್ದಾರೆಯೋ ಅವರೆಲ್ಲರೂ ಬಿದ್ಯಾಪುರ ನಗರದಲ್ಲಿ ಸುಖದಿಂದ ಇದ್ದರು. ಈ ಪಟ್ಟಣದಲ್ಲಿ ಯಾರ ಕಣ್ಣಿಂದಲೂ ನೀರು ತೊಟ್ಟಿಕ್ಕುವುದಿಲ್ಲ. ಮೋಡಗಳಿಂದ ಬೀಳುವ ಧಾರೆಗಳನ್ನು ಬಿಟ್ಟರೆ ಮತ್ತೇನು ಬೀಳುವುದಿಲ್ಲ. ಈ ಪಟ್ಟಣದಲ್ಲಿ ನೋವಿನಿಂದ ನರಳುವರ ಕೂಗು ಕೇಳಿಸುವುದಿಲ್ಲ, ಮುರಳಿ ಮತ್ತು ಶಹನಾಯಿಯ ಧ್ವನಿಗಳನ್ನು ಬಿಟ್ಟರೆ ಮತ್ತೇನು ಕೂಗಿಲ್ಲ. ಈ ನಗರದಲ್ಲಿ ಯಾರೂ ಸಹ ಬರಿಕತ್ತಲ್ಲಿ ಓಡಾಡುವುದಿಲ್ಲ. ಪ್ರತಿಯೊಬ್ಬರ ಕೊರಳಲ್ಲಿ ಮುತ್ತುಗಳ ಅಥವಾ ಹೂವಿನ ಹಾರಗಳು ಇರುತ್ತವೆ. ಈ ನಗರದಲ್ಲಿ ಜಗಳ ಕಾಯುವರು ಯಾರೂ ಇಲ್ಲ. ಕೇಸರಿ ಮತ್ತು ಕಸ್ತೂರಿ ಬಿಟ್ಟರೆ ಮತ್ತೇನು ಕಾಣಿಸುವುದಿಲ್ಲ. ಈ ನಗರದಲ್ಲಿ ಯಾರು, ಯಾರಿಗೂ ಹೊಡೆಯುವುದಿಲ್ಲ, ಮಂಡಲದ(ನಗಾರಿ ತರ ಒಂದು ವಾದ್ಯ)ಗಾಯನ ಬಿಟ್ಟರೆ ಮತ್ತೇನು ಕಾಣಿಸುವುದಿಲ್ಲ. ಗಂಟೆಯ ಶಬ್ದ ಪ್ರತಿ ಗಂಟೆಯೂ ಹೀಗೆಂದು ಬಾರಿಸುತ್ತದೆ. ದೇವರೆ ಈ ಪಟ್ಟಣ ಸ್ಥಿರವಾಗಿ ಹೀಗೆ ನೆಲೆಯೂರಲಿ. ಎಲ್ಲಾ ದಿಸೆಯಲ್ಲಿ ಬಾಝಾರಿನ ಸಾಲುಗಳು ಹೇಗೆ ಕಾಣಿಸುತ್ತದೆಂದರೆ ಬಿದ್ಯಾಪುರ ನಗರ ಕೊರಳಿನ ಆಭರಣ ತೊಟ್ಟು ಶೃಂಗರಿಸಿಕೊಂಡಿರುವ ಹಾಗೆ ಎಲ್ಲಾ ರೀತಿಯ, ಎಲ್ಲಾ ರೂಪದ ಬಣ್ಣಗಳ ಅಂಗಡಿಗಳು ಹೇಗೆ ಕಾಣಿಸುತ್ತವೆಂದರೆ ನವರತ್ನಗಳ ಜ್ಯೋತಿ ಮನಸ್ಸಿನ ಮಧ್ಯದಲ್ಲಿ ಬೆಳಗಿದ ಹಾಗೆ ಕಾಣಿಸುತ್ತದೆ. ಎಲ್ಲಾ ಕಡೆಯೂ ವ್ಯಾಪಾರಿಗಳು ತುಂಬ ನೆಲೆಯೂರಿರುವರು. ಐವತ್ತಾರು ದೇಶದ ಭಾಗ್ಯವಂತರು ರತ್ನ ಜೋಡಿಸಿರುವ ಹಾಗಿದ್ದಾರೆ. ರತ್ನವ್ಯಾಪಾರಿಗಳು ರತ್ನಗಳ ರಾಶಿ ಹಾಕಿಕೊಂಡು ಅಂಗಡಿಗಳನ್ನು ತೆರೆದಿದ್ದಾರೆ. ಬೇರೆ ನಗರಗಳಲ್ಲಿ ಈ ರೀತಿಯ ದಿನಸಿ ರಾಶಿಗಳು ಇರಲಾರವು ತಿಳಿದುಕೊ. ಅಲ್ಲೇ ಸುಗಂಧ ವಸ್ತುಗಳ ಅಂಗಡಿಗಳ ಸಾಲುಗಳೇ ಕಾಣಿಸುತ್ತವೆ, ಅದರಿಂದ ಬರುವ ಪರಿಮಳ ಲೆಕ್ಕವಿಲ್ಲದಷ್ಟು ದೇಶಗಳಿಗೆ ಹರಡುತ್ತಿದೆ. ಒಬ್ಬ ಮಾಣಿಕ್ಯ ಧರಿಸಿದರೆ, ಮತ್ತೊಬ್ಬ ಪಚ್ಚೆ ಧರಿಸಿದ್ದಾನೆ. ಯಾರೋ ಹಸಿರು ಮೂಡಿದ ನೀಲಿ ರತ್ನ, ಮತ್ತೊಬ್ಬ ನೀಲಮಣಿ, ಹೀಗೆ ಎಲ್ಲ ರೀತಿಯ ರತ್ನಗಳು ತುಂಬಿವೆ. ಅಲ್ಲಿಂದ(ಬುರ್ಜಿಯಿಂದ) ಕಣಿವೆ ಅಬ್ರಕ ಅಥವಾ ಮುತ್ತುಗಳ ಪುಡಿಯ ಗುರುತು ಗಗನದ ಸಣ್ಣ ಪೆಟ್ಟಿಗೆಯಲ್ಲಿ ತುಂಬಿ ಹಗಲಾಯಿತೆಂದು ತಿಳಿ. ಸಂಜೆ ಹೊತ್ತು ರಸ್ತೆ ಬದಿಯ ನಗರದ ರೂಪ ಹೀಗಿರುತ್ತೆ. ಸಂಜೆಹೊತ್ತು ಇಡೀ ನಗರ ಶೃಂಗರಿಸಿದ ಹಾಗೆ ಕಾಣುತ್ತದೆ. ರಸ್ತೆಬದಿ ನಾಲ್ಕು ದಿಕ್ಕಿನಲ್ಲೂ ಹೇಗೆ ಬೆಳಕು ಚೆಲ್ಲಿರುತ್ತೆಂದರೆ, ಬಿದ್ಯಾಪುರ ನಗರ ಹೂ ಹಾಗೂ ರತ್ನಗಳ ಮಾಲೆಗಳನ್ನು ತೊಟ್ಟಿರುವ ಹಾಗೆ ದೀಪಗಳ ಜ್ಯೋತಿ, ಮಧ್ಯದಲ್ಲಿ ಮುಖಗಳು ಸಾಲುಸಾಲಾಗಿ ಉರಿಯುತ್ತಿದೆ. ಪ್ರತಿಯೊಂದು ದಾರಿ ಬದಿ ಬಝಾರುಗಳು, ಎಲ್ಲಾ ಜಾಗಗಳಲ್ಲಿವೆ. ಪ್ರತಿಯೊಂದು ದೀಪದ ಮುಖಗಳ ಮೇಲೆ ಹೊಗೆ ಹೇಗೆ ತುಂಬಿದೆಂದರೆ ನಗರದ ಅಂಧಃಕಾರ ತುಂಬಿ ಮುಖದಿಂದ ಉದುರುವ ಹಾಗೆ. ಹೀಗೆ ಬಾಝಾರ್‌ಗಳ ಸಾಲುಗಳು ಎಲ್ಲ ರೀತಿಯಲ್ಲಿ ಶೃಂಗರಿಸಿವೆ. ಎಲ್ಲ ರೀತಿಯ ಜನ ಎಲ್ಲ ಜಾಗಗಳಲ್ಲಿ ಸುತ್ತಾಡುವರು.

ಎಲ್ಲಾ ರೀತಿಯಲ್ಲಿ ತಾವೇ ಸ್ವತಹ ಶೃಂಗರಿಸಿಕೊಂಡಿರುವ ನೃತ್ಯ ಬಜ್ಹಾರಗಳ ಗುಣದ ಬಗ್ಗೆ ತೋರುವಿಕೆ

(ದ್ವಿಪದಿ ೨೬೯ ರಿಂದ ೨೯೫ವರೆಗೆ)

ಅದೇ ಸಾಲುಗಳ ಮಧ್ಯದಲ್ಲಿ ವಿದ್ಯಾವಂತ ಜನ ಕಲಾವಿದರು, ಕಲೆ ಬಲ್ಲವರು ಸರ್ವಾಂಗ ರುಚಿಗಳಿಂದ ಚಿರಪರಿಚಿತರು. ಒಂದು ಕಡೆ ನಾದದಿಂದ ಪ್ರಪಂಚದ ಪರಾತಗಳನ್ನೇ ತೃಪ್ತಿ ಪಡೆಸುವವರು. ಅದನ್ನು ಕೇಳಿ ಯಾರೂ ಸಹ ಸಹಿಸಿಕೊಳ್ಳಲು ಸಾಧ್ಯವಿಲ್ಲ. ಕೈಯಲ್ಲಿ ಸಂಗೀತದ ವಾದ್ಯಗಳನ್ನು ತೆಗೆದು ಕೊಂಡು ಹಾಡುವರು.

ಕಿವಿಗೆ ಮೋಹಿತವಾದ ಹಾಡು ಹಾಡಿದರೆ ಸ್ವರ್ಗದ ಜನ ಬರುವರು. ಅವರು ಬಂದು ನರ್ತಿಸಿದರೆ ಅವರ ಸರಿಸಮಾನ ಯಾರೂ ಇಲ್ಲ, ಇದನ್ನು ನೋಡಿ ಇಂದ್ರಸಭೆ ನರ್ತಕಿಯರೂ ಸಹ ಬುದ್ಧಿ ಭ್ರಷ್ಟರಾಗುತ್ತಾರೆ. ವಿದ್ಯೆ(ಸಂಗೀತ ವಿದ್ಯೆ)ಯಲ್ಲಿ ಎಂತಹ ಸುಂದರ ಸಂಪೂರ್ಣತೆ ಪಡೆದಿರುವರು. ಕಲಾ ರೂಪದಲ್ಲಿ ವಿಶೇಷ ರೂಪದಿಂದ ಶೃಂಗರಿಸಿದವರು, ಜಿಂಕೆಮರಿಯ ಕಣ್ಣುಳ್ಳವರಿಗೆ ಯಾರಾದರೂ ದಿಟ್ಟಿಸಿ ನೋಡಿದರೆ ಅವರು ಕಣ್ಣು ಹೊಡೆದರೆ, ಜಗತ್ತಿನ ಜೀವಕ್ಕೆ ಚುಚ್ಚುವ ಹಾಗಾಗುತ್ತದೆ. ಮತ್ತೊಬ್ಬಳು ಗುಜರಾತಿ ರೇಷ್ಮೆ ಸೀರೆ ಉಟ್ಟು, ಚಂದನದ ಗಂಧ ಲೇಪಿಸಿದರೆ, ಇನ್ನೊಬ್ಬಳು ಬೆಳ್ಳಿ ಪದರದ ಪಾನ್ ಬೀಡ ಬಾಯಿಯಲ್ಲಿಟ್ಟು ನುಂಗಿದ್ದಾಳೆ. ಮತ್ತೊಬ್ಬಳು ಮಾತನಾಡುತ್ತಾ, ನಕ್ಕರೆ ಅವಳ ದಂತಗಳು ಹೇಗೆ ಕಾಣಿಸುತ್ತವೆಂದರೆ, ಕಮಲದ ಮೊಗ್ಗಿನ ಮಧ್ಯದಲ್ಲಿ ಸಿಡಿಲು ಮಿಂಚಿದ ಹಾಗೆ ಕಾಣುತ್ತದೆ. ಮತ್ತೊಬ್ಬಳು ಎತ್ತರ ದೇಹದವಳು, ತಲೆಯಾಡಿಸಿ ತೂರಾಡುತ್ತ ಹೇಗೆ ನಡಿಯುತ್ತಾಳೆಂದರೆ, ಸುಂದರವಾದ ತೋಟದಲ್ಲಿ ಸರ್ವೆ ಮರಗಳು ತೂರಾಡುವ ಹಾಗೆ ಕಾಣಿಸುತ್ತದೆ. ಮತ್ತೊಬ್ಬಳು ಸ್ವಲ್ಪ ನಡೆದರೆ, ಇನ್ನೊಬ್ಬಳು ಮೈಯನ್ನು ಗಟ್ಟಿಯಾಗಿ ಬಿಗಿದು ನಿಂತಿರುವಳು. ವೈಯಾರದಿಂದ ನಡೆಯುತ್ತಿದ್ದರೂ ಸಹ ರಾಜಹಂಸದ ನಡಿಗೆಯಾಗಿದೆ. ಮತ್ಯಾರೋ ರತ್ನದ ಉಡುಪನ್ನು ಧರಿಸಿ ಶೃಂಗರಿಸಿ ನಿಂತಿರುವಳು. ಇನ್ನೊಬ್ಬಳು ಮುತ್ತು ಕಟ್ಟಿ ಸುಂದರ ಕೊರಳನ್ನು ಮುಟ್ಟುವಹಾಗೆ ಕಾಣುತ್ತದೆ. ಇಲ್ಲಿ ಹಾಗೆ ನೋಡಿದರೆ ಉಡುಪು ಸಹ ಸುಗಂಧ ತರುತ್ತದೆ. ಬಿಸಿಯಾಗಿರುವ ಮೈಯನ್ನು ನಿಲ್ಲಿಸಿಕೊಂಡು ಎಲ್ಲ ತರದಲ್ಲಿ ಬರುವೆವು. ಮುಂಚಾಚಿದ ಮಹಡಿ ಮೇಲೆ, ಮಹಡಿ ಏಳೇಳು ಪರಾತೆ ಪ್ರತಿಯೊಂದು ಮಹಡಿಯಲ್ಲಿಯೂ ವಿವಿಧ ರೀತಿಯ ಬೈಠಕ್‌ಗಳಿವೆ. ಅಲ್ಲಿ ಸ್ವರ್ಗದ ಮನೆಗಳು ಇವೆ, ಅದರಲ್ಲಿ ಹೂರುಗಳು [ಅಪ್ಸರೆಯರು] ವಾಸಿಸುತ್ತಿದ್ದಾರೆ. ಆದರೆ ಅವು ಆ ಅಪ್ಸರೆಯರಿಂದ ಅಧಿಕ ರೂಪವೆಂತರೆಂದು ತಿಳಿ. ಯಾವದೇ ಅಪ್ಸರೆಯರಿಂದ ನೋಡಲೂ ಇಲ್ಲ. ಎಲ್ಲೂ ಸಹ ಕೇಳಲೂ ಇಲ್ಲ. ಆ ಹೂರುಗಳು ಗಗನದಲ್ಲಿರುವರು, ಆದರೆ ಇವು ಈ ಪ್ರಪಂಚದಲ್ಲಿವೆ. ಯಾವನು ಸ್ವಲ್ಪ ನೋಡಿದನೋ ಅವನು ಮೋಹಿತನಾದ. ಎಷ್ಟೋ ಜೋಗಿ ಜಂಗಮರು ಎಷ್ಟು ಅಪಾರ ಸಿದ್ಧಿ ಪಡೆದವರು, ಜೀವಂತ ಇರುವಾಗಲೇ ತಮ್ಮ ಜೀವಕಳೆದುಕೊಂಡರು. ಮೋಹದಲ್ಲಿ ತಮ್ಮ ಜೀವನವನ್ನು ಅವರ ದ್ವಾರದಲ್ಲೇ

ಕಳೆದುಕೊಂಡರು. ಪ್ರತಿಯೊಂದು ದೇಶದ ಹೆಸರಾಂತ ಬಾದಶಾಹರು, ಸಹಸ್ರಾರು ಲಕ್ಷಾಂತರ ಪ್ರೀತಿಯ ಬಾಣದ ಗುರಿಯಾಗಿ ಭಿಕ್ಷುಕರಾದರು. ಇದೇ ರೀತಿ ಮತ್ತೆ ಅನೇಕ ಅನುರಾಗಿ ಬುದ್ಧಿವಂತರು, ಅವರ ನೇಹ ಬಾಣದಿಂದ ನೋವನ್ನು ಅನುಭವಿಸಿದರು. ಸಂಗೀತದ ಅರ್ಥ ಭೇದಗಳನ್ನು ಎಲ್ಲ ಬಲ್ಲವರು ಗಿಳಿ ಶಾಸ್ತ್ರದ ಗುಟ್ಟು ಅಥವಾ ಭೇದಭಾವಗಳ ಜ್ಞಾನ ಪಡೆದಿರುವರು.

ಈ ರೀತಿಯಾಗಿ ಎಲ್ಲಾ ರೂಪಗಳಿಂದ ವಿದ್ಯೆಗಳು ತುಂಬಿವೆ. ಬಿದ್ಯಾಪುರ ನಗರದಲ್ಲಿ ವಿದ್ಯೆಗಳು ಬಣ್ಣತುಂಬಿ ನಿಂತಿವೆ. ಈ ರೀತಿಯ ಬಝಾರುಗಳು ನಗರದ ಸುತ್ತಲೂ ಇವೆ. ಬಿದ್ಯಾನಂತಹ ತೋಟದಲ್ಲಿ ನಾಲ್ಕು ದಿಕ್ಕಿನಲ್ಲೂ ಉದ್ಯಾನವನವಾಗಿದೆ. ಕಲಾವಂತರು, ಕಲಾರೂಪ ಉಡುಪುಗಳಿಂದ, ಇವು ಸುಂದರವಾದ ವಿದ್ಯೆಗಳು. ಮರಗಳ ಹಾಗೆ ನಿಂತಿರುವರು. ಈ ರೀತಿಯಾಗಿ ತುಂಬಿ ನೆಲೆಯೂರಿದ ಪಟ್ಟಣ ವಿವಿಧಕಡೆ ಕಾಣಬಹುದು. ಎಲ್ಲ ಬಝಾರುಗಳಲ್ಲಿ ಎಲ್ಲ ರೀತಿಯ, ಎಲ್ಲ ರೂಪಗಳು ಸಿಗುತ್ತದೆ. ಇಂತಹದರಲ್ಲಿ ಬಾದಶಾಹನು ಜರಿ ಉಡಪನ್ನು ಧರಿಸಿ ಬಂದರೆ, ಈ ಪಟ್ಟಣದ ಸೌಂದರ್ಯ ಇನ್ನೂ ಹೆಚ್ಚಾಗುತ್ತದೆ. ಪಟ್ಟಣವು ಸಂಪತ್ತಿನ ಸಮುದ್ರವಾದರೆ, ಶಾಹನು ಅದರ ಸೂರ್ಯ. ಅದರ ಕಿರಣಗಳು ಎಲ್ಲ ಕಡೆ ಹರಡಿಕೊಂಡಿವೆ. ಅದೇ ಕಿರಣದಿಂದ ಪ್ರತಿಯೊಬ್ಬನ ಹೃದಯದ ಕಮಲ ಅರಳುತ್ತದೆ. ಜನ ಅಪರಾಧ ದುಃಖದ ಜ್ಞಾನವನ್ನೇ ಮರೆತಿದ್ದಾರೆ.

ಶಾಹ ಆಲಂ ಪನಾಹರವರ ದರ್ಬಾರಿನ ಪ್ರಶಂಸೆ
(ದ್ವಿಪದಿ ೨೯೬ ರಿಂದ ೩೧೧ವರೆಗೆ)

ಬಾದಶಾಹನ ದರ್ಬಾರಿನ ಶೃಂಗಾರದ ಬಗ್ಗೆ ಈಗ ಕೇಳಿ. ಎಲ್ಲಾ ರೀತಿಯ ವಾದ್ಯಗಳು(ನೌಬತ್) ಪ್ರತಿಯೊಂದು ಜಾಗದಲ್ಲಿ ಬಾರಿಸುತ್ತವೆ. ಎತ್ತರವಾದ ಹೊಸ್ತಿಲಿನ ರೂಪ ಕಾಣಿಸುವುದು, ಹೇಗೆಂದರೆ ಎರಡು ಗಗನಗಳು ನಿಂತು ಪರಸ್ಪರ ತಲೆ ಗೂಡಿಸಿರುವ ಹಾಗೆ. ಆದರೆ ಗಗನ ನೋಡಿ ಹಂಬಲಿಸುವವನಾಗಿ ಎರಡು ಕಡೆ ಕುಳಿತು ಲಜ್ಜಿತನಾಗಿ ಕಮಾನಿನಂತಾಗಿದೆ. ಚಿನ್ನ ಮತ್ತು ಬೆಳ್ಳಿಯ ದ್ವಾರಗಳು ಚಂದಾಗಿ ಕಾಣುತ್ತದೆ. ಅವು ಹಗಲು ರಾತ್ರಿ ಸೇರಿ ದ್ವಾರದಲ್ಲಿ ನಿಂತಿರುವ ಹಾಗೆ ಕಾಣಿಸುತ್ತದೆ. ದ್ವಾರದಲ್ಲಿ ಸ್ವಾಗತ ಬಯಸಲು ಕಾವಲುಗಾರರು ನಿಂತಿರುವರು. ಅಪರಂಜಿ ಮತ್ತು ರತ್ನಖಚಿತ ಕೋಲುಗಳನ್ನು ಶೃಂಗರಿಸಿ ಅನೇಕ ಕುದುರೆ ಸವಾರರು, ಆನೆ ಸವಾರರು ನಿಂತಿರುವರು. ಬಾದಶಾಹ ಹೇಳುತ್ತಾರೆ, ಇವುಗಳನ್ನು ಎಣಿಸಲು ಸಾಧ್ಯವಿಲ್ಲ ಲೆಕ್ಕವಿಲ್ಲದಷ್ಟು ಆನೆಗಳು ನಿಂತು ಆನಂದದಿಂದ ತೂಗುತ್ತಿವೆ. ಗಗನದ ಶಾಹನ ಹೊಸ್ತಿಲಿನ ಕೆಳಗೆ ಬೆಟ್ಟಗಳ ಹಾಗೆ. ಹೇಳುವುದಾದರೆ ಕಣ್ತಲೆ ಮದ್ಯ ತುಂಬಿ ತುಳುಕಿದ ಹಾಗೆ. ಅವು ಬೆಟ್ಟಗಳು ಚಲಿಸಿದಹಾಗೆ ನಡೆದು ಕೊಂಡು ಹೋಗುತ್ತವೆ. ಆದರೆ ಬಿದ್ಯಾಪುರ ನಗರ ಸಮುದ್ರದ ಹಾಗೆ ತುಂಬಿದೆ. ಗಗನದ ಶಾಹನ ಹೊಸಲಿನ ಕೆಳಗೆ ಮೋಜು ಮಾಡುತ್ತಿವೆ. ಆನಂದದಿಂದ ತುಂಬಿ ತುಳುಕಾಡುವ, ಹಡಗೆಂದು

ತಿಳಿಯಿರಿ. ಮಹಾವತ್ ಗುರು ಶಸ್ತ್ರಾಸ್ತ್ರ ಅಂಕುಶ ತೆಗೆದುಕೊಂಡು ಅದನ್ನು ನಡೆಸುತ್ತಾರೆ. ರಸ್ತೆ ಬದಿಯಲ್ಲಿ ಅಲೆಗಳ ಹಾಗೆ ಒಂಟೆಗಳ ಸಾಲು ನಿಂತಿವೆ. ವಾದ್ಯಗಳು (ನೌಬತ್) ಬಾರಿಸಿದಾಗ ಶಬ್ದದ ಅಲೆಗಳೇ ಕೂಗುತ್ತವೆ. ಸ್ಥಿರವಾಗಿ ನಿಲ್ಲದೇ ಕುದುರೆಗಳು ಚಂಚಲತೆ ತುಂಬಿ ಮೀನಿನ ಹಾಗೆ ಒಂದೇ ಜಾಗದಲ್ಲಿ ನಿಲ್ಲಲಾರವು. ನಿಂತಿದ್ದ ಜಾಗದಲ್ಲೇ ಬಹಳ ಜೋರಾಗಿ ಅಂಗಾಲಿನ ಮೇಲೆ ಹಾರಿದಾಗ, ಹೊಳೆಯುವ ಎರಡು ಕೈಗಳಂತೆ ಸೇರಿದ ಹಾಗೆ ಮನ ಮೆಚ್ಚುತ್ತದೆ. ಯಾವಾಗ ಆಮೆಗಳು ತೀರದಲ್ಲಿ ಬಂದು ನಿಂತಿಕೊಳ್ಳುತ್ತವೋ, ಆಗ ಮೀನುಗಳು ಅವುಗಳ ಮೇಲೆ ಕುಣಿಯುತ್ತಾ ಓಡಾಡುತ್ತವೆ. ಮಾರಕ ಬರ್ಚಿಗಳನ್ನು ಹಿಡಿಯುತ್ತಿದ್ದ ಹಾಗೆ ಕಂಪಿಸಲಾರಂಭಿಸುತ್ತದೆ ಹರಿಯುವ ನದಿಯ ಸುಳಿಯಲ್ಲಿ ಹಾವುಗಳು ಬಂದು ತಿರುಗಿದ ಹಾಗೆ. ಈ ರೀತಿಯಾಗಿ ಬಾದಶಾಹನ ದರ್ಬಾರ ತುಂಬಿದಾಗ. ಈಗ ಕೇಳಿ ನೌರಸ್ ಮಹಲಿನ ಗುಣ ಚಂದ್ರನ ಹಾಗೆ.

ಆಲಂ ಪನಾಹರವರ ನೌರಸ್ ಮಹಲಿನ ಪ್ರಶಂಸೆಯಲ್ಲಿ
(ದ್ವಿಪದಿ ೩೧೨ರಿಂದ ೩೪೬ ವರೆಗೆ)

ಈಗ ಕೇಳಿರಿ ಬಾದಶಾಹನ ಅರಮನೆಯ ಗುಣ. ಅವನಿರುವ ಜಾಗ, ಇದರ ಹೆಸರು ನೌರಸ್‌ಮಹಲ್ ಎಂದು, ಆದರೆ ಅರಮನೆಗೆ ನೌರಸ್ ಎಂದು ಹೀಗೆ ಹೆಸರಿಡಲಾಯಿತು. ನಿತ್ಯವೂ ರೂಪ ಎದ್ದು ಕಾಣುವ ಹಾಗೆ ನೌರಸಿನ ಬಣ್ಣಗಳನ್ನು ತುಂಬಿದ ಅದೇ ಅರಮನೆಯ ಮೇಲೆ ಬಾದಶಾಹರವರು ಕಾಣಿಸಿಕೊಂಡರು. ಚಂದ್ರನ ಮೇಲೆ ಸೂರ್ಯ ಕುಳಿತಿರುವ ಹಾಗೆ ಬಂದರು. ಆದರೆ ನೌರಸ್ ಮಹಲ್ ಹೇಗೆ ಎದ್ದಿದೆಯೆಂದರೆ, ಗಗನವು ಅದರ ಗುರುತಾಗಿ ಕಾಣಿಸುತ್ತದೆ. ಗಗನದ ಏಳು ಏಣಿಗಳನ್ನಾಗಿ ಸೇರಿದರೂ ಸಹ ಅದು ನೌರಸ್ ಮಹಲಿನ ಒಂದು ಅಂತಸ್ತಿನ ಸರಿಸಮಾನವಾಗಲು ಸಾಧ್ಯವಿಲ್ಲ. ಆದರೆ ಗಗನ ಈ ಮಧ್ಯದಲ್ಲಿ ಬಂದು ಮರೆಯಾದರೆ, ಪ್ರತಿಯೊಂದು ಜಾಗದಲ್ಲೂ ಸಹ ಕಮಾನುಗಳಲ್ಲಿ ಕಟ್ಟಿದ ಹಾಗೆ ಇರುತ್ತದೆ.

ಖಚಿತ ನೌರತ್ನ ಕೂಡಿಸಿದ ಅಪರಂಜಿ ಜರಿಯ ಅಲಂಕಾರ, ಸೂರ್ಯ ಚಂದ್ರ ಎರಡೂ ಸೇರಿ ಒಂಬತ್ತು ನಕ್ಷತ್ರಗಳು/ನವಗ್ರಹ ಆದವು. ಗಗನ ಕನ್ನಡಿಯಾಗಿ ನೌರಸ್ ಮಹಲಿನಲ್ಲಿ ಬಂದು ತನ್ನ ರೂಪವನ್ನು ಅದರಲ್ಲಿ ನೋಡಿಕೊಂಡನು. ಅಲ್ಲಿ ಸೂರ್ಯನೇ ಮುಖವಾಗಿ, ಮಧ್ಯದಲ್ಲಿ ಕಳಸವಾದ ತನ್ನ ಛಾಯವನ್ನೇ ತುಂಬಿ ಹಗಲಾಯಿತೆಂದು ತಿಳಿ. ಭೂಮಿ ತನ್ನ ತಲೆ ಮೇಲೆ ತಟ್ಟೆ ಇಟ್ಟುಕೊಂಡು ಕೋಟೆ ಮೇಲಿಟ್ಟು ಕಂಗೂರದ ಕಟ್ಟೆಯನ್ನು ಮುತ್ತುಗಳಿಂದ ತುಂಬಿತು. ನೌರಸ್ ಮಹಲಿನ ಮಧ್ಯದಲ್ಲಿ ಝುಂಕವಿಟ್ಟವೆಂದು ತಿಳಿ. ಬೆಳಕು ಬಿದ್ದು ಹಗಲಾಗಿ ಜ್ಯೋತಿ ಬೆಳಗಿತು. ರಾತ್ರಿ ಬೆಂದು ಕಾಡಿಗೆಯಾಗಿ ಎಲ್ಲ ಕಡೆ ಹರಡಿದಾಗ ಜನಸಮೂಹಕ್ಕೆ ಅದು ಸುತ್ತಲೂ ನಕ್ಷತ್ರಗಳಾಗಿ ಕಾಣಿಸತೊಡಗಿತು. ಆದರೆ ಗಗನ ಇದನ್ನು ನೋಡಿ ಹೊಟ್ಟೆಕಿಚ್ಚು ಪಟ್ಟು ಸುಟ್ಟು ತನ್ನನು ತೆಳ್ಳನೆ ಬಟ್ಟೆಯಾಗಿ ಮಾಡಿಕೊಂಡು

ಮೈಯನ್ನೇ ಹರಿದ. ಬೆಳಿಗ್ಗೆ ಸೂರ್ಯ ಬೆಂಕಿಯ ಹಾಗೆ ಕೆಂಪನೆ ಸುಟ್ಟು ಆಕಾಶಗಂಗೆಗೆ ಸೌದೆಯಿಟ್ಟು ಹೊಗೆಯಾಡಿಸಿ ರಾತ್ರಿಯನ್ನು ಸುಟ್ಟ. ಕೆಂಡ ಬಿದ್ದು ಚಂದ್ರ ಸುಟ್ಟು ಆರಿ ಬೂದಿಯಾದ. ಅದರ ರೂಪ ಬೆಳ್ಳಗೆ ಕಾಣಿಸಿ ಜಗತ್ತಿಗೆ ಕರ್ರಗೆ ಕಾಣಿಸುತ್ತದೆ. ಹರಳು ಕಲ್ಲು ನೀರಾಗಿ ಒದ್ದೆಯಾದ ಸುಣ್ಣ ಎಲ್ಲ ಕಡೆ ಹರಡಿಕೊಂಡಾಗ ಅವು ನಕ್ಷತ್ರಗಳಾಗಿ ಕಾಣಿಸುತ್ತವೆ. ಗಗನ ತನ್ನ ದೇಹವನ್ನು ಹೀಗೆ ಅಲಂಕರಿಸಿದ. ನೌರಸ್ ಮಹಲಿನ ಕಟ್ಟಡ ನಿರ್ಮಾಣದ ಕೆಲಸಕ್ಕೆ ಬೇಕಾಗಿರುವ ಅಲಂಕಾರ ಸಾಮಗ್ರಿ ಸಿದ್ಧಪಡಿಸಿ, ಹಗಲು ಇರುಳು ಎರಡು ಕೆಲಸದಾಳುಗಳನ್ನು ನೇಮಿಸಿ, ನೌರಸ್ ಮಹಲಿನ ಬುನಾದಿ ಕೆಲಸವನ್ನು ಒಪ್ಪಿಸಿದ. ಹಗಲು ಗಗನದ ಬುಟ್ಟಿಯನ್ನು ತಲೆ ಮೇಲೆ ಹೊತ್ತುಕೊಂಡಾಗ ಸೂರ್ಯ ವಜ್ರಗಳ ಇಟ್ಟಿಗೆಗಳನ್ನು ಆಕಾಶದಲ್ಲಿ ತುಂಬಿದ. ಆ ನಿತ್ಯ ಹರಿವ ಹೊಳೆ ಆಗ ಎದ್ದು ಮಧ್ಯ ಎರಡು ಭಾಗಗಳಾಗಿ ನೀರು ಸುರಿದು ಕಿರಣದ ಧಾರೆಯಾಗಿ ಪ್ರಕಟವಾಯಿತು. ಹೀಗೆ ರಾತ್ರಿಯು ಸಹ ತನ್ನ ತಲೆ ಮೇಲೆ ಹೊತ್ತು ಚಂದ್ರ ಮುತ್ತುಗಳನ್ನು ಅರೆದು ಸುಣ್ಣ ಮಾಡಿ ಗಾರೆ ತಯಾರಿಸಿದ. ಗಾರೆಯನ್ನು ಬುಟ್ಟಿಯಲ್ಲಿ ತುಂಬಿ ತಂದು ಎಸೆಯುವಾಗ ಅದು ಹಾರಿ ಬಿದ್ದಾಗ ಹನಿಗಳೆಲ್ಲವೂ ನಕ್ಷತ್ರಗಳಾಗಿ ಹರಡಿದವು. ನೌರಸ್ ಮಹಲ್‌ನಲ್ಲಿ ನೌರತ್ನಗಳು ಖಚಿತವಾಗಿವೆ. ಸುಣ್ಣ ಇಲ್ಲ, ಹರಳುಗಳಾಗಲಿ ಬಾದಶಾಹನಿಗೆ ತರಬೇಕೆಂಬುದು ಜ್ಞಾಪಕವಿಲ್ಲ.

ಜಗತ್ತಿನಲ್ಲಿ ಸುಪ್ರಸಿದ್ಧ ಪಾರಸವಿದೆ ಎಂದು ಕೇಳಿದ್ದೆ. ಕಲ್ಲಿನ ರೂಪ ಧರಿಸಿದ ಇದು ಕಬ್ಬಿಣವನ್ನು ತಾಗಿದರೆ ಅದು ಚಿನ್ನವಾಗುತ್ತದೆ. ಶಾಹ ಆಲಂರವರ ಒಂದು ದೃಷ್ಟಿ ಬಿದ್ದರೆ, ಕಲ್ಲು ಇಟ್ಟಿಗೆಗಳಿಗೆ ಸುಂದರವಾದ ರತ್ನ ಹಾಗೂ ಚಿನ್ನ ಮಾಡಬಲ್ಲವು. ಆದ್ದರಿಂದ ಆ ಚಿನ್ನ ಮತ್ತು ರತ್ನಗಳ ರಾಶಿ ಪ್ರಕಟವಾಗಿ ಕಂಡಾಗ, ಅರಮನೆಯ ರೂಪತಾಳಿ ನೌರಸ್ ಎತ್ತರವಾಗಿ ಬೆಳೆದು ಗಗನಮುಟ್ಟಿತು. ನೌರಸ್ ಮಹಲಿನ ತೋಟ ತುಂಬ ಸುಂದರವಾಗಿ ಕಾಣಿಸುತ್ತದೆ. ದೇವಚರರು ಇವುಗಳನ್ನು ನೋಡಿ ಸ್ವರ್ಗ ಮರೆತು ಬಂದರು. ಪರಸ್ಪರ ಒಬ್ಬರಿಗೊಬ್ಬರು ನೋಡಿಕೊಂಡು ಹೇಳಿದರು. ಆದಿ ಈ ರೀತಿಯ ಸ್ವರ್ಗವನ್ನೇ ನೋಡಿ ಸರಿಪಡಿಸಿದನು. ಭಗವಂತನು ಪ್ರಪಂಚವನ್ನು ಎಲ್ಲ ರೀತಿಯಲ್ಲಿ ದುರಸ್ತಿಮಾಡಿದ. ಆದರೆ ಇಂತಹ ಅರಮನೆಯ ಸರಿಸಮಾನ ನಮ್ಮ ಕಣ್ಣಿಗೆ ಬಿದ್ದಿಲ್ಲ. ಅರಮನೆ ಮಧ್ಯದಲ್ಲಿ ಅತಿ ಸುಂದರವಾದ ಶೃಂಗಾರ ಕಾಣಿಸುತ್ತದೆ. ಪ್ರತಿಯೊಂದು ಕಂಬ ಎಲ್ಲ ರೀತಿಯ ರತ್ನಜೋಡಣೆಯಿಂದ ಅಲಂಕರಿಸಿದೆ. ನೆಲ ರತ್ನಗಳಿಂದ ಕಟ್ಟಿ, ಜಗಲಿಗಳು ಕುಂದಣದೆಂದು ಪ್ರತಿಯೊಂದು ಹರಳು ಅಮೂಲ್ಯವಾದದ್ದನ್ನು ತಂದು ಜೋಡಿಸಿದರು. ಚಿತ್ರ ಬರೆದು, ಬರೆದ ಆಕೃತಿಯಲ್ಲಿ ಮುಖ ಮೂಡಿಸ್ಸಿದರು. ಪ್ರತಿಯೊಂದು ರೇಖೆ, ಎಲ್ಲ ರೀತಿಯಲ್ಲೂ ಸುಂದರವಾಗಿ ಕಾಣಿಸುತ್ತದೆ. ಆದಿಯು ಕುಸುರು ಕೆಲಸ ಮಾಡಿದ್ದನ್ನು ನೋಡಿ ತನ್ನನ್ನೇ ಮರೆತ. ಗಮನವಿಟ್ಟು ರೇಖೆ ವಿದ್ಯೆಯನ್ನು ಪಡೆದ. ಅಗೋಚರ ಹಲಗೆಯ ಮೇಲೆ ಪ್ರಪಂಚದ ಎಲ್ಲ ವಿಷಯಗಳನ್ನು ಬರೆದ. ಅದರಲ್ಲಿ ಈ ಅರಮನೆಯ ತೋಟದ ಒಂದು

ಭಾಗವನ್ನೂ ಬರೆದ. ಪ್ರಪಂಚದಲ್ಲಿರುವ ಎಲ್ಲ ಚಿತ್ರಗಳನ್ನು, ಬರೆದಿದ್ದೆಲ್ಲ ಈ ಅರಮನೆಯನ್ನು ನೋಡಿಯೇ ಎಲ್ಲವನ್ನು ಗುರುತು ಪಡಿಸಿದ.

ಹಜ್ರತ್ ಶಾಹ ಆಲಂ ಪನಾಃರವರ ಸಭೆಯ ಪ್ರಶಂಸೆ

(ದ್ವಿಪದಿ ೩೪೭ರಿಂದ ೩೮೬ ವರಿಗೆ)

ಅರಮನೆಯನ್ನು ಈ ರೀತಿಯಾಗಿ ಶೃಂಗರಿಸಿ ಹಾಸಿಗೆ ಹಾಸಲಾಯಿತು. ಪ್ರಪಂಚ ಹೊಸ ಉಡುಪನ್ನು ಧರಿಸಿದ ಹಾಗೆ ಶೃಂಗರಿಸಿಕೊಂಡಿತು. ರತ್ನ ಖಚಿತ ಜರಿ ರತ್ನಗಂಬಳಿ ಹಾಸಿದರು. ಇದನ್ನು ಸಿದ್ಧಪಡಿಸಿದವರು ಎಷ್ಟೊಂದು ಅಮೂಲ್ಯವಾದ ಮುತ್ತುಗಳನ್ನು ಜೋಡಿಸಿದ್ದರು. ಮಧ್ಯದಲ್ಲಿ ಬಾದಶಾಹ್‌ರವರ ಸಿಂಹಾಸನ ಹೇಗೆ ಕಾಣಿಸುತ್ತಿತ್ತೆಂದರೆ, ಯುವಪ್ರಪಂಚ ಬಾಯಿ ತೆಗೆದು ನಗುತ್ತಿರುವ ಹಾಗೆ. ಅದರ ನಾಲ್ಕು ಕಾಲಿನಲ್ಲಿ ಖಚಿತ ವಜ್ರ ರತ್ನಗಳ ಜ್ಯೋತಿ ಬೆಳಗುತ್ತಿತ್ತು. ಅದು ಅಲಂಕರಿಸಿದ ಹೊಳೆಯುವ ದಂತಗಳ ಹಾಗೆ ಕಾಣಿಸುತ್ತಿತ್ತು. ರತ್ನಗಳೊಂದು ಬಿಟ್ಟರೆ ಬಾಕಿ ಎಲ್ಲವೂ ಸೇರಿ ಖಚಿತವಾದಂತೆ ಮುಖದ ಮೇಲೆ ಬೆವರಿನ ಹನಿಗಳು ಮೂಡಿದಂತೆ ಚೆನ್ನಾಗಿ ಕಾಣಿಸುತ್ತಿತ್ತು. ಎರಡೂ ಕಡೆ ಗೋಲಾಕಾರದ ದಿಂಬು ಶೋಭಿಸುತ್ತದೆ. ಪ್ರತಿಯೊಂದು ಜಾತಿಯ ಹೂಬಳ್ಳಿಗಳು ಜರಿ ಮತ್ತು ರತ್ನಗಳಲ್ಲಿ ಮಾಡಿದೆ. ಯುವತಿ ಪ್ರಪಂಚ, ರುಧೆ ತೊಟ್ಟು ಶೃಂಗರಿಸಿದಂತೆ ಎರಡು ಕಡೆ ಸುತ್ತಲೂ ಏರುಯೌವನ ಅಲಂಕಾರ. ರತ್ನಖಚಿತ ತಟ್ಟೆಯಲ್ಲಿ ಹಚ್ಚಿದ ಮೇಣದ ಬತ್ತಿಗಳನ್ನಿಟ್ಟಾಗ ಎರಡು ನಾಲಿಗೆಗಳು ಸೇರಿ ಬೆಳಕನ್ನು ಪ್ರಕಟಿಸುವ ಹಾಗೆ ಕಾಣಿಸುತ್ತದೆ. ಇವುಗಳನ್ನು ನೋಡಿದರೆ ಇದೇನು ಒಂದು ಕೆರೆಯೇ ಅನಿಸುತ್ತದೆ. ಮೇಣದ ಬತ್ತಿಗಳ ಸ್ಥಿತಿ ಕಮಲಗಳ ಮೊಗ್ಗಿನ ಹಾಗಾಗಿದೆ. ಅವು ಆರಿದ ನಂತರ ಕರಿ ಚೂರು ಮಧ್ಯದಲ್ಲಿ ಹೇಗೆ ಕಾಣುತ್ತವೆಂದರೆ, ಪ್ರತಿಯೊಂದು ಮೊಗ್ಗಿನ ಮೇಲೆ ದುಂಬಿ ಬಂದಿರುವ ಹಾಗೆ ಎಲ್ಲ ಕಡೆಯೂ ರತ್ನಖಚಿತ ಮರಗಳು ಇಡಲಾಗಿದೆ. ಪ್ರಪಂಚದ ಸಖಿಗಳ ಹಾಗೆ ಅಲಂಕರಿಸಿಕೊಂಡು ನಿಂತಿವೆ. ಮರದ ಪ್ರತಿಯೊಂದು ಕೊಂಬೆಯೂ ಗಾಳಿಯಲ್ಲಿ ಹಾರುತ್ತಿವೆ. ಸಖಿಗಳು ಕೈಜೋಡಿಸಿ (ಕೈಯಲ್ಲಿ) ರುಮಾಲುಗಳನ್ನು ಹಾರಿಸುತ್ತಿವೆ. ಬಾದಶಾಹ ಮತ್ತು ಸಿಂಹಾಸನ ಎರಡೂ ಸೇರಿ ಹೀಗೆ ಕಾಣಿಸುತ್ತಿವೆ. ಪ್ರಪಂಚ ತಲೆಮೇಲೆ ಖಚಿತಹೂ (ತಲೆಯ ಆಭರಣ) ಮುಡಿದು ಬಂದ ಹಾಗೆ ಬಾದಶಾಹನ ಇಡೀ ಅಸ್ತಿತ್ವದ ಬಣ್ಣ ಅಪರಂಜಿಯಾಗಿದೆ. ಪ್ರತಿಯೊಂದು ಜಾಗದಲ್ಲಿ ರತ್ನಗಳು ಸೇರಿ ಪ್ರಕಾಶ ಹರಡಿಸುತ್ತಿದೆ. ಬಾದಶಾಹನ ಗಡ್ಡ ಪಚ್ಚೆ ಜೋಡಿಸಿದಂತೆ ಕಾಣುತ್ತದೆ. ಎರಡು ಕೆಂಪನೆಯ ಕೆನ್ನೆಗಳು ಎರಡು ಮುತ್ತುಗಳಂತೆ ಹೊಳಿಯುತ್ತಿದೆ. ಕಣ್ಣಿನ ನೇತ್ರಗಳು ಬಿಳಪಿನ ಮಿಶ್ರಣೆಯಿಂದ ಚಂದ ಕಾಣಿಸುತ್ತದೆ. ನೀಲಮಣಿಯಲ್ಲಿ ಹೊಳೆಯುವಂತಹ ಮುತ್ತು ಜೋಡಿಸಿದ ಹಾಗೆ ಕಾಣಿಸುತ್ತದೆ. ಮೂಗು ದೀದುರಿಯ ರತ್ನದ ಮಧ್ಯ ಗೆರೆಯ ಹಾಗೆ ಕಾಣಿಸುತ್ತಿದೆ. ಮುಖದ ಮೇಲೆ ಬೆವರಿನ ಹನಿಗಳು ರತ್ನಗಳ ಗಣಿಯಾಗಿ ಕಾಣಿಸುತ್ತಿವೆ. ಬಾದಶಾಹನ ಗೋಲಾಕಾರದ ಬೆರಳುಗಳು

ಅಲಂಕರಿಸಿವೆ. ಉಗುರುಗಳು ಪುಷ್ಯರಾಗದ ಹೊಳಪು ಸೇರಿ ಮಿನುಗುತ್ತಿವೆ. ಕೆಂಪು ಬಣ್ಣದ ಮೆಹಂದಿ ಉಗುರುಗಳ ಮೇಲಿದೆ. ಅದು ಹಳದಿಮಿಶ್ರಿತ ಕೆಂಪು ಬಣ್ಣದ ಹರಳಿನ ಜೊತೆಯಲ್ಲಿ ಮುತ್ತು ಜೋಡಿಸಿದಂತಿದೆ. ಆದರೆ ಎಲ್ಲ ರತ್ನಗಳ ಜ್ಯೋತಿ ಇದು ಎಂದು ತಿಳಿದು ಆಕಾಶದಲ್ಲಿ, ಸೂರ್ಯ ತನ್ನ ಸಹಸ್ರಾರು ಕಿರಣಗಳೊಡನೆ ಮರೆಯಾದ. ನೌರಸ್‌ಮಹಲ್ ಗಗನವಾದರೆ, ಸಿಂಹಾಸನ ಸೂರ್ಯ ಅಲ್ಲವೇ ನವರತ್ನಗಳ ಜೋಡಣೆಯಿಂದ ಕಿರಣಗಳ ಜ್ಯೋತಿ ತುಂಬಿದೆ. ಆದರೆ ಐಶ್ವರ್ಯದ ಉದ್ಯಾನವನದ ಗುರುತು ಬಾದಶಾಹರವರು ಅಧ್ಯಕ್ಷರು. ಸಭೆಯಲ್ಲಿ ಕುಳಿತರವರೆಲ್ಲರೂ ಹೂಗಳೆಂದು ತಿಳಿ. ಯಾರೋ ಕೆಂಪು ಬಟ್ಟೆ ಧರಿಸಿದರೆ, ಮತ್ಯಾರೋ ಹಳದಿ, ಯಾರೋ ಬೂದು ಬಣ್ಣ, ಮತ್ಯಾರೋ ಕಣ್ಣು ಕೋರೈಸುವ, ಮತ್ಯಾರೋ ನೇರಳೆ ಬಣ್ಣ, ಯಾರೋ ಕೇಸರಿ ಬಣ್ಣ, ನಸುಗೆಂಪು ಹೊಳೆಯುವ, ಯಾರೋ ಹಸಿರು, ಮತ್ಯಾರೋ ಪಾಚಿ ಬಣ್ಣ ಎಲ್ಲವೂ ಸೇರಿವೆ. ಐವತ್ತೆರಡು ರೀತಿಯ ಸುಗಂಧ ದ್ರವ್ಯ ಎಲ್ಲರೂ ಹಚ್ಚಿರುವರು[೧]. ಅದರ ಪರಿಮಳ ಆಕಾಶದವರೆಗೂ ಹರಡಿದೆ. ಇದನ್ನು ಕೇಳಿ, ಸ್ವರ್ಗಲೋಕದವರೆಲ್ಲರೂ ಆಶ್ಚರ್ಯಪಟ್ಟರು. ದೇವಚರಿಗಳು ಆ ಪರಿಮಳದಿಂದ ಮಗ್ನರಾಗಿ ಹರ್ಷ ಉಲ್ಲಾಸದಿಂದ ಅರಿವಿಲ್ಲದಂತಾಗಿ ಹೇಳಿದರು. ಯಾವ ಬಾದಶಾಹ ಪ್ರಪಂಚದಲ್ಲಿ ರಾಜ್ಯ ಆಳುತ್ತಿರುವನೋ? ಅವನ ಸಭೆಯಲ್ಲಿ ಇಂತಹ ಪರಿಮಳ ಹರಡಿದೆ, ಭಗವಂತ ನಮ್ಮನು ಸೃಷ್ಟಿಸಿದ ದಿನದಿಂದಲೂ ಈ ರೀತಿಯ ಪರಿಮಳ ನಮಗೆಲ್ಲೂ ನೋಡಲೂ ಸಿಗಲಿಲ್ಲ. ಕೈ ಚಾಚಿ ಎಲ್ಲರೂ ಪ್ರಾರ್ಥಿಸಿ, ಆ ಶಾಹನ ಕಾಲ ನೀನು ಸುರಕ್ಷಿತವಾಗಿಡು. ಎಲ್ಲಿಯವರಿಗೆ ಭೂಮಿ ಮತ್ತು ಆಕಾಶ ಸ್ಥಿರವಾಗಿದೆಯೋ, ಅಲ್ಲಿಯವರೆಗೆ ಈ ಶಾಹನ ಗುರುತನ್ನು ಕಾಯಂಗೊಳಿಸು. ಸಭೆಯಲ್ಲಿ ಎಲ್ಲ ಕಲೆಗಳನ್ನು ಬಲ್ಲ ಜನ ಕುಳಿತಿರುವರು. ಈ ಐಶ್ವರ್ಯದ ಉದ್ಯಾನವನದಲ್ಲಿ ಎಲ್ಲ ಜಾತಿಯ ಹೂಗಳು ಅರಳಿವೆ. ಒಬ್ಬರಿಂದ ಒಬ್ಬರು ಅತಿ ವಿದ್ಯಾವಂತರು[೨] ಪ್ರತಿಯೊಂದು ಮಾತಿನ ಒಂಬತ್ತು ಒಂಬತ್ತು ಸಾವಿರ ಅರ್ಥ ತಿಳಿದಿರುವವರು. ಬಾದಶಾಹನ ದುಂಬಿ ದೃಷ್ಟಿ ಪ್ರತಿಯೊಂದು ಹೂವಿನ ಮೇಲೆ ಬಿತ್ತು. ಮಾತಿನ ಬಳಿ ರಸಹೀರಿ ಮೊಗ್ಗಿನ ಮುಖದ ಮೇಲೆ ಕುಳಿತ. ಅಂದರೆ ಈಗಿರುವ ಬಾದಶಾಹನು ಮದನನ ರೂಪ ತಾಳಿದ್ದಾನೆ. ನವರತ್ನ ಖಚಿತ ಸಿಂಹಾಸನದ ಮೇಲೆ ಕುಳಿತು ಮುಖದರ್ಶನ ನೀಡುತಿದ್ದಾನೆ. ಲೋಕದಲ್ಲಿರುವ ಎಲ್ಲ ರತ್ನಗಳ ರಾಶಿಗಳನ್ನೇ ತಂದು ಸುರಿದರು. ಮದನರಾವು ಬಂದ ಹಾಗೆ ರೂಪಧರಿಸಿ ಕುಳಿತಿರುವನು. ಆದರೆ ಮದನ ರೂಪ ಮತ್ತು ಶಾಹ ಈ ರೀತಿಯಾಗಿ ಸೂರ್ಯನ ಜ್ಯೋತಿ ಚಂದ್ರನ ತಳದೊಳಗೆ ಹೋಗಿ ಮಾಯವಾಗಿರುವ ಹಾಗೆ ಜನ ಮದನರೂಪದ ವರ್ಣನೆಯನ್ನು ನೀಡುತ್ತ ಪ್ರಶಂಸಿಸುತ್ತಿದ್ದಾರೆ. ಆದರೆ ಅದು ಬಣ್ಣರಹಿತವಾಗಿದೆ, ಅದರ ಏನೂ ಗುರುತು ಸಹ ಸಿಗುತ್ತಿಲ್ಲ. ಏಕೆಂದರೆ ಶಾಹನ ರೂಪ ಪ್ರಕಟವಾಗಿ ಪ್ರತಿಯೊಂದು ಅಂಗದಲ್ಲಿ ತುಂಬಿದೆ. ಅಮೂಲ್ಯವಾದ ರತ್ನದ ಜ್ಯೋತಿಯೂ ಎಲ್ಲ ಬಣ್ಣಗಳಲ್ಲಿ ತುಂಬಿದೆ ಒಂದು ಸಾವಿರ ಸೂರ್ಯಗಳೂ ಸೇರಿ ಎದ್ದರೂ ಅದು ಶಾಹನ ರೂಪದಲ್ಲಿ ಬೆರೆತು ಒಂದು ದೀಪದ ಹಾಗೆ ಇರುತ್ತದೆ.

ಬಾದಶಾಹೆ ಆಲಂ ಪನಾಹ್‌ರವರ ಅತಿಸುಂದರವಾದ ರಾತ್ರಿಸಭೆಯನ್ನು ನೋಡಿ ಆಕಾಶದವರೇ ವ್ಯಾಮೋಹಗೊಂಡಿರುವ ಬಗ್ಗೆ ಪ್ರಶಂಸೆ
(ದ್ವಿಪದಿ ೩೮೭ ರಿಂದ ೩೯೯ ವರೆಗೆ

ಈ ರೀತಿಯಾಗಿ ಶಾಹನ ರೂಪವನ್ನು ಇಣಿಕಿ ನೋಡಿ ರಾತ್ರಿಯೂ ಬಂದಿತು. ಗಗನದ ಉಪ್ಪರಿಗೆಯಿಂದ ತಲೆಸುತ್ತಿ ಬಿತ್ತು. ತಲೆಗೆ ಮುಡಿದ ಹೂಗಳು ಚೆಲ್ಲಿ ಅಲ್ಲಲ್ಲಿ ಹರಡಿದವು. ಬೆಳ್ಳನೆ ರೂಪವಾಗಿ ನಕ್ಷತ್ರಗಳನ್ನಾಗಿ ಕಾಣಿಸುತ್ತದೆ. ಕಣ್ಣುಗಳಿಂದ ರಕ್ತದ ಹನಿಗಳು ಸುರಿದು ಅವೇ ಮನೆಮನೆಗಳಲ್ಲಿ ಉರಿದು ಬೆಳಕು ಕೊಡುತ್ತಿವೆ. ಬಾದಶಾಹನ ವ್ಯಾಮೋಹದ ಕಾರಣ ರಾತ್ರಿಯ ಬಣ್ಣ ಕಪ್ಪಾಯಿತು. ಚಂದ್ರನ ಹಾಗೆ ಮುಖದ ರೂಪ ಪ್ರಕಟವಾಯಿತು. ಅಂದರೆ ಸೂರ್ಯ ಶಾಹನ ಕಿರಣಗಳಾಗಿ, ಪಂಜಿಗಳ ಉರಿಯುವಿಕೆಯಲ್ಲಿ ಅವು ಸ್ಪಷ್ಟವಾಗಿ ಕಾಣಿಸುತ್ತಿವೆ. ರಾತ್ರಿಸಮಯದಲ್ಲಿ ಪಂಜಗಳೆಲ್ಲ ಸೇರಿ ಹೇಗೆ ಕಾಣಿಸುತ್ತಿವೆ ಅಂದರೆ ಕಸ್ತೂರಿಯ ರಾಶಿಯಹಾಗೆ ಎಲ್ಲ ಕಡೆ ರತ್ನಗಳೆಲ್ಲ ಹರಡಿವೆ, ಪಂಜಗಳು ಬಂದದ್ದರಿಂದ ಸಂಜೆಯು ಸುಂದರವಾಗಿ ಕಾಣಿಸುತ್ತಿದೆ. ಪೃಥವಿ ರೂಪ ಧರಿಸಿ ಗಗನಕ್ಕೆ ತೋರಿಸುತ್ತಾ ಇದ್ದಹಾಗೆ ಕಾಣಿಸುತ್ತಿದೆ. ಇಡೀ ಭೂಮಿಯೂ ಆಕಾಶದಹಾಗೆ ಹೊಗೆ ಬಣ್ಣವಾಗಿ ರಾತ್ರಿ ಹರಡಿದಾಗ ಪಂಜಗಳೆಲ್ಲ ನಕ್ಷತ್ರಗಳ ಹಾಗೆ ಕಾಣಿಸುತ್ತವೆ. ಸಭೆಯಲ್ಲಿ ಎಲ್ಲ ಕಡೆಗೂ ದೀಪಗಳನ್ನು ಇಡಲಾಗಿದೆ. ಅರಮನೆಯ ಅಂಗಳದಲ್ಲಿ ಚಂದ್ರ ಹಾಗೂ ನಕ್ಷತ್ರಗಳ ಮರಗಳ ಹಾಗೆ. ಅಂದರೆ ಮನಸಾರೆ ಎಲ್ಲವನ್ನೂ ತಲೆಮೇಲೆ ಹೊತ್ತು ತಂದು ರಾತ್ರಿಯ ಮೈ ಮೇಲೆ ರತ್ನಖಚಿತ ಚಾದರ್ ಹೊದಿಸಿದ. ಈ ಖಚಿತ ಮದ್ಯದಲ್ಲಿ ಬಾದಶಾಹನು ಹೇಗೆ ಕಾಣಿಸುವನೆಂದರೆ, ಬೇಕಾದಷ್ಟು ರತ್ನಗಳ ಮಧ್ಯೆ ವಜ್ರ ಕಾಣಿಸುವ ಹಾಗೆ. ಇದೇ ರೀತಿಯಲ್ಲೇ ತಾನೇ ರಾತ್ರಿ ಸಭೆಯಲ್ಲಿ ಬರುವುದು, ಇವೆಲ್ಲವನ್ನೂ ನೋಡಿ ತನ್ನನೇ ಮರೆತು ತನ್ನ ವಿವೇಕವೇ ಕಳೆದುಕೊಂಡಿತು. ಬಾದಶಾಹನ ಸಭೆ ಈ ರೀತಿಯಾಗಿ ಐಷಾರಾಮದಿಂದ ಆಚರಿಸಲಾಯಿತು. ಈಗ ನಾನು ಹಗಲಿನಲ್ಲಿ ನಡೆಯುವ ವಿಷಯ ಹೇಳುತ್ತಿದ್ದೇನೆ ಕೇಳಿ.

ರಾತ್ರಿ ಕಳೆದು ಹೊಸದಿನ ತನ್ನನ್ನು ಶೃಂಗರಿಸಿ ಬಾದಶಾಹನ ಸಭೆಗೆ ಆಗಮನದ ಪ್ರಶಂಸೆ
(ದ್ವಿಪದಿ ೪೦೦ ರಿಂದ ೪೦೪ ವರೆಗೆ)

ರಾತ್ರಿಯ ಕೋಗಿಲೆ ಗಗನದ ಬನದ ಮೇಲೆ ಹಾರಿದಾಗ ಹಗಲಿನ ಗಿಡಗ ಶೃಂಗರಿಸಿಕೊಂಡು ಮುಂಜಾನೆಯ ಮೇಲೆ ಬಂದಿತು. ಸೂರ್ಯನನ್ನು ತನ್ನ ಮುಷ್ಟಿಯಲ್ಲಿ ಹಿಡಿದು ರಾತ್ರಿ ತನ್ನ ಉಗುರುಗಳನ್ನು ಚುಚ್ಚಿದ್ದರಿಂದ ಗಗನ ಹಾಗು ದಿಗಂತ ಕೆಂಪು ರಕ್ತದ ಹಾಗೆ ಕಾಣಿಸಿತು. ರಾತ್ರಿ ಮುಳುಗಿದ ನಂತರ ಹಗಲು ಮೂಡಿತು. ಅದರಲ್ಲಿ ಮುಳುಗಿದ ಸೂರ್ಯನ ಬೆಳಕು ಕರ್ಪುರದ ಹಾಗೆ ಕಾಣಿಸುತ್ತದೆ. ರೋಮಿನ ಶಾಹನ ಕೆಂಪು ಹೊಸಲನ್ನು ತೆಗೆದುಕೊಂಡು ಸೂರ್ಯನ ರೂಪ ಕಿರಣಗಳು ಡೇರೆಯ ಹಗ್ಗಗಳಾಗಿ

ಹಾಕಿತು. ಹೀಗೆ ರಾತ್ರಿ ಹೋಗಿ ಬೆಳಗಾದ ನಂತರ ಶಹೆನ್ ಶಾಹನು ಬೇಟೆ ಆಡಲು ಆಜ್ಞೆ ಮಾಡಿದನು.

ಬಾದೆಶಾಹ ಆಲಂ ಪನಾಹನ ಆಜ್ಞೆಯ ಮೇರಿಗೆ ಶಿಕಾರಿಗೆ ಹೊರಟ ಸೈನ್ಯದ ಗದ್ದಲ ಹಾಗು ಅದರ ಭಯಂಕರ ಗರ್ಜನೆ ಶಬ್ದದ ಪ್ರಶಂಸೆ

(ದ್ವಿಪದಿ ೪೦೫ರಿಂದ ೪೨೭ ವರೆಗೆ)

ಬಾದಶಾಹನ ಫರ್ಮಾನ್ ಎಲ್ಲರಿಗೂ ಹೀಗೆ ಆಯಿತು. ನಗಾರಿಗಳನ್ನು ಕಟ್ಟಿಗೆಗಳಿಂದ ಹೊಡೆದು ಬಾರಿಸಿ ಆಜ್ಞೆ ಕೇಳಿದ ತಕ್ಷಣವೇ ಡಂಗೂರ ಕಿರುಚಿದವು. ಗರ್ಜನೆ ಶಬ್ದ ಕೇಳಿ ಆಕಾಶ ಭೂಮಿ ಕಂಪಿಸಿದವು. ಮೊದಲಿಗೆ ಮೂರು ಕಟ್ಟಿಕೆಗಳ ಡಂಗೂರಗಳು ಸೇರಿದಾಗ ಈ ಸಮಾಚಾರವನ್ನು ಕೇಳಿ ತ್ರಿಲೋಕಗಳು ಹೆದರಿದವು. ನಗಾರಿಗಳ ಶಬ್ದದ ಗರ್ಜನೆಯ ಪ್ರತಿಧ್ವನಿ ಬ್ರಹ್ಮಾಂಡವೆಲ್ಲ ತುಂಬಿತು. ಆ ಶಬ್ದ ಏರಿ ಗಗನದ ಮೇಲೆ ಧುಮುಕಿತು. ಆ ಹೆದರಿಕೆಯಿಂದ ಆಕಾಶದ ಎದೆ ಸೀಳಿತು. ಅದರ ಯಕೃತ್ತು ಕೆಂಪು ಮಿಂಚಾಗಿ ಕಾಣಿಸಿತೆಂದು ತಿಳಿ. ನೋವಿನಿಂದ ಕಿರಿಚಾಡಿ ವ್ಯಾಕುಲತೆ ವ್ಯಕ್ತಪಡಿಸಿತು. ನಗಾರಿಗಳ ಶಬ್ದದ ಪ್ರತಿಧ್ವನಿ ಕೇಳಿ ತುಂಡಾದರೂ ಈ ಪೃಥ್ವಿ ಮೊದಲಿಗೆ ಸಂಪೂರ್ಣ ಅಖಂಡವಾಗಿತ್ತು. ಆ ಹೆದರಿಕೆಯಿಂದ ಸೀಳಿ ಒಂಬತ್ತು ತುಂಡಾಯಿತು. ಭಯ ಭೀತಿಯಿಂದ ರಕ್ತ ನೀರಾಗಿ ಉದುರಿತು. ಎಲ್ಲ ಕಡೆಯೂ ದರ್ಬಾರ ತುಂಬಿ ತುಳುಕಿದಂತೆ ಕಾಣಿಸಿತು, ಅಂದರೆ ಪೃಥ್ವಿ ತಟ್ಟೆ ಇದ್ದಹಾಗೆ ನೀನು ತಿಳಿದುಕೋ. ಸದಾ ಹರಿಯುತ್ತಿರುವ ದೊಡ್ಡ ನದಿಯಲ್ಲಿ ನೀರು ತುಂಬಿ ಮಧ್ಯದಲ್ಲಿ ಇಡಲಾಗಿದೆ. ನಗಾರಿಗಳ ಧಮಕ್ ನಾದ ಕೇಳಿ ಕಂಪಿಸಿತು. ನದಿಯಲ್ಲಿರುವ ನೀರು ನಗಾರಿ ಶಬ್ದದಿಂದ ಅಲುಗಾಡಿ ಅಲೆ ಅಲೆಯಾಗಿ ಓಡಾಡಿತು. ಸಮುದ್ರದ ಅಲೆಗಳು ನಾಲಿಗೆ ಚಾಚಿ ಹೀಗೆ ಕೂಗುತ್ತವೆ. ಶಾಹನ ನಗಾರಿಗಳ ಶಬ್ದದಿಂದ ನಾನು ಅಲುಗಾಡುತ್ತಿದ್ದೇನೆ. ನನಗೆ ವ್ಯಾಕುಲತೆ ಉಂಟಾಗಿದೆ. ಅದಲ್ಲದೆ ನಗಾರಿಗಳ ಶಬ್ದ ಕೇಳಿ ಪೃಥ್ವಿಗೆ ಅರಿವಿಲ್ಲದಂತಾಯಿತು. ತಲೆ ಸುತ್ತಿ ಹುಚ್ಚಾಗಿ ನದಿ ಮೇಲೆ ಬಿದ್ದ ರಾತ್ರಿಯ ಸೆರಗು ಜಾರಿತು. ಪೃಥ್ವಿ ಅಂಗಾತ ಮಲಗಿದಾಗ ಯೌವನವು ಬಿಚ್ಚಿದಂತೆ, ಜಗತ್ತಿನಲ್ಲಿ ಬೆಟ್ಟಗಳು ಕಾಣಿಸಿದವು. ತಲೆ ಕೂದಲೆಲ್ಲ ಮೈ ಮೇಲೆ ಹರಡಿದಂತೆ ಪ್ರತಿಯೊಂದು ಮರ ನಿಂತಿದೆ. ಮೈ ಮೇಲಿನ ರೋಮ ನಿಂತಿರುವಂತೆ ಹುಲ್ಲು ನಿಂತಿತ್ತು. ಕಣ್ಣೀರು ಧಾರೆಯಾಗಿ ಸುರಿದು ಅಲ್ಲಲ್ಲಿ ನಯನದ ಚಿಲುಮೆ ಹಾಗೆ ಕಾಣಿಸಿಕೊಂಡು ಅವು ತೀರಕ್ಕೆ ಬಂದುವು. ಗಗನವು ಮೇಲಿಂದ ಪೃಥ್ವಿಯ ಈ ಕಳವಳವನ್ನು ನೋಡಿ ನಿಂತಿರುವ ಮೋಡಗಳನ್ನು ಚಿಮ್ಮಿಸಿ ಮೇಘ ಧಾರೆ ಸುರಿಸಿತು. ಎಂಟು ದಿಸೆಯಲ್ಲಿ ಸಖಿಗಳೆಲ್ಲ ನಿಂತಿರುವುದನ್ನು ನೋಡಿ ಪವನ್ ರೂಪದ ಬೀಸಣಿಗೆಯಿಂದ ಗಾಳಿ ಬೀಸಲಾರಂಭಿಸಿತು. ಈ ರೀತಿಯಾಗಿ ಬಾದಶಾಹನ ನಗಾರಿಗಳ ಸದ್ದು ಕೇಳಿ ಪೃಥ್ವಿಯ ಸಂಗೀತದ ಉಪಕರಣದ ವಾದ್ಯವೂ ಸಹ ಅರಿವಿಲ್ಲದಂತಾಯಿತು. ಪಾತಾಳದಲ್ಲಿ ನಗಾರಿಗಳ ಶಬ್ದವನ್ನು [೧] **ಬಾಸೂಕವೂ**(೧) ಸಹ

ಕೇಳಿ ತನ್ನ ಕಿವಿಯನ್ನು ಕಣ್ಣುಗಳಲ್ಲಿ ಅಡಗಿಸಿಕೊಂಡು ಕುಂಡಲ(೨) ಹೊಡೆದು ಕುಳಿತುಕೊಂಡಿತು. ನಗಾರಿಗಳ ಅಗಾಧ ಶಬ್ದವನ್ನು ಕೇಳಿ ಸಹಿಸಲಾರದೇ ಮಿದುಳು ಕರಗಿ ನೀರಾಗಿ ತಲೆಬುರುಡೆ ಸೀಳಿತು. ತನ್ನ ಶರೀರವನ್ನು ಅಡಗಿಸಿಕೊಂಡು ಪೃಥ್ವಿಯನ್ನು ಹೊದಿಸಿಕೊಂಡಿತು. ಬಾದಶಾಹನು ಹೀಗೆ ವಾದ್ಯ ಮಾಡಿಸಿ, ಶಿಕಾರಿ ಮಾಡಲು ಹೊರಟನು. ಲೋಕ ತ್ರಿಲೋಕವೆಲ್ಲ ಅಲ್ಲಲ್ಲಿ ಹೆದರಿ ನಿಂತವು. ಈ ಸುದ್ದಿಯನ್ನು ಕೇಳಿ ಶಾಹನ ದಂಡು ಬಂದು ಸೇರಿತು. ಎಲ್ಲ ರೀತಿಯ ಸೈನ್ಯ, ಎಲ್ಲ ರೀತಿಯ ರೂಪ ಧರಿಸಿ ನಿಂತಿತು.

ಬಾದಶಾಹೆ ಆಲಂ ಪನಾಃರವರ ಆನೆಗಳ ಪ್ರಶಂಸೆ

(ದ್ವಿಪದಿ ೪೨೮ ರಿಂದ ೪೫೦ ವರೆಗೆ)

ಮೊದಲಿಗೆ ಸೈನ್ಯದಲ್ಲಿ ಅಪಾರ ಸಂಖ್ಯೆಯಲ್ಲಿ ಆನೆಗಳು ಸೇರಿವೆ. ಅವುಗಳಿಂದ ವಿಶ್ವದ ರೂಪವೆಲ್ಲ ಕತ್ತಲೆಯಲ್ಲಿ ಮುಳುಗಿತು. ಅಂಧಃಕಾರದ ಅಲೆಗಳ ಚಂಡಮಾರುತ ಎದ್ದು ಹಗಲಿನ ಬೆಳಕನ್ನು ಹಿಡಿದು ಅದರಲ್ಲಿ ಮುಳುಗಿಸಿದೆ ಎಂದು ತಿಳಿ. ನದಿಯ ನೀರನ್ನು ಕುಡಿದರೆ ಅವು ಒಣಗಿ ಹೋಗುತ್ತವೆ. ಮತ್ತೆ ಒಣಗಿರುವ ಭೂಮಿ ಮೇಲೆ ಅದೇ ನೀರು ಚಲ್ಲಿದರೆ ಸಮುದ್ರ ತುಂಬಿದಂತಾಗುತ್ತದೆ. ನೋಡುವ ಜನ ಶಿವಾಲಕ ಪರ್ವತ ಎಂದು ಹೇಳುತ್ತಾರೆ. ಆದ್ದರಿಂದ ಇವುಗಳು ಬಾದಶಾಹನ ಮದವೇರಿದ ಆನೆಮರಿಗಳೆಂದು ಪರಿಗಣಿಸುತ್ತಾರೆ. ಅದರ ಕೆನ್ನೆ ಸೇಂದೂರದ ಹಾಗೆ ಕೆಂಪಾಗಿ ಕಾಣಿಸುತ್ತಿವೆಯೋ ಅವು ಮುಸ್ಸಂಜೆಯ ಹಿಂದೆ ಕತ್ತಲೆ ತಗುಲಿದ ಹಾಗಿದೆ. ಬಾಯಿಯಲ್ಲಿ ಸೊಂಡಲವನ್ನು ಹಿಡಿದು ಗರ್ಜಿಸಿದರೆ, ಆಕಾಶ ಮತ್ತು ಭೂಮಿ ಎರಡರಲ್ಲೂ ಕೋಲಾಹಲ ಉಂಟಾಗುತ್ತದೆ. ಕರ್ರನೇ ರೂಪದಲ್ಲಿ ಬಿಳಿ ದಂತಗಳು ಹೇಗೆ ಕಾಣಿಸುತ್ತವೆಂದರೆ ಅಂಧಕಾರದಲ್ಲಿ ಬೆಳಕಿನ ಮೊಳಕೆ ಒಡೆದಂತೆ ಹಂಸಗಳ ಗುಂಪುಗಳೆಲ್ಲ ಬಂದು ಹಾರದಹಾಗೆ ನಿಂತರೆ ಶಿವಾಲಕ ಪರ್ವತವೇ ಮಧ್ಯದಲ್ಲಿ ಬಂದು ನಿಂತ ಹಾಗೆ ಕಾಣುತ್ತದೆ. ಅಂದರೆ ಜಗತ್ತಿನ ಮೇಲೆ ಕರಿ ಮೋಡಗಳು ಆವರಿಸಿವೆ. ಕೊಕ್ಕರೆಗಳ ಮಧ್ಯದಲ್ಲಿ ಮಾಲೆಯು ಇದ್ದ ಹಾಗೆ, ಇಲ್ಲವೆ ರಾತ್ರಿಯಲ್ಲಿ ಮುಂಜಾನೆ ಮೊಳೆ ಹೊಡೆದ ಹಾಗೆ. ಅವು ಈ ದಂತಗಳ ರೂಪದಲ್ಲಿ ನಿಂತಿವೆ. ಆ ದಂತಗಳಲ್ಲಿ ಹರಳುಗಳು ಖಚಿತವಾಗಿರುವುದು ರತ್ನಗಳ ಹಾಗೆ ಮಿನುಗುತ್ತಿವೆ. ಹೇಗೆಂದರೆ ಬೆಳಗ್ಗಿನ ಜಾವ ಸೂರ್ಯನನ್ನು ಮೊಳೆಗಳಿಂದ ಖಚಿತ ಹಾಗೆ. ಪಂಚರಂಗಿ ರೇಷ್ಮೆಯ ಹಗ್ಗಗಳಿಂದ ಅಲಂಕರಿಸುವುದು ತುಂಬ ಚೆನ್ನಾಗಿ ಕಾಣಿಸುತ್ತದೆ. ಹೇಗೆಂದರೆ ಸ್ವರ್ಗದಲ್ಲಿ ಕಾಮನಬಿಲ್ಲು ಹಾಗೆ ಮೋಡಗಳನ್ನು ಶೃಂಗರಿಸುತ್ತದೆ. ಮತ್ತೆ ಕೆಲವು ಆನೆಗಳು ಕಣ್ಣಲೆ ಸೇರಿಸಿ ಕಾಮಾಂಧತೆಯನ್ನು ತೆಗೆಯುತ್ತವೆ. ಹೇಗೆಂದರೆ ಬೆಟ್ಟಗಳೇ ಓಡಾಡುವಂತೆ ಮತ್ತೆ ಅದರಿಂದ ಜಲಪಾತ ಹರಿಯುವ ಹಾಗೆ. ಮತ್ತೆ ಕೆಲವು ಆನೆಗಳ ಕಾಲಿನಲ್ಲಿ ಸರಪಳಿಗಳನ್ನು ಹಾಕಲಾಗಿದೆ. ಆ ಸರಪಳಿಗಳು ಎರಡು ಹಾವುಗಳು ಬೆಟ್ಟವನ್ನೇ ಸುತ್ತಿರುವಂತೆ ಕಾಣುತ್ತದೆ. ಕೆಲವು ಆನೆಗಳ ತಲೆಗಳನ್ನು ಅಲಂಕರಿಸಲಾಗಿದೆ. ಅವು ಸುಂದರವಾಗಿ

ಕಾಣುತ್ತವೆ. ಉತಾರ್ ಹೇಗೆಂದರೆ, ನೀಲಂ ಬೆಟ್ಟದ ಮೇಲೆ ಹಾವುಗಳು ಪರಿ ಬಿಟ್ಟಿರುವ ಹಾಗೆ ಕಾಣುತ್ತವೆ. (ಅಂದರೆ ಆನೆಗಳ ಹಣೆಗಳನ್ನು ವಿವಿಧ ರೀತಿಯ ಚಿತ್ರಗಳನ್ನು ಬಿಡಿಸಿ ಅವುಗಳನ್ನು ಅಲಂಕರಿಸಲಾಗುತ್ತದೆ) ಕೆಲವು ಆನೆಗಳಿಗೆ ಕಾಲಲ್ಲಿ ಆಭರಣಗಳನ್ನು ಹಾಕಲಾಗಿದೆ. ಅದು ಹೇಗೆ ಕಾಣಿಸುತ್ತದೆಂದರೆ ಪೃಥ್ವಿಯ ಕೈಯಲ್ಲಿ ರತ್ನಖಚಿತ ಕಂಗನ ಅಲುಗಾಡಿದಂತೆ ಕಾಣುತ್ತದೆ. ಕೆಲವು ಆನೆಗಳ ಬೆನ್ನಿನ ಮೇಲೆ ಚಿನ್ನದ ಸರಿಗೆಗೆಳಿಂದ ನೇಯ್ದ ಬಟ್ಟೆಯ ಜೀನು ಹಾಕಿ ಅಲಂಕರಿಸಿ ಆ ಆನೆಯೂ ಚಿನ್ನದ ಬೆಟ್ಟದ ಹಾಗೆ ಕಾಣಿಸುತ್ತದೆ. ಮತ್ತೆ ಕೆಲವು ಆನೆಗಳು ಹಸಿರುಬಣ್ಣದ ಟೊಂಗೆಯ ಹಾಗೆ ಅಲಂಕರಿಸಿವೆ. ಅವುಗಳು ಬೆಟ್ಟದ ಮೇಲೆ ದಟ್ಟವಾಗಿ ನಿಂತಿರುವ ಮರಗಳ ಹಾಗೆ ಕಾಣಿಸುತ್ತವೆ. ಮತ್ತೆ ಕೆಲವು ಆನೆಗಳಿಗೆ ಕೆಂಪು ಟೊಂಗೆಗಳಂತೆ ಅಪಾರಬಣ್ಣ ಹಚ್ಚಲಾಗಿದೆ. ಅವು ಬೆಟ್ಟದಿಂದ ಬೆಂಕಿ ಸುರಿಯುವಂತೆ ಕಾಣಿಸುತ್ತವೆ. ಕೆಲವು ಆನೆಗಳು ಬಿಳಿ ಟೊಂಗೆಯಂತೆ ಧ್ವಜ ಹಿಡಿದು ಕುಳಿತಿವೆ. ಅವು ಪರ್ವತಗಳಿಗೆ ಆಕಾಶದ ಸೆರಗುಗಳಾಗಿ ಕಾಣಿಸುತ್ತವೆ. ಮಾವುತ ಅಂಕುಶ ಹಿಡಿದು ಕುಳಿತ ಆನೆಗಳು ಹೇಗೆ ಕಾಣುತ್ತವೆಂದರೆ ಸೂರ್ಯ ಬೆಟ್ಟದ ಕಡೆಗಿದ್ದು, ಹೊಸ ಚಂದ್ರನ ಹಾಗೆ ಕಾಣಿಸುತ್ತದೆ. ಎಲ್ಲಾ ರೀತಿಯ ಬಣ್ಣಗಳ ಟೊಂಗೆಗಳು ಸೇರಿ ಶೃಂಗರಿಸಿಕೊಂಡು ಎಲ್ಲರೂ ಬೆಟ್ಟಗಳ ಮೇಲೆ ಮರಗಳು ಹರಡಿದ ಹಾಗೆ ಉಬ್ಬಿದವು. ಇಬ್ರಾಹಿಮ ಆದಿಲ್ ಶಾಹರಿಗೆ ಆನೆಗಳು ಬಂದು ಭೇಟಿ ಮಾಡಿದವು. ಈಗ ಕುದುರೆಗಳ ಬಣ್ಣ ಮತ್ತು ರೂಪಗಳು ಹೇಗಿವೆ ಎಂಬುದನ್ನು ಕೇಳಿ.

ಬಾದಶಾಹೆ ಆಲಂಪನಾಃರವರ ಕುದುರೆಗಳ ಪ್ರಶಂಸೆ

(ದ್ವಿಪದಿ ೪೫೧ ರಿಂದ ೪೭೧ ವರೆಗೆ)

ಬಾದಶಾಹನ ಚಂಚಲ ಕುದುರೆಯ ಗುಣ. ಅದು ವಿವಿಧ ಬಣ್ಣಗಳ ಆಭರಣಗಳನ್ನು ಧರಿಸಿದೆ. ಒಂದು ಕಡೆಗೆ ಬೋರ್, ಕಮಿಯತ್, ಗಡ್ಡೆ ಕರಂಗ್, ಮತ್ತೊಂದು ಕಡೆ **ಚಾಲ್ ನಖ಼ರೆ ಜೊ ಜ಼ರ್ದೆ ಸುರಂಗ್, ಇನ್ನೊಂದು ಕಡೆ ಹಾಂಸ್ಲಿ ಹೌರ್ ಅಬ್ಲಖ಼ ನಿಗಾರ್, ಕಹೀರ ಮತ್ಕಸೀ, ಪಂಚ್ ಕಲಿಯಾಣ್ ಸಾರ್,** ಮತ್ತೊಂದು ಕಡೆ ಜೋರ್ ದೀನಾರೆ ಸಂದಲ್ ಅನಕಬೂತ್, ಇನ್ನೊಂದು ಕಡೆ ರಂಗ್ ಸಾರಂಗ್ ಮಕ್ಷಿ ಸೊ ಜ್ಯೋತ್, ಮತ್ತೊಂದು ಕಡೆ ಮತ್ತು ಸಮಂದ್ ಅಪರೂಪವಾಗಿ ಅಲಂಕರಿಸಿವೆ ಪ್ರತಿಯೊಂದು ಕುದುರೆಯೂ ಅಲಂಕರಿಸಿದ ಚಿತ್ರದಂತೆ ಕಾಣುತ್ತದೆ. ಲಾಸಾಯಿ ಜಾತಿಯ ಕುದುರೆ, ಅರಬ್ ದೇಶದ ಕುದುರೆ, ನಿಷಾನೆ ಇರಾಖ಼ಿನ ಕುದುರೆ, ಬದಖ್ಷಾನಿ ಕುದುರೆ, ಕಛ್ ಗುಜರಾತ್ ಪ್ರಾಂತ್ಯದ ಕುದುರೆಗಳೆಂದು ತಿಳಿ.[೪] ಜಿಂಕೆ ಕಣ್ಣುಳ್ಳ, ಹಾಗೂ ಕಿವಿ ವೀಳ್ಯದೆಲೆ ಕತ್ತರಿಸುವ ಹಾಗೆ ಬಟ್ಟಲಲ್ಲಿ ನೀರು ಕುಡಿದರೆ ಬಾಯಿಯಲ್ಲಿ ನೀರು ಬರುವಂತಹ ಅವುಗಳು ಓಡಲಾರಂಭಿಸಿದರೆ ನದಿಯನ್ನು ಲೆಕ್ಕಿಸದೆ ಹಾರಿಹೋಗುತ್ತವೆ. ಅವುಗಳ ಕಾಲು ಎಲ್ಲೆಲ್ಲೂ ನಿಲ್ಲುವುದಿಲ್ಲ, ನದೀ ಮಧ್ಯದ ಸೆಳವು ಸಹ ದಾಟಿ ಹೋಗುತ್ತವೆ. ಪವನದ ರೂಪವಿದೆ ಎಂದು ಯಾವ ಕಿವಿ

ಕೇಳಿತ್ತು? ಅದು ಬಾದಶಾಹನ ಅರಬಿಕುದುರೆ, ಜಗತ್ತೆಲ್ಲ ಅದರ ನಿಶಾನೆ ನೋಡಿತು. ಮತ್ತೆ ಅದು ಏನಾದರೂ ಪವನದ ಜೊತೆಯಲ್ಲಿ ಪಣ ಕಟ್ಟಿದರೆ ಪವನ ಹಿಂದೆ ಬೀಳುವುದು, ಅದೇ ಮುಂದಿರುತ್ತದೆ. ಜೋರಾಗಿ ಎಳೆಹಿಡಿದು ಒಂದು ಹೆಜ್ಜೆ ಇಟ್ಟರೆ ಅದರ ಹಾಗೆ ಜೊತೆಗಾರನಿಗೆ ಆ ರೀತಿ ಕುಣಿಯಲು ಸಾಧ್ಯವಿಲ್ಲ. ಒಂದು ಜಿಗಿತ ಜಿಗಿದರೆ ಸಾವಿರಾರು ಹರಳು ಹಾರುತ್ತವೆ. ಇದು ಎಲ್ಲೂ ನೋಡಲು ಸಿಗುವುದಿಲ್ಲ ಹಾಗೂ ಬುದ್ಧಿಯಲ್ಲಿ ವಿಚಾರ ಬರಲೂ ಸಾಧ್ಯವಿಲ್ಲ. ಸವಾರನ ಮನಸ್ಸು ಎಲ್ಲಿ ಹೋಗಬೇಕೆಂದಿರುತ್ತದೆಯೋ ಅದು ಅಲ್ಲಿ ಕರೆದು ಹೋಗುತ್ತದೆ. ಬೆಂಕಿಯಾಗಲಿ ನೀರಾಗಲಿ ನೋಡಿ ಹೆದರುವುದಿಲ್ಲ. ಪವನದಿಂದ ಏನಾದರೂ ಹೂವಿನ ಒಂದು ಕಣ ಹಾರಿ ಬಂದು ತಗುಲಿದರೆ ಸಾಕು, ಇದ್ದಕ್ಕಿದ್ದ ಹಾಗೆ ಅದರ ಮೈ ಮೇಲೆ ಹಾರಿ ಹೋಗುತ್ತದೆ. ರೋಷಾವಿಷ್ಟನಾಗಿ ಕಿಡಿಕಿಡಿಯಾಗುವುದು. ಅದರ ಅಹಂಬಾವದಲ್ಲಿ ಸದಾ ಇದ್ದೇ ಇರುತ್ತದೆ. ಒಂದು ಜಿಗಿತದಲ್ಲಿ ಅದು ಸಮುದ್ರವನ್ನೇ ಪಾರು ಮಾಡುತ್ತದೆ. ಚಮತ್ಕಾರದಂತೆ ಅದು ಎಷ್ಟು ಮಿಂಚಿನ ಓಟ ಓಡುತ್ತದೆಂದರೆ ದೃಷ್ಟಿಯೂ ಸಹ ಒಂಟಿಯಾಗಿ ಅದರ ಜೊತೆ ಹೋಗಲಾರದು. ನಿತ್ಯವೂ ಬಾಣಗಳು ಅದರ ರೆಕ್ಕೆಯಂತೆ ಮೇಲೆ ಕಟ್ಟಿರುತ್ತವೆ. ಅದರ ಜೊತೆಯಲ್ಲೇ ನಡೆಯುವಂತೆ ನಿತ್ಯವೂ ತರಬೇತಿ ನೀಡಲಾಗುತ್ತದೆ. ಮನ್ಜೀತ್ ಎಂಬ ಹೆಸರಿನ ಹಾರುವ ತೊಟ್ಟಿಲಿನ ಬಗ್ಗೆ ಕೇಳಿದ್ದೆ. ಆದರೆ ಈ ಕುದುರೆಗಳ ಓಟ, ಹಾರಿಹಿಡಿಯುವಿಕೆಯನ್ನು ನೋಡಿ ಆಚಾರ ಕಲಿತೆ. ಕೆಲವು ಕುದುರೆಗಳಿಗೆ ಚಿನ್ನದ ಜೀನು, ರತ್ನ ಖಚಿತ ಲಗಾಂ ಹಾಕಲಾಗಿದೆ. ಕೆಲವು ಕೊತ್ತಲ ಕುದುರೆ (ಮೆರವಣಿಗೆ ಕುದುರೆ) ರತ್ನ ಖಚಿತದ ಭಾಗವಾಗಿವೆ. ಕೆಲವು ಕುದುರೆಗಳಿಗೆ ಮಕಮಲ್ಲಿನ ಬಟ್ಟೆಯ ಮೇಲೆ ಜರಿಯ ಹೂಬಳ್ಳಿಯ ಅಲಂಕಾರ, ಕೆಲವು ಕುದುರೆಗಳಿಗೆ ಮುತ್ತು ರತ್ನಖಚಿತ ಅಲಂಕಾರ ಮಾಡಲಾಗಿದೆ. ಬಾದಶಾಹರು ಈ ರೀತಿ ಅಲಂಕೃತ ಎಲ್ಲ ಕುದುರೆಗಳಿಗೆ ಭೇಟಿ ನೀಡಿದರು. ಏಕೆಂದರೆ ಪ್ರತಿಯೊಬ್ಬರಿಗೂ ಬಾದಶಾಹರೇ ಜೀವನದ ಆಧಾರವಾಗಿರುವರು.

ಬಾದಶಾಹ್ ಆಲಂಪನಾಹ್ ರವರ ಶಸ್ತ್ರಾಸ್ತ್ರ ಧರಿಸಿದವರ ಪ್ರಶಂಸೆ

(ದ್ವಿಪದಿ ೪೭೭ ರಿಂದ ೪೯೭)

ಈಗ ಬಾದಶಾಹನ ಶಸ್ತ್ರಾಸ್ತ್ರ ಧರಿಸಿದವರ ಗುಣಗಳನ್ನು ಕೇಳಿ. ಪ್ರತಿಯೊಂದು ದೇಶದ ರಾಜಕುಮಾರರು ಸವಾರಿಗಳಲ್ಲಿ ಬಂದಿರುವರು. ಗಾಳಿ ಬಾದಶಾಹನ ಶೃಂಗ ಸಭೆಯಿಂದ ಹೊರಟಿತು. ಗಾಳಿಯು ಹಾರಿ ಹೋಗಿ ಗಿಡ ಮರಗಳನ್ನು ಭೇಟಿ ಮಾಡಿ ಪ್ರತಿಯೊಂದು ಗಿಡಮರಗಳಿಂದ ಮುಖದ ಮೊಗ್ಗನ್ನು ಅರಳಿಸಿ ಮಾತನಾಡಿಸಿತು. ಮರಗಳು ತಮ್ಮಲ್ಲೇ ತಾವೇ ಈ ರೀತಿಯಾಗಿ ಮಾತನಾಡಿಕೊಂಡುವು. ಟೊಂಗೆಗಳ ಕೈ ಬೀಸಿ ಎಲೆಗಳಿಗೆ ನಾಲಿಗೆಯನ್ನಾಗಿ ಮಾಡಿಕೊಂಡಿತು.[೫] ಭಗವಂತ ನಮ್ಮನ್ನು ಸೃಷ್ಟಿಸಿದ ದಿನದಿಂದಲೂ

ಈ ರೀತಿಯ ಸುವಾಸನೆಯುಳ್ಳ ಪರಿಮಳವನ್ನು ಗಾಳಿ ಎಂದೂ ತಂದಿರಲಿಲ್ಲ. ಮರಗಳ ಪ್ರತಿಯೊಂದು ಟೊಂಗೆ ಗಾಳಿಯನ್ನು ಹಿಡಿದು ಕೇಳಿತು. ಈ ರೀತಿಯ ಸುವಾಸನೆಯುಳ್ಳ ಪರಿಮಳ ನಿನಗೆ ಎಲ್ಲಿಂದ ಸಿಕ್ಕಿತು. ಏನು ಸಮಾಚಾರ. ಓ ಗಿಡಮರಗಳೇ ಈ ಗಾಳಿಯ ಮಾತು ಕೇಳಿ ನಾನು ಕಣ್ಣಾರೆ ನೋಡಿರುವನೇ ಅವೆಲ್ಲವನ್ನು ಹೇಳುವೆ. ದಕ್ಷಿಣ ದೇಶದಲ್ಲಿ ಒಬ್ಬ ಬಾದಶಾಹ ರಾಜ್ಯ ಆಳುತ್ತಿರುವನು. ಅವನೆಂಥವನೆಂದರೆ ಯಾರೂ ಸಹ ಕೇಳಿಲ್ಲ ನೋಡಿಲ್ಲ. ಅದೇ ಮರ ಪ್ರಪಂಚದಲ್ಲಿ ಫಲ ನೀಡುವುದು. ಆ ಸುಳಿಯಲ್ಲಿ ಬಹಳಷ್ಟು ಐಶ್ವರ್ಯದ ತೋಟಗಳೇ ಅಡಗಿವೆ. ಆದರೆ ಗಗನ ಮತ್ತು ಭೂಮಿಯ ಮಧ್ಯದಲ್ಲಿ ಶಾಹನ ರೂಪ ಧರಿಸಿ ತನ್ನ ಗುರುತನ್ನು ಪ್ರಪಂಚದಲ್ಲಿ ಬಿಟ್ಟಿದ್ದಾನೆ. ಪೃಥ್ವಿ ತನ್ನ ತಲೆ ಮೇಲೆ ಬಿದ್ಯಾಪುರದ ಬುಟ್ಟಿಯನ್ನು ಹೊತ್ತು ನಿಂತಿದೆ. ನೌರಸ್ ಮಹಲಿನಲ್ಲಿ ಐಶ್ವರ್ಯ ಹಾಗೂ ಅತ್ಯುನ್ನತ ರತ್ನಗಳು ತುಂಬಿವೆ. ಬುದ್ಧಿಯೂ ಸಹ ಏತ ಹಾಕಿ ನ್ಯಾಯದ ನೀರನ್ನು ಪಡೆಯುತ್ತದೆ. ದಾನ ಧರ್ಮದ ಕಾಲುವೆ ಸದಾ ಶರೀರಕ್ಕೆ ಅಂಟಿಕೊಂಡಿದೆ. ಆ ರಾಜನ ಮೊಳಕೆ ಪ್ರಕಟವಾಗಿ ಎಲೆಗಳಾಯಿತು. ಎಂಟು ದಿಸೆಗಳಲ್ಲೂ ಅವನ ಕೀರ್ತಿಯ ಕೂಗು ಕೇಳಿಸುತ್ತದೆ. ಅವನಲ್ಲಿ ಎಷ್ಟೊಂದು ಗುಣಗಳಿವೆಯೆಂದರೆ ಅವುಗಳನ್ನು ಎಣಿಸಲು ಸಾಧ್ಯವಿಲ್ಲ. ಅವನ ಕೃಪೆಯ ನೆರಳು ಇಡೀ ಜಗತ್ತನ್ನೇ ಆವರಿಸಿಕೊಂಡಿದೆ. ಬುದ್ಧಿಗೆ ಹೂ ಕಚ್ಚಿದೆ ಹಾಗೂ ವಿವೇಕದ ಫಲ ಅಪಾರ. ಜ್ಞಾನದ ರಸ ಎಲ್ಲಾ ಜಾಗದಲ್ಲಿ ತುಂಬಿದೆ. ಎಲ್ಲ ಪ್ರಾಣಿಗಳು ತಮ್ಮನ್ನೇ ಮರೆತು ಎಲ್ಲ ಕಡೆಯಿಂದ ಬಂದು ಸೇರಿದವೆಂದರೆ ಅದು ಒಂದು ದೊಡ್ಡ ಸೈನ್ಯದ ರೂಪಧರಿಸಿದಂತಿದೆ. ಅದರ ಅಂತರಾಳವೇ ಸಿಗದಂತಾಗಿದೆ. ಹಪರಂಪರೆಯ ಒಂದು ದೊಡ್ಡ ಹಕ್ಕಿಯೂ ಸಹ ಅಮಲೇರಿದ ಆನೆಯಂತೆ ಇದೆ. ಒಂಟೆಗಳು ತಮಗೆ ಉದ್ದನೆಯ ಹಾಗೂ ಎತ್ತರವಾದ ಕತ್ತಿದ್ದರೂ ಸಹ ರಾಶಿಗಳ ಹಾಗೆ ಕಾಣುತ್ತವೆ. ಅಪಾರ ಕುದುರೆಗಳ ರೂಪ ಖ಼ರ್ಚಾಲ್ (ಸುಖ಼ರ್ಾಬ್= ನೀರಿನ ಹಕ್ಕಿ)ರೀತಿಯಾಗಿವೆ. ಸೈನಿಕರು ಸಮುದ್ರ ತೀರದಲ್ಲಿ ಬಾಜ಼್(ಹೆಣ್ಣು ಶಿಕಾರಿ ಹಕ್ಕಿ)ಹಾಗೆ ಓಡಾಡುತ್ತಿದ್ದಾರೆ. ದರ್ವೇಷಿಯರು ಅವನ ನೆರಳಲ್ಲಿ ಹೇಗೆ ಮೋಹಿತರಾಗಿದ್ದಾರೆಂದರೆ. ಬೂದುಬೆಳವ ಹಕ್ಕಿ ಗಾಜಿನಲ್ಲಿ ಮುಖ ನೋಡಿಕೊಂಡು ಸ್ಮರಣೆ ಮಾಡುವಹಾಗೆ. ಸಭೆಯಲ್ಲಿ ಪ್ರಪಂಚದ ಜನರೆಲ್ಲರೂ ಹೇಗೆ ಕುಳಿತಿರುವರೆಂದರೆ ನೂರಿಯಾನರ(ಗಿಣಿಯ ಒಂದು ಜಾತಿ) ರೂಪ ಧರಿಸಿ ಗಿಣಿಯ ಹಾಗೆ ಕುಳಿತಿರುವರು. ಅವನ ನೆರಳಲ್ಲಿ ಪ್ರಾಣಿಗಳೆಲ್ಲ ಸೇರಿ ಮೇಯುತ್ತವೆ. ಪ್ರತಿಯೊಂದು ದೇಶ ಹಾಗು ಆಲಬ್ದ್? ಆಗಿ ಓಡಾಡುತ್ತದೆ. ಜಗತ್ತಿನ ಯಾವ ಶಹರದಲ್ಲೂ ಇಂಥ ಮರ ನೋಡಿಲ್ಲ. ಇಂಥ ಮರದ ಸಭೆಯ ಸುವಾಸನೆ ನನಗೆ ತಗಲಿದೆ. ಹೀಗೆ ಗಾಳಿಯೂ ಶಾಹನ ವಿಜೃಂಭಣೆಯ ಕಥೆ ಹೇಳಿತು. ಇದನ್ನು ಪರ್ವತ ಮತ್ತು ಮರಗಳೆಲ್ಲ ಕಿವಿ ಕೊಟ್ಟು ಕೇಳಿದುವು. ಗಾಳಿಯ ಮಾತನ್ನು ಕೇಳಿ, ಬುದ್ಧಿ ವಿಚಾರ ಮಾಡಿ ಹೇಳಿತು. ನಡೆ, ಹೋಗಿ ಆ ಬಾದಶಾಹನ ಜಾಗವನ್ನು ನೋಡಿ ಬರೋಣ. ಗಾಳಿ ಮರಗಳಿಗೆ ಹೇಳಿತು, ನಾನು ಏನು ಮಾಡಲಿ. ಅದನ್ನು ನೋಡಿ ನನ್ನ ವಿವೇಕವೇ ಕಳೆದು ಹೋಗಿದೆ,

ಹುಚ್ಚನಾಗಿ ಓಡಾಡುತ್ತಿದ್ದೇನೆ. ಬಾದಶಾಹನ ಶೃಂಗ ಸಭೆಯನ್ನು ಯಾವಾಗ ನೋಡಿದೆನೋ ಆವಾಗಲಿಂದ ನನ್ನ ಮೈಗೆ ತುಸುವೂ ನೆಮ್ಮದಿ ಇಲ್ಲದಂತಾಗಿ ಓಡಾಡುತ್ತಿದ್ದೇನೆ.

ಬಾದಶಾಹ ಜಹಾಙ್ ಪನಾಃರವರ ತೋಟದಸಭೆಯ ಸಮಾಚಾರ ಕೇಳಿ ಕಾಡಿನ ಮರಗಳು ಗಾಬರಿಗೊಂಡ ಬಗ್ಗೆ ಪ್ರಶಂಸೆ

(ದ್ವಿಪದಿ ೪೯೮ ರಿಂದ ೫೧೬ ವರೆಗೆ)

ಶಾಹನ ಗುಣಗಳನ್ನು ಕೇಳಿ ಮರಗಳಿಗೆ ಕುತೂಹಲ ಉಂಟಾಯಿತು. ಶಾಹನನ್ನು ನೋಡಬೇಕೆಂಬ ಆಸೆಯಿಂದ ಮೈಗೆ ವಿರಹ ಅಂಟಿಕೊಂಡಿತು. ಎಲೆಗಳನ್ನು ಒಂದೊಂದಾಗಿ ಜೋಡಿಸಿ ಬಟ್ಟೆ ಮಾಡಿಕೊಂಡವು. ಹೂವುಗಳ ಕಣ್ಣುಗಳಿಂದ ಅದರ ತೊಟ್ಟು ಬೀಳಲಾರಂಭಿಸಿತು. ತನ್ನನ್ನೇ ಮರೆತು, ಮೈ ಮೇಲೆ ಜ್ಞಾನವಿಲ್ಲದಂತಾಯಿತು. ನಿಂತ ಜಾಗದಲ್ಲೇ ಕೈ ಕಾಲುಗಳಲ್ಲಿ ನಡುಕ ಉಂಟಾಗಿ ಸುಸ್ತಾದರು. ಪ್ರತಿಯೊಬ್ಬರಲ್ಲೂ ಹಲ್ಲುಗಳಲ್ಲಿ ನಾಲಿಗೆ ಕಚ್ಚಿ, ಹೂವು ಕುಡಿಗಳ ಮೇಲೆ ಎಲ್ಲ ಕಡೆಯೂ ದೃಷ್ಟಿ ಬಿದ್ದಿತು. ಮರಗಳ ಬನಪತಿರಾವೊಗೆ ಈ ಸುದ್ದಿ ಮುಟ್ಟಿತು ಮರಗಳೆಲ್ಲವೂ ತಮ್ಮನ್ನೇ ಮರೆತು ಹುಚ್ಚರ ಹಾಗೆ ನಿಂತಿವೆ. ಮೈ ಮೇಲೆ ಎಲೆಗಳ ಬಟ್ಟೆಯೂ ಸಹ ಚೇತರಿಸಲು ಸಾಧ್ಯವಿಲ್ಲದಂತಾಗಿದೆ. ಪ್ರತಿಯೊಂದು ಟೊಂಗೆಯ ಕೈ ಕಾಲು ನಿಂತಿದ್ದ ಜಾಗದಲ್ಲೇ ನಡುಗುತ್ತಿವೆ. ಬಸಂತ್ ರಾವೊ [ವಸಂತ ಋತುರಾಜ] ಇದನ್ನು ಕೇಳಿ ವೈದ್ಯರನ್ನು ಕರೆದ. [ವೈದ್ಯ]ದುಂಬಿಯ ಗುಂಪು, ಎಲ್ಲ ಕಡೆಯಿಂದ ಬಂದಿತು. ಮರಗಳ ನಾಡಿಯನ್ನು ನೋಡಿ ಅವರಿಗೆ ಏನು ನೋವಿದೆಯೆಂಬುದನ್ನು ನನಗೆ ಬಂದು ತಿಳಿಸಿ ಎಂದು ಅವರಿಗೆ ಹೇಳಲಾಯಿತು. ದುಂಬಿಗಳು ಮತ್ತೆ ಏನೂ ಮಾತನಾಡದೆ ಹಾರಿದವು. ಅವು ಪ್ರತಿಯೊಂದು ಮರವನ್ನು ಹಿಡಿದು ಹಿಡಿದು ನೋಡುತ್ತಾ ಹೋದುವು. ಹೀಗೆ ದುಂಬಿಗಳು ಪ್ರತಿಯೊಂದು ಮರವನ್ನು ಪರೀಕ್ಷಿಸುತ್ತಾ ಹೋದುವು. ಎಲ್ಲ ಜಾಗದಲ್ಲೂ ಹೂವಿನಂತಹ ಮುಖಗಳು ಬಾಡಿದ್ದವು. ಟೊಂಗೆಗಳ ಕೈ ಹಿಡಿದು ದುಂಬಿಗಳು ನಾಡಿ ನೋಡಿದವು. ಎಲೆಗಳ ನರಗಳನ್ನು ಬೆರಳುಗಳಿಂದ ಮುಟ್ಟಿ ನೋವು ಎಲ್ಲಿದೆಯೆಂದು ವಿಚಾರಿಸಿದವು. ಈ ಸ್ಥಿತಿಯನ್ನು ನೋಡಿ ದುಂಬಿಗಳು ಮರಗಳಿಗೆ ಹೇಳಿದುವು. ನಿಮಗೆ ಈ ನೋವು ಅನುರಾಗದ್ದೇ ಆಗಿರಬಹುದು. ಈ ನೋವಿಗೆ ಯಾವುದೇ ಔಷಧಿ ಕೆಲಸ ಮಾಡುವುದಿಲ್ಲ. ಯಾರನ್ನು ನೋಡಬೇಕೆಂಬ ಆಶೆಯಾಗಿದೆಯೋ ಅವನ ದರ್ಶನ ಪಡೆಯ ಬೇಕು. ಶಾಹನ ದರ್ಶನ ನಿಮಗೆ ಎಲ್ಲಿಯವರಿಗೆ ಆಗುವುದಿಲ್ಲವೋ, ಅಲ್ಲಿಯವರೆಗೆ ಓ ಮರಗಳೇ ನಿಮಗೆ ನೆಮ್ಮದಿ ಸಿಗುವುದಿಲ್ಲ. ಪ್ರತಿಯೊಂದು ಮರದ ನೋವು ಈ ರೀತಿಯಾಗಿ ನೋಡಿದ ನಂತರ ವೈದ್ಯ ದುಂಬಿಗಳು [ವಸಂತ] ರಾಯನ ಬಳಿ ಬಂದು ಹೇಳಿದುವು. ದಕ್ಷಿಣ ದೇಶದಲ್ಲಿ ಒಬ್ಬ ಸುಪ್ರಸಿದ್ಧ ಬಾದಶಾಹ ಇರುವನು. ಅವನ ದರ್ಶನ ಪಡೆದರೆ ಎಲ್ಲ ಮರಗಳು ಸುಖವಾಗಿರುತ್ತವೆ. ನೋವಿನ ನಿವಾರಣೆಗೆ ಬೇರೆ ವಿಚಾರ ಮಾಡುವುದು ಬೇಕಿಲ್ಲ. ಅವನ ದರ್ಶನ ಪಡೆದರೆ

ಮರಗಳೆಲ್ಲ ಜೀವ ಪಡೆಯುತ್ತವೆ. ವಸಂತರಾಯನು ದುಂಬಿಗಳ ಮಾತುಗಳನ್ನು ಕಿವಿಕೊಟ್ಟು ಕೇಳಿದ. ಇದನ್ನು ಕೇಳಿ ಅವನಿಗೆ ಆಶ್ಚರ್ಯವಾಗಿ ಏನು ಹೇಳಲೂ ಸಾಧ್ಯವಾಗಲಿಲ್ಲ. ಒಳ್ಳೆಗುಣವುಳ್ಳ ಬಾದಶಾಹನು ದಕ್ಷಿಣ ಪಥದಲ್ಲಿದ್ದಾನೆ. ಅವನು ಸುಂದರ ಗಿಡಗಳ ಬನದಲ್ಲಿ ಹೂವಿನ ಹಾಗೆ ಇದ್ದಾನೆ.

ಬಾದಶಾಹನು ಸಂತೋಷದಲ್ಲಿರುವನೆಂದು ವಸಂತ ಋತುವಿನ ಕೂಗನ್ನು ಕೇಳಿ ಮರಗಳೆಲ್ಲ ಶೃಂಗರಿಸಿಕೊಂಡು ಹೊರಟ ಸಂದರ್ಭದ ಪ್ರಶಂಸೆ

(ದ್ವಿಪದಿ ೫೧೭ ರಿಂದ ೫೪೬ ವರೆಗೆ)

ತನ್ನ ಬುದ್ಧಿವಂತ ಮಂತ್ರಿಯನ್ನು ತನ್ನ ಬಳಿ ಕರೆದು, ಅವನಿಗೆ 'ಹಂಗಾಮ್ ಸೀರ್' ಎಂಬ ಹೆಸರಿಂದ ಕರೆಯಲಾಗುತ್ತದೆ. ರಾಯನು ಪ್ರಧಾನ ಮಂತ್ರಿಗೆ ಕೇಳಿದ. ಈಗ ಏನು ವಿಚಾರ ಮಾಡುವುದು. ನಮ್ಮ ವೃಕ್ಷ ಸೇನೆಯಲ್ಲ ಒಣಗಿ ಹೋಗಿರುತ್ತವೆ. ನಮ್ಮ ಇಡೀ ದೇಶ ನಮ್ಮ ಬನ ಕೆಟ್ಟು ಹೋಗಿದೆ. ನೀನು ಇದರ ಬಗ್ಗೆ ಬೇಗನೇ ನನಗೆ ಉಪಾಯ ಹೇಳು. ಇದನ್ನು ಕೇಳಿ ಸುಂದರ ಯುವ ಪ್ರಧಾನ ಹೇಳಿದ. ಹೇ ವಸಂತರಾಜನೇ, ಸೈನ್ಯವು ಮತ್ತೆ ಜೀವ ಪಡೆಯುವ ಉಪಾಯವನ್ನು ಹೇಳುತ್ತೇನೆ. ಎಲ್ಲ ಡಂಗೂರ ಹೊಡೆಯುವವರನ್ನು ಕರೆದು ಹೇಳು. ಕೋಗಿಲೆಯನ್ನು ಕರೆದು ಹೇಳು. ಅದು ಈ ಎಲ್ಲ ಬನ ದೇಶದ ಮೂಲೆ ಮೂಲೆಗೆ ಹೋಗಿ ಈ ಸುದ್ದಿಯನ್ನು ಕೊಡಲಿ. ಒಂಟಿಮರವಾಗಲಿ, ಮತ್ತೆ ದೊಡ್ಡ ಮರವಾಗಲಿ, ಪ್ರತಿಯೊಬ್ಬರೂ ಹೂವಿನ ಉಡುಪನ್ನು ಧರಿಸಿ ಶೃಂಗರಿಸಿಕೊಳ್ಳಲಿ. ದಕ್ಷಿಣ ದೇಶದಲ್ಲಿ ಒಬ್ಬ ರಾಜ ಇದ್ದಾನೆ. ಅವನ ಹೆಸರು ಜಗದ್ಗುರು. ಬಿದ್ಯಾಪುರ (ಬಿಜಾಪುರ) ಅವನ ರಾಜಧಾನಿ. ಅವನು ಅಲ್ಲೇ ಇರುವನು. ಆದ್ದರಿಂದ ಆ ಬಾದಶಾಹನನ್ನು ನೋಡಲು ಬಸಂತ್‌ರಾವೊ ಹೊರಟಿದ್ದಾನೆ. ಎಲ್ಲ ಜಾತಿಯ ಗಿಡಮರಗಳೆಲ್ಲ ಸೇರಿ ಬನ್ನಿರಿ. ಈ ಸುದ್ದಿಯುನ್ನು ಪ್ರತಿಯೊಂದು ಮರದ ಟೊಂಗೆಗಳೆಲ್ಲ ಕೇಳಿ ಹರ್ಷ ಉಲ್ಲಾಸದಿಂದ ಕೆಲವು ಕೆಂಪಾದರೆ ಕೆಲವು ಹಳದಿಯಾದವು. ಈ ಸುದ್ದಿಯನ್ನು ಕೇಳಿ ಬನದ ದೇಶದಿಂದ ಮರಗಳೆಲ್ಲ ಪ್ರಯಾಣ ಬೆಳಿಸಿದವು. ಗಾಳಿಯು ವಾದ್ಯ ಊದತೊಡಗಿತು. ಆಗ ಬಸಂತ್‌ರಾವೊ ಬಂದು ತನ್ನ ಸೈನ್ಯವನ್ನು ಸೇರಿದ ಎಲ್ಲ ರೀತಿಯ ಮರಗಳು, ಎಲ್ಲ ರೂಪವನ್ನು ಧರಿಸಿ ಪ್ರತಿಯೊಂದು ಟೊಂಗೆಯೂ ತನ್ನ ಹೂವಿನ ಬಾವುಟವನ್ನು ಹಿಡಿದುಕೊಂಡಿತ್ತು. ಎಲ್ಲ ರೀತಿಯ ಬಣ್ಣದ, ಎಲ್ಲ ತರದ ಗುರಾಣಿಗಳು ತಂದಿದ್ದವು. ಪ್ರತಿಯೊಂದು ಮರ ಟೊಂಗೆಗಳ ಜೊತೆ ಸೇರಿ ಹೇಗೆ ಅಲಂಕರಿಸಿದರೆಂದರೆ, ಪ್ರತಿಯೊಂದು ಜಾಗದಲ್ಲಿ ಸೈನ್ಯದ ಸರ್ದಾರರ ಹಾಗೆ. ಮಾವಿನ ಮರ ಅಮಲೇರಿದ ಆನೆಯ ಹಾಗೆ ಕಾಣಿಸುತ್ತಿತ್ತು. ಈ ಚಲಿಸುವ ಆನೆ ತನ್ನ ಹೂವಿನ ಹಾಗಿರುವ ತಲೆ ಮತ್ತು ಕಿವಿ ಅಲುಗಾಡಿಸುತ್ತಿತ್ತು. ಅದರಲ್ಲಿ ಕಾಣುವ ಸಣ್ಣ ಸಣ್ಣ ಮಿಡಿಕಾಯಿಗಳು ಹೇಗೆ ಕಾಣಿಸುತ್ತಿದ್ದುವೆಂದರೆ, ಆನೆಗೆ ಗೆಜ್ಜೆಗಳ ಮಾಲೆ ಕಟ್ಟಿದ ಹಾಗೆ ಕಾಣಿಸುತ್ತಿತ್ತು. ಅಡಗಿರುವ ಹೂಗಳ ರಸ, ಹನಿ ಹನಿಯಾಗಿ ಉದುರುತ್ತಿದೆ. ಲೋಟದಂತಹ

ಕಣ್ಣುಗಳು ಇದರ ಜೊತೆಯಲ್ಲಿ ಸೇರಿ ಅಲಂಕರಿಸಿವೆ. ತಾಳೆಮರದ ಹಾಗೆ ಅದರ ರೂಪ ಕಾಣಿಸುತ್ತದೆ. ಇವೆಲ್ಲವೂ ಶೃಂಗರಿಸಿಕೊಂಡು ಒಂಟೆಗಳ ಸಾಲಿನಂತೆ ಹೊರಟವು. ಇವೆಲ್ಲವೂ ಸೇರಿಕೊಂಡಿದ್ದರಿಂದ ಅದು ಮಾರ್(ಮಾವೂ) ಮರದಂತೆ ಕಾಣಿಸಿತು. ವಸಂತ ಗಾಳಿ ಬೀಸಿದ್ದರಿಂದ ಪ್ರತಿಯೊಂದು ಜಾತಿಯ ಮರಕ್ಕೆ ಹೊಸ ಚೇತನ ಸಿಕ್ಕಿತು. ಮರಗಳಿಗೆ ಹಣ್ಣು ಹಚ್ಚಿರುವುದು ವೀರನು ಸವಾರಿ ಮಾಡಿದಂತೆ ಕಾಣುತ್ತದೆ. ತಲೆ ಮೇಲೆ ಛತ್ರಿಗಳನ್ನು ಹಿಡಿದಂತೆ. ತೆಂಗಿನ ಮರ ತೆಂಗಿನಕಾಯಿ ಗೊಂಚಲು ಕೊರಳಲ್ಲಿ ಕುಣಿಕೆ ಹಾಕಿದಂತಿದೆ. ಹಲಸಿನ ಮರ ಭೂಮಿಯ ಜೊತೆಗಾರ ಎಂದು ತಿಳಿ. ಹಲಸಿನಹಣ್ಣು ಎಲ್ಲ ಕಡೆ ಹಚ್ಚಿದರೆ ಅದು ದೊಡ್ಡ ಬಟ್ಟಲು ಇಡುವ ಪಾತ್ರೆಯ ಹಾಗೆ ಕಾಣುತ್ತದೆ. ಅರಮನೆಯ ರಕ್ಷಕರು ರುಮಾಲನ್ನು ಹಾರಿಸಿದರೆ ಹೇಗೆ ಕಾಣುತ್ತದೆಯೋ ಹಾಗೆಯೆ ಗಾಳಿಯಿಂದ ಬಾಳೆಗಿಡದ ಎಲೆಗಳು ಅಲುಗಾಡಿದರೆ ಕಾಣುತ್ತವೆ. ಧ್ವಜ ಹಾರಿದರೆ ಹೇಗೆ ಅತಿಸುಂದರವಾಗಿ ಕಾಣುತ್ತದೆಯೊ ಹಾಗೆಯೇ ಗಾಳಿ ಬೀಸುವುದರಿಂದ ಖರ್ಜೂರದ ಮರಗಳು ತೂರಾಡುತ್ತಿವೆ. ಹುಣಿಸೆ ಮರಗಳು ಕಾಲು ಜೋಡಿಸಿ ನಿಂತಿರುವಂತೆ ಕಾಣುತ್ತದೆ. ಜಾಗೃತ ಕಬ್ಬಿಣದ ಚೂಪಾದ ಆಂಕಸಿನ ಹಾಗೆ ಅದರ ಹಣ್ಣು ಸುಂದರವಾಗಿವೆ. ಗುಂಪು ಮಾಡಿಕೊಂಡು ಸರ್ವೆ ಮರಗಳು ನಡೆದವು. ಗಾಳಿ ಬೀಸಿದರೆ ಅದರ ಟೊಂಗೆಗಳು ಭಲ್ಲೆಗಳ ಹಾಗೆ ಅಲುಗಾಡುತ್ತವೆ. ಎಲ್ಲ ಮರಗಳು ಎಲ್ಲಕಡೆಯಿಂದ ನಡೆದು ಕೊಂಡು ಹೀಗೆ ಹೋದವು. ಮರಗಳಿಂದ ಬೀಳುವ ಎಲೆಗಳು, ಗಾಳಿಯಿಂದ ಹಾರತೊಡಗಿದವು. ಕೆಲವು ಮರಗಳು ಸಿಡಿಮದ್ದನ್ನು ಹಾರಿಸುತ್ತ ಭೂಮಿಯನ್ನು ಅಲಂಕರಿಸಿದವು. ಗಾಳಿಬೀಸಿದಾಗ ದಾಳಿಂಬರೆಯ ಹೂಗಳು ಉದುರಿದವು. ದ್ರಾಕ್ಷಿಯ ಬಳ್ಳಿ ಚಪ್ಪರದಮೇಲೆ ರತ್ನಗಳ ಹಾಗೆ ಹರಡಿದೆ. ಸುತ್ತಿರುವ ಎಲೆಗಳಿಂದ ಹಣ್ಣು ಮತ್ತು ಹೂವು ಉದುರುತ್ತಿವೆ. ಪ್ರತಿಯೊಂದು ಮರದ ಕೆಳಗೆ ಸೂರ್ಯನ ಧ್ವಜದ ನೆರಳು ಬನದಲ್ಲಿ, ರಾತ್ರಿಯಾದಂತೆ ಚಂದ್ರ ಬೆಳಕಿನಂತಹ ಸಿಡಿಮದ್ದು ಹಾರತೊಡಗಿತು. ಈ ರೀತಿಯಾಗಿ ಶೃಂಗರಿಸಿಕೊಂಡು ಬಸ್ವತ್ ರಾವೊ ಹೊರಟನು. ಮರಗಳ ಸೈನ್ಯದಲ್ಲಿ ಎಲ್ಲ ರೀತಿಯ ಮರಗಳು ಬಂದು ಸೇರಿದವು.

ತನ್ನನ್ನು ಶೃಂಗರಿಸಿಕೊಂಡು ಬಂದು ಬಾದಶಾಹ ಆಲಂ ಪನಾಹ್ ರವರ ಕಾಲು ಮುಟ್ಟಿ ನಮಸ್ಕರಿಸಿದಾಗ ಬಾದಶಾಹರವರು ಗೌರವ ವಸ್ತ್ರ ನೀಡಿ ಮರ್ಯಾದೆ ಮಾಡಿದ ಪ್ರಶಂಸೆ
(ದ್ವಿಪದಿ ೫೪೮ ರಿಂದ ೫೯೯ ವರೆಗೆ)

ಬಾದಶಾಹ ಆಲಂ ಗಾಳಿ ಸೇವನೆ ಮಾಡಲು ಎಲ್ಲಿ ಕುಳಿತು ಕೊಂಡಿದ್ದರೋ ಅಲ್ಲಿ ಬನದ ಪ್ರತಿಯೊಂದು ಮರವೂ ಹೊಸ ರೂಪ ಧರಿಸಿದಂತೆ ಕಾಣಿಸಿತು. ಅಲ್ಲಿಯೇ ವಸಂತರಾಯನು ಬಂದು ಇಳಿದ. ಬಾದಶಾಹರನ್ನು ಅಲ್ಲೇ ಭೇಟಿಮಾಡಿ ಕಾಲು ಮುಟ್ಟಿ ನಮಸ್ಕರಿಸಿದ. ಕೈಯಲ್ಲಿ ಐವತ್ತೆರಡು ಹೂಗಳ ಪರಿಮಳ ಧರಿಸಿ ಪ್ರತಿಯೊಂದು ಮರವೂ ಭೂಮಿಗೆ ತನ್ನ ತಲೆ ಬಾಗಿ ಬಂದವು. ವಸಂತರಾಯನು ಬಂದು ಬಾದಶಾಹರನ್ನು

ಆಲಂಗಿಸಿದ. ಆಗ ಪ್ರತಿಯೊಂದು ರೂಪದ ಮರಗಳ ಸೈನ್ಯ ಅವನ ಜೊತೆಯಲ್ಲಿ ನಿಂತಿತ್ತು. ಬಾದಶಾಹನು ವಸಂತರಾಯನಿಗೆ ಆಜ್ಞಾಪಿಸಿದನು. ನಮ್ಮ ಜಾಗದಲ್ಲಿ ನಿನ್ನ ಸೈನ್ಯದೊಡನೆ ಅತಿಥಿಯಾಗು,- ಎಂದು. ಉದ್ಯಾನವನದಲ್ಲಿ ಊಟದ ಹಾಸನ್ನು ಹಾಸಲಾಯಿತು. ಎಲ್ಲ ಕಡೆಯೂ ಮಕ್ಮಲ್ ಹಾಗು ಚಿನ್ನದ ಸರಿಗೆಗಳಿಂದ ನೇಯ್ದ ಬಟ್ಟೆ ಹಾಸಲಾಯಿತು. ದೊಡ್ಡ ತಟ್ಟೆಗಳಲ್ಲಿ ರತ್ನಗಳನ್ನು ತುಂಬಿ ತಂದರು. ಎಲ್ಲ ಕಡೆಯೂ ಸುಗಂಧ ಭರಿತ ನೀರು ತುಂಬಲಾಯಿತು. ರುಚಿನೋಡುವ ವಿವವೇಕವುಳ್ಳ ಮಾಲಿಗಳು ಬಂದು ನೀರು ತುಂಬಿ ತಂದಿಟ್ಟು, ತಟ್ಟೆಗಳಲ್ಲಿ ಒಳ್ಳೆ ಊಟ ಬಡಿಸಿದರು. ಈ ರೀತಿ ಎಲ್ಲರೂ ಸಾಲಾಗಿ ಊಟಕ್ಕೆ ಕುಳಿತರು. ಎಲ್ಲ ಮರಗಳು ಸಂತೋಷದಿಂದ ಹೊಟ್ಟೆ ತುಂಬ ಊಟ ಮಾಡಿದವು. ಪ್ರತಿಯೊಂದು ಮರಕ್ಕೂ ಗೌರವ ವಸ್ತ್ರಗಳನ್ನು ಕೊಟ್ಟರು. ಪ್ರತಿಯೊಂದು ಟೊಂಗೆ ರೇಷ್ಮೆ ವಸ್ತ್ರಗಳನ್ನು ಎಲ್ಲ ಕಡೆ ಧರಿಸಿದವು. ಪ್ರತಿಯೊಂದು ಮರ ಕೊರಳಲ್ಲಿ ರತ್ನಗಳ ಹಾರಗಳನ್ನು ತೊಟ್ಟು ಪ್ರತಿಯೊಂದು ಜಾತಿ ಮರಗಳು ಹೂಗಳಿಂದ ಶೃಂಗರಿಸಿದ ಹಾಗೆ ಕಾಣಿಸಿತು. ಪ್ರತಿಯೊಂದು ಟೊಂಗೆ ಕೈಗಳಲ್ಲಿ ಪಾನ್ ಬೀಡ ತೆಗೆದು ಕೊಂಡುವು. ತೋಟದ ಸಭೆಯಲ್ಲಿ ಮರಗಳೆಲ್ಲ ತುಂಬಿ ನಿಂತವು. ಮಧ್ಯದಲ್ಲಿ ಕಂಚಿನ ಬಟ್ಟಲುಗಳಲ್ಲಿ ಸುಗಂಧ ತುಂಬಿ ಅಲಂಕರಿಸಲಾಗಿತ್ತು. ತೊಟ್ಟಿಗಳನ್ನೆಲ್ಲ ಕದಂ(ಒಂದು ವಿಶೇಷ ಸುಗಂಧ)ದಿಂದ ತುಂಬಲಾಗಿತ್ತು. ಮರಗಳ ಟೊಂಗೆಗಳ ನೆರಳು ಹೀಗೆ ಕಾಣುತ್ತಿತ್ತು. ಎಲ್ಲ ಕಡೆ ಕೈಗಳಿಂದ ಕಾಸು ಚಲ್ಲಿದ ಹಾಗೆ. ಗಾಳಿ ಬೀಸಿದಾಗ ಅವು ಮಧ್ಯದಲ್ಲಿ ಹೇಗೆ ಕಾಣುತ್ತಿತ್ತು ಎಂದರೆ– ಪ್ರತಿಯೊಂದು ಮರ ಕೈಯಲ್ಲಿ ಸುಗಂಧವನ್ನು ತೆಗೆದು ಕೊಂಡು ಆಲಾಪಿಸುತ್ತಿದೆ. ಆದರೆ ತೊಟ್ಟಿಗಳ ಮೇಲೆ ಆಕಾಶದ ನೆರಳು ಬಿದ್ದು ಎಲ್ಲ ಕಡೆ ಇದನ್ನು ಸೇರಿ ಸೂರ್ಯನ ರೂಪ ಧರಿಸಿದೆ. ಹೀಗೆ ಭೂಮಿ ಕಣ್ಣಿನ ರೂಪದಂತೆ ಕಾಣುತ್ತದೆ ಎಂದು ತಿಳಿ. ಗಗನದ ಬಿಳುಪು, ಸೂರ್ಯನ ನೇತ್ರದಂತಿದೆ. ಎಲ್ಲ ರೀತಿಯ ಬಣ್ಣ ಹಾಗು ಸುಗಂಧ ತುಂಬಿದೆ. ಅದರ ಮಧ್ಯದಲ್ಲಿ ಅಲೆಗಳು ನೇತ್ರಗಳು ತುಂಬಿ ತೂರಾಡುತ್ತಿವೆ. ರೆಪ್ಪೆಗಳ ಕೂದಲು ಮರವಾಗಿ ಎರಡು ಸಾಲುಗಳನ್ನು ಸೇರಿಸುತ್ತದೆ. ಗಾಳಿ ತಾಗುವ ಹಾಗೆ ಕಣ್ಣು ರೆಪ್ಪೆಗಳು ಅಲುಗಾಡಿದ ಹಾಗೆ ಕಾಣುತ್ತವೆ. ಹೀಗೆ ಪ್ರತಿಯೊಂದು ಜಾತಿಯ ಮರ ಸೈನ್ಯದಲ್ಲಿ ಸೇರಿತು. ಬಾದಶಾಹರು ಹೀಗೆ ಬನ್‌ಪತ್ ರಾಯನ ಆತಿಥ್ಯ ಮಾಡಿದರು

ಬಾದಶಾಹರವರು ವಸಂತನೊಡನೆ ವಿಚಾರವಿನಿಮಯ ಮಾಡಿದರು, ನಾನು ಒಂದು ಕಡೆ ನನ್ನ ಕುಟುಂಬದವರ ಜೊತೆ ಶೃಂಗರಿಸಿಕೊಳ್ಳುವೆ ಮತ್ತೊಂದು ಕಡೆ ಮರಗಳು ಶೃಂಗರಿಸಿಕೊಳ್ಳಲಿ ಎಂಬುದರ ಬಗ್ಗೆ ಪ್ರಶಂಸೆ

(ದ್ವಿಪದಿ ೫೬೭ ರಿಂದ ೫೮೯ ವರೆಗೆ)

ಬಾದಶಾಹನು ಬನ್‌ಪತ್ ರಾಯನಿಗೆ ಹೇಳಿದ. ಓ ಇಲ್ಲಿ ಕೇಳು. ಇಬ್ಬರೂ ಸೇರಿ ಬಸಂತ್ ಆಟವನ್ನು ಆಡೋಣ. ಒಂದು ಕಡೆ ಓ ರಾಯ ನೀನು ಗಿಡಗಳ ಜೊತೆ ಸೇರು.

ಮತ್ತೊಂದು ಕಡೆಯಲ್ಲಿ ರಾಣಿಗಳು ಶೃಂಗರಿಸುತ್ತಾರೆ. ಬನ್‌ಪತ್ ರಾಯ ಬಾದಶಾಹನ ಇಷ್ಟದಂತೆ ಮಾಡಿದ. ಅದೇ ಆಜ್ಞೆಯನ್ನು ನಾನು ತಲೆ ಬಾಗಿ ಪಾಲಿಸುತ್ತೇನೆ. ಈ ಕಡೆ ಬಸಂತ್‌ರಾವೊ ಮರಗಳ ಜೊತೆಗೂಡಿ ಶೃಂಗರಿಸಿ ಕೊಳ್ಳತೊಡಗಿದ ಆ ಕಡೆಗೆ ಬಾದಶಾಹ ರಾಣಿಯರ ಜೊತೆಗೂಡಿ ಅಲಂಕಾರ ಮಾಡಿಕೊಳ್ಳತೊಡಗಿದ. ಆದರೆ ಆ ರಾಣಿಗಳು ಮರಗಳ ರೂಪದಂತೆ ಕಾಣ ತೊಡಗಿದವು. ಎಲ್ಲ ಜಾತಿಯ ಮರಗಳು, ಎಲ್ಲ ಕಡೆ ಅಪರೂಪದ ಅಲಂಕಾರ ಮಾಡಿಕೊಂಡು ಅಪರೂಪದ ಸುಂದರ ರೂಪತಾಳಿದಂತೆ ಕಾಣುತ್ತಿದ್ದವು. ಅವರು ತಾಳಿದಂಥ ರೂಪವನ್ನು ನೋಡಿ ತನ್ನನ್ನೇ ಮರೆತಂತಾಯಿತು. ಸುತ್ತ ಮುತ್ತಲೆಲ್ಲವೂ ಅಲಂಕಾರ ಮಾಡಿ ಶೃಂಗರಿಸಲಾಯಿತು. ಬಟ್ಟೆಗಳನ್ನು ಧರಿಸಿ ತಮ್ಮ ಮೈಗಳನ್ನು ಶೃಂಗರಿಸಿದರು. ಎಲ್ಲ ರೀತಿಯ ಜರಿಬಟ್ಟೆಗಳನ್ನು ಉಟ್ಟುಕೊಂಡಿರುವುದರಿಂದ ಮೈ ಮೇಲೆ ಹಳದಿ ಆಭರಣಗಳನ್ನು ತೊಟ್ಟ ಹಾಗೆ ಕಾಣುತ್ತಿದ್ದವು. ಇಂತಹ ಸುಂದರಿಯರೆಲ್ಲರೂ ಬಂದು ಒಂದು ಜಾಗದಲ್ಲಿ ಸೇರಿದರು. ಬನದಲ್ಲಿ ಎಲ್ಲ ಬಣ್ಣಗಳ ಮರಗಳು ಸೇರಿದಂತೆ ಕಾಣುತ್ತಿದ್ದವು. ಚಿನ್ನದ ಮರದಲ್ಲಿ ರತ್ನಖಚಿತ ಫಲ ಕಚ್ಚಿದಂತಿದೆ. ಎಲ್ಲ ರೀತಿಯ ಆಭರಣಗಳು ಹೊಸ ಎಲೆಗಳಂತೆ ತನ್ನಿ ಅಥವಾ ಎಲೆ ಬೆರಳುಗಳು ಕುಂದನ್ ಟೊಂಗೆ ಜೊತೆಗೂಡಿ ಉಂಗುರುಗಳು ರತ್ನದ ಹೂವುಗಳಂತೆ ಪ್ರತಿಯೊಂದು ಎಲೆ ಮೇಲೆ ಹರಡಿತು. ಚಿನ್ನದ ತೋಳದಬಂದಿ ಜೊತೆಗೆ ತಾಯಿತಿ ಸೇರಿಕೊಂಡು ಹೇಗೆ ಕಾಣಿಸುತ್ತದೆಂದರೆ ಚಿನ್ನದ ಮರದ ಟೊಂಗೆಗಳಲ್ಲಿ ಮೊಗ್ಗಿನ ರೂಪದಂತೆ ಕಾಣುತ್ತದೆ. ಎಲ್ಲ ಜಾತಿಯ, ಎಲ್ಲ ಬಣ್ಣದ ಪ್ರತಿಯೊಂದು ಮರ ಇವೆಲ್ಲವನ್ನು ನೋಡಿ ಪ್ರಾಣಿಗಳೆಲ್ಲ ತಮ್ಮ ಜಾಗ ಮರೆತವು. ನವಿಲು ತನ್ನ ತಲೆ ಮೇಲೆ ಗಾಳಿಯನ್ನು ಜೋಡಿಸಿಕೊಂಡು ಬಣ್ಣ ಧರಿಸಿ ಕೆಂಪು ಕಣ್ಣು ಮಾಡಿಕೊಂಡು ತಿರುಗಾಡುತ್ತಿದೆ. ಗಿಣಿಯ ರೂಪ ಧರಿಸಿದವನ ಮೂಗು ಸೇರಿದಂತಿದೆ. ಕೋಗಿಲೆಗಳು ಅದರದೇ ಆದಂತಹ ಕೂಗನ್ನು ಕೂಗುತ್ತಿವೆ. ದುಂಬಿಗಳು ಬಂದು ಹೂವಿನ ಮುಖಗಳ ಮೇಲೆ ಓಡಾಡುತ್ತಿವೆ. ಎಲ್ಲ ಜಾಗದಲ್ಲಿ ಕರಿ ಕೂದಲನ್ನು ಹರಡಿಸಿಕೊಂಡು ಬಿದ್ದಿವೆ. ಕೊರಳಿನ ಅಲಂಕಾರ ಹೇಗೆ ಕಾಣುತ್ತಿದೆಯೆಂದರೆ, ಪಾರಿವಾಳವು ಕೂಡ ಮರೆತು ಬಂದಂತೆ ಕಾಣುತ್ತದೆ. ಸುರ್ಖಾಬಿನ(ಕೆಂಪುಬಣ್ಣದ ನೀರಿನ ಹಕ್ಕಿ) ಜೋಡಿಯಂತೆ ಒಂದು ಜಾಗದಲ್ಲಿ ಕುಳಿತುಕೊಂಡಿರುವುದು. ಎರಡು ಸ್ತನಗಳ ಗುರುತು ರೂಪ ಧರಿಸಿದಂತೆ ಕಾಣುತ್ತದೆ. ಪಕ್ಕದಲ್ಲಿ ಸಣ್ಣ ನಡುವಿನಲ್ಲಿ ಬಳಲಿಕೆ ಬಂದ ಹಾಗೆ ಎಲ್ಲ ಹಂಸಗಳ ನಡುವೆ ಕಮಲದ ಕಾಲು ಇಡುವಹಾಗಿದೆ. ಈ ರೀತಿಯಾಗಿ ಎಲ್ಲ ನಾರಿಯರೆಲ್ಲ ಬಟ್ಟೆಧರಿಸಿ ಶೃಂಗರಿಸಿಕೊಂಡು ಪಂಜರಗಳಲ್ಲಿ ಗಿಣಿಗಳನ್ನು ಅಲಂಕರಿಸಿದಂತೆ ಕಾಣುತ್ತಿದ್ದರು. ಮಧ್ಯದಲ್ಲಿ ಬಾದಶಾಹ ಮದನನ ರೂಪಧರಿಸಿ ಎಲ್ಲ ನಾರಿಯರನ್ನು ಪ್ರತ್ಯೇಕವಾಗಿ ಏಕಾಂತದಲ್ಲಿ ಕರೆದುಕೊಂಡು ಹೋಗಿ ಬಸಂತ್ ಆಡಲಾರಂಭಿಸಿದನು. ಸ್ವರ್ಗ ಲೋಕ, ಮೃತ್ಯು ಲೋಕ ಪಾತಾಳ ಎಲ್ಲ ಕಡೆಯೂ ಐವತ್ತೆರಡು ತರದ ಸುಗಂಧ ತುಂಬಿತು. ಈ ರೀತಿಯಾಗಿ

ಬಾದಶಾಹರು ಹಗಲು ರಾತ್ರಿ ಬಸಂತ ಆಡಿ, ಎಲ್ಲ ದಿನವೂ ನೌರೋಜ಼್(ಹೊಸ ವರ್ಷದ ಮೊದಲನೆಯ ದಿನ) ದಿನದ ರೀತಿ ರಿವಾಜ್ (ಸಂಪ್ರದಾಯಗಳನ್ನು) ಆಚರಿಸಿದರು.

ವಸಂತ ಋತುವನ್ನು ಸಮರ್ಥಿಸಿ ಬಾದಶಾಹ ಆಲಂ ಪನಾಹ್ ಭೋಗವಿಲಾಸ ಮಾಡಿದನು. ವಾರ್ಷಿಕೋತ್ಸವವನ್ನು ತಾನೆ ಸ್ವತಃ ಪ್ರಾರಂಭಿಸಿ,ಆತಿಥ್ಯ ಕಾರ್ಯವನ್ನು ಆರಂಭಿಸಿದರ ಬಗ್ಗೆ ಪ್ರಶಂಸೆ (ದ್ವಿಪದಿ ೫೯೦ ರಿಂದ ೬೦೯ ವರೆಗೆ)

ಈ ರೀತಿಯಾಗಿ ಬಾದಶಾಹ ನೌರೋಜ಼್ ಆಡಿ ಬಂದು ವಾರ್ಷಿಕೋತ್ಸವದ ಆತಿಥ್ಯವನ್ನು ಆಚರಿಸಿದನು.

ಈಗ ನಾನು ಬಾದಶಾಹನ ವಾರ್ಷಿಕೋತ್ಸವದ ಬಗ್ಗೆ ಹೇಳುವೆ. ಪ್ರತಿ ವರ್ಷ ಹೊಸ ಚಂದ್ರನ ದಿನ ಆತಿಥ್ಯ ಮಾಡಲಾಗುತ್ತಿತ್ತು. ಪ್ರತಿ ವರ್ಷ ಹೊಸ ಚಂದ್ರನ ದಿನ ಆನಂದ ತರುವ ಇಂತಹ ಬಾದಶಹನನ್ನು ನಾನು ಎಲ್ಲೂ ನೋಡಲೂ ಇಲ್ಲ ಕೇಳಲೂ ಇಲ್ಲ. ಇಡೀ ಪ್ರಪಂಚಕ್ಕೆ ಬಾದಶಹನ ಆಜ್ಞೆಯಾಯಿತು. ಪ್ರತಿಯೊಂದು ದೇಶ, ದ್ವೀಪ, ಪಟ್ಟಣ ಹಾಗೂ ಮನೆ, ಲೋಕದಲ್ಲಿರುವ ಎಷ್ಟು ಬಿದ್ಯಾವಂತರಿದ್ದಾರೆಯೋ ಅವರೆಲ್ಲರೂ ಬಂದು ಬಾದಶಾಹನ ದರ್ಬಾರಲ್ಲಿ ಹಾಜರಾಗಬೇಕು. ಅರಮನೆಗಳನ್ನು ಎಲ್ಲ ರೀತಿಯಲ್ಲಿ ಅಲಂಕರಿಸಲಾಯಿತು. ಛಜ್ಜೆ ಕೆಳಗೆಲ್ಲ ಮಂಟಪಗಳನ್ನು ಹಾಕಲಾಯಿತು. ಎತ್ತರವಾದ ಅರಮನೆಯ ಮುಂದೆ ಮಂಟಪ ಸೇರಿ ಎಷ್ಟು ಚೆನ್ನಾಗಿ ಕಾಣಿಸಿತೆಂದರೆ, ಗಗನದ ಕೆಳಗೆ ಮೋಡಗಳು ಆವರಿಸಿದಂತೆ ಕಾಣುತಿತ್ತು. ಆದರೆ ಆ ಎತ್ತರವಾದ ಮಂಟಪಗಳು ಎಷ್ಟು ಸುಂದರವಾಗಿವೆಯೆಂದರೆ, ಅವು ಪಲ್ಲಕ್ಕಿಗಳು ಗಗನದ ಮಧ್ಯದಲ್ಲಿ ಉರುಳುವ ಹಾಗೆ ಕಾಣುತ್ತಿದ್ದವು. ಮೇಣದಬತ್ತಿಗಳೆಲ್ಲ ಸೇರಿ ಎಂತಹ ರೂಪ ಅರಳಿಸಿತೆಂದರೆ, ಸೂರ್ಯ ಚಂದ್ರ ಪ್ರತಿಯೊಂದರ ಜ್ಯೋತಿ ಗಗನದಲ್ಲಿ ಹರಡಿದೆ. ನೆಲದ ಮೇಲೆ ಬುಕಾ(ಚಿನ್ನದ ಧೂಳು) ಮತ್ತು ಕಸ್ತೂರಿ ಹರಡಿಸಲಾಗಿದೆ. ಆ ಧೂಳು ಹಗಲು ಮತ್ತು ರಾತ್ರಿಯ ಚಿನ್ಹೆಯಾಗಿದೆ. ಆ ಮಂಟಪಗಳ ಕೆಳಗೆ ಅಲಂಕರಿಸಿಕೊಂಡು ಬಂದರು. ಒಬ್ಬರಿಂದ ಒಬ್ಬರು ಕಲಾವಿದರು ಅಲಂಕರಿಸಿದ್ದರು. ಅನೇಕ ದೇಶಗಳಿಂದ ಬಹಳ ಜನ ಬಂದರು. ಶಾಹಿ ಸಂಗೀತಗಾರರೆಲ್ಲ ಆನಂದದ ಸಂಗೀತ ಉಪಕರಣಗಳನ್ನು ಬಾರಿಸಿದರು ನಗಾರಿ ಮತ್ತು ತಬಲದ ಜೋಡಿ ತುಂಬ ಚೆನ್ನಾಗಿದೆ. ಇವುಗಳ ನಾದ ಗಗನದಲ್ಲಿ ತುಂಬಿ ಇಡೀಜಗತ್ತಿಗೆ ಕೇಳಿಸಿತು. ಎಲ್ಲ ಕಡೆ ನಗಾರಿಗಳ ಜೋಡಣೆ, ಭೂಮಿ ಆಕಾಶವನ್ನೇ ತಳಕು ಮಾಡಿ ಇಡುವ ಹಾಗೆ ಕಾಣುತ್ತಿತ್ತು. ಎಲ್ಲ ತರದ ಬಣ್ಣಗಳ ಕೋಲುಗಳು ನಗಾರಿಗಳ ಮೇಲೆ ಬೀಳುತ್ತಿದ್ದರೆ, ಆಕಾಶದಲ್ಲಿ ಕಾಮನ ಬಿಲ್ಲು ಮೂಡಿದಂತೆ ಕಾಣುತ್ತದೆ. ಈ ರೀತಿಯಾಗಿ ಬಾದಶಾಹನ ದರ್ಬಾರಿನ ಅನಂದ ಮೂಡಿತು. ಅಲ್ಲಲ್ಲಿ ವಿವಿಧ ರೀತಿಯ ಗಾಯನ ಜೋಡಿಗಳು ನಿಂತಿದ್ದವು. ಎಲ್ಲೋ ಒಂದು ಕಡೆ ಮುಸ್ಲಿಂ ಗಾಯಕರು ಬಂದು

ಸೇರಿ ನೌರಸ್ ಮತ್ತು ಬುಧ್ ಪ್ರಕಾಶ ಮನತುಂಬಿ ಹಾಡಿದರು. ಮತ್ತೊಂದು ಕಡೆ ಮುಸ್ಲಿಂ ನರ್ತಕಿಯರು ಕೈಮದ್ದಳೆ ಬಾರಿಸುತ್ತಿದ್ದರು. ನೌರಸ್‌ಶಾಹ (ಇಮ್ಮಡಿ ಇಬ್ರಾಹಿಮನ ಬಿರುದು)ನ ಸ್ನೇಹಿತ ಆನಂದ ನುಡಿದನು. ಮತ್ತೊಂದು ಕಡೆ ಅಲ್ಲಲ್ಲಿ ಎಲ್ಲ ಜಾತಿಯ, ಎಲ್ಲ ರೂಪದವರೆಲ್ಲರೂ ಶೃಂಗರಿಸಿಕೊಂಡು ಬಂದು ನಿಂತರು. ಎಲ್ಲ ದೇಶದವರೂ ತಮ್ಮ ತಮ್ಮ ಬಾಹ್ಯ ಚಹರೆಗಳನ್ನು ಅಲಂಕರಿಸಿಕೊಂಡು ಎಲ್ಲ ರೀತಿಯ, ಎಲ್ಲ ಜಾತಿಯ ಸಂಗೀತ ವಾದ್ಯಗಳನ್ನು ನುಡಿಸಿದರು.

ಆತಿಥ್ಯಕ್ಕಾಗಿ ವಿವಿಧ ರೀತಿಯ ನರ್ತಕಿಯರು ಸೇರಿದ ಪ್ರಶಂಸೆಯಲ್ಲಿ

(ದ್ವಿಪದಿ ೬೧೦ ರಿಂದ ೬೮೬ ವರೆಗೆ)

ಮತ್ತೊಬ್ಬಳು ಕೂದಲ ಮಧ್ಯದಲ್ಲಿ ಬೈತಲೆಯನ್ನು ಸೀಳಿದ್ದರಿಂದ ಅದು ಒರೆಗಲ್ಲಿಯಲ್ಲಿ ಚಿನ್ನದ ಗೆರೆಯಂತೆ ಕಾಣುತ್ತಿದೆ. ಕರಿ ರೇಷ್ಮೆ ಬಟ್ಟೆಯ ಮಧ್ಯದಲ್ಲಿ ಜರಿಯ ದಾರ ಬಂದರೆ ಹೇಗೆ ಸುಂದರವಾಗಿ ಕಾಣುತ್ತದೆಯೋ ಹಾಗೆ ಕಾಣುತ್ತಿದೆ.

ಜಡೆ/ತುರುಬಿನ ಪ್ರಶಂಸೆ

ಮತ್ಯಾರೋ ತುರುಬನ್ನು ಕಟ್ಟಿರುವುದು ಈ ರೀತಿ ಕಾಣುತ್ತಿದೆ. ಬಂಗಾರದ ಸರ್ವೆ ಮರದ ಮೇಲೆ ನವಿಲು ಕುಳಿತುರುವ ಹಾಗೆ ಅಥವಾ ಸುಂದರವಾದ ಉದ್ದನೆಯ ಮರದ ಮೇಲೆ ಕೋಗಿಲೆ ಕುಳಿತ ಹಾಗೆ ಕೆಂಪು ಹರಳಿನ ಹೂವು ಕೊಕ್ಕಿನಲ್ಲಿ ಹಿಡಿದ ಹಾಗೆ.

ಗುಂಗುರು ಕೂದಲಿನ ಪ್ರಶಂಸೆ

ಮತ್ಯಾರೋ ಜಡೆ ಹೆಣೆದು ಬೆನ್ನಿನ ಮೇಲೆ ಹಾಕಿಕೊಂಡು ಬಂದರೆ, ಚಿನ್ನದ ತುಂಡು ಮಧ್ಯದಲ್ಲಿ ಬಿರುಕುಬಿಟ್ಟರೆ ಎಷ್ಟು ಸುಂದರವಾಗಿ ಕಾಣುತ್ತದೆಯೋ ಅಥವಾ ಚಿನ್ನದ ತುಂಡು ಕರಿ ನಾಗರಹಾವಿನ ಮೇಲೆ ಏರಿದಂತೆ ಹಾರಿ ಹೋಗಿ ಅದರ ತಲೆ ಹೆಡೆ ಹಿಡಿದ ಹಾಗೆ, ಮತ್ಯಾರೋ ಜಡಿತ ತಲೆಯ ಆಭರಣ ತಲೆ ಕೂದಲಲ್ಲಿ ಹಾಕಿಕೊಂಡಿರುವಳು. ಹೇಗೆಂದರೆ ಕಸ್ತೂರಿಯ ರಾಶಿಯ ಮೇಲೆ ರತ್ನ ಇದ್ದ ಹಾಗೆ, ಅಥವಾ ರಾತ್ರಿಯ ಕೊಠಡಿಯ ಮಧ್ಯದಲ್ಲಿ ದೀಪ ತಂದಿಟ್ಟ ಹಾಗೆ ತಲೆ ಮೇಲೆ ಹೂವು ಇದೆ ಎಂದು ತಿಳಿ.

ರತ್ನ ಖಚಿತ ಸೊಸಲಾಭರಣ ಮತ್ತು ಹಣೆಯ ಪ್ರಶಂಸೆ

ಮತ್ಯಾರೋ ರತ್ನ ಖಚಿತ ತಿಲಕ ಹಣೆ ಮೇಲೆ ಹಾಕಿರುವಳು. ಬೆಳಿಗ್ಗೆಯೇ ಮೈದಾನದಲ್ಲಿ ಸೂರ್ಯ ಬಂದು ನಿಂತಿರುವ ಹಾಗೆ; ಚಂದ್ರನ ಮೇಲೆ ವಿಚಿತ್ರವಾದ ಮಿಂಚು ಮಧ್ಯದಲ್ಲಿ ಬಿತ್ತು ಶಖೆಯ ಗುರುತಂತೆ ಮುಖದ ಮೇಲೆ ಬೆವರಿನ ಹನಿ ಕಾಣುತ್ತದೆ.

ಕಸ್ತೂರಿ ಮತ್ತು ತಿಲಕ(ಹಣೆ ಮೇಲೆ ಇಡುವ ಕೇಸರಿ ಅಥವ ಕರಿ ತಿಲಕ)ದ ಪ್ರಶಂಸೆ

ಮತ್ಯಾರೋ ಕಸ್ತೂರಿಯ ತಿಲಕ ಹಣೆ ಮೇಲೆ ಇಟ್ಟು ಬಂದರೆ, ಚಂದ್ರನ ಮಧ್ಯೆ ಕರಿ ಮಚ್ಚೆ ನೋಡಿದ ಹಾಗೆ ಕಾಣುತ್ತದೆ. ಅಥವಾ ಆ ಕಸ್ತೂರಿ ತಿಲಕದುಂಬಿ ಇದ್ದ ಹಾಗೆಂದು ತಿಳಿ. ಅದು ಕಣ್ಣಿನ ಎರಡು ಕಮಲದ ಮಧ್ಯೆ ನರ್ತಿಸುವಜಂತೆ ಕಾಣುತ್ತದೆ.

ಬುಲಾಖ(ಮೂಗಿನ ಆಭರಣ)ದ ಪ್ರಶಂಸೆ

ಮತ್ಯಾರೋ ಅಲಂಕರಿಸಿದ ಮುತ್ತಿನ ಬುಲಾಖ ಮೂಗಲ್ಲಿ ತೊಟ್ಟಿದ್ದಾಳೆ. ಅದು ಅಲುಗಾಡಿದರೆ ಚಿನ್ನದ ತಟ್ಟೆಯಲ್ಲಿ ಪಾದರಸ ಉರುಳುವಂತೆ ಅಥವಾ ಮೂಗು ದೀಪ ಇರುವ ಹಾಗೆ ಮತ್ತು ಮುಖ ಅದರ ಜ್ಯೋತಿ ಎಂದು ತಿಳಿ. ಬುಲಾಖಿನಿಂದ ಹೂವು ಉದುರುವಂತೆ ಕಾಣುತ್ತದೆ.

ಕಣ್ಣಿನ ಕಾಡಿಗೆಯ ರೇಖೆಯ ಪ್ರಶಂಸೆ

ಮತ್ಯಾರೋ ಕಣ್ಣಿಗೆ ಕಾಡಿಗೆ ಹಚ್ಚಿರುವುದು, ಕೂದಲಲ್ಲಿ ಸಿಕ್ಕಿಹಾಕಿಕೊಂಡಿರುವ ಹಾಗೆ ಎರಡು ರೆಕ್ಕೆಗಳು ತುಂಬಿವೆ. ಅಥವಾ ಕಣ್ಣಿನ ಕುದುರೆ ಮೇಲೆ ಎರಡು ನೇತ್ರಗಳು ಸವಾರಿ ಮಾಡಿದಂತೆ, ಆ ಚಂಚಲ ನಯನಗಳು ತಿರುಗಿದರೆ ನೋಡಿದವನ ಪ್ರಾಣ ಹಾರುವುದು.

ಕಿವಿಯ ಆಭರಣದ ಪ್ರಶಂಸೆ

ಮತ್ಯಾರೋ ಕಿವಿಯಲ್ಲಿ ಖಚಿತ ಖೂಂಟೆ(ಕಿವಿಯ ಆಭರಣ)ಧರಿಸಿದ್ದಾಳೆ. ಚಂದ್ರ ಕುಳಿತು ಎರಡು ಸೂರ್ಯಚಕ್ರ ತಂದಿದೆ. ಅಥವ ಹೂವಾಡಿ ಕೂದಲು (ಮಕ್ಕಳ ಕೂದಲನ್ನು ಹೂಗಳಿಂದ ಅಲಂಕರಿಸುವ ಸಂಪ್ರದಾಯ) ಮೋಡಗಳ ಸುಳಿಯಲ್ಲಿ ಸಿಕ್ಕಿಹಾಕಿಕೊಂಡಿವೆ. ಎರಡು ಮುತ್ತುಗಳು ಸೇರಿ ಸಿತಾರಿನ ಚೌಕ ಎಳೆದ ಹಾಗೆ

ತುಟಿಗಳು ಮತ್ತು ಕೆಂಪನೆ ಎಲೆಗಳ ಪ್ರಶಂಸೆ

ಮತ್ಯಾರೋ ತುಟಿಗಳ ಮೇಲೆ ಕೆಂಪನೆ ಹಚ್ಚಿದೆ. ಅದು ಹೇಗಿದೆಯೆಂದರೆ ಕಮಲದ ಪಕಳಿ ಮಧ್ಯದಲ್ಲಿ ಕನ್ನಡಿ ಅಥವಾ ಜಾಸೂನ್ (ಗ್ಢಡಲ್, ಜಾವ [ಫಾಬ್ಸ್]) ಅರೆಅರಳಿರುವ ಹೂವು ತಂದ ಹಾಗೆ, ಕರ್ಪೂರದ ಮೇಲೆ ದೊಡ್ಡ ಮುತ್ತು ಇಟ್ಟು ತಂದಿದೆ.

ಕರಿ ಬಣ್ಣದ ಹಲ್ಲಿನ ಪ್ರಶಂಸೆ

ಮತ್ಯಾರದೋ ಕರಿ ಹಲ್ಲು, ಹೀಗೆ ಅಲಂಕರಿಸಿದಂತೆ ಕಾಣುತ್ತದೆ. ಕಮಲದ ಹೂವಿನಲ್ಲಿ ದುಂಬಿಗಳ ಸಾಲು ಅಡಗಿರುವ ಹಾಗೆ ಅಥವಾ ನೀಲಮಣಿ ದಂತದ ಪ್ರಕಾಶ ಬಣ್ಣ ಉದುರುತ್ತಿದೆ. ಸುಂದರವಾದ ರತ್ನ ಲೋಟಗಳು ತುಂಬುತ್ತಿವೆ.

ಕೊರಳಲ್ಲಿ ಮುತಿನ ಹಾರ ತೊಟ್ಟಿರುವ ಬಗ್ಗೆ ಪ್ರಶಂಸೆ

ಮತ್ಯಾರೋ ಕೊರಳಲ್ಲಿ ಮುತ್ತಿನ ಹಾರದ ಎಳೆ ತೊಟ್ಟಿರುವಳು. ರತ್ನಖಚಿತ ಮಾಣಿಕ್ಯಗಳುಳ್ಳ ಬೆಲೆ ಬಾಳುವಂತಹ ಅದು ಮಧ್ಯದಿಂದ ರುಮಾಲು ಕಂಡ ಹಾಗೆ ಕಾಣಿಸುತ್ತದೆ. ಆನೆ ವ್ಯಾಮೋಹದಿಂದ ತನ್ನ ಸೊಂಡಿಲು ತಂದು ಇಟ್ಟ ಹಾಗೆ, ಅಥವಾ ಒಂದು ಕುಂಡ ನೀರು ಕುಡಿದು ಮೈ ಮೇಲೆ ಎರಚಿದ ನೀರಿನ ಧಾರೆ, ಅದರ ಹನಿಗಳು ಮುತ್ತುಗಳಾಗಿ ಕೊರಳಿನಲ್ಲಿ ಹಾರವಾಗಿದೆ.

ಕೈ ಮತ್ತು ಅದರಲ್ಲಿ ತೊಟ್ಟಿರುವ ಲಟ್ಕನ್‌ಗಳ(ತೂಗಾಡುವ ಆಭರಣ) ಪ್ರಶಂಸೆ

ಮತ್ಯಾರೋ ಕರಿ ಲಟ್ಕನ್‌ಗಳನ್ನು ಕುಣಿಗಳ ಹಾಗೆ ತೊಟ್ಟು ಅದು ಕಮಲದ ಹೂ ಮೇಲೆ ದುಂಬಿ ಬಂದು ತಂಗುವ ಹಾಗೆ ಅಥವಾ ಪಕಳೆಗಳ ಮೇಲೆ ಹರಳುಗಳನ್ನು ಕೆತ್ತಿಸಿದ ಹಾಗೆ ಕೆಂಪು ರತ್ನ ಮೆಹಂದಿಯ ಹಾಗೆ ಸುಂದರವಾಗಿ ಕಾಣಿಸುತ್ತದೆ.

ಸ್ತನಗಳ ಪ್ರಶಂಸೆ

ಮತ್ಯಾರೋ ತನ್ನ ಏರು ಯೌವನದ ರೂಪಲಾವಣ್ಯದಲ್ಲಿ ಬಂದು ನಿಂತಿರುವಳು. ಸುಂದರವಾದ ನೀರಿನ ತೊಟ್ಟಿಯಲ್ಲಿ ಎರಡು ಕಮಲಗಳ ಹಾಗೆ ಕಾಣುತ್ತವೆ. ಅಥವಾ ಎದೆ ವ್ಯಾಮೋಹದ ಉನ್ನತ ಸ್ಥಾನ ಶೋಭಿಸುತ್ತದೆ. ಹೂವನ್ನು ಮುಚ್ಚಿಟ್ಟು ಅದಕ್ಕೆ ಕಸ್ತೂರಿಯ ಮೊಹರು ಮಾಡಲಾಗಿದೆ.

ಸೊಂಟ ಮತ್ತು ಟೊಂಕ ಪಟ್ಟಿಯ ಪ್ರಶಂಸೆ

ಮತ್ಯಾರಿಗೋ ಎದೆ ಮಧ್ಯ ಭಾಗ ಚಂದವಿದ್ದರೆ, ಎಲ್ಲೂ ಸಹ ಮಧ್ಯದಲ್ಲಿ ಸೊಂಟದ ಗುರುತೇ ಕಾಣಿಸುವುದಿಲ್ಲ. ಅಥವಾ ಆ ಸೊಂಟದ ಮೇಲೆ ಜರಿಯಟೊಂಕ ಪಟ್ಟಿಯೇ ಇಲ್ಲದಂತಿದೆ. ಒಂದು ಕೂದಲಿಗೆ ಚೂರು ಚೂರು ಸುತ್ತಿಕೊಂಡಿದೆ.

ಕಾಲಿನ ಮೀನುಖಂಡ ಮತ್ತು ನಡಿಯುವಿಕೆಯ ಪ್ರಶಂಸೆ

ಮತ್ಯಾರೋ ದಪ್ಪ ತೊಡೆಯುಳ್ಳವಳು ಬಂದು ನಿಂತಿರುವಳು. ಮರೆಯಲ್ಲಿ ಆನೆಯ ತಲೆ ಮೇಲಿನ ಕುಂಭಸ್ಥಳ ಎರಡು ಕಡೆ ಜಾಗದಲ್ಲಿದ್ದ ಇದ್ದಹಾಗೆ. ಅಥವಾ ಬಾಳೆ ಮರದ ಬೊಡ್ಡೆ/ಬೇರು ತಳತಳಕವಾಗಿ ಎತ್ತಿ ತಂದಿದ್ದಾಳೆ. ಅದರ ಮೇಲೆ ಕಮಲದ ಹೂಗಳನ್ನು ಇಟ್ಟ ಹಾಗೆ ಮನಮೆಚ್ಚುತ್ತದೆ.

ಕಾಲು ಮತ್ತು ಗೆಜ್ಜೆಯ ಶಬ್ದದ ಪ್ರಶಂಸೆ

ಮತ್ಯಾರೋ ಕಾಲಿಗೆ ಗೆಜ್ಜೆಗಳನ್ನು ಕಟ್ಟಿರುವ ರೂಪ ಹೀಗಿದೆ. ಕಾಲಿಡುತ್ತಿದ್ದ ಹಾಗೆ ಅವುಗಳ ನಾದ ಕೇಳತೊಡಗುತ್ತದೆ. ಅಥವಾ ದುಂಬಿಗಳ ಹಾರವನ್ನೇ ಕಟ್ಟಿರುವ ಹಾಗೆ ಕಮಲದಂತಹ ಕಾಲು ಹೇಗೆ ತಿರುಗುತ್ತದೆಯೋ ಹಾಗೇ ಶಬ್ದವೂ ಕೇಳಿ ಬರುತ್ತದೆ.

ನರ್ತಕಿಯರ ನೃತ್ಯದಿಂದ ಭೂಮಿಯಲ್ಲ ಸುಗಂಧಭರಿತವಾದ ಪ್ರಶಂಸೆ

ಮತ್ಯಾರೋ ಚಂದನ, ಮತ್ಯಾರೋ ಕಸ್ತೂರಿಯನ್ನು ಹಚ್ಚಿ, ಮತ್ಯಾರೋ ಪನ್ನಂಬರ, ಮತ್ಯಾರೋ ವಿಶೇಷವಾಗಿ ಕೇಸರಿ, ಮತ್ಯಾರೋ ಎಣ್ಣೆ ಅಥವಾ ಸುಗಂಧ ಮರಿಮಳ ಪರಿಪೂರ್ಣವಾಗಿ ಹಚ್ಚಿದ್ದರಿಂದ ಪ್ರಪಂಚದಲ್ಲೆಲ್ಲ ಸುಗಂಧಭರಿತ ಗಾಳಿಯಾಡುತ್ತಿದೆ. ಮತ್ಯಾರೋ ಹೂವುಗಳನ್ನೇ ಆಭರಣವಾಗಿ ತೊಟ್ಟುಕೊಂಡು ಶೃಂಗರಿಸಿಕೊಂಡಿದ್ದಾರೆ. ಇದರಿಂದಾಗಿ ವೇದಿಕೆ ಎಲ್ಲ ಸುಗಂಧ ತುಂಬಿದಂತಾಗಿದೆ. ಈ ರೀತಿಯಾಗಿ ವಿವಿಧ ಆಭರಣಗಳನ್ನು ತೊಟ್ಟು ನಿಂತಿದ್ದಾರೆ. ಪ್ರತಿಯೊಂದು ಚಂದ್ರನ ಗುಂಪು ತಮ್ಮ ನಕ್ಷತ್ರಗಳ ಜೊತೆಯಲ್ಲಿವೆ. ಅಥವಾ ಬಾದಶಾಹರು ಬಂದು ಸೂರ್ಯ ಮತ್ತು ಚಂದ್ರರ ಸೈನ್ಯ ಸೇರಿಸಿ ಬಂದು ವೇದಿಕೆ ಮೇಲೆ ಕುಳಿತುಕೊಂಡು ಅಲಂಕರಿಸಿದರು. ಜೊತೆ ಜೊತೆಯಲ್ಲಿ ಸೇರಿ ಬಂದು ನರ್ತಿಸಿದರು. ಒಬ್ಬರಿಂದ ಒಬ್ಬರು ಉನ್ನತ ಮಟ್ಟದ ಒಳ್ಳೆ ಕಲಾವಿದರು. ಕೆಲವರು ಕೈಯಲ್ಲಿ ಕೋಲುಗಳನ್ನು ಹಿಡಿದು ರಾಸ್ ನೃತ್ಯ ಮಾಡುತ್ತ ಅಲಾಪಿಸಿದರು. ವಿಚಿತ್ರವಾದ ಚಂದ್ರಕೋಗಿಲೆ ಉಲಿದಂತೆ ಜೊತೆಗೂಡಿ ಕೂಗಿದರು. ಮತ್ತೊಬ್ಬ ತಂಬೂರಿ ಹಿಡಿದು ಸುರ್ ಕೊಡಲಾರಂಭಿಸಿದ. ಅದು ನಾಗರಹಾವಿನ ಹಾಗೆ ಹೆಡೆ ತೆಗೆದು ಭುಸ್ ಎಂದು ಶಬ್ದ ಮಾಡಿತು. ಮತ್ತೊಬ್ಬ ಎರಡು ಕೈಯಿಂದ ಚಪ್ಪಾಳೆ ಬಾರಿಸಿ ತಾಳ ಹಾಕಿದ. ವಿಚಿತ್ರವಾದ ಕಮಲದಲ್ಲಿ ಇಬ್ಬರು ಕುಣಿದಂತೆ ಬಂದರು. ಇದೇ ರೀತಿಯಾಗಿ ತಂತಿಯ ಮತ್ತು ಚರ್ಮದ ವಾದ್ಯಗಳೆಲ್ಲ ಭೇದ ತುಂಬಿದವು. ಲೋಹದ ವಾದ್ಯ ಮತ್ತು ಸುಶ್ರ(ಗಾಳಿ ತುಂಬಿದ ವಾದ್ಯ) ನಾಲ್ಕು ಸೇರಿ ತನ್ನ ಕಲೆ ತೋರಿತು. ಮಧ್ಯದಲ್ಲಿ ಯಾಮಿನಿ(ಮಿಂಚು) ಸಹ ತನ್ನ ಮರ್ಯಾದೆ ಉಳಿಸಿಕೊಂಡಿತು. ನಾಲಿಗೆಯಿಂದ ಅದರ ಉಪಮೆ ಹೇಳಲು ಸಾಧ್ಯವಿಲ್ಲ, ಅಥವಾ ಯಾಮಿನಿಯಾಗಲಿ ಮೋಡವೇ ಆಗಲಿ ತೋರಲಿಲ್ಲ. ಬಾದಶಾಹನ ಮರೆ ಹಿಡಿದು ಚಂದ್ರ ಬಂದಿತು. ಇದ್ದಕ್ಕಿದ್ದಹಾಗೆ ಓಡಿಬಂದು ಹೊರಬಿದ್ದು ಮಿಂಚಿನ ಬೆಳಕು ಗಗನವೇ ಹಡೆದಂತೆ ಮಿಂಚಿ ವೇದಿಕೆಯ ಮೈದಾನದಲ್ಲಿ ಬಂದು ನಿಂತವು. ನಕ್ಷತ್ರಗಳೆಲ್ಲ ಹೂವು ಹಿಡಿದು ಮಧ್ಯದಲ್ಲಿ ಬೊಗಸೆಯಂತೆ ಕೈಯಲ್ಲಿ ಧರಿಸಿದ ಆ ಹೂಗಳು ಪ್ರಶಂಸೆ ದ್ವಿಪದಿ ಹಾಡಿದವು. ಕಮಲದ ಮನೆ ಮೇಲೆ ಮಿಂಚುಹುಳುಗಳು ಗುಂಪು ಕಟ್ಟಿ ಹಾರುವ ಹಾಗೆ ಮೂರು ಸ್ಥಾನಗಳಿಂದ ಎಲ್ಲ ರೀತಿಯ ಅಲಾಪ(ಸ್ವರ ಸಂಯೋಜಸಿ ಹಾಡುವುದು)ಏರಿದವು. ಎದೆ ಮತ್ತು ಹೊಕ್ಕಳು ಸೇರಿಸಿ ಒಂದು ಸ್ವರ ಹೊರಡಿಸಿದ. ಅಲ್ಲಿಂದಲೂ ಸಂಗೀತದ ಏಳು ಸ್ವರಗಳು ಕೇಳಿ ಬಂದವು. ಇಪ್ಪತ್ತೆರಡು ಸ್ವರತಿಗಳ ಸಂಘವನ್ನು ಜೋಡಿಸಿ ಒಂದೊಂದಾಗಿ ಸ್ವರ ಸಂಯೋಜನೆ ರಾಗ ತೋರಿದರು. ಮುವತ್ತಾರು ರಾಗಿಣಿಗಳು ಆರು ರಾಗದಿಂದ ಕೂಡಿಸಿ ಹೀಗೆ ರಾಗ ಮತ್ತು ರಾಗಿಣಿಗಳನ್ನು ಹೇಳುತ್ತ ಕೂಡಿಸಿ ಮೊದಲು ರಾಗದ ಹೆಸರು ಹೇಳಿ ಮತ್ತು ಅದರ ಲಯ ತೋರುತ್ತದೆ. ಕಾಲ ಮತ್ತು ಲಯದ ಭೇದವನ್ನು ಬಿಚ್ಚಿ ಇಟ್ಟು ದೊರತ್, ಲಘು, ಗುರು, ಪಲತ್ ಎಲ್ಲವನ್ನು ಒಂದೇ ಮಾಡಿ ಗುರೂಜಿಯೂ ಸಹ ಬಂಗಾಲಿ ಭಾವ(ನೃತ್ಯದ ಒಂದು ಶೈಲಿ) ತೋರಿದರು. ಈ

ರೀತಿಯಾಗಿ ಅನೇಕ ರೀತಿಯ ನೃತ್ಯಗಳನ್ನು ಪ್ರತಿಯೊಬ್ಬರು ತೋರಿದರು. ತಾಲ ಮಂಡಲ(ಒಂದು ರೀತಿ ವಾದ್ಯ) ಸೇರಿಸಿ ಒಂದು ಕಲೆ ಹಿಡಿದು, ಅದು ಹೇಗೆ ಸಮತೂಕವಾಯಿತೆಂದರೆ, ಅದರಲ್ಲಿ ಯಾವ ರೀತಿಯ ಅಡ್ಡಿ ಉಂಟಾಗಲಿಲ್ಲ. ಅದರಲ್ಲಿ ಬರಸ(ಸಂಗೀತದ ಪಾರಿಭಾಷಕ) ಮತ್ತು ನಿಯಮ ಎರಡು ತೋರಿದವು. ಅಂಗ, ಕರ್ಪ್ವೇ(ಸಂಗೀತದ ಒಂದು ಪಾರಿಭಾಷೆ) ಇವು ಎರಡರ ಬಗ್ಗೆ ಜ್ಞಾನ ನೀಡಿದರು ಸ್ವರ ಭೇದಗಳ ಅರವತ್ತನಾಲ್ಕು ಯಾವ ಹಸ್ತಕದ ಛಂದವಿದೆಯೋ ಏಳು ಗತ್ತುಗಳನ್ನು ತೋರಿಸಿ ಅದರ ಕಮೂಚಿತವೂ? ಸಹ ಹೇಗೆಂದು ತೋರಿದರು. ಈ ರೀತಿಯಾಗಿ ಅನೇಕ ಕಷ್ಟಗಳೆಲ್ಲ ಬಹಳ ದೂರದವರೆಗೆ ಸಹಿಸಿದರು. ಹೀಗೆ ರಂಭೆಯೂ ಸಹ ಇಂದ್ರನ ಜೊತೆ ಕಷ್ಟಸಹಿಸಿರಲಿಲ್ಲ. ಕಭ್ ಸೀರೆ ಉಟ್ಟು ತರಪ ಹಾಕಿ ಬಂದರೆ ಮಿಂಚಿನ ಬೆಳಕಿನ ರೀತಿಯಲ್ಲಿ ಬೆಳಕನ್ನು ಚಲ್ಲುತ್ತಿದ್ದರು. ಯಾರೂ ಸಹ ಈ ರೀತಿ ಸುತ್ತು ಹಾಕಲು ಸಾಧ್ಯವಿಲ್ಲ. ಇದನ್ನು ನೋಡಿ ಇಂದ್ರ ಸಭೆಯವರೆಲ್ಲ ಸೋತು ಹೋದರು. ಇಂದ್ರ ಮತ್ತು ಬಾದಶಾಹನನ್ನು ಹೇಗೆ ಸಮ ಮಾಡಲು ಸಾಧ್ಯ? ರತ್ನ ಮತ್ತು ಗಾಜಿನಪಟಕ ಎರಡನ್ನೂ ಸಹ ಹೇಗೆ ಸರಿಸಮ ಮಾಡುವುದು? ಇಂದ್ರ ಎಲ್ಲೋ ಅಡಗಿ ಕೊಂಡಿದ್ದಾನೆಂದು ಕಾಣುತ್ತದೆ. ಏಕೆಂದರೆ ಬಾದಶಾಹನು ಜಗತ್ತಿಗೆ ನ್ಯಾಯ ದೊರಕಿಸುವವನಾಗಿ ಪ್ರಕಟಿಸಿದ್ದಾನೆ. ಇಂದ್ರನೇನೊ ಸ್ವರ್ಗದ ಬಾದಶಾಹನಾಗಿದ್ದಾನೆ. ಆದರೆ ಬಾದಶಾಹ ಕೂಲಂಕುಶವಾಗಿ ಭೂಮಿ ಮೇಲೆ ರಾಜ್ಯ ಮಾಡುತ್ತಿದ್ದಾನೆ. ಇಂದ್ರನ ಬಳಿ ಒಂದು ಆನೆಯಷ್ಟು ಪ್ರೀತಿ ಇದ್ದರೆ ಬಾದಶಾಹನ ದರ್ಬಾರಿನಲ್ಲಿ ಅಂತಹದು ಸಾವಿರಾರು ಇವೆ. ಜನ ಹೇಳುತ್ತಾರೆ. ಇಂದ್ರನಿಗೆ ಸಾವಿರಾರು ಕಣ್ಣುಗಳಿವೆ ಎಂದು. ಆದರೆ ಬಾದಶಾಹನಿಗೆ ಎಷ್ಟು ಕಣ್ಣುಗಳಿವೆಂದರೆ ಅವನ್ನು ಎಣಿಸಲೂ ಸಾಧ್ಯವಿಲ್ಲ. ಇಂದ್ರನೇನೊ ಒಂದು ಅಮರಾವತಿಯಲ್ಲಿ ಇರುತ್ತಾನೆ. ಬಿದ್ಯಾಪುರದಲ್ಲಿ ಅಂತಹದು ಅರವತ್ತೈದು ಸಾವಿರ ಇವೆ. ಇಂದ್ರ ಇರುವುದು ಒಂದೇ ಒಂದು ಚಿನ್ನದ ಬೆಟ್ಟದ ಮೇಲೆ. ಬಾದಶಾಹನ ನೌರಸ್ ಮಹಲಿನಲ್ಲಿ ರತ್ನಗಳ ರಾಶಿಗಳೇ ಅಲಂಕರಿಸಿವೆ. ಇಂದ್ರನ ಬಳಿ ಇಬ್ಬರು ಗಾಯಕಿಯರು. ನಾರದ್ ಮುನಿಯ ವಾದ್ಯವಿದೆ. ಬಾದಶಾಹನ ಬಳಿ ಅಂತಹ ಗಾಯಕಿಯರು ಒಂಬತ್ತು ಸಾವಿರ ಇದ್ದಾರೆ. ಇಂದ್ರನ ಬಳಿ ಒಬ್ಬಳು ಸುಪ್ರಸಿದ್ಧ ನರ್ತಕಿ ರಂಭೆ ಇದ್ದಾಳೆ. ಅಂತಹ ಲಕ್ಷಾಂತರ ನರ್ತಕಿಯರು ಬಾದಶಾಹನ ದ್ವಾರದ ಮುಂದೆ ನರ್ತಿಸುತ್ತಾರೆ. ಹೀಗೆ ಇಂದ್ರ ಮತ್ತು ಬಾದಶಾಹರಿಗೆ ಹೇಗೆ ಸಮ ಸಮ ಮಾಡಲಿ? ಗಗನ ಮತ್ತು ಪೃಥ್ವಿಗೆ ಹೇಗೆ ಸೇರಿಸಲಿ? ಇದೇ ರೀತಿಯಾಗಿ ಎಲ್ಲ ಆತಿಥ್ಯದ ಉತ್ಸವ ಜರುಗಿತು. ಸಭೆ ಹೇಗೆ ಜರುಗಿತೆಂದು ಹೇಳಲು ನನ್ನ ನಾಲಿಗೆಗೆ ಸಾಧ್ಯವಿಲ್ಲ. ಬಾದಶಾಹನು ತನ್ನ ಉತ್ಸವಕ್ಕೆ ಒಂದು ಕ್ಷಣದಲ್ಲಿ ಖರ್ಚು ಮಾಡುವ ಹಣವು, ಇತರೆ ರಾಜರೆಲ್ಲ ತಮ್ಮ ಜೀವನವೆಲ್ಲ ಅಷ್ಟು ಖರ್ಚು ಮಾಡುತ್ತಾರೆ. ಸದಾ ಕಾಲ ನೀನು ಹೀಗೆ ನಿನ್ನ ಹುಟ್ಟು ಹಬ್ಬವನ್ನು ಆಚರಿಸು. ಪ್ರತಿ ವರ್ಷದ ಪ್ರತಿ ಮಾಸ ಹೀಗೆ ಎಣಿಸಲಾಗುವುದು. ನಿಮಿಷ ತಿಂಗಳ ಹಾಗೆ ವರ್ಷ ಕ್ಷಣದಂತಾಗಲಿ. ಅರವತ್ತು ಕ್ಷಣಗಳು ಸೇರಿ ಒಂದೇ

ಒಂದು ಎಂದು ಎಣಿಸಿ ದಿನಗಳು ಅರವತ್ತು ಹಗಲು ರಾತ್ರಿ ಎಂದು ನಿಂತಿವೆ. ಐವತ್ತು ನೂರು ವರ್ಷ ಬಾದಶಾಹ ನೀನು ಹೀಗೆ ರಾಜ್ಯವನ್ನು ಆಳು.

ಇಬ್ರಾಹೀಮ್ ನಾಮಾ ಪುಸ್ತಕದ ಮುಕ್ತಾಯದ ದಿನಾಂಕಗಳ ಸನ್ ಶಹೂರ್ ೧೦೧೨
(ದ್ವಿಪದಿ ೬೮೭ ರಿಂದ ೭೧೩ ವರೆಗೆ)

ಓ ಅಬ್ದುಲ್! ನೀನು ಬಾದಶಾಹನ ಎಷ್ಟೊಂದು ಗುಣಗಾನ ಮಾಡುವೆ? ಅದು ಇಡೀ ಭೂಮಿ ಆಕಾಶದಲ್ಲಿ ತುಂಬಿ ತುಳುಕಾಡುತ್ತಿದೆ. ಬಾದಶಾಹನ ಗುಣಗಾನ ಬಿಳಿ ಬಣ್ಣದ ಹಾಗೆ. ಅದು ತ್ರಿಲೋಕವೆಲ್ಲ ಹರಡಿಕೊಂಡಿದೆ. ಅದು ಆಕಾಶವೆಲ್ಲ ತುಂಬಿ ಮೇಘ ಧಾರೆಯಾಗಿ ತೊಟ್ಟಿಕ್ಕುತ್ತಿದೆ. ಅದು ನದಿಯಲ್ಲಿ ಕಪ್ಪೆಚಿಪ್ಪಿನ ಸುಳಿಯಲ್ಲಿ ಬಿದ್ದು, ನನ್ನ ಹಾಗೆ ಮುತ್ತಿನ ರೂಪ ಧರಿಸಿ ಬಿಳಿಯಾಗಿದೆ. ಸಮುದ್ರವು ಹಾಲಿನಂತಹ ಬಿಳುಪು ಬಣ್ಣದ ಹಾಗೆ, ಅದೇ ರೂಪದ ಸುಪ್ರಸಿದ್ಧತೆ ಎಲ್ಲ ಕಡೆ ಹರಡಿ ವಾಸುಕಿಯ ಬಿಳಿ ಬಣ್ಣ ಕರ್ರನೆ ಆಯಿತು. ಪೃಥ್ವಿಯ ರೂಪವೆಲ್ಲ ಅದೇ ಗುಣಗಳನ್ನು ಸೇರಿ ತುಂಬಿದೆ. ಮೊಗ್ಗುಗಳು ಹೂಗಳೆಲ್ಲ ಬಿಳಿಯಾಗಿರುವುದು. ಅದರ ನೆರಳು ಬಿದ್ದು, ಬಾದಶಾಹನ ಗುಣಗಳ ಇಂತಹ ಕಥೆ ಎಲ್ಲಾದರೂ ಕೇಳಿದ್ದಿರಾ ? ಹೇಳಿದರೆ ಅದು ಹೃದಯದ ಮೇಲೆ ತನ್ನ ಗುರುತನ್ನು ಬಿಡುತ್ತದೆ. ಇದನ್ನು ಮನಸ್ಸು ಕೇಳಿ ಇರಲಾರದೇ ವಿವೇಕಕ್ಕೆ ಕರೆದು ಹೇಳಿದ. ನೀನು ಬೇಗನೆ ಆ ಬಾದಶಾಹನ್ನು ನನಗೆ ಭೇಟಿಮಾಡಿಸು ಎಂದ. ವಿವೇಕ ಹೇಳಿತು, ಮನಸ್ಸೇ ನೀನು ತಾಳ್ಮೆಯಿಂದ ಇರು. ನನಗೆ ನಾಲಿಗೆ ಎಂಬ ಹೆಸರಿನವನು ಒಬ್ಬ ಮಿತ್ರ ಇರುವನು. ನಾಲಿಗೆಯೇ ವಿವೇಕದ ಖಜಾನೆಯ ಚಾವಿ ಎಂದು ತಿಳಿ. ರತ್ನದಂತಹ ಮಾತುಗಳಿಗೆ ಗುಣದೋಷ ಪರೀಕ್ಷಕ ಎಂತೆ ಕಿವಿ ಹೇಳದೇ ಇದ್ದಿದ್ದರೆ ಯಾರೂ ತಿಳಿಯಲು ಸಾಧ್ಯವಿಲ್ಲ. ಕೇಳದೇ ಇದ್ದಿದರೆ ಯಾವ ಮಾತೂ ಸಹ ತಿಳಿಯಲು ಸಾಧ್ಯವಿಲ್ಲ. ಹನ್ನೆರಡು ಬಾಣದ ಚಿನ್ನ ನಿರ್ಮಲ ಅಪರಂಜಿ ಅಂತೆ. ಆದರೆ ಅದನ್ನು ಪರೀಕ್ಷಿಸದಿದ್ದರೆ ಯಾರೂ ತೆಗೆದುಕೊಳ್ಳವುದಿಲ್ಲ. ಅಗ್ನಿ ಇಲ್ಲದೆ ಧೂಪದ ಸುವಾಸನೆ ಬರಲು ಸಾಧ್ಯವಿಲ್ಲ. ಏಟು ಬೀಳದಿದ್ದರೆ ಘಂಟೆ ಬಾರಿಸುವುದಿಲ್ಲ. ಈ ರೀತಿಯಾಗಿ ಬುದ್ಧಿ ಮತ್ತು ವಿವೇಕ ಸೇರಿ ಚಿಂತನೆ ನಡೆಸಿದವು. ಮಾತನಾಡದಿದ್ದರೆ ಹತ್ತು ಗುರುತುಗಳು ಕಾಣಿಸುವುದಿಲ್ಲ. ಬುದ್ಧಿ ಹೋಗಿ ನಾಲಿಗೆಯನ್ನು ಕರೆ ತಂದಿತು. ಮನಸ್ಸಿನ ಎಲ್ಲ ಮಾತುಗಳೆಲ್ಲ ಅದಕ್ಕೆ ತಿಳಿಸಿ ಬಾದಶಾಹನ ಗುಣಗಾನದ ಪ್ರಶಂಸೆ ಕಥೆ ಎಲ್ಲ ಬುದ್ಧಿಯು ನಾಲಿಗೆಯಿಂದ ಎಲ್ಲವನ್ನು ನಿರೂಪಿಸಿತು. ನಾಲಿಗೆಯು ಬಾದಶಾಹನ ಗುಣಗಾನವನ್ನು ಕಿವಿಕೊಟ್ಟು ಕೇಳಿ. ವಿವೇಕನೇ ನನ್ನ ಮಾತೆಲ್ಲ ಮಾಡುವನು ನಾನು ಮಾತನಾಡುತ್ತೇನೆ. ಮಾತು ನನ್ನಲ್ಲಿರುವುದು ಒಂದು ಹನಿ. ಆದರೆ ಶಾಹನ ಬಳಿ ಸಮುದ್ರವೇ ಇದೆ. ಆ ಹನಿ ಸಮುದ್ರದಲ್ಲಿ ಬಿದ್ದರೆ ಎಲ್ಲಿ ಹೋಯಿತೆಂದು ಯಾರೂ ನೋಡಲಾರರು. ಬಾದಶಾಹನ ಗುಣಗಾನ ಬೆಟ್ಟದ ಹಾಗೆ ಎತ್ತರವಾಗಿದೆ. ನನ್ನ ಮಾತು ಇರುವೆಯ ಹಾಗೆ ಅದು ಬೆಟ್ಟ ಹತ್ತಲು ಸಾಧ್ಯವೇ? ಆದರೂ ಸಹ ಇರುವೆಗೆ ಇದು ಇಷ್ಟವಾಗಿ ಬಾದಶಹನ ಗುಣಗಾನದ ಪರ್ವತದ ಬಳಿ

ಹೋಗುತ್ತದೆ. ಬಾದಶಾಹನ ಗುಣವು ರತ್ನದ ಸಮಾನವಿದೆ. ಹರಳು ಅದರ ಬಳಿ ಬಂದು ತನ್ನನೆ ಬಂದಹಾಗೆ ಮಾಡಿಕೊಂಡಿತು. ಹೀಗೆ ಮಧ್ಯದಲ್ಲಿ ಬಂದು ನವ ರತ್ನಗಳು ಖಚಿತ ಕುಳಿತವು. ಪಚ್ಚೆ ಮಾಣಿಕ್ಯದಿಂದ ಅಧಿಕ ಬೆಲೆ ಬಾಳುವಂತಹದು. ಈ ರೀತಿಯಾಗಿ ಶಾಹನ ಗುಣಗಳೆಲ್ಲ ನನ್ನ ಮಾತು ದ್ವಿಪದಿಗಳಲ್ಲಿ ಸೇರಿವೆ. ಜಗತ್ತಿನಲ್ಲಿ ಸುಗಂಧ ಮತ್ತು ಹೂವು ಹೇಗೆ ಸೇರಿಕೊಂಡಿದೆಯೋ ಹಾಗೆ ಈ ಹೂವುಗಳು ಬಾಡಿಹೋಗಿ ಕೊಳೆತು ಹೋಗುವುದು ಬೇಡ. ಪ್ರಪಂಚದ ಉದ್ಯಾನವನದಲ್ಲಿ ಸದಾ ಸುಗಂಧ ಭರಿತವಿರಲಿ. ಮಾತಿನ ಹೂವುಗಳನ್ನು ಕಟ್ಟಿ ಇಬ್ರಾಹೀಮ್ ನಾಮಾ ಸಾವಿರದ ಮೇಲೆ ಹನ್ನೆರಡು ವರ್ಷದಲ್ಲಿ ನಾನು ಇದನ್ನು ಮುಗಿಸಿದೆ. ಓ ದೇವರೇ ನೀನು ಅಬ್ದುಲ್‌ನ ಈ ದ್ವಿಪದಿಗಳನ್ನು ಹೂವು ಮಾಡು. ದುಂಬಿ ಮಹಾತ್ಮರ ಹೃದಯ ಮೆಚ್ಚುವ ಹಾಗೆ ಮಾಡು.

■

ಅಡಿಟಿಪ್ಪಣಿಗಳು :

೧. (ಈ ದ್ವಿಪದಿ "ಸ" ಎಂಬ ಕೃತಿಯಲ್ಲಿ ಇಲ್ಲ. "ಅ" ಕೃತಿಯಲ್ಲಿಯೂ ಸಹ ಕೇವಲ ಮೊದಲನೆ ಪಂಕ್ತಿ ಇದೆ)

೨* ಭಾವರ್ಥ: ಅರಳಿದಹೂವಿನ ಕಾಲವಕಾಶ ಕೇವಲ ಸೊಲ್ಪ ಸಮಯದು ಅಂದರೆ ಅವನ ಆಸ್ಥಾನ ವೃದ್ಧಕವಿಗಳು ಅರಳಿದ ಹೂವುಗಳಿದ್ದಹಾಗೆ ಅವರಿಂದ ಬಾದಶಾಹನು ದುಂಬಿಯಹಾಗೆ ಮಾತಿನ ರಸಹೀರಿ ಅರಳಿರುವ ಮೊಗ್ಗು ಅಂದರೆ ಹೊಸಕವಿಗಳಿಗೆ ಮಾರ್ಗದರ್ಶನ ನೀಡುತ್ತಿದ್ದಾನೆ.

೩. (೧. ಬಾಸೂಕ= ಹಿಂದು ದೇವಮಾಲೆಯಂತೆ ಎಂಟು ನಾಗರಹಾವುಗಳಲ್ಲಿ ಎರಡನೆಯ ನಾಗರಹಾವಿನ ಹೆಡೆಯ ಮೇಲೆ ಪೃಥ್ವಿ ನಿಂತಿದೆ. ೨. ಕುಂಡಲ ಘಾಲ್ನಾ,ಹೊಡೆಯುವುದು= ವೃತ್ತಾಂತವೆಂದರೆ ಹಾವಿಗೆ ಕಿವಿಇರುವುದಿಲ್ಲ,ಅದು ಕಣ್ಣುಗಳಿಂದಲೇ ಕೇಳಿಸಿಕೊಳ್ಳುತ್ತದೆ, ಆದ್ದರಿಂದ ಅಬ್ದುಲ್ "ಭುಪಾ ಕಾನ್ ಆಂಖಿಯೋಁ ಮೆ" ಎಂದು ಬಳೆಸಿದ್ದಾನೆ)

೪. (ಮೇಲಿನ ಪಂಕ್ತಿಗಳಲ್ಲಿ ಕುದುರೆಗಳ ಅನೇಕ ಜಾತಿಗಳ ಬಗ್ಗೆ ಹೇಳಿರುವನು ಉದಾಹರಣೆ ಬೋರ್, ಕಮಿತ್, ಗರ್ಜೆ, ಕರನ್ಸಕ್, ನಖ಼ರೆ, ಫ಼ರ್ದೆ, ಹಾಂಸ್ಲಿ, ಅಬ್ಲಖ಼, ಮನ್ಸಕಿ, ದಿನಾರೆ, ಕಬೂತ್,ಮಷ್ಕಿ, ಎಫ಼ಝ಼್, ಲಾಸಾಯಿ= ಲಾಸ ಟಿಬೆಟಿನ ರಾಜಧಾನಿ, ಇಲ್ಲಿ ಬೆಟ್ಟದ ಕುದುರೆ, ಅರಬಿ, ಕಛ್ (ಗುಜ್ರಾತ್) ಪ್ರಾಂತ್ಯ ದ ಸುಪ್ರಸಿದ್ಧ ಕುದುರೆಗಳು.

೫. (ದ್ವಿಪದಿ ೪೭೬, ದ್ವಿಪದಿ ೩೭೫ ರಲ್ಲಿ ಇದ್ದಹಾಗೆಯೇ ಇಲ್ಲಿಯೂ ಸ್ವಲ್ಪ ಬದಲಾವಣೆ ಮಾಡಿ ಬಳಸಲಾಗಿದೆ, ಅದು ಈ ಕೆಳಕಂಡಂತೆ ಇದೆ)

[ಜಿಧಾ ಥೀಁ ಖ಼ುದಾ ನೆ ಹಮನ್ ಕೊ ನಪಾವೊ (೩೭೫) ಭಗವಂತ ನಮ್ಮನು ಶೃಷ್ಟಿಸಿದ ದಿನದಿಂದಲೂ ನ ಯು ಬಾಸ್ ಖ಼ುಷ್ಬು ಕಧೀಁ ಯೂಁ ದಿಖಾವೊ ಈ ರೀತಿಯ ಪರಿಮಳ ನಮಗೆಲ್ಲೂ ನೋಡಲೂ ಸಿಗಲಿಲ್ಲ]

೬. ಇಲ್ಲಿಂದ ಕವಿ ಶಾಹಿ ಮರದ ವಿಶೇಷ ಉಪಮೆಯನ್ನು ಬಳೆಸಿದ್ದಾನೆ, ಆ ಮರದ ಹೂವು ಹಣ್ಣು, ಮತ್ತು ಅದರ ನೆರಳಲ್ಲಿ ಆಸರೆ ಪಡೆದಿರುವ ಹಕ್ಕಿಗಳ ವಿವರಣೆ ನೀಡುತ್ತಿದ್ದಾನೆ)

ಮೀರ ಅಹ್ಮದ ಅಲಿಖಾನ
ವಿರಚಿತ

ಗುಲದಸ್ತಾಯೆ ಬಿಜಾಪುರ

[ಬಿಜಾಪುರ ಪುಷ್ಪಗುಚ್ಛ]

ಅನುವಾದಕರು
ಡಾ. ಕೃಷ್ಣ ಕೊಲ್ಹಾರಕುಲಕರ್ಣಿ
ಮೌಲಾನಾ ಮೆಹಬೂಬುರ್ ರೆಹಮಾನ ಮದನಿ

*

ನಿರ್ದೇಶಕರ ಮಾತು

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ಗುಲದಸ್ತಾಯೆ ಬಿಜಾಪುರ ಪುಸ್ತಕವನ್ನು ಬರೆದವನು, ಹೈದರಾಬಾದ ನಿವಾಸಿ ಖ್ವಾಜಾ ಮೀರ ಅಹ್ಮದ ಅಲೀಖಾನ ಎಂಬವನು.

ಚಿಕ್ಕದಾದ ಪುಸ್ತಕದಲ್ಲಿ ಬಿಜಾಪುರದ ಎಲ್ಲ ಬಾದಶಹರುಗಳ ಬಗ್ಗೆ ಬರೆದಿದ್ದಾನೆ. ಖ್ವಾಜಾ ಮೀರ ಅಹ್ಮದ ಅಲಿಖಾನನ ಬಗ್ಗೆ ಅಧಿಕವಾಗಿ ತಿಳಿಯುವುದಿಲ್ಲ. ಅವನು ಮೊದಲು ಇದನ್ನು ಪರ್ಶಿಯನ್ನದಲ್ಲಿ ಬರೆದೆ ಎಂದು ಹೇಳಿಕೊಂಡಿದ್ದಾನೆ, ಆದರೆ ಪರ್ಶಿಯನ್ ಹಸ್ತಪ್ರತಿ ದೊರೆತಿಲ್ಲ. ದಖಣಿ ಉರ್ದುವಿನಲ್ಲಿ ಬರೆದ ಹಸ್ತಪ್ರತಿಯು ಆಂಧ್ರಪ್ರದೇಶ ಆರ್ಕೀವ್ಸದಿಂದ ದೊರೆಯಿತು.

'ಗುಲದಸ್ತಾಯೆ ಬಿಜಾಪುರ' ಪುಸ್ತಕವನ್ನು ಓದುತ್ತ ಹೋಗುತ್ತಿದ್ದ ಹಾಗೆ ತಿಳಿಯುವ ಒಂದು ಅಂಶವೆಂದರೆ, ಈ ಪುಸ್ತಕ ರಚನೆಯ ಹೊತ್ತಿಗೆ ಜುಬೇರಿಯ 'ಬಸಾತೀನೆ ಸಲಾತೀನ' ಬರೆದಾಗಿತ್ತು. ಅದರ ಹಸ್ತಪ್ರತಿ ದಿಲೇರಜಂಗನಿಗೆ ದೊರೆತಿರಬೇಕು. ಅದು ಮತ್ತು 'ತಾರೀಖ-ಇ-ಫರಿಶ್ತಾ' ಇವುಗಳ ಆಧಾರದಿಂದ ಸಂಕ್ಷಿಪ್ತವಾಗಿ ಇಲ್ಲಿ ಬರೆದಿದ್ದಾನೆ ಎಂದು ಹೇಳಬಹುದು. ಆದರೂ ಕೆಲವು ಹೊಸ ವಿಷಯಗಳೂ 'ಗುಲದಸ್ತಾಯೆ ಬಿಜಾಪುರ'ದಲ್ಲಿ ಬಂದಿವೆ.

ಆದಿಲಶಾಹೀ ರಾಜ್ಯವನ್ನು ಸ್ಥಾಪಿಸಿದ ಯೂಸುಫಖಾನನ ಮಗ ಇಸ್ಮಾಯಿಲನಿಗೆ ನಾಲ್ಕು ಜನ ಗಂಡು ಮಕ್ಕಳು. ಇಸ್ಮಾಯಿಲನು ತೀರಿಕೊಂಡಾಗ ಆತನ ಇಚ್ಛೆಯಂತೆ, ಹಿರಿಯ ಮಗ ಮಲ್ಲೂಖಾನನನ್ನು ಪಟ್ಟಕ್ಕೆ ಕುಳ್ಳಿರಿಸಲಾಯಿತು. ಅವನ ದುರಾಡಳಿತದಿಂದ ಆರೆಂಟು ತಿಂಗಳಲ್ಲಿ ಅವನನ್ನು ಬದಿಗೆ ಸರಿಸಿ ಇನ್ನೊಬ್ಬ ಮಗ ಇಬ್ರಾಹೀಮನನ್ನು ಪಟ್ಟಕ್ಕೆ ತರಲಾಯಿತು, ಎಂದು ಈ ವರೆಗಿನ ಎಲ್ಲ ಚರಿತ್ರೆ ಗ್ರಂಥಗಳಲ್ಲಿ ಬಂದಿದೆ. ಆದರೆ 'ಗುಲದಸ್ತಾಯೆ ಬಿಜಾಪುರ' ಕೊಡುವ ಚಿತ್ರಣವೇ ಬೇರೆಯಾಗಿದೆ.

'ಬಿಜಾಪುರದಲ್ಲಿ ಜಮಾಲಖಾನನೆಂಬ ಒಬ್ಬ ಹವಾಲದಾರನು ಇದ್ದನು. ಅವನು ಫತೇಖಾನನ ಮಗನಾಗಿದ್ದನು. ಈ ಫತೇಖಾನನನ್ನು ಜನರು ಮುನ್ನಾಖಾನನೆಂದು ಕರೆಯುತ್ತಿದ್ದರು. ಈತನನ್ನು ಯೂಸುಫ ಆದಿಲಶಹನು ತನ್ನ ದತ್ತಕ ಮಗನನ್ನಾಗಿ ಮಾಡಿ ಕೊಂಡಿದ್ದನು. ಅವನಿಗ ಇನ್ನೊಬ್ಬ ಮಗನಿದ್ದನು ಅವನ ಹೆಸರು ಅಲೀಖಾನ ಎಂದಾಗಿತ್ತು. ಜನರು ಅವನನ್ನು ಉಲ್ಲೂಖಾನ, ಮಲ್ಲೂಖಾನ ಎಂದು ಕರೆಯುತ್ತಿದ್ದರು.

[ಗೋಗಿಯಲ್ಲಿ ಇಬ್ರಾಹಿಮನ ಪಟ್ಟಾಭಿಷೇಕ ಆದಾಗ] ಇತ್ತ ಬಿಜಾಪುರದಲ್ಲಿ ಜಮಾಲಖಾನನು ತನ್ನ ಮಗ ಮಲ್ಲೂಖಾನನನ್ನು ಬಿಜಾಪುರದ ಸಿಂಹಾಸನದ ಮೇಲೆ ಕುಳ್ಳಿರಿಸಿದ್ದನು.' ಅದನ್ನು ತಿಳಿದುಕೊಂಡ ಅಸದಖಾನನು ಮಲ್ಲೂನನ್ನು ಕೊಂದು ಇಬ್ರಾಹಿಮನನ್ನು ಪಟ್ಟಕ್ಕೆ ಕುಳ್ಳಿರಿಸುತ್ತಾನೆ. ಇದು ಹೊಸ ವಿಷಯ. ಇದಕ್ಕೆ ಆಧಾರವನ್ನು ಕೊಟ್ಟಿಲ್ಲ. ಹೀಗೆ ಇನ್ನು ಕೆಲವು ಕಡೆಗೆ ಹೊಸ ವಿಷಯಗಳು ಬಂದಿವೆ. ಬರವಣಿಗೆ ಸರಳ ಮತ್ತು ಸುಲಭವಾಗಿದೆ. ಓದಿಸಿಕೊಂಡು ಹೋಗುತ್ತದೆ.

ದಖಣೀ ಭಾಷೆಯ 'ಗುಲದಸ್ತಾಯೆ ಬಿಜಾಪುರ', ಪುಸ್ತಕವನ್ನು ಕನ್ನಡಕ್ಕೆ ತರುವಲ್ಲಿ ಮೌಲಾನಾ ಮಹಿಬೂಬುರ್ ರಹಮಾನ ಮದನಿ ಅವರು ವಿಶೇಷ ಶ್ರಮ ವಹಿಸಿದ್ದಾರೆ. ಹಸ್ತ ಪ್ರತಿಯನ್ನು ಕೊಟ್ಟ ಆಂಧ್ರಪ್ರದೇಶ ಅರ್ಕೀವ್ಸ ಅಧಿಕಾರಿಗಳಿಗೆ ಮತ್ತು ಮೌಲಾನಾ ಮಹಿಬೂಬುರ್ ರಹಮಾನ ಮದನಿ ಅವರಿಗೆ ಸಮಿತಿಯು ಆಭಾರಿಯಾಗಿದೆ.

■

*

ಮೂಲ ಲೇಖಕನ ಆಶಯ

ಈ ಪುಸ್ತಕವನ್ನು ಬರೆಯಲು ಕಾರಣವೆಂದರೆ ಶಾಹನುರ ಶಹರದ ಆಡಳಿತಗಾರರಾಗಿದ್ದ ಗೌರವಾನ್ವಿತ ನವಾಬ ದಿಲೇರಖಾನ ಬಹಾದ್ದೂರ ದಿಲೇರಜಂಗ, [ಅವರ ಆತ್ಮಕ್ಕೆ ಶಾಂತಿ ಇರಲಿ] ಹಿಜರಿ ಶಕ ೧೨೭೭ (ಕ್ರಿ. ಶ. ೧೮೬೦)ರಲ್ಲಿ ದಾರುಲ್ ಜಫರ್ ಬಿಜಾಪುರಕ್ಕೆ ಹೋಗಿದ್ದರು. ಅಲ್ಲಿದ್ದ ಮಹಲುಗಳು, ಕಟ್ಟಡಗಳು ಗುಮ್ಮಟಗಳು ಮತ್ತು ಹಳೆಯ ಮನೆಗಳನ್ನು ನೋಡಿದರು. ಅಲ್ಲಿದ್ದ ಪ್ರಾಚೀನ ಬಾದಶಹರುಗಳ ಫೋಟೋಗಳನ್ನು ತೆಗೆದುಕೊಂಡು ಬಂದು ನನ್ನಂಥ ದಡ್ಡನಾದ ಖ್ವಾಜಾ ಮೀರ ಅಹ್ಮದ ಅಲೀಖಾನನಿಗೆ ಕೊಟ್ಟು, ಬಿಜಾಪುರದ ಎಲ್ಲ ಬಾದಶಹರುಗಳ ಬಗ್ಗೆ ಸವಿಸ್ತಾರವಾಗಿ ಬರೆದರೆ ಒಳ್ಳೆಯದಾಗುತ್ತದೆ ಎಂದು ಹೇಳಿದರು. ಆದ್ದರಿಂದ ಈ ದಡ್ಡನು ಅವರ ಆದೇಶದಂತೆ ಈ ಮೊದಲು ಹೇಳಿದ ವರುಷದಲ್ಲಿ ಪರ್ಶಿಯನ್ ಭಾಷೆಯಲ್ಲಿ ಬರೆದು ಅದಕ್ಕೆ ಗುಲದಸ್ತಾಯೆ ಬಿಜಾಪುರ ಎಂದು ಹೆಸರಿಟ್ಟು ಅವರಿಗೆ ನೀಡಿದ್ದೆ.

ಕೆಲವು ದಿನಗಳಲ್ಲಿ ದಿಲೇರಖಾನ ಬಹಾದ್ದುರ ಅವರು ದಿವಂಗತರಾದರು. ಅವರ ಮಗ ಅಬುಲ ಕಾಶೀಮ ಬಹಾದ್ದೂರ ಖಾನರು 'ನಾನು ಫಾರಸಿ ಭಾಷೆಯಲ್ಲಿ ಬರೆದ ಪುಸ್ತಕವು ಸಾಮಾನ್ಯ ಜನರಿಗೆ ಅರ್ಥವಾಗುವುದಿಲ್ಲ. ಆದ್ದರಿಂದ ಅದನ್ನು ದಖಣಿ ಉರ್ದು ಭಾಷೆಯಲ್ಲಿ ಬರೆದರೆ ಎಲ್ಲರಿಗೂ ಅರ್ಥವಾಗುತ್ತದೆ' ಎಂದು ಆದೇಶ ಮಾಡಿದರು. ಅವರ ಆದೇಶದಂತೆ ಪರ್ಶಿಯನ್ ಭಾಷೆಯಲ್ಲಿದ್ದ ನನ್ನ ಪುಸ್ತಕ ಗುಲದಸ್ತಾಯೆ ಬಿಜಾಪುರದಲ್ಲಿಯ ಒಂದು ಅಕ್ಷರವನ್ನೂ ಬಿಡದೆ ದಖಣಿ ಉರ್ದುವಿನಲ್ಲಿ ಅನುವಾದ ಮಾಡಿದೆನು.

ನಾನೂ ಒಬ್ಬ ಮನುಷ್ಯ. ಈ ಪುಸ್ತಕವನ್ನು ಓದುವವರು ಅದರಲ್ಲಿ ಏನಾದರೂ ದೋಷಗಳು ಕಂಡು ಬಂದರೆ ನನ್ನನ್ನು ಕ್ಷಮಿಸಿ, ತಿದ್ದಿಕೊಂಡು ಓದಿದರೆ ನನ್ನ ಮೇಲೆ ಉಪಕಾರವನ್ನು ಮಾಡಿದಂತಾಗುತ್ತದೆ.

■

ಗುಲದಸ್ತಾಯೆ ಬಿಜಾಪುರ

[ಬಿಜಾಪುರ ಪುಷ್ಪಗುಚ್ಛ]

*

ಅಧ್ಯಾಯ – ೧

ಯೂಸುಫ ಆದಿಲಶಾಹ

ಈ ಮೊದಲಿನ ಚರಿತ್ರಕಾರರು ಹೇಳಿದಂತೆ ಕನ್ನಡ ಪ್ರದೇಶದಲ್ಲಿ ಮೊಟ್ಟ ಮೊದಲ ರಾಜ್ಯವನ್ನು ಪ್ರಾರಂಭಿಸಿದ ಶ್ರೇಯಸ್ಸು ಯೂಸುಫ ಬೇಗ ಸಾವಿ ಎಂಬವನದಾಗಿದೆ. ಆತನು ಯೂಸುಫ ಆದಿಲಶಾಹ ಎಂಬ ಹೆಸರಿನಿಂದ ಆದಿಲಶಾಹಿ ರಾಜ್ಯವನ್ನು ಪ್ರಾರಂಬಿಸಿದನಲ್ಲದೆ, ತನ್ನ ಹೆಸರಿನ ಖುತಬಾವನ್ನು ಓದಿಸಿದನು ಮತ್ತು ತನ್ನ ಹೆಸರಿನ ಮೊಹರುಗಳನ್ನು ಹೊರಡಿಸಿದನು.

ಯೂಸುಫ ಆದಿಲಶಾಹನ ಮೂಲದ ಬಗ್ಗೆ ಬೇರೆ ಬೇರೆ ಇತಿಹಾಸಕಾರರು ಬೇರೆ ಬೇರೆ ಕಥೆಗಳನ್ನು ಹೇಳುತ್ತಾರೆ. ಆದರೆ ಸತ್ಯವೆಂದರೆ ಆತನು ರೂಮ ದೇಶದ ರಾಜಪುತ್ರರಲ್ಲಿ ಒಬ್ಬನಾಗಿದ್ದನು. ಅದರ ವಿವರ ಹೀಗಿದೆ. ರೂಮದ ಬಾದಶಹ ಸುಲ್ತಾನ ಮುರಾದನು ಹಿಜರಿ ಶಕ ೮೫೪, (ಕ್ರಿ. ಶ. ೧೪೫೦)ರಲ್ಲಿ ತೀರಿಕೊಂಡನು. ಅವನ ಸ್ಥಳದಲ್ಲಿ ಹಿರಿಯ ಮಗ ಮಹಮದನನ್ನು ಸುಲ್ತಾನನ್ನಾಗಿ ಕುಳ್ಳಿರಿಸಿದರು. ಅವನಿಗೆ ಒಬ್ಬ ಕಿರಿಯ ತಮ್ಮನಿದ್ದನು. ಅವನು ತುಂಬ ಸುಂದರ ಹಾಗೂ ಲಕ್ಷಣವಂತನಾಗಿದ್ದರಿಂದ ಅವನಿಗೆ ಯೂಸುಫ ಸಾನಿ ಎಂದು ಕರೆಯುತ್ತಿದ್ದರು. ಹಿರಿಯ ಅಣ್ಣ ಮಹಮ್ಮದನು ಅವನನ್ನು ತುಂಬ ಪ್ರೀತಿಸುತ್ತಿದ್ದನು. ಕ್ಷಣ ಮಾತ್ರ ಅವನನ್ನು ಬಿಟ್ಟು ಇರುತ್ತಿರಲಿಲ್ಲ. ಆದರೆ ರಾಜ್ಯದ ಶುಭವನ್ನು ಬಯಸುವ ಆಸ್ಥಾನದ ವಿದ್ವಾಂಸರು ಬಾದಶಹನ ಹತ್ತಿರ ಬಂದು ಏಕಾಂತದಲ್ಲಿ ಹೀಗೆ ಹೇಳಿದರು. 'ರಾಜ್ಯದ ಅಧಿಕಾರದಲ್ಲಿ ಪಾಲುದಾರನಾಗುವ ಯಾರನ್ನೇ ಆದರೂ ಪ್ರೀತಿಸುವುದು, ಪಾಲನ ಪೋಷಣೆ ಮಾಡುವುದು ಎಂದರೆ ಜೇಬಿನಲ್ಲಿ ಹಾವನ್ನು ಇಟ್ಟುಕೊಂಡಂತೆ. ಆದ್ದರಿಂದ ನೀನು ನಿಶ್ಚಿಂತೆಯಿಂದ ರಾಜ್ಯಭಾರವನ್ನು ಮಾಡುವುದಾದರೆ ಈ ನಿನ್ನ ತಮ್ಮನನ್ನು ಕೊಲ್ಲಬೇಕು. ಇದು ರೂಮ ದೇಶದ ಪರಂಪರೆಯೂ ಆಗಿದೆ' ಎಂದು ಹೇಳಿದರು.

ಆಸ್ಥಾನದ ಸಚಿವರ ಅಭಿಪ್ರಾಯ ಮತ್ತು ಅವರ ಒತ್ತಾಯವನ್ನು ಆಲಿಸಿದ ಬಾದಶಹನು, ಅವರಿಗೆ ಹೀಗೆ ಹೇಳಿದನು: 'ಹೀಗೆ ಮಾಡುವುದರಿಂದ ನನಗೆ ಎರಡು ರೀತಿಯ ಪಾಪಗಳು ಘಟಿಸುತ್ತವೆ. ಒಂದು ಚಿಕ್ಕ ಮಗುವನ್ನು ಕೊಂದ ಪಾಪ ಬರುತ್ತದೆ. ಜೊತೆಗೆ ಮಗುವಿನ ತಾಯಿಯು ಪಡುವ ಸಂಕಟ ಮತ್ತು ದುಃಖದ ಪಾಪವೂ ನನ್ನ ಮೇಲೆ ಬರುತ್ತದೆ. ಆದ್ದರಿಂದ ಈ ವಿಷಯದಲ್ಲಿ ನನಗೆ ಹೇಳಬೇಡಿರಿ. ಚಿಕ್ಕ ಮಗು, ಯೂಸುಫನ ತಾಯಿಯ ಹತ್ತಿರ ಹೋಗಿ ಈ ವಿಷಯದಲ್ಲಿ ಪರಿಹಾರ ಪಡೆಯಿರಿ'.

ಅದನ್ನು ಕೇಳಿದ ಸಚಿವರು, ಕೆಲವು ವಿದ್ವಾಂಸರು ಮತ್ತು ರಾಜಕಾರಣದಲ್ಲಿ ನುರಿತವರನ್ನು ಜೊತೆ ಮಾಡಿಕೊಂಡು ಬಾದಶಹನ ತಾಯಿ, ಮಹಾರಾಣಿಯವರ ಹತ್ತಿರ ಹೋದರು. ಮತ್ತು ತುಂಬ ಆದರ ಮತ್ತು ಗೌರವದಿಂದ ಅವಳನ್ನು ಕಂಡು.

'ನಿಮಗೆ ಗೊತ್ತಿರುವಂತೆ ನಮ್ಮ ರೂಮ ದೇಶದ ಪರಂಪರೆಯಂತೆ ಯೂಸುಫನ ಬಗ್ಗೆ ಏನು ಮಾಡಬೇಕು? ಮತ್ತು ರಾಜನ ಸಿಂಹಾಸನದ ದಾರಿಯಲ್ಲಿ ಅಡ್ಡ ಬರುವ ಅವನನ್ನು ಹೇಗೆ ದೂರ ಮಾಡಬೇಕು ಎಂಬುದನ್ನು ನೀವೇ ಹೇಳಿರಿ' ಎಂದು ಪ್ರಾರ್ಥಿಸಿಕೊಂಡರು. ಮಹಾರಾಣಿಯು ಬಹಳ ಬುದ್ಧಿವಂತಳಿದ್ದಳು. ಈ ಪ್ರಸಂಗದಲ್ಲಿ ಅವಳು ಯೋಚಿಸಿ, ತಾನು ಬೇಡವೆಂದರೂ ಯೂಸುಫನನ್ನು ಇವರು ಕೊಲ್ಲುತ್ತಾರೆ ಎಂದು ಮನಸ್ಸಿನಲ್ಲಿ ಯೋಚಿಸಿ ನಂತರ ಬಂದವರಿಗೆ ಹೀಗೆ ಹೇಳಿದಳು.

'ನಿಮ್ಮ ಯೋಚನೆ ಸರಿಯಾಗಿದೆ. ನೀವು ಹೇಳಿದಂತೆಯೇ ಆಗಲಿ ಆದರೆ ನನ್ನ ಒಂದು ವಿನಂತಿ ಎಂದರೆ ಈ ನನ್ನ ಕರುಳು ಬಳ್ಳಿಯನ್ನು ಒಂದು ರಾತ್ರಿ ಮತ್ತು ಒಂದು ಹಗಲು ಕಣ್ಣು ತುಂಬ ನೋಡಲು ಅವಕಾಶ ಮಾಡಿ ಕೊಡಿರಿ. ಅನಂತರ ನಾನು ಮಗುವನ್ನು ನಿಮಗೆ ಕೊಟ್ಟು ಬಿಡುವೆ ಅಥವಾ ನಾನು ನನ್ನ ಕೈಯಾರೆ ಅವನಿಗೆ ಸಾವಿನ ಶರಬತ್ತನ್ನು ಕುಡಿಸುವೆ.' ಅದಕ್ಕೆ ಬಂದ ಮಹಾಜನರು ಮಹಾರಾಣಿಯ ವಿನಂತಿಯನ್ನು ಮಾನ್ಯಮಾಡಿ ಮರುದಿನ ಬರುವುದಾಗಿ ಹೇಳಿ ತಂತಮ್ಮ ಮನೆಗೆ ಹೋದರು.

ಕಾಕತಾಳಿಯ ಎಂಬಂತೆ ಅದೇ ದಿನಗಳಲ್ಲಿ ಖ್ವಾಜಾ ಇಮಾದುದ್ದೀನ ಎಂಬ ವ್ಯಾಪಾರಿಯು ಗರ್ಜಸ್ಥಾನದ ಸಾವಾ ನಗರದಿಂದ ವಿವಿಧ ಬಗೆಯ ಸಾಮಾನುಗಳನ್ನು ಮತ್ತು ಗುಲಾಮರನ್ನು ತೆಗೆದುಕೊಂಡು ಅವುಗಳನ್ನು ಮಾರಲು ರೂಮ ನಗರಕ್ಕೆ ಬಂದಿದ್ದನು. ಅವನು ತಂದ ಗುಲಾಮರಲ್ಲಿ ಯೂಸುಫನಂತೆ ವಯಸ್ಸಿನಲ್ಲಿ, ಲಕ್ಷಣಗಳಲ್ಲಿ ತುಂಬ ಸುಂದರನಾಗಿದ್ದ ಒಬ್ಬ ಹುಡುಗನಿದ್ದನು. ಈ ವಿಷಯವು ಮಹಾರಾಣಿಗೆ ಗೊತ್ತಾಗುತ್ತಿದ್ದಂತೆ ಅದೇ ದಿನ ರಾತ್ರಿ ಮಹಾರಾಣಿ ಅವನನ್ನು ಅರಮನೆಯ ಮಹಲಿಗೆ ಕರೆಸಿದಳು. ಮತ್ತು ಬಹಳಷ್ಟು ಬೆಲೆಯನ್ನು ಕೊಟ್ಟು ಆ ಹುಡುಗನನ್ನು ಖರೀದಿಸಿದಳು. ಜೊತೆಗೆ ಯೂಸುಫನನ್ನು ವ್ಯಾಪಾರಿಯ ಕೈಗೆ ಕೊಟ್ಟು, ಈತನು ರಾಜಪುತ್ರನಿದ್ದಾನೆ. ಇವನನ್ನು ಜೋಕೆಯಿಂದ ಕಾಪಾಡಬೇಕು. ಅದಕ್ಕೆ ಎಷ್ಟು ಬೇಕಾದಷ್ಟು ಖರ್ಚು ಬರಲಿ, ಅದನ್ನು ನಾನು ಕೊಡುವೆ

ಎಂದು ಹೇಳುತ್ತ, ಬೆಲೆಬಾಳುವ ಮುತ್ತು ರತ್ನ ಮತ್ತು ದ್ರವ್ಯಗಳನ್ನು ಕೊಟ್ಟು ಆ ವ್ಯಾಪಾರಿಯನ್ನು ಕಳಿಸಿದಳು. ವ್ಯಾಪಾರಿಯು ತುಂಬ ಸಂತೋಷದಿಂದ ಯೂಸುಫನನ್ನು ಕರೆದುಕೊಂಡು ಅದೇ ದಿನ ರಾತ್ರಿ ರೂಮ ನಗರವನ್ನು ಬಿಟ್ಟು ತನ್ನ ದೇಶಕ್ಕೆ ಹೊದನು.

ಮಹಾರಾಣಿಯು ತಾನು ಖರೀದಿಸಿದ ಗುಲಾಮ ಹುಡುಗನಿಗೆ ಅದೇ ರಾತ್ರಿ ವಿಷವನ್ನು ಕುಡಿಸಿದಳು. ಮಗು ಸತ್ತಿತು. ವಿಷ ಕುಡಿಸಿದ್ದರಿಂದ ಮಗುವಿನ ರೂಪವೆಲ್ಲ ಬದಲಾಯಿತು. ರಾತ್ರಿಯ ಕೊನೆಯ ಗಳಿಗೆಯಲ್ಲಿ ಅರಮನೆಯ ಚಾಕರರನ್ನು ಕರೆದು ರಾಜಪುತ್ರ ಯೂಸುಫನು ಸತ್ತನೆಂದು ಹೇಳುತ್ತ ಎಲ್ಲರೂ ದೊಡ್ಡ ದನಿಯಲ್ಲಿ ಅಳಹತ್ತಿದರು. ನಸುಕು ಹರಿಯುತ್ತಿದ್ದಂತೆ ರಾಜಪುತ್ರ ಯುಸೂಫ ಸತ್ತ ಸುದ್ದಿ ನಗರದ ತುಂಬೆಲ್ಲ ಹಬ್ಬಿತು. ಅದು ಬಾದಶಹ ಮತ್ತು ಆಸ್ಥಾನದ ಮಹಾಜನರಿಗೆ ಗೊತ್ತಾಗುತ್ತಿದ್ದಂತೆ ಅವರು ಬಂದು ರಾಜ ಸನ್ಮಾನದಲ್ಲಿ ಯುಸೂಫನ ಅಂತ್ಯಸಂಸ್ಕಾರವನ್ನು ಮಾಡಿದರು ಮತ್ತು ಮಹಾರಾಣಿಗೆ ಸಾಂತ್ವನವನ್ನು ಹೇಳಿದರು.

ಇತ್ತ ಖ್ವಾಜಾ ಇಮಾದುದ್ದೀನ ವ್ಯಾಪಾರಿಯು, ರಾಜಪುತ್ರನ ಪಾಲನೆ ಪೋಷಣೆಯು ತನಗೆ ಬಂದದ್ದು ಭಗವಂತನ ಆಶೀರ್ವಾದವೆಂದು ತಿಳಿದು ಅದೇ ರಾತ್ರಿ ಆ ಊರನ್ನು ಬಿಟ್ಟು ತನ್ನ ಊರಾದ ಸಾವಾ ನಗರಕ್ಕೆ ಮಗುವಿನೊಂದಿಗೆ ಹೋದನು. ಮಗುವನ್ನು ಅವನ ಅಂತಸ್ತಿನಂತೆ ಒಬ್ಬ ರಾಜಪುತ್ರನನ್ನು ಬೆಳೆಸುವಂತೆಯೇ ಅವನನ್ನು ಬೆಳೆಸಹತ್ತಿದನು. ಅದರಲ್ಲಿ ಯಾವ ಕಡಿಮೆಯನ್ನೂ ಮಾಡಲಿಲ್ಲ. ಆಗ ರಾಜಪುತ್ರನು ಏಳು ವರುಷದವನಿದ್ದನು. ಅವನಿಗೆ ಶಿಕ್ಷಣ ನೀಡಲು ಮನೆಯಲ್ಲೆ ಒಬ್ಬ ಶಿಕ್ಷಕನನ್ನು ನಿಯಮಿಸಿದನು. ಶಿಕ್ಷಣದ ಜೊತೆಗೆಯೇ ರಾಜಪುತ್ರನಿಗೆ ಬೇಕಾದ ರಾಜಕಾರಣದ ವಿಷಯಗಳನ್ನು ತಿಳಿಸುವ ಹಾಗೂ ಇತರ ಇಷಯಗಳಲ್ಲೂ ಒಬ್ಬ ಬೇರೆ ಶಿಕ್ಷಕನನ್ನೂ ನಿಯಮಿಸಿದನು. ಹೀಗೆ ಒಂದು ವರುಷ ಕಳೆಯುತ್ತಿದ್ದಂತೆ, ಮಹಾರಾಣಿಯು ಒಬ್ಬ ದಾಸಿಯನ್ನು ಕೆಲವು ಸೇವಕರೊಂದಿಗೆ ಮತ್ತೆ ಅನೇಕ ಮುತ್ತು ರತ್ನ ಮತ್ತು ದ್ರವ್ಯಗಳನ್ನು ಕೊಟ್ಟು ಮಗುವನ್ನು ನೋಡಿ ಬರಲು ಕಳಿಸಿದಳು. ಅವರು ಸಾವಾ ನಗರಕ್ಕೆ ಬಂದು ಮಗುವನ್ನು ನೋಡಿದರು. ದಾಸಿಯು ಅಲ್ಲಿಯೇ ಉಳಿದುಕೊಂಡಳು. ಉಳಿದ ಜನರು ತಿರುಗಿ ಹೋದರು ಮತ್ತು ಮಗು ಆರೋಗ್ಯವಂತನಾಗಿದ್ದು, ಆತನಿಗೆ ಚೆನ್ನಾಗಿ ಶಿಕ್ಷಣವನ್ನೂ ಕಲಿಸುತ್ತಿದ್ದಾನೆಂದು ಮಹಾರಾಣಿಗೆ ಹೇಳಿದರು. ಅದನ್ನು ಕೇಳಿ ಮಹಾರಾಣಿಯು ಸಂತೋಷಪಟ್ಟಳು.

ಮತ್ತೆ ಕೆಲವು ಕಾಲದ ನಂತರ ಮಹಾರಾಣಿಯು ತನ್ನ ವಿಶ್ವಾಸಿಕರೊಂದಿಗೆ ಮಗುವಿನ ಖರ್ಚಿಗೆಂದು ಮುತ್ತು ರತ್ನ ಹಾಗೂ ದ್ರವ್ಯಗಳನ್ನು ಕಳಿಸಿಕೊಟ್ಟಳು. ಹೀಗೆ ವರುಷದಲ್ಲಿ ಒಂದೆರಡು ಸಲ ತನ್ನ ವಿಶ್ವಾಸಿಕರನ್ನು ಮಹಾರಾಣಿಯು ಮಗುವಿನ ಯೋಗಕ್ಷೇಮವನ್ನು ತಿಳಿದುಕೊಳ್ಳಲು ಕಳಿಸುತ್ತಿದ್ದಳು ಮತ್ತು ಖರ್ಚಿಗೂ ಕಳಿಸುತ್ತಿದ್ದಳು. ಪ್ರತಿ ಸಲ ಬಂದು ಹೋದವರೆಲ್ಲ ಮಗುವು ಬೆಳೆಯುತ್ತಿದ್ದ ಬಗೆಯನ್ನು, ಶಿಕ್ಷಣದಲ್ಲಿಯ ಪ್ರಗತಿಯನ್ನು, ಮಗುವಿನ ಜಾಣತನವನ್ನು ಮಹಾರಾಣಿಗೆ ಬಂದು ಹೇಳುತ್ತಿದ್ದರು.

ಹೀಗಿರಲು ದಿನ ಕಳೆದಂತೆ ಸಾವಾನಗರದಲ್ಲಿ ರಾಜಪುತ್ರನು ಬಂದಿದ್ದಾನೆ ಮತ್ತು ಇಲ್ಲಿಯೇ ಇದ್ದು ಶಿಕ್ಷಣ ಪಡೆಯುತ್ತಿದ್ದಾನೆಂಬ ಸುದ್ದಿಯು ಹರಡ ಹತ್ತಿತು. ಸಾವಾ ನಗರದ ಜನರು ಹಾದಿ ಬೀದಿಯಲ್ಲಿ ಚರ್ಚೆ ಮಾಡ ಹತ್ತಿದರು. ಈ ವಿಷಯ ಸಾವಾನಗರದ ಮುಖ್ಯಸ್ಥನಿಗೂ ಗೊತ್ತಾಯಿತು. ಆತನು ಅತಿ ಆಶೆಬುರುಕನಾಗಿದ್ದನು. ರಾಜಪುತ್ರನ ರಹಸ್ಯವನ್ನು ಬಯಲು ಮಾಡುತ್ತೇನೆಂದು ಇಮಾದುದ್ದೀನ ವ್ಯಾಪಾರಿಗೆ ಬೆದರಿಕೆ ಹಾಕಿ ಅವನಿಂದ ಹಣವನ್ನು ವಸೂಲು ಮಾಡ ಹತ್ತಿದನು. ಒಂದೆರಡು ಸಲ ಇಮಾದುದ್ದೀನನು ಹಣ ಕೊಟ್ಟನಾದರೂ, ಮುಖ್ಯಸ್ಥನ ಉಪದ್ರವಕ್ಕೆ ಬೇಸತ್ತು ರಾಜಪುತ್ರನನ್ನು ಬೇರೆ ಸ್ಥಳಕ್ಕೆ ಕರೆದುಕೊಂಡು ಹೋದನು.

ಕೆಲವು ಕಾಲದ ನಂತರ ಸುದೈವವೆಂಬಂತೆ ಸಾವಾ ನಗರದ ಆಶೆಬುರುಕ ಮುಖ್ಯಸ್ಥನು ಸತ್ತನು. ಆಗ ಖ್ವಾಜಾ ಇಮಾದುದ್ದೀನನು ರಾಜಪುತ್ರ ಯೂಸುಫನನ್ನು ಮರಳಿ ಸಾವಾ ನಗರಕ್ಕೆ ಕರೆ ತರಬೇಕಂದು ಯೋಚಿಸಿದನು. ಅದೇ ದಿನಗಳಲ್ಲಿ ಯೂಸುಫನಿಗೆ ಒಂದು ಕನಸು ಬಿದ್ದಿತು. ಕನಸಿನಲ್ಲಿ ಒಬ್ಬ ಸತ್ಪುರುಷನು ಬಂದು ಯೂಸುಫನಿಗೆ ಸಾವಾನಗರಕ್ಕೆ ಹೋಗಬೇಡ. ನಾನು ಖ್ವಾಜಾ ಖಿಜ್ರನಿದ್ದೇನೆ. ಹಿಂದುಸ್ಥಾನಕ್ಕೆ ಹೋಗು ಎಂದು ಆದೇಶ ಮಾಡಿದನು. ಅಲ್ಲಿ ನಿನ್ನ ಭವಿಷ್ಯವು ಉಜ್ವಲವಾಗಿದೆ. ನಿನ್ನ ಆಶೆ ಕೈಗೂಡಿ, ಇಚ್ಛೆ ಪೂರ್ತಿಯಾಗುತ್ತದೆ ಎಂದೂ ಹೇಳಿದನು. ನೀನು ಹಿಂದುಸ್ಥಾನಕ್ಕೆ ಹೋಗುವ ಕಷ್ಟವನ್ನು ಸಹಿಸು. ಆದರೆ ಅಲ್ಲಿ ಹೋದನಂತರ ನೀನು ನಿನ್ನದೇ ಆದ ರಾಜ್ಯವನ್ನು ಸ್ಥಾಪನೆ ಮಾಡುತ್ತೀ ಎಂದೂ ಹೇಳಿದನು.

ಯೂಸುಫನು ಈ ಕನಸಿನ ವಿಷಯವನ್ನು ಯಾರಿಗೂ ಹೇಳಲಿಲ್ಲ. ಪ್ರತಿಯಾಗಿ ಖ್ವಾಜಾ ಇಮಾದುದ್ದೀನನಿಗೆ ಹಿಂದುಸ್ಥಾನಕ್ಕೆ ತನ್ನನ್ನು ಕರೆದುಕೊಂಡು ಹೋಗಬೇಕೆಂದು ಹಟ ಹಿಡಿದನು. ಅದನ್ನು ಕೇಳಿದ ಇಮಾದುದ್ದೀನನು, ಹೇಗೂ ತಾನು ವ್ಯಾಪಾರಸ್ಥನು, ಹಿಂದುಸ್ಥಾನಕ್ಕೆ ಹೋಗಿ ಅಲ್ಲಿಯೇ ವ್ಯಾಪಾರ ಮಾಡಲು ರಾಜಪುತ್ರ ಯೂಸುಫನೊಂದಿಗೆ ಹಿಂದೂಸ್ಥಾನಕ್ಕೆ ಹೋಗುವ ಹಡಗಿನಲ್ಲಿ ಹೊರಟನು. ಹೀಗೆ ಅವರಿಬ್ಬರೂ ಕೆಲವು ತಿಂಗಳು ಪ್ರವಾಸ ಮಾಡಿ ದಾಭೋಳ ಎಂಬ ಬಂದರಕ್ಕೆ ಬಂದು ಮುಟ್ಟಿದರು. ಅಲ್ಲಿ ಇಬ್ಬರೂ ಕೆಲವು ದಿನ ಇದ್ದರು.

ಒಂದು ದಿನ ಯೂಸುಫನು ಬೇಟೆಯಾಡುತ್ತ ಒಂದು ಬೆಟ್ಟದ ಅಡಿಯಲ್ಲಿ ಬಂದನು. ಅಲ್ಲಿ ಅವನಿಗೆ ತುಂಬ ನೀರಡಿಕೆಯಾಯಿತು. ಅಲ್ಲಿ ಅವನಿಗೆ ಎಲ್ಲಿಯೂ ನೀರು ಸಿಗಲಿಲ್ಲ. ಆಗ ಅಕಸ್ಮಾತ್ತಾಗಿ ಅಲ್ಲಿ, ಈ ಮೊದಲು ಯೂಸುಫನು ಕನಸಿನಲ್ಲಿ ನೋಡಿದ ಒಬ್ಬ ತೇಜೋವಂತ ಸತ್ಪುರುಷನು ಪ್ರಕಟವಾದನು ಮತ್ತು ತನ್ನ ಕೈಯಲ್ಲಿದ್ದ ಒಂದು ಪಾತ್ರೆಯಲ್ಲಿಯ ತಣ್ಣಗಿನ ಸಿಹಿನೀರನ್ನು ಯೂಸುಫನಿಗೆ ಕೊಟ್ಟು, ಇದನ್ನು ಕುಡಿ ಎಂದು ಆದೇಶಿಸಿದನು.

ಈ ಮೊದಲು ಸ್ವಪ್ನದಲ್ಲಿ ಹೇಳಿದ್ದನ್ನು ಸುಳ್ಳು ಎಂದು ತಿಳಿಯಬೇಡ ಮತ್ತು ಅದರ

ಬಗ್ಗೆ ಸಂಶಯ ಪಡಬೇಡ. ಅಲ್ಲಿ ನಾನು ಸ್ವಪ್ನದಲ್ಲಿ ಹೇಳಿದ್ದೆ. ಈಗ ನಾನು ಸ್ವತಃ ಬಂದು ಹೇಳುತ್ತಿರುವೆನು, ಭಗವಂತನು ನಿನಗೆ ಬಹು ದೊಡ್ಡ ಹುದ್ದೆಯನ್ನು ಕೊಡುತ್ತಾನೇ ಎಂದು ಹೆಳುತ್ತಿರುವಾಗ ಅದನ್ನು ನೀರು ಕುಡಿಯುತ್ತ ಕೇಳುತ್ತಿದ್ದ ಯೂಸುಫನು ಹೀಗೆ ಹೇಳುತ್ತಿದ್ದವನ ಮುಖವನ್ನು ನೋಡಬೇಕೆಂದು ತನ್ನ ಮುಖ ಮೇಲೆತ್ತಿರುವಂತೆ ಖ್ವಾಜಾ ಖಿಜ್ರನು ಅದೃಶ್ಯನಾಗಿ ಬಿಟ್ಟಿದ್ದನು.

ಯೂಸುಫನು ಸಂತೋಷದ ಈ ವಿಷಯವನ್ನು ಕೇಳಿ ಅತಿ ಉಲ್ಲಸಿತನಾದನು ಮತ್ತು ಇಮಾದುದ್ದೀನನ ಹತ್ತಿರಬಂದು ರಾಜಧಾನಿಗೆ ಹೋಗೋಣ ಎಂದು ಹೇಳುತ್ತ ಅವನೊಂದಿಗೆ ರಾಜಧಾನಿ ಬೀದರಕ್ಕೆ ಬಂದನು. ಆ ದಿನಗಳಲ್ಲಿ ಖ್ವಾಜಾ ಅಲ್ಲಾಉದ್ದೀನ ಮಹಮೂದ ಗೀಲಾನಿಯು ಬೀದರದ ದಿವಾನನಾಗಿದ್ದನು. ಅವನಿಗೆ ಮೊದಲು ಮಲಿಕುತ್ತುಜ್ಜಾರ ಎಂಬ ಬಿರುದು ದೊರೆತಿತ್ತು. ಮತ್ತು ಈ ಪ್ರಶಸ್ತಿಯ ನಂತರ ಅವನು ಇನ್ನಷ್ಟು ಚೆನ್ನಾದ ಸೇವೆಯನ್ನು ಮಾಡಿ ಬಾದಶಹನಿಂದ ಖ್ವಾಜೇ ಜಹಾನ ಎಂಬ ಬಿರುದನ್ನೂ ಪಡೆದನು. ಈತನೆ ನಂತರದ ದಿನಗಳಲ್ಲಿ ಖ್ವಾಜಾ ಮಹಮೂದ ಗವಾನನೆಂದು ಚರಿತ್ರೆಯಲ್ಲಿ ಪ್ರಸಿದ್ಧನಾಗಿದ್ದಾನೆ. ಈತನು ಬಹಮನಿ ಸಾಮ್ರಾಜ್ಯದ ನಾಲ್ಕು ಬಾದಶಹರಿಗೆ ಸಚಿವನಾಗಿದ್ದನು.

ಖ್ವಾಜಾ ಇಮಾದುದ್ದೀನನು ಬೀದರಿನಲ್ಲಿ ಖ್ವಾಜಾ ಅಲ್ಲಾಉದ್ದೀನನಿಗೆ ಭೆಟ್ಟಿಯಾದನು. ಅವರಿಬ್ಬರೂ ಒಂದೇ ಊರಿನವರಾಗಿದ್ದರು.. ಅದ್ದರಿಂದ ಇಬ್ಬರಲ್ಲೂ ಪರಸ್ಪರ ಪ್ರೀತಿ ವಿಶ್ವಾಸಗಳು ಬಹು ಬೇಗ ಬೆಳೆದುವು. ಒಂದು ದಿನ ಮಹಮೂದ ಗವಾನನ ದೃಷ್ಟಿ ಸುಂದರನಾದ, ಲಕ್ಷಣವಂತ ಯೂಸುಫನ ಮೇಲೆ ಬಿದ್ದಿತು. ಆಗ ಅವನು ಖ್ವಾಜಾ ಇಮಾದುದ್ದೀನನಿಗೆ ಹೇಳುತ್ತ ಇಂಥ ಸುಂದರ ಹುಡುಗನು ಬಾದಶಾಹರ ಸೇವೆಯಲ್ಲಿ ಇರಬೇಕು, ಅವರಲ್ಲಿ ಸೇರಿಸು ಎಂದು ಹೇಳಿದನು.

ಆ ದಿನಗಳಲ್ಲಿ ಶ್ರೀಮಂತರು, ಸರದಾರರು ತಮ್ಮ ತಮ್ಮ ಹುಡುಗರನ್ನು ಬಾದಶಹರ ಸೇವೆಯಲ್ಲಿ ಬಿಡುವುದು ಇಡೀ ದಖನದಲ್ಲಿ ಒಂದು ರೀತಿಯ ರಿವಾಜು ಇತ್ತು. ಹಾಗೆ ಬಾದಶಹರ ಸೇವೆಯಲ್ಲಿ ಸೇರಿದ ಹುಡುಗರು ತಂತಮ್ಮ ಯೋಗ್ಯತೆ, ಶಕ್ತಿ ಸಾಮರ್ಥ್ಯಗಳಿಂದ ಸರದಾರರು, ಅಮೀರರು, ವಜೀರರು, ಸಿಪಾಹ ಸಾಲಾರರು ಇತ್ಯಾದಿ ಹುದ್ದೆಗಳಿಗೆ ಏರುತ್ತಿದ್ದರು. ಮಹಮೂದ ಗವಾನನ ಮಾತನ್ನು ಕೇಳಿದ ಖ್ವಾಜಾ ಇಮಾದುದ್ದೀನನು ರಾಜಪುತ್ರನಾದ ಈತನನ್ನು ಬಾದಶಹರ ಚಾಕರಿಗೆ ಸೇರಿಸುವುದೇ ಬೇಡವೇ ಎಂದು ಮೊದಲು ಮನಸ್ಸಿನಲ್ಲಿ ಯೋಚಿಸಿದನು. ಬೇಸರಪಟ್ಟುಕೊಂಡು ಅವನ ಮಾತನ್ನು ಒಪ್ಪಿಕೊಳ್ಳುವುದು ಬೇಡ ಎನಿಸಿತು. ಆದರೆ ಅದನ್ನೇ ಯೋಚಿಸುತ್ತಿದ್ದ ಇಮಾದುದ್ದೀನನ ಮನಸ್ಸಿನಲ್ಲಿ, ಯೂಸುಫನ ದೈವ ಇದರಿಂದಲೇ ತೆರೆಯುವುದಿದ್ದರೆ ಯಾಕೆ ಆಗಬಾರದೆಂದು ಯೋಚಿಸಿ ಕೊನೆಗೆ ಬಾದಶಹನ ಸೇವೆಯಲ್ಲಿ ಯೂಸುಫನನ್ನು ಸೇರಿಸಿದನು.

ಕೆಲವು ಚರಿತ್ರಕಾರರು ಸತ್ಯ ಗೊತ್ತಿಲ್ಲದೆ ಯೂಸುಫನು ತುರ್ಕಿ ಗುಲಾಮನಿದ್ದು

ಅವನನ್ನು ಬೀದರಿನಲ್ಲಿ ಮಾರಿದರು ಎಂದು ಬರೆದಿದ್ದಾರೆ. ಆದರೆ ಯೂಸುಫನ ಬಗ್ಗೆ ಇದುವೆ ಸತ್ಯವಾದ ಕಥೆಯಾಗಿದೆ. ಹೀಗೆ ಯೂಸುಫನು ಸುಲ್ತಾನ ಮಹಮ್ಮದ ಬಹಮನಿಯ ಸೇವೆಯಲ್ಲಿ ಸೇರಿಕೊಂಡನು ಮತ್ತು ಹಂತ ಹಂತವಾಗಿ ಯೂಸುಫನು ತನ್ನ ಯೋಗ್ಯತೆಯಿಂದ ಭಗವಂತನ ಕೃಪೆಯಿಂದ ಮೇಲೇರ ಹತ್ತಿದನು. ಮಹಮೂದ ಗವಾನನು ತನ್ನ ಮಗನಿಗಿಂತ ಅಧಿಕ ಪ್ರೀತಿಯನ್ನು ಯೂಸುಫನಿಗೆ ತೋರಿಸುತ್ತಿದ್ದನು. ಕೆಲವೇ ದಿನಗಳಲ್ಲಿ ಆತನು ದೊಡ್ಡ ಅಮೀರನಾದನಲ್ಲದೆ, ಕೊನೆಗೆ ಸೈನ್ಯದ ಮುಖ್ಯಸ್ಥನಾದನು. ಅವನಿಗೆ ಮೊದಲು ಯೂಸುಫ ಆದಿಲಖಾನ ಎಂಬ ಬಿರುದು ದೊರೆಯಿತು. ನಂತರ ಮಜಲಿಸ್ ಎ ರಫಿ, ಮಲಿಕುಶರಕ್ [ಪೂರ್ವದ ಅಧಿಪತಿ] ಮೊದಲಾದ ಹುದ್ದೆಗಳನ್ನು ಪಡೆದನು. ಕೊನೆಗೆ ಬಿಜಾಪುರದಲ್ಲಿ ಹಿಜರಿ ಶಕ ೮೧೭ದಲ್ಲಿ (ಕ್ರಿ. ಶ. ೧೪೯೧)ರಲ್ಲಿ ತನ್ನದೇ ಆದ ರಾಜ್ಯವನ್ನು ಸ್ಥಾಪಿಸಿದನು.

ಯೂಸುಫ ಆದಿಲಶಹನ ಬಗ್ಗೆ ಇನ್ನೊಂದು ವರ್ಣನೆ:

ಎಲ್ಲರಿಗೂ ಗೊತ್ತಿರುವಂತೆ, ಬಹಮನಿ ರಾಜ್ಯದ ಬಾದಶಹನಾದ ಸುಲ್ತಾನ ಮಹಮ್ಮದ ಬಹಮನಿಯ ರಾಜಧಾನಿ ಅಹಮದಾಬಾದ ಬೀದರಿನಲ್ಲಿ ಒಂದು ಸಲ ಇರಾನಿನ ಪಹಿಲವಾನನೊಬ್ಬನು ಬಂದಿದ್ದನು. ಕುಸ್ತಿ ಮತ್ತು ಶಕ್ತಿಯಲ್ಲಿ ಅವನನ್ನು ಸರಿಗಟ್ಟುವವರು ಪ್ರಪಂಚದಲ್ಲಿಯೇ ಯಾರೂ ಇರಲಿಲ್ಲ. ಅವನೊಂದಿಗೆ ಯಾವಾಗಲೂ ೨೦೦ ಜನ ಶಿಷ್ಯರಿರುತ್ತಿದ್ದರು. ಅವರಲ್ಲಿಯ ಪ್ರತಿಯೊಬ್ಬ ಶಿಷ್ಯನೂ ಬೇರೆ ದೇಶದ ಎಲ್ಲ ಪಹಿಲವಾನರ ಸರಿಸಮಾನನಾಗಿದ್ದನು. ಇರಾನಿನ ಪಹಿಲವಾನನು ಇರಾನದಲ್ಲಿಯ ಎಲ್ಲ ಪಹಿಲವಾನರನ್ನು ಸೋಲಿಸಿದ್ದನು. ತುರಾನ ಮತ್ತು ಹಿಂದುಸ್ತಾನದ ಇತರ ದೇಶಗಳಲ್ಲಿಯ ಪಹಿಲವಾನರನ್ನು ಸೋಲಿಸಿ ಅಲ್ಲಿಯ ಬಾದಶಹರುಗಳಿಂದ ಪ್ರಶಸ್ತಿ, ಬಿರುದುಗಳನ್ನು ಪಡೆಯುತ್ತ ಬಹಮನಿ ರಾಜಧಾನಿ ಬೀದರಿಗೆ ಬಂದಿದ್ದನು. ಬೀದರಿನ ಬಾದಶಹನನ್ನು ಕಂಡು ಅವನಿಗೆ ಗೌರವವನ್ನು ಸಲ್ಲಿಸಿದನು. ಬಹಮನಿ ರಾಜ್ಯದ ಪಹಿಲವಾನರೊಂದಿಗೆ ಕುಸ್ತಿಯನ್ನು ಆಡಲು ಬಾದಶಹನಿಗೆ ಆಹ್ವಾನಿಸಿದನು. ಆಗ ಬಾದಶಹನು ತನ್ನ ದರಬಾರವನ್ನು ಕೂಡಿಸಿದನು. ಬಹಮನಿ ರಾಜ್ಯದಲ್ಲಿ ಯಾರಾದರೂ ಈ ಕುಸ್ತಿ ಪಟುವಿನೊಂದಿಗೆ ಸ್ಪರ್ಧಿಸಿ ಅವನನ್ನು ಸೋಲಿಸಬಲ್ಲರೆ ಎಂದು ಕೇಳಿದನು. ಆಗ ದರಬಾದಲ್ಲಿ ಸೇರಿದ ಜನರೆಲ್ಲರೂ ನಮ್ಮಲ್ಲಿ ಅಂಥ ಯಾವ ಕುಸ್ತಿ ಪಟುಗಳೂ ಇಲ್ಲ ಎಂದು ಹೇಳಿದರು. ಅಷ್ಟರಲ್ಲಿ, ಕುಳಿತವರಲ್ಲಿ ಒಬ್ಬನು ಎದ್ದು ನಿಂತು ಹೀಗೆ ಹೇಳಿದನು.

'ನಮ್ಮಲ್ಲಿಯ ಸರನೋಬತರಲ್ಲಿಯ ಒಬ್ಬ ವ್ಯಕ್ತಿ ಸಿಪಾಯಿ ಮತ್ತು ಪಹಿಲವಾನನಿದ್ದು ಅವನು ಶಕ್ತಿವಂತನಾಗಿದ್ದಾನೆ. ಮತ್ತು ಈವರೆಗೆ ಬಹಳಷ್ಟು ಪಹಿಲವಾನರನ್ನು ಭೂಮಿಗೆ ಕೆಡವಿ ಸೋಲಿಸಿದ್ದಾನೆ. ಅಷ್ಟೇ ಅಲ್ಲ, ಮದಗಜವನ್ನು ಹಿಡಿದು ನಿಲ್ಲಿಸುತ್ತಾನೆ. ಎಂದು ಹೇಳುತ್ತ ಅವನು ಮಾತ್ರ ಈ ಇರಾನಿನ ಪಹಿಲವಾನನೊಂದಿಗೆ ಕುಸ್ತಿಯನ್ನು ಆಡಬಹುದು'.

ಬಾದಶಹನು ಇದನ್ನು ಕೇಳಿ, ತನ್ನ ರಾಜ್ಯದಲ್ಲಿಯ ಅತ್ಯಂತ ಪ್ರಸಿದ್ದನಾದ ಮತ್ತು

ಶಕ್ತಿವಂತನಾದ, ಅಮೀರನಾದ ಮತ್ತು ತನ್ನದೇ ಆದ ಗರಡಿ ಮನೆಯನ್ನು ಹೊಂದಿದ ಪಹಿಲವಾನ ಹುಸೇನ ಆಕಾನನ್ನು ಕರೆದು, ನೀನು ಈ ಇರಾನಿನ ಕುಸ್ತಿ ಪಟುವಿನೊಂದಿಗೆ ಆಡಬಲ್ಲೆಯಾ? ಎಂದು ಕೇಳಿದನು. ಆಗ ಹುಸೇನ ಆಕಾನು ಉತ್ತರ ಕೊಡುತ್ತ, ಹುಜೂರ, ನನಗೆ ಈಗ ವಯಸ್ಸಾಗಿದೆ. ಮೊದಲಿನ ಶಕ್ತಿ ಉಳಿದಿಲ್ಲ. ಆದರೆ ನನ್ನ ಗರಡಿ ಮನೆಯಲ್ಲಿ ಇಂಥ ಹಲವಾರು ಪಹಿಲವಾನರಿದ್ದು ಯಾರು ಬೇಕಾದರೂ ಈತನೊಂದಿಗೆ ಕುಸ್ತಿ ಆಡಿ ಇವನನ್ನು ಸೋಲಿಸಬಲ್ಲರು ಎಂದು ಹೇಳಿದನು.

ಆಗ ಬಾದಶಹನು ತುಂಬ ಸಂತೋಷದಿಂದ ಆದೇಶ ಮಾಡುತ್ತ, ನಿನ್ನ ಗರಡೀ ಮನೆಯಲ್ಲಿಯ ಶಿಷ್ಯರನ್ನು ಕರೆದು ಇವನೊಂದಿಗೆ ಕುಸ್ತಿ ಆಡಲು ಹೇಳು ಎಂದನು. ಆಗ ಹುಸೇನ ಆಕಾನು ತನ್ನ ಶಿಷ್ಯರಲ್ಲಿಯ ಏಳು ಜನರನ್ನು ತಂದು ಬಾದಶಹನ ಎದುರಿಗೆ ನಿಲ್ಲಿಸಿ ಇವರು ಅತ್ಯಂತ ವಿಶ್ವಾಸಾರ್ಹರು, ಸಮರ್ಥರು ಮತ್ತು ಇವನನ್ನು ಸೋಲಿಸಬಲ್ಲರು ಎಂದು ಹೇಳಿದನು.

ಆಗ ಬಾದಶಹನು ಇವರಲ್ಲಿ ಅತಿ ಶ್ರೇಷ್ಠನಾದ ಪಹಿಲವಾನನು ಯಾರು ಎಂದು ಕೇಳಿದನು. ಹುಸೇನ ಆಕಾನು ಅವರಲ್ಲಿಯ ಯೂಸುಫ ಬೇಗ ಸಾವಿ ಎಂಬ ತನ್ನ ಶಿಷ್ಯನನ್ನು ಕರೆದು ಬಾದಶಹನ ಎದುರಿಗೆ ನಿಲ್ಲಿಸಿದನು. ಆಗ ಬಾದಶಹನು ಯೂಸುಫನನ್ನು ಪ್ರಶ್ನಿಸುತ್ತ, ನೀನು ಈ ಇರಾನಿನ ಪಹಿಲವಾನನೊಂದಿಗೆ ಕುಸ್ತಿ ಆಡಬಲ್ಲೆಯಾ ಎಂದು ಕೇಳಿದನು. ಅದಕ್ಕೆ ಯೂಸುಫನು ನಿಮ್ಮ ಆದೇಶಕ್ಕೆ ಕಾಯುತ್ತಿರುವೆ, ನೋಡಿ ಎಂದನು. ಬಾದಶಹನು ಆಗಲಿ ಎಂದನು. ಆಗ ಯೂಸಫನು ಪಹಿಲವಾನನ ವಸ್ತ್ರಗಳನ್ನು ಧರಿಸಿ, ಮೈಗೆಲ್ಲ ಸುಗಂಧವನ್ನು ಪೂಸಿಸಿಕೊಂಡು ಮೈದಾನಿನಲ್ಲಿ ಸಿಂಹದಂತೆ ಪ್ರವೇಶಿಸಿದನು. ಆಖಾಡದಲ್ಲಿಯ ವೇದಿಕೆಯ ಮೇಲೆ ಆಸೀನರಾಗಿದ್ದ ಸುಲ್ತಾನರ ಎದುರಿಗೆ ಬಂದು ಸಲಾಮುಗಳನ್ನು ಸಲ್ಲಿಸಿದಾಗ ಬಾದಶಹನು ಅತ್ಯಂತ ಪ್ರಸನ್ನನಾದನು ಮತ್ತು ಇರಾನಿನ ಪಹಿಲವಾನನ್ನು ಆಹ್ವಾನಿಸಿ ಈತನೊಂದಿಗೆ ಕುಸ್ತಿ ಆಡಲು ಸಿದ್ಧನಾಗು ಎಂದು ಹೇಳಿದನು. ಇರಾನಿನ ಪಹಿಲವಾನನು ಚರ್ಮದ ಲಂಗೋಟಿಯೊಂದಿಗೆ ಕುಸ್ತಿ ಪಟುವಿನ ವಸ್ತ್ರಗಳನ್ನು ಧರಿಸಿ, ಮೈಗೆಲ್ಲ ಸುಗಂದವನ್ನು ಸಿಂಪಡಿಸಿಕೊಂಡು ಬಂದು ಅವನೂ ಸುಲ್ತಾನರ ಎದುರಿಗೆ ಬಂದು ಸಲಾಮುಗಳನ್ನು ಸಲ್ಲಿಸಿ ಮೈದಾನದಲ್ಲಿ ಬಂದು ನಿಂತನು. ಅವನೊಂದಿಗೆ ಅವನ ಎಲ್ಲ ಏಳುನೂರು ಪಹಿಲವಾನರು ಬಂದು ಅವನನ್ನು ಸುತ್ತುವರಿದು ನಿಂತಿದ್ದರು.

ಇರಾನಿನ ಪಹಿಲವಾನನು ಯೂಸುಫನನ್ನು ನೋಡಿ, ತಿರುಗಿ ಬಾದಶಹರ ಹತ್ತಿರ ಬಂದನು. ಹುಜೂರ, ನಾನು ನನ್ನ ಜೀವಮಾನದಲ್ಲಿ ಈ ಹುಡುಗನ ನಾಲ್ಕು, ಹತ್ತು ಪಟ್ಟು ಶಕ್ತಿವಂತರ ಜೊತೆಗೆ ಆಡಿ ಗೆದ್ದಿರುವೆ. ಈ ಚಿಕ್ಕ ಮಗುವಿನೊಂದಿಗೆ ಆಡುವುದೆಂದರೆ ನನಗೆ ಅವಮರ್ಯಾದೆ ಎನಿಸುತ್ತದೆ ಎಂದನು. ಅಷ್ಟರಲ್ಲಿ ಯೂಸುಫನ ಗುರು ಹುಸೇನ ಅಕಾನು ನಿಂತಲ್ಲಿಂದಲೇ ಗರ್ಜಿಸುತ್ತ, ಮೊದಲು ನೀನು ಈ ಹುಡುಗನ ಜೊತೆ ಆಡು. ಅವನನ್ನು ಸೋಲಿಸು. ಆಗ ಮತ್ತೊಬ್ಬ ಬಂದು ನಿನ್ನೊಂದಿಗೆ ಕುಸ್ತಿ ಆಡುತ್ತಾನೆ ಎಂದನು.

ಆಗ ಉಭಯ ಪಹಿಲವಾನರು ಪರಸ್ಪರ ಸಮ್ಮುಖರಾಗಿ ಎದುರಿಗೆ ಬಂದು ಕುಸ್ತಿ ಆಡ ಹತ್ತಿದರು. ಯೂಸುಫ ಬೇಗ ಸಾವಿಯು ಭೂಮಿಯನ್ನು ಮುಟ್ಟಿ, ಮಣ್ಣನ್ನು ಹಿಡಿದು ಮೈದಾನದಲ್ಲಿಯೇ ಪರಮಾತ್ಮನನ್ನು ಸ್ಮರಿಸಿ ಆತನ ಅನುಗ್ರಹವನ್ನು ಬಯಸಿದನು. ಅನಂತರ ಇರಾನಿನ ಪಹಿಲವಾನನ ಹಸ್ತ ಲಾಘವವನ್ನು ಮಾಡಿದನು. ಒಬ್ಬರೊಬ್ಬರು ತಮಗೆ ಗೊತ್ತಿದ್ದ ಹೊಸ ಹೊಸ ಡಾವಪೇಚಗಳನ್ನು ಹಾಕುತ್ತ ಸೆಣಸಾಡಿದರು. ಒಂದು ಹಂತದಲ್ಲಿ ಅಕಸ್ಮಾತ್ತಾಗಿ ಯೂಸುಫನು ಇರಾನಿನ ಪಹಿಲವಾನನ ಲಂಗೋಟಿಯನ್ನು ಒಂದು ಕೈಯಲ್ಲಿ ಹಿಡಿದು ಇನ್ನೊಂದು ಕೈಯಿಂದ ಆತನ ಕುತ್ತಿಗೆಯ ಮೇಲೆ ಕೈ ಹಾಕಿ ಎತ್ತಿ ಹಿಡಿದನು. ಹಾಗೆಯೇ ಆತನ ಶರೀರವನ್ನು ಗಿರಿ ಗಿರಿ ಎಂದು ಎರಡು ಮೂರು ಸುತ್ತು ತಿರುಗಿಸುತ್ತ, ಭಗವಂತನ ಹೆಸರನ್ನು ತೆಗೆದುಕೊಳ್ಳುತ್ತ, ನಿನ್ನಿಂದ ಈ ಶಕ್ತಿ ಎಂದು ಹೇಳುತ್ತ ಆತನನನ್ನು ಭೂಮಿಗೆ ಒಗೆದನು. ನೆಲಕ್ಕೆ ಬಿದ್ದ ಪೆಟ್ಟಿಗೆ ಇರಾನಿನ ಪಹಿಲವಾನನ ಬೆನ್ನಿನ, ಕೈ ಕಾಲುಗಳ ಎಲುವುಗಳು ಚೂರು ಚೂರಾದುವು. ಅವನು ಬಿದ್ದಲ್ಲಿಂದ ಏಳಲು ಸಾದ್ಯವಾಗಲೇ ಇಲ್ಲ, ಮೈದಾನಿನ ತುಂಬ ಯೂಸುಫನ ಹೆಸರನ್ನು ಹಿಡಿದು ಹೋ ಎಂದು ಕೂಗುತ್ತ ಶಾಭಾಸ, ವ್ಹಾ, ವ್ಹಾ ಎಂದು ಕಿವಿ ಗಡಚಿಕ್ಕುವಂತೆ ಕೂಗಿದರು. ಎಲ್ಲರೂ ಆತನಿಗೆ ಮುಬಾರಕ ಮಾತುಗಳನ್ನು ಹೇಳಿದರು. ಇತ್ತ ಇರಾನಿನ ಪಹಿಲವಾನನ್ನು ಅವನ ಶಿಷ್ಯರು ಹೊತ್ತುಕೊಂಡು ಹೋದರು

ಸುಲ್ತಾನನು ಯೂಸುಫನನ್ನು ತನ್ನ ಹತ್ತಿರ ಕರೆದು, ಅವನ್ನು ಸತ್ಕರಿಸುತ್ತ ವಸ್ತ್ರ ಮತ್ತು ಅಗಣಿತ ದ್ರವ್ಯವನ್ನು ಕೊಟ್ಟನು. ಬಾದಶಹನ ಸಮ್ಮಾನದ ನಂತರ ಅಲ್ಲಿ ಕುಳಿತಂಥ ಎಲ್ಲ ಸರದಾರರು ಅಮೀರರು ತಂತಮ್ಮ ಯೋಗ್ಯತಾನುಸಾರ ಯೂಸುಫನನ್ನು ಸತ್ಕರಿಸಿದರು. ಆಗ ಬಾದಶಹನು ಗೋಗಿ ಮತ್ತು ಸುತ್ತಲಿನ ಐದು ಹಳ್ಳಿಗಳ ಇನಾಮನ್ನು ಹಾಕಿ ಕೊಟ್ಟನು ಮತ್ತು ಆತನನ್ನು ತನ್ನ ಖಾಸಾ ಸುರಕ್ಷಾ ಬಲದಲ್ಲಿ ಸೇರಿಸಿಕೊಂಡನು.

ಕೆಲವು ದಿನಗಳ ನಂತರ ಯೂಸುಫನು ನಗರದ ಕೊತವಾಲನಾಗಿ ಬಢತಿಯನ್ನು ಪಡೆದನು. ಅನಂತರ ಹವಾಲದಾರನಾದನು. ಈ ದಿನಗಳಲ್ಲಿಯೇ ತೆಲಂಗಾಣದಲ್ಲಿ ದಂಗೆ ಎದ್ದಿತು. ಅದನ್ನು ಹತ್ತಿಕ್ಕಲು ಸುಲ್ತಾನನು ಯೂಸುಫನನ್ನು ಕರೆದು ಅವನಿಗೆ ಮಲಿಕ್ಕುಶರ್ಕ [ಪೂರ್ವದ ಅಧಿಪತಿ] ಎಂದು ಬಿರುದನ್ನು ಕೊಟ್ಟು ಸೈನ್ಯದೊಂದಿಗೆ ತೆಲಂಗಾಣಕ್ಕೆ ಕಳಿಸಿದನು. ಯೂಸುಫನು ಅಲ್ಲಿ ಹೋಗಿ ಎಲ್ಲ ಬಂಡುಖೋರರನ್ನು ಹತ್ತಿಕ್ಕಿ, ಅವರನ್ನು ಬಂಧಿಸಿ ಶಿಕ್ಷೆ ಕೊಟ್ಟು ಅಲ್ಲಿ ಶಾಂತಿಯನ್ನು ಸ್ಥಾಪಿಸಿದನು. ಬಾದಶಹನಿಗೆ ಸುದ್ದಿಯನ್ನು ತಿಳಿಸುತ್ತ ಅನೇಕ ಬಗೆಯ ಕಾಣಿಕೆಗಳನ್ನು ಕಳಿಸಿದನು ಮತ್ತು ಯೂಸುಫನು ಅಲ್ಲಿಯೇ ಕೆಲವು ದಿನ ಉಳಿದುಕೊಂಡನು. ಅನಂತರ ಕೆಲವು ದಿನಗಳ ಮೇಲೆ ಯೂಸುಫನು ರಾಜಧಾನಿ ಬೀದರಿಗ ಬಂದಾಗ ಆತನನ್ನು ಬಾದಶಹನು ಅವನ ಗುರುವಾದ ಹುಸೇನ ಆಕಾನ ಜೊತೆಗೆ ನಗರದ ಹೊರಗೆ ಶಾಹ ನೇಮತುಲ್ಲಾ ದರ್ಗಾದ ವರೆಗೆ ಬಂದು ತನ್ನ ಕುದುರೆಯಿಂದ ಇಳಿದು ಯೂಸೂಫನನ್ನು ಆಲಂಗಿಸಿಕೊಂಡು ಸ್ವಾಗತಿಸಿದನು, ಅವನಿಗೆ

ಕನಕರ್ತಿ, ಕಲ್ಯಾಣದಿಂದ ಹಿಡಿದು ಮಂಜಾನ, ಗೋವಾ, ಕುಂಚಿ, ಕಾಳಹಸ್ತಿ ಮೊದಲಾದ ಪ್ರದೇಶಗಳನ್ನು ಅವನ ವಶಕ್ಕೆ ಕೊಟ್ಟನು ಮತ್ತು ಹಳೆಯ ರಾಜಧಾನಿಯಾದ ಮಂಗಳವೇಢೆಯನ್ನು ಅವನಿಗೆ ಜಹಗೀರು ಹಾಕಿ ಕೊಟ್ಟನು. ಹೀಗಾಗಿ ಯೂಸೂಫನ ತಾರಾಬಲವು ದಿನದಿಂದ ದಿನಕ್ಕೆ ಬೆಳೆಯುತ್ತ ಹೋಯಿತು. ಬಹಮನಿ ರಾಜ್ಯದಲ್ಲಿಯೇ ಅತ್ಯಂತ ಶ್ರೇಷ್ಠ ಅಮೀರನಾದನು.

ಸುಲ್ತಾನ ಮಹಮ್ಮದ ಬಹಮನಿಯು ತೀರಿಕೊಂಡ ನಂತರ ಯೂಸುಫನು ಬಹಮನಿ ರಾಜ್ಯದಲ್ಲಿಯ ಎಲ್ಲ ವಿದೇಶಿ ಸರದಾರರ ಮನಸ್ಸನ್ನು ಗೆದ್ದು ಅವರನ್ನು ತನ್ನ ಹತ್ತಿರ ತೆಗೆದುಕೊಂಡನು. ಬಿಜಾಪುರದಲ್ಲಿ ಯೂಸೂಪ ಆದಿಲಖಾನನು ತನ್ನ ಹೆಸರಿನ ಖುತಬಾವನ್ನು ಓದಿಸಿ, ತನ್ನ ಮೋಹರನ್ನು ಚಲಾಯಿಸಿ ಯೂಸುಫ ಆದಿಲಶಾಹನಾದನು ಮತ್ತು ತನ್ನದೇ ಆದ ರಾಜ್ಯವನ್ನು ಸ್ಥಾಪಿಸಿದನು.

ಯೂಸುಫ ಬೇಗನಿಗೆ ಸಾವೀ ಎಂದು ಅನ್ನುತ್ತಾರೆ. ಅದಕ್ಕೆ ಕಾರಣವೆಂದರೆ, ಅವನು ಕೆಲವು ಕಾಲ ಸಾವಾ ನಗರದಲ್ಲಿ ಇದ್ದನು. ಇದಕ್ಕೆ ಇನ್ನೂ ಒಂದು ಅರ್ಥವಿದೆ. ದಖಣಿ ಭಾಷೆಯಲ್ಲಿ ಅವನಿಗೆ ಯೂಸುಫ ಸವಾಯಿ ಎಂದೂ ಅನ್ನುತ್ತಿದ್ದರು. ಯಕೆಂದರೆ ಎಲ್ಲರೂ ಒಂದು ಸಂಖ್ಯೆಗೆ ಸಮನಾಗಿದ್ದರೆ ಯೂಸುಫನು ಒಂದು ಮತ್ತು ಒಂದರ ಕಾಲು ಭಾಗ ಅಧಿಕವಾಗಿದ್ದನು. ವಿಶೇಷವಾಗಿ ಶಕ್ತಿಯಲ್ಲಿ, ಯೋಗ್ಯತೆಯಲ್ಲಿ ಒಂದೂಕಾಲು ಭಾಗದಷ್ಟಿದ್ದನು ಮತ್ತು ತಾನು ಸ್ಥಾಪಿಸಿದ ರಾಜ್ಯದ ಪ್ರದೇಶವೂ ಅಂದಿನ ದಿನಗಳಲ್ಲಿ ಇನ್ನೊಬ್ಬರ ರಾಜ್ಯಗಳಿಗಿಂತ ಕಾಲು ಭಾಗ ಅಧಿಕವಾಗಿತ್ತು. ಈ ಎಲ್ಲ ಕಾರಣಗಳಿಂದಾಗಿ ಯೂಸುಫನಿಗೆ ಸವಾಯಿ ಎಂದು ಕರೆಯುತ್ತಿದ್ದರು.

ಯೂಸುಫ ಆದಿಲಶಾಹನು ಬಿಜಾಪುರದಲ್ಲಿ ರಾಜ್ಯವನ್ನು ಆಳುತ್ತಿರುವಾಗ ಅಹಸನಾಬಾದನಲ್ಲಿ ಶೇಖ ಸಿರಾಜುದ್ದೀನ ಜುನ್ಯೆದಿ ಅವರ ಸಮಾಧಿಯನ್ನು ಕಟ್ಟಿಸಿ ಅದರ ಮೇಲೆ ಮೀನಾರವನ್ನು ಹಿಜರಿ ಶಕ ೯೧೬ರಲ್ಲಿ. (ಕ್ರಿ. ಶ. ೧೫೧೦)ರಲ್ಲಿ ಕಟ್ಟಿಸಿದನು. ಇದರಂತೆ ಬಿಜಾಪುರದಲ್ಲಿ ಅರ್ಕಕಿಲ್ಲಾವನ್ನು ಹಿಜರಿ ಶಕ ೯೧೭ರಲ್ಲಿ (ಕ್ರಿ. ಶ. ೧೫೧೧)ದಲ್ಲಿ ಕಟ್ಟಿಸಿದನು. ಮತ್ತು ತೊರವಿಯಿಂದ ಕಾಲುವೆ ಮೂಲಕ ಇದೇವರುಷ ಅರ್ಕಕಿಲ್ಲೆಯಲ್ಲಿ ನಿರನ್ನು ತಂದನು. ಹಿಜರಿ ಶಕ ೯೯೯ರಲ್ಲಿ (ಕ್ರಿ. ಶ. ೧೫೧೩)ದಲ್ಲಿ ಫತೇಪುರ ಹಳ್ಳಿಯ ಶಂಕುಸ್ಥಾಪನೆಯನ್ನು ಮಾಡಿದನು. ಯೂಸುಫನ ಕಾಲದಲ್ಲಿಯೇ ಕೋಟೆಯ ಹೆಸರನ್ನು ಬಿಜಾಪುರ ಎಂದು ಕರೆಯಲಾಯಿತು. ಇದೇ ಸಮಯದಲ್ಲಿ ಬಿಜಾಪುರದ ಸುತ್ತಮುತ್ತಲಿನ ಪ್ರತಿಯೊಂದು ಹಳ್ಳಿಯಲ್ಲಿ ಒಂದು ಮಸೀದಿ ಮತ್ತು ಮಸೀದಿಯ ಆವರಣದಲ್ಲಿ ಒಂದು ನೀರಿನ ಕೊಳವನ್ನು ನಿರ್ಮಿಸಿದನು. ಎರಡನೆಯ ಇಬ್ರಾಹಿಮ ಆದಿಲಶಾಹನ ಕಾಲದಲ್ಲಿ ಬಿಜಾಪುರ ಶಹರದ ಹೆಸರು ವಿದ್ಯಾಪುರ ಎಂದಾಯಿತು. ಸುಲ್ತಾಮ ಮಹಮ್ಮದ ಆದಿಲಶಹನ ಕಾಲದಲ್ಲಿ ಇದಕ್ಕೆ ಮಹಮ್ಮದಪುರ ಎಂದು ಹೆಸರನ್ನಿಡಲಾಯಿತು. ಯೂಸುಫ ಆದಿಲಶಹನು ಹಿಜರಿ ಶಕ ೯೧೮ದಲ್ಲಿ

[ಇಲ್ಲಿಂದ ಕೆಲವು ಪುಟಗಳು ದೊರೆತಿಲ್ಲ. ಒಮ್ಮೆಲೆ ಇಸ್ಮಾಯಿಲ್ ಆದಿಲಶಾಹನ ಕಾಲದ ಘಟನೆಗಳ ವಿವರ ಶುರು ಆಗುತ್ತದೆ. ಮೊದಲನೆಯ ಅಧ್ಯಾಯದ ಕೊನೆಯ ಪುಟಗಳು ಮತ್ತು ೨ನೆಯ ಅಧ್ಯಾಯದ ಪ್ರಾರಂಭದ ಪುಟಗಳು ಇಲ್ಲ]

*

ಅಧ್ಯಾಯ - ೨

ಇಸ್ಮಾಯಿಲ ಬಿನ್ ಯೂಸುಫ ಆದಿಲಶಾಹ

[ಮೊದಲಿನ ಕೆಲವು ಪುಟಗಳಿಲ್ಲ]

ಪರಗಣೆಗಳು ಹಳ್ಳಿಗಳ ಮೇಲೆ ಯಾವುದೇ ತೊಂದರೆ ಕೊಡದಂತೆ ನಾವು ನೀವು ಒಂದಾಗಿ ಪರಸ್ಪರ ಸಹಾಯ ಮಾಡುತ್ತ ಇರೋಣ ಎಂದು ಸದರೀ ತಾರೀಖಿನಿಂದ ಗೋವೆ ಬಂದರವನ್ನು ಕ್ರಿಶ್ಚಿಯನ್ [ಪೋರ್ತುಗೀಜರಿಗೆ] ಜನರಿಗೆ ಕೊಟ್ಟನು. ಆದರೆ ಅವನಿಗೆ ಮುಂದೆ ಎಂದೂ ಮುಸಲ್ಮಾನ ಜನರು ಗೋವೆ ಬಂದರವನ್ನು ಪಡೆಯಲಾಗಲಿಲ್ಲ. ಇದೇ ವರುಷದಲ್ಲಿ ರಾಜ್ಯದ ಮಂತ್ರಿಗಳು ಮತ್ತು ಸಿಪೇಹ ಸಾಲಾರರ ವಿವರ ಹೀಗಿದೆ: ಇಸ್ಕಂದರ ಆಕಾ, ಫತಹ ಆಕಾ, ಬಹರೀ ಆಕಾ, ಹೈದರ ಆಕಾ, ಮನ್ಸೂರ ಆಕಾ ತೆಹರಾನೀ, ಫತುಲ್ಲಾ, ಇಮಾದುಲ್ ಮುಲ್ಕ ಮತ್ತು ಚಾಂದಖಾನರಿದ್ದರು. ಬಿಜಾಪುರದ ಹವಾಲ್ದಾರನಾಗಿ ಜಮಾಲಖಾನನಿದ್ದನು. ಸರನೋಬತ ಎಂದು ಯೂಸುಫ ಕೋಚಕ ಮತ್ತು ಚಾಂದ ಮಿಯಾರಿದ್ದರು. ಕಾಲ್ದಳ ೧,೦೪,೦೦೦, ಆನೆಗಳು ೧೧೬ ಅಸದಖಾನ ಲ್ಯಾರಿಯು ಬೆಳಗಾವಿಯಲ್ಲಿದ್ದನು. ಹಿಜರಿ ಶಕ ೯೨೬ದಲ್ಲಿ (ಕ್ರಿ. ಶ. ೧೫೧೯)ದಲ್ಲಿ ಚಂದಾಪೂರ ಎಂಬ ಹಳ್ಳಿಯನ್ನು ಕಟ್ಟಿದನು. ಹಿಜರಿ ಶಕ ೯೨೭ದಲ್ಲಿ, (ಕ್ರಿ. ಶ. ೧೫೨೦)ದಲ್ಲಿ ಕಿಲ್ಲೆ ಮುದಗಲ್.ಕೋಟೆಯನ್ನು ಯುದ್ಧವಾಡಿ ಗೆದ್ದನು. ಮುದಗಲ್ ಕೋಟೆಯ ಮೇಲೆ ಇನ್ನೊಂದು ಕೋಟೆ ಗೋಡೆಯನ್ನು ಕಟ್ಟಿಸಿದನು. ಅದನ್ನು ಕಟ್ಟಿದ ದಿನ, ಹಿಜರಿ ಶಕ ೯೨೭, (ಕ್ರಿ. ಶ. ೧೫೨೦) ಮತ್ತು ಇದೇ ದಿನಗಳಲ್ಲಿ ದೇವದುರ್ಗ ಕೋಟೆಯನ್ನು ಗೆದ್ದನು. ಹಿಜರಿ ಶಕ ೯೨೭ದಲ್ಲಿ (ಕ್ರಿ. ಶ. ೧೫೨೦)ದಲ್ಲಿ ಇಸ್ಮಾಯಿಲ್ ಆದಿಲಶಾಹನು ಬರೀದಿಯರ ಮೇಲೆ ಯುದ್ಧ ಮಾಡಿದನು. ರಾತ್ರಿಯ ಹೊತ್ತಿನಲ್ಲಿ ಆದಿಲಶಾಹಿ ಸೈನಿಕರು, ಪಲ್ಲಂಗದ ಮೇಲೆ ಮಲಗಿದ್ದ ಕಾಶೀಮ ಬರೀದನನ್ನು ಹಾಗೆಯೇ ಹೊತ್ತುಕೊಂಡು ತಮ್ಮ ಶಿಬಿರಕ್ಕೆ ತಂದರು. ಹಾಗೆ ಹೊತ್ತು ತರುವಾಗ ಇಸ್ಲಾಮ ಧರ್ಮದ ಶವಯಾತ್ರೆಯ ಶೋಕ ಗೀತೆಗಳನ್ನು ಹಾಡುತ್ತ ಬಂದರು. ಆದರೂ ಕಾಶಿಂ ಬರೀದನಿಗೆ ಎಚ್ಚರವಾಗಲಿಲ್ಲ.

ಕೊನೆಗೆ ಕಾಶೀಮ ಬರೀದನ ಪಲ್ಲಂಗವನ್ನು ಇಸ್ಮಾಯಿಲ್ ಆದಿಲಶಾಹನ ಡೇರೆಯ ಹತ್ತಿರ ತಂದು ಇಳಿಸಿ ಅವನನ್ನು ಬಂಧಿಸಿದರು. ಅವನಿಂದ ೧೭ ಲಕ್ಷ ಹೊನ್ನುಗಳನ್ನು ಪಡೆದು ಅವನನ್ನು ಬಿಟ್ಟರು. ಇದೇ ವರುಷ ಸುಲ್ತಾನ ಮಹಮೂದ ಬಹಮನಿಯು ತೀರಿಕೊಂಡನು. ಅವನ ವಂಶದಲ್ಲಿ ರಾಜ್ಯವಾಳುವಂಥವರು ಯಾರೂ ಇರಲಿಲ್ಲ. ಅದರಿಂದಾಗಿ ಅವನ ನೌಕರ ಚಾಕರರು ಬೀದರಿನ ಸಿಂಹಾಸನವನ್ನು ವಶಕ್ಕೆ ತೆಗೆದುಕೊಂಡರು ಮತ್ತು ಕೆಲವು ದಿನ ಹಾಗೆಯೇ ರಾಜ್ಯ ನಡೆಸಿದರು.

ಹಿಜರಿ ಶಕ ೯೨೭, (ಕ್ರಿ ಶ. ೧೫೨೦)ರಲ್ಲಿ ಇಸ್ಮಾಯಿಲ್ ಆದಿಲಶಹನು ಚಂಪಾ ಮಹಲನ್ನು ಕಟ್ಟಿಸಿದನು. ಅದೇ ವರುಷ ಉದ್ಗೀರ ಜಿಲ್ಲೆಯಲ್ಲಿ ಇಸ್ಮಾಯಿಲ್ ಆದಿಲಶಾಹ ಮತ್ತು ಕುತುಬುಲ್ ಮಲಿಕ್ ಶಾಹ ಮಧ್ಯ ಯುದ್ಧವಾಯಿತು. ಅದೇ ಆ ವರುಷ ರಾಯಚೂರು ಕೋಟೆಯು ಇಸ್ಮಾಯಿಲ್ ಆದಿಲಶಹನ ಕೈವಶವಾಯಿತು. ವರುಷ ಜಮಖಂಡಿ ದೇಸಾಯಿಯು ಇಸ್ಮಾಯಿಲ್ ಆದಿಲಶಹನ ಜೊತೆಗೆ ಯುದ್ಧ ಮಾಡಿದನು. ಮುದಗಲ್ ಪ್ರದೇಶದಲ್ಲಿ ಎದ್ದ ದಂಗೆಯನ್ನು ಹತ್ತಿಕ್ಕಲು ಇಸ್ಮಾಯಿಲ್ ಆದಿಲ್ ಶಹನು ಖುದ್ದಾಗಿ ಹೋದನು. ಈ ಮೊದಲು ಅವನಿಗೆ ಒಂದು ಗಾಯವಾಗಿತ್ತು. ಅದು ಮಾಯವಾಗಿತ್ತು. ಆದರೆ ಅದೇ ಗಾಯ ಮುದಗಲ್ ಯುದ್ಧದ ಸಮಯದಲ್ಲಿ ಮರುಕಳಿಸಿತು. ದುರ್ದೈವವೆಂದರೆ ಇಸ್ಮಾಯಿಲ್ ಆದಿಲಶಾಹನ ದೈವದಲ್ಲಿ ಜೀವನವನ್ನು ಭೋಗಿಸುವ ಭಾಗ್ಯವಿರಲಿಲ್ಲ. ಕೇವಲ ಐದು ವರುಷ ರಾಜ್ಯವಾಳಿ ಇದೇ ಹಳೆಯ ಗಾಯದಿಂದಾಗಿ ಸಫರ ತಿಂಗಳ ೧೬ನೆಯ ದಿನ ಬುಧವಾರ ಬೆಳಿಗ್ಗೆ ತೀರಿಕೊಂಡನು. ಪ್ರಧಾನ ಮಂತ್ರಿಯಾಗಿದ್ದ ಅಸದಖಾನನು ಇಸ್ಮಾಯಿಲನ ಮರಣದ ಸುದ್ದಿಯನ್ನು ರಹಸ್ಯವಾಗಿಟ್ಟು ರಾತ್ರೋ ರಾತ್ರಿ ಶವವನ್ನು ಗೋಗಿ ಶಹರಕ್ಕೆ ಕಳಿಸಿದನು. ಅವನ ತಂದೆಯ ಸಮಾಧಿಯ ಹತ್ತಿರವೇ ಅವನ ಸಮಾಧಿಯನ್ನು ಮಾಡಲಾಯಿತು. ಆಗ ಅವನಿಗೆ ೩೦ ವರುಷ ವಯಸ್ಸು. ಅವನಿಗೆ ಇಬ್ಬರು ಗಂಡು ಮಕ್ಕಳಿದ್ದರು. ಒಬ್ಬನ ಹೆಸರು ಇಬ್ರಾಹಿಮ ಇನ್ನೊಬ್ಬನ ಹೆಸರು ಅಲಿ ಎಂದಾಗಿತ್ತು.

■

*

ಅಧ್ಯಾಯ – ೩

ಇಬ್ರಾಹಿಮ ಆದಿಲಶಾಹ ಬಿನ್ ಇಸ್ಮಾಯಿಲ ಆದಿಲಶಾಹ ಬಿನ್ ಯೂಸುಫ ಆದಿಲಶಾಹ

ಎಲ್ಲರಿಗೂ ಗೊತ್ತಿರುವಂತೆ ಇಬ್ರಾಹಿಮ ಆದಿಲಶಾಹನು ಸಿಂಹಾಸನದ ಮೇಲೆ ಕುಳಿತಾಗ ೧೫ ವರುಷದವನಿದ್ದನು. ಹಿಜರಿ ಶಕ ೯೩೧, (ಕ್ರಿ ಶ ೧೫೨೪)ರಲ್ಲಿ ದರಬಾರದ ಜನರು ಇಬ್ರಾಹಿಮನಿಗೆ ಗೋಗಿಯಲ್ಲಿಯೇ ಪಟ್ಟಾಭಿಷೇಕ ಮಾಡಿದರು. ಇಬ್ರಾಹಿಮ ಆದಿಲಶಾಹನಿಗೆ ಪಟ್ಟಾಭಿಷೇಕವಾದಾಗ ಅವನ ಸಹೋದರ, ಅಲಿಯು ಖ್ವಾಜಾ ಮೀರ ಎಂಬವನ ಜೊತೆಗೆ ಗೋವಾಕ್ಕೆ ಓಡಿ ಹೊದನು. ಅಲ್ಲಿನ ಮುಖ್ಯಸ್ಥನನ್ನು ಕಂಡು, ಆದಿಲಶಾಹೀ ರಾಜ್ಯಕ್ಕೆ ನಾನು ಹಕ್ಕುದಾರನು. ಸಿಂಹಾಸನದ ಮೇಲೆ ಮತ್ತೊಬ್ಬನನ್ನು ಕುಳ್ಳಿರಿಸಿ ನನ್ನ ಹಕ್ಕನ್ನು ಕಸಿದುಕೊಂಡಿದ್ದಾರೆ. ಆದ್ದರಿಂದ ನಾನು ಓಡಿ ಬಂದಿದ್ದೇನೆ ಮತ್ತು ಪೋರ್ತುಗಾಲದ ರಾಜನಿಗೆ ಶರಣು ಬಂದಿದ್ದೇನೆ. ನನಗೆ ನನ್ನ ಆದಿಲಶಾಹೀ ರಾಜ್ಯದ ಬಾದಶಾಹೀ ಹಕ್ಕನ್ನು ನನಗೆ ಮರಳಿ ಕೊಡಿಸಬೇಕೆಂದು ಬಿನ್ನವಿಸಿಕೊಳ್ಳುತ್ತೇನೆ ಎಂದು ಹೇಳಿದನು. ನನಗೆ ನ್ಯಾಯ ಕೊಡಿಸುವುದರಿಂದ ನಿಮ್ಮ ಹೆಸರು ಜಗತ್ತಿನಲ್ಲೇ ಎತ್ತರಕ್ಕೆ ಹೋಗುತ್ತದೆ ಎಂದೂ ಹೇಳಿದನು.

ಇದನ್ನು ಕೇಳಿದ ಪೋರ್ತುಗೀಜ ಮುಖ್ಯಸ್ಥನು ತನ್ನ ೮೦ ಸಾವಿರ ಸೈನ್ಯವನ್ನು ಕೂಡಿಸಿದನು. ಅಲಿಗೆ ಅವನ ಹಕ್ಕಾದ ಆದಿಲಶಾಹೀ ರಾಜ್ಯವನ್ನು ಕೊಡಿಸುವ ನೆಪದಿಂದ ದಾರಿಯಲ್ಲಿ ದೊರೆಯುವ ಆದೀಲಶಾಹೀ ಪ್ರದೇಶಗಳನ್ನೆಲ್ಲ ಗೆದ್ದು ಪೋರ್ತುಗೀಜ ರಾಜ್ಯಕ್ಕೆ ಸೇರಿಸಿಕೊಳ್ಳಿರಿ ಎಂದು ಆದೇಶ ಮಾಡಿದನು. ಹಿಜರಿ ಶಕ ೯೩೧, (ಕ್ರಿ. ಶ. ೧೫೨೪)ರಲ್ಲಿ ಗೋವೆಯಿಂದ ಬಂದ ಪೋರ್ತುಗೀಜ ಸೈನ್ಯವು ಮುರ್ತಜಾಬಾದ [ಮಿರಜ] ವರೆಗಿನ ಪ್ರದೇಶವನ್ನು ತಮ್ಮ ವಶಕ್ಕೆ ತೆಗೆದುಕೊಂಡಿತು. ಈ ಸುದ್ದಿಯು ಸಿಕಂದರಖಾನ ಊರ್ಫ ಅಸದಖಾನ ಲ್ಯಾರಿಗೆ ಮುಟ್ಟುತ್ತಿದ್ದಂತೆ ಅವನು ಪೋರ್ತುಗೀಜರೊಂದಿಗೆ ಯುದ್ಧ

ಮಾಡಿದನು. ಗೆಲುವು ಸಾಧಿಸದಿದ್ದಾಗ ಕೊನೆಗೆ ಒಪ್ಪಂದಕ್ಕೆ ಬರಲು ಪ್ರಯತ್ನ ಮಾಡಿದನು. ಒಪ್ಪಂದಕ್ಕಾಗಿ ತನ್ನ ಸಹೋದರ ಜಾಹಿದಬೇಗ ಊರ್ಫ ಕಿಶ್ವರಖಾನ ಲ್ಯಾರಿಯನ್ನು ಒಂದು ದೊಡ್ಡ ಸೈನ್ಯದೊಂದಿಗೆ ಗೋವೆಯತ್ತ ಕಳಿಸಿದನು. ಅವನ ಜೊತೆಗೆ ಬಾದಶಾಹೀ ದರಬಾರದ ಕೆಲವು ಹಿರಿಯ ಮುತ್ಸದ್ದಿಗಳನ್ನೂ ಕಳಿಸಿ ಕೊಟ್ಟನು.

ಹಿಜರಿ ಶಕ ೯೩೨, (ಕ್ರಿ.ಶ. ೧೫೨೬)ರಲ್ಲಿ ಅವರು ಪೋರ್ತುಗಾಲಕ್ಕೆ ಮುಟ್ಟಿದರು. [ಗೋವಾ] ಕಿಶ್ವರಖಾನ ಲ್ಯಾರಿಯು ಗೋವಾ ಬಂದರದ ಸಮೀಪ ಮುಟ್ಟುತ್ತಿದ್ದಂತೆ ಅಲ್ಲಿನ ಪೋರ್ತುಗೀಜ ಬಾದಶಹನಿಗೆ ತಾನು ಒಪ್ಪಂದಕ್ಕೆ ಬಂದಿರುವೆನೆಂದು ಹೇಳಿ ಕಳಿಸಿದನು. ಆಗ ಪೋರ್ತುಗಾಲ ಬಾದಶಹನು ಯೋಚಿಸಿ ಆದಿಲಶಾಹೀ ಸರದಾರನ ಬುದ್ಧಿಮತ್ತೆ ಎಷ್ಟಿದೆ ಎಂಬುದನ್ನು ನೋಡೋಣ ಎಂದು, ಎಲ್ಲರೂ ಒಂದೇ ಬಣ್ಣ ಮತ್ತು ಒಂದೇ ತರದ ವೇಷ ಧರಿಸಿ ಬರಲು ತನ್ನ ಖಾಸಾ ದರಬಾರಿಯ ೧೭೦ ಜನರಿಗೆ ಆದೇಶ ಮಾಡಿದನು. ಜೊತೆಗೆ ತಾನೂ ಅಂಥದೇ ವೇಷವನ್ನು ಧರಿಸಿ ಅವರೊಂದಿಗೆ ಒಂದು ದೊಡ್ಡ ಡೇರೇದಲ್ಲಿ ಬಂದು ಕುಳಿತುಕೊಂಡನು. ಇದರ ಉದ್ದೇಶವೆಂದರೆ ಕಿಶ್ವರಖಾನನು ಪೋರ್ತುಗಾಲ ಬಾದಶಹ ಯಾರು ಎಂಬುದನ್ನು ಪತ್ತೆ ಹಚ್ಚಬೇಕೆಂಬುದೇ ಆಗಿತ್ತು.

ಕಿಶ್ವರಖಾನನಿಗೆ ಬರಲು ಹೇಳಿ ಕಳಿಸಿದನು. ಜಾಹಿದಖಾನ ಊರ್ಫ ಕಿಶ್ವರಖಾನನು ಕೂಡ ತನ್ನ ಕಡೆಯಿಂದ ಒಳ್ಳೆಯ ಕಿಮ್ಮತ್ತಿನ ವಸ್ತ್ರಗಳನ್ನು ಧರಿಸಿ ಪೋರ್ತುಗಾಲ ಬಾದಶಹನ ಭೆಟ್ಟಿಗೆ ಬಂದನು. ಅವನು ಡೇರೆಯಲ್ಲಿ ಒಳಗೆ ಹೋಗುತ್ತಿದ್ದಂತೆ ಒಂದೇ ತರದ ವೇಷದಲ್ಲಿ ಕುಳಿತ ಎಲ್ಲರನ್ನೂ ನೋಡಿ ಕ್ಷಣ ಹೊತ್ತು ಚಕಿತನಾದನು. ಕೆಲವು ಹೊತ್ತು ಯೊಚಿಸಿ ಕೊನೆಗೆ ಪೋರ್ತುಗೀಜರ ನಿಜವಾದ [ಅಸಲೀ] ಬಾದಶಹನ ಹತ್ತಿರ ಹೋಗಿ ಅವನಿಗೆ ಸಲಾಮು ಮಾಡಿ ಅವನ ಹತ್ತಿರ ಹೋಗಿ ಕುಳಿತುಕೊಂಡನು. ಪೋರ್ತುಗೀಜ ಬಾದಶಹನು ಅವನ ಜಾಣತನ ಮತ್ತು ಬುದ್ಧಿಮತ್ತೆಯನ್ನು ಕಂಡು ಮೆಚ್ಚಿಕೊಂಡನು. ಸಂತುಷ್ಟನಾಗಿ ಎದ್ದು ನಿಂತು ಅವನನ್ನು ಅಪ್ಪಿಕೊಂಡನು ಮತ್ತು ತನ್ನ ಹತ್ತಿರವೇ ಕುಳ್ಳಿರಿಸಿಕೊಂಡನು.

ನಂತರ ಗೊವಾದ ಹವಾಲ್ದಾರನಿಗೆ, ಜಾಹೀದ ಬೇಗ ಊರ್ಫ ಕಿಶ್ವರಖಾನನು ಹೇಳಿದಂತೆ ಒಪ್ಪಂದದ ಸೂತ್ರಗಳನ್ನು ಸಿದ್ಧ ಪಡಿಸಬೇಕೆಂದು ಆದೇಶ ಮಾಡಿದನು. ಅದರಂತೆ ಪರಸ್ಪರ ಒಪ್ಪಂದಕ್ಕೆ ಬಂದರು. ಒಪ್ಪಂದದ ಪ್ರಕಾರ ಶಾಸೆಬ [ಸಾಲಸೆಟ್ಟಿ] ಮತ್ತು ಬಾರ್ಡೆಜ ಎರಡು ಬಂದರಗಳನ್ನು ಪೋರ್ತುಗೀಜರಿಗೆ ಕೊಟ್ಟು ಉಳಿದ ಪೋರ್ತುಗೀಜ ಆಕ್ರಮಿತ ಪ್ರದೇಶವನ್ನು ಆದಿಲಶಾಹಿಗಳ ವಶಕ್ಕೆ ಬಿಟ್ಟು ಕೊಡಲಾಯಿತು. ಈ ಒಪ್ಪಂದದಿಂದ ಇಬ್ರಾಹಿಮ ಆದಿಲಶಾಹನ ಶಕ್ತಿ ಸಾಮರ್ಥ್ಯಗಳು ಅಧಿಕವಾದುವು. ಸಿಕಂದರ ಊರ್ಫ ಅಸದಖಾನನ ಬುದ್ಧಿಮತ್ತೆಯನ್ನು ಕಂಡು ಇಬ್ರಾಹಿಮ ಆದಿಲಶಹನು ಬಹಳ ಸಂತೋಷ ಪಟ್ಟನು ಮತ್ತು ಅವನಿಗೆ ತುಂಬ ಗೌರವ ಸಲ್ಲಿಸಿದನು. ಅವನಿಗೆ ಅಸದಖಾನ ಎಂಬ ಬಿರುದನ್ನು ಕೊಟ್ಟನು. ತನ್ನನ್ನು ಅಸದಖಾನನ ಕುಟುಂಬದಲ್ಲಿ ಒಬ್ಬನಾಗಿ ಪರಿಗಣಿಸಿ ಅವನ ಮಗಳನ್ನು ಮದುವೆಯಾದನು. ಸಾರ್ವಜನಿಕವಾಗಿ

ಅಸದಖಾನನು ತನಗೆ ಮಾಡಿದ ಉಪಕಾರವನ್ನು ಸ್ಮರಿಸಿ ಬಹಿರಂಗವಾಗಿ ಹೇಳಿದನು. ಅಸದಖಾನನಿಂದ ನಾನು ಈ ಸಿಂಹಾಸನದ ಮೇಲೆ ಕುಳಿತುಕೊಂಡಿರುವೆ. ಅವನ ಉಪಕಾರ ನನ್ನ ಮೇಲೆ ಬಹಳಷ್ಟಾಗಿದೆ. ಮತ್ತು ಅವನ ಋಣವನ್ನು ತೀರಿಸುವುದು ನನ್ನಿಂದ ಸಾಧ್ಯವಿಲ್ಲ. ಆದರೂ ಈ ಸಂದರ್ಭದಲ್ಲಿ ನನ್ನ ಹೆಂಡತಿಯಾದ ಅಸದಖಾನನ ಮಗಳ ಹೊಟ್ಟೆಯಿಂದ ಹುಟ್ಟಿದ ಮಗುವನ್ನೇ ಆದಿಶಾಹೀ ರಾಜ್ಯದ ಉತ್ತರಾಧಿಕಾರಿಯನ್ನಾಗಿ ಮಾಡುವೆನೆಂದು ಇಂದು ಸಾರ್ವಜನಿಕವಾಗಿ ಪ್ರತಿಜ್ಞೆಯನ್ನು ಮಾಡುವೆನು, ಯಾಕೆಂದರೆ ನನ್ನ ಸಲುವಾಗಿ ಅವನಷ್ಟು ಪ್ರಯತ್ನವನ್ನು ಯಾರೂ ಮಾಡಿಲ್ಲ ಎಂದು ಹೇಳಿದನು.

ಬಿಜಾಪುರದಲ್ಲಿ ಜಮಾಲಖಾನನೆಂಬ ಒಬ್ಬ ಹವಾಲದಾರನು ಇದ್ದನು. ಅವನು ಫತೇಖಾನನ ಮಗನಾಗಿದ್ದನು. ಈ ಫತೇಖಾನನನ್ನು ಜನರು ಮುನ್ನಾಖಾನನೆಂದು ಕರೆಯುತ್ತಿದ್ದರು. ಈತನನ್ನು ಯೂಸುಫ ಆದಿಲಶಹನು ತನ್ನ ದತ್ತಕ ಮಗನನ್ನಾಗಿ ಮಾಡಿ ಕೊಂಡಿದ್ದನು. ಅವನಿಗ ಇನ್ನೊಬ್ಬ ಮಗನಿದ್ದನು ಅವನ ಹೆಸರು ಅಲೀಖಾನ ಎಂದಾಗಿತ್ತು. ಜನರು ಅವನನ್ನು ಉಲ್ಲೂಖಾನ, ಮಲ್ಲೂಖಾನ ಎಂದು ಕರೆಯುತ್ತಿದ್ದರು.

[ಗೋಗಿಯಲ್ಲಿ ಇಬ್ರಾಹಿಮನ ಪಟ್ಟಾಭಿಷೇಕ ಆದಾಗ] ಇತ್ತ ಬಿಜಾಪುರದಲ್ಲಿ ಜಮಾಲಖಾನನು ತನ್ನ ಮಗ ಮಲ್ಲೂಖಾನನನ್ನು ಬಿಜಾಪುರದ ಸಿಂಹಾಸನದ ಮೇಲೆ ಕುಳ್ಳಿರಿಸಿದ್ದನು. ಗುಪ್ತಚಾರರು ಈ ವಿಷಯವನ್ನು ಸಿಕಂದರಖಾನ ಉರುಫ್ ಅಸದಖಾನನಿಗೆ ಮುಟ್ಟಿಸಿದರು. ಆಗ ಅಸದಖಾನನು ಇದಕ್ಕಾಗಿ ಒಂದು ರಣನೀತಿಯನ್ನು ರಚಿಸಿದನು. ಅದರಂತೆ ಬಿಜಾಪುರದ ಸರನೋಬತ ಅಮೀರ ಯೂಸುಫ ಕೋಚಕನು ಪರಗಣಾ ಮಾಹಿಮದಲ್ಲಿದ್ದನು. ಒಬ್ಬ ಗುಪ್ತಚರನನ್ನು ಅವನ ಹತ್ತಿರ ಕಳಿಸಿ, ಮಲ್ಲೂಖಾನನ್ನು ಸಿಂಹಾಸನದ ಮೇಲೆ ಕುಳ್ಳಿರಿಸಿದ್ದರಿಂದ ನಾನು ನಿನ್ನ ಮೇಲೆ ಸಿಟ್ಟು ಮಾಡಿಕೊಳ್ಳುತ್ತೇನೆ. ಅದನ್ನು ಕಂಡು ನೀನು ಜಮಾಲಖಾನನ ಹತ್ತಿರ ಓಡಿ ಹೋಗಿ ಅವನ ಆಶ್ರಯವನ್ನು ಪಡೆಯಬೇಕು ಮತ್ತು ಅವರೆಲ್ಲರನ್ನೂ ಒಂದೆಡೆ ಕೂಡುವಂತೆ ಮಾಡಬೇಕು ಮುಂದಿನ ವಿಷಯವನ್ನು ಆಮೇಲೆ ಹೇಳುತ್ತೇನೆ ಎಂದು ಹೇಳಿ ಕಳಿಸಿದನು. ಇದನ್ನು ಕೇಳಿದ ಯೂಸುಫ ಕೋಚಕನು ಜಮಾಲಖಾನನ ಹತ್ತಿರ ಹೋಗಲು ತನ್ನ ಕುದುರೆಯನ್ನು ಸಿದ್ಧಪಡಿಸಿದನು. ಆ ಸುದ್ದಿಯು ಅಸದಖಾನನಿಗೆ ಮುಟ್ಟಿತು. ಅದನ್ನು ಕೇಳಿದ ಅಸದಖಾನನು ಅವನನ್ನು ಹಿಡಿದು ಬಂಧಿಸಬೇಕು ಎಂದು ತನ್ನ ಜನರಿಗೆ ಆದೇಶಿಸಿದನು. ಆದರೆ ಯೂಸುಫ ಕೋಚಕನು ಅಸದಖಾನನ ಜನರ ಕೈಗೆ ಸಿಗದೆ ಮೂರು ಸಾವಿರ ಕುದುರೆ ಸವರರನ್ನು ಮತ್ತು ಎರಡು ಸಾವಿರ ಕಾಲ್ದಳ ಸೈನ್ಯವನ್ನು ತೆಗೆದುಕೊಂಡು ಜಮಾಲಖಾನನ ಹತ್ತಿರ ಬಿಜಾಪುರಕ್ಕೆ ಬಂದನು. ಜಮಾಲಖಾನನು ಯೂಸುಫ ಕೋಚಕನ ಹಳೆಯ ಸ್ನೇಹಿತನಾಗಿದ್ದನು. ಅವನಿಗೆ ಅಸದಖಾನನು ತನ್ನ ಮೇಲೆ ಸಿಟ್ಟಾದುದನ್ನು ಮತ್ತು ತನ್ನನ್ನು ಬಂಧಿಸಲು ಸೈನಿಕರನ್ನು ಕಳಿಸಿದ್ದನೆಂದು ಹೇಳಿದನು. ಆಗ ಜಮಾಲಖಾನನು ಅಸದಖಾನನ ಕೈಗೆ ಸಿಗದೆ ಇಲ್ಲಿ ಬಂದು ಒಳ್ಳೆಯದನ್ನೇ ಮಾಡಿದೆ ಎಂದು ಹೇಳಿ ಅವನನ್ನು ಕರೆದುಕೊಂಡು

ಹೋಗಿ ಬಾದಶಹನಿಗೆ [ಮಲ್ಲೂಖಾನ] ಭೆಟ್ಟಿ ಮಾಡಿಸಿದನು. ಬಾದಶಹನು ನಡೆದ ಸಂಗತಿಯನ್ನು ಕೇಳಿ ಅವನಿಗೆ ವಸ್ತ್ರ ಸಹಿತ ಮರ್ಯಾದೆ ಮಾಡಿ, ಅಧಿಕ ಸಂಬಳದಮೇಲೆ ಅವನನ್ನು ತನ್ನಲ್ಲೆ ನಿಯಮಿಸಿಕೊಂಡನು ಮತ್ತು ಅವನಿಗೆ ಇರಲು ಇಸ್ಮಾಯಿಲ ಆದಿಲಶಾಹನನ್ನು ಪೋಷಿಸಿದ, ಯೂಸುಫ ಆದಿಲಶಾಹನ ತಂಗಿಯ, ಹಳೆಯ ಹವೇಲಿಯನ್ನು ಕೊಟ್ಟರು. ಯೂಸುಫ ಕೋಚಕನು ಅಲ್ಲಿ ಕೆಲವು ದಿನ ಇದ್ದನು. ಆಮೇಲೆ ಒಂದು ದಿನ ಕಾರ್ಯಕ್ರಮವನ್ನು ಏರ್ಪಡಿಸಿ ಬಾದಶಹನ ಸಹಿತವಾಗಿ ದರಬಾರದ ಜನರಿಗೆ ಊಟಕ್ಕೆ ಬರಲು ಆಮಂತ್ರಣವನ್ನು ಕೊಟ್ಟನು. ಅವರೆಲ್ಲರೂ ಯೂಸುಫ ಕೋಚಕನ ಆಮಂತ್ರಣವನ್ನು ಮನ್ನಿಸಿ ಊಟಕ್ಕೆ ಬಂದರು.

ಅವರು ಬಂದಾಗ ಅವರಿಗೆ ನೀರು ಕೊಡಲು, ಊಟಕ್ಕೆ ಬಡಿಸಲು, ಕೈತೊಳೆಯಲು ಅನಂತರ ಎಲೆಅಡಿಕೆ ಕೊಡಲು ಮತ್ತು ಇತರ ವಸ್ತುಗಳನ್ನು ಸರಬರಾಜು ಮಾಡಲು ತನ್ನ ಸೈನಿಕರನ್ನು ಸೇವಕರಂತೆ ನಿಯಮಿಸಿದ್ದನು. ಅವರೆಲ್ಲರೂ ಬಂದು ಕೈಕಾಲು ಮುಖ ತೊಳೆದುಕೊಂಡಮೇಲೆ, ಅವರೆಲ್ಲರೂ ಊಟಕ್ಕೆ ದಸ್ತರಖಾನಮೇಲೆ [ಊಟದ ವಸ್ತ್ರ] ಕುಳಿತರು. ಆಗ ಯೂಸುಫ ಕೋಚಕನು ತನ್ನ ಎಲ್ಲ ಸೈನಿಕರಿಗೆ ಆದೇಶಮಾಡಿ ಒಮ್ಮೆಲೇ ಹವೇಲಿಯ ಬಾಗಿಲುಗಳನ್ನು ಮುಚ್ಚಿಸಿದನು. ಮತ್ತು ಅವರೆಲ್ಲರ ಕೈಗಳನ್ನು ಅವರ ಕುತ್ತಿಗೆಯ ಹಿಂದೆ ಕಟ್ಟಿಸಿದನು. ಈ ಸುದ್ದಿಯನ್ನು ಅಸದನಖಾನನಿಗೆ ಕಳಿಸುತ್ತ, ನೀವು ಹೇಳಿದಂತೆ ಅವರೆಲ್ಲರನ್ನೂ ಬಂಧಿಸಿ ನನ್ನ ಹವೇಲಿಯಲ್ಲಿ ಕೂಡಿ ಹಾಕಿರುವೆ. ನಿಮ್ಮ ಮುಂದಿನ ಆದೇಶಕ್ಕಾಗಿ ಕಾಯುತ್ತಿರುವೆ ಎಂದು ಹೇಳಿ ಕಳಿಸಿದನು.

ಇದನ್ನು ಕೇಳಿದ ಅಸದಖಾನನು ಬಂಧಿಸಿದ ಎಲ್ಲರನ್ನೂ, ಒಬ್ಬರನ್ನೂ ಬಿಡದೆ ಕೊಂದು ಬಿಡಲು ಆದೇಶ ಕಳಿಸಿದನು. ಮತ್ತು ಈ ಕೆಲಸವನ್ನು ಅತ್ಯಂತ ಶೀಘ್ರವಾಗಿ ಮಾಡಿ ಮುಗಿಸಿ, ಗೋಗಿಯಲ್ಲಿದ್ದ ಇಬ್ರಾಹಿಮ ಆದಿಲಶಾಹನನ್ನು ಬೇಗ ಕರೆಯಿಸಿಕೊಂಡು ಬಿಜಾಪುರದ ಸಿಂಹಾಸನದ ಮೇಲೆ ಕುಳ್ಳಿರಿಸಬೇಕು. ಅಷ್ಟು ಹೊತ್ತಿಗೆ ನಾನೂ ಅಲ್ಲಿಗೆ ಬರುವೆ ಎಂದು ಹೇಳಿ ಕಳಿಸಿದನು. ಅದರಂತೆ ಯೂಸುಫ ಕೋಚಕನು ಬಂಧಿಸಿದ ಸುಮಾರು ೩೦೦-೪೦೦ ಜನರೆಲ್ಲರನ್ನೂ, ಮಲ್ಲೂಖಾನ ಮತ್ತು ಅವನ ೧೪ ಜನರು ಕುಟುಂಬದ ಸದಸ್ಯರನ್ನು ಕುರಿಗಳನ್ನು ಕಡಿದಂತೆ ಕಡಿದು ಹಾಕಿದನು. ಅದರೊಂದಿಗೆ ಜಮಾಲಖಾನ ಸಹಿತ ಅವನ ಹಿಂಬಾಲಕರನ್ನೂ ಕೊಲೆ ಮಾಡಿದನು. ಇದನ್ನು ಒಂದು ಸುಂದರ ಶಬ್ದದಲ್ಲಿ ಹೀಗೆ ಹೇಳಲಾಗಿದೆ. 'ಅಮ್ಮಾ ಕುಶ್ತನ್ ಉಲ್ಲೂ ವ ಮಲ್ಲೂ' ಇದರ ಅರ್ಥ ಉಲ್ಲೂ ಮಲ್ಲೂನನ್ನು ಕೊಲ್ಲಲಾಯಿತು. ಎಂದಾದರೆ, ಅಬಜದ ಲೆಕ್ಕದ ಪ್ರಕಾರ ಈ ಘಟನೆ ನಡೆದದ್ದು ಹಿಜರಿ ಶಕ ೯೩೧ ಎಂದಾಗುತ್ತದೆ.

ಆ ನಂತರ ಯೂಸುಫ ಕೋಚಕನು, ಮೀರ ಶಮ್ಸುದ್ದೀನನನ್ನು ಬಿಜಾಪುರ ಕೋಟೆಯಲ್ಲಿ ತನ್ನ ಸ್ಥಳದಲ್ಲಿ ನಿಯಮಿಸಿ ತಾನು ಸ್ವತಃ ಇಬ್ರಾಹಿಮ ಆದಿಲಶಾಹನನ್ನು ಕರೆದುಕೊಂಡು ಬರಲು ಗೋಗಿಗೆ ಹೊರಟನು. ಅಷ್ಟರಲ್ಲಿ ಸಿಕಂದರಖಾನ ಊರ್ಫ ಅಸದಖಾನನು

ಗೋಗಿಗೆ ಬಂದಿದ್ದನು. ಅವರೆಲ್ಲರೂ ಖುಶಿಯಿಂದ ಬಿಜಾಪುರಕ್ಕೆ ಬಂದು ಇಬ್ರಾಹಿಮ ಆದಿಲಶಾಹನನ್ನು ಸಿಂಹಾಸನದ ಮೇಲೆ ಕುಳ್ಳಿರಿಸಿದರು.

ಇಬ್ರಾಹಿಮ ಆದಿಲಶಹನ ಆಸ್ಥಾನದಲ್ಲಿ ಪ್ರಸಿದ್ಧ ಸೈನ್ಯಾಧಿಕಾರಿಗಳು, ಮಂತ್ರಿಗಳು ಮತ್ತು ವಿವಿಧ ಅಧಿಕಾರಿಗಳು ಇದ್ದರು. ಅವರಲ್ಲಿ, ಬೆಳಗಾವಿಯ ಅಧಿಕಾರಿ ಸಿಕಂದರ ಆಕಾ ಅಸದಖಾನ,. ಮೊಹಮ್ಮದಖಾನ ವಜೀರ, ಮೊಹಿಬ್ಬಖಾನ ವಜೀರ, ಹುಸೇನ ಸಿಕಂದರಖಾನನ ಅಳಿಯ ಇಬ್ರಾಹಿಮಖಾನ, ಅಸದಖಾನನ ಸಹೋದರನ ಮಗ ಕಮಾಲ ಕಿಶ್ವರಖಾನ, ಅಮೀನುಲ್ ಮುಲ್ಕ ಮತ್ತು ಖ್ವಾಜಾ ಮೊಹಿನುದ್ದೀನ ಬಕ್ಕಾ, ಆಕಾ ಶಹಾಬುದ್ದೀನ ಶೇರವಾನಿ, ಶಾಹ ಫತ್ತುಲ್ಲಾ, ಸರನೋಬತ ಯೂಸುಫ ಕೋಚಕ ಮತ್ತು ಮಹಮ್ಮದ ಶರಬತ್, ಬಹೆಖಾನ, ದೇಶರಾವ ವೆಂಕಟರಾವ, ತಿಮ್ಮಾಜಿರಾವ ತಹಸೀಲದಾರ [ಕಾರ್ ಮುಲಕಿ], ಮೀರ ಖಿಂಜಿ ಮೊದಲಾದವರು ಇದ್ದರು.

ಅವನ ಸೈನ್ಯ ಹೀಗಿತ್ತು. ಕುದುರೆ ಸವಾರರು ೨೯೩೫೦, ಕಾಲ್ದಲ ೨೩೮೯೫೦. ಆನೆಗಳು ೪೫೦. ಇಬ್ರಾಹಿಮ ಆದಿಲಶಾಹನು ಹಿಜರಿ ಶಕ ೯೩೩, (ಕ್ರಿ.ಶ. ೧೫೨೬)ರಲ್ಲಿ ಇಬ್ರಾಹಿಮಪುರವನ್ನು ಕಟ್ಟಿಸಿದನು. ಹಿಜರಿ ೯೪೭, (ಕ್ರಿ.ಶ. ೧೫೪೦)ರಲ್ಲಿ ಬಿಜಾಪುರದ ಅರ್ಕಕಿಲ್ಲಾ ಮತ್ತು ಪುರಕೋಟಾ ಕಟ್ಟಿಸಿದನು.

ಹಿಜರಿ ಶಕ ೯೫೩, (ಕ್ರಿ.ಶ. ೧೫೪೬)ರಲ್ಲಿ ಐನುಲ್ ಮಲಿಕನು ಇಬ್ರಾಹಿಮ ಆದಿಲಶಾಹನೊಂದಿಗೆ ಮೋಸ ಮಾಡಿ ಇಬ್ರಾಹಿಮ ಆದಿಲಶಾಹನ ಕೆಲವು ಮಂತ್ರಿಗಳನ್ನು ಸರದಾರರನ್ನು ಮತ್ತು ಸೈನಿಕರನ್ನು ತನ್ನತ್ತ ಸೆಳೆದುಕೊಂಡನು. ಈ ಸುದ್ದಿಯು ಬೆಳಗಾವಿಯಲ್ಲಿದ್ದ ಅಸದಖಾನನಿಗೆ ಮುಟ್ಟಿತು. ಅವನು ತನ್ನಲ್ಲಿ ಗುಮಾಸ್ತನಾಗಿದ್ದ ವಾಕ್ಚತುರ, ನರಸೂ ಪಂಡಿತ ಎಂಬ ಬ್ರಾಹ್ಮಣನೊಂದಿಗೆ ಬಹಳಷ್ಟು ಹಣ ಮತ್ತು ಮುತ್ತು ರತ್ನಗಳನ್ನು ಕೊಟ್ಟು ಖುರಾಸಾನ ಬಾದಶಹನ ಹತ್ತಿರ ಸೈನ್ಯ ಸಹಾಯಕ್ಕಾಗಿ ಕಳಿಸಿದನು. ವಿನಂತಿ ಪತ್ರದಲ್ಲಿ, ಈ ಸಮಯದಲ್ಲಿ ತಾವು ಸಹಾಯ ಮಾಡಬೇಕೆಂದು ಮತ್ತು ತಮಗೆ ಬೆಂಬಲಿಸಬೇಕೆಂದು ಕೇಳಿಕೊಂಡಿದ್ದನು.

ಇದೇ ಸಮಯದಲ್ಲಿ ಐನುಲ್ ಮುಲ್ಕನು ಗೊವೆಗೆ ಹೋಗಿ [ಫಿರಂಗಿಗಳ] ಪೋರ್ತುಗೀಜರ ಸಹಾಯವನ್ನು ತೆಗೆದುಕೊಂಡನು. ಖುರಾಸಾನ ಬಾದಶಹನು ಅಸದಖಾನನ ವಿನಂತಿ ಪತ್ರವನ್ನು ನೋಡಿದ ತಕ್ಷಣ ಮುರಾದಖಾನ ಎಂಬ ತನ್ನ ಪ್ರಸಿದ್ಧ ಸೈನ್ಯಾಧಿಕಾರಿಯನ್ನು ಶಾಹ ಮುರಾದಖಾನ ಎಂಬ ಬಿರುದಿನೊಂದಿಗೆ ಬಹಳಷ್ಟು ಸೈನ್ಯವನ್ನು ಕೊಟ್ಟು ಕಳಿಸಿದನು. ಅವನು ತನ್ನ ಸೈನ್ಯದೊಂದಿಗೆ ಬೆಳಗಾವಿಗೆ ಬಂದು ಅಸದಖಾನನನ್ನು ಭೆಟ್ಟಿಯಾದನು. ನಂತರ ಐನುಲ್ ಮುಲ್ಕನೊಂದಿಗೆ ಯುದ್ಧ ಮಾಡಿ ಅವನನ್ನು ಸೋಲಿಸಿದರು. ಬಿಜಾಪುರ ಸರಹದ್ದಿನಲ್ಲಿಯ ಬಂಡುಖೋರರನ್ನು ನಿಯಂತ್ರಿಸಿದರು.

ಶಾಹ ಮುರಾದಖಾನನು ಅಹಮದನಗರ ಸೈನ್ಯದ ಜೊತೆ ಯುದ್ಧ ಮಾಡಿ ಅವರನ್ನು

ಸೋಲಿಸಿ ಇಬ್ರಾಹಿಮ ಆದಿಲಶಹನ ಭೆಟ್ಟಿಗಾಗಿ ಬಿಜಾಪುರಕ್ಕೆ ಬಂದನು. ಬಾದಶಹನು ಅವನನ್ನು ಅತ್ಯಂತ ಗೌರವದಿಂದ ಕಂಡು, ಸನ್ಮಾನಿಸಿ ಮುತ್ತು ರತ್ನಗಳ ಬಹುಮಾನದೊಂದಿಗೆ ಶಾಲನ್ನು ಹೊದಿಸಿದನು ಮತ್ತು ೧೦೦ ಆನೆಗಳನ್ನು ಕೊಟ್ಟನು. ಶಾಹ ಮುರಾದನು ಅಲ್ಲಿಂದ ಗುಲಬರ್ಗಾಕ್ಕೆ ಬಂದನು. ಅಲ್ಲಿ ಒಂದು ಹೊಸ ಕೋಟೆ ಗೋಡೆಯನ್ನು ಕಟ್ಟಿಸಿದನು.

ಹೀಗೂ ಹೇಳಲಾಗುತ್ತದೆ, ಅಹಮದನಗರದ ಬಾದಶಹ ನಿಜಾಮಶಾಹನು ಧೂಳಖೇಡದವರೆಗೆ ಬಂದು ಇಬ್ರಾಹಿಮ ಆದಿಲಶಹನೊಂದಿಗೆ ಘನಘೋರ ಯುದ್ಧ ಮಾಡಿದನು. ಅದರಲ್ಲಿ ನಿಜಾಮಶಹನು ಸೋಲನ್ನು ಅನುಭವಿಸಿದನು. ಈ ಯುದ್ದದಲ್ಲಿ ಇಬ್ರಾಹಿಮ ಆದಿಲಶಾಹನಿಗೆ ಹಲವಾರು ಶಾಹೀ ಛತ್ರಗಳು, ನಿಶಾನೆಗಳು ಆನೆಗಳು, ತೋಪಖಾನೆಗಳು ಮತ್ತು ಇತರ ಬಹಳಷ್ಟು ಸಾಮಗ್ರಿಗಳು ದೊರೆತವು. ಈ ಘಟನೆ ನಡೆದ ವರುಷವನ್ನು ಒಂದು ವಾಕ್ಯದಲ್ಲಿ ಹೀಗೆ ಹೇಳಲಾಗಿದೆ. 'ಚಿತ್ರ ವ ದಮಾಮ ಬರ್ ಔಲಿಯಾ' ಎಂದರೆ ಅಬಜದ ಲೆಕ್ಕದಲ್ಲಿ ಹಿಜರಿ ಶಕ ೯೫೪ ಎಂದಾಗುತ್ತದೆ. [ಕ್ರಿ. ಶ. ೧೫೪೭ ?]

ಇಷ್ಟರಲ್ಲಿ ಜಮಖಂಡಿ ಪರಗಣೆಯ ದೇಸಾಯಿಯು ಬಂಡುಖೋರನಾಗಿ ಉನ್ಮತ್ತನಾಗಿದ್ದಾನೆಂದು ಸುದ್ದಿ ಬಂದಿತು. ಬಾದಶಹನು ಅಸದಖಾನನಿಗೆ ಹೇಳುತ್ತ, ನೀವು ಹೇಗೂ ಬೆಳಗಾವಿಗೆ ಹೋಗುತ್ತಿದ್ದೀರಿ ದಾರಿಯಲ್ಲಿ ಜಮಖಂಡಿ ಬರುತ್ತದೆ. ನೀವು ದಾರಿಯಲ್ಲಿ ಹೊಗಹೋಗುತ್ತ ಜಮಖಂಡಿಯ ದೇಸಾಯಿಯ ಕಿವಿ ಹಿಂಡಿ ಅವನಿಗೆ ಶಿಕ್ಷೆ ಕೊಟ್ಟು ಹೋಗಿರಿ ಎಂದು ಆದೇಶಿಸಿದನು. ಅದಕ್ಕೆ ಅಸದಖಾನನು ಹೇಳಿದನು, ಇಷ್ಟಕ್ಕಾಗಿ ನಾನು ಅಲ್ಲಿಯ ವರೆಗೆ ಯಾಕೆ ಹೋಗಬೇಕು. ನಿಮ್ಮ ಒಬ್ಬ ಸಾಮಾನ್ಯ ಸೇವಕನು ಹೋದರೂ ಅವನು ಈ ಕೆಲಸವನ್ನು ಮಾಡಿಕೊಂಡು ಬರುತ್ತಾನೆ. ಖ್ವಾಜಾ ಕಮಾಲನನ್ನು ಕರೆದು ಅವನಿಗ ಜಮಖಂಡಿಯ ಹವಾಲದಾರಿಕೆಯನ್ನು ಕೊಟ್ಟನು. ಅವನೊಂದಿಗೆ ನಾಲ್ಕು ಮಹಾಲದಾರಿಗೆ ಹುಕುಮ ಕೊಟ್ಟು ನೀವು ನಿಮ್ಮ ಸೈನ್ಯದೊಂದಿಗೆ ಅವನೊಂದಿಗೆ ಹೋಗಬೇಕು ಎಂದು ಹೇಳಿದನು. ಆಗ ದರಬಾರದ ಜನರು, ಜಮಖಂಡಿಯ ದೇಸಾಯಿಯೊಂದಿಗೆ ಕಠಿಣವಾದ ಯುದ್ಧವನ್ನು ಮಾಡಲು ನಾಲ್ಕು ಮಾಹಾಲದಾರರು ಹೋಗಿ ಏನು ಮಾಡುತ್ತಾರೆ ಎಂದು ಕೇಳಿದರು. ಅದಕ್ಕೆ ಉತ್ತರವಾಗಿ, ನಾನು ಇಲ್ಲಿಗೆ ಬಂದಾಗಲೂ ನಾಲ್ಕೇ ಜನರು ನನ್ನೊಂದಿಗೆ ಇದ್ದರು. ಆದರೂ ನಾನು ಇಷ್ಟು ಪ್ರಬಲನಾದೆ. ನನ್ನ ಮಗನಾದರೂ ಇದರಂತೆಯೇ ಆಗಿದ್ದಾನೆ ಎಂದು ಅಸದಖಾನನು ಹೇಳುತ್ತ ಬಾಬಾಜಿ ನಾಯಕನೊಂದಿಗೆ ೬೦ ಜನರನ್ನು ಸೇರಿಸಿ ಖ್ವಾಜಾ ಕಮಾಲಖಾನನನ್ನು ಜಮಖಂಡಿಗೆ ಕಳಿಸಿದನು.

ಇವರೆಲ್ಲರೂ ಜಮಖಂಡಿಗೆ ಹೋದಾಗ ದೈವ ಪ್ರೇರಣೆಯಿಂದ ಜಮಖಂಡಿಯ ದೇಸಾಯಿಯು ೩ ಕೋಸ ದೂರದ ಒಂದು ತೋಟದಲ್ಲಿ ತನ್ನ ಕುಟುಂಬದೊಂದಿಗೆ

ವಿಶ್ರಾಂತಿಯಲ್ಲಿದ್ದನು. ಇದರಿಂದಾಗಿ ವಿರೋಧವಿಲ್ಲದೆ ಜಮಖಂಡಿಯನ್ನು ತಮ್ಮ ಕೈವಶಕ್ಕೆ ತೆಗೆದುಕೊಂಡರು. ಅರಮನೆಯಲ್ಲಿ ಹೋದಾಗ ಅಲ್ಲಿ ಬೀಗ ಹಾಕಿದ ೯ ದ್ರವ್ಯ ಭಾಂಡಾರಗಳನ್ನು ಕಂಡರು. ಅವುಗಳನ್ನು ಕಾಯಲು ನಾಲ್ಕು ಜನ ಹವಾಲ್ದಾರರಿದ್ದರು. ದೇಸಾಯಿಯು ಎಲ್ಲಿದ್ದಾನೆಂದು ಅವರನ್ನು ಕೇಳಿದಾಗ ಅವರು ಮೇಲಿನ ಉತ್ತರವನ್ನು ಕೊಟ್ಟರು. ಅನಂತರ ಈ ಕೋಣೆಗಳಲ್ಲಿ ಏನಿದೆ ಎಂದು ಕೇಳಿದರು. ಮೊದಲು ಅದಕ್ಕೆ ಅವರು ಏನೂ ಹೇಳಲಿಲ್ಲ. ಆಗ ಅವರಿಗೆ ತುಸು ಹಣವನ್ನು ಕೊಟ್ಟು ಕೇಳಿದರು. ಅದಕ್ಕೆ ಅವರು ಬಾಯಿ ಬಿಟ್ಟರು. ಈ ಕೋಣೆಗಳಲ್ಲಿ ಶಕ್ತಿವಂತರಾದ ಮತ್ತು ಹರೆಯದ ತರುಣ ಸೈನಿಕರನ್ನು ಬಂಧಿಸಿ ಇಡಲಾಗಿದೆ ಎಂದು ಹೇಳಿದರು. ಆಗ ಬಿಜಾಪುರದ ಜನರು ಆ ನಾಲ್ವರನ್ನೂ ಕಂಬಕ್ಕೆ ಕಟ್ಟಿ ಬಿಗಿದರು. ಮತ್ತು ಲೋಹಾರನನ್ನು ಕರೆಯಿಸಿ ಕೋಣೆಗಳ ಬೀಗಗಳನ್ನು ಒಡೆದರು. ಮತ್ತು ಬಂಧಿತ ಸೈನಿಕರನ್ನು ಬಿಡುಗಡೆ ಮಾಡಿದರು. ೯ ಕೋಣೆಗಳಲ್ಲಿಯ ೮ ಕೋಣೆಗಳಲ್ಲಿ ಸೈನಿಕರನ್ನು ತುಂಬಿದ್ದರು. ೯ನೆಯ ಕೋಣೆಯಲ್ಲಿ ವಿವಿಧ ಶಸ್ತ್ರಗಳನ್ನು ಆಯುಧಗಳನ್ನು ತುಂಬಿದ್ದರು.

ಖ್ವಾಜಾ ಕಮಾಲನು ಆ ಎಲ್ಲ ಶಸ್ತ್ರಗಳನ್ನು ಬಂಧಮುಕ್ತ ಸ್ಯನಿಕರಿಗೆ ವಿತರಿಸಿ ಅವರನ್ನು ಕರೆದುಕೊಂಡು ದೇಸಾಯಿಯ ಮೇಲೆ ಯುದ್ಧ ಮಾಡಲು ಹೊರಟನು. ಈ ಸುದ್ದಿಯು ದೇಸಾಯಿಗೆ ಗೊತ್ತಾಗುತ್ತಿದ್ದಂತೆ ಅವನೂ ತನ್ನ ಸೈನಿಕರನ್ನು ಕರೆಯಿಸಿ ಖ್ವಾಜಾ ಕಮಾಲನನ್ನು ಎದುರಿಸಲು ಹೊರಟನು. ಉಭಯತರ ಮಧ್ಯ ಘನಘೋರ ಯುದ್ಧವಾಯಿತು. ಈ ಯುದ್ಧದಲ್ಲಿ ಖ್ವಾಜಾ ಕಮಾಲನು ಜಮಖಂಡಿಯ ದೇಸಾಯಿ ಮತ್ತು ಅವನ ಕುಟುಂಬ ಜೊತೆಗೆ ಅವನ ಸೈನ್ಯವನ್ನು ಕತ್ತರಿಸಿ ತುಂಡು ಮಾಡಿದನು. ಹೀಗೆ ಕತ್ತರಿಸಿದ ೧೨೦೦ ಶಿರಗಳನ್ನು ತನ್ನ ಕಕ್ಕನಿಗೆ [ಅಸದಖಾನನಿನಗೆ] ಕಳಿಸಿ ಅವನಿಗೆ ಒಂದು ಪತ್ರವನ್ನು ಬರೆದನು. ಅದರಲ್ಲಿ ಒಕ್ಕಣಿಸುತ್ತ 'ಇಷ್ಟು ಶಿರಗಳನ್ನು ಅತ್ಯಾದರಿಂದ ತಮಗೆ ಕಳಿಸುತ್ತಿರುವೆ. ತಾವು ಇಚ್ಛಿಸಿದರೆ, ಇವುಗಳನ್ನು ಕೋಟೆಯ ಬುರುಜುಗಳ ಮೇಲೆ ತೂಗು ಹಾಕಬೇಕು.' ಎಂದು ಬರೆದನು. ಅವನ ಒಕ್ಕಣಿಕೆಯಂತೆ ಆ ಎಲ್ಲ ಶಿರಗಳನ್ನು ಕೋಟೆಯ ಬುರುಜುಗಳ ಮೇಲೆ ತೂಗು ಹಾಕಿದರು. ಖ್ವಾಜಾ ಕಮಾಲನ ಈ ಬಹಾದ್ದೂರಿ ಕೆಲಸಕ್ಕಾಗಿ ಅವನಿಗೆ ಗೌರವವನ್ನು ಸೂಚಿಸುತ್ತ ವಸ್ತ್ರಗಳನ್ನು, ಕುದುರೆಗಳನ್ನು ಕಳಿಸುತ್ತ ಅವನನ್ನು ಜಮಖಮಡಿಯ ಹವಾಲ್ದಾರನನ್ನಾಗಿ ನಿಯಮಿಸಿದರು ಮತ್ತು ಬಿಜಾಪುರಕ್ಕೆ ಬರಲು ಅಸದಖಾನನು ಕಮಾಲನಿಗೆ ತಿಳಿಸಿದನು. ಅದರಂತೆ ಖ್ವಾಜಾ ಕಮಾಲನು ಬಿಜಾಪುರಕ್ಕೆ ಬಂದು ತಲುಪಿದನು.

ಖ್ವಾಜಾ ಕಮಾಲನು ಬಿಜಾಪುರಕ್ಕೆ ಬಂದ ನಂತರ ಅಸದಖಾನನು ಬೆಳಗಾವಿಗೆ ಹೊರಟನು. ಆಗ ಇಬ್ರಾಹಿಮ ಆದಿಲಶಹನು ಅಸದಖಾನನಿಗೆ ವಿನಂತಿಸುತ್ತ, 'ನೀವು ನನ್ನ ಜೊತೆಗೆಯೇ ಇರಬೇಕು' ಎಂದು ಹೇಳಿದನು. 'ನೀವು ಇಲ್ಲಿದ್ದರೆ ಬಿಜಾಪುರದ ಬಾದಶಾಹೀ ಪ್ರಭಾವವು ಅಧಿಕವಾಗುತ್ತದೆ' ಎಂದನು. ಆಗ ಅಸದಖಾನನು, 'ನಾನು ಹೋಗದಿದ್ದರೆ, ಬೆಳಗಾವಿಯು ಸುರಕ್ಷಿತವಾಗಿ ಇರುವುದಿಲ್ಲ.' ಎಂದನು. ಅದಕ್ಕೆ ಬಾದಶಹನು

'ಹಾಗಾದರೆ, ನೀವು ಹೋಗಬೇಕೆಂದೇ ಆದರೆ ಈ ಕಮಾಲಖಾನನ್ನಾದರೂ ನನ್ನ ಹತ್ತಿರ ಇರಲು ಹೇಳಿರಿ' ಎಂದು ಹೇಳುತ್ತ, ಖ್ವಾಜಾ ಕಮಾಲಖಾನನಿಗೆ ಕಿಶ್ವರಖಾನ ಎಂದು ಬಿರುದನ್ನು ಕೊಟ್ಟನು ಮತ್ತು ಬಾದಶಹನು ತನ್ನ ಹತ್ತಿರವೇ ಇಟ್ಟುಕೊಂಡನು.

ಪ್ರತಿ ವರುಷ ನಾಟಕ ಸಂಗೀತ ನಡೆಯುತ್ತಿದ್ದ ನವರಸಪುರವನ್ನು ಅವನಿಗೆ ಜಹಗೀರು ಹಾಕಿ ಕೊಟ್ಟನು. ಅರಕಿಲ್ಲೆಯಲ್ಲಿಯ ಫಾರೂಕ ಮಹಲಿನಲ್ಲಿ ಇರಲು ಸ್ಥಳ ಕೊಟ್ಟು ಅವನಿಗೆ ಸರಕಾರೀ ಸಿಕ್ಕಾ, ಮೊಹರುಗಳನ್ನು ಕೊಟ್ಟನು ಮತ್ತು ರಾಜ್ಯದ ಮುಖ್ಯ ಆಡಳಿತಗಾರನನ್ನಾಗಿ ನಿಯಮಿಸಿ ತನ್ನ ಹತ್ತಿರವೇ ಇಟ್ಟುಕೊಂಡನು.

ಹಜರತ್ ಜಾಫರ್ ಸಕಾಫ್ ರೋಜಾದ ಹತ್ತಿರ ಇರುವ ಹಳೆಯ ಜಾಮಿಯಾ ಮಸೀದಿಯನ್ನು ಇಬ್ರಾಹಿಮ ಆದಿಲಶಹನು ಹಿಜರಿ ಶಕ ೯೫೮, ಕ್ರಿ ಶ ೧೫೫೦ರಲ್ಲಿ ಕಟ್ಟಿಸಿದನು. ಇಬ್ರಾಹಿಮ ಆದಿಲಶಹನಿಗೆ ನಾಲ್ವರು ಗಂಡು ಮಕ್ಕಳಿದ್ದರು. ಒಬ್ಬನ ಹೆಸರು ಅಲಿ ಎಂದಾಗಿತ್ತು. ಮತ್ತು ಉಳಿದ ಮೂವರು ಅಸದಖಾನನ ಮಗಳ ಹೊಟ್ಟೆಯಿಂದ ಹುಟ್ಟಿದ್ದರು. ಅವರಲ್ಲಿ ಒಬ್ಬನ ಹೆಸರು ತಹಮಾಸ್ಪ ಎಂದಾಗಿತ್ತು. ಇಬ್ರಾಹಿಮ ಆದಿಲಶಹನು ತನ್ನ ೫೦ನೆಯ ವಯಸ್ಸಿನಲ್ಲಿ ಹಿಜರಿ ಶಕ ೯೬೫, ಕ್ರಿ ಶ ೧೫೫೭ರಲ್ಲಿ ತೀರಿಕೊಂಡನು. ಅವನು ೩೫ ವರುಷ ರಾಜ್ಯವನ್ನು ಆಳಿದನು. ಬಿಜಾಪುರದ ಹವಾಲ್ದಾರನಾದ ಜೀತಖಾನನು ಅವನ ಶವವನ್ನು ಗೋಗಿಗೆ ಕಳಿಸಿ, ಅವನ ತಂದೆ ಮತ್ತು ಅಜ್ಜನ ಹತ್ತಿರ ದಫನ ಮಾಡಿದರು.

■

*

ಅಧ್ಯಾಯ – ೪

ಅಲಿ ಆದಿಲಶಾಹ ಬಿನ್ ಇಬ್ರಾಹಿಮ ಆದಿಲಶಾಹ ಬಿನ್ ಇಸ್ಮಾಯಿಲ್ ಆದಿಲಶಾಹ ಬಿನ್ ಯೂಸುಫ ಆದಿಲಶಾಹ

ಎಲ್ಲರಿಗೂ ಗೊತ್ತಿರುವಂತೆ ಇಬ್ರಾಹಿಮ ಆದಿಲಶಾಹನು ತೀರಿಕೊಂಡಾಗ ಅಲಿ ಅದಿಲಶಾಹನನ್ನು ಮಿರಜದ ಕೋಟೆಯಲ್ಲಿ ಬಂಧಿಸಿ ಇಟ್ಟಿದ್ದರು. ಇಬ್ರಾಹಿಮ ಆದಿಲಶಹನ ಮರಣದ ಸುದ್ದಿಯು ಅಸದಖಾನ ಲ್ಯಾರಿಗೆ ತಿಳಿದಾಗ ಅವನು ಅಲಿ ಆದಿಲಶಾಹನನ್ನು ಬಂಧನದಿಂದ ಮುಕ್ತಗೊಳಿಸಿ ಕೆಲವು ನಿಷ್ಠಾವಂತ ರಾಜಕಾರಣಿ ಗಳೊಂದಿಗೆ ಚರ್ಚಿಸಿ ಅವನನ್ನೇ ಸಿಂಹಾಸನದ ಮೇಲೆ ಕುಳ್ಳಿರಿಸಬೇಕೆಂದು ನಿರ್ಧಾರ ಮಾಡಿದನು. ಹಿಜರಿ ಶಕ ೯೬೫ (ಕ್ರಿ. ಶ. ೧೫೫೭)ರಲ್ಲಿ ಮಿರಜ ಕೋಟೆಯಲ್ಲಿಯೇ ೨೪ ವರುಷದ ಅಲಿ ಆದಿಲಶಹನ ಮೇಲೆ ಬಾದಶಾಹಿ ಛತ್ರವನ್ನು ಹಿಡಿದರು. ಅನಂತರ ಅವನನ್ನು ಬಿಜಾಪುರಕ್ಕೆ ಕರೆತಂದರು ಮತ್ತು ಬಿಜಾಪುರದಲ್ಲಿ ಆದಿಲಶಾಹಿ ಸಿಂಹಾಸನದಮೇಲೆ ಕುಳ್ಳಿರಿಸಿದರು. ಅದರ ವಿವರ ಹೀಗಿದೆ.

ಶಾಹ ತಹಮಾಸ್ಪನು ಅಸದಖಾನನ ಮಗಳ ಮಗನಾಗಿದ್ದನು. ಮೊಮ್ಮಗನಾಗಿದ್ದನು. ಇಬ್ರಾಹಿಮ ಆದಿಲಶಾಹನು ತಹಮಾಸ್ಪನನ್ನೇ ಗದ್ದುಗೆಯ ಮೇಲೆ ಕೂಡ್ರಿಸುವ ಇಚ್ಚೆ ವ್ಯಕ್ತಪಡಿಸಿದ್ದನು. ಅದರಂತೆ ಮೃತ್ಯು ಪತ್ರವನ್ನೂ ಬರೆದು ಇಟ್ಟಿದ್ದನು. ಅಲಿ ಆದಿಲಶಹನು ಹಿರಿಯ ಮಗನಾಗಿದ್ದರೂ ಇಬ್ರಾಹಿಮ ಆದಿಲಶಹನು ಅವನನ್ನು ಪ್ರೀತಿಸುತ್ತಿದ್ದಿಲ್ಲ. ಅವನನ್ನು ಕೊಲ್ಲಬೇಕೆಂದು ಇಚ್ಚಿಸಿದ್ದನು. ಆದರೆ ದರಬಾರದ ಜನರಿಗೆ ಅಲಿಯನ್ನು ಕೊಲ್ಲಬೇಕೆಂಬ ಮನಸ್ಸಿರಲಿಲ್ಲ. ಅದರಂತೆ ಅವರು ಬಾದಶಾಹನಿಗೆ ಹೇಳುತ್ತ, ನೀವು ತಹಮಾಸ್ಪನನ್ನೇ ಉತ್ತರಾಧಿಕಾರಿಯನ್ನಾಗಿ ಮಾಡಬೇಕೆಂದಿದ್ದರೆ, ಅಲಿಯನ್ನು ಅಸದಖಾನನ ವಶಕ್ಕೆ ಕೊಡಿರಿ. ಅವನು ಈ ವಿಷಯದಲ್ಲಿ ಚತುರನಿದ್ದು, ಅವನು ಈತನನ್ನು ಕೊಲ್ಲಬೇಕೆಂದರೆ ಕೊಲ್ಲುತ್ತಾನೆ. ಇಲ್ಲವಾದಲ್ಲಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತಾನೆ ಎಂದು ಹೇಳಿದರು. ಅಸದಖಾನನು

ಮಿರಜ ಕೋಟೆಯಲ್ಲಿದ್ದನು ಮತ್ತು ಮಿರಜ ಪ್ರದೇಶವೆಲ್ಲ ಅಸದಖಾನನ ವಶದಲ್ಲೇ ಇತ್ತು.

ಆಗ ಅಲಿಯನ್ನು ಬಂಗಾರದ ಸರಪಳಿಯಲ್ಲಿ ಬಂಧಿಸಿ ಅವನನ್ನು ಅಸದಖಾನನ ಹತ್ತಿರ ಮಿರಜಕ್ಕೆ ಕಳಿಸುತ್ತ, ಇಬ್ರಾಹಿಮ ಆದಿಲಶಾಹನು ಅಸದಖಾನನಿಗೆ ಹೀಗೆ ಪತ್ರ ಬರೆದನು. 'ನಾನು ತಹಮಾಸ್ಪನನ್ನು ಸಿಂಹಾಸನದ ಮೇಲೆ ಕುಳ್ಳಿರಿಸಬೇಕೆಂದು ನಿರ್ಧರಿಸಿದ್ದೇನೆ, ಆದ್ದರಿಂದ ನಿನಗೆ ಆಣೆಯಾಗಿದೆ. ನೀನು ಶಾಹ ಅಲಿಯನ್ನು ಕೊಲ್ಲಬೇಕು ಅಥವಾ ಅವನ ಎರಡೂ ಕಣ್ಣುಗಳನ್ನು ತೆಗೆದು, ಅವನ ಕೈಯ ಬೆರಳನ್ನು ಕತ್ತರಿಸಿ ಗುರುತಿಗಾಗಿ ನನಗೆ ಕಳಿಸಬೇಕು' ಎಂದು ಹೇಳಿ ಕಳಿಸಿದನು.

ಆದರೆ ದರಬಾರದಲ್ಲಿಯ ಕಮಾಲ ಕಿಶ್ವರಖಾನನು, ಅಸದಖಾನನಿಗೆ ರಹಸ್ಯವಾಗಿ ಹೀಗೆ ಪತ್ರ ಬರೆದನು: 'ತಾವು ಬುದ್ಧಿವಂತರು, ದೂರದೃಷ್ಟಿಯುಳ್ಳವರು, ೧೦೫ ವರುಷ ಹಿರಿಯರು, ಅಲಿಗೆ ಯಾವುದೇ ಹಾನಿಯಾಗಬಾರದು ಎಂದು ನನಗೆ ಅನಿಸುತ್ತದೆ, ಯಾಕೆಂದರೆ ಭವಿಷ್ಯದಲ್ಲಿ ಅವನೇ ಬಾದಶಹನಾಗುತ್ತಾನೆ' ಅಸದಖಾನನೂ ಸ್ವತಃ ಜ್ಯೋತಿಷ್ಯ, ಹಸ್ತ ಸಾಮುದ್ರಿಕೆ ಮತ್ತು ಮುಖ ಲಕ್ಷಣಗಳಿಂದ ಭವಿಷ್ಯ ಹೇಳುವ ಕಲೆಯಲ್ಲಿ ಪರಿಣತನಾಗಿದ್ದನು. ಒಂದು ದಿನ ಅವರಿಬ್ಬರ ಜಾತಕಗಳನ್ನು ಪರೀಕ್ಷಿಸಿದನು. ತಹಮಾಸ್ಪನ ದೈವದಲ್ಲಿ ಬಾದಶಾಹಿ ಇಲ್ಲ ಎಂದು ಗೊತ್ತಾಯಿತು. ಆದರೆ ಅವನ ಒಬ್ಬ ಮಗನಿಗೆ ಬಾದಶಾಹೀ ಯೋಗವಿದೆ ಎಂಬುದೂ ಗೊತ್ತಾಯಿತು. ಅಲಿಯ ಜಾತಕದಲ್ಲಿ ಬಾದಶಾಹೀ ಯೋಗವಿದೆ ಎಂದು ತಿಳಿದುಕೊಂಡನು. ಆಗ ಒಂದು ಚಿಗರೆಯ ಕಣ್ಣುಗಳನ್ನು ಕತ್ತರಿಸಿ ಜೊತೆಗೆ ಅಲಿಯ ವಯಸ್ಸಿನ ಒಬ್ಬ ಹುಡುಗನ ಬೆರಳನ್ನು ಕತ್ತರಿಸಿ ಇಬ್ರಾಹಿಮ ಆದಿಲಶಾಹನಿಗೆ ಕಳಿಸುತ್ತ ಹೀಗೆ ಬರೆದನು: 'ತಮ್ಮ ಆದೇಶದಂತೆ ನಾನು ಮಾಡಿದ್ದೇನೆ'

ಆ ನಂತರ ಶಾಹ ಅಲಿಯನ್ನು ಅತ್ಯಂತ ರಹಸ್ಯದಲ್ಲಿ ಜೋಪಾನವಾಗಿ ಇಟ್ಟುಕೊಂಡನು. ಇಬ್ರಾಹಿಮ ಆದಿಲಶಾಹನು ಈ ಅಶಾಶ್ವತ ಜಗತ್ತಿನಿಂದ ಶಾಶ್ವತ ಜಗತ್ತಿಗೆ ಹೋದಾಗ ತಹಮಾಸ್ಪ ಮತ್ತು ಅವನ ಇಬ್ಬರು ತಮ್ಮಂದಿರನ್ನು ಬಂಧಿಸಿದರು. ಈ ಗದ್ದಲದಲ್ಲಿ ದರಬಾರದಲ್ಲಿಯ ಕೆಲವು ಸಚಿವರು, ಯಾರನ್ನಾದರೂ ಒಬ್ಬ ರಾಜಪುತ್ರನನ್ನು ನಮ್ಮ ಹತ್ತಿರ ಕಳಿಸಲು ಬಿಜಾಪುರದ ಹವಾಲ್ದಾರನಾದ ಜೀತಖಾನನಿಗೆ ಹೇಳಿದರು. ಅಂದರೆ ನಾವು ಅವನನ್ನು ಬಾದಶಹ ಎಂದು ಘೋಷಿಸುತ್ತೇವೆ ಎಂದು ಹೇಳಿದರು. ಆಗ ಅದು ನನ್ನ ಕೆಲಸವಲ್ಲ ಎಂದು ಜೀತಖಾನನು ಹೇಳುತ್ತ ಇಲ್ಲಿಯ ವಿಷಯಗಳನ್ನು ನಾನು ಅಸದಖಾನನಿಗೆ ತಿಳಿಸುತ್ತೇನೆ ಎಂದು ತಕ್ಷಣ ಅವನಿಗೆ ಒಂದು ಪತ್ರವನ್ನು ಬರೆದು ಕಳಿಸಿದನು. ಪತ್ರ ಮುಟ್ಟಿದ ತಕ್ಷಣ ಅಸದಖಾನನು ಮಿರಜ ಕೋಟೆಯಲ್ಲಿ ಬಂಧಿತನಾಗಿದ್ದ ಅಲಿಯನ್ನು ಬಾದಶಹ ಎಂದು ಘೋಷಿಸಿ ಅವನ ತಲೆಯ ಮೇಲೆ ಶಾಹೀ ಛತ್ರವನ್ನು ಹಿಡಿದರು. ಅಲ್ಲಿಯೇ ದರಬಾರವನ್ನು ಮಾಡಿದರು. ಅಮೀರರು ಬಾದಶಹನಿಗೆ ನಜರಾನೆಗಳನ್ನು ಕೊಟ್ಟರು ಮತ್ತು ಅಲಿಯನ್ನು ಕರೆದುಕೊಂಡು ಅಸದಖಾನನು ದರಬಾರದ ಜನರೊಂದಿಗೆ ಬಿಜಾಪುರದತ್ತ ಹೊರಟನು.

ಅಲ್ಲಿಂದ ಹೊರಟವರು ದಾರಿಯಲ್ಲಿ ತೊರವಿಗೆ ಬಂದು ಇಳಿದುಕೊಂಡರು. ಜೀತಖಾನನಿಗೆ ಪತ್ರ ಬರೆಯುತ್ತ, 'ನೀನು ತಹಮಾಸ್ಪ ಮತ್ತು ಅವನ ಇಬ್ಬರು ತಮ್ಮಂದಿರ ಕಣ್ಣುಗಳನ್ನು ತೆಗೆದು ಬಿಡು. ನಾವು ಶಾಹ ಅಲಿಯನ್ನು ರಾಜ ಸಿಂಹಾನದ ಮೇಲೆ ಕುಳ್ಳಿರಿಸುತ್ತೇವೆ' ಎಂದು ಆದೇಶ ಮಾಡಿದನು. ಆಗ ಜೀತಖಾನನು ಉತ್ತರ ಕಳಿಸುತ್ತ, 'ನಾನು ಈ ಮನೆತನದ ಉಪ್ಪನ್ನು ತಿಂದಿದ್ದೇನೆ ನಾನು ಯಾರ ಪಕ್ಷವನ್ನೂ ವಹಿಸುವುದಿಲ್ಲ.' ಎಂದು ಹೇಳುತ್ತ ತಹಮಾಸ್ಪ ಮತ್ತು ಅವನ ತಮ್ಮಂದಿರನ್ನು ಅಲಿ ಆದಿಲಶಹನ ಸಮ್ಮುಖಕ್ಕೆ ಕಳಿಸಿದನು. ಆಗ ಅಲಿ ಆದಿಲಶಹನು ತಹಮಾಸ್ಪ ಮತ್ತು ಅವನ ಇಬ್ಬರೂ ತಮ್ಮಂದಿರ ಕಣ್ಣುಗಳನ್ನು ಕೀಳಿಸಿದನು. ಅನಂತರ ಬಿಜಾಪುರಕ್ಕೆ ಬಂದು ಆದಿಲಶಾಹೀ ಸಿಂಹಾಸನವನ್ನು ಅಲಂಕರಿಸಿದನು. ತಹಮಾಸ್ಪನನ್ನು ಕಾಮಿಲಖಾನನ ವಶಕ್ಕೆ ಕೊಟ್ಟನು.

ಅಲಿ ಆದಿಲಶಹನ ಆಸ್ಥಾನದಲ್ಲಿದ್ದ ಸಚಿವರು, ಸರದಾರರು, ಅಮೀರರ ಹೆಸರುಗಳು ಹೀಗಿವೆ: ಅಸದಖಾನ ಲ್ಯಾರಿ [ಸಿಕಂದರ ಸಾನಿ], ಕಮಾಲ ಕಿಶ್ವರಖಾನ, ಅಸದಖಾನನ ಮಗ, ಕಾಮಿಲಖಾನ ವಜೀರ, ಹೈದರಖಾನ ವಜೀರ, ಸಿದ್ಧೀ ಅಂಬರ ಹಬಶೀ ವಜೀರ, ಆಲಮಖಾನ, ಜಮಶೀದ ಆಕಾ, ಆಲಂ ಮುಸ್ತಫಾ, ಸೈಯದ ಮುಸ್ತಫಾ ಖಾನ, ಶಾಹ ಅಬು ತುರಾಬ ಸರನೋಬತ, ಇಖಲಾಸಖಾನ ಬುಜುರ್ಗ, ಶಾಹ ಮುರಾದ ಬಿಜಲೀ ಖಾನ, ಮೋತೀಖಾನ, ಅಲೀಶಾ ಅಮ್ಜದುಲ್ ಮುಲ್ಕ, ಮತ್ತು ಸಿಪೇಹ ಸಾಲಾರನಾಗಿ ಬುಲ್ ಬುಲ್ ಖಾನನಿದ್ದನು. ಪ್ರಸಿದ್ಧ ಸಿಪಾಯಿಗಳಲ್ಲಿ ಬಡೇ ಮೀರ, ನನ್ಹೆ ಮೀರ, ಜಹಾಂಗೀರಖಾನ, ಜಾಮಿನ ಖಾನ ಮೊದಲಾದವರಿದ್ದರು.

ಹಿಜರಿ ಶಕ ೯೬೬, (ಕ್ರಿ.ಶ. ೧೫೫೮)ರಲ್ಲಿ ಪ್ರಸಿದ್ಧ ನಗರಕ್ಕೆ ಕೋಟೆ ಗೋಡೆಯನ್ನು ಕಟ್ಟಿಸಿದನು. ಹಿಜರಿ ಶಕ ೯೬೭, (ಕ್ರಿ.ಶ. ೧೫೫೯)ರಲ್ಲಿ ಶಹಪುರ ಉಪನಗರದ ಶಂಕುಸ್ಥಾಪನೆ ಮಾಡಿದನು. ಇದೇ ವರುಷ ಅಲಿ ಆದಿಲಶಹನು ರಾಯಚೂರನ್ನು ತನ್ನ ಕೈವಶ ಮಾಡಿಕೊಂಡನು. ಇದೇ ವರುಷ ಅಲಿ ಆದಿಲಶಹನು ತೊರಗಲ್ ಮತ್ತು ಬಾದಾಮಿಗೆ ಹೋಗಿದ್ದನು. ಇದೇ ವರುಷ ಶಾಹಬುರ್ಜ ಮತ್ತು ಮಹಾಬುರ್ಜಗಳ ಅಡಿಗಲ್ಲನ್ನು ಇಟ್ಟನು. ಹಿಜರಿ ಶಕ, ೯೬೮, (ಕ್ರಿ. ಶ. ೧೫೬೦)ರಲ್ಲಿ ಅಲಿ ಆದಿಲಶಹನು ಸಬ್ಜ ಮಹಲ [ಹಸಿರು ಮಹಲ]ನ್ನು ಕಟ್ಟಿಸಿದನು. ಹಿಜರಿ ಶಕ ೯೬೯, (ಕ್ರಿ. ಶ. ೧೫೬೧)ರಲ್ಲಿ ಅಲಿ ಆದಿಲಶಹನು ಗಗನ ಮಹಲನ್ನು ಕಟ್ಟಿಸಿದನು. ಹಿಜರಿ ೯೭೦ (ಕ್ರಿ. ಶ. ೧೫೬೨)ರಲ್ಲಿ ಅಲಿ ಆದಿಲಶಹನು ಮುದಗಲ್ ಕೋಟೆಯನ್ನು ಕೈವಶ ಮಾಡಿಕೊಂಡನು. ಅಲ್ಲಿಂದ ಧಾರವಾಡಕ್ಕೆ ಬಂದನು. ಅದೇ ವರುಷ ಬಂಕಾಪುರ ಕೋಟೆಯು ಅಲಿ ಆದಿಲಶಹನ ವಶಕ್ಕೆ ಬಂದಿತು. ಹಿಜರಿ ಶಕ ೯೭೧, (ಕ್ರಿ. ಶ. ೧೫೬೩)ರಲ್ಲಿ ಅಲಿ ಆದಿಲಶಹನು ರಾಮರಾಜನ ಹತ್ತಿರ ಹೋದನು. ವಿವರ ಹೀಗಿದೆ:

ಅಲಿ ಆದಿಲಶಹನು ಆಕಸ್ಮಿಕವಾಗಿ ಕುತುಬುಲ್ ಮುಲ್ಕ ನಾದಿರಶಾಹ ಹೈದರಾಬಾದ ಮತ್ತು ಹುಸೇನ ನಿಜಾಮಶಾಹ ಅಹಮದನಗರ, ಇವರಿಬ್ಬರೊಂದಿಗೆ ಕೂಡಿಕೊಂಡು

ಮೂವರೂ ವಿಜಯನಗರ ರಾಜ್ಯದ ರಾಜನಾದ ರಾಮರಾಜನ ವಿರುದ್ಧ ಬಹು ದೊಡ್ಡ ಯುದ್ಧವನ್ನು ಮಾಡಿದರು. ಈ ಯುದ್ಧವು ಚರಿತ್ರೆಯಲ್ಲಿ ಬಹು ಪ್ರಸಿದ್ಧವಾಗಿದೆ. ಇದೇ ಯುದ್ಧದಲ್ಲಿ ರಾಮರಾಜನ ಶಿರವನ್ನು ಕತ್ತರಿಸಿ ಬಿಜಾಪುರ ಕೋಟೆಯ ಅರ್ಕ ಕೋಟೆಯಲ್ಲಿ ಹೂಳಲಾಗಿದೆ. ಇದು ನಡೆದದ್ದು ಹಿಜರಿ ಶಕ ೯೭೨.

ಹಿಜರಿ ಶಕ ೯೭೩, (ಕ್ರಿ. ಶ.೫೬೪)ರಲ್ಲಿ ಅಲಿ ಆದಿಲಶಹನು ಒಂದು ತೋಟವನ್ನು ಕಟ್ಟಿಸಿದನು. ಹಿಜರಿ ಶಕ ೯೭೩, (ಕ್ರಿ.ಶ. ೧೫೬೫)ರಲ್ಲಿ ಬಿಜಾಪುರ ಕೋಟೆಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಿದನು. ಅದರ ವಿವರ ಹೀಗಿದೆ: ಹಿರಿಯ ಅಲಿ ಆದಿಲಶಹನ ರಾಜ್ಯವು ಬಹಳ ವಿಸ್ತಾರವಾಗಿತ್ತು ಮತ್ತು ಸೈನ್ಯವು ದೊಡ್ಡದಾಗಿತ್ತು. ಅದರಿಂದಾಗಿ ಅವನು ನಗರದ ಸುತ್ತ ಮುತ್ತ ಗಚ್ಚು ಮತ್ತು ಕಲ್ಲುಗಳಿಂದ ಗಟ್ಟಿಯಾದ ಕೋಟೆ ಗೋಡೆಯನ್ನು ಕಟ್ಟಿಸಲು ಇಚ್ಛಿಸಿದನು ಮತ್ತು ಅದರ ಅಡಿಗಲ್ಲನ್ನಿಟ್ಟು ಈ ಕೆಲಸವನ್ನು ಕಿಶ್ವರಖಾನನಿಗೆ ವಹಿಸಿದನು. ಈ ಕಾರ್ಯಕ್ಕಾಗಿ ಹೊರದೇಶದಿಂದ ಕಲ್ಲು ಕುಟಿಗರನ್ನು ಮತ್ತು ಗೌಂಡಿಗಳನ್ನು ಕರೆಯಿಸಿದನು. ಇಡೀ ಕೆಲಸವನ್ನು ಎರಡೂವರೆ ವರುಷಗಳಲ್ಲಿ ಮುಕ್ತಾಯಗೊಳಿಸಿದನು. ಈ ಕೋಟೆ ಗೋಡೆಯು ೬ ಫರ್ಸಖ್ [ಮೂರು ಮೈಲುಗಳಿಗೆ ಒಂದು ಫರ್ಸಕ್] ಉದ್ದವಿದೆ. ಗೋಡೆಯ ಅಗಲವು ೧೮ ಮೊಳವಿದೆ. ಮೇಲೆ ೧೨೬ ಬುರಜುಗಳು ಮತ್ತು ೨೬೧೦೦ ತೂಬುಗಳಿವೆ. ಅಗತ್ಯಕ್ಕಾಗಿ ಕೋಟೆಗೋಡೆಯಲ್ಲಿ ೭೦ ಕಳ್ಳಗಿಂಡಿಗಳನ್ನು ಬಿಡಲಾಗಿದೆ.

ನಗರದ ಪಶ್ಚಿಮಕ್ಕೆ ಮಕ್ಕಾ ಬಾಗಿಲು ಇದೆ. ಉಳಿದ ಬಾಗಿಲುಗಳಿಗೆ ಅವುಗಳ ದಿಕ್ಕಿನ ಊರುಗಳ ಹೆಸರಿನಿಂದ ಇಡಲಾಗಿದೆ. ಈ ಕೋಟೆ ಗೋಡೆಯ ಸುತ್ತಮುತ್ತ ಆಳವಾದ ಮತ್ತು ಅಗಲವಾದ ಕಂದಕವಿದೆ. ಅದರಲ್ಲಿಯ ನೀರು ಯಾವಾಗಲೂ ಕಡಿಮೆಯಾಗುವುದಿಲ್ಲ. ಅಲಿ ಆದಿಲಶಹನು ಹಿಜರಿ ಶಕ ೯೭೪, (ಕ್ರಿ.ಶ. ೧೫೬೬)ರಲ್ಲಿ ನಗರದಲ್ಲಿ ಒಂದು ಆಶುರ್ ಖಾನಾವನ್ನು ಕಟ್ಟಿಸಿದನು.

ಎಲ್ಲರಿಗೂ ಗೊತ್ತಿದ್ದಂತೆ ಅಲಿ ಆದಿಲಶಹನ ದರಬಾರದಲ್ಲಿ ೩೦೫೫೦ ಕುದುರೆ ಸವಾರರಿದ್ದರು. ೭೩೫ ಆನೆಗಳಿದ್ದುವು. ಇದೇ ವರುಷ ಪ್ರಧಾನ ಮಂತ್ರಿಯಾದ ಕಿಶ್ವರಖಾನನು ತೀರಿಕೊಂಡನು. ಅವನ ಸ್ಥಳದಲ್ಲಿ ಕಿಶ್ವರಖಾನನ ಮಗನಾದ ಹಾಜಿ ಕಿಶ್ವರಖಾನನನ್ನು ನಿಯಮಿಸಲಾಯಿತು. ಅಲಿ ಆದಿಲಶಹನಿಗೆ ಮಕ್ಕಳಿರಲಿಲ್ಲ. ಅವನ ಸಹೋದರ ತಹಮಾಸ್ಪನಿಗೆ ಇಬ್ಬರು ಗಂಡು ಮಕ್ಕಳಿದ್ದರು. ಒಬ್ಬನ ಹೆಸರು ಇಬ್ರಾಹಿಮ ಮತ್ತು ಇನ್ನೊಬ್ಬನ ಹೆಸರು ಇಸ್ಮಾಯಿಲ ಎಂದಾಗಿತ್ತು. ಅಲಿ ಆದಿಲಶಹನು ಇಬ್ಬರನ್ನೂ ಬಹು ಪ್ರೀತಿಯಿಂದ ಸಲಹುತ್ತ ತನ್ನ ಕಣ್ಣರಿಕೆಯಲ್ಲೇ ಬೆಳೆಸಿದ್ದನು. ಪ್ರತಿದಿನ ಅವರಿಬ್ಬರನ್ನೂ ತನ್ನ ಹತ್ತಿರವೇ ಮಲಗಿಸಿಕೊಳ್ಳುತ್ತಿದ್ದನು.

ದೈವ ಪ್ರೇರಣೆಯಂತೆ ಅಲಿ ಆದಿಲಶಹನ ಅಂತ್ಯವು ಸಮೀಪ ಬಂದಿತು. ಒಂದು ದಿನ ಬಾದಶಹನು ತನ್ನ ಮಹಲಿನಲ್ಲಿ ವಿಶ್ರಾಂತಿಯನ್ನು ಪಡೆಯುತ್ತಿದ್ದಾಗ ಒಬ್ಬ ದುಷ್ಟ

ಮತ್ತು ಕೃತಘ್ನ ಸೇವಕನು ತನ್ನ ಚೂರಿಯಿಂದ ಅವನಿಗೆ ಗಾಯ ಮಾಡಿದನು. ಆಗ ಅಲಿ ಆದಿಲಶಹನು ಮರಣಾಸನ್ನನಾದನು. ತನ್ನ ಹತ್ತಿರವೇ ಇದ್ದ ಸಹೋದರನ ಮಕ್ಕಳನ್ನು ಕೂಗಿ ಹತ್ತಿರ ಕರೆದನು. ಅವರಲ್ಲಿ ಇಬ್ರಾಹಿಮನು ಎಚ್ಚರವಾಗಿದ್ದನು ಮತ್ತು ಹತ್ತಿರ ಬಂದನು. ಬಾದಶಹನನ್ನು ಏನು ಎಂದು ಕೇಳಿದನು. ಅದಕ್ಕೆ ಬಾದಶಹನು ಪ್ರಧಾನ ಮಂತ್ರಿ ಕಮಾಲಖಾನನ್ನು ಕರೆಯಲು ಹೇಳಿದನು. ಕಮಾಲಖನನು ಬಂದ ನಂತರ, ಅವನಿಗೆ ಹೇಳುತ್ತ ತಾನು ಸತ್ತ ನಂತರ ಇಬ್ರಾಹಿಮನನ್ನೇ ಪಟ್ಟದ ಮೇಲೆ ಕುಳ್ಳಿರಿಸಬೇಕೆಂದು ಹೇಳಿದನು ಮತ್ತು ಹಾಗೆ ಮೃತ್ಯು ಪತ್ರವನ್ನೂ ಸಿದ್ಧಪಡಿಸಲು ಹೇಳಿದನು. ೯ ಗಂಟೆಗಳ ನಂತರ ಅಲಿ ಆದಿಲಶಹನು ಹಿಜರಿ ಶಕ ೯೮೮, (ಕ್ರಿ. ಶ. ೧೫೮೦)ರಲ್ಲಿ ಮರಣ ಹೊಂದಿದನು. ಅವನ ಶವವನ್ನು ನಗರದಲ್ಲಿಯ ನೌಬಾಗದಲ್ಲಿ ದಫನ ಮಾಡಿದರು. ಅದು ಅಲಿ ರೋಜಾ ಎಂದು ಇಂದಿಗೂ ಪ್ರಸಿದ್ಧವಾಗಿದೆ.

ಅಲಿ ಆದಿಲಶಹನು ೨೩ ವರುಷ ರಾಜ್ಯವನ್ನು ಆಳಿದನು. ಅವನು ತನ್ನ ೪೭ನೆಯ ವರುಷದಲ್ಲಿ ಮರಣ ಹೊಂದಿದನು. ಮುಲ್ಲಾ ಮಹಮ್ಮದ ರಜಾ ಮಶಹದೀ ಎಂಬ ಕವಿಯು ಈ ಸಂದರ್ಭದಲ್ಲಿ ೫ ನುಡಿಗಳ ಒಂದು ಪದ್ಯವನ್ನು ಪರ್ಶಿಯನ್ ಭಾಷೆಯಲ್ಲಿ ಬರೆದಿದ್ದಾನೆ: ಅದರ ಕನ್ನಡ ಅರ್ಥ ಹೀಗಿದೆ.

ಹೇಳಲು ದುಃಖವಾಗುತ್ತಿದೆ, ತರುಣ, ನ್ಯಾಯ ಪರಿಪಾಲನ ಮಾಡುವವ, ಆ ಮರದ ಟೊಂಗೆಯನ್ನೇ ಮೃತ್ಯು, ತನ್ನ ಕೈಯಿಂದ ಕಡಿದು ಹಾಕಿಬಿಟ್ಟಿದೆ.।೧।

ಭೂಮಿಯ ಮೇಲಿನ ದಯಾವಂತ, ಎಲ್ಲರ ಬಗ್ಗೆ ಕರುಣೆ ತೋರುವ ಚಂದ್ರ ಇಂದು ಮಾಯವಾದನೆಂದು ರಾಜಕೀಯದ ಆಗಸದಲ್ಲಿ ಚರ್ಚೆಯಾಗುತ್ತಿದೆ. ೨।

ಅಲಿ ನ್ಯಾಯದ ಅಧಿಪತಿ ಆತನ ಕಾಲದಲ್ಲಿ ಅನ್ಯಾಯವೆಂಬುದನ್ನು ಯಾರೂ ನೋಡಲಿಲ್ಲ ಮತ್ತು ಕೇಳಲಿಲ್ಲ. ಎಲ್ಲೆಲ್ಲೂ ನ್ಯಾಯವೇ ಇತ್ತು. । ೩ ।

ಮೃತ್ಯು ಸಂಭವಿಸುವಾಗ ಅಲಿಯ ನಾಲಿಗೆ ಕಹಿಯಾಗದಿರಲೆಂದು ಅಲ್ಲಾಹನು ಅವನ ನಾಲಿಗೆಯ ಮೇಲೆ ಜೇನುತುಪ್ಪವನ್ನು ಸುರಿದು ಸಿಹಿಯಾಗಿಸಿ ಹುತಾತ್ಮನನ್ನಾಗಿಸಿದನು. । ೪ ।

ಎಲ್ಲರ ಇತಿಹಾಸ ಬರೆಯುವ ಕಾಣದ ಇತಿಹಾಸಕಾರನು ಅಲಿ ಆದಿಲಶಹನ ಚರಿತ್ರೆಯನ್ನು 'ಜಗದ ಅಧಿಪತಿಯು ಇಂದು ಶಹೀದನಾದನು' [ಶಾಹೆ ಜಹಾಂ ಶುಧ ಶಹೀದ] ಎಂದು ಬರೆದನು. । ೫ ।

■

*

ಅಧ್ಯಾಯ - ೫

ಎರಡನೆಯ ಇಬ್ರಾಹಿಮ ಆದಿಲಶಾಹ [ಸಾನೀ] ಬಿನ್ ತಹಮಾಸ್ಪ

ಎಲ್ಲರಿಗೂ ಗೊತ್ತಿರುವಂತೆ ಹಿಜರಿ ಶಕ ೯೮೮, (ಕ್ರಿ. ಶ. ೧೫೮೦)ರಲ್ಲಿ ಅಲಿ ಆದಿಲಶಹನು ಮರಣ ಹೊಂದಿದ ನಂತರ ಮರುದಿನ ಬೆಳಿಗ್ಗೆ ಅಲಿ ಆದಿಲಶಹನ ಸಹೋದರನ ಮಗ ಎರಡನೆಯ ಇಬ್ರಾಹಿಮ ಆದಿಲಶಹ, ಜಗತ್ ಗುರು ಬಿನ್ ತಹಮಾಸ್ಪನನ್ನು ಆದಿಲಶಾಹೀ ಸಿಂಹಾಸನದ ಮೇಲೆ ಕುಳ್ಳಿರಿಸಿದರು. ಆಗ ಅವನು ೯ ವರುಷದವನಿದ್ದನು. ಇಬ್ರಾಹಿಮ ಆದಿಲಶಹನನ್ನು ಪಟ್ಟದ ಮೇಲೆ ಕುಳ್ಳಿರಿಸಿದ ಮೇಲೆ ಅವನ ತಮ್ಮ ಇಸ್ಮಾಯಿಲನು ಬೆಳಗಾವಿಯತ್ತ ಓಡಿ ಹೋದನು.

ಇಬ್ರಾಹಿಮ ಆದಿಲಶಹನು ದಯಾಳುವಾಗಿದ್ದನು ಮತ್ತು ಎಲ್ಲ ಜನರಿಗೆ ಪ್ರಿಯನಾಗಿದ್ದನು. ಅವನ ಕಾಲದಲ್ಲಿ ವಿಶ್ವದ ಎಲ್ಲ ಬುದ್ಧಿವಂತರು ಇಲ್ಲಿ ಬಂದು ಸೇರಿದ್ದರು. ಅಲ್ಲದೆ ಬಹಳಷ್ಟು ಸೂಫಿ ಸಾಧುಗಳು, ಸಂತರು, ಉಲೇಮಾಗಳು, ಪ್ರಸಿದ್ಧ ಧರ್ಮ ಶಿಕ್ಷಕರು, ಸಮಾಜ ಸೇವಕರು ವಿಶ್ವ ಪ್ರಸಿದ್ಧ ಯೋಧರು, ಕಲಾವಂತರು ಅವನ ದರಬಾರದಲ್ಲಿ ಆಶ್ರಯ ಪಡೆದಿದ್ದರು. ಗುಜರಾತದ ಅಹಮದಾಬಾದದ ಮೇಲೆ ಮೊಗಲ ಬಾದಶಹ ಅಕಬರನು ಹಲ್ಲೆಯನ್ನು ಮಾಡಿದಾಗ ಅಲ್ಲಿಯ ಈ ಜನರೆಲ್ಲ ಇಬ್ರಾಹಿಮ ಆದಿಲಶಹನಲ್ಲಿ ಬಂದು ಆಶ್ರಯ ಪಡೆದರು.

ಇಬ್ರಾಹಿಮ ಆದಿಲಶಹನು ಜನರ ಹೃದಯವನ್ನು ಬಲ್ಲವನಾಗಿದ್ದನು. ಸಾಧು ಸಂತರು, ಕಲಾವಂತರು, ಬರಹಗಾರರ ಸ್ಥಿತಿಯನ್ನು ಕಂಡು ಅವರೆಲ್ಲರಿಗೂ ಇಲ್ಲಿ ಬಂದು ಆಶ್ರಯ ಪಡೆಯಲು ಹೇಳಿದನು. ಜೊತೆಗೆ ಅಲ್ಲಾಹನ ಕೃಪೆಯಿಂದ ಬಿಜಾಪುರದ ವಾತಾವರಣ ಆರ್ಥಿಕವಾಗಿ ಮತ್ತು ಎಲ್ಲ ರೀತಿಯಿಂದ ದೆಹಲಿ ಮತ್ತು ಲಾಹೋರಿಗಿಂತ ಸುಸ್ಥಿತಿಯಲ್ಲಿತ್ತು

ಎಂದು ಬರುವವರೆಲ್ಲರಿಗೂ ಗೊತ್ತಿತ್ತು. ಹೀಗೆ ಬಂದವರೆಲ್ಲರೂ ಇಬ್ರಾಹಿಮ ಆದಿಲಶಹನ ದರಬಾರದಲ್ಲಿ ತಮ್ಮ ಅಂತಸ್ತನ್ನು ಬೆಳೆಸಿಕೊಂಡರು.

'ತಾರೀಖ ಎ ಫಿರಿಸ್ತಾ' ಎಂಬ ಅತಿ ಸುಂದರ, ಜ್ಞಾನದ ಭಾಂಡಾರದಿಂದ ತುಂಬಿ ತುಳುಕುವ ಸರಳ ಅರ್ಥವಾಗುವಂತೆ ಮತ್ತು ವಿಶ್ವ ಪ್ರಸಿದ್ಧ ಇತಿಹಾಸದ ಪುಸ್ತಕವನ್ನು ಬರೆದ ಮಹಮ್ಮದ ಕಾಸೀಮನು ಇಬ್ರಾಹಿಮ ಆದಿಲಶಹನ ಆಸ್ಥಾನದಲ್ಲಿದ್ದನು.

ಮುಲ್ಲಾ ಮಹಮ್ಮದ ಜುಹುರಿ ಎಂಬ ಪ್ರಸಿದ್ಧ ಪರ್ಶಿಯನ್ ಕವಿ ಸಾಹಿತಿಯೂ ಈತನ ಆಸ್ಥಾನದಲ್ಲಿದ್ದನು. ಅವನು ವಿಶ್ವ ಪ್ರಸಿದ್ಧ ನಾಲ್ಕು ಕೃತಿಗಳನ್ನು ಬರೆದಿದ್ದಾನೆ. 'ಗುಲ್ಜಾರೆ ಇಬ್ರಾಹಿಮ', 'ನೌರಸ', ಇಬ್ರಾಹಿಮ ಆದಿಲಶಹನ ಚರಿತ್ರ ವರ್ಣನೆಯ 'ಖಾನೆ ಖಲೀಲ' ಮತ್ತು ಅಹಮದನಗರದ ನಿಜಾಮನ ಚರಿತ್ರೆ ಹೇಳುವ 'ಸಾಕಿನಾಮಾ' ಹೀಗೆ ನಾಲ್ಕು ಪುಸ್ತಕಗಳನ್ನು ಬರೆದಿದ್ದಾನೆ.

ಇಬ್ರಾಹಿಮ ಆದಿಲಶಹನು ಸ್ವತಃ ಗಣಿತ ಮತ್ತು ಸಂಗೀತದಲ್ಲಿ ಪ್ರಸಿದ್ಧನಾಗಿದ್ದನು. ಈ ವಿಷಯದಲ್ಲಿ 'ಕಿತಾಬೆ ನೌರಸ' ಎಂಬ ಪುಸ್ತಕವನ್ನು ಬರೆದಿದ್ದಾನೆ. ಇದರಲ್ಲಿ ಸಂಗಿತದ ಎಲ್ಲ ಸ್ವರಗಳ ಬಗ್ಗೆ ವಿವರ ಇದೆ. ಮುಂದೆ ಬಂದ ಎಲ್ಲ ಸಂಗೀತಗಾರರೂ ಈತನ ಈ ಪುಸ್ತಕವನ್ನು ಅವಲಂಬಿಸಿಯೇ ಸಂಗೀತವನ್ನು ಕಲಿಯುತ್ತಿದ್ದರು.

ಹಿಜರಿ ಶಕ ೯೯೨, (ಕ್ರಿ. ಶ. ೧೫೮೪)ರಲ್ಲಿ ಸಾತಮಜಲಿ [ಹಪ್ತ ಕೋಹನ್] ಎಂಬ ಸುಂದರ ಮಹಲನ್ನು ಕಟ್ಟಿಸಿದನು. ಅದೇ ವರುಷ ದಿಲ್ ಕಶ್ ಎಂಬ ಮಹಲನ್ನೂ ಕಟ್ಟಿಸಿದನು. ಹಿಜರಿ ಶಕ ೯೯೩ದಲ್ಲಿ ಹೈದರೀ ಬುರುಜ ಕಟ್ಟಿಸಿದನು. ಹಿಜರಿ ೯೯೫, (ಕ್ರಿ. ಶ. ೧೫೮೬)ರಲ್ಲಿ ನೌರಸ ಮಹಲ ಎಂಬ ಸುಂದರ ಕಟ್ಟಡವನ್ನು ಕಟ್ಟಿಸಿದನು. ಹಿಜರಿ ಶಕ ೯೯೮, (ಕ್ರಿ. ಶ. ೧೫೮೯)ರಲ್ಲಿ ಆನಂದ ಮಹಲನ್ನು ಕಟ್ಟಿಸಿದನು. ಹಿಜರಿ ಶಕ ೧೦೦೫ (ಕ್ರಿ. ಶ. ೧೫೯೫)ರಲ್ಲಿ ಮಲಿಕಾ ಜಹಾನಳೊಂದಿಗೆ ಮದುವೆಯಾಯಿತು.

ಹಿಜರಿ ಶಕ ೧೦೧೩ (ಕ್ರಿ. ಶ. ೧೬೦೪)ರಲ್ಲಿ ನಗರದ ಹೊರಗಡೆ ಇರುವ ಜೋಹರಾಪುರ ಬಾಗಿಲಿನಿಂದ ಒಂದು ಕೋಸ ದೂರದಲ್ಲಿ ನವರಸಪುರ ಕೋಟೆಯನ್ನು ಕಟ್ಟಿಸಿದನು. ಹಿಜರಿ ಶಕ ೧೦೧೪ (ಕ್ರಿ.ಶ.೧೫೦೫) ಜೋಹರಾಪುರವನ್ನು ಕಟ್ಟಲಾಯಿತು.

ಎರಡನೆಯ ಇಬ್ರಾಹಿಮ ಆದಿಲಶಹನ ಆಸ್ಥಾನದಲ್ಲಿ ಇದ್ದ ಸಿಪೇಹ ಸಾಲಾರಗಳು, ವಜೀರರು, ಅಮೀರರುಗಳ ವಿವರ ಹೀಗಿದೆ. ಮಂಜನಖಾನ, ಚಪ್ಪು ಸಲಾಬತಖಾನ, ಐನುಲ್ ಮಲಿಕ, ಹಾಜೀ ಕಿಶ್ವರಖಾನ, ಚಾಂದಮಿಯಾ, ದಿಲಾವರಖಾನ, ಮೊಹಮ್ಮದಖಾನ, ಕಮಾಲಖಾನ, ಮಕ್ಸೂದ ಆಕಾ, ಸಯ್ಯದ ಹೈದರ ವಜೀರ, ಭಲ್ಲಮಖಾನ ವಜೀರ, ಮೀರ ರಫಿ, ಇಲಿಯಾಸ, ಯಾಕೂತ ಹಬಶೀ, ಮಿಯಾ ಅಲಿ ಉಸ್ತಾದ ಕಾರ, ಶಾಹ ನವಾಜಖಾನ, ಉಭಂಗಖಾನ ವಜೀರ, ದರ್ವೇಶ ಮಹಮ್ಮದ ವಜೀರ, ಖಾನಜೀ ಮಲಿಕ, ಮಲಿಕ ಸೌಬಲ, ಮಜಾಲಿಸಖಾನ ವಜೀರ, ಮುಲ್ಲಾ ಬಾಬಾ, ಶಾಹಜೀ ವಜೀರ,

ಎತಮಾದ ಖಾನ, ಪಸಂದಖಾನ, ಮೊದಲಾದವರು ಇದ್ದರು. ಅಂದಿನ ಕಾಲದ ವೈದ್ಯರ ವಿವರ, ಕಾಶೀ, ಅಪ್ಪಾಜೀ, ವಜೀರ ಅರೋರಾರಾವ, ಮಹನದಾಸ, ಬೆಹಕಾಜೀ, ಫರ್ನಾತೋಪ [ಫರ್ನಾಲುಬ್?] ಸೈನ್ಯದ ವಿವರ, ಒಟ್ಟು ೫೫೫೦೦, ಆನೆಗಳು ೯೫೦.

ಹಿಜರಿ ಶಕ ೧೦೨೭, (ಕ್ರಿ.ಶ. ೧೬೧೭)ರಲ್ಲಿ ಬೀದರ ಕೋಟೆಯನ್ನು ಗೆದ್ದನು. ಸದರೀ ವರುಷದಲ್ಲಿ ರಜ್ಜಬದ ೨ ನೆಯ ದಿನದಂದು ಮಹಮ್ಮದಪುರವನ್ನು ಗೆದ್ದನು. ಹಿಜರಿ ಶಕ ೧೦೩೪, (ಕ್ರಿ ಶ.೧೬೨೪)ರಲ್ಲಿ ಭುತ್ತೂರಿಯಲ್ಲಿ ಘನ ಘೋರ ಕಾಳಗವಾಯಿತು. ಚರಿತ್ರೆಯಲ್ಲಿ ಇದು ಬಹಳ ಪ್ರಸಿದ್ಧವಾದ ಯುದ್ಧವೆಂದು ಪರಿಗಣಿಸಿದೆ. ಇದೇ ವರುಷ ಇಬ್ರಾಹಿಮ ಆದಿಲಶಹನು ನವರಸವನ್ನು ಹಾಳು ಮಾಡಿದನು. ಹಿಜರಿ ಶಕ ೧೦೩೭, (ಕ್ರಿ.ಶ. ೧೬೨೭)ರಲ್ಲಿ ಇಬ್ರಾಹಿಮ ಆದಿಲಶಹನು ಭಗಂದರ ಎಂಬ ರೋಗದಿಂದ ಬಳಲಿದನು. ರಾಜ್ಯದಲ್ಲಿಯ ಎಲ್ಲ ವೈದ್ಯರು ಅವನ ಆರೋಗ್ಯವನ್ನು ಸುಧಾರಿಸಲು ಚಿಕಿತ್ಸೆ ಕೊಟ್ಟರು. ಆದರೆ ದೈವಾನುಗ್ರಹ ಇರದಿದ್ದರೆ ಯಾವ ವೈದ್ಯನೂ ಯಾವ ರೊಗವನ್ನೂ ಗುಣ ಪಡಿಸಲು ಸಾದ್ಯವಿಲ್ಲ. ಇಬ್ರಾಹಿಮ ಆದಿಲಶಹನ ರೋಗವು ದಿನದಿಂದ ದಿನಕ್ಕೆ ಉಲ್ಬಣಗೊಂಡಿತು. ಇದನ್ನು ಕಂಡ ಒಬ್ಬ ಕವಿಯು ನಾಲ್ಕು ನುಡಿಗಳಲ್ಲಿ ಹೀಗೆ ಬಣ್ಣಿಸಿದ್ದಾನೆ.

> ಯಾವ ಮನುಷ್ಯನೇ ಆಗಲಿ ಅವನ ಆಯುಷ್ಯ ಮುಗಿದಿದ್ದರೆ ಅವನು ಏನೇ ಚಿಕಿತ್ಸೆ ಪಡೆದರೂ ಅದು ಗುಣವಾಗುವುದಿಲ್ಲ. । ೧ ।
>
> ಎಷ್ಟೇ ಪಥ್ಯ ಮಾಡಿದರೂ ರೋಗ ಉಲ್ಬಣಗೊಳ್ಳುತ್ತದೆ, ತಣ್ಣನೆಯಾಗಲು ತಬಾಶೀರದಂಥ [ಶರೀರದಲ್ಲಿ ತಂಪು ಹುಟ್ಟಿಸುವ ಒಂದು ಪದಾರ್ಥ] ಪದಾರ್ಥವನ್ನು ತಿಂದರೂ ಶರೀರವೆಲ್ಲ ಬೆಂಕಿಯಿಂದ ಸುಟ್ಟಂತಾಗುತ್ತದೆ.೨।
>
> ಗುಲಾಬದ ಎಣ್ಣೆಯನ್ನು ನೆತ್ತಿಗೆ ಹಚ್ಚಿದಾಗಲೂ ಅದು ನೆತ್ತಿಯನ್ನು ಬೆಂಕಿಯಂತೆ ಸುಡುತ್ತದೆ. ಅದರಂತೆ ಶರೀರಕ್ಕೆಲ್ಲ ಗಂಧವನ್ನು ಲೇಪಿಸಿಕೊಂಡರೂ ಅದು ಮೈಯನ್ನೆಲ್ಲ ಸುಡುತ್ತದೆ. । ೩ ।
>
> ಶರೀರದಿಂದ ಯಾವಾಗ ಜೀವ ಹೋಗುವ ಸಮಯ ಬಂದಾಗ ಯಾವ ಚಿಕಿತ್ಸೆಯೂ ಫಲ ಕೊಡುವುದಿಲ್ಲ. । ೪ ।

ಫರ್ನಾತೋಪ ಎಂಬ ಹೆಸರಿನ ಒಬ್ಬ ಫಿರಂಗೀ ವೈದ್ಯನಿದ್ದನು. ತನ್ನನ್ನು ತಾನು ಜಗತ್ತಿನ ಒಬ್ಬ ದೊಡ್ಡ ವೈದ್ಯನೆಂದು ತಿಳಿದುಕೊಂಡಿದ್ದನು. ಅವನು ಕೂಡ ಬಾದಶಹನ ಆಂತರಿಕ ವೈದ್ಯರಲ್ಲಿ ಒಬ್ಬನಾಗಿದ್ದನು. ಬಾದಶಹನಿಗೆ ಧೈರ್ಯದಿಂದ ಚಿಕಿತ್ಸೆಯನ್ನು ಕೊಡಲು ಪ್ರಾರಂಬಿಸಿದನು. ಬಾದಶಹನು ಅವನು ಕೊಟ್ಟ ಔಷಧಿಯನ್ನು ಕೇವಲ ೫ ದಿನ ಸೇವಿಸಿದನು. ಅದರಿಂದ ಅವನ ರೋಗವು ಮೊದಲಿಗಿಂತ ಹೆಚ್ಚಾಯಿತು. ಆಗ ಬಾದಶಹನು ಫರ್ನಾತೋಪನನ್ನು ಕರೆದು 'ಎಂಥ ಔಷದಿಯನ್ನು ನನಗೆ ಕೊಟ್ಟಿರುವಿ?' ಎಂದು ಕೇಳಿದನು. ಆಗ ಪರ್ನಾತೋಪನು, 'ಈ ಮೊದಲು ನಾನು ಈ ಔಷಧವನ್ನು ಯಾರಿಗೂ

ಕೊಟ್ಟಿಲ್ಲ. ಮೊದಲ ಸಲ ನಿಮ್ಮ ಮೇಲೆ ಪ್ರಯೋಗ ಮಾಡಿರುವೆ, ಆದರೆ ಅದು ನಿಮ್ಮ ರೋಗದ ಮೇಲೆ ಪರಿಣಾಮ ಬೀರಲಿಲ್ಲ ಎಂದು ಕಾಣುತ್ತದೆ' ಎಂದು ಹೇಳಿದನು. ಹೀಗೆ ಹೇಳುತ್ತಿದ್ದಂತೆಯೇ ಬಾದಶಹನು, ಅತ್ಯಂತ ಕರುಣೆಯಿಂದ ಅವನಿಗೆ 'ನೀನಂತು ನನ್ನ ಕೆಲಸವನ್ನು ಪೂರ್ಣಗೊಳಿಸಿರುವಿ. ಆದರೆ ನಾನು ಸತ್ತ ನಂತರ ನಮ್ಮ ಜನರು ನಿನ್ನನ್ನು ಜೀವಂತ ಇರಗೊಡುವುದಿಲ್ಲ. ಆದ್ದರಿಂದ ನಾನು ಇನ್ನೂ ಜೀವಂತ ಇರುವಾಗಲೇ ನೀನು ಈ ರಾಜ್ಯವನ್ನು ಬಿಟ್ಟು ಬೇಗ ಎಲ್ಲಿಯಾದರು ಹೋಗು' ಎಂದು ಹೇಳಿದನು.

ಆದರೆ ಆ ಫಿರಂಗೀ ವೈದ್ಯನ ಹಣೆಯ ಬರಹದಲ್ಲಿ ಶಿಕ್ಷೆಯನ್ನು ಅನುಭವಿಸುವುದು ಇತ್ತು. ಆದ್ದರಿಂದ ಅವನು ನಗರವನ್ನು ಬಿಟ್ಟು ಹೋಗಲಿಲ್ಲ. ಕೆಲವೇ ದಿನಗಳಲ್ಲಿ ಬಾದಶಹನು ಮರಣವನ್ನು ಹೊಂದಿದನು. ಬಾದಶಹನ ಮರಣಕ್ಕೆ ಇವನೇ ಕಾರಣ ಎಂದು ತಿಳಿದು ಖವಾಸಖಾನನು ಫಿರಂಗೀ ವೈದ್ಯನನ್ನು ಹಿಡಿದು ತಂದು ಅವನ ಮೂಗು ಮತ್ತು ಮೇಲ್ತುಟಿಯನ್ನು ಕತ್ತರಿಸಿ ಬಾದಶಹನ ಮರಣದ ಸೇಡನ್ನು ತಿರೀಸಿಕೊಂಡನು. ಆದರೆ ಆ ಫಿರಂಗಿ ವೈದ್ಯನು ಮನೆಗೆ ಹೋಗಿ ತನ್ನ ಒಬ್ಬ ಗುಲಾಮನ ಮೂಗು ಮತ್ತು ಮೇಲ್ತುಟಿಯನ್ನು ಕತ್ತರಿಸಿ ತನ್ನ ಮೂಗು ಮತ್ತು ಮೇಲ್ತುಟಿಗಳಿಗೆ ಹಚ್ಚಿ ಹೊಲಿದುಕೊಂಡನು ಮತ್ತು ಮೊದಲಿನಂತೆ ಆಗಿ, ತನ್ನ ವೈದ್ಯ ವೃತ್ತಿಯನ್ನು ಮುಂದುವರಿಸಿದನು ಒಬ್ಬ ಒಳ್ಳೆಯ ವೈದ್ಯನೆಂದೂ ಅವನಂಥ ವೈದ್ಯರು ಯಾರೂ ಇಲ್ಲವೆಂದು ಹೆಸರು ಗಳಿಸಿಕೊಂಡನು.

ಎಲ್ಲರಿಗೂ ಗೊತ್ತಿದ್ದಂತೆ ಎರಡನೆಯ ಇಬ್ರಾಹಿಮ ಆದಿಲಶಹನಿಗೆ ನಾಲ್ಕು ಜನ ಗಂಡು ಮಕ್ಕಳಿದ್ದರು. [ರಾಜಪುತ್ರರು]. ರಾಣಿ ಮಲಿಕಜಹಾನಳ ಹೊಟ್ಟೆಯಲ್ಲಿ ದರ್ವೇಶಪಾಶಾ ಹುಟ್ಟಿದ್ದನು. ಅವನು ಹಿರಿಯವನು ಮತ್ತು ತರುಣನಾಗಿದ್ದನು. ಅವನೇ ಸಿಂಹಾಸನದ ಉತ್ತರಾಧಿಕಾರಿಯಾಗಿದ್ದನು. ಎರಡನೆಯವನು ಸುಲ್ತಾನ ಸುಲೇಮಾನ. ಅವನ ತಾಯಿಯ ಹೆಸರು ರಾಣಿ ಕಮಾಲಖಾತೂನ ಎಂಬುದಾಗಿತ್ತು. ಮೂರನೆಯವನು ಸುಲ್ತಾನ ಮೊಹಮ್ಮದ. ಅವನು ರಾಣಿ ತಾಜ್ ಸುಲ್ತಾನಾಳ ಹೊಟ್ಟೆಯಲ್ಲಿ ಹುಟ್ಟಿದ್ದನು. ಇನ್ನೊಬ್ಬ ನಾಲ್ಕನೆಯವನು ಎಲ್ಲರಿಗಿಂತ ಚಿಕ್ಕವನು, ಸುಂದರ ಮಹಲ ಎಂಬ ರಾಣಿಯ ಹೊಟ್ಟೆಯಲ್ಲಿ ಹುಟ್ಟಿದ್ದನು. ಈ ಎಲ್ಲ ನಾಲ್ಕು ರಾಜಪುತ್ರರು ಜಾಣರು, ಬುದ್ಧಿವಂತರು ಮತ್ತು ತರುಣರಾಗಿದ್ದರು.

ಇಖಲಾಸಖಾನ ಹಬಶೀ ಎಂಬವನು ಬಹಳ ವರುಷಗಳಿಂದ ರಾಜ್ಯದ ನಂಬಿಗೆಯ ಸೇವಕನಾಗಿದ್ದನು ಮತ್ತು ಬಹಳ ವರುಷಗಳಿಂದ ಪ್ರಧಾನ ಮಂತ್ರಿಯೆಂದು ಸೇವೆ ಸಲ್ಲಿಸುತ್ತಿದ್ದನಲ್ಲದೆ ಅವನೇ ಸೈನ್ಯದ ಮುಖ್ಯಾಧಿಕಾರಿಯೂ ಆಗಿದ್ದನು. ಅವನು ರಾಜನ ಒಪ್ಪಿಗೆಯಿಲ್ಲದೆ ಏನನ್ನೂ ಮಾಡುತ್ತಿದ್ದಿಲ್ಲ.

ದಿಯಾನತುಲ್ ಮುಲ್ಕ ಶಿರಾಜಿ ಎಂಬವನು ಶಾಹನವಾಜಖಾನನ ನಿಕಟ ಸಂಬಂಧಿಯಾಗಿದ್ದನು. ಶಾಹನವಾಜಖಾನನ ನಂತರ ದಿಯಾನತುಲ್ ಮುಲ್ಕನು ಶಾಹನವಾಜ ಖಾನಿ ಎಂಬ ಪದವಿಯನ್ನು ಪಡೆದು, ಪ್ರಧಾನ ಆಡಳಿತಾಧಿಕಾರಿಯಾಗಿದ್ದನು ಮತ್ತು ದರಬಾರದಲ್ಲಿ ಪ್ರಭಾವೀ ನಾಯಕನಾಗಿದ್ದನು. ನವಾಬ ಅಮೀನುಲ್ ಮುಲ್ಕ ಆಕಾ

ರಜಾ ಶಿರಾಜಿ ಎಂಬವನಿಗೆ ಬಾದಶಹನು ನವಾಬಖಾನ ಭಾಯಿ ಎಂದು ಕರೆಯುತ್ತಿದ್ದನು. ಈ ನವಾಬಖಾನಭಾಯಿಯು ರಾಜ್ಯದ ಆಡಳಿತ ಮತ್ತು ಕಂದಾಯದ ಮುಖ್ಯಸ್ಥನಾಗಿದ್ದನು. ಆಸ್ಥಾನದಲ್ಲಿಯ ಎಲ್ಲ ಸರದಾರರು, ಅಮೀರರು ಮತ್ತು ಹಿಂದು ಸರದಾರರು ಸಹಿತವಾಗಿ ಎಲ್ಲರೂ ಹಿರಿಯ ಮಗನಾದ ದರವೇಶಪಾಶಾನನ್ನು ಸಿಂಹಾಸನದಮೇಲೆ ಕುಳ್ಳಿರಿಸಲು ಇಚ್ಛಿಸುತ್ತಿದ್ದರು. ಆದರೆ ದರ್ವೇಶಪಾಶಾನ ತಾಯಿಯು ಮಾಡಿದ ಕೆಲವು ತಪ್ಪುಗಳಿಂದ ಅವಳು ಇಬ್ರಾಹಿಮ ಆದಿಲಶಹನ ದೃಷ್ಟಿಯಲ್ಲಿ ಕೆಳಗೆ ಬಿದ್ದಿದ್ದಳು.

ಇಬ್ರಾಹಿಮ ಆದಿಲಶಾಹ ಬಾದಶಹನು ಮರಣಾಸನ್ನನಾದಾಗ ಮಿರ್ಜಾ ಮೊಹಮ್ಮದ ಅಮೀನ ಎಂಬವನನ್ನು ಕರೆದನು. ಈತನು ಬಾಬಾ ಸರಮಜಾಲಿಸಿಯ ಅಳಿಯನಾಗಿದ್ದನು ಮತ್ತು ಬಾದಶಹನ ಅತ್ಯಂತ ನಿಕಟವರ್ತಿಯಾಗಿದ್ದನು.

ಹೀಗೂ ಹೇಳುತ್ತಾರೆ, ಮಿಯಾ ಮಲಿಕ ಅಂಬರ ಮತ್ತು ಮುಲ್ಲಾ ಬಾಬಾನ ನಡುವೆ ಬಹಳ ಸ್ನೇಹವಿತ್ತು. ಬಾದಶಹನು ಮೊಹಮ್ಮದ ಅಮೀನನಿಗೆ ಕೇಳಿದನು, 'ಈ ಸಭೆಯ [ನನ್ನ] ಅಂತ್ಯ ನಿನಗೆ ಹೇಗೆ ಅನಿಸುತ್ತದೆ?' ಆಗ ಆತನು ಹಿಗೆ ಹೇಳಿದನು. 'ಈ ಸಭೆಯ ಅಂತ್ಯದಲ್ಲಿ ರಕ್ತದ ವಾಸನೆ ಬರುತ್ತಿದೆ' ಎಂದು ಹೇಳಿದನು. ಅದರಂತೆಯೇ ಆಯಿತು. ಮುಲ್ಲಾಬಾಬಾನ ಕೊಲೆ ಮಾಡಲಾಯಿತು. ಅದರೆ ಬಾದಶಹನು ಮೊಹಮ್ಮದ ಅಮೀನನನ್ನು, ಅವನ ದೂರದೃಷ್ಟಿ ಮತ್ತು ನೇರ ನುಡಿಗಳಿಂದಾಗಿ ಅವನನ್ನು ಮೆಚ್ಚಿ ಅವನನ್ನು ತನ್ನ ಖಾಸಾ ಗುಪ್ತ ಸಹಾಯಕನನ್ನಾಗಿ ಮಾಡಿಕೊಂಡಿದ್ದನು. ಒಂದು ದಿನ ಏಕಾಂತದಲ್ಲಿ ಮೊಹಮ್ಮದ ಅಮೀನನನ್ನು ಕರೆದು 'ಇಖಲಾಸಖಾನನು ನಾನು ಎಷ್ಟು ಹೇಳುತ್ತೇನೆಯೋ ಅಷ್ಟನ್ನೇ ಮಾಡುತ್ತಾನೆ ಮತ್ತು ತನ್ನ ನಂಬಿಗೆಯನ್ನು ಕಾಯ್ದುಕೊಂಡಿದ್ದಾನೆ. ಆದರೆ ನನ್ನ ನಂತರ ನನ್ನ ಇಚ್ಛೆಯಂತೆ ಅವನು ಕಾರ್ಯವನ್ನು ಮಾಡುತ್ತಾನೆಂದು ನನಗೆ ನಂಬಿಗೆ ಇಲ್ಲ. ದಿಯಾನುತುಲ್ ಮುಲ್ಕನು ದರ್ವೇಶನ ಪರವಾಗಿದ್ದಾನೆ. ಒಂದು ವೇಳೆ ಅವನು ಬಾದಶಹನಾದರೆ ನನ್ನ ಈ ರಾಜ್ಯದಲ್ಲಿ ಕೂಡ ಕುತುಬಶಾಹಿ ರಾಜದಲ್ಲಿ ಇದ್ದಂತೆ ಇಲ್ಲಿಯೂ ಶಿಯಾ-ರಾಫಜೀಗಳ [ಶಿಯಾ ಪಂಥದ ಒಂದು ಪಂಗಡ] ರಾಜ್ಯವಾಗುತ್ತದೆ. [ಯಾಕೆಂದರೆ ದರವೇಶನ ತಾಯಿ ಮಲಿಕಾ ಜಹಾನಳು ಕುತುಬಶಾಹೀ ವಂಶಸ್ಥಳು]. ಆದ್ದರಿಂದ ನಾನು ದರವೇಶನನ್ನು ಪಟ್ಟದಮೇಲೆ ಕುಳ್ಳಿರಿಸಲು ಒಪ್ಪುವುದಿಲ್ಲ. ನನ್ನ ನಾಲ್ಕೂ ಮಕ್ಕಳಲ್ಲಿ ಸುಲ್ತಾನ ಮೊಹಮ್ಮದ ಒಬ್ಬನೇ ಅತಿ ಯೋಗ್ಯ ಮತ್ತು ಸೂಕ್ತ ಎಂದು ನಾನು ನಿಮಗೆ ಅನೇಕ ಸಲ ಹೇಳಿಕೊಳ್ಳುತ್ತಲೇ ಬಂದಿರುವೆ. ಅದಕ್ಕಾಗಿ ನೀವು ಎಲ್ಲರೂ, ಇದಕ್ಕೆ ಟೊಂಕ ಕಟ್ಟಿ ಸನ್ನದ್ಧರಾಗಿ ನಾನು ಸತ್ತ ಬಳಿಕ ಸುಲ್ತಾನ ಮೊಹಮ್ಮದನನ್ನೇ ಸಿಂಹಾಸನದ ಮೇಲೆ ಕುಳ್ಳಿರಿಸಬೇಕು ಮತ್ತು ನಿಜವಾಗಿ ನೀವು ನನ್ನ ನಂಬಿಗಸ್ಥರು, ಪ್ರಾಮಾಣಿಕರು ಆಗಿದ್ದರೆ, ನೀವು ನಿಮ್ಮ ಕೊನೆಯ ಉಸಿರು ಇರುವ ವರೆಗೂ ಹೋರಾಡಿ ಈ ಕಾರ್ಯವನ್ನು ಯಶಸ್ವಿಗೊಳಿಸಬೇಕು' ಎಂದು ಬಾದಶಹನು ಹೇಳಿದನು. ಅದನ್ನು ಕೇಳಿದ ಮೊಹಮ್ಮದ ಅಮೀನನು ಇಂಥದೊಂದು ದೊಡ್ಡ ಜವಾಬ್ದಾರಿಯನ್ನು ಬಾದಶಹನು

ತನಗೆ ಒಪ್ಪಿಸಿದನೆಂದು, ತಕ್ಷಣ ಭೂಮಿಗೆ ತಲೆಹಚ್ಚಿ ಅಲ್ಲಾಹನನ್ನು ಸ್ಮರಿಸಿದನು ಮತ್ತು ಬಾದಶಹನಿಗೆ ಹೀಗೆ ವಿನಂತಿಸಿಕೊಂಡನು: 'ಜಹಾಪನಾ, ಈ ಕೆಲಸಕ್ಕಾಗಿ ನನ್ನ ಜೊತೆಗೆ ಇನ್ನೊಬ್ಬ ಯೋಗ್ಯ ವ್ಯಕ್ತಿಯನ್ನು ಕೊಡಿರಿ'

ಅದಕ್ಕೆ ಬಾದಶಹನು, 'ನಿನಗೆ ಯಾರು ಒಪ್ಪಿಗೆಯೋ ಅವರನ್ನೇ ನಿನ್ನ ಜೊತೆ ಮಾಡುವೆ ಹೇಳು' ಎಂದನು. ಆಗ ಪ್ರತಿಯಾಗಿ 'ದೌಲತಖಾನನನ್ನು ನನ್ನ ಜೊತೆಗೆ ಕೊಡಿರಿ ಅವನು ರಾಜ್ಯದ ಕೆಲಸದಲ್ಲಿ ವಿಶೇಷವಾಗಿ ಕಾನೂನು ಮತ್ತು ಆಡಳಿತದಲ್ಲಿ ಅತ್ಯಂತ ಕಟ್ಟುನಿಟ್ಟಿನಿಂದ ವ್ಯವಸ್ಥಿತವಾಗಿ ಕೆಲಸ ಮಾಡುತ್ತಿದ್ದುದರಿಂದ ರಾಜ್ಯದ ತುಂಬೆಲ್ಲ ಪ್ರಭಾವಿಯಾಗಿದ್ದಾನೆ. ಅವನಿಂದ ಈ ಕೆಲಸಕ್ಕೆ ಉಪಯೋಗವಾಗುತ್ತದೆ' ಎಂದು ಮೊಹಮ್ಮದ ಅಮೀನನು ಹೇಳಿದನು.

'ನೀನು ಹೇಳಿದಂತೆಯೇ ದೌಲತಖಾನನು ಇದ್ದಾನೆ, ಆದರೆ ಅವನು ಕೃತಘ್ನ ಮತ್ತು ವಿಶ್ವಾಸದ್ರೋಹಿಯಾಗಿದ್ದಾನೆ. ಅವನು ಯಾರ ಜೊತೆಗೂ ವಿಶ್ವಾಸದಿದಂದ ಇರಲು ಸಾಧ್ಯವಿಲ್ಲ. ನಾನು ಸತ್ತ ನಂತರ ಇದು ನಿನಗೆ ತಿಳಿಯುತ್ತದೆ.' ಎಂದು ಬಾದಶಹನು ಹೇಳುತ್ತ ದೌಲತಖಾನನ ಒಂದೆರಡು ಉದಾಹರಣೆಗಳನ್ನು ಕೊಟ್ಟನು.

ಇಬ್ರಾಹಿಮ ಆದಿಲಶಹನಲ್ಲಿ ಸಂಗೀತ ಕಲಿಯುವ ಶಿಷ್ಯರಲ್ಲಿ ಒಬ್ಬ ಶಿಷ್ಯ ಚಾಂದಖಾನ ಎಂಬುವನು ಇದ್ದನು. ಅವನಿಗೆ ಇಬ್ಬರು ಶಿಷ್ಯರಿದ್ದರು. ಒಬ್ಬನ ಹೆಸರು ದೌಲತಯಾರ, ಆತನೇ ಈ ದೌಲತಖಾನನು. ಇನ್ನೊಬ್ಬನ ಹೆಸರು ಮುಬಾರಕ. ದೌಲತ ಯಾರನು ಮರಾಠೀ ಮೂಲದವನಾಗಿದ್ದನು ಮತ್ತು ಬಹಳ ಚತುರನಾಗಿದ್ದನು. ಅದರಿಂದಾಗಿ ಬಾದಶಹನು ಅವನ ಬಗ್ಗೆ ಮೆಚ್ಚುಗೆ ತೋರಿಸುತ್ತಿದ್ದನು. ಒಂದು ದಿನ ಚಾಂದಖಾನನು ತನ್ನ ಈ ಇಬ್ಬರೂ ಶಿಷ್ಯರನ್ನು ಬಾದಶಹನ ಎದುರಿಗೆ ಕರೆದುಕೊಂಡು ಬಂದು ಅವನ ಸೇವೆಯಲ್ಲಿ ಕೊಟ್ಟನು. ಬಾದಶಹನು ಅವರನ್ನು ಪರೀಕ್ಷಿಸುತ್ತ ದೌಲತಖಾನನಿಗೆ 'ಈ ಚಾಂದಖಾನನ ಮುಖದ ಮೇಲೆ ಉಗಿ' ಎಂದು ಆದೇಶಿಸಿದನು. ತಕ್ಷಣ ಏನನ್ನೂ ವಿಚಾರಿಸದೆ ದೌಲತಖಾನನು ತನ್ನ ಗುರು ಚಾಂದಖಾನನ ಮೇಲೆ ಉಗಿದುಬಿಟ್ಟನು. ಅವನ ಈ ನೀಚ ಕೃತ್ಯವನ್ನು ನೋಡಿದ ಬಾದಶಹನು, ಈತನೆಂದೂ ವಿಶ್ವಾಸಕ್ಕೆ ಅರ್ಹನಲ್ಲವೆಂದು ನಿರ್ಧರಿಸಿದನು.

ಇನ್ನೊಂದು ಉದಾಹರಣೆ ಎಂದರೆ, ದೌಲತ ಯಾರನಿಗೆ ಬಾದಶಹನು ದೌಲತಖಾನ ಎಂದು ಬಿರುದನ್ನು ಕೊಟ್ಟು ಬಿಜಾಪುರ ಶಹರದ ಹವಾಲ್ದಾರನನ್ನಾಗಿ ನಿಯಮಿಸಿದ್ದನು. ಕೆಲವು ದಿನಗಳ ನಂತರ, ಒಂದು ಸಲ ಬಾದಶಹನು ತನ್ನ ಸಿಬ್ಬಂದಿಯೊಂದಿಗೆ ನಗರದ ಹೊರಗೆ ವಾಯು ವಿಹಾರಕ್ಕೆ ಹೋದವನು ತಿರುಗಿ ಬರಲು ರಾತ್ರಿಯಾಯಿತು. ಅಷ್ಟರಲ್ಲಿ ನಗರದ ಮಹಾದ್ವಾರವನ್ನು ಮುಚ್ಚಲಾಗಿತ್ತು. ಬಾದಶಹನ ಸೇವಕರು ನಗರದ ದ್ವಾರದಲ್ಲಿ ಬಂದು ಬಾದಶಹರು ಬಂದಿದ್ದಾರೆ ಬಾಗಿಲು ತೆರೆಯಲು ಹೇಳಿದರು. ಅದಕ್ಕೆ ದೌಲತಖಾನನು

ಉತ್ತರಿಸುತ್ತ, ಬಾದಶಹನ ಮುಖ ನೋಡದೆ ನಾನು ಬಾಗಿಲನ್ನು ತೆರೆಯುವುದಿಲ್ಲವೆಂದು ಹೇಳಿದನು. ಆಗ ಬಾದಶಹನು ಸಿಬ್ಬಂದಿಯನ್ನು ಸರಿಸಿ ತಾನೆ ಮುಂದೆ ಬಂದು. ನೋಡು ಎಂದನು. ಆಗ ದೌಲತಖಾನನು ಬಾದಶಹನನ್ನು ಕಣ್ಣಾರೆ ನೋಡಿ ಬಾಗಿಲು ತೆರೆದನು. ಇದು ಬಾದಶಹನಿಗೆ ಸರಿ ಕಾಣಲಿಲ್ಲ. ಅಂದೇ ಅವನನ್ನು ಹವಾಲ್ದಾರ ಹುದ್ದೆಯಿಂದ ತೆಗೆದು ಹಾಕಿ ಸೆರೆಮನೆಯಲ್ಲಿ ಇಟ್ಟನು. ಆಗ ಇದೇ ಮೊಹಮ್ಮದ ಅಮೀನನು ಬಂದು ದೌಲತಖಾನನ ಪರವಾಗಿ ವಾದಿಸಿ ತನ್ನ ಪ್ರಭಾವವನ್ನು ಬಳಸಿ ಅವನನ್ನು ಸೆರೆಮನೆಯಿಂದ ಬಿಡಿಸಿ ತಿರುಗಿ ಹವಾಲ್ದಾರ ಹುದ್ದೆಗೆ ಬರಲು ಕಾರಣನಾಗಿದ್ದನು.

ಇಬ್ರಾಹಿಮ ಆದಿಲಶಹನು ಹಿಜರಿ ಶಕ ೧೦೩೭, ಮೊಹರಮ ೧೧, (ಕ್ರಿ. ಶ. ೧೬೨೭)ರಲ್ಲಿ ಈ ಜಗತ್ತಿನಿಂದ ಪರಜಗತ್ತಿಗೆ ತಿರುಗಿ ಹೋದನು. ಜೊಹರಾಪುರದಲ್ಲಿ ಜೊಹರಾಸುಲ್ತಾನಳಿಗಾಗಿ ಕಟ್ಟಿದ್ದ ಸಮಾಧಿ ಕಟ್ಟಡದಲ್ಲಿ ಇಬ್ರಾಹಿಮ ಆದಿಲಶಹನನ್ನು ದಫನ ಮಾಡಲಾಯಿತು. ಅವನು ಒಟ್ಟು ೪೮ ವರುಷ ರಾಜ್ಯವಾಳಿದನು.

ಇಬ್ರಾಹಿಮ ಆದಿಲಶಹನು ಮರಣಹೊಂದಿದ ನಂತರ ಮಿರ್ಜಾ ಮೊಹಮ್ಮದ ಅಮೀನನು ಬಾದಶಹನ ಮರಣದ ಸುದ್ದಿಯನ್ನು ರಹಸ್ಯವಾಗಿ ಇಟ್ಟು ನಗರದ ಕೋಟೆಯ ಎಲ್ಲ ಬಾಗಿಲುಗಳನ್ನು ಮುಚ್ಚಿಸಿದನು. ಅಗತ್ಯಕ್ಕೆ ಹೋಗಿ ಬರಲು ಕಳ್ಳಗಿಂಡಿಗಳನ್ನು ತೆರೆದಿದ್ದನು. ಇಖಲಾಸಖಾನ, ದಿಯಾನತುಲ್ ಮುಲ್ಕ, ಆಕಾ ರಜಾ ಮತ್ತು ಪ್ರಭಾವಶಾಲಿಗಳಾದ ಬ್ರಾಹ್ಮಣ ಮುತ್ಸದ್ದಿಗಳನ್ನು ದಿವಾನಖಾನೆಗೆ ಕರೆದು ಕುಳ್ಳಿರಿಸಿದನು. ತನ್ನ ಕಡೆಯಿಂದ ಒಬ್ಬ ದರಬಾರೀ ಸೇವಕನನ್ನು ಕಳಿಸಿ ಇಖಲಾಸಖಾನನಿಗ 'ಬಾದಶಹರು ಸಾಯುವ ಮೊದಲು ಸುಲ್ತಾನ ಮೊಹಮ್ಮದನನ್ನು ಪಟ್ಟದ ಮೇಲೆ ಕುಳ್ಳಿರಿಸಲು ಆದೇಶ ಮಾಡಿದ್ದಾರೆ' ಎಂದು ಹೇಳಿ ಕಳಿಸಿದನು. ಇದನ್ನು ಕೇಳಿದ ದಿಯಾನತುಲ್ ಮುಲ್ಕನು ತಲೆಎತ್ತಿ 'ತಲೆ ಇರುವವರೆಗೆ ಬಾಸಿಂಗನ್ನು ಯಾರೂ ಕಾಲಿಗೆ ಕಟ್ಟುವುದಿಲ್ಲ' ಎಂದನು, ಅದಕ್ಕೆ ಉತ್ತರವಾಗಿ ದೌಲತಖಾನನು ತಕ್ಷಣ 'ನಿನ್ನನ್ನು ಯಾರು ಕೇಳಿದ್ದಾರೆ? ನೀನು ಬಾಯಿ ಮುಚ್ಚಿಕೊಂಡು ಸುಮ್ಮನೆ ಕುಳಿತುಕೊ' ಎಂದನು. ಅದನ್ನು ಕೇಳಿದ ದಿಯಾನತುಲ್ ಮುಲ್ಕನು ನಾಚಿಕೆಯಿಂದ ತಲೆ ಕೆಳಗೆ ಹಾಕಿದನು.

ದೌಲತಖಾನನು ಮತ್ತೆ ಇಖಲಾಸಖಾನನ್ನು ಕೇಳುತ್ತ 'ಈಗ ಹೇಳಿ, ಇದಕ್ಕೆ ನಿಮ್ಮ ಅಭಿಪ್ರಾಯ ಏನು?' ಎಂದು ಕೇಳಿದನು. ಆಗ ಇಖಲಾಸಖಾನನು 'ಬಡೀ ಸಾಹೇಬಾರನ್ನು ಕೇಳೋಣ, ಬಾದಶಹರ ಮರಣದ ನಂತರ ನಾನು ಆಡಳಿತದಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ. ದರ್ವೇಶ ಬಾದಶಹ ಮತ್ತು ಸುಲ್ತಾನ ಮೊಹಮ್ಮದರು ಇಬ್ಬರೂ ರಾಜಪುತ್ರರಿದ್ದಾರೆ. ನೀವು ಮತ್ತು ಬಡೀ ಸಾಹೇಬಾರು ಯಾರನ್ನು ಒಪ್ಪುತ್ತೀರೋ ಅವನನ್ನು ಪಟ್ಟದಮೇಲೆ ಕುಳ್ಳಿರಿಸಿರಿ' ಎಂದು ಹೇಳಿದನು.

ದೌಲತಖಾನನು ಬಡೀ ಸಾಹೇಬಳ ಹತ್ತಿರ ಬಂದು, ನಡೆದ ಸಂಗತಿಯನ್ನು ಹೇಳಿದನು.

ಅದನ್ನು ಕೇಳಿದ ಬಡೀಸಾಹೇಬಾಳು ಹೀಗೆ ಹೇಳಿದಳು: 'ಬಾದಶಹರು ಯಾರನ್ನು ಪಟ್ಟದ ಮೇಲೆ ಕುಳ್ಳಿರಿಸಲು ಹೇಳಿದ್ದಾರೆಯೋ ಅವನನ್ನೇ ಕುಳ್ಳಿರಿಸಿರಿ' ಬಡೀ ಸಾಹೇಬಾಳ ಈ ಮಾತನ್ನು ಕೇಳಿ ದೌಲತಖಾನನು ತಿರುಗಿಬಂದು ಇಖಲಾಸಖಾನನ್ನು ಹೊರಗೆ ಕಳಿಸಿದನು. ದಿಯಾನತುಲ್ ಮುಲ್ಕ, ಆಕಾ ರಜಾ ಮತ್ತು ಬ್ರಾಹ್ಮಣ ಅಧಿಕಾರಿಗಳನ್ನು ಮಹಲಿನಲ್ಲಿ ಬಂಧನದಲ್ಲಿಟ್ಟನು.

ಅನಂತರ, ಇಬ್ರಾಹಿಮ ಆದಿಲಶಹನ ಶವವನ್ನು ಸಕಲ ಸರಕಾರೀ ಗೌರವಗಳೊಂದಿಗೆ ಜೋಹರಾಪುರದಲ್ಲಿ ಇದ್ದ ರೋಜಾದಲ್ಲಿ ದಪನ ಮಾಡಿದರು. ದರವೇಶ ಬಾದಶಹನ ಕಣ್ಣುಗಳನ್ನು ಕಿತ್ತಿದರು. ಸುಲೇಮಾನ ರಾಜಪುತ್ರನ ಒಂದು ಬೆರಳನ್ನು ಕತ್ತರಿಸಿದರು. ಮೂರನೆಯ ರಾಜಪುತ್ರನನ್ನೂ ಇದೇ ರೀತಿ ಅಂಗವಿಕಲನನ್ನಾಗಿ ಮಾಡಿದರು. ಹೊಸ ಬಾದಶಹರನ್ನು ಪಟ್ಟದ ಮೇಲೆ ಕುಳ್ಳಿರಿಸಿದ ನಂತರ ದಿಯಾನತುಲ್ ಮುಲ್ಕ, ಆಕಾ ರಜಾ ಮತ್ತು ಬ್ರಾಹ್ಮಣ ಅಧಿಕಾರಿಗಳನ್ನು ಬಂಧನದಿಂದ ಮುಕ್ತ ಮಾಡಿದರು.

■

*

ಅಧ್ಯಾಯ – ೬

ಸುಲ್ತಾನ ಮೊಹಮ್ಮದ ಆದಿಲಶಾಹ ಬಿನ್ ಇಬ್ರಾಹಿಮ ಆದಿಲಶಾಹ

ಎಲ್ಲರಿಗೂ ಗೊತ್ತಿರುವಂತೆ ಸುಲ್ತಾನ ಮೊಹಮ್ಮದ ಆದಿಲಶಾಹನು ಸುಂದರನಾಗಿದ್ದನು. ಲಾವಣ್ಯವಂತನಾಗಿದ್ದನು ಮತ್ತು ಅತ್ಯಂತ ಲಕ್ಷಣವಂತನಾಗಿದ್ದನು. ಜಗತ್ತಿಗೆ ಪ್ರಕಾಶ ಕೊಡುವ ಸೂರ್ಯನಂತಿದ್ದನು. ಅವನ ವಯಸ್ಸು ೧೬ ಇದ್ದಿತು. ಅಪ್ಪನ ಆಶೆಯಂತೆ ಮಿರ್ಜಾ ಮೊಹಮ್ಮದ ಅಮಿನ ಲ್ಯಾರಿ ಮತ್ತು ದೌಲತಖಾನ ಇಬ್ಬರ ಸಹಾಯದಿಂದ ಬುಧವಾರ ಮಧ್ಯಾಹ್ನ ೨ ಗಂಟೆಗೆ, ಮೊಹರಮ್‌ದ ೧೧ನೆಯ ದಿನ ಹಿಜರಿ ಶಕೆ ೧೦೩೬, (ಕ್ರಿಶ. ೧೬೨೬)ರಂದು ವಿದ್ಯಾಪುರ ರಾಜ್ಯದ ಸಿಂಹಾಸನಕ್ಕೆ ಶೋಭೆ ತಂದುಕೊಟ್ಟನು. ರಾಜ್ಯದ ವಜೀರರು, ಸರದಾರರು, ಅಮೀರರು ಮತ್ತು ಇನ್ನಿತರ ಅಧಿಕಾರಿಗಳು ಸಿಂಹಾಸನಕ್ಕೆ ಗೌರವವನ್ನು ಸಲ್ಲಿಸಿ ತಮ್ಮ ತಮ್ಮ ಯೋಗ್ಯತಾನುಸಾರ ಬಾದಶಹನಿಗೆ ಕಾಣಿಕೆಗಳನ್ನು ಕೊಟ್ಟರು ಮತ್ತು 'ನಾವೆಲ್ಲರೂ ತಮ್ಮ ಆದೇಶವನ್ನು ಪಾಲಿಸುತ್ತೇವೆ ಹಾಗೂ ಈ ರಾಜ್ಯದ ಸುಖ ಶಾಂತಿಯನ್ನು ಬಯಸುತ್ತೇವೆ ಇದಕ್ಕೆ ವಚನ ಬದ್ಧರಾಗಿದ್ದೆವೆ' ಎಂದು ಹೇಳಿದರು.

ಬಾದಶಹನು ಅದೇ ದಿನ, ದೌಲತಖಾನನಿಗೆ ಖವಾಸಖಾನ ಎಂಬ ಬಿರುದನ್ನು ಕೊಟ್ಟು, ರಾಜ್ಯದ ಪ್ರಧಾನ ಕಾರ್ಯದರ್ಶಿ [ಮದಾರೆ ಮಹಾಮ್] ಎಂದು ನಿಯಮಿಸಿದನು. ಆಕಾ ರಜಾನನ್ನು ಪ್ರಧಾನ ಆಡಳಿತಾಧಿಕಾರಿಯನ್ನಾಗಿ ನಿಯಮಿಸಿದನು. ದಿಯಾನತುಲ್ ಮುಲ್ಕನನ್ನು ಸೈನ್ಯದ ಮುಖ್ಯಾಧಿಕಾರಿಯನ್ನಾಗಿ ಮಾಡಿದನು. ಕೆಲವು ದಿನಗಳ ನಂತರ ಮೊಹಮ್ಮದ ಅಮೀನನನ್ನು ಮೊಹಮ್ಮದ ಮುಸ್ತಫಾಖಾನ ಎಂಬ ಬಿರುದನ್ನು ಕೊಟ್ಟು ಗೌರವಿಸಿದನು.

ಸುಲ್ತಾನ ಮೊಹಮ್ಮದನು ಕಾಣಲು ಅತ್ಯಂತ ಸುಂದರನಾಗಿದ್ದನು. ಒಳ್ಳೆಯ

ಸ್ವಭಾವದವನೂ ಸದ್ಗುಣಿಯೂ ಆಗಿದ್ದನು. ಅವನ ದೈವ ಬಲವತ್ತರದ್ದಾಗಿತ್ತು. ಬಹಳ ಉದಾರನೂ ಇದ್ದನು ಹಾಗೆಯೇ ನ್ಯಾಯದ ಪಕ್ಷಪಾತಿಯಾಗಿದ್ದನು. ಆಡಳಿತ ನಡೆಸುವಲ್ಲಿ ಅತ್ಯಂತ ಸಮರ್ಥನಾಗಿದ್ದನು. ಜನರು ಆತನನ್ನು ನ್ಯಾಯದೇವತೆಯ ಮಗನೆಂದೂ ಮತ್ತು ದಾನ ಮಾಡುವಲ್ಲಿ ದಾನಶೂರನೆಂದು ಕರೆಯುತ್ತಿದ್ದರು. ಸಪ್ತಲೋಕಗಳ ಅಧಿಪತಿ ಮತ್ತು ಬಾದಶಹರ ಬಾದಶಹ, ಸಿಕಂದರ, ಸುಲೇಮಾನ, ಫರೀದೂನ, ಖುಸ್ರು, ಈ ಎಲ್ಲರಲ್ಲಿದ್ದ ನ್ಯಾಯ, ಉದಾರತೆ, ದೇವತೆ ಗುಣಗಳು ಅವನಲ್ಲಿದ್ದುವು. ಸುನ್ನೀ ಪಂಥದ ನಂಬಿಗೆಯವ ಮತ್ತು ಸೂಫಿ ಮನುಷ್ಯನಾಗಿದ್ದನು. ಅನ್ಯಾಯದ ಕತ್ತಲೆಯನ್ನು ತನ್ನ ನ್ಯಾಯದ ಬೆಳಕಿನಿಂದ ದೂರ ಮಾಡಿದನು.. ಅವನನ್ನು ನೋಡಿದವರು ಇರಾಣದ ನೌಶೇರವಾನೆ ಆದಿಲ್‌ನನ್ನು ಮತ್ತು ಅರಬಸ್ತಾನದ ಹಾತಿಮತಾಯಿಯನ್ನು ಮರೆತರು. ಅವನ ರಾಜ್ಯದಲ್ಲಿ ಭಿಕ್ಷೆ ಬೇಡುವ ಫಕೀರರು ಇರಲಿಲ್ಲ. ಸುಲ್ತಾನ ಮೊಹಮ್ಮದನು ಯಾವಾಗಲೂ ಸೂಫಿ ಸಂತರು, ಸಾಧುಗಳು ಮತ್ತು ಫಕೀರರ ಸಂಗದಲ್ಲಿ ಕುಳಿತು ಅವರಿಂದ ಜೀವನದ ರಹಸ್ಯದ ಅಮೃತವನ್ನು ಕುಡಿಯುತ್ತಿದ್ದನು.

ಮೊಹಮ್ಮದ ಆದಿಲಶಹನ ಕಾಲದಲ್ಲಿ ಬಿಜಾಪುರದ ಒಳ ಹೊರಗೆ ಜನವಸತಿ ಬೆಳೆದಿತ್ತು. ಒಂದು ಗಜ ಭೂಮಿ ಒಂದು ತೊಲೆ ಚಿನ್ನಕ್ಕೆ ಬಹಳ ಕಷ್ಟದಿಂದ ದೊರೆಯುತ್ತಿತ್ತು. ಅವನ ಕಾಲದಲ್ಲಿ ಹಿಂದಿನ ಬಾದಶಹರ ಕಾಲದಲ್ಲಿ ಇದ್ದ ಶಾಂತಿ ಸುಖಗಳಿಗಿಂತ ಎರಡು ಪಟ್ಟು ಅಧಿಕ ಇತ್ತು. ಅವನ ಹತ್ತಿರ ೮೦ ಸಾವಿರ ಕುದುರೆ ಸವಾರರಿದ್ದರು. ಅವನ ದ್ರವ್ಯ ಭಾಂಡಾರದಲ್ಲಿದ್ದ ದ್ರವ್ಯವನ್ನು ಲೆಕ್ಕ ಮಾಡಲು ಸಾದ್ಯವಿರಲಿಲ್ಲ.

ಮೊಹಮ್ಮದ ಆದಿಲಶಹನ ಸೈನ್ಯ ಯಾವ ದಿಕ್ಕಿಗೆ ಮುಖ ಮಾಡಿ ಹೋಗುತ್ತಿತ್ತೋ ಅಲ್ಲಿ, ಜಯದ ಪತಾಕೆಯನ್ನು ಹಾರಿಸಿಯೇ ಹಿಂತಿರುಗುತ್ತಿತ್ತು ಮತ್ತು ಕಾಫಿರರ ಪ್ರದೇಶದ ಮೇಲೆ ದಾಳಿ ಮಾಡಿ ಅದನ್ನು ತನ್ನ ವಶಕ್ಕೆ ಪಡೆದುಕೊಂಡು ಅಲ್ಲಿ ಇಸ್ಲಾಮ ಧರ್ಮವನ್ನು ಸ್ಥಾಪಿಸುತ್ತಿದ್ದನು. ತನ್ನ ಕಾಲದಲ್ಲಿ ಅಸಂಖ್ಯ ಮಸೀದಿಗಳನ್ನು ಮತ್ತು ಮದರಸಾಗಳನ್ನು ಕಟ್ಟಿಸಿ ಅಲ್ಲಿ ಕಾಜಿಗಳಿಗೆ ಖತೀಬರಿಗೆ ಮತ್ತು ಎಲ್ಲ ಸಿಬ್ಬಂದಿಯನ್ನು ನಿಯುಕ್ತ ಮಾಡಿ ಅವರಿಗೆ ಎಲ್ಲ ಸೌಲಭ್ಯಗಳನ್ನು ಒದಗಿಸಿ ಅವರಿಗೆ ಇಸ್ಲಾಮ ಧರ್ಮವನ್ನು ಪ್ರಚಾರಮಾಡಲು ಪ್ರಯತ್ನಿಸಬೇಕು ಎಂದು ಆದೇಶ ಮಾಡಿದ್ದನು.

ಮೊಹಮ್ಮದ ಆದಿಲಶಹನ ರಾಜ್ಯವು ಪಶ್ಚಿಮ ದಿಕ್ಕಿನಲ್ಲಿದ್ದ ಗೋವಾದಿಂದ [ವಿಲಾಯತ ಓಸಾ] ಮೊಗಲ ಸರಹದ್ದಿನ ದಂಡೆಯಿಂದ ಸೀತಾ ಬಂದರದವರೆಗೆ [ಸೇತು, ರಾಮೇಶ್ವರ ?] ಇತ್ತು. ಅದರ ಅಗಲವು ಕುತುಬಶಾಹನ ಸರಹದ್ದಿನಿಂದ ಬೀದರ ಶಹರದ ವರೆಗೆ ಇತ್ತು. ರಾಜ್ಯವು ವಿಶಾಲವಾಗಿತ್ತು ಮತ್ತು ಅವನ ಛತ್ರದ ನೆರಳಿನಲ್ಲಿ ಜನರು ಸುಖಶಾಂತಿಗಳಿಂದ ಇದ್ದರು. ಹದ್ದು ಗೂಬೆಗಳಿಗೆ ಗೂಡು ಕಟ್ಟಲು ಇಲ್ಲಿ ಸ್ಥಳ ದೊರೆಯುತ್ತಿರಲಿಲ್ಲ. ಮೊಗಲ ಬಾದಶಹ ಶಾಹಜಹಾನನು ಅವನಿಗೆ ಪತ್ರ ಬರೆಯುವಾಗ ಬಾದಶಹ ಎಂದು ಕರೆಯುತ್ತಿದ್ದನು.

ಮಕ್ಕಾ ಪಟ್ಟಣದ ಶ್ರೇಷ್ಠರು, ಸರದಾರರು, ಶ್ರೀಮಂತರು, ಇರಾನದ ಶಾಹ ಸಫೀ, ಶಾಹ ಅಬ್ಬಾಸ ಸಾನೀ ಸಫವೀ ಇವರೆಲ್ಲರೂ ಅನೇಕ ಸಲ ತಮ್ಮ ಕಡೆಯಿಂದ ರಾಯಭಾರಿಗಳನ್ನು ಕಳಿಸಿ ಅತ್ಯಮೂಲ್ಯ ಕಾಣಿಕೆಗಳನ್ನು ಕೊಟ್ಟು ಕಳಿಸುತ್ತಿದ್ದರು ಮತ್ತು ಅವರ ಮೂಲಕ ಅವನಿಂದ ತಮಗೆ ಸದಾಶಯ, ಸಹಾಯವನ್ನು ಆಶಿಸುತ್ತಿದ್ದರು. ಕುತುಬಶಾಹ, ಫಿರಂಗೀ ಮತ್ತು ಅಂಗ್ರೇಜ ರಾಜಾ, ಮಲಬಾರ ಮತ್ತು ಕರ್ನಾಟಕದ ಎಲ್ಲ ರಾಜರುಗಳು ಮತ್ತು ಎಲ್ಲ ಬಂಡುಖೋರರು ಮೊಹಮ್ಮದ ಆದಿಲಶಹನ ಆಜ್ಞಾಧಾರಕರಾಗಿ ಅವನಿಗೆ ಕಪ್ಪು ಕಾಣಿಕೆಗಳನ್ನು ಕೊಡುತ್ತಿದ್ದರು. ಇಷ್ಟಾಗಿಯೂ ಮೊಹಮ್ಮದ ಆದಿಲಶಾಹನನ್ನು ವರ್ಣಿಸಲು ನನ್ನ ಲೆಕ್ಕಣಿಕೆಯಲ್ಲಿ ಶಬ್ದಗಳಿಲ್ಲ.

ಮೊಹಮ್ಮದ ಆದಿಲಶಹನ ದರಬಾರದಲ್ಲಿ ಇದ್ದ ಅಮೀರರು, ವಜೀರರು, ಸರದಾರರ ವಿವರ ಹೀಗಿದೆ: ಮಿರ್ಜಾ ಮೊಹಮ್ಮದ ಅಮೀನ, ಉರ್ಫ ನವಾಬ ಮುಸ್ತಫಾಖಾನ, ದೌಲತ ಖವಾಸಖಾನ, ದಿಯಾನತುಲ್ ಮುಲ್ಕ, ಅಂಬರಖಾನ, ಪೇಶ ಜಂಗ ಖಾನ, ಫರಹಾದ ಖಾನ, ಆಂಕಸ ಖಾನ, ಶಾಹ ಅಬುಲ್ ಹಸನ್ ಮಕ್ಕೋನಾ, ದರವೇಶ ಮೊಹಮ್ಮದ, ಮಲಿಕ ಸುಂದರ್, ಹಾಮಿದಖಾನ, ಮೊಹಮ್ಮದ ಅಲಿ, ರಂದೋಲಾ ಖಾನ, ಮಲಿಕ ಮೊಹಬ್ಬತ, ಮಲಿಕ ಅಕ್ರಮ, ಖೇಲೋಜಿ ಬಹುಸುಲಿಯಾ, ಸಿದ್ದೀ ರೆಹಾನ, ಮುರಾರಿ ಪಂಡಿತ, ಅಹಮದಖಾನ ಸರನೋಬತ, ಬೇಲೂರ ಖಾನ, ಅಫ್ಜಲ್ ಖಾನ, ಮಲಿಕ ಐತಬಾರ, ಮೊಹಮ್ಮದ ಮೋಮಿನ ಮಜಲಿಸಿ, ಮುಲ್ಲಾ ಅಹಮದ ಹೀಗೆ ಇನ್ನೂ ಅನೇಕರು ಇದ್ದರು.

ಮೊಹಮ್ಮದ ಆದಿಲಶಹನ ರಾಜ್ಯದಲ್ಲಿ ವೈದ್ಯರೂ ಇದ್ದರು. ಓಕಾಸಿ, ಅಪ್ಪಾಜಿ, ವೇದರಾವ್, ಮೊಹನದಾಸ, ಭಪಕಾಜೀ, ಫರ್ನಾತೋಪ, ಉಮ್ನಿಯಾ ಆತಿಶಿ, ಚಮನಪ್ಪಾ ಮೊದಲಾದವರು ಇದ್ದರು.

ಸುಲ್ತಾನ ಮೊಹಮ್ಮದ ಆದಿಲಶಹನಿಗೆ ಫಾತೀಮಾ ಎಂಬವಳು ಎದೆ ಹಾಲು ಕುಡಿಸಿದಳು. ಬಾದಶಹನ ಮೊದಲ ಗುರು ಮೌಲಾನಾ ಹಬೀಬುಲ್ಲಾ. ಸುಲ್ತಾನ ಮೊಹಮ್ಮದನು ಹಿಜರಿ ಶಕ ೧೦೩೬, (ಕ್ರಿ.ಶ. ೧೬೨೬)ರಲ್ಲಿ ದೌಲತಪುರ ಎಂಬ ಪಟ್ಟಣವನ್ನು ಕಟ್ಟಿಸಿದನು. ರಾಜ್ಯದಲ್ಲಿ ೫೯ ಸಾವಿರ ಕುದುರೆ ಸವಾರರಿದ್ದರು. ೫೩೦ ಆನೆಗಳಿದ್ದುವು. ೨೫೦೪೦೦ ಕಾಲ್ದಳವಿದ್ದಿತು. ಹಿಜರಿ ಶಕ ೧೦೪೧, (ಕ್ರಿ. ಶ. ೧೬೩೧)ರಲ್ಲಿ ಬಡೀ ಸಾಹೇಬಾ ಅಂದರೆ ಕುತುಬಶಾಹನ ಮಗಳ ಜೊತೆಗೆ ಸುಲ್ತಾನ ಮೊಹಮ್ಮದ ಆದಿಲಶಹನ ಮದುವೆಯಾಯಿತು. ದೌಲತಖಾನೆಂಬವನು ಖವಾಸಖಾನ ಎಂಬ ಬಿರುದು ಪಡೆದು ಎಂಟು ವರುಷ ರಾಜ್ಯದ ಪ್ರಧಾನ ಮಂತ್ರಿಯಾಗಿದ್ದನು. ಹಿಜರಿ ಶಕ ೧೦೪೫, (ಕ್ರಿ.ಶ. ೧೬೩೫)ರಲ್ಲಿ ಸಿದ್ದೀ ರೆಹಾನನು ಖವಾಸಖಾನನ ಕೊಲೆ ಮಾಡಿದನು. ಸುಲ್ತಾನ ಮೊಹಮ್ಮದ ಆದಿಲಶಹನು ಹಿಜರಿ ಶಕ ೧೦೪೬, (ಕ್ರಿ.ಶ. ೧೬೩೬)ರಲ್ಲಿ ಇಕ್ಕೇರಿಯನ್ನು ಗೆದ್ದನು. ಇದರಂತೆ ಹಿಜರಿ ಶಕ ೧೦೪೭, (ಕ್ರಿ. ಶ. ೧೬೩೭)ರಲ್ಲಿ ಬಾದಶಾಹಪುರದಲ್ಲಿ ಭವ್ಯ ಗುಮ್ಮಟದ ಅಡಿಗಲ್ಲನ್ನಿಟ್ಟನು.

ಇದೇ ವರುಷ ಬಾದಶಹನಿಗೆ ಗಂಡುಮಗು ಹುಟ್ಟಿತು. ಮಗುವಿಗೆ ಅಲಿ ಎಂದು ಹೆಸರನ್ನಿಟ್ಟರು. ಹಿಜರಿ ಶಕ ೧೦೪೯, (ಕ್ರಿ. ಶ. ೧೬೩೯)ರಲ್ಲಿ ಸುಲ್ತಾನ ಮೊಹಮ್ಮದ ಆದಿಲಶಹನು ಆರು ತಿಂಗಳುಗಳಲ್ಲಿ ಬೇಗಮ ತಾಲಾಬ ಎಂಬ ಕೆರೆಯನ್ನು ಕಟ್ಟಿಸಿದನು. ಅಲ್ಲಿಂದ ಕಾಲುವೆಯ ಮೂಲಕ ನೀರನ್ನು ತಂದು ಆಸಾರ ಮಹಲದ ಎದುರಿನ ಕೊಳದಲ್ಲಿ ತುಂಬಿಸಿದನು. ಅದರ ಕುರುಹು ಇಂದಿಗೂ ಇದೆ.

ಹಿಜರಿ ಶಕ ೧೦೫೩, (ಕ್ರಿ. ಶ. ೧೬೪೩)ರಲ್ಲಿ ಸುಲ್ತಾನ ಮೊಹಮ್ಮದನು ಅದಾಲತ್ ಮಹಲ್ ಅಂದರೆ ಆಸಾರ ಮಹಲದ ಕಟ್ಟೋಣವನ್ನು ಪೂರ್ತಿಗೊಳಿಸಿದನು. ಹಿಜರಿ ಶಕ ೧೦೫೪, (ಕ್ರಿ. ಶ. ೧೬೪೪)ರಲ್ಲಿ ಬಾದಶಹನು ಗುಲಬರ್ಗಾ, ಸಗರ ಮತ್ತು ಗೋಗಿ ಎಂಬಲ್ಲಿಗೆ ಹೋಗಿ ಒಂದು ತಿಂಗಳಲ್ಲಿ ಹಿಂತಿರುಗಿ ಬಂದನು. ಹಿಜರಿ ಶಕ ೧೦೫೬, (ಕ್ರಿ. ಶ. ೧೬೪೬)ರಲ್ಲಿ ಸುಲ್ತಾನ ಮೊಹಮ್ಮದ ಆದಿಲಶಹನು ದಾದಮಹಲಿಗೆ ಬಂಗಾರದ ನೀರನ್ನು ಕೊಡಿಸಿದನು. ಇದೇ ವರುಷ ಗಗನ ಮಹಲು ಬೆಂಕಿ ಹತ್ತಿ ಸುಟ್ಟಿತು. ಹಿಜರಿ ಶಕ ೧೦೫೭, (ಕ್ರಿ.ಶ. ೧೬೪೭)ರಲ್ಲಿ ಬಾದಶಹನು ಬೀದರಕ್ಕೆ ಹೋಗಿ ಬಂದನು. ಹಿಜರಿ ಶಕ ೧೦೫೮, (ಕ್ರಿ. ಶ. ೧೬೪೮)ರಲ್ಲಿ ಬಾದಶಹನು ಮೊದಲನೆಯ ಅಲಿ ಆದಿಲಶಹನ ಸಮಾಧಿಯ ಮೇಲೆ ಚೌಖಂಡಿಯನ್ನು ಕಟ್ಟಿಸಿದನು. ಸುಲ್ತಾನ ಮೊಹಮ್ಮದ ಆದಿಲಶಹನು ಹಿಜರಿ ೧೦೫೯, (ಕ್ರಿ.ಶ. ೧೬೪೯)ರಲ್ಲಿ ಚಂಜೀಯನ್ನು ಗೆದ್ದನು. ಅದೇ ವರುಷ ಬಾದಶಹನಿಗೆ ಭಾಗ್ಯವಂತಿಯಾದ ಒಂದು ಹೆಣ್ಣು ಮಗು ಜನಿಸಿತು. ಹಿಜರಿ ಶಕ ೧೦೬೦, (ಕ್ರಿ.ಶ. ೧೬೫೦)ರಲ್ಲಿ ಬಾದಶಹನ ಈ ಮಗಳು ಮರಣ ಹೊಂದಿದಳು. ಹಿಜರಿ ಶಕ ೧೦೬೨, (ಕ್ರಿ.ಶ. ೧೬೫೧)ರಲ್ಲಿ ಬಾದಶಾಹನು ಪಾಲಗುಂಡಾವನ್ನು ಗೆದ್ದನು. ಹಿಜರಿ ಶಕ ೧೦೬೪, (ಕ್ರಿ. ಶ. ೧೬೫೩)ರಲ್ಲಿ ಶಾಬಾನ ತಿಂಗಳ ೧೮ನೆಯ ದಿನದಂದು ರಾತ್ರಿ ಎರಡು ಪ್ರಹರದ ನಂತರ, ಇಡೀ ಭಾರತ ಮತ್ತು ದಕ್ಷಿಣದಲ್ಲಿ ಭೂಕಂಪವಾಯಿತು. ಇದೇ ವರುಷ ಸುಲ್ತಾನ ಮೊಹಮ್ಮದನು ವೇಲ್ಲೋರ ಕೋಟೆಯನ್ನು ಗೆದ್ದನು.

ಹೀಗೂ ಹೇಳಲಾಗುತ್ತದೆ, 'ಮೊಹಮ್ಮದ ನಾಮಾ' ಎಂಬ ಪುಸ್ತಕದಲ್ಲಿ ನ್ಯಾಯವಂತನಾದ ಈ ಬಾದಶಹನ ಬಗ್ಗೆ ಅತ್ಯಂತ ಸುಂದರ ಶಬ್ದಗಳಲ್ಲಿ ವರ್ಣಿಸಲಾಗಿದೆಯಂತೆ. ಹಾಗೆ ಮತ್ತೆಲ್ಲೂ ದೊರೆಯುವುದಿಲ್ಲ. ಇದನ್ನು ಬಾದಶಹನ ಕಾಲದಲ್ಲಿ ಮುಲ್ಲಾ ಜುಹೂರಿ ಎಂಬವನು ಬರೆದನು. ಹಿಜರಿ ಶಕ ೧೦೬೭, (ಕ್ರಿ. ಶ. ೧೬೫೬)ರಲ್ಲಿ ಮೊಹಮ್ಮದ ಆದಿಲಶಹನು ತನ್ನ ೪೭ನೆಯ ವಯಸ್ಸಿನಲ್ಲಿ ಮೊಹರಮ್ ತಿಂಗಳಿನ ೨೬ನೆಯ ದಿನ ಮಂಗಳವಾರ ಮೂರು ಪ್ರಹರಗಳ ನಂತರ ಈ ರಾಜ್ಯದ ಕೆಲಸಕ್ಕೆ ವಿದಾಯ ಹೇಳಿ ಪರಲೋಕಕ್ಕೆ ಹೋದನು. ವಿಶ್ವದಲ್ಲಿಯ ಆಶ್ಚರ್ಯಗಳಲ್ಲಿ ಒಂದಾದ, ಅತ್ಯಂತ ಎತ್ತರವಾದ, ಭವ್ಯವಾದ ಸುಪ್ರಸಿದ್ಧವಾಗಿದ್ದ ಜಗತ್ತಿನ ಪ್ರವಾಸಿಗರನ್ನು ಆಕರ್ಷಿಸುವ, ತಾನೇ ಕಟ್ಟಿದ ಗುಮ್ಮಟದಲ್ಲಿ ಚಿರನಿದ್ರೆಯ ವಿಶ್ರಾಂತಿ ಪಡೆದನು. ಅವನು ೩೧ ವರುಷ ರಾಜ್ಯವಾಳಿದನು.

■

*

ಅಧ್ಯಾಯ – ೭

ಎರಡನೆಯ ಅಲಿ ಆದಿಲಶಾಹ ಬಿನ್ ಸುಲ್ತಾನ ಮೊಹಮ್ಮದ ಆದಿಲಶಹ [ಅವನ ಆತ್ಮಕ್ಕೆ ಶಾಂತಿ ಇರಲಿ]

ದಿವಂಗತ ಮೊಹಮ್ಮದ ಆದಿಲಶಹನ ಮಹಾರಾಣಿ ಬಡೀ ಸಾಹೀಬಾ, ಕುತುಬಶಾಹನ ಮಗಳು, ಬಿಲ್ಕೀಸ ಜಮಾನೀ, ಬಾದಶಾಹ ಬೇಗಮ ಸಾಹೇಬಾಳು ಎರಡನೆಯ ಅಲಿ ಆದಿಲಶಹನನ್ನು ಚಿಕ್ಕವನಿದ್ದಾಗಿನಿಂದಲೇ ತನ್ನ ಹತ್ತಿರ ಇಟ್ಟುಕೊಂಡು ಪಾಲನೆ ಪೋಷಣೆ ಮಾಡಿದಳು. ಅವನಿಗೆ ರಾಜನಾಗಲು ತಕ್ಕ ಶಿಕ್ಷಣವನ್ನು ಕೊಡಿಸಿದ್ದಳು. ಮೊಹಮ್ಮದ ಆದಿಲಶಹನ ಮರಣದ ನಂತರ ಅವಳು ದರಬಾರದಲ್ಲಿ ಇದ್ದಂಥ ಎಲ್ಲ ಅಮೀರರು, ಮಂತ್ರಿಗಳು ಮತ್ತು ಇನ್ನಿತರ ಅಧಿಕಾರಿಗಳನ್ನು ಸೇರಿಸಿ ಒಂದು ಶುಭ ಮುಹೂರ್ತದಂದು, ಮೊಹರಮ್ ದ ೨೬ನೆಯ ದಿನ ಹಿಜರಿ ಶಕ ೧೦೬೭, (ಕ್ರಿ. ಶ. ೧೬೫೬)ರಂದು ೧೯ ವರುಷದ ಎರಡನೆಯ ಅಲಿ ಆದಿಲಶಹನನ್ನು ವಿದ್ಯಾಪುರದ ರಾಜ ಸಿಂಹಾಸನದ ಮೇಲೆ ಕುಳ್ಳಿರಿಸಿದರು.

ಎರಡನೆಯ ಅಲಿ ಆದಿಲಶಹನು ಶೋಕೀಲಾಲನಾಗಿದ್ದನು. ಬಹು ವಿಲಾಸಪ್ರಿಯ ನಾಗಿದ್ದನು. ಪ್ರತಿಭಾವಂತ ಕವಿಯಾಗಿದ್ದನು. ಅವನ ಕವನಗಳು ಶೃಂಗಾರ ವರ್ಣನೆಗಳಿಂದ ಕೂಡಿರುತ್ತಿದ್ದುವು. ಅವನ ಸುತ್ತಲೂ ಹಲವಾರು ಕವಿ ಸಾಹಿತಿಗಳು ಇರುತ್ತಿದ್ದರು. ಕವಿಗೋಷ್ಠಿಯಲ್ಲಿ ಅವನು ತನ್ನ ಕವಿತೆಗಳನ್ನು ವಾಚಿಸಿದರೆ ಕವಿಗಳು ಪುಲಕಿತರಾಗುತ್ತಿದ್ದರು. ಅವನಿಂದ ಕವಿತೆಗಳನ್ನು ರಚಿಸುವ ಕಲೆಯನ್ನು ಮಹಾ ಮಹಾ ಕವಿಗಳು ಕೂಡ ಕಲಿಯುತ್ತಿದ್ದರು.

ಶ್ರೇಷ್ಠನಾದ ಮುಲ್ಲಾ ನುಸ್ರತಿ ಕವಿಯು ಅವನ ಆಸ್ಥಾನದಲ್ಲಿದ್ದನು. ಅವನು ಬಹಳ ಅರ್ಥಪೂರ್ಣವಾದ ಕಾವ್ಯವನ್ನು ರಚಿಸುತ್ತಿದ್ದನು ಅವನಿಗೆ ಕವಿಗಳ ರಾಜ ಎಂಬ

ಬಿರುದು ಇತ್ತು. ಸಾಮಾನ್ಯರಿಂದ ಪಂಡಿತರವರೆಗೂ ಅವನ ಕಾವ್ಯಗಳು ಪರಿಚಿತವಾಗಿದ್ದುವು. ಅವನು ತಾನು ಬರೆದ 'ಗುಲ್ಶನೆ ಇಶ್ಕ' ಮತ್ತು 'ಅಲಿನಾಮಾ' ಎಂಬ ಎರಡು ಮಹಾ ಕಾವ್ಯಗಳನ್ನು ಎರಡನೆಯ ಅಲಿ ಆದಿಲಶಹನಿಗೆ ಅರ್ಪಿಸಿದ್ದಾನೆ. ಇಂಥ ಕಾವ್ಯಗಳು ಬಹುಶಃ ಹಿಂದಿ ಭಾಷೆಯಲ್ಲಿ ಈ ಹಿಂದೆ ಬಂದಿರಲಾರವು.

ಅವನ ಆಸ್ಥಾನದಲ್ಲಿ ಇನ್ನಿತರ ವಿಶ್ವ ಪ್ರಸಿದ್ಧ ಪಂಡಿತರು, ಸಾಹಿತಿಗಳು ಮತ್ತು ಕವಿಗಳಿದ್ದರು. ಅವರುಗಳಲ್ಲಿ ಸಯ್ಯದ ನೂರುಲ್ಲಾ ಊರ್ಫ ಹಜರತ ಸಯ್ಯದ ಮೊಹಮ್ಮದ ಅಲಿಯು ಧಾರ್ಮಿಕ ಪಂಡಿತನಾಗಿದ್ದರೂ ಕವಿಗಳ ಸಮೂಹದಲ್ಲಿದ್ದು ಅತ್ಯಂತ ಶ್ರೇಷ್ಠವಾದ ಕಾವ್ಯಗಳನ್ನು ರಚಿಸಿದ್ದನು. ಆತನು ಪರ್ಶಿಯನ್ ಭಾಷೆಯಲ್ಲಿ 'ತಾರೀಖೆ ಅಲಿ ಆದಿಲಶಾಹ' ಎಂಬ ಐತಿಹಾಸಿಕ ಗದ್ಯ ಗ್ರಂಥವನ್ನು ಬರೆದಿದ್ದಾನೆ.

ಮೂರನೆಯವನು, ಹಕೀಮ ಆತಿಶಿ ಎಂಬ ಮಹಾ ಕವಿಯು ವೈಚಾರಿಕ ಕವಿತೆಗಳನ್ನು ಬರೆಯುತ್ತಿದ್ದನು. ನಾಲ್ಕನೆಯವನು, ಅಕ್ಷರಗಳೊಂದಿಗೆ ಈಜಾಡುವ ಮಿರ್ಜಾ ಮುಕೀಮ ಎಂಬ ಕವಿಯ ಹಾಗೆ ಶಬ್ದಗಳನ್ನು ಬಳಸುವುದು ಇನ್ನೊಬ್ಬರಿಗೆ ಸಾಧ್ಯವಾಗುತ್ತಿರಲಿಲ್ಲ. ಐದನೆಯವನು, ದೌಲತಶಾಹ ಎಂಬವನು ಅಸ್ಥಾನದ ಬಹು ದೊಡ್ಡ ಕವಿಯಾಗಿದ್ದನು. ಮುಲ್ಲಾ ನುಸ್ರತಿ ಕವಿಯು ಹಿಂದವಿ ಭಾಷೆಯ ಕವಿಯಾಗಿದ್ದನು. ಉಳಿದವರು ಶಾಹ ನೂರುಲ್ಲಾ, ಮಿರ್ಜಾ ಮುಕೀಮ, ಮಿರ್ಜಾ ದೌಲತ ಶಾಹ ಮತ್ತು ಹಕೀಮ ಆತಿಶಿ ಇವರೆಲ್ಲರೂ ಪರ್ಶಿಯನ್ ಭಾಷೆಯ ಕವಿಗಳಾಗಿದ್ದರು. ಕ್ವಚಿತ್ತಾಗಿ ಹಿಂದಿ ಕವಿತೆಗಳನ್ನೂ ಬರೆಯುತ್ತಿದ್ದರು. ಅವನ ಆಸ್ಥಾನದಲ್ಲಿ ಇವರನ್ನು ಬಿಟ್ಟು ಇನ್ನು ಅನೇಕ ಜನರು ಪರ್ಶಿಯನ್ ಮತ್ತು ಹಿಂದಿ ಭಾಷೆಗಳಲ್ಲಿ ಬರೆಯುವ ಕವಿಗಳಿದ್ದರು. ಅವರುಗಳಲ್ಲಿ ಹಾಶಿಮೀ ಎಂಬ ಕವಿ ಇದ್ದನು. ಆತನು 'ಅಹಸನುಲ್ ಕಸಸ್' ಎಂಬ ಯೂಸುಫ ಜುಲೇಖಾ ಕಥೆಯ ಕಾವ್ಯವನ್ನು ಹಿಂದಿ ಭಾಷೆಯಲ್ಲಿ ಬರೆದಿದ್ದಾನೆ. ಅದು ವಿಶ್ವದಲ್ಲಿಯೇ ಪ್ರಸಿದ್ಧವಾಗಿದೆ. ಆತನ ಇನ್ನೊಂದು ಕಾವ್ಯ, 'ನಜಾತ್ ನಾಮಾ' ಎಂಬುದನ್ನೂ ಬರೆದಿದ್ದಾನೆ. ಅಬ್ದುಲ್ ಲತೀಫ್ ಮತ್ತು ಅಬ್ದುಲ್ ನಬೀ ಎಂಬ ಕವಿಗಳು ಪರ್ಶಿಯನ್ ಭಾಷೆಯಲ್ಲಿ ಉತ್ತಮ ಕಾವ್ಯಗಳನ್ನು ಬರೆದಿದ್ದಾರೆ.

ಎರಡನೆಯ ಅಲಿ ಆದಿಲಶಹನ ಕಾಲದಲ್ಲಿ ಬಿಜಾಪುರ ನಗರವು ಎಲ್ಲ ತರದ ಜನರಿಂದ ತುಂಬಿತ್ತು. ಇಲ್ಲಿ ಕವಿಗಳು, ಪಂಡಿತರು, ಸೂಫಿಗಳು ಸಮಾಜ ಉದ್ಧಾರಕರು, ಪೀರರು, ಫಕೀರರು ಮತ್ತು ಬುದ್ಧಿಜೀವಿಗಳು ಅವನ ದರಬಾರದಲ್ಲಿ ಇರುತ್ತಿದ್ದರು.

ಎರಡನೆಯ ಅಲಿ ಆದಿಲಶಹನ ದರಬಾರದಲ್ಲಿ ಇದ್ದ ವಜೀರರು, ಅಮೀರರು, ಬಾದಶಹನ ಹತ್ತಿರದವರು ಇವರೆಲ್ಲರ ವಿವರ ಹೀಗಿದೆ: ಖಾನ ಮೊಹಮ್ಮದ, ಸಯ್ಯದ ಅಬುಲ ಹಸನ್ ಮಕೂನಾ, ರಂದೋಲಾ ಖಾನ, ಬಹಲೋಲಖಾನ, ತತ್ವಜ್ಞಾನಿ ಅಬ್ದುಲ್ ಮೊಹಮ್ಮದ, ಮುಲ್ಲಾ ಮೊಹಮ್ಮದ, ಅಫ್ಜಲಖಾನ, ಮೊಹಮ್ಮದ ಯಾಕೂಬ, ಅಜೀಜಖಾನ,

ಮಲಿಕ ಐತಬಾರ, ಆಕಾ ಖುಸ್ರೂ, ಅಬ್ದುಲ್ಲಾ ಖಾನ, ಹೈಬತ್ ಖಾನ, ಮಲಿಕ ಮರ್ಜಾನ್, ನಾಸಿರ ಮೊಹಮ್ಮದ, ಯೂಸುಫ ಖಾನ, ದಾವೂದಖಾನ, ಮಲಿಕ ಹಬಶೀ, ಮೊಹಮ್ಮದ ಅಲಿ, ಖಾನಜೀ ಮಲಿಕ, ಸಿದ್ಧೀ ಅಲ್ಮಾಸ, ಶಾಹನವಾಜಖಾನ, ಮೀರ ನಿಯಾಮತುಲ್ಲಾ, ಶಾರ್ಜಾಖಾನ, ಕಮಾಲಖಾನ, ಸಿದ್ಧೀ ಜೋಹರ್ ಸಲಾಬತ್ ಖಾನ, ಮಂಜಲೀ ಶಾಹ, ಶಾಹಜೀ ರಾಜಾ, ಮೀನಾಜೀ ಭೊಸಲೆ, ಶರ್ಜಾರಾವ್, ವಿಶ್ವಾಸರಾವ್, ಬಾಜೀ ಘೋರ್ಪಡೆ ಹಾಗೂ ಕಾಜೀಗಳು, ಮೌಲ್ವಿಗಳಲ್ಲಿ ಸಯ್ಯದ ಅಲಿ ಮೊಹಮ್ಮದ, ಕಾಜೀ ಹಬೀಬುಲ್ಲಾ, ಶಾಹ ನೂರುಲ್ಲಾ, ಇಬ್ರಾಹಿಮ ಖಾನ ಮತ್ತು ಶಾಹ ಅಬುಲ್ ಮಆಲಿ ಮೊದಲಾದವರಿದ್ದರು.

ಹಿಜರಿ ಶಕ ೧೦೬೭, (ಕ್ರಿ. ಶ. ೧೬೫೬)ರಲ್ಲಿ ಎರಡನೆಯ ಅಲಿ ಆದಿಲಶಹನು ಸಿಂಹಾಸನವನ್ನು ಏರಿದಾಗ ಖಾನ ಮೊಹಮ್ಮದನು ಪ್ರಧಾನ ಮಂತ್ರಿಯಾಗಿದ್ದನು. ಇದೇ ವರುಷ ಅಲಿ ಆದಿಲಶಹನು ಹುಸೇನೀ ಮಹಲನ್ನು ಕಟ್ಟಿಸಿದನು. ಹಿಜರಿ ಶಕ ೧೦೬೮, (ಕ್ರಿ. ಶ. ೧೬೫೭)ರಲ್ಲಿ ಅಲಿ ಆದಿಲಶಹನು ಪ್ರಧಾನ ಮಂತ್ರಿ ಖಾನ ಮೊಹಮ್ಮದನನ್ನು ಕೊಲೆ ಮಾಡಿಸಿದನು. ಅದೇ ವರುಷ ಒಂದು ಮಸಿದಿಯನ್ನು ಕಟ್ಟಿಸಿದನು. ಹಿಜರಿ ಶಕ ೧೦೬೯, (ಕ್ರಿ. ಶ. ೧೬೫೮)ರಲ್ಲಿ ಅಲಿ ಆದಿಲಶಹನು ಬಿಜಾಪುರದ ನಗರವಾಸಿಗಳಿಗೆಲ್ಲ ಆಮಂತ್ರಣವನ್ನು ಕೊಟ್ಟು ಊಟಕ್ಕೆ ಹಾಕಿದನು. ಇದೇ ವರುಷ ಅಬ್ದುಲ್ ಮೊಹಮ್ಮದನನ್ನು ಪ್ರಧಾನ ಮಂತ್ರಿಯನ್ನಾಗಿ ಮಾಡಿದನು. ಇದೇ ವರುಷ ಬಿಜಾಪುರ ಕೋಟೆ ಗೋಡೆಗಳ ಮೇಲೆ ಗೋಪುರಗಳನ್ನು [ಬುರುಜುಗಳನ್ನು] ಕಟ್ಟಿಸಿದನು. ಅದೇ ವರುಷ ಬಾದಶಹನು ಮಲಿಕ ಅಲ್ಮಾಸನೊಂದಿಗೆ ಸೈನ್ಯವನ್ನು ಕೊಟ್ಟು ಚಂಜಾವರ ಕೋಟೆಯ ಮೇಲೆ ಯುದ್ಧ ಮಾಡಲು ಕಳಿಸಿದನು ಮತ್ತು ಅದನ್ನು ವಶಪಡಿಸಿಕೊಂಡನು ಹಿಜರಿ ಶಕ ೧೦೭೦, (ಕ್ರಿ. ಶ. ೧೬೫೯)ರಲ್ಲಿ ಅಲಿ ಮಹಲನ್ನು ಕಟ್ಟಿದರು. ಮತ್ತು ಇದೇವರುಷ ಎರಡನೆಯ ಅಲಿ ಆದಿಲಶಹನು ಗೋವಾಕ್ಕೆ ಹೋಗಿ ಬಂದನು. ಇದೇ ವರುಷ ಅಫ್ಜಲಖಾನನ ಕೊಲೆಯಾಯಿತು.

ಹಿಜರಿ ಶಕ ೧೦೭೧, (ಕ್ರಿ. ಶ. ೧೬೬೦)ರಲ್ಲಿ ಚಿಮ್ಮಲಗಿ ಮತ್ತು ತೊರಗಲ್ಲಗಳಿಗೆ ಹೋಗಿ ಬಂದನು. ಇದೇ ವರುಷ ಸಿದ್ಧೀ ಜೋಹರನಿಗೆ ಸಲಾಬತ್‌ಖಾನ ಎಂಬ ಬಿರುದನ್ನು ಕೊಟ್ಟು ಮೋಸದಿಂದ ಪರನಾಳಾ ಕೋಟೆಯನ್ನು ಪಡೆದ ಶಿವಾನನ್ನು ಎದುರಿಸಲು ಕಳಿಸಿಕೊಟ್ಟನು. ಆದರೆ ಸಿದ್ಧೀ ಜೋಹರ ಸಲಾಬತಖಾನನಿಂದ ಆ ಕೋಟೆಯನ್ನು ವಶಪಡಿಸಿಕೊಳ್ಳುವುದು ಆಗಲಿಲ್ಲ. ಕೊನೆಗೆ ಎರಡನೆಯ ಅಲಿ ಆದಲಶಹನು ಸ್ವತಃ ಹೋಗಿ ಯುದ್ಧ ಮಾಡಿ ಪರನಾಳಾ ಕೋಟೆಯನ್ನು ವಶ ಪಡಿಸಿಕೊಂಡನು. ಹಿಜರಿ ಶಕ ೧೦೭೧ರಲ್ಲಿ ಈ ಯುದ್ಧವು ನಡೆಯಿತು. ನುಸ್ರತಿ ಎಂಬ ಕವಿಯು ಈ ಯುದ್ಧದ ವಿಸ್ತಾರವಾದ ವರ್ಣನೆಯನ್ನು ತನ್ನ ಕಾವ್ಯದಲ್ಲಿ ಮಾಡಿದ್ದಾನೆ.

ಹಿಜರಿ ಶಕ ೧೦೭೨, (ಕ್ರಿ. ಶ. ೧೬೬೧)ರಲ್ಲಿ ಜೋಹರ ಸಲಾಬತಖಾನನು ಅಲಿ ಆದಿಲಶಹನ ವಿರುದ್ಧ ಬಂಡೆದ್ದನು. ಬಾದಶಹನು ಅವನೊಂದಿಗೆ ಯುದ್ಧವಾಡಿ ಅವನ

ತಲೆಯನ್ನು ಕಡಿದು ಹಾಕಿದನು. ಹಿಜರಿ ಶಕ ೧೦೭೩, (ಕ್ರಿ. ಶ. ೧೬೬೨)ರಲ್ಲಿ ರಜ್ಜಬದ ೩ನೆಯ ದಿನ ಅಲಿ ಆದಿಲಶಹನು ಬಂಕಾಪುರಕ್ಕೆ ಬಂದು ತಲುಪಿದನು. ಅಲ್ಲಿಂದ ಇಕ್ಕೇರಿ, ಬಿದನೂರುಗಳಿಗೆ ಹೋಗಿ, ಹಿಜರಿ ಶಕ ೧೦೭೪, (ಕ್ರಿ. ಶ. ೧೬೬೩)ರ ಜಮಾದುಲ್ ಅವ್ವಲ್ ೨೯ನೆಯ ದಿನ ಬಿಜಾಪುರಕ್ಕೆ ಮರಳಿ ಬಂದನು. ಅದೇ ವರುಷ ಶಾಹಪೇಟದಲ್ಲಿ ಜನವಸತಿಗಾಗಿ ಅಡಿಗಲ್ಲನ್ನಿಟ್ಟನು.

ಅಲಿ ಆದಿಲಶಹನಿಗೆ ಒಂದು ಗಂಡು ಹಾಗೂ ಒಂದು ಹೆಣ್ಣು ಮಗುವಾಗಿದ್ದುವು. ಗಂಡು ಮಗುವಿನ ಹೆಸರು ಸಿಕಂದರ ಶಾಹ ಎಂದಾಗಿದ್ದರೆ, ಹೆಣ್ಣು ಮಗಳ ಹೆಸರು ಪಾದಶಾಹಬೀಬಿ ಎಂದಾಗಿತ್ತು. ಹಿಜರಿ ಶಕ ೧೦೮೩ (ಕ್ರಿ. ಶ. ೧೬೭೨)ರಲ್ಲಿ ಅಲಿ ಆದಿಲಶಹನಿಗೆ ಪಾರ್ಶ್ವವಾಯು ಬಡಿಯಿತು. ಅದರ ವಿವರ ಹೀಗಿದೆ:

ಬಾದಶಹನಿಗೆ ಹೆಣ್ಣಿನ ಸಹವಾಸದ ಚಟವಿದ್ದಿತು. ನಿರಂತರ ಹೆಣ್ಣಿನ ಸಹವಾಸ ಬಯಸುತ್ತ ಉದ್ದೀಪನ ಔಷಧವನ್ನು ತೆಗೆದುಕೊಳ್ಳುತ್ತಿದ್ದನು. ಅದರಿಂದಾಗಿ ಆತನ ಶರೀರದ ಉಷ್ಣತೆ ಅಧಿಕವಾಯಿತು. ಬಾಯಿ ಆರುತ್ತಿದ್ದುದರಿಂದ ಹೆಣ್ಣಿನ ಸಹವಾಸದ ನಂತರ ಬಳಲಿ ತಣ್ಣೀರನ್ನು ಗಟಗಟನೆ ಕುಡಿದು ಬಿಡುತ್ತಿದ್ದನು. ಹಾಗೆ ಒಂದು ದಿನ ನಸುಕಿನಲ್ಲಿ, ಅದು ರಬಿಉಲ್ ಅವ್ವಲ್ ನಾಲ್ಕನೆಯ ದಿನ, ಮುಜಫರಖಾನನೆಂಬ ಸರದಾರನು ಯುದ್ಧ ವಿಜಯದಿಂದ ಹಿಂತಿರುಗಿ ಬರುತ್ತಿದ್ದಾನೆಂದು ಕೇಳಿ, ಅದೇ ಆಗ ಹೆಣ್ಣಿನ ಸಹವಾಸದಿಂದ ಎದ್ದು ಹಾಗೆಯೇ ಅವನನ್ನು ಸ್ವಾಗತಿಸಲು ಬಾದಶಹನು ಹೊರಟನು. ನಗರದ ಹೊರಗೆ ಖತೀಜಾಪುರದ ವರೆಗೂ ಬಂದನು. ದಾರಿಯಲ್ಲಿ ಅವನಿಗೆ ನಸುಕಿನ ತಣ್ಣನೆಯ ಗಾಳಿ ಬಡಿಯಿತು. ಆರೋಗ್ಯದಿಂದಲೇ ಇದ್ದ ಆತನು ಅರಮನೆಗೆ ಹಿಂತಿರುಗಿದನು. ೬ ಗಂಟೆಗಳ ನಂತರ ಆತನಿಗೆ ಅರ್ಧಾಂಗವಾಯು ರೋಗ ಬಡಿಯಿತು. ಆ ದಿನ ಪೂರ್ತಿ ದಿನ ಮತ್ತು ರಾತ್ರಿ ಅವನು ಸ್ಮೃತಿ ತಪ್ಪಿ ಬಿದ್ದಿದ್ದನು. ಶರೀರದಲ್ಲಿ ಯಾವ ಚಲನೆಯೂ ಇರಲಿಲ್ಲ. ಮರುದಿನ ಅವನಿಗೆ ಸ್ಮೃತಿ ಬಂದಿತು. ಆದರೆ ಪೂರ್ತಿ ಶರೀರ ಬಿದ್ದು ಹೋಗಿತ್ತು.

ಅಬ್ದುಲ್ ಮೊಹಮ್ಮದ ಮತ್ತು ಖವಾಸಖಾನರು ಬಾದಶಹನನ್ನು ನೋಡಲು ಅರಮನೆಗೆ ಬಂದು ಹೋದರು. ಮುಜಫರಖಾನ, ಮಿರ್ಜಾ ಯೂಸುಫಖಾನ, ಅಲೀ ಮೋಹಿಬ್ ಖಾನ ಮತ್ತು ಧರ್ಮಾಜಿ ಪಂತ ಇವರೆಲ್ಲರೂ ಅರಮನೆಗೆ ಬಂದು ಬಾದಶಹನನ್ನು ನೋಡಿದರು. ಆ ದಿನ ನಗರದ ಎಲ್ಲ ಹೆಬ್ಬಾಗಿಲುಗಳನ್ನು ಮುಚ್ಚಿ ಕಳ್ಳಗಿಂಡಿಗಳನ್ನು ಮಾತ್ರ ತೆರೆದಿದ್ದರು. ಎಲ್ಲರೂ ಬಾದಶಹನ ಉಪಚಾರದಲ್ಲಿ ತೊಡಗಿದರು. ಶಮಸಾದ ಎಂಬ ವೈದ್ಯ ಮತ್ತು ಇನಿತರ ವೈದ್ಯರು ಬಾದಶಹನಿಗೆ ಚಿಕಿತ್ಸೆಯನ್ನು ಕೊಡಲು ಸಕ್ರಿಯವಾಗಿ ತೊಡಗಿದ್ದರು.

ಬಾದಶಹನಿಗೆ ಮತ್ತೆ ಮೂರು ದಿನ ಇತ್ತ ಕಡೆಯ ಪರಿವೆ ಇರಲಿಲ್ಲ. ವಿಸ್ಮೃತಿಯಲ್ಲೇ ಕಳೆದನು. ನಾಲ್ಕನೆಯ ದಿನ ತುಸು ಸ್ಮೃತಿ ಬಂದಿತು. ಆದರೆ ದೇಹದಲ್ಲಿ ಚೈತನ್ಯವಿರಲಿಲ್ಲ.

ಸಂಪೂರ್ಣ ಶಕ್ತಿ ಕುಂದಿತ್ತು. ರೋಗ ದಿನದಿಂದ ದಿನಕ್ಕೆ ಉಲ್ಬಣಗೊಳ್ಳಹತ್ತಿತು. ಇಂಥ ಪರಿಸ್ಥಿತಿಯಲ್ಲೂ ಆತನು ರಾಜ್ಯದ ಆಡಳಿತವನ್ನು ನಡೆಸುತ್ತಿದ್ದನು. ಈ ನಡುವೆ ಅಬ್ದುಲ್ ಮೊಹಮ್ಮದ ಖಾನನು ಮೂರು ನಾಲ್ಕು ಸಲ ಬಾದಶಹನನ್ನು ನೋಡಲು ಬಂದಿದ್ದನು. ಆದರೆ ಖವಾಸಖಾನನು ಎರಡು ಮೂರು ದಿನಕ್ಕೊಮ್ಮೆ ಬಂದು ಹೋಗುತ್ತಿದ್ದನು. ದರಬಾರದಲ್ಲಿಯ ಯಾರನ್ನಾದರೂ ನೆನಪಿಸಿಕೊಂಡು ಬಾದಶಹನು ಕರೆದರೆ ಅವರು ತಕ್ಷಣ ಬಂದು ಅವನನ್ನು ಕಾಣುತ್ತಿದ್ದರು.

ಅಬ್ದುಲ್ ಮೊಹಮ್ಮದ ಖಾನನ ಪರವಾಗಿ ದಿಯಾನತರಾವನು ಮೊದಲಿನಂತೆ ಬಾದಶಹನ ಸೇವೆಯಲ್ಲಿ ಇರುತ್ತಿದ್ದನು. ಹೀಗಾಗಿ ದರಬಾರದಲ್ಲಿ ಅಬ್ದುಲ್ ಮೊಹಮ್ಮದ ಖಾನನ ಪ್ರಭಾವ ಮತ್ತು ಪ್ರಾಬಲ್ಯಗಳು ಅಧಿಕವಾಗಿದ್ದುವು. ಅದರಿಂದಾಗಿ ಉಳಿದವರು ಕಾರುಭಾರ ಮಾಡುತ್ತಿರಲಿಲ್ಲ. ಬಾದಶಹನು ಜೀವಂತ ಇರುವವರೆಗೆ ರಾಜ್ಯದ ಆಡಳಿತದಲ್ಲಿ ಯಾವ ಅಡೆತಡೆಗಳೂ ಬರದಂತೆ ಅಬ್ದುಲ್ ಮೊಹಮ್ಮದ ಖಾನನು ನೋಡಿಕೊಂಡಿದ್ದನು. ದಿಯಾನತರಾವನು ದರಬಾರದ ಒಳಗೆ ಮತ್ತು ಹೊರಗೆ ಅಬ್ದುಲ್ ಮೊಹಮ್ಮದ ಖಾನನ ಆದೇಶಗಳನ್ನು ಪಾಲಿಸುತ್ತಿದ್ದನು.

ಮಿರ್ಜಾ ಯೂಸುಫಖಾನನು ಖವಾಸಖಾನನ ಪರವಾಗಿದ್ದನು. ಧರ್ಮಾಜಿ ಪಂತನು ಅಬ್ದುಲ್ ಮೊಹಮ್ಮದ ಖಾನ ಮತ್ತು ದಿಯಾನತರಾವರನ್ನು ದ್ವೇಷಿಸುತ್ತಿದ್ದನು. ಮತ್ತು ತನ್ನ ಸುರಕ್ಷಿತೆಗಾಗಿ ಅವನು ಮುಜಫರಖಾನನಿಗೆ ಅಧಿಕಾರ ದೊರೆಯುವಂತೆ ಪ್ರಯತ್ನಿಸುತ್ತಿದ್ದನು. ಆದರೆ ಖವಾಸಖಾನನಿಗಾಗಲೀ, ಮುಜಫರಖಾನನಿಗಾಗಲೀ ರಾಜ್ಯದ ಆಡಳಿತವನ್ನು ಯಶಸ್ವಿಯಾಗಿ ನಡೆಸಿಕೊಂಡು ಹೋಗುವುದು ಮತ್ತು ರಾಜ್ಯವನ್ನು ಉಳಿಸುವ ಸಾಮರ್ಥ್ಯ ಅವರಿಬ್ಬರಲ್ಲೂ ಇಲ್ಲವೆಂಬುದು ಬಾದಶಹನಿಗೆ ಚೆನ್ನಾಗಿ ಗೊತ್ತಿತ್ತು. ಅಬ್ದುಲ್ ಮೊಹಮ್ಮದ ಖಾನನು ಅಖಂಡ ೧೨ ವರುಷ ಬಾದಶಹನ ಹತ್ತಿರವೇ ಇದ್ದು ರಾಜ್ಯವನ್ನು ಸಮರ್ಥವಾಗಿ ನಡೆಸಿದ್ದೂ ಬಾದಶಹನಿಗೆ ಗೊತ್ತಿತ್ತು. ಶಿವಾಜಿ ಭೋಸಲೆ ಮತ್ತು ಅಬ್ದುಲ್ ಕರೀಮ ಬಹಲೋಲಖಾನ ಮೊದಲಾದವರು ಮತ್ತು ಇತರ ಅಮೀರರು ಅಬ್ದುಲ್ ಮೊಹಮ್ಮದ ಖಾನನ ಸೇವೆಯಲ್ಲಿದ್ದರು.

ಇಂಥ ಪರಿಸ್ಥಿತಿಯಲ್ಲಿ ಬಾದಶಹನು ತಾನು ಜೀವಂತ ಇದ್ದಾಗಲೇ ತನ್ನ ರಾಜಪುತ್ರನನ್ನು ಅಬ್ದುಲ್ ಮೊಹಮ್ಮದ ಖಾನನ ಆಶ್ರಯದಲ್ಲಿ ಕೊಟ್ಟು ರಾಜ್ಯದ ಎಲ್ಲ ಅಧಿಕಾರಗಳನ್ನು ಅವನ ಕೈಯಲ್ಲಿ ಕೊಡಬೇಕೆಂದು ಯೋಚಿಸುತ್ತಿದ್ದನು. ಆದರೆ ಅಬ್ದುಲ್ ಮೊಹಮ್ಮದ ಖಾನನು ತಾನು ರಾಜ್ಯದ ಆಡಳಿತವನ್ನು ವಹಿಸಿಕೊಂಡರೆ ಮರುದಿನವೇ ತನ್ನ ಕೊಲೆಯಾಗುವುದು ನಿಶ್ಚಿತ ಎಂಬುದೂ ಅವನಿಗೆ ಗೊತ್ತಿತ್ತು ಮತ್ತು ಅಬ್ದುಲ್ ಮೊಹಮ್ಮದ ಖಾನನ ತಾಯಿ ಕೂಡ ಯಾವುದೇ ಸಂದರ್ಭದಲ್ಲಿ ರಾಜ್ಯದ ಆಡಳಿತವನ್ನು ವಹಿಸಕೂಡದು ಎಂದು ಆಣೆ ಇಟ್ಟಿದ್ದಳು.

ಬಾದಶಹನು ಒಂದು ದಿನ ಅಬ್ದುಲ್ ಮೊಹಮ್ಮದಖಾನನನ್ನು ಕರೆಯಿಸಿಕೊಂಡನು

ಮತ್ತು ಅವನಿಗೆ ಹೀಗೆ ಹೇಳಿದನು: 'ನಾನು ಈ ರೋಗದಿಂದ ಬದುಕಿ ಉಳಿಯುವುದಿಲ್ಲ. ಮೊಗಲರು ಸಮೀಪ ಬಂದಿದ್ದಾರೆ ಎಂಬುದು ನಿನಗೆ ಗೊತ್ತಿದೆ. ಶತ್ರುವಾದ ಶಿವಾಜಿಯೂ ನಮ್ಮ ನಿಯಂತ್ರಣದಲ್ಲಿ ಬರುತ್ತಿಲ್ಲ. ಇಂಥ ಪರಿಸ್ಥಿತಿಯಲ್ಲಿ ನನ್ನ ನಂತರ ರಾಜ್ಯದ ಸ್ಥಿತಿ ಏನಾಗುತ್ತದೆ ಎಂಬುದು ದೇವರಿಗೇ ಗೊತ್ತು. ಆದ್ದರಿಂದ ನಾನು ಜೀವಂತ ಇರುವಾಗಲೇ ನನ್ನ ಕಣ್ಣೆದುರಿಗೇ ನೀನು ನನ್ನ ರಾಜಪುತ್ರನನ್ನು ಈ ರಾಜ್ಯದ ಸಿಂಹಾಸನದ ಮೇಲೆ ಕುಳ್ಳಿರಿಸಬೇಕು ಮತ್ತು ನೀನು ಈ ರಾಜ್ಯದ ಎಲ್ಲ ಆಡಳಿತದ ಅಧಿಕಾರವನ್ನು ನಿನ್ನ ಕೈಯಲ್ಲಿ ತೆಗೆದುಕೊಳ್ಳಬೇಕು. ಇದು ಸರಿ ಎನಿಸುತ್ತದೆ. ಈ ರಾಜ್ಯವನ್ನು ಕಾಪಾಡು. ಹೀಗೆ ನೀನು ಈಗಲೇ ಮಾಡಿದರೆ, ನಾನು ಸತ್ತ ನಂತರ ನಿನ್ನನ್ನು ಯಾರೂ ಪ್ರಶ್ನಿಸುವುದಿಲ್ಲ ಮತ್ತು ವಿರೋಧವನ್ನೂ ಮಾಡುವುದಿಲ್ಲ. ಯಾಕೆಂದರೆ ಈ ವ್ಯವಸ್ಥೆಯನ್ನು ನಾನೇ ಮಾಡಿರುತ್ತೇನೆ' ಅದಕ್ಕೆ ಅಬ್ದುಲ್ ಮೊಹಮ್ಮದನು ಅತ್ಯಂತ ವಿನಯದಿಂದ ಉತ್ತರಿಸುತ್ತ, 'ಈ ಜವಾಬ್ದಾರಿಯನ್ನು ಒಪ್ಪಿಕೊಳ್ಳುವುದು ನನ್ನಿಂದ ಸಾಧ್ಯವಿಲ್ಲ. ಖಾವಂದರು ಕ್ಷಮಿಸಬೇಕು.' ಎಂದನು. ಹತ್ತಿರವೇ ಇದ್ದ ಅವನ ಆಪ್ತ ದಿಯಾನತರಾವ ಮತ್ತು ಇನ್ನಿತರ ಅವನಿಗೆ ಬೇಕಾದ ದರಬಾರಿಗಳು ಅಬ್ದುಲ್ ಮೊಹಮ್ಮದ ಖಾನನಿಗೆ ಒತ್ತಾಯ ಮಾಡಿದರು. ಬಾದಶಹರೇ ತಮ್ಮ ಇಚ್ಛೆಯಿಂದ ರಾಜಪುತ್ರನನ್ನು ತಮ್ಮ ಸುಪರ್ದಿಗೆ ಕೊಡುತ್ತಿದ್ದಾರೆ. ಅವರ ಕಣ್ಣೆದುರಿಗೇ ರಾಜಪುತ್ರನನ್ನು ಪಟ್ಟದ ಮೇಲೆ ಕುಳ್ಳಿರಿಸಿರಿ. ಬಾದಶಹರ ಆದೇಶದಂತೆ ನೀವೇ ಕೆಲವು ದಿನ ರಾಜ್ಯಭಾರ ಮಾಡಿರಿ. ಬೇಡ ಎಂದು ಹೇಳಬೇಡಿರಿ. ಯಾಕೆಂದರೆ ನಂತರ ರಾಜ್ಯಕ್ಕೆ ಇದೊಂದು ದೊಡ್ಡ ಸಮಸ್ಯೆಯಾಗುತ್ತದೆ ಎಂದು ಅಬ್ದುಲ್ ಮೊಹಮ್ಮದ ಖಾನರಿಗೆ ಅವರ ಆಪ್ತರೆಲ್ಲರೂ ಒತ್ತಾಯ ಮಾಡಿದರು. ಆದರೆ ಅಬ್ದುಲ್ ಮೊಹಮ್ಮದ ಖಾನನು ಆಗಲೂ ಅದು ನನ್ನಿಂದ ಸಾಧ್ಯವಿಲ್ಲ ಎಂದು ಹೇಳುತ್ತ ಬಾದಶಹರಿಗೆ ಮತ್ತೊಮ್ಮೆ ಕ್ಷಮಿಸಲು ಕೇಳಿಕೊಂಡನು. ಇದನ್ನು ಕೇಳಿ ಬಾದಶಹನಿಗೆ ಬಹಳ ದುಃಖವಾಯಿತು. ಆದರೆ ಏನನ್ನೂ ಮಾಡಲು ಸಾಧ್ಯವಿರಲಿಲ್ಲ. ಯಾಕೆಂದರೆ ಬಾದಶಹನು ತಾನೇ ಏನೂ ಮಾಡದಂಥ ಪರಿಸ್ಥಿತಿಯಲ್ಲಿ ಅನಾರೋಗ್ಯದಿಂಪ ಇದ್ದನು.

ಆ ಹೊತ್ತಿಗೆ ಅಬ್ದುಲ್ ಮೊಹಮ್ಮದನ ದೈವವೂ ಇಳಿಮುಖವಾಗಹತ್ತಿತ್ತು. ಅವನು ರಾಜ್ಯದ ಯಾವುದೇ ಕೆಲಸಗಳನ್ನು ತೆಗೆದುಕೊಂಡರೂ ಅದರಲ್ಲಿ ಯಶಸ್ವಿಯಾಗುತ್ತಿರಲಿಲ್ಲ. ವಿಫಲನಾಗುತ್ತಿದ್ದನು. ಇಂಥ ಪರಿಸ್ಥಿತಿಯಲ್ಲಿ ಅಬ್ದುಲ್ ಮೊಹಮ್ಮದನೇ ಖುದ್ದಾಗಿ ಒಂದು ದಿನ ಬಾದಶಹನಿಗೆ ಹೀಗೆ ಹೇಳಿದನು:

'ಬಾದಶಪರೆ, ನಿಮ್ಮ ರಾಜಪುತ್ರನ್ನು ಪಟ್ಟದ ಮೇಲೆ ಕುಳ್ಳಿರಿಸುವ ಜವಾಬ್ದಾರಿಯನ್ನು ಖವಾಸಖಾನನಿಗೆ ಕೊಡಿರಿ ಮತ್ತು ರಾಜ್ಯವನ್ನು ನಡೆಸುವ ಎಲ್ಲ ಅಧಿಕಾರಗಳನ್ನೂ ಅವನಿಗೆಯೆ ಕೊಡಿರಿ. ನನಗೆ ಸೈನ್ಯವನ್ನು ಕೊಟ್ಟು ಶಾಹದುರ್ಗ ಮತ್ತು ಗುಲಬರ್ಗಾ ಕೋಟೆಗಳ ಸಂರಕ್ಷಣೆಗಾಗಿ ನನ್ನನ್ನು ಕಳಿಸಿರಿ ಮತ್ತು ಮೀರಜ ಹಾಗೂ ಪರನಾಳಾ ಕೋಟೆಗಳ ಮುಖ್ಯಸ್ಥನಾದ ಅಬ್ದುಲ್ ಕರೀಮ ಬಹಲೋಲಖಾನನಿಗೆ ಮೊಗಲರನ್ನು

ತಡೆದು ನಿಲ್ಲಿಸಲು ಕಳಿಸಿರಿ. ಇದರಂತೆ ಬಿದನೂರಿನಲ್ಲಿದ್ದ ಮುಜಫರಖಾನನ್ನು ಶಿವಾಜಿಯನ್ನು ಎದುರಿಸಲು ಅಲ್ಲಿಂದಲೇ ಕಳಿಸಿರಿ. ಮತ್ತು ಎಲ್ಲ ಸರದಾರರು ಅಮೀರರು ಖವಾಸಖಾನನು ಹೇಳಿದಂತೆ ಮಾಡಿಕೊಂಡು ಹೋಗಿರಿ ಎಂದು ನೀವು ಹೇಳಿರಿ.'

ಈ ಎಲ್ಲ ಸಲಹೆಗಳನ್ನು ಮತ್ತು ಜವಾಬ್ದಾರಿಯನ್ನು ಖವಾಸಖಾನನು ಒಪ್ಪಿಕೊಂಡನು ಮತ್ತು ಇದರಂತೆ ನಾನು ಪಾಲಿಸಿಕೊಂಡು ಹೋಗುತ್ತೇನೆಂದು ಬಾದಶಹನ ಎದುರಿಗೆ ಶಪಥ ಮಾಡಿದನು. ಬಾದಶಹರ ಮರಣದ ಮರುದಿನವೇ ಈ ಎಲ್ಲ ಆದೇಶಗಳನ್ನು ನಾನು ಪಾಲಿಸುತ್ತೇನೆ ಎಂದು ಖವಾಸಖಾನನು ಹೇಳಿದನು. ಬಾದಶಹನ ರೋಗ ಕ್ಷಣ ಕ್ಷಣಕ್ಕೆ ಇನ್ನಷ್ಟು ಉಲ್ಬಣಿಸಿತು. ಅವನ ದೇಹದಲ್ಲಿ ಶಕ್ತಿಯೇ ಉಳಿಯಲಿಲ್ಲ. ಆ ಸಮಯದಲ್ಲಿ ಎಲ್ಲರೂ ತಮ್ಮ ತಮ್ಮ ಪ್ರಯತ್ನದಲ್ಲಿ ತೊಡಗಿದರು. ದಿಯಾನತರಾವನು ಖವಾಸಖಾನನೊಂದಿಗೆ ಒಪ್ಪಂದ ಮಾಡಿಕೊಂಡನು. ಧರ್ಮಾಜಿಯು ಮುಜಫರಖಾನನ ಜೊತೆಗೆ ಸೇರಿ ಅವನನ್ನು ಪ್ರಬಲನನ್ನಾಗಿ ಮಾಡಲು ಪ್ರಯತ್ನಿಸುತ್ತಿದ್ದನು. ಆದರೆ ಅಬ್ದುಲ ಮೊಹಮ್ಮದಖಾನ ಮತ್ತು ದಿಯಾನತರಾವ ಇಬ್ಬರೂ ಮುಜಫರಖಾನನಿಗೆ ಆಸ್ಪದವನ್ನು ಕೊಡಲಿಲ್ಲ. ಬಾದಶಹನು ಮುಜಫರಖಾನನ್ನು ಕರೆದು ಒಳ್ಳೆಯ ಮಾತುಗಳಿಂದ ತಿಳಿಸಿ ಹೇಳಿ ಅವನನ್ನು ಬಿದನೂರಿಗೆ ಕಳಿಸಿದನು.

ಈ ಮಧ್ಯೆ ಬಾದಶಹನದ ಪರಿಸ್ಥಿತಿ ಹದಗೆಟ್ಟಿತು. ಆಗ ಧರ್ಮಾಜಿಪಂತನು ಮುಜಫರಖಾನನಿಗೆ ಸಂದೇಶ ಕಳಿಸುತ್ತ ದಾರಿ ಮಧ್ಯದ ಯಾದವಾಡದಿಂದಲೇ ತಿರುಗಿ ಬಿಜಾಪುರಕ್ಕೆ ಬರಲು ಹೇಳಿ ಕಳಿಸಿದನು. ಅದನ್ನು ಕೇಳಿದ ಮುಜಫರಖಾನನು ಯಾದವಾಡದಲ್ಲಿಯೇ ತನ್ನ ಸೈನ್ಯವನ್ನು ಬಿಟ್ಟು ರಾತೋ ರಾತ್ರಿ ಬಿಜಾಪುರಕ್ಕೆ ಬಂದು ಬಾದಶಹನ ಸೇವೆಯಲ್ಲಿ ಉಳಿದುಕೊಂಡನು. ಮರುದಿನ ಬೆಳಿಗ್ಗೆ ಖವಾಸಖಾನನು ದಿನದಂತೆ ತನ್ನ ಜೊತೆಗೆ ಕೆಲವು ಸೈನಿಕರನ್ನು ಕರೆದುಕೊಂಡು ಬಾದಶಹನ ಹತ್ತಿರ ಬಂದನು. ಆಗ ಮಜಫರಖಾನನು ಅವನನ್ನು ತಡೆದು ನೀನೊಬ್ಬನೇ ಬಾದಶಹರ ಹತ್ತಿರ ಬಾ, ಸೈನಿಕರನ್ನು ಕರೆದುಕೊಂಡು ಬರುವುದು ಉಚಿತವಲ್ಲ ಎಂದು ಹೇಳಿದನು. ಇದರಿಂದ ಮುಜಫರಖಾನ ಮತ್ತು ಖವಾಸಖಾನರ ಮಧ್ಯ ಮನಸ್ಸು ಗದ್ದಲವಾಯಿತು. ಮುಜಫರಖಾನನು ಮಲಿಕ ಮುನವ್ವರನ ಜೊತೆಗೆ ಅಬ್ದುಲ ಮೊಹಮ್ಮದನಿಗೆ ಗುಪ್ತ ಸಂದೇಶವನ್ನು ಕಳಿಸಿದನು. ಅದಕ್ಕೆ ಅಬ್ದುಲ ಮೊಹಮ್ಮದನು ಉತ್ತರವನ್ನು ಕಳಿಸುತ್ತ 'ಖವಾಸಖಾನನು ಪ್ರಧಾನ ಮಂತ್ರಿಯಾಗಿದ್ದಾನೆ ಮತ್ತು ಅವನ ತಂದೆ ಕೂಡ ಈ ರಾಜ್ಯದ ಸೇವೆಯಲ್ಲಿ ತನ್ನ ಜೀವವನ್ನು ಅರ್ಪಿಸಿದ್ದಾನೆ, ಹೀಗಾಗಿ ಖವಾಸಖಾನನು ಯೋಗ್ಯವಾದುದನ್ನೇ ಮಾಡುತ್ತಾನೆ. ನಾವು ನೀವು ಅವನ ಆದೇಶವನ್ನು ಪಾಲಿಸೋಣ' ಎಂದು ಹೇಳಿ ಕಳಿಸಿದನು.

ಮಿರ್ಜಾ ಯೂಸುಫಖಾನನು ಬಾದಶಹನು ರೋಗದ ಮೊದಲ ದಿನದಿಂದ ಅವನು ಮರಣ ಹೊಂದುವವರೆಗೆ ಅವನನ್ನು ಬಿಟ್ಟು ಒಂದು ಕ್ಷಣವೂ ಕದಲಿಲ್ಲ.

ಈತನು ಖವಾಸಖಾನನ ಮಿತ್ರ ಹಾಗೂ ಅವನ ಶುಭಚಿಂತಕನಾಗಿದ್ದನು. ಬಾದಶಾಹನು ತೀರಿಕೊಳ್ಳುವ ಹದಿನೈದು ದಿನಗಳ ಮೊದಲು ಒಮ್ಮೆ ಸ್ಮೃತಿ ತಪ್ಪಿದ್ದನು. ಆಗ ಖವಾಸಖಾನನ ಆದೇಶ ಪಡೆದು ಮಿರ್ಜಾ ಯೂಸುಫಖಾನನೇ ಎಲ್ಲ ಮಹತ್ವದ ಕೆಲಸಗಳನ್ನು ಮಾಡುತ್ತಿದ್ದನು. ಬಾದಶಹನ ಮರಣ ಸನ್ನಿಹಿತವಾದಾಗ ಖವಾಸಖಾನನು ಅರಮನೆಗೆ ಬಂದು ಇದೇ ಮಿರ್ಜಾ ಯೂಸುಫಖಾನ ಸಲಹೆ ಸೂಚನೆಗಳನ್ನು ಪಡೆದು ದರಬಾರದ ಒಳಗೆ ಮತ್ತು ಹೊರಗೆ ಎಲ್ಲ ವ್ಯವಸ್ಥೆಗಳನ್ನು ಮಾಡಿದನು.

ಎರಡನೆಯ ಅಲಿ ಆದಿಲಶಹನು ಹಿಜರಿ ಶಕ ೧೦೮೩, (ಕ್ರಿ. ಶ. ೧೬೭೨), ಶಾಬಾನ ತಿಂಗಳ ೧೩ನೆಯ ದಿನ, ಶನಿವಾರ ೫ಗಂಟೆಯ ಹೊತ್ತಿಗೆ ನಿಧನ ಹೊಂದಿದನು. ನಂತರ ಕಾಜಿ ನೂರುಲ್ಲಾ, ಶಾಹ ಇಬ್ರಾಹಿಮ, ಅಲಿ ಮೊಹಿಬ್ಬ ಖಾನ, ಮೀರ ನಿಯಾಮತುಲ್ಲಾ ಮತ್ತು ಮಲಿಕ ಮಸೂದ ಮೊದಲಾದ ಉಲೇಮಾಗಳೆಲ್ಲ ಸೇರಿ ಬಾದಶಹನನ್ನು ಅವನೇ ಕಟ್ಟಿಸಿದ ಅರ್ಧಕ್ಕೆ ನಿಂತ ಶಾಹಪೇಟದಲ್ಲಿಯ ಕಟ್ಟಡದಲ್ಲಿ ದಫನ ಮಾಡಿದರು. ಆಗ ಬಾದಶಹನ ವಯಸ್ಸು ೩೫ ಆಗಿತ್ತು ಮತ್ತು ೧೬ ವರುಷ ೭ ತಿಂಗಳು ಅವನು ರಾಜ್ಯವನ್ನು ಆಳಿದನು. ಅವನ ನಿಧನವನ್ನು ಅನೇಕ ಕವಿಗಳು ತಮ್ಮ ಕವಿತೆಗಳಲ್ಲಿ ವ್ಯಕ್ತಪಡಿಸಿದ್ದಾರೆ. ಅವರು ಎರಡನೆಯ ಅಲಿ ಆದಿಲಶಹನ ಮರಣದಿಂದ ಇಡೀ ಜಗತ್ತು ಶೋಕಿಸಿತು ಎಂದು ಹೇಳಿದ್ದಾರೆ.

■

*

ಅಧ್ಯಾಯ – ೮

ಸಿಕಂದರ ಆದಿಲಶಹ, ಆದಿಲಶಾಹಿಗಳ ಅವನತಿ

ಎಲ್ಲರಿಗೂ ಗೊತ್ತಿರುವಂತೆ ಹಿಜರಿ ಶಕ ೧೦೮೩, (ಕ್ರಿ. ಶ. ೧೬೭೨) ಶಾಬಾನ ತಿಂಗಳ ೧೩ನೆಯ ದಿನ ೬ನೆಯ ಪ್ರಹರದಲ್ಲಿ ಖವಾಸಖಾನನು ೫ ವರುಷದ ಮಗು ಸಿಕಂದರನನ್ನು ತನ್ನ ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಸಿಂಹಾನದಮೇಲೆ ಕುಳಿತು ಮಗುವಿನ ತಲೆಯ ಮೇಲೆ ಆದಿಲಶಾಹೀ ಛತ್ರ ಚಾಮರಗಳನ್ನು ಹಿಡಿಸಿದನು. ಈ ಸಂದರ್ಭದಲ್ಲಿ ದರಬಾರದಲ್ಲಿಯ ಕವಿಗಳು ಹೀಗೆ ಕವನ ವಾಚಿಸಿದರು.

'ಸಿಕಂದರಶಹನ ಮೇಲೆ ಅಲ್ಲಾಹನ ಕೃಪೆ ಅಧಿಕವಾಗಿದೆ. ಅವನ ದೈವ ಇಂದು ಎತ್ತರಕ್ಕೇರಿದ್ದು ಆಕಾಶದ ನೆರಳು ಅವನ ಮೇಲೆ ಬಿದ್ದಿದೆ. ಸಿಂಹಾಸನದ ಮೇಲೆ ಇಂದು ಅವನು ಕುಳಿತ ನಂತರ ಎಲ್ಲರ ಕಲ್ಯಾಣಕ್ಕೆ ಪ್ರಾರಂಭವಾಯಿತು. ಅವನು ಗದ್ದುಗೆಯ ಮೇಲೆ ಕುಳಿತ ದಿನ ೧೦೮೩.'

ದರಬಾರದಲ್ಲಿಯ ಎಲ್ಲ ವಜೀರರು, ಅಮೀರರು ಮತ್ತೆಲ್ಲರೂ ಬಾದಶಹನಿಗೆ ಮುಜುರೆ ಸಲ್ಲಿಸಿ, ತಮ್ಮ ತಮ್ಮ ಯೋಗ್ಯತಾನುಸಾರ ಅವನಿಗೆ ಕಾಣಿಕೆಗಳನ್ನು ಸಲ್ಲಿಸಿದರು ಮತ್ತು ಅವನನ್ನು ತಮ್ಮ ಬಾದಶಹನಿಂದ ಸ್ವೀಕರಿಸಿದರು.

ಹೀಗೂ ಹೇಳುತ್ತಾರೆ, ಸಿಕಂದರನನ್ನು ಪಟ್ಟದ ಮೇಳೆ ಕುಳ್ಳಿರಿಸಿದ ನಂತರ ಖವಾಸಖಾನನು ೩ ವರುಷ ೨೦ ದಿನ ರಾಜ್ಯವಾಳಿದನು. ಅದರ ವಿವರ ಹೀಗಿದೆ: ಖವಾಸಖಾನನಿಗೆ ರಾಜ್ಯವನ್ನಾಳುವ ಸಾಮರ್ಥ್ಯವಿರಲಿಲ್ಲ ಅದರಿಂದಾಗಿ ಬಹಳಷ್ಟು ಅಮೀರರು ಸರದಾರರು ಅವನ ಬಗ್ಗೆ ಸಿಟ್ಟಾಗಿದ್ದರು. ಖವಾಸಖಾನನು ನವಾಬ ಮುಸ್ತಫಾಖಾನನ್ನು ಬಂಧಿಸಿದನು. ತುಂಬಾ ಗರ್ವಿಷ್ಠನಾಗಿ ತನ್ನ ಮನಸ್ಸಿಗೆ ಬಂದಂತೆ ಆದೇಶ ನೀಡುತ್ತಿದ್ದನು. ಸ್ವಾಮಿದ್ರೋಹದ ವಿಚಾರ ಅವನ ತಲೆಯನ್ನು ಹೊಕ್ಕಿತು. ರಾಜ್ಯದ ಎಲ್ಲ ವಿಶ್ವಾಸಿಕ ಸರದಾರ ಸಚಿವರನ್ನು ಕೆಲಸದಿಂದ ತೆಗೆದು ಹಾಕಿ ಅವರ ಸ್ಥಳದಲ್ಲಿ ತನ್ನ ವಿಶ್ವಾಸಿಕರಾಗಿದ್ದ, ತನಗೆ ಬೇಕಾದವರನ್ನು

ನಿಯಮಿಸಿದನು. ಕೆಲವು ದಿನಗಳ ನಂತರ ತಾನೇ ಬಾದಶಹನೆಂದು ತಿಳಿದು ಆದೇಶ ನೀಡಹತ್ತಿದನು. ಅದರಿಂದ ರಾಜ್ಯದಲ್ಲಿ ಗಲಭೆಗಳು ಪ್ರಾರಂಭವಾದುವು.

ಬಾದಶಹನಿಗೆ ಅವನ ನಡತೆ ಮೊದಲೆಯೇ ಸರಿ ಕಂಡಿರಲಿಲ್ಲ. ಈಗ ಮುಸ್ತಫಾಖಾನನ್ನು ಬಂಧನದಲ್ಲಿಟ್ಟಮೇಲೆ ಮತ್ತಿಷ್ಟು ಬೇಸರಿಸಿದನು. ರಹಸ್ಯದಲ್ಲಿ ರಂದೋಲಾಖಾನನ್ನು ಕರೆಯಿಸಿ ಖವಾಸಖಾನನ್ನು ಕೆಲಸದಿಂದ ತೆಗೆಯಲು ಹೇಳಿದನು. ವಾಸ್ತವದಲ್ಲಿ ದರಬಾರದಲ್ಲಿಯ ಜನರು ಖವಾಸಖಾನನ ಮತ್ತು ಮುರಾರಿಯ ಕೆಟ್ಟ ನಡತೆ ಮತ್ತು ಅತ್ಯಾಚಾರಗಳಿಂದ ಬೇಸತ್ತಿದ್ದರು. ಎಲ್ಲರೂ ಕೂಡಿ ಖವಾಸಖನನಿಗೆ ಒಂದು ಪತ್ರವನ್ನು ಬರೆದು ಮುರಾರಿಯ ನಾಲಿಗೆ ಸರಿ ಇಲ್ಲ. ಅವನ ಭಾಷೆ ಸರಿ ಇಲ್ಲ. ಅವನ ಬಗ್ಗೆ ಯಾರಿಗೂ ಸಂತೋಷವಿಲ್ಲ ಕಾರಣ ತಾವು ಅವನನ್ನು ಬಾದಶಾಹಿಯ ದರಬಾರಿ ಹುದ್ದೆಯಿಂದ ತೆಗೆದು ಕಾಶಿಗೆ ಕಳಿಸಿರಿ ಮತ್ತು ತಾವು ಎಂದಿನಂತೆ ರಾಜ್ಯದ ಶುಭಚಿಂತನೆಯನ್ನು ಮಾಡುತ್ತ ಕೆಲಸ ಮಾಡಿದರೆ ಯಾರೂ ನಿಮಗೆ ಅಡ್ಡ ಬರುವುದಿಲ್ಲ ಎಂದು ಹೇಳಿದರು.

ಪತ್ರವನ್ನು ಕಂಡ ಖವಾಸಖಾನನು ಅವರಿಗೆ ಹೀಗೆ ಉತ್ತರ ಬರೆದನು: 'ಇಂದು ನೀವು ಮುರಾರಿಯ ಬಗ್ಗೆ ತಕರಾರು ಎತ್ತಿದಿರಿ, ನಾಳೆ ನನ್ನ ಬಗ್ಗೆಯೂ ತಕರಾರ ತೆಗೆಯುತ್ತೀರಿ, ಇದೇನು ಮಾತು?' ನಂತರ ಇದರಿಂದ ತನ್ನನ್ನು ಯಾರೂ ಸೇರುವುದಿಲ್ಲ ಎಂದು ಖವಾಸಖಾನನಿಗೆ ತಿಳಿದು ತನ್ನ ಕಡೆಯಿಂದ ಅತ್ಯಂತ ವಿಶ್ವಾಸಿಕನಾದ ಶೇಖ ಮೊಹಿಯುದ್ದೀನ ಡಬೀರನನ್ನು ಔರಂಗಜೇಬನ ಹತ್ತಿರ ಕಳಿಸಿದನು ಮತ್ತು ಹೀಗೆ ಪತ್ರ ಬರೆದು ಕೊಟ್ಟನು. 'ಇಲ್ಲಿ ಎಲ್ಲಾ ಅಮೀರರು, ವಜೀರರು ನನ್ನನ್ನು ವಿರೋಧಿಸುತ್ತಿದ್ದಾರೆ. ನನ್ನ ಯಾವ ಮಾತನ್ನೂ ನಡೆಸಿಕೊಡುತ್ತಿಲ್ಲ. ಗದ್ದಲ ಹುಟ್ಟು ಹಾಕುತ್ತಿದ್ದಾರೆ. ತಾವು ದಯವಿಟ್ಟು ನನ್ನ ಸಹಾಯಕ್ಕಾಗಿ ಒಂದು ದೊಡ್ಡ ಸೈನ್ಯವನ್ನು ಇತ್ತ ಕಡೆಗೆ ಕಳಿಸಬೇಕು. ಅದರಿಂದ ಇಲ್ಲಿಯ ಗದ್ದಲ ಮತ್ತು ಬಂಡುಖೋರತನವು ನಿಲ್ಲುತ್ತದೆ ಮತ್ತು ಅಂದಿನಿಂದ ವಿದ್ಯಾಪುರವು ನಿಮ್ಮ ವಶವಾಗುತ್ತದೆ.'

ಈ ವಿಷಯ ದರಬಾರದ ಜನರಿಗೆ ಗೊತ್ತಾಗಿ ವಿಶೇಷವಾಗಿ ಸಚಿವರು, ಅಮೀರರು ಸಿಟ್ಟಾದರು. ಇದರಲ್ಲಿ ಅಲಿ ಫರಹಾದಖಾನ, ಹೈರತಖಾನ, ಮೊಹಮ್ಮದ ಯಾಕೂತಖಾನ, ರಾಘೋಪಂತ, ಯಾಕೂತಖಾನ, ಖೇಲೂಜಿ ಭೋಸಲೆ, ಘಾಟಗೆ ಶಾರ್ಜಾ, ಇನ್ನಿತರರು ಮತ್ತು ಬಹಳಷ್ಟು ಅಮೀರರು ರಾಜ್ಯದ ಹೊರಗೆ ಇದ್ದವರು, ಗುಲಬರ್ಗಾದಲ್ಲಿ ಒಂದೆಡೆ ಸೇರಿ ರಂದೋಲಾಖಾನನೊಂದಿಗೆ ಚರ್ಚಿಸಿದರು. ಆಕಸ್ಮಿಕವಾಗಿ ಅದೇ ದಿನಗಳಲ್ಲಿ ಇಟಗೀರದ ಕೋಟೆಯ ಹವಾಲ್ದಾರನಾದ ಇಮಾಮಖಾನನು ಖವಾಸಖಾನನ ಮಾತು ಕೇಳದೆ ಅವನ ವಿರುದ್ಧ ಬಂಡು ಎದ್ದಿದ್ದನು. ಅವನನ್ನು ಶಿಕ್ಷಿಸಲು ಖವಾಸಖಾನನು ಅಂಕುಶ ಖಾನ, ಚಾಂದಖಾನ, ನಿಜಾಮ ದರ್ವೇಶ ಮೊಹಮ್ಮದ, ಮುಸ್ತಫಾಖಾನ ನಿಜಾಮಶಾಹೀ ಮೊದಲಾದವರೊಂದಿಗೆ ೧೦ ಸಾವಿರ ಸವಾರರ ಸೈನ್ಯವನ್ನು ಮುರಾರಿಯ ಜೊತೆಗೆ ಕೊಟ್ಟು ಇಟಗೀರ ಕೋಟೆಯ ಮೇಲೆ ಹಲ್ಲೆ ಮಾಡಲು ಕಳಿಸಿದನು.

ಇತ್ತ ಕಡೆಗೆ ರಂದೋಲಾಖಾನನು ತನ್ನ ಜೊತೆಗೆ ಕೆಲವು ಅಮೀರರನ್ನು ಕರೆದುಕೊಂಡು ಖವಾಸಖಾನನಿಗೆ ಶಿಕ್ಷೆ ಕೊಡಲು ಗುಲಬರ್ಗಾದಿಂದ ಬಿಜಾಪುರದ ಕಡೆಗೆ ಹೊರಟನು. ಅತ್ತ ಮಲಿಕ ರೇಹಾನನು ಸೋಲಾಪುರದಿಂದ ಒಂದು ದೊಡ್ಡ ಸೈನ್ಯವನ್ನು ತೆಗೆದುಕೊಂಡು ಕಮಲಾಪುರದ ಹತ್ತಿರ ರಂದೋಲಾಖಾನನ್ನು ಕೂಡಿಕೊಂಡನು. ಆಗ ರಂದೋಲಾಖಾನನು ರಾಘೋಪಂಡಿತನಿಗೆ ಸನ್ನೆ ಮಾಡಿ, ನೀನು ಮುಂದೆ ಹೋಗಿ ಭೀಮಾ ನದಿಯನ್ನು ದಾಟು, ನಾನು ಕೂಡ ನಿನ್ನ ಹಿಂದಿನಿಂದ ಬರುತ್ತೇನೆ ಎಂದು ಹೇಳಿ ಕಳಿಸಿದನು. ರಾಘೋಪಂಡಿತನು ಭಾಗ್ವಾಡಿ ಹತ್ತಿರ ಮತ್ತು ಮಲಿಕ ರೇಹಾನನು ಟಾಕಳಿ ಹತ್ತಿರ ನದಿಯನ್ನು ದಾಟಿದರು.

ಇಷ್ಟರಲ್ಲಿ ಖವಾಸಖಾನನು ಮಲಿಕ ರೇಹಾನನಿಗೆ ಒಂದು ಗುಪ್ತ ಸಂದೇಶವನ್ನು ಕಳಿಸಿದನು. ರಂದೋಲಾಖಾನನು ಮುರಾರಿಯ ವಿರುದ್ಧ ಎಲ್ಲರನ್ನೂ ಎತ್ತಿ ಕಟ್ಟಿ ರಾಜ್ಯದಲ್ಲಿ ಗದ್ದಲ ಎಬ್ಬಿಸುತ್ತಿದ್ದಾನೆ. ಅದಕ್ಕೆ ಅವನಿಗೆ ಶಿಕ್ಷೆ ದೊರೆಯುತ್ತದೆ. ಆದರೆ ನೀನು ಬಾದಶಹರ ಮತ್ತು ನನ್ನ ನಿಕಟ ಮಿತ್ರನಾಗಿರುವಿ, ರಂದೋಲಾಖಾನನ ಮಾತನ್ನು ಕೇಳಬೇಡಿರಿ ಎಂದು ಹೇಳಿ ಕಳಿಸಿದನು. ಅದನ್ನು ಕೇಳಿ ಮಲಿಕ ರೇಹಾನನು ಟಾಕಳಿಯಿಂದ ಮಂದ್ರೂಪಕ್ಕೆ ಹೋಗಿ ಸೋಲಾಪುರ ಕಡೆಯ ನದೀ ತಟದಲ್ಲಿ ಇಳಿದುಕೊಂಡನು.

ಇತ್ತ ರಾಘೋಪಂಡಿತನು ದೇವಣಗಾವದಿಂದ ಭೀಮಾತಟವನ್ನು ದಾಟಿ ಕೇವಲ ೫ ಸವಾರರನ್ನು ತನ್ನ ಜೊತೆಗೆ ತೆಗೆದುಕೊಂಡು ಒಂದು ಹರದಾರಿಯ ಅಂತರದಲ್ಲಿ ಇಳಿದುಕೊಂಡನು. ಇಟಗೀರಕಡೆಗೆ ಹೋದ ಮುರಾರಿಯು ಸೋಲು ಗೆಲುವಿಲ್ಲದೆ ಅಲ್ಲಿ ಒಂದು ತಿಂಗಳು ಕಳೆದನು. ದೇವಣಗಾವದ ಹತ್ತಿರ ರಾಘೋ ಪಂಡಿತನು ಇಳಿದು ಕೊಂಡದ್ದನ್ನು ಕೇಳಿ, ಅವನನ್ನು ದಾರಿಯಿಂದ ಸರಿಸುವುದು ಅತಿ ಸುಲಭ ಎಂದು ತಿಳಿದು ಇಟಗೀರದಿಂದ ೩೨ ಹರದಾರಿಯ ಮೇಲೆ ಇರುವ ದೇವಣಗಾವಕ್ಕೆ ತನ್ನ ಸೈನ್ಯದೊಂದಿಗೆ ಹೊರಟನು. ಹಿಂದೆ ಬರುವ ಸೈನ್ಯದ ದಾರಿಯನ್ನು ನೋಡದೆ ರಾಘೋಪಂಡಿತನೊಂದಿಗೆ ಯುದ್ಧವನ್ನು ಪ್ರಾರಂಭಿಸಿದನು. ಮೊದಲ ಹೊಡೆತ ದಲ್ಲಿಯೇ ಮುರಾರಿಯ ವಿಶ್ವಾಸಿಕನಾದ ಸಯ್ಯದ ಉಸ್ಮಾನ ಲಶ್ಕರಕೋಟೆಯನ್ನು ರಾಘೋಪಂಡಿತನು ಕೊಂದನು. ಹೀಗಾಗಿ ಮುರಾರಿಯು ಸೋತನು. ಅವನ ಬಹಳಷ್ಟು ಸೈನ್ಯವೂ ಸತ್ತಿತು. ಅದರಲ್ಲಿ ರಾಘೋಪಂಡಿತನಿಗೆ ಗೆಲುವಾಯಿತು. ಮುರಾರಿಯು ತನ್ನ ಜೊತೆಗೆ ೧೫ ಸವಾರರನ್ನು ತೆಗೆದುಕೊಂಡು ಪಾಂಟೂರಿಗೆ ಬಂದನು. ಅವನ ಜೊತೆಗಿದ್ದ ಎಲ್ಲ ಸೈನ್ಯವು ಅಲ್ಲಿಲ್ಲಿ ಛಿದ್ರವಾಗಿ ಚದುರಿ ಹೋಯಿತು. ದಾರಿಯಲ್ಲಿ ಸಯ್ಯದ ಮುಸ್ತಫಾಖಾನ ನಿಜಾಮಶಾಹಿಯು ಎದುರಾದನು. ಅವನನ್ನು ಬಂಧಿಸಿ ಬಾರಲಗಿಂಡಿಗೆ ಹೋದನು. ಅನಂತರ ಅವನ ಮತ್ತು ಅಲ್ಲಿಯ ಮುಖ್ಯಸ್ಥನ ತಲೆಗಳನ್ನು ಕತ್ತರಿಸಿ ದ್ವಾರಕೆಯತ್ತ ಓಡಿ ಹೋದನು. ಅಲ್ಲಿಂದ ರಂದೋಲಾಖಾನನ ಜಹಗೀರರಾದ ಮುದಗಿಯನ್ನು ಮುಟ್ಟಿದನು. ಮತ್ತು ಆ ಪ್ರದೇಶವನ್ನು ಲೂಟಿ ಮಾಡಿ ಚಿಮ್ಮಲಗೆಗೆ ಬಂದು ಮುಟ್ಟಿದನು. ೬ ದಿನಗಳ ಕಾಲ ಕೃಷ್ಣೆಯ ತಟದಲ್ಲಿ ಉಳಿದುಕೊಂಡನು. ಆಗ ಅವನ ಮಿತ್ರರು ಅವನಿಗೆ 'ಖವಾಸಖಾನನು

ಜೀವಂತನಾಗಿ ನಗರದಲ್ಲಿ ಕುಳಿತಿದ್ದಾನೆ, ಅವನ ಹತ್ತಿರ ಹೋಗು' ಎಂದು ಹೇಳಿದರು. ಆದರೆ ಅವನು ಅವರ ಮಾತನ್ನು ಒಪ್ಪಲಿಲ್ಲ. ನಾಯಕವಾಡಿಯವರ ಮೇಲೆ ಭರವಸೆಯನ್ನಿಟ್ಟು ಕೃಷ್ಣಾ ದಂಡೆಯನ್ನು ದಾಟಿ ಧಾರವಾಡದ ರಸ್ತೆಯನ್ನು ಹಿಡಿದನು.

ಮುರಾರಿಯು ಸೋತು ಓಡಿಹೋದದ್ದನ್ನು ಕೇಳಿ ರಂದೋಲಾಖಾನನು ಭೀಮಾ ನದಿಯನ್ನು ದಾಟಿ ಆಲಮೇಲ ಹತ್ತಿರ ಬಂದು ಮುಟ್ಟಿದನು. ಖವಾಸಖಾನನು ಕೋಟೆಯ ಬಾಗಿಲುಗಳನ್ನು ಮುಚ್ಚಿ ದ್ವೇಷದ ಬೆಂಕಿಯನ್ನು ಇನ್ನಷ್ಟು ಹೊತ್ತಿಸಿದನು. ರಂದೋಲಾಖಾನನು ಅವನನ್ನು ಉಳಿಸಲು ಬಹಳ ಪ್ರಯತ್ನಿಸಿದನು. ಮತ್ತು ಖವಾಸಖಾನನಿಗೆ ಒಂದು ಸಂದೇಶವನ್ನು ಕಳಿಸುತ್ತ ಈ ಗದ್ದಲ ಮುಗಿಯುವವರೆಗೆ ನೀನು [ಅರಮನೆಯ] ಕೋಟೆಯ ಹೊರಗೆಯೇ ಇರು, ಒಳಗೆ ಹೋಗಬೇಡ ನಾನು ಬಂದು ಎಲ್ಲ ಸಮಸ್ಯೆಗಳನ್ನು ಬಗೆಹರಿಸುತ್ತೇನೆ ಎಂದು ಹೇಳಿ ಕಳಿಸಿದನು. ಆದರೆ ಖವಾಸಖಾನನು ಅವನ ಮಾತನ್ನು ಒಪ್ಪಲಿಲ್ಲ ಮತ್ತು ಮತ್ತಷ್ಟು ಗದ್ದಲ ಹಾಕಿದನು ಹಾಗೂ ಬಹಳಷ್ಟು ಸಮಸ್ಯೆಗಳನ್ನು ಸೃಷ್ಟಿಸಿದನು.

ಈ ವಿಷಯವನ್ನು ತಿಳಿದುಕೊಂಡು ಬಾದಶಹನು ತನ್ನ ಅತ್ಯಂತ ವಿಶ್ವಾಸಿಕನಾದ ಸಿದ್ಧೀ ರೇಹಾನನ್ನು ಕರೆದು, 'ಇದೇ ಸರಿಯಾದ ಸಮಯವಾಗಿದೆ, ನೀನು ಸಂದರ್ಭ ನೋಡಿಕೊಂಡು ನಿನಗೆ ಕೊಟ್ಟ ಕೆಲಸವನ್ನು ಪೂರ್ತಿಗೊಳಿಸು' ಎಂದು ರಹಸ್ಯವಾಗಿ ಹೇಳಿದನು. ಬಾದಶಹನ ಈ ಆದೇಶವನ್ನು ಪಡೆದ ಸಿದ್ಧೀ ರೇಹಾನನು ತುಂಬಾ ಸಂತೋಷಪಟ್ಟನು ಈ ಕಾರ್ಯಕ್ಕೆ ಟೊಂಕ ಕಟ್ಟಿ ಸನ್ನದ್ಧನಾದನು. ಕರೀಮ ಶಾರ್ಜಾ ಮತ್ತು ಹುಸೇನಖಾನ ಇಬ್ಬರನ್ನು ಕರೆದು ಬಾದಶಹನ ಆದೇಶವನ್ನು ಅವರಿಗೆ ತಿಳಿಸಿ ಖವಾಸಖಾನನನ್ನು ಕೊಲ್ಲುವ ತಂತ್ರವನ್ನು ರೂಪಿಸಿದನು. ಮೂವರೂ ಆದೇಶ ಪಾಲಿಸಲು ವಚನ ಬದ್ಧರಾದರು.

ಕರೀಮ ಶಾರ್ಜಾನು ಮಿಯಂಜೀ ಸರಸಿಲ್ಕನ ಮಗನಾಗಿದ್ದನು. ಈ ತಂದೆ ಮಗ ಇಬ್ಬರೂ ಖವಾಸಖಾನನನ್ನು ಕೊಲ್ಲಲಿಕ್ಕೆ ಕತ್ತಿಯನ್ನು ಮಸಿಯುತ್ತಿದ್ದರು. ಹಿಜರಿ ಶಕ ೧೦೮೬, ರಮಜಾನ ತಿಂಗಳ ಕಿನೆಯ ದಿನ ಬುಧವಾರ, (ಕ್ರಿ. ಶ. ೧೬೭೫)ರಲ್ಲಿ ತಂದೆ ಮಗ ಇಬ್ಬರೂ ದರಬಾರದಲ್ಲಿ ಬಂದು ಕುಳಿತುಕೊಂಡರು. ಖವಾಸಖಾನನು ಬಾದಶಹನ ಹತ್ತಿರ ಒಳಗೆ ಕುಳಿತುಕೊಂಡು ಚರ್ಚಿಸುತ್ತಿದ್ದನು. ತುಸು ಹೊತ್ತಿನ ನಂತರ ಹೊರಗೆ ಬಂದು ತನ್ನ ಮನೆಗೆ ಹೋಗುವ ದಾರಿಯಲ್ಲಿ ಇದ್ದನು. ಅಷ್ಟರಲ್ಲಿ ಕರೀಮ ಶಾರ್ಜಾನು ಖವಾಸಖಾನನ ಹತ್ತಿರ ಹೋಗಿ ತನ್ನ ಕಠಾರಿಯಿಂದ [ಖಂಜರದಿಂದ] ಬಲವಾಗಿ ಎದೆಯ ಮೇಲೆ ಹೊಡೆದನು. ಆದರೆ ಹೊಡೆತ ಅಷ್ಟು ಬಲವಾಗಿ ಬೀಳಲಿಲ್ಲ. ಇಷ್ಟರಲ್ಲಿ ಹುಸೇನಖಾನನು ಧೈರ್ಯವನ್ನು ತೋರಿಸಿ ಎದುರು ಬಂದು ಅವನ ಮೇಲೆ ಮತ್ತೊಂದು ಬಲವಾದ ಹೊಡೆತವನ್ನು ಕೊಟ್ಟನು. ಖವಾಸಖಾನನು ಎರಡೂ ಹೊಡೆತಗಳನ್ನು ಸಹಿಸಿಕೊಳ್ಳುತ್ತ ತನ್ನ ಮನೆಯನ್ನು ಮುಟ್ಟಿ ಬಾಗಿಲುಗಳನ್ನು ಮುಚ್ಚಿದನು.

ಈ ಎಲ್ಲ ಘಟನೆಗಳನ್ನು ನೋಡಿದ ಸಿದ್ಧೀ ರೇಹಾನನು, ಈಗ ಖವಾಸಖಾನನನ್ನು ಒಂದು ಕ್ಷಣ ಬದುಕಲು ಬಿಟ್ಟರೂ ಅವನು ಸಾವಿರಾರು ಸಮಸ್ಯೆಗಳನ್ನು ಸೃಷ್ಟಿಸುತ್ತಾನೆ ಎಂದು ಯೋಚಿಸಿ ತನ್ನ ಖಾಸಾ ಸಿಬ್ಬಂದಿ ಸವಾರರನ್ನು ತೆಗೆದುಕೊಂಡು ಕೋಟೆಯ ಹೊರಗಿನಿಂದ ಹಾಯ್ದು, ಬಂದು ಕೋಟೆಯ ಒಳಗೆ ಅವನ ಮನೆಯ ಎದುರಿಗೆ ಬಂದನು. ಖವಾಸಖಾನನ ಮನೆಯ ದಿವಾನಖಾನೆಯ ಬಾಗಿಲನ್ನು ಮುರಿದು ಒಳಗೆ ಹೋಗಿ ಅವನ ತಲೆಯನ್ನು ದೇಹದಿಂದ ಬೇರೆ ಮಾಡಿದನು.

ಆಲಮೇಲದಲ್ಲಿದ್ದ ರಂದೋಲಾಖಾನ ಮತ್ತು ಜೊತೆಗಿದ್ದ ಅಮೀರರೆಲ್ಲ ಬಾದಶಹನ ಆಣತಿಯಂತೆ ಅಲ್ಲಿಂದ ಹೊರಟು ಶಾಹಪುರದ ಕೆರೆಯ ಹತ್ತಿರ ಬಂದು ಇಳಿದುಕೊಂಡರು. ಸಿದ್ಧೀ ರೇಹಾನನು ಖವಾಸಖಾನನ ತಲೆಯನ್ನು ಒಂದು ಬುಟ್ಟಿಯಲ್ಲಿಟ್ಟು ರಂದೋಲಾಖಾನನ ಹತ್ತಿರ ಕಳಿಸಿದನು.

ಆ ದಿನಗಳಲ್ಲಿ ಬಿಜಾಪುರದಲ್ಲಿ ಬರ ಬಿದ್ದಿತ್ತು. ಮಳೆಯೇ ಆಗಿರಲಿಲ್ಲ. ಖವಾಸಖಾನನ್ನು ಹೊಡೆದ ದಿನ ಮುಸಲಧರೆಯಾದ ಮಳೆ ಬಂದು ಕೆರೆ ಕಟ್ಟೆಗಳೆಲ್ಲ ತುಂಬಿ ಹರಿದುವು. ಜನರು ಬರಗಾಲದಿಂದ ಮುಕ್ತರಾದರು.

ಮರುದಿನ ಬಾದಶಹನು ಪೂರ್ತಿ ವಿಶ್ವಾಸದಿಂದ ಶಾಂತ ಮನಸ್ಕನಾಗಿ ಗದ್ದುಗೆಯ ಮೇಲೆ ಕುಳಿತನು. ಎಲ್ಲ ವಜೀರರು ಅಮೀರರು ಸೈನ್ಯಾಧಿಕಾರಿಗಳು ಬಂದು ಬಾದಶಹನಿಗೆ ಮುಜುರೆ ಸಲ್ಲಿಸಿದರು. ಅಂದು ಬಾದಶಹನು ಪ್ರತಿಯೊಬ್ಬ ಅಮೀರ, ವಜೀರರು ಮತ್ತು ಗಣ್ಯ ವ್ಯಕ್ತಿಗಳಿಗೆ ಮುಕ್ತವಾಗಿ ದ್ರವ್ಯ, ವಸ್ತ್ರಗಳನ್ನು ಕೊಟ್ಟು ಸತ್ಕಾರ ಮಾಡಿದನು. ಮಲಿಕ ರೇಹಾನನಿಗೆ ಸರಪಳಿಯಿಂದ ಕಟ್ಟಿದ ದೊಡ್ಡ ಆನೆಯನ್ನು ಕೊಟ್ಟನು. ಸಂದೇಶವಾಹಕನಾಗಿದ್ದ ಸಿದ್ಧೀ ರೇಹಾನನಿಗೆ ಇಖಲಾಸಖಾನ ಎಂದು ಬಿರುದು ಕೊಟ್ಟು ಸಚಿವ ಪದವಿಯನ್ನು ನೀಡಿದನು. ನವಾಬಖಾನ ಭಾಯಿಗೆ ಕಾರಮುಲ್ಕಿ ಹುದ್ದೆ ದೊರಯಿತು. ಅಹಮದಖಾನನಿಗೆ ಸರನೋಬತಿ ಹುದ್ದೆಯನ್ನು ಕೊಡಲಾಯಿತು. ಅನಂತರ ರಾಜ್ಯದ ಆಡಳಿತವು ಸುಸೂತ್ರವಾಗಿ ನಡೆಯಿತು.

ಕೆಲವು ದಿನಗಳ ನಂತರ ಬಾದಶಾಹನು ಬೆಳಗಾವಿಯಲ್ಲಿದ್ದ ನವಾಬ ಮುಸ್ತಫಾಖಾನನನ್ನು ಕರೆಯಲಿಕ್ಕೆ ತನ್ನ ದರಬಾರದಲ್ಲಿಯ ದೊಡ್ಡ ಅಮೀರನಾದ ಶಾಹ ಹಸನ ಫರುಕಾಬಾದಿಯನ್ನು ಕಳಿಸಿದನು. ಅವನು ಹೋಗಿ ೯ ದಿನ ಅಲ್ಲಿ ಇದ್ದು ನವಾಬ ಮುಸ್ತಫಾಖಾನನನ್ನು ಬೆಳಗಾವಿಯಿಂದ ಕರೆದುಕೊಂಡು ಬಂದು ಬಾದಶಹನ ದರಬಾರದಲ್ಲಿ ಹಾಜರಾದನು. ಬಾದಶಹನು ಅವನನ್ನು ಗೌರವಿಸಿ ಶಾಹೀ ಸನ್ಮಾನವನ್ನು ಮಾಡಿ ಅವನಿಗೆ ಕಾರಮುಲ್ಕಿ ಹುದ್ದೆಯನ್ನು ಕೊಟ್ಟನು. ಮುಂದಿನ ದಿನಗಳಲ್ಲಿ ಅವನ ಅಂತಸ್ತನ್ನು ಹತ್ತೆಂಟು ಪಟ್ಟು ಹೆಚ್ಚಿಸಿದನು.

ಧಾರವಾಡ ಕಡೆಗೆ ಓಡಿ ಹೋದ ಮುರಾರಿಯ ಜೊತೆಗೆ ೫ ಸಾವಿರ ಸವಾರರಿದ್ದರು.

ಧಾರವಾಡ ಕೋಟೆಯ ಜನರು ಅವನನ್ನು ಕೋಟೆಯ ಒಳಗೆ ಬರಲು ಬಿಡಲಿಲ್ಲ. ಅವನ ಜೊತೆಗೆ ಯುದ್ಧ ಮಾಡಲು ಸಿದ್ದರಾದರು. ಮುರಾರಿಯೊಂದಿಗೆ ಚರ್ಚಿಸಲು ದೀಪತರಾವ, ಸೂರ್ಯರಾವ ಮತ್ತು ಇನ್ನಿತರ ನಾಯಕವಾಡಿ ಮುಖ್ಯಸ್ಥರು ಕೋಟೆಯಿಂದ ಹೊರಗೆ ಬಂದರು. ಮುರಾರಿಯು ಅವರನ್ನು ಬಂಧಿಸಿದನು. ಯುದ್ಧದಲ್ಲಿ ತೊಡಗಿದ ಕಾಲ್ದಳದಮೇಲೂ ತಪ್ಪು ಹೊರಿಸಿ ಅವರಿಗೂ ಶಿಕ್ಷೆಯನ್ನು ಕೊಟ್ಟು ನಾಲ್ಕು ದಿನ ಅಲ್ಲಿಯೇ ಉಳಿದುಕೊಂಡನು. ಅಷ್ಟರಲ್ಲಿ ಖವಾಸಖಾನನು ಕೊಲೆಯಾದ ಸುದ್ದಿ ಮುರಾರಿಗೆ ತಲುಪಿತು. ಅವನು ಈ ಸುದ್ದಿಯನ್ನು ಯಾರಿಗೂ ಹೇಳಲಿಲ್ಲ. ರಾತ್ರೋರಾತ್ರಿ ಕುದುರೆಯ ಸವಾರನಾಗಿ ಹಳಿಯಾಳ ಕಡೆಗೆ ಹೊರಟು ಹೋದನು. ಹಳಿಯಾಳದ ಕೋಟೆಯ ಜನರು ಅವನನ್ನು ಅಲ್ಲಿ ಬಂಧಿಸಿ ಅವನನ್ನು ಬಾದಶಹನ ಹತ್ತಿರ ಕಳಿಸಿದರು. ಮುರಾರಿಯು ಬಾದಶಹನ ಎದುರಿಗೆ ಬರುತ್ತಿದ್ದಂತೆ ಅತ್ಯಂತ ಕೆಟ್ಟ ಶಬ್ದಗಳಿಂದ ಬಾದಶಹನನ್ನು ಬೈಯಹತ್ತಿದನು. ಆಗ ಬಾದಶಹನ ಆದೇಶದಂತೆ ಅವನ ನಾಲಿಗೆಯನ್ನು ಮೂಲಸಹಿತ ಕತ್ತರಿಸಿ ಅವನನ್ನು ಒಂದು ಗಾಡಿಯ ಮೇಲೆ ಕುಳ್ಳಿರಿಸಿ ಇಡೀ ನಗರದಲ್ಲಿ ಸುತ್ತಿಸಿದರು. ಅನಂತರ ಅವನ ದೇಹವನ್ನು ತುಂಡು ತುಂಡು ಮಾಡಿ ಚೆಲ್ಲಿದರು. ಈ ಘಟನೆಯು ಖವಾಸಖಾನನು ಕೊಲೆಯಾದ ಒಂದು ತಿಂಗಳ ನಂತರ ನಡೆಯಿತು.

ಕೆಲವು ವಿಶ್ವಾಸಿಕರಿಂದ ಹಿಗೂ ಕೇಳಿ ಬರುತ್ತದೆ. ಖವಾಸಖಾನನ ಕೊಲೆಯಾದ ಒಂದು ತಿಂಗಳ ನಂತರ ಸಿಕಂದರ ಆದಿಲಶಹನು ಅಬ್ದುಲ ಕರೀಮ ಬಹಲೋಲಖಾನನನ್ನು ಪ್ರಧಾನ ಮಂತ್ರಿಯನ್ನಾಗಿ ಮಾಡಿದನು. ಅವನ ಕಾಲದಲ್ಲಿಯೇ ಹಿಜರಿ ೧೦೮೬, (ಕ್ರಿ. ಶ. ೧೬೭೬)ರಲ್ಲಿ ರಬಿ ಉಲ್ ಅವ್ವಲ್ ೮ನೆಯ ದಿನ ದೆಹಲಿಯ ಪ್ರಸಿದ್ಧ ಸರದಾರಾಗಿದ್ದ ಕುತಬುದ್ದೀನಖಾನ ಮತ್ತು ಇಸ್ಲಾಮಖಾನ ರೂಮಿ, ದೊಡ್ಡ ಸೈನ್ಯದೊಂದಿಗೆ ಬಂದು ಆದಿಲಶಾಹೀ ರಾಜ್ಯದ ಸರಹದ್ದಿನಲ್ಲಿ ಕೊಲೆ ಸುಲಿಗೆ ದಂಗೆಯನ್ನು ಮಾಡ ಹತ್ತಿದ್ದರು ಮತ್ತು ಅವರು ನಗರದ ತೀರ ಹತ್ತಿರ ಬಂದಿದ್ದರು.

ಅಬ್ದುಲ್ ಕರೀಮ ಬಹಲೋಲಖಾನನು ಮೊಗಲರ ಸೈನ್ಯವನ್ನು ಎದುರಿಸಲು ಅಲಿಯಾಬಾದ ಹತ್ತಿರ ತನ್ನ ಸೈನ್ಯದೊಂದಿಗೆ ಬಂದನು ಮತ್ತು ಯುದ್ಧವನ್ನು ಪ್ರಾರಂಭಿಸಿದನು. ಉಭಯ ಕಡೆಯ ಸೈನ್ಯದಲ್ಲಿ ಬಹಳಷ್ಟು ಪ್ರಾಣ ಹಾನಿಯಾಯಿತು ಮತ್ತು ಸಾಕಷ್ಟು ಸೈನಿಕರು ಗಾಯಗೊಂಡರು. ಇಸ್ಲಾಮಖಾನನು ತನ್ನ ಮಗನೊಂದಿಗೆ ಆನೆಯಮೇಲೆ ಕುಳಿತು ರಣರಂಗದಲ್ಲಿದ್ದನು. ಆಕಸ್ಮಿಕವಾಗಿ ಆನೆಯು ಬೆದರಿ ರಣರಂಗದಿಂದ ಹೊರಬಿದ್ದು ಅಬ್ದುಲ್ ಕರೀಮ ಬಹಲೋಲಖಾನನ ಪಾಳಯದಲ್ಲಿ ಬಂದು ಬಿಟ್ಟಿತು. ಆಗ ಸೈನಿಕರು ಹಗ್ಗದಿಂದ ಆನೆಯನ್ನು ಬಂಧಿಸಿ ನೆಲಕ್ಕೆ ಕೆಡವಿದರು. ಇಸ್ಲಾಮಖಾನ ಮತ್ತು ಅವನ ಮಗನನ್ನು ಕೊಲೆ ಮಾಡಿದರು. ಅಂದು ಅಬ್ದುಲ್ ಕರೀಮಖಾನನಿಗೆ ಗೆಲುವಾಯಿತು.

ನವಾಬ ಅಬ್ದುಲ ಕರೀಮಖಾನನು ತನ್ನ ಗೆಲುವಿನ ಶುಭ ಸಂದೇಶವನ್ನು ಸಿಕಂದರ ಆದಿಲಶಾಹ ಬಾದಶಹನಿಗೆ ಕಳಿಸಿ ಕೊಟ್ಟನು. ಬಾದಶಹನು ಶುಭ ಸಮಾಚಾರವನ್ನು ಕೇಳಿ

ಅತ್ಯಂತ ಸಂತೋಷಿತನಾಗಿ ಆತನಿಗೆ ವಿಶೇಷ ವಸ್ತ್ರಗಳನ್ನು, ಚರಕಸಿಯನ್ನು [?] ಪದಕವನ್ನು, ಮುತ್ತು ರತ್ನಗಳನ್ನು ಮತ್ತು ಕಠಾರಿಯನ್ನು ದಿಯಾನತರಾವನೊಂದಿಗೆ ಕಳಿಸುತ್ತ ಒಂದು ಶುಭ ಸಂದೇಶವನ್ನು ಮತ್ತು ಒಂದು ಪ್ರಶಸ್ತಿ ಪತ್ರವನ್ನು ಕಳಿಸಿದನು. ಪರ್ಶಿಯನ್‌ದಲ್ಲಿದ್ದ ಎರಡೂ ಪತ್ರಗಳ ಅರ್ಥ ಹೀಗಿದೆ.

'ನವಾಬ ಅಬ್ದುಲ್ ಕರೀಮಖಾನನಿಗೆ ಬಾದಶಹ ಸಿಕಂದರ ಆದಿಲಶಹನ ದರಬಾರದಿಂದ ಕಳಿಸಿದ ಸಂದೇಶ:

ನೀವು ಜಗತ್ತನ್ನು ಗೆಲ್ಲುವ ಸಾಮರ್ಥ್ಯ ಇದ್ದವರು. ನೀವು ಹೇಳಿದಂತೆ ಸೂರ್ಯನು ಕೇಳುತ್ತಾನೆ. ಮಾನ, ಮರ್ಯಾದೆ, ಗೌರವಗಳು, ಪ್ರಸಿದ್ಧಿ, ಶೌರ್ಯಗಳು ನಿಮ್ಮ ಬಾಗಿಲಿಗೆ ಬಂದು ಮುಟ್ಟಿವೆ. ನೀವು ಈ ವಿಶ್ವದಲ್ಲಿ ಪ್ರಸಿದ್ಧರಾದ ಮತ್ತು ಗುರುತಿಸಲ್ಪಟ್ಟ ಸಚಿವರಾಗಿದ್ದೀರಿ. ಇಂದು ನೀವು ಆದಿಲಶಾಹೀ ರಾಜ್ಯದ ಗೌರವವನ್ನು ಬಹಳಷ್ಟು ಎತ್ತರಕ್ಕೆ ಅಂದರೆ ಆಕಾಶದವರೆಗೆ ಕೊಂಡೊಯ್ದಿದ್ದೀರಿ. ನೀವು ಈ ರಾಜ್ಯದ ಅತ್ಯಂತ ವಿಶ್ವಾಸಿಕ, ಪ್ರಾಮಾಣಿಕ ಮತ್ತು ಬಾದಶಹನಿಗೆ ಪ್ರಾಣವನ್ನೂ ಕೊಡುವಂಥ ಬಹಾದ್ದೂರರಾಗಿದ್ದೀರಿ. ಆದ್ದರಿಂದ ಬಾದಶಹನ ಕಡೆಯಿಂದ ನಿಮಗೆ ಎಲ್ಲ ರೀತಿಯ ಗೌರವಗಳು ಸಲ್ಲುತ್ತವೆ.

ಇದಕ್ಕಾಗಿ ನಾನು ಅಲ್ಲಾಹನ ಎದುರಿಗೂ ತಲೆ ಬಾಗಿಸಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಯಾಕೆಂದರೆ ಅಲ್ಲಾಹನು ಇಂದು ನಮಗೆ ಕೊಟ್ಟ ಗೆಲುವಿನ ಚರ್ಚೆ ದೊಡ್ಡ ದೊಡ್ಡ ರಾಜ್ಯಗಳಲ್ಲಿ ನಡೆದಿದೆ. ನಿಮ್ಮಿಂದ ದೊರೆತ ಈ ಗೆಲುವು ರಾಜ್ಯದ ಜನರಿಗೆ ಪವಾಡ ಸದೃಶವಾಗಿದೆ. ನಿಮ್ಮ ಜೊತೆಗೆ ಹೋರಾಡಿ ತಮ್ಮ ಜೀವತೆತ್ತ ಎಲ್ಲ ವೀರರ ಆತ್ಮಕ್ಕೆ ಅಲ್ಲಾಹನು ಶಾಂತಿಯನ್ನು ಕೊಡಲಿ. ನಮ್ಮ ರಾಜ್ಯದ ಬಗ್ಗೆ ಕೆಡುಕನ್ನು ಬಯಸುವ ಜನರ ಆಶೆ ವಿಫಲವಾಗಲಿ. ನೀವು ರಾಜ್ಯದ ಆಧಾರ ಸ್ಥಂಭರಾಗಿದ್ದೀರಿ. ಅದಕ್ಕಾಗಿ ನಿಮಗೆ ಮೇಲೆ ಕಾಣಿಸಿದ ಎಲ್ಲ ವಸ್ತುಗಳನ್ನು ಕಾಣಿಕೆಯಾಗಿ ಕಳಿಸುತ್ತಿರುವೆ. ನನ್ನ ಪರವಾಗಿ ನಿಮ್ಮ ಹತ್ತಿರ ಈ ಎಲ್ಲ ವಸ್ತುಗಳನ್ನು ತೆಗೆದುಕೊಂಡು ದಿಯಾನತರಾವ ಬರುತ್ತಿದ್ದಾನೆ. ಈ ಗೆಲುವಿನ ಬಗ್ಗೆ ದಿಯಾನತರಾಯನ ಹತ್ತಿರ ಹೇಳಿದ್ದನ್ನು ಕೇಳಿ ಸಂತೋಷಪಡಿರಿ. ನೀವು ದರಬಾರಕ್ಕೆ ಬಂದ ನಂತರ ನಿಮ್ಮನ್ನು ಈ ರಾಜ್ಯದ ಪ್ರಧಾನಮಂತ್ರಿಯನ್ನಾಗಿ ಮಾಡಲು ನಿರ್ಧರಿಸಿರುವೆ. ಈ ಸಂದೇಶವನ್ನು ಬರೆದ ದಿನ, ರಬಿ ಉಸ್ ಸಾನಿ ೨ನೆಯ ದಿನ ಹಿಜರಿ ಶಕ ೧೦೮೭,'

ಇಂಥ ಇನ್ನೊಂದು ಪ್ರಶಸ್ತಿ ಪತ್ರವನ್ನು ಬಾದಶಹನಿಂದ ಅಬ್ದುಲ್ ಕರೀಮಖಾನನಿಗೆ ಬರೆಯಲಾಯಿತು.

'ಎಲ್ಲ ರೀತಿಯ ಗೌರವ ಮಾನ ಸನ್ಮಾನಗಳೊಂದಿಗೆ ನಿಮಗೆ ಬರೆಯುವುದೇನೆಂದರೆ, ಅಲ್ಲಾಹನ ಕೃಪೆ ಯಾವತ್ತೂ ನಿಮ್ಮ ಮೇಲಿರಲಿ, ನಿಮಗೆ ಯಾವಾಗಲೂ ಒಳ್ಳೇಯ ಸಮಯವೇ ಬರಲಿ. ನಿಮ್ಮ ಪ್ರಸಿದ್ಧಿಯ ಸೂರ್ಯ ಎಂದೂ ಮುಳುಗದಿರಲಿ. ಯಾಕೆಂದರೆ

ಇಂದು ನೀವು ಕಳಿಸಿದ ಶುಭ ಸಂದೇಶದ ಬಗ್ಗೆ ವರ್ಣಿಸಲು ನನ್ನಲ್ಲಿ ಶಬ್ದಗಳೇ ಇಲ್ಲ. ಗೆಲುವಿನ ಸಂದೇಶ ಕಿವಿಗೆ ಬಿದ್ದ ತಕ್ಷಣ ನಾನು ಪರಮಾತ್ಮನ ಚರಣಗಳ ಮೇಲೆ ನನ್ನ ಆತ್ಮವನ್ನು ಸಮರ್ಪಿಸಿರುವೆ. ನೀವು ನಮ್ಮ ರಾಜ್ಯದ ಶತೃಗಳಿಗೆ ಕೊಟ್ಟ ಹೊಡೆತದ ಸುದ್ದಿ ನಮಗೆ ಅದೇ ಆಗ ಅರಳಿದ ಹೂವಿನ ಸುವಾಸನೆಯಂತಾದರೆ ಶತ್ರುಗಳ ನಿದ್ದೆಯನ್ನು ಹಾರಿ ಹೊಡೆದಿದೆ. ಭವಿಷ್ಯದಲ್ಲೂ ದೇವರು ನಿಮಗೆ ಇದೇ ರೀತಿ ಗೆಲುವನ್ನೇ ಕೊಡುತ್ತಿರಲಿ. ಈ ರಾಜ್ಯದ ಹೆಸರನ್ನು ಇಡೀ ವಿಶ್ವದಲ್ಲಿ ಪ್ರಸಿದ್ಧಿ ಮಾಡುತ್ತಲಿರಿ. ನಿಮ್ಮ ಶೌರ್ಯದ ಗೆಲುವಿಗಾಗಿ ನಾನು ನಮ್ಮ ರಾಜ್ಯದ ವಜೀರರಾದ ದಿಯಾನತರಾವನೊಂದಿಗೆ ರಾಜ್ಯ ಪ್ರಶಸ್ತಿಯನ್ನು ಕಳಿಸಿಕೊಡುತ್ತಿರುವೆ. ಅದನ್ನು ಅತ್ಯಂತ ಗೌರವದಿಂದ ಸ್ವೀಕರಿಸಿರಿ, ಈ ಪ್ರಶಸ್ತಿ ಪತ್ರ ಬರೆದ ದಿನ ರಬಿ ಉಸ್ ಸಾನಿ ೨ನೆಯ ದಿನ ಹಿಜರಿ ಶಕ ೧೦೮೭.'

ಅಬ್ದುಲ್ ಕರೀಮಖಾನನು ಬಾದಶಾಹನ ಪ್ರಧಾನ ಮಂತ್ರಿಯಾಗಿ ೨ ವರುಷ ೨ ತಿಂಗಳು ೬ ದಿನ ಕೆಲಸ ಮಾಡಿದನು. ಹಿಜರಿ ಶಕ ೧೦೮೮, ಜಿಲ್ಕಾದ ೯ನೆಯ ದಿನ (ಕ್ರಿ. ಶ. ೧೬೭೭) ಅಬ್ದುಲ್ ಕರೀಮಖಾನನು ಈ ಅಶಾಶ್ವತ ಜಗತ್ತಿನಿಂದ ಶಾಶ್ವತ ಜಗತ್ತಿಗೆ ಹೊರಟು ಹೋದನು.

ಅಬ್ದುಲ ಕರೀಮಖಾನನ ಮರಣದ ನಂತರ ಮಸೂದಖಾನ ಹಬಶೀ ಎಂಬವನು ಸಿಕಂದರ ಆದಿಲಶಹನ ಪ್ರಧಾನ ಮಂತ್ರಿಯಾದನು. ಮಸೂದ ಖಾನನ ವಿವರ ಹೀಗಿದೆ: ಆವನು ಮಲಿಕ ಅಬ್ದುಲ್ ವಹಾಬ್ ಬಿನ್ ಮಲಿಕ ರೆಹಾನ ಆದಿಲಶಾಹೀಯ ಹಬಶೀ ಗುಲಾಮನಾಗಿದ್ದನು. ಅಬ್ದುಲ ವಹಾಬನು ಸತ್ತ ನಂತರ ಆತನ ಗುಲಾಮನಾದ ಸಿದ್ದೀ ಜೋಹರನು ಅಬ್ದುಲ್ ವಹಾಬನ ಮಕ್ಕಳನ್ನು ಬಂಧಿಸಿ ಅವನ ಸ್ಥಳದಲ್ಲಿ ಮಹಮ್ಮದಪುರದಲ್ಲಿ ಅಮೀರನಾದನು. ಮಸೂದಖಾನನನ್ನು ತನ್ನ ಅಳಿಯನನ್ನಾಗಿ ಮಾಡಿಕೊಂಡು ಅವನಿಗೆ ಒಳ್ಳೆಯ ತರಬೇತಿಯನ್ನು ಕೊಡುತ್ತಿದ್ದನು. ಈ ಹಿಂದೆ ಅಲಿ ಆದಿಲಶಾಹನಿಂದ ಸಲಾಬತಖಾನ ಎಂಬ ಬಿರುದನ್ನು ಪಡೆದು ಸಿದ್ಧೀ ಜೋಹಾರನು ಪನ್ಹಾಲಾ ಕೋಟೆಯನ್ನು ಮುತ್ತಿಗೆ ಹಾಕಿ ಶಿವಾಜಿ ಭೋಸಲೆ ಜೊತೆಗೆ ಯುದ್ಧವನ್ನು ಮಾಡಿದ್ದನು. ಅದೇ ಕಾಲದಲ್ಲಿ ಮಸೂದಖಾನನು ತನ್ನ ಸ್ವಂತ ಸಾಮರ್ಥ್ಯದಿಂದ ಬಾದಶಾಹನಿಂದ ಖಾನ ಎಂಬ ಬಿರುದನ್ನು ಪಡೆದು ಸಚಿವ ಪದವಿಯನ್ನು ಪಡೆದಿದ್ದನು.

ಸಲಾಬತ್ ಖಾನನು ಸತ್ತನಂತರ ಅವನ ಮಗ ಸಿದ್ದೀ ಅಬ್ದುಲ ಅಜೀಜನು ತಂದೆಯ ಸ್ಥಾನದಲ್ಲಿ ಬಂದನು ಮತ್ತು ಮಸೂದಖಾನನನ್ನು ಬಂಧಿಸಬೇಕೆಂದು ಯೋಚಿಸುತ್ತಿದ್ದನು. ಮಲಿಕ ಅಬ್ದುಲ್ ವಹಾಬನ ಹೆಂಡತಿಗೆ ಅಬ್ದುಲ್ ಅಜೀಜನ ಯೋಜನೆ ಗೊತ್ತಾಗುತ್ತಿದ್ದಂತೆ ಮಸೂದಖಾನನಿಗೆ ಅದನ್ನು ಹೇಳಿದಳು. ಮಸೂದಖಾನನು ಕನವಲದಿಂದ ಓಡಿ ಆದೋನಿ ಕೋಟೆಯ ಹವಲ್ದಾರನಾದ ಶೇಖ ಇನಾಯತುಲ್ಲಾ ಆದಿಲಾಬಾದಿ ಅವನ ಹತ್ತಿರ ಹೋದನು. ಶೇಖ ಇನಾಯತುಲ್ಲಾ ಅವನಿಗೆ ಆಶ್ರಯ ಕೊಟ್ಟನು. ಕೆಲವು ದಿನಗಳ ನಂತರ ಮಸೂದಖಾನನು ಆದೋನಿ ಕೋಟೆಯನ್ನು ಶೇಖ

ಇನಾಯತುಲ್ಲಾನಿಂದ ತನ್ನ ವಶಕ್ಕೆ ತೆಗೆದುಕೊಂಡು ಅಲ್ಲಿಯೇ ಉಳಿದನು. ಬರ ಬರುತ್ತ ಮಸೂದಖಾನನು ಸಚಿವನಾದನು. ಮಸೂದಖಾನನು ಜನರೊಂದಿಗೆ ಬೆರೆಯುವ ಹಾಗೂ ಅವರ ಒಲವನ್ನು ಗಳಿಸಿಕೊಳ್ಳುವ ಚತುರ ಮಾತುಗಾರನಾಗಿದ್ದನು. ಜೊತೆಗೆ ರಾಜಕಾರಣದಲ್ಲಿ ಅಲ್ಪ ಸ್ವಲ್ಪ ಜ್ಞಾನವಿತ್ತು. ಆದರೆ ಅವನು ಹಣದ ಪಿಶಾಚಿಯಾಗಿದ್ದನು ಹಾಗೂ ಯಾರ ಮೇಲೂ ವಿಶ್ವಾಸವನ್ನು ಇಡದೆ ಸಂಶಯಖೋರನಾಗಿದ್ದನು. ತನ್ನ ಮನೆಯ ಜನರು, ಹೆಂಡತಿಯ ಮೇಲೂ ಭರವಸೆ ಇರಲಿಲ್ಲ. ತನ್ನ ಪ್ರಜೆ ಹಾಗೂ ಸೈನ್ಯ ಸಿಬ್ಬಂದಿಯನ್ನು ಚೆನ್ನಾಗಿ ನೋಡಿಕೊಂಡು ಹೋಗುವ ಗುಣವಿರಲಿಲ್ಲ. ಬುದ್ಧಿವಂತರಿಗೆ, ಅರ್ಹರಿಗೆ ಅವನು ಎಂದೂ ಮುಂದೆ ತರುತ್ತಿರಲಿಲ್ಲ.

ಆದರೂ ಇಂಥ ಮಸೂದಖಾನನು, ನವಾಬ ಅಬ್ದುಲ್ ಕರೀಮ ಖಾನನ ಮೃತ್ಯುವಿನ ನಂತರ ಅವನ ಹೆಂಡರು ಮಕ್ಕಳನ್ನು ಕರೆದುಕೊಂಡು ಹೀರಾಪುರದಿಂದ ಹಿಜರಿ ೧೦೮೮ ಜಿಲ್ಕಾದ ತಿಂಗಳಲ್ಲಿ, (ಕ್ರಿ. ಶ. ೧೬೭೭)ರಲ್ಲಿ ಬಿಜಾಪುರ ಕೋಟೆಗೆ ಹೊರಟನು. ದಾರಿ ಮಧ್ಯದಲ್ಲಿ ಅವನಿಗೆ ಜಮ್ಶೀದನ ಪತ್ರಗಳು ದೊರೆತವು. ಅದರಲ್ಲಿ 'ನಾನು ಅಬ್ದುಲ್ ಕರೀಮಖಾನನು ಹೇಳಿದಂತೆಯೇ ಮಾಡಿದ್ದೇನೆ, ಮುಂದೆ ನೀವು ನನಗೆ ಏನನ್ನೂ ಕೇಳುವುದಿಲ್ಲ ಎಂದು ಆಣೆ ಮಾಡಿ ಹೇಳಿರಿ. ಮತ್ತು ಒಪ್ಪಂದದ ಪ್ರಕಾರ ನನಗೆ ಆರು ಲಕ್ಷ ಹೊನ್ನನ್ನು ತಕ್ಷಣ ಕೊಡಬೇಕು. ಯಾಕೆಂದರೆ ಕೋಟೆಯು ವಶವಾದನಂತರ ನಮ್ಮಿಬ್ಬರಲ್ಲಿ ಯಾವ ತಕರಾರು ಬರಬಾರದು. ಇಲ್ಲವಾದಲ್ಲಿ ಕೋಟೆಯ ಸಲುವಾಗಿ ನಾವು ಪರಸ್ಪರ ಯುದ್ಧ ಮಾಡಬೇಕಾಗುತ್ತದೆ.' ಎಂದು ಬರೆದಿದ್ದನು.

ಮಸೂದಖಾನನು ಈ ಪತ್ರಗಳ ವಿಷಯದ ಬಗ್ಗೆ ಯೋಚನೆ ಮಾಡಲು ಭೀಮಾ ದಂಡೆಯ ಹತ್ತಿರ ಇದ್ದ ತಾಂಬಾದಲ್ಲಿ ಕೆಲವು ದಿನ ಉಳಿದುಕೊಂಡನು. ಮತ್ತು ಯೋಚನೆ ಮಾಡಿ ಜಮ್ಶೀದನನ್ನು ಸಮಾಧಾನ ಪಡಿಸಲು ಅವನ ಹತ್ತಿರ ಎರಡು ಸಾವಿರ ಅಫಘಾನರನ್ನು ಒತ್ತೆ ಇಟ್ಟು, ಒಂದಿಷ್ಟು ಹಣವನ್ನೂ ಕೊಟ್ಟು ಉಳಿದ ಹಣಕ್ಕೆ ಅಲ್ಲಿಯ ವ್ಯಾಪಾರಸ್ಥರಿಗೆ ಹವಾಲಿಯನ್ನು ಹಾಕಿ ಕಾಗದ ಬರೆದು ಕೊಟ್ಟನು. ಕಾಗದದಲ್ಲಿ, 'ಬಿಜಾಪುರ ಕೋಟೆಯು ನನ್ನ ಕೈವಶವಾದ ನಂತರ ನಿನ್ನ ಎಲ್ಲ ಲೆಕ್ಕವನ್ನು ಚುಕ್ತಾ ಮಾಡುತ್ತೇನೆ' ಎಂದು ಬರೆದಿದ್ದನು.

ಮಸೂದಖಾನ ಮತ್ತು ಜಮ್ಶೀದನ ನಡುವೆ ಆದ ಒಪ್ಪಂದದ ಪ್ರಕಾರ (ಕ್ರಿ. ಶ. ೧೬೭೮), ಹಿಜರಿ ಶಕ ೧೧೯೯ ಮೊಹರಮ್ ೫ನೆಯ ದಿನ ಶನಿವಾರ ರಾತ್ರಿ ಮಸೂದಖಾನನ ರಾಯಭಾರಿ ವೆಂಕಟಾದ್ರಿ ಬಿಜಾಪುರ ಕೋಟೆಯ ಒಳಗೆ ಬಂದು ಜಮ್ಶೀದನನ್ನು ಹೊರಗೆ ಕಳಿಸಿ ವೆಂಕಟಾದ್ರಿಯು ತಾನೇ ಸ್ವತಃ ಗುರುವಾರ ಮೊಹರಮ್ ೯ನೆಯ ದಿನ ಕೋಟೆಯನ್ನು ವಶ ಪಡಿಸಿಕೊಂಡನು. ಒತ್ತೆಯಾಳಾದ ಅಫಘಾನರು ಜಮ್ಶೀದನೊಂದಿಗೆ ಜಗಳ ತೆಗೆದು ಅವನಿಂದ ಮತ್ತು ಅವನ ಮಕ್ಕಳು, ಅಬ್ದುಲ್ ಕರೀಮಖಾನನ ಮನೆಯವರಿಂದ ತಿಂಗಳ ಸಂಬಳಕ್ಕಾಗಿ ಪೀಡಿಸಹತ್ತಿದರು. ಅವರ

ಮನೆಯ ಕೋಠೀಕೋಣೆ ಹಾಗು ಇತರತ್ರ ಇದ್ದ ಅವರ ವಸ್ತುಗಳನ್ನು, ಏನೇನು ಅವರ ಕೈಗೆ ದೊರೆಯುತ್ತದೆಯೋ ಅದನ್ನೆಲ್ಲ ತೆಗೆದುಕೊಂಡರು. ಅಡುಗೆಯ ಮನೆಯಲ್ಲಿದ್ದ ಪಾತ್ರೆ ಪಡಗಗಳು ಎಲ್ಲವನ್ನೂ ಲೂಟಿ ಮಾಡಿದರು. ಅಬ್ದುಲ್ ಕರೀಮ ಖಾನನ ಸಂಬಂಧಿಕರನ್ನು ಪ್ರತಿ ದಿನ ನೀರಿನ ಕೊಳದಲ್ಲಿ ಮುಳುಗಿಸಿ ಎಬ್ಬಿಸುತ್ತಿದ್ದರು ಮತ್ತು ಸುಡುವ ಕಲ್ಲುಗಳ ಮೇಲೆ ಕೂಡ್ರಿಸುತ್ತಿದ್ದರು. ಹಾಗೆ ಮಾಡಿ ಅವರಿಂದ ಹಣವನ್ನು ವಸೂಲಿ ಮಾಡುತ್ತಿದ್ದರು. ಇದರಂತೆ ಹವಾಲಿ ಹಾಕಿಕೊಂಡ ವ್ಯಾಪಾರಸ್ಥರು ನಗರದ ಜನ ಸಾಮಾನ್ಯರನ್ನು ಹಿಡಿದು ಅವರನ್ನು ಹಿಂಸಿಸಿ ಹಣವನ್ನು ವಸೂಲಿ ಮಾಡುತ್ತಿದ್ದರು.

ಇಷ್ಟರಲ್ಲಿ ಸಯ್ಯದ ಮಖ್ದೂಮ ಶಾರ್ಜಾಖಾನನು ಬಿಜಾಪುರ ಕೋಟೆಯಿಂದ ಜಮ್ಶೀದಖಾನನ ನಿರೀಕ್ಷೆಯನ್ನು ಮಾಡುತ್ತ ಮಳಖೇಡ ಮತ್ತು ಕನಕರ್ತಿಯಲ್ಲಿದ್ದವನು ತನ್ನ ಬಲಜಬರಿಯಿಂದ ಒಂದು ದೊಡ್ಡ ಸ್ಯನ್ಯವನ್ನು ಸೇರಿಸಿಕೊಂಡು ಭೀಮಾನದಿಯ ಹತ್ತಿರವಿದ್ದ ಬಿಜಾಪುರದ ಪ್ರದೇಶವನ್ನು ತನ್ನ ಕೈವಶಮಾಡಿಕೊಳ್ಳುತ್ತ ಬಿಜಾಪುರ ಕೋಟೆಯ ಹತ್ತಿರ ಬಂದನು. ಬಾದಶಾಹನ ಸಿಪಾಯಿಗಳಿಗೆ ಆಮಿಶ ತೋರಿಸಿ ಅವರನ್ನು ತನ್ನತ್ತ ಸೆಳೆದುಕೊಂಡನು. ಮತ್ತು ಶಿವಾಜಿಯೊಂದಿಗೆ ಸ್ನೇಹ ಬೆಳೆಸಿ ಬಿಜಾಪುರದ ಸುತ್ತಮುತ್ತಲಿನ ಪ್ರದೇಶವನ್ನು ಲೂಟಿ ಮಾಡಹತ್ತಿದನು. ಮಸೂದಖಾನನೊಂದಿಗೆ ದುರ್ವರ್ತನೆ ಮಾಡುತ್ತ ವೆಂಕಟಾದ್ರಿಯನ್ನು ಕೊಲೆ ಮಾಡಬೇಕೆಂದು ಯೋಚಿಸಿದನು. ಈತನ ನಡವಳಿಕೆಯನ್ನು ಕಂಡ ಮಸೂದಖಾನನ ಶತೃಗಳು ರಾಜ್ಯದ ತುಂಬೆಲ್ಲ ದಂಗೆ ಲೂಟಿ ಮಾಡ ಹತ್ತಿದರು.

ಅಜೀಜ ಅಂಬರಖಾನನು ಎರಡು ಮೂರು ಸಾವಿರ ಸೈನವನ್ನು ಸೇರಿಸಿ ಸಿಂಧನೂರಿನ ಸುತ್ತಲಿನ ಪ್ರದೇಶವನ್ನು ಲೂಟಿ ಮಾಡಿ ಸಿಂಧನೂರಿನಲ್ಲಿ ತನ್ನ ಧ್ವಜವನ್ನು ಹಾರಿಸಿ ಸ್ವಾತಂತ್ರ್ಯವನ್ನು ಸಾರಿಕೊಂಡನು ಹಾಗೂ ಮಸೂದಖಾನನ ಜಹಗೀರನ್ನು ಲೂಟಿ ಮಾಡ ಹತ್ತಿದನು. ಅದರಂತೆ ಶಿವಾಜಿಯು ಬಿಜಾಪುರದ ಪ್ರದೇಶಗಳಾದ ಬೀಳಗಿ, ಹುನಗುಂದ, ಜಮುಖಂಡಿ ಯಾದವಾಡ ಇತ್ಯಾದಿಗಳಲ್ಲಿ ತನ್ನ ಸಿಪಾಯಿಗಳನ್ನು ನಿಲ್ಲಿಸಿ ಬರಹೋಗುವವರಿಂದ ಹಣವನ್ನು ವಸೂಲು ಮಾಡ ಹತ್ತಿದನು. ತನ್ನ ಸೈನ್ಯವನ್ನು ಆದೋನಿಯ ಕಡೆಗೆ ಕಳಿಸಿ ಲೂಟಿ ಸುಲಿಗೆ ಮಾಡಿಸ ಹತ್ತಿದನು. ಧರ್ಮಾಜಿ ಮತ್ತು ಜಾನೂ ಆನಂದ ಇಬ್ಬರೂ ಸೇರಿ ಮಸೂದಖಾನನ್ನು ಕೊಲ್ಲಬೇಕೆಂದು ಯೋಜನೆ ಹಾಕಿದರು. ಅಷ್ಟರಲ್ಲಿ ಮಸೂದಖಾನನಿಗೆ ಇವರ ಯೋಜನೆ ಗೊತ್ತಾಗಿ ಅವರಿಬ್ಬರನ್ನೂ ಬಂಧಿಸಿದನು.

ಇದೇ ಸಮಯದಲ್ಲಿ ಸಿದ್ದೀ ನುಸ್ರತ ಮತ್ತು ಮಲಿಕ ಸುಂದರ ಇವರಿಬ್ಬರೂ ಮಸೂದಖಾನನ ಹೆಂಡತಿ ಮಕ್ಕಳನ್ನು ಕರೆದುಕೊಂಡು ಆದೋನಿಯಿಂದ ಬರುತ್ತಿದ್ದರು. ದಾರಿಯಲ್ಲಿ ಅವರು ರಾಯಚೂರಿಗೆ ಬಂದಾಗ ಅಲ್ಲಿಯ ಕಿಲ್ಲೇದಾರ ಆಕಾಖುಸ್ರು, ಸಿದ್ದೀ ನುಸ್ರತನನ್ನು ಕೊಲೆ ಮಾಡಿ ಮಸೂದಖಾನನ ಎಲ್ಲ ಹಣವನ್ನು ಕಸಿದುಕೊಂಡು ಅವನ ಹೆಂಡಿರು ಮಕ್ಕಳನ್ನು ರಾಯಚೂರು ಕೋಟೆಯಲ್ಲಿ ಬಂಧಿಸಿ ಇಟ್ಟನು.

ಒಂದು ದಿನ ಹಕೀಮ ಶಮ್ಯಾದ ಎಂಬವನು ತನ್ನ ಪರಿವಾರದೊಂದಿಗೆ ಪ್ರವಾಸದಿಂದ ಬಿಜಾಪುರಕ್ಕೆ ಮರಳಿ ಬರುತ್ತಿದ್ದನು. ಅಫಗಾನರು ಅವರ ಮೇಲೆ ಒಮ್ಮಿಂದೊಮ್ಮೆಲೆ ಏರಿ ಹೋಗಿ ಹಕೀಮ ಶಮ್ಯಾದನನ್ನು ಹಿಡಿದು, ಅವನ ಜೊತೆಗಿದ್ದ ಸಿದ್ದೀ ಅಲ್ಮಾಸನ ಸಹೋದರನನ್ನು ಅವನ ಕುದುರೆಯ ಸಹಿತ ಕೊಂದು ಬಿಟ್ಟರು. ಹಕೀಮ ಶಮ್ಯಾದನನ್ನು ಅತ್ಯಂತ ಅವಮಾನಕರವಾಗಿ ಅವನ ಪಾಲಕಿಯಿಂದ ಕೆಳಗೆ ಕೆಡವಿದರು. ಅವನ ಮಕ್ಕಳು ಪರಿವಾರದವರನ್ನು ತಲೆ ಕಾಲು ಮೈಯನ್ನು ಬತ್ತಲೆ ಮಾಡಿ ಅವರನ್ನು ಬಾಜಾರದಲ್ಲಿ ಎಳೆದು ತಂದು ಅಬ್ದುಲ್ ಕರೀಮಖಾನನ ಹವೇಲಿಯಲ್ಲಿ ಕೆಡವಿದರು. ಮಸೂದಖಾನನು ಶಾಹಪೂರ ದರವಾಜಾದ ಬುರುಜಿನಮೇಲೆ ಬಂದು ಈ ಜನರ ಮೇಲೆ ತನ್ನ ಸೈನ್ಯವನ್ನು ಕಳಿಸಬೇಕೆಂದು ಯೋಚಿಸುತ್ತಿದ್ದನು. ಅಷ್ಟರಲ್ಲಿ ಈ ವಿಷಯ ತಿಳಿದ ಅಫಘನರು ಈ ಹಕೀಮ ಶಮ್ಯಾದ ಮತ್ತು ಅವನ ಪರಿವಾರವನ್ನು ಕೊಂದು ನಾವೂ ಸಾಯುತ್ತೇವೆ ಎಂದು ಹೇಳಿ ಕಳಿಸಿದರು. ಅನಂತರ ಹಕೀಮ ಮತ್ತು ಅವನ ಪರಿವಾರವನ್ನು ಪ್ರತಿದಿನ ಕೈಕಾಲು ಕಟ್ಟಿ ನೀರಿನಲ್ಲಿ ಮುಳುಗಿಸಿ ಎಬ್ಬಿಸುತ್ತ ಅವರಿಂದ ಹಣವನ್ನು ವಸೂಲಿ ಮಾಡಹತ್ತಿದರು.

ಒಂದು ಕಡೆಗೆ ಅಫಗಾನ ಜನರ ದಬ್ಬಾಳಿಕೆ ಸುಲಿಗೆ ನಡೆದರೆ, ಇನ್ನೊಂದು ಕಡೆಗೆ ಸಯ್ಯದ ಮಖ್ದೂಮ ಶರ್ಜಾಖಾನನು ದಂಗೆ ಲೂಟಿ ಮಾಡುತ್ತ ಇಡೀ ರಾಜಕ್ಯವನ್ನು ಕೈವಶ ಮಾಡಿಕೊಳ್ಳಲು ಬಿಜಾಪುರ ಕೋಟೆಯನ್ನು ಸುತ್ತುವರಿದಿದ್ದನು. ಇಂಥದ್ದರಲ್ಲಿ ಮಸೂದಖಾನನು ರಾಜ್ಯದ ಆಡಳಿತವನ್ನು ನಿರ್ವಹಿಸದೆ ಬಿಜಾಪುರ ಕೋಟೆಯಲ್ಲಿ ಅಸಹಾಯಕನಾಗಿ ಕುಳಿತಿದ್ದನು. ಮಸೂದಖಾನನ ಕೈಯಲ್ಲಿಯ ಹಣವೂ ಖಾಲಿಯಾಯಿತು. ಆಗ ಮಸೂದಖಾನನಿಂದ ಉಪಕೃತನಾದ ಕೃತಘ್ನ ಚಿಂತೂ ಜಮ್ಮಣ್ಣ ಎಂಬ ಬ್ರಾಹ್ಮಣನು ವೆಂಕಟಾದ್ರಿಯನ್ನು ಕೂಡಿಕೊಂಡು ಮಸೂದಖಾನನ ಹತ್ತಿರ ಬಂದರು ಮತ್ತು ಅವನಿಗೆ ಹೀಗೆ ಹೇಳಿದರು. ರಾಜ್ಯದ ಹಳೆಯ ಸೇವಕರಾದ ಹಸನಖಾನ ಪಲ್ಲಂಗದಾರ, ಮೀರ ನಿಯಾಮತುಲ್ಲಾ, ಮೀರ ಅಬ್ದುಲ್ ಕಾಶೀಮ ಮತ್ತು ಧರ್ಮಾಜಿ ಪಂಡಿತ ಮೊದಲಾದವರನ್ನು ಸೇರಿಸಿಕೊಂಡು ನಗರದಲ್ಲಿಯ ಜನ ಸಾಮಾನ್ಯರಿಂದ ಹಣ ವಸೂಲಿ ಮಾಡಿದರೆ ಮುಂದಿನ ನಮ್ಮ ಎಲ್ಲ ಕೆಲಸಗಳು ಸುಸೂತ್ರವಾಗಿ ನಡೆಯುತ್ತವೆ ಎಂದು ಹೇಳಿದರು.

ನಂತರ ಮಸೂದಖಾನನ ಸಲಹೆಯಂತೆ ನಗರದಲ್ಲಿಯ ಮುಸಲ್ಮಾನ, ಹಿಂದು ವ್ಯಾಪಾರಸ್ಥರು ಮತ್ತು ಸುತ್ತಮುತ್ತ ಇದ್ದ ಹಳ್ಳಿಗಳಲ್ಲಿಯ ಜನರನ್ನು ಜಬರದಸ್ತಿಯಿಂದ ಕರೆತಂದು ಅವರಿಂದ ಹಣವನ್ನು ವಸೂಲಿ ಮಾಡ ಹತ್ತಿದರು. ಪರಿಸ್ಥಿತಿ ಎಲ್ಲಿಯವರೆಗೆ ಬಂದಿತೆಂದರೆ ಯಾರಾದರೂ ಚೆನ್ನಾದ ಬಟ್ಟೆಗಳನ್ನು ಉಟ್ಟು ಹೊರಟಿದ್ದರೆ ಮತ್ತು ಕಾಣಲು ಒಂದಿಷ್ಟು ಉಳ್ಳವರು ಎಂದು ಕಂಡರೆ ಸಾಕು ಅವರನ್ನು ಹಿಡಿದು ತೊಂದರೆ ಕೊಟ್ಟು ಹಿಂಸಿಸಿ ಅವರಿಂದ ಏನನ್ನಾದರೂ ತೆಗೆದುಕೊಳ್ಳದೆ ಬಿಡುತ್ತಿರಲಿಲ್ಲ. ಈ ಎಲ್ಲ ಅತ್ಯಾಚಾರ ಮತ್ತು ಹಿಂಸೆಗಳಿಂದ ಜನರು ಬೇಸತ್ತು ವಿಷ ತೆಗೆದುಕೊಂಡು ಮನೆಯಲ್ಲೇ

ಸಾಯಹತ್ತಿದರು. ಮತ್ತೆ ಕೆಲವರು ಸಮಯ ನೋಡಿಕೊಂಡು ಇಲ್ಲಿಂದ ಹೊರಗೆ ಓಡಿ ಹೋದರು.

ನಗರದ ಒಳಗಡೆ ಈ ಜನರು ಹೀಗೆ ಹಿಂಸಿಸುತ್ತಿದ್ದರೆ, ಕೋಟೆಯ ಹೊರಗೆ ಅಫಘನರು, ಮಹದವಿಯರು ಜನರಿಗೆ ಅತ್ಯಂತ ಕ್ರೂರವಾಗಿ ಹಿಂಸೆ ಕೊಡುತ್ತಿದ್ದರು. ಇದರಿಂದಾಗಿ ನಗರದ ಒಳಗೆ ಮತ್ತು ಹೊರಗಿನ ಜನರು ತಮ್ಮ ಮನೆ ಮಾರುಗಳನ್ನು ಬಿಟ್ಟು ಓಡಿ ಹೋದರು. ನಗರ ಮತ್ತು ಸುತ್ತಮುತ್ತಲೆಲ್ಲ ಜನರಿಲ್ಲದೆ ಹಾಳು ಬಿದ್ದಿತು. ಇದು ಬಹಳ ದಿನಗಳ ವರೆಗೆ ನಡೆಯಿತು. ಈ ಸಂಗತಿಯು ದೆಹಲಿಯವರೆಗೂ ಹೋಗಿ ಮುಟ್ಟಿತು. ಮುಹಮ್ಮದ ಮೋಅಜ್ಜಮ ಶಾಹ ಶಹಜಾದಾ ಮತ್ತು ದಿಲೇರಖಾನರು ಸೇರಿ ರಾಜಧಾನಿ ದೆಹಲಿಯಿಂದ ಆದಿಲಶಾಹಿ ರಾಜ್ಯದಲ್ಲಿ ನಡೆದ ಗೊಂದಲ, ದಂಗೆ ಲೂಟಿಗಳನ್ನು ತಡೆಯಲು ಜೊತೆಗೆ ಶಿವಾಜಿಯನ್ನು ಶಿಕ್ಷಿಸಲು ಒಂದು ದೊಡ್ಡ ಸೈನ್ಯದೊಂದಿಗೆ ಹೊರಟು ಬಿಜಾಪುರದತ್ತ ಬಂದರು.

ಮಸೂದಖಾನನು ಸಿಕಂದರ ಬಾದಶಹನ ಪ್ರಧಾನ ಮಂತ್ರಿಯಾದ ನಂತರ ಮಸೂದಖಾನ ಮತ್ತು ದಿಲೇರಖಾನರ ಮಧ್ಯ ಈ ಮೊದಲೇ ಒಪ್ಪಂದವಾಗಿತ್ತು. ಅದರ ಪ್ರಕಾರ ಮಸೂದಖಾನನು ರಾಜ್ಯದ ಸುವ್ಯವಸ್ಥೆಯನ್ನು ಕಾಪಾಡಬೇಕು. ದಂಗೆ ಲೂಟಿಖೋರರಿಗೆ ಶಿಕ್ಷೆ ಕೊಟ್ಟು ಶಾಂತಿಯನ್ನು ಸ್ಥಾಪಿಸಬೇಕು ಮತ್ತು ಆಲಂಗೀರ ಬಾದಶಹನ ಆದೇಶಗಳನ್ನು ಪಾಲನೆ ಮಾಡುತ್ತ ಇರಬೇಕು. ಶಿವಾಜಿಯೊಂದಿಗೆ ಯಾವುದೇ ಸಂಬಂಧವನ್ನು ಇಟ್ಟುಕೊಳ್ಳಬಾರದು. ಸಿಕಂದರ ಆದಿಲಶಹನ ರಾಜ್ಯವನ್ನು ಸುರಕ್ಷಿತ ಇಟ್ಟುಕೊಳ್ಳುವಲ್ಲಿ ಮಾತ್ರ ರಾಜ್ಯದ ಸೈನ್ಯವನ್ನು ಉಪಯೋಗಿಸಬೇಕು. ಖವಾಸಖಾನನ ಕಾಲದಲ್ಲೇ ಆದ ಒಪ್ಪಂದದಂತೆ ಮತ್ತು ನಿಶ್ಚಿತಾರ್ಥವಾದಂತೆ ಎರಡನೆಯ ಅಲಿ ಆದಿಲಶಹನ ಮಗಳು ರಾಜಕುಮಾರಿ ಪಾದಶಾಬೀಬಿಯನ್ನು ದೆಹಲಿಗೆ ಕಳಿಸಬೇಕು. ಆ ಸಮಯದಲ್ಲಿ ಹೇಳಿದಂತೆ ಕೊಡುವ ಹಣವನ್ನು ದಿಲೇರಖಾನನಿಗೆ ಕೊಡಬೇಕು. ಬಾದಶಹ ಮತ್ತು ದಿಲೇರಖಾನನ ಆದೇಶಗಳನ್ನು ಚಾಚೂ ತಪ್ಪದೆ ಪಾಲಿಸಬೇಕು. ಬಾದಶಾಹ ಆಲಂಗೀರನ ಆದೇಶಗಳನ್ನು ಪಾಲಿಸುವುದರಲ್ಲಿ ಸುಲ್ತಾನ ಸಿಕಂದರನ ಮತ್ತು ಅವನ ರಾಜ್ಯದ ಹಿತ ಇದೆ ಎಂದು ತಿಳಿದು ರಾಜ್ಯವನ್ನು ನಡೆಸಬೇಕು ಎಂದು ಮುಂತಾಗಿ ಒಪ್ಪಂದಗಳು ಆಗಿದ್ದವು.

ಆದರೆ ಮಸೂದಖಾನನು ಈ ಯಾವ ಒಪ್ಪಂದಗಳನ್ನೂ ಪಾಲಿಸಲಿಲ್ಲ. ಶಿವಾಜಿಯ ಜೊತೆಗೂ ಸಂಬಂಧವನ್ನು ಇಟ್ಟುಕೊಂಡಿದ್ದನು. ಈ ಬಗ್ಗೆ ದಿಲೇರಖಾನನು ಆಗಾಗ ಮಸೂದಖಾನನಿಗೆ ಎಚ್ಚರಿಕೆಯನ್ನು ಕೊಡುತ್ತಿದ್ದನು ಆದರೆ ಮಸೂದಖಾನನು ಇದನ್ನು ಕಿವಿಯಲ್ಲಿ ಹಾಕಿಕೊಳ್ಳಲೇ ಇಲ್ಲ. ಅದರಿಂದಾಗಿ ದಿಲೇರಖಾನ ಮತ್ತು ಮಸೂದಖಾನರ ಮಧ್ಯ ಸಂಬಂಧ ಕೆಟ್ಟಿತು. ಇದೇ ನೆಪವನ್ನು ಮಾಡಿಕೊಂಡು ದಿಲೇರಖಾನನು ಬಿಜಾಪುರವನ್ನು ಆದಷ್ಟು ಬೇಗ ವಶಪಡಿಸಿಕೊಳ್ಳಬೇಕೆಂದು ಸೈನ್ಯವನ್ನು ಕೂಡಿಸಹತ್ತಿದನು. ಇದರಲ್ಲಿ ಅಬ್ದುಲ್

ಕರೀಮಖಾನನ ಮಕ್ಕಳು, ಸಹೋದರರು, ಅವರ ಮಕ್ಕಳು ಮೊದಲಾದವರೊಂದಿಗೆ ಬಿಜಾಪುರ ದರಬಾರದಲ್ಲಿಯ ಪ್ರಭಾವಶಾಲೀ ಜನರನ್ನು ತನ್ನತ್ತ ಸೆಳೆದುಕೊಂಡನು. ಈ ಎಲ್ಲ ಜನರೂ ಇಲ್ಲಿನ ಪರಿಸ್ಥಿತಿ ಮತ್ತು ಬಡತನದಿಂದಾಗಿ ನಗರವನ್ನು ಬಿಟ್ಟು ಹೋಗಬೇಕೆಂದು ಯೋಚಿಸುತ್ತಿದ್ದರು. ದಿಲೇರಖಾನನು ಒಬ್ಬೊಬ್ಬರನ್ನೇ ಕರೆದು ದುಡ್ಡಿನ ಆಶೆಯನ್ನು ತೋರಿಸಿ ತನ್ನತ್ತ ಸೇರಿಸಿಕೊಂಡನು. ಹಾಗೆ ಬಿಜಾಪುರ ದರಬಾರದಿಂದ ದಿಲೇರಖಾನನ ಹತ್ತಿರ ಬಂದ ಅಮೀರರು ಸಚಿವರ ವಿವರ ಹೀಗಿದೆ:

ಅಬ್ದುಲ್ ಗಫೂರ, ಅಬ್ದುಲ್ ಶಕೂರ, ಅಬ್ದುಲ್ ಜಬ್ಬಾರ, ಅಬ್ದುಲ್ ಗನೀ, ಅಬ್ದುಸ್ ಸಲಾಮ್, ಅಬ್ದುಲ್ ಮಜೀದ, ಅಬ್ದುಲ್ ಫಯಾಜ್, ಅಬ್ದುಲ್ ಕರೀಮ, ಹಾಫಿಜ್ ಮೊಹಮ್ಮದ. ಮಿಯಾನ ಮಗನಾದ ಶಾಬಾಜ ಖಾನ, ಮೊಹಮ್ಮದ ಖಾನನ ಇಬ್ಬರೂ ಮಕ್ಕಳು, ಹಾತಮ್ ಖಾನ, ಮಿಯಾನ ಸಹೋದರರಾದ ಮೊಹಮ್ಮದ ಖಾನ ಮತ್ತು ಬಹಾದ್ದೂರ ಖಾನ, ಅಬ್ದುಲ್ ಜಲೀಲ, ಸಯ್ಯದ ಬಾಜೀದ, ಸಯ್ಯದ ಮೀರಾನ, ಅಬ್ದುಲ್ಲಾ ಖಾನ, ಖಿಲ್ಜನ್ ಮಲ್ಲಿಕ್, ಬರ್ರೀಶಾಹ ಸಿಯಾಹ ಛತ್ರಿ ಮೊದಲಾದ ಅನೇಕ ಜನರು, ಅವರೆಲ್ಲರ ಹೆಸರನ್ನು ವಿಸ್ತಾರ ಭಯದಿಂದ ಹೇಳಲಾರೆ. ಅವರೆಲ್ಲರೂ ದಿಲೇರಖಾನನ ಹತ್ತಿರ ಬಂದರು ಅವನಿಂದ ಮರ್ಯಾದೆಯನ್ನು ಪಡೆದರು. ಹುದ್ದೆ ಮತ್ತು ಪ್ರಶಸ್ತಿಗಳನ್ನು ಪಡೆದರು. ಅವರ ಬಡತನ ದೂರಾಗಿ ಶ್ರೀಮಂತರಾದರು. ಇದರಿಂದಾಗಿ ಬಿಜಾಪುರದ ಆದಿಲಶಾಹೀ ಸೈನ್ಯವು ಬರಿದಾಯಿತು. ಮತ್ತು ನಾಲ್ಕೂ ಬದಿಯಿಂದಲೂ ಬಿಜಾಪುರ ಪರಿಸರದಲ್ಲಿ ದಂಗೆ ಲೂಟಿಗಳು ಅಧಿಕವಾದುವು.

ದಿಲೇರಖಾನನು ಪಾದಶಾಬೀಬಿಯನ್ನು ದೆಹಲಿಗೆ ಕಳಿಸಲು ಎಲ್ಲ ವ್ಯವಸ್ಥೆಯನ್ನು ಮಾಡಿದ್ದನು ಆದರೆ ಮಸೂದಖಾನನು ಪಾದಶಾಬೀಬಿಯನ್ನು ಕಳಿಸಲು ತಡ ಮಾಡುತ್ತಲೇ ಇದ್ದನು. ಈ ಮಧ್ಯೆ ಮಸೂದಖಾನ ಮತ್ತು ಸಯ್ಯದ ಮಖದೂಮ ಶಾರ್ಜಾಖಾನರ ನಡುವೆ ಹತ್ತಿದ ಬೆಂಕಿ ಇನ್ನಷ್ಟು ಅಧಿಕವಾಗಿ ಅದನ್ನು ಶಾಂತಿಗೊಳಿಸಲು ದಾರಿಯೇ ಇರಲಿಲ್ಲ. ರಾಜ್ಯದ ಎಲ್ಲ ಕಡೆಗಳಲ್ಲಿ ಅವನು ದಂಗೆ ಲೂಟಿ ಅಶಾಂತಿಯನ್ನು ಹಬ್ಬಿಸಿ ತಾನು ತನ್ನ ಸ್ಥಳದಲ್ಲಿ ಸುಮ್ಮನೆ ಕುಳಿತಿದ್ದನು. ಸಯ್ಯದ ಮಖದೂಮ ಶಾರ್ಜಾಖಾನನ ಸೈನಿಕರು ಯಾವಾಗಲೂ ಶಸ್ತ್ರಸಹಿತವಾಗಿ ಸಿದ್ಧರಾಗಿಯೇ ನಿಂತಿರುತ್ತಿದ್ದರು. ಇದನ್ನೆಲ್ಲ ಕಂಡ ಮಸೂದಖಾನನು ದಿಲೇರಖಾನನಿಗೆ ಸಂದೇಶ ಕಳಿಸುತ್ತ, ಪಾದಶಾಬೀಬಿಯನ್ನು ತಕ್ಷಣ ದೆಹಲಿಗೆ ಕಳಿಸಲು ಸಿದ್ಧನಿರುವೆ ಆದರೆ ಸಯ್ಯದ ಮಖದೂಮ ಶಾರ್ಜಾಖಾನನನ್ನು ಶಿಕ್ಷಿಸಲು ಸಹಾಯ ಕೇಳಿದನು ಮತ್ತು ಪಾದಶಾಬೀಬಿಯನ್ನು ದೆಹಲಿಗೆ ಕಳಿಸುವ ಸಿದ್ಧತೆಯಲ್ಲಿದ್ದನು.

ಆದರೆ ಪಾದಶಾಬೀಬಿಯು ದೆಹಲಿಗೆ ಹೋಗಲು ಸಿದ್ಧಳಿರಲಿಲ್ಲ. ಅವಳು ಬುದ್ಧಿವಂತಳಿದ್ದಳು, ದರಬಾರದಲ್ಲಿಯ ಎಲ್ಲ ಅಧಿಕಾರಿಗಳು, ಸೇವಕರು ಕಾರಭಾರಿಗಳು ಅವಳ ಮಾತನ್ನು ಕೇಳಿಯೇ ಮುಂದಿನ ಕೆಲಸವನ್ನು ಮಾಡುತ್ತಿದ್ದರು. ಇದನ್ನು

ಗಮನದಲ್ಲಿಟ್ಟುಕೊಂಡು ಮಸೂದಖಾನನು ಅವಳೊಂದಿಗೆ ಮಾತನಾಡಲು ಹೆದರುತ್ತಿದ್ದನು. ಆದರೆ ಪಾದಶಾಬೀಬಿ ದೆಹಲಿಗೆ ಹೋದರೆ ತಾನೂ ಉಳಿಯುತ್ತೇನೆ ಮತ್ತು ಆದಿಲಶಾಹೀ ರಾಜ್ಯವೂ ಉಳಿಯುತ್ತದೆ ಎಂಬುದು ಅವನಿಗೆ ಚೆನ್ನಾಗಿ ಗೊತ್ತಿತ್ತು. ಆದ್ದರಿಂದ ಪಾದಶಾ ಬೀಬಿಯು ದೆಹಲಿಗೆ ಹೋಗಲೇಬೇಕೆಂದು ಅವನು ಹಟ ಹಿಡಿದನು. ಇದಕ್ಕಾಗಿ ದರಬಾರದಲ್ಲಿದ್ದ ತನ್ನ ಖಾಸಾ ಸೇವಕಿ ತಾಊಸಮಾ ಅವಳಿಂದ ಈ ಮೊದಲು ಹಲವಾರು ಸಲ ಪಾದಶಾಬೀಬಿಗೆ ಸಂದೇಶ ಕಳಿಸಿ ತನ್ನ ಕೆಲಸ ಮಾಡಿಕೊಳ್ಳುತ್ತಿದ್ದನು. ಪಾದಶಾಬೀಬಿ ಕೂಡ ಅವಳ ಮಾತನ್ನು ತೆಗೆದು ಹಾಕುತ್ತಿರಲಿಲ್ಲ. ಈಗಲೂ ಅವಳನ್ನೇ ಕಳಿಸಿ ಪಾದಶಾಬೀಬಿಗೆ ಹೇಳಿದನು. ಪಾದಶಬೀಬಿ ದೆಹಲಿಗೆ ಹೋದರೆ ಅವಳ ತಮ್ಮನ ರಾಜ್ಯ ಉಳಿಯುತ್ತದೆ. ಅದಕ್ಕಾಗಿ ಅವಳು ದೆಹಲಿಗೆ ಹೊಗಲೇಬೇಕು ಎಂದು ಹೇಳಿ ಕಳಿಸಿದನು. ಹೀಗೆ ಎಲ್ಲ ರೀತಿಯಿಂದ ಒತ್ತಾಯ ತಂದು ಅವಳನ್ನು ದೆಹಲಿಗೆ ಹೋಗಲು ಒಪ್ಪಿಸಿದನು.

ಇದೇ ಸಮಯದಲ್ಲಿ ದಿಲೇರಖಾನನು ಅವಳನ್ನು ಕಳಿಸಲು ಪದೇ ಪದೇ ನೆನಪಿಸಿ ಎಚ್ಚರಿಕೆಯ ಮಾತುಗಳನ್ನು ಕಳಿಸುತ್ತಿರುವಾಗ ಮಸೂದಖಾನನು ಪಾದಶಾಬೀಬಿಯನ್ನು ಕಳಿಸಲು ಸಿದ್ಧವಿರುವುದಾಗಿಯೂ ಆದರೆ ತನ್ನಲ್ಲಿ ಹಣವೇ ಇಲ್ಲ ಎಂದು ನಾಟಕವಾಡಿದನು ಮತ್ತು ಅವನಿಂದ ಸಾಲದ ರೂಪದಲ್ಲಿ ಹಣವನ್ನು ಪಡೆದು ಪಾದಶಾ ಬೀಬಿಯನ್ನು ಕಳಿಸುವ ವ್ಯವಸ್ಥೆಯನ್ನು ಮಾಡಿದನು. ಹಿಜರಿ ಶಕ, ೧೦೯೦, ಜಮಾದಿಲ್ ಅವ್ವಲ್ ತಿಂಗಳಲ್ಲಿ, (ಕ್ರಿ.ಶ. ೧೬೭೯)ರಲ್ಲಿ ಪಾದಶಾಬೀಬಿಯನ್ನು ಆದಿಲ್‌ಶಾಹೀ ಅರಮನೆಯಿಂದ ಮಕ್ಕಾ ಬಾಗಿಲಿನ ಮೂಲಕ ಹೊರಗೆ ಕರೆದುಕೊಂಡು ಬಂದರು. ಪಾದಶಾಬೀಬಿಯ ಜೊತಗೆ ವೆಂಕಟಾದ್ರಿಯನ್ನು ಕಳಿಸಿದನು. ಇದೇ ತಿಂಗಳು ೨೦ನೆಯ ದಿನ ಪಾದಶಾಬೀಬಿಯು ಧೂಳಖೇಡವನ್ನು ತಲುಪಿದಳು. ಅವಳಿಗೆ ಮತ್ತು ಅವಳ ಜೊತೆಗೆ ಬಂದ ಪರಿವಾರಕ್ಕೆ ದಿಲೇರಖಾನನು ಊಟದ ಮತ್ತು ಇಳಿದುಕೊಳ್ಳುವ ವ್ಯವಸ್ಥೆ ಮಾಡಿದನು. ಇದೇ ತಿಂಗಳು ೨೨ನೆಯ ದಿನ ಭೀಮಾನದಿಯನ್ನು ದಾಟಿ ಟಾಕಳಿಯ ಕೋಟೆಯ ಹತ್ತಿರ ತಲುಪಿದರು. ಅಲ್ಲಿ ಮೊಗಲರ ಸೈನ್ಯವಿತ್ತು. ಅಲ್ಲಿದ್ದ ಎಲ್ಲ ಅಮೀರರು ಅಧಿಕಾರಿಗಳು ಪಾದಶಾಬೀಬಿಗೆ ಮುಜುರೆಯನ್ನು ಸಲ್ಲಿಸಿ ಕಾಣಿಕೆಯನ್ನು ಕೊಟ್ಟರು. ಮರುದಿನ ಬೆಳಿಗ್ಗೆ ದಿಲೇರಖಾನನು ಪಾದಶಾಬೀಬಿಯ ಸನ್ನಿಧಿಯಲ್ಲಿ ಹೋಗಿ ಒಂದು ಸಾವಿರರೂಪಾಯಿಗಳ ಕಾಣಿಕೆಯನ್ನು ಕೊಟ್ಟನು. ಅವಳನ್ನು ಮತ್ತು ಅವಳ ಪರಿವಾರವನ್ನು ಒಂಬತ್ತು ದಿನ ಅಲ್ಲಿ ಇಟ್ಟುಕೊಂಡು ಅವರ ಊಟದ ವ್ಯವಸ್ಥೆಯನ್ನು ಮಾಡಿದ್ದನು. ಅಲ್ಲಿಂದ ಪಾದಶಾಬೀಬಿಯ ಪರಿವಾರ ಹೊರಡುವ ಮೊದಲು ಮುಂದಿನ ಎಲ್ಲ ಕಿಲ್ಲೇದಾರ ಮತ್ತು ಸೈನಿಕ ಸರದಾರಿಗೆ ಸಂದೇಶ ಕಳಿಸಿದನು. ಪ್ರತಿಯೊಬ್ಬರೂ ಪಾದಶಾಬೀಬಿಯ ಪರಿವಾರವನ್ನು ತಮ್ಮ ಸರಹದ್ದಿನಲ್ಲಿ ಗೌರವಯುತವಾಗಿ ಸ್ವಾಗತಿಸಿ ಮುಂದಿನ ಸರಹದ್ದಿನ ವರೆಗೂ ಅವರ ಎಲ್ಲ ವ್ಯವಸ್ಥೆಯನ್ನು ಮಾಡಬೇಕು ಎಂದು ಹೇಳಿ ಕಳಿಸಿದನು. ಹೀಗೆ ಪಾದಶಾಬೀಬಿಯ ಪರಿವಾರ ಅಲ್ಲಿಂದ ಹೋದಮೇಲೆ ದಿಲೇರಖಾನನು ಮಸೂದಖಾನನ ಸಹಾಯಕ್ಕಾಗಿ ಸೈನ್ಯವನ್ನು ಕಳಿಸಿದನು.

ಅತ್ತ ಪಾದಶಾಬೀಬಿ ಪರಿವಾರವು ರಜ್ಜಬ ತಿಂಗಳ ೪ನೆಯ ದಿನ ರಾಜಧಾನಿ ದೆಹಲಿಯನ್ನು ತಲುಪಿತು.

ಸಯ್ಯದ ಮಖದೂಮ ಶಾರ್ಜಾಖಾನನು ಮಸೂದಖಾನನ ಬಗ್ಗೆ ತನಗೆ ನ್ಯಾಯ ದೊರಕಿಸಿ ಕೊಡಲು ದಿಲೇರಖಾನನ ಹತ್ತಿರ ಹೊದನು. ದಿಲೇರಖಾನನು ಸಯ್ಯದ ಮಖದೂಮನನ್ನು ಅತ್ಯಂತ ಗೌರವದಿಂದ ಮರ್ಯಾದೆ ಕೊಟ್ಟು ಸ್ವಾಗತಿಸಿದನು ಮತ್ತು ೫೦ ಸಾವಿರ ರೂಪಾಯಿಗಳನ್ನು ಅವನ ಸೈನ್ಯದ ಖರ್ಚಿಗಾಗಿ ಕೊಟ್ಟನು. ಹಾಗೂ ಅವನಿಗೆ ತನ್ನ ಹತ್ತಿರವೇ ಕುಳ್ಳಿರಿಸಿಕೊಂಡನು. ಕೆಲವೊಮ್ಮೆ ತಾನು ಕುಳಿತ ಸ್ಥಳದಿಂದ ಎದ್ದು ತನ್ನ ಸ್ಥಳದಲ್ಲಿ ಅವನಿಗೆ ಕುಳಿತುಕೊಳ್ಳಲು ಹೇಳುತ್ತಿದ್ದನು. ಪ್ರತಿ ದಿನ ಅವನಿಗೆ ಖರ್ಚಿಗೆಂದು ಒಂದು ಸಾವಿರ ರುಪಾಯಿಗಳನ್ನು ಕೊಡುತ್ತಿದ್ದನು. ಸಯ್ಯದ ಮಖದೂಮ ಶಾರ್ಜಾಖಾನನ ಸೈನ್ಯದ ಜನರನ್ನೂ ಅತ್ಯಂತ ಗೌರವದಿಂದ ಕಂಡು ಅವರನ್ನು ತನ್ನತ್ತ ಸೆಳೆದುಕೊಂಡನು. ಅವರಲ್ಲಿಯ ಪ್ರತಿಯೊಬ್ಬರನ್ನೂ ಪ್ರತ್ಯೇಕವಾಗಿ ಕರೆದು ತನ್ನ ಮಾತು ಕೇಳಿದರೆ ಅವರವರ ಯೋಗ್ಯತೆಯ ಪ್ರಕಾರ ಹುದ್ದೆಗಳನ್ನು ಕೊಡುವುದಾಗಿ ಅವರೊಂದಿಗೆ ಒಪ್ಪಂದ ಮಾಡಿಕೊಂಡನು.

ಅತ್ತ ಕಡೆಗೆ ಮಸೂದಖಾನನ ಹತ್ತಿರ ಕೇವಲ ಮೂರು ಅಥವಾ ನಾಲ್ಕು ಸಾವಿರ ಸೈನ್ಯ ಉಳಿದಿತ್ತು. ಅವರು ಕೂಡ ಬಡತನ ಮತ್ತು ಹಸಿವೆಗಳಿಂದ ಬಳಲುತ್ತಿದ್ದರು. ಇಂಥ ಸಂದರ್ಭದಲ್ಲಿ ಮಸೂದಖಾನನು ಶಿವಾಜಿಯ ಜೊತೆಗೆ ಸಂಪರ್ಕ ಬೆಳೆಸಿಕೊಂಡಿದ್ದನು. ಈ ಅವಕಾಶವನ್ನು ಉಪಯೋಗಿಸಿಕೊಂಡು ಶಿವಾಜಿಯು ಬಿಜಾಪುರದ ಹತ್ತಿರ ಬಂದು ಮಸೂದಖಾನನ ಜೊತೆಗೆ ಕೆಲವು ಕರಾರುಗಳೊಂದಿಗೆ ಒಪ್ಪಂದ ಮಾಡಿಕೊಂಡನು. ೩೦ ಸಾವಿರ ಸೈನ್ಯವನ್ನು ಸೇರಿಸಿ ಮೊಗಲರ ಸರಹದ್ದಿನಲ್ಲಿ ಕೊಲೆ, ದಂಗೆ ಲೂಟಿಗಳನ್ನು ಪ್ರಾರಂಭಿಸಿದನು. ಭೀಮಾನದಿಯ ತಟದಿಂದ ಉತ್ತರಕ್ಕೆ ದೌಲತಾಬಾದದ ವರೆಗೆ ಮೊಗಲರ ಎಲ್ಲ ಪ್ರದೇಶಗಳನ್ನು ಸರ್ವನಾಶ ಮಾಡಿದನು. ಅಲ್ಲಿಂದ ಬಹಳಷ್ಟು ಸಂಪತ್ತನ್ನು ತನ್ನ ಜೊತೆಗೆ ತೆಗೆದುಕೊಂಡು ಹೋದನು. ಹೀಗೆ ಎಲ್ಲವನ್ನೂ ನಾಶ ಮಾಡಿದ ನಂತರ ಬಿರಾಡ, ಖಾನದೇಸ, ಮಾರವಾಡ ಮತ್ತು ತೆಲಂಗಾಣ ಪ್ರದೇಶದಲ್ಲಿ ಸೈನ್ಯವನ್ನು ಕಳಿಸಿ ನೆಲಸಮ ಮಾಡಿದನು. ಶಿವಾಜಿಯ ಅತ್ಯಾಚಾರದಿಂದ ಬಳಲಿದ ಜನರು ಅಲಂಗೀರ ಬಾದಶಹನಿಗೆ ತಮ್ಮನ್ನು ಉಳಿಸಿಕೊಳ್ಳಲು ಪ್ರಾರ್ಥನೆಯನ್ನು ಮಾಡಿದರು. ಇದರಿಂದಾಗಿ ದಿಲೇರಖಾನ ಮತ್ತು ಮಸೂದಖಾನರ ಮಧ್ಯದ ಸಂಬಂಧ ಇನ್ನಷ್ಟು ಕೆಟ್ಟಿತು. ಬಿಜಾಪುರವನ್ನು ಕೈವಶ ಮಾಡಿಕೊಳ್ಳಬೇಕೆಂದು ದಿಲೇರಖಾನನು ಟೊಂಕ ಕಟ್ಟಿ ನಿಂತನು. ಇತ್ತ ಮಸೂದಖಾನನ ಹತ್ತಿರ ಸೈನ್ಯವೂ ಇರಲಿಲ್ಲ, ಖಜಾನೆಯಲ್ಲಿ ಹಣವೂ ಇರಲಿಲ್ಲ, ರಾಜ್ಯದ ಆಡಳಿತವನ್ನು ನಿಯಂತ್ರಿಸುವ ಪರಿಸ್ಥಿತಿಯಲ್ಲೂ ಇರಲಿಲ್ಲ. ಸಿಕಂದರ ಬಾದಶಾಹನು ಚಿಕ್ಕವನಿದ್ದು ಅವನಿಂದಲೂ ರಾಜ್ಯವನ್ನು ನಿಯಂತ್ರಿಸುವುದು ಸಾಧ್ಯವಿರಲಿಲ್ಲ.

ಔರಂಗಜೇಬ ಆಲಂಗೀರ ಬಾದಶಹನು ದಕ್ಷಿಣಕ್ಕೆ ಹೊರಟನು.

ಪರಿಸ್ಥಿತಿ ಎಲ್ಲಿಯವರೆಗೆ ಬಂದಿತೆಂದರೆ, ಬಾದಶಹ ಆಲಂಗೀರನು ದಕ್ಷಿಣಕ್ಕೆ ಬರಬೇಕಾಯಿತು. ಅವನು ದಕ್ಷಿಣಕ್ಕೆ ಬಂದ ಕಾರಣವನ್ನು ನಾನು ಈಗ ಹೇಳುತ್ತೇನೆ. ಯಾಕೆಂದರೆ ಔರಂಗಜೇಬನ ವಿಷಯವನ್ನು ಹೇಳದೇ ಆದಿಲಶಾಹಿಗಳ ಚರಿತ್ರೆ ಪೂರ್ತಿಗೊಳ್ಳುವುದಿಲ್ಲ.

ಎಲ್ಲರಿಗೂ ಗೊತ್ತಿರುವಂತೆ ದೆಹಲಿಯ ಸಿಂಹಾಸನದಮೇಲೆ ಕುಳಿತ ತೈಮೂರ ವಂಶಸ್ಥ ಬಾದಶಹರಿಗೆ ದಖನದಲ್ಲಿದ್ದ ಬಿಜಾಪುರವನ್ನು ಕೈವಶ ಮಾಡಿಕೊಳ್ಳುವ ಅಭಿಲಾಷೆಯಿತ್ತು. ಈ ಅಭಿಲಾಷೆಯಲ್ಲೇ ಕೆಲವರು ತಮ್ಮ ಆಯುಷ್ಯವನ್ನು ಕಳೆದರು. ಆದರೆ ಅವರ ಅಭಿಲಾಷೆ ಈಡೇರಲಿಲ್ಲ. ಇವರುಗಳಲ್ಲಿ ಅತ್ಯಂತ ಶ್ರೇಷ್ಠನಾದ, ಯಾವ ಲೋಪದೋಷಗಳೂ ಇಲ್ಲದ, ತೈಮೂರ ವಂಶಸ್ಥ ಬಾದಶಹರಲ್ಲಿ ಅಷ್ಟೇ ಅಲ್ಲ ಎಲ್ಲ ಬಾದಶಹರುಗಳಲ್ಲಿ ಒಳ್ಳೆಯ ಗುಣಗಳುಳ್ಳ, ಒಳ್ಳೆಯ ನಡತೆಯುಳ್ಳ ಔರಂಗಜೇಬನು ಇದೇ ಆಶೆಯಲ್ಲಿ ತನ್ನ ವಯಸ್ಸಿನ ೭೦ ವರುಷಗಳವರೆಗೆ ಕಾಯ್ದನು. ಶಾಹಜಾದಾ [ರಾಜಪುತ್ರ] ಹುದ್ದೆಯಿಂದ ಶಾಹನಶಾಹ [ಬಾದಶಾಹ] ಆದಮೇಲೂ ತನ್ನ ಆಶೆಯನ್ನು ಪೂರೈಸಿಕೊಳ್ಳಲು ದರಬಾರದ ಪ್ರಖ್ಯಾತ ಸರದಾರರನ್ನು, ರಾಜಪುತ್ರರನ್ನು ಬಹು ದೊಡ್ಡ ಸೈನ್ಯದೊಂದಿಗೆ ದಖನವನ್ನು ಕೈವಶ ಮಾಡಿಕೊಳ್ಳಲು ಅನೇಕ ಸಲ ಪ್ರಯತ್ನಿಸಿದನು. ಇಷ್ಟಾಗಿಯೂ ತಾನೇ ಸ್ವತಃ ಹೋಗಬೇಕೆಂದು ದಿನ ರಾತ್ರಿ ಇಚ್ಛಿಸುತ್ತಿದ್ದನು.

ಕೊನೆಯಲ್ಲಿ ದೈವ ಮತ್ತು ದೇವರ ಕೃಪೆಯಿಂದ ಅಲಂಗೀರ ಬಾದಶಾಹನಿಗೆ ಒಂದು ಸುಂದರ ನೆಪ ಸಿಕ್ಕಿತು. ಅವನು ಬಹಳ ದಿನಗಳಿಂದ ಮನಸ್ಸಿನಲ್ಲಿ ಅದುಮಿಟ್ಟುಕೊಂಡ ಆಶೆಯನ್ನು ಪೂರ್ತಿಗೊಳಿಸಲು ಅವಕಾಶ ದೊರೆಯಿತು. ಅವನ ಮಗ ರಾಜಪುತ್ರ ಮಹಮ್ಮದ ಅಕ್ಬರನು ಬಂಡುಖೋರನಾಗಿ ತಂದೆಯ ವಿರುದ್ಧವೇ ನಿಂತನು. ಆದರೆ ತಂದೆಯ ಶಕ್ತಿ ಸಾಮರ್ಥ್ಯ ಮತ್ತು ಸೈನ್ಯದ ಎದುರಿಗೆ ಅವನಿಗೆ ನಿಲ್ಲುವುದು ಆಗಲಿಲ್ಲ. ಅದಕ್ಕಾಗಿ ಅವನು ದಕ್ಷಿಣಕ್ಕೆ ಓಡಿ ಶಿವಾಜಿಯ ಹತ್ತಿರ ಬಂದನು. ಶಿವಾಜಿಯು ಅವನಿಗೆ ಆಶ್ರಯ ಕೊಟ್ಟನು. ಈ ಸುದ್ದಿ ತಿಳಿಯುತ್ತಿದ್ದಂತೆ ಆಲಂಗೀರ ಬಾದಶಹನ ಕೋಪ ನೆತ್ತಿಗೇರಿತು. ಅವನ ತಲೆಯಲ್ಲಿ ಅನೇಕ ವಿಚಾರಗಳು ಬಂದುವು. ಯಾಕೆಂದರೆ ತನ್ನ ಮಗ ಹಾಗೂ ಶಿವಾಜಿ ಇಬ್ಬರೂ ವಿಶಿಷ್ಟವಾದ ಶಕ್ತಿಯುಳ್ಳವರು. ಹೀಗಾಗಿ ಇಬ್ಬರೂ ಸೇರಿದರೆ ಏನು ಮಾಡುತ್ತಾರೆ ಎಂಬುದನ್ನು ಯಾರೂ ಹೇಳಲು ಸಾಧ್ಯವಿರಲಿಲ್ಲ. ಆಗ ಅವರನ್ನು ಎದುರಿಸುವುದು ಕಷ್ಟ ಎಂಬುದು ಅಲಂಗೀರ ಬಾದಶಹನಿಗೆ ಚಿಂತೆಯಾಯಿತು. ಮತ್ತು ಆದಷ್ಟು ಬೇಗ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಯಸಿದನು. ಅದಕ್ಕಾಗಿ ಅವನ ಇನ್ನೊಬ್ಬ ಮಗ ರಾಜಪುತ್ರ ಮಹಮ್ಮದ ಆಜಮನೊಂದಿಗೆ ಬಿಜಾಪುರ ರಾಜಪುತ್ರಿ ಪಾದಶಾಬೀಬಿಯ ಮದುವೆಯ ದಿನವನ್ನು ನಿಶ್ಚಯಿಸಿದನು. ಹಿಜರಿ ಶಕ ೧೯೩ ರಜ್ಜಬ ೧೨ನೆಯ ದಿನ (ಕ್ರಿ. ಶ. ೧೬೮೧)ರಂದು ಅವರಿಬ್ಬರ ಮದುವೆಯನ್ನು ರಾಜಥಾಟಿನಲ್ಲಿ

ಮಾಡಿ ಮುಗಿಸಿದನು. ಅನಂತರ ಇದೇ ತಿಂಗಳು ೨೫ನೆಯ ದಿನ ಮದುಮಗ ಮಹಮ್ಮದ ಆಜಮನಿಗೆ ಶಿವಾಜಿ ಮತ್ತು ಮಹಮ್ಮದ ಅಕ್ಬರರನ್ನು ಬೇರು ಸಹಿತ ಕಿತ್ತಿ ಒಗೆಯಲು ದೊಡ್ಡ ಸೈನ್ಯವನ್ನು ಕೊಟ್ಟು ಕಳಿಸಿದನು.

ಇದೇ ವರುಷ ರಮಜಾನ್ ೫ನೆಯ ದಿನ ಬಾದಶಾಹ ಔರಂಗಜೇಬನು ತಾನೆ ಸ್ವತಃ ಅತಿ ದೊಡ್ಡ ಸೈನ್ಯ ಹಾಗೂ ಯುದ್ಧದ ಸಕಲ ಸಾಮಗ್ರಿಗಳೊಂದಿಗೆ ಅಜಮೇರದಿಂದ ದಕ್ಷಿಣದತ್ತ ಹೊರಟನು. ಅಲ್ಲಿಂದಲೇ ಪಾದಶಾಬೀಬಿಗೆ ಸಂದೇಶವನ್ನು ಕಳಿಸಿ ತನ್ನ ಮತ್ತು ಪಾದಶಾಬೀಬಿ ಹೆಸರಿನಲ್ಲಿ ಬಿಜಾಪುರ ರಾಜ ಮನೆತನಕ್ಕೆ, ಅಧಿಕಾರಿಗಳಿಗೆ, ರಾಯಭಾರಿಗಳಿಗೆ ತಾನು ಹೋಗಿ ಮುಟ್ಟುವ ಮೊದಲೇ ತಲುಪುವಂತೆ ಪತ್ರಗಳನ್ನು ಬರೆದು ಕಳಿಸಲು ಹೇಳಿದನು. ಅದರಲ್ಲಿ ಈ ರೀತಿ ಬರೆಯಬೇಕೆಂದೂ ಹೇಳಿದ್ದನು.

ಕೆಟ್ಟ ನಡತೆಯವನ ಮಗನಾದ ಸಾಂಬಾ, ನಡೆಸಿದ ದಂಗೆ ಲೂಟಿ ಮತ್ತು ಸುಲಿಗೆಯ ಸಂಗತಿಗಳು ಜೊತೆಗೆ ಸಿಕಂದರನ ರಾಜ್ಯದ ಅಸ್ತವ್ಯಸ್ತವಾದ ವಿಷಯಗಳು ಬಾದಶಾಹ ಆಲಂಗೀರರ ಕಿವಿಗೆ ಬಿದ್ದಿದೆ. ಅದಕ್ಕಾಗಿ ಸಾಂಬಾನನ್ನು ಶಿಕ್ಷಿಸಲು ರಾಜಪುತ್ರನಾದ ಮೊಹಮ್ಮದ ಆಜಮನೊಂದಿಗೆ ದೊಡ್ಡ ಸೈನ್ಯವನ್ನು ಕೊಟ್ಟು ಮುಂಚಿತವಾಗಿಯೇ ಕಳಿಸಿದ್ದೇವೆ. ತಾವು ಬಿಜಾಪುರದ ಎಲ್ಲ ಆದಿಲಶಾಹೀ ರಾಜ್ಯದ ಎಲ್ಲ ಅಧಿಕಾರಿಗಳು ಸರದಾರರು, ಶುಭಚಿಂತಕರು ಒಂದು ಕ್ಷಣವನ್ನೂ ವ್ಯರ್ಥ ಮಾಡದೆ ಎಲ್ಲರೂ ಶಾಹನಶಾಹರ ಸೈನ್ಯವನ್ನು ಸೇರಿಕೊಂಡು ಆ ಕೆಟ್ಟ ನಡತೆಯ ಮಗನಾದ ದುಷ್ಟ ಸಾಂಬಾನನ್ನು ಶಿಕ್ಷಿಸಬೇಕು. ಅವನು ಆಕ್ರಮಿಸಿದ ಪ್ರದೇಶಗಳನ್ನೆಲ್ಲ ತಿರುಗಿ ರಾಜ್ಯದ ವಶಕ್ಕೆ ತೆಗೆದುಕೊಂಡು ಸಿಕಂದರನ ರಾಜ್ಯವನ್ನು ಹೊಸದಾಗಿ ಪುನರ್ನಿರ್ಮಿಸಬೇಕು. ಶಾಹೆನಶಾಹರ ಆದೇಶಗಳನ್ನು ಯಾವತ್ತೂ ಮೀರಬಾರದು, ಎಂದು ಬರೆದು ಕಳಿಸಿದರು.

ಆದರೆ ಸಿಕಂದರನ ರಾಜ್ಯದ ದರಬಾರದ ಜನರು ಅವನ ಆದೇಶಗಳನ್ನು ಪಾಲಿಸಲಿಲ್ಲ. ಆಗ ಆಲಂಗೀರನಿಗೆ ಈ ಉಪದೇಶಗಳಿಂದ ಯಾವ ಉಪಯೋಗವೂ ಆಗುವುದಿಲ್ಲವೆಂದು ಖಾತ್ರಿಯಾಯಿತು. ಬಿಜಾಪುರದ ರಾಯಭಾರಿಗಳು, ಅಧಿಕಾರಿಗಳು, ವಜೀರರು ತಮ್ಮಲ್ಲಿಯ ಬಡಿದಾಟವನ್ನು ಬಿಟ್ಟು ಒಂದಾಗಿ ಬಿಜಾಪುರ ರಾಜ್ಯವನ್ನು ಉಳಿಸುವ ಚಿಂತೆಯನ್ನೇ ಮಾಡುತ್ತಿಲ್ಲ. ದುಷ್ಟನ ಮಗನಿಗೆ ಸಹಾಯ ಮಾಡುವುದರಿಂದ ಯಾವ ಪ್ರಯೋಜನವೂ ಇಲ್ಲ. ದುಷ್ಟನ ಮಗ, ಎಲ್ಲ ಕಡೆಗೆ ಗಲಭೆ ದಂಗೆ ಎಬ್ಬಿಸುವುದನ್ನು ಬಿಟ್ಟು ಒಳ್ಳೇಯ ದಾರಿಗೆ ಬರುವುದೂ ಇಲ್ಲ. ಪ್ರತಿಯಾಗಿ ನನ್ನ ನಾಲಾಯಕ ಮಗನಿಗೆ ಆಶ್ರಯವನ್ನು ಕೊಟ್ಟು ಅವನ ಜೊತೆಗೆ ಮತ್ತಷ್ಟು ಗಲಭೆ ಎಬ್ಬಿಸುತ್ತಿದ್ದಾನೆ. ಈ ಸಮಸ್ಯೆಯು ನಾನು ಅತ್ತ ಕಡೆಗೆ ಹೊಗುವ ವರೆಗೆ ಬಗೆ ಹರಿಯುವುದಿಲ್ಲ. ನಾನು ಸ್ವತಃ ಅತ್ತ ಹೋಗಿ ಆದಿಲಶಾಹೀ, ಕುತುಬಶಾಹೀ ಮತ್ತು ನಿಜಾಮಶಾಹೀ ರಾಜ್ಯಗಳನ್ನು ಬೇರು ಸಹಿತ ಕಿತ್ತಿ ಹಾಕಿ ಬಹಳ ದಿನಗಳಿಂದ ಇಚ್ಛಿಸುತ್ತಿದ್ದ ದಕ್ಷಿಣದ ಬಾದಶಹ ತಾನೇ ಆಗಬೇಕೆಂದನು.

ಇದೇ ವರುಷ ಜಿಲ್ಕಾದಾ ತಿಂಗಳಿನ ೧೨ನೆಯ ದಿನ, ಆಲಮಗೀರನು ತನ್ನ

ಧ್ವಜದೊಂದಿಗೆ ದಕ್ಷಿಣದ ಕಡೆಗೆ ಹೊರಟು ಬುರ್ಹಾಣಪುರಕ್ಕೆ ಬಂದು ತಲುಪಿದನು. ಅಲ್ಲಿ ನಾಲ್ಕು ತಿಂಗಳು ಇದ್ದನು. ನಂತರ ಹಿಜರಿ ಶಕ ೧೧೯೩, ರಬೀ ಉಲ್ ಅವ್ವಲ್ ತಿಂಗಳಲ್ಲಿ, (ಕ್ರಿ. ಶ. ೧೬೮೨)ದಂದು ಬುರ್ಹಾಣಪುರದಿಂದ ಒಂದು ಒಳ್ಳೆಯ ಮುಹೂರ್ತದಂದು ಹೊರಟು ೭ ತಿಂಗಳುಗಳ ನಂತರ ಮತ್ತೆ ಒಂದು ಒಳ್ಳೆಯ ಮುಹೂರ್ತದಂದು ಅಹಮದನಗರವನ್ನು ತಲುಪಿದನು. ಹಿಜರಿ ಶಕ ೧೧೯೪ (ಕ್ರಿ. ಶ. ೧೬೮೩)ದ ಪ್ರಾರಂಭದಲ್ಲಿ ಶಾಹೆನಶಾಹ ಮತ್ತು ಸಂಭಾಜಿ ಮಧ್ಯ ಘನಘೋರ ಕಾಳಗ ನಡೆಯಿತು. ಅದರಲ್ಲಿ ಹಸನ ಅಲಿ ಖಾನನು ಗಾಯಗೊಂಡನು. ಬಹಳಷ್ಟು ಜನರು ಸತ್ತರು. ಅ ದಿನ ಸಂಭಾಜಿಗೆ ಜಯವಾಯಿತು.

ಅದೇ ವರುಷ ಹುಸೇನ ಅಲೀಖಾನ ಮಿಯಾನಾ, ಶಿರಹಟ್ಟಿಯಿಂದ ಹೊರಟು ಕೃಷ್ಣೆಯ ದಡದಲ್ಲಿದ್ದ ಶಾರ್ಜಾಖಾನನ ಸೈನ್ಯದಿಂದ ಹೊರಬಿದ್ದು ಮೊಗಲರ ಸೈನ್ಯವನ್ನು ಸೇರಿದನು. ಅಲ್ಲಿಂದ ಔರಂಗಾಬಾದಕ್ಕೆ ಬಂದು ಆಲಂಗೀರ ಬಾದಶಹನ ನೌಕರಿಯಲ್ಲಿ ಸೇರಿದನು. ಬಾದಶಹನು ಅವನಿಗೆ ಪಂಜಹಜಾರೀ [ಐದುಸಾವಿರ] ಹುದ್ದೆಯನ್ನು ಕೊಟ್ಟು ಫತೇಹಜಂಗ ಎಂಬ ಬಿರದನ್ನು ಕೊಟ್ಟನು. ಅವನು ಶಹಾಬುದ್ದೀನ ಎಂಬ ವೈರಿಯನ್ನು ದೊಡ್ಡ ಕಾಳಗದಲ್ಲಿ ಅತ್ಯಂತ ಕಷ್ಟ ಪಟ್ಟು ಯುದ್ಧ ಮಾಡಿ ತನ್ನ ಸಾಮರ್ಥ್ಯವನ್ನು ತೋರಿಸಿದನು. ಅದಕ್ಕೆ ಖುಶಿಪಟ್ಟ ಅಲಂಗೀರನು ಅವನಿಗೆ ಗಾಜಿಉದ್ದೀನ ಎಂಬ ಬಿರುದನ್ನು ಕೊಟ್ಟು ಪುಣೆಯತ್ತ ಕಳಿಸಿದನು.

ಇದೇ ವರುಷ ರಮಜಾನ ತಿಂಗಳ ೭ನೆಯ ದಿನ ಶಾಹಜಾದಾ [ರಾಜಪುತ್ರ] ಮೊಹಮ್ಮದ ಆಜಮನು ಬಿಜಾಪುರ ಕೋಟೆಗೆ ಮುತ್ತಿಗೆ ಹಾಕಿದನು. ಇದೇ ವರುಷ ಶವ್ವಾಲದ ೩ನೆಯ ದಿನ ಶಾಹಜಾದಾ ಶಾಹ ಆಲಮ್‌ನು ಸಂಭಾಜಿಗೆ ಪಾಠ ಕಲಿಸಲು ಮತ್ತು ಶಿಕ್ಷಿಸಲು ಕೊಂಕಣ ಪ್ರದೇಶದಲ್ಲಿ ಲೂಟಿ ದಂಗೆ ಮಾಡಲು ಹೊರಟನು. ಶಾಹ ಆಲಮನು ದಾರಿಯಲ್ಲಿ ರಾಮಘಾಟದ ಮೂಲಕ ಕೊಂಕಣವನ್ನು ಪ್ರವೇಶಿಸಿ ಅಲ್ಲಿಯ ಕೋಟೆಗಳನ್ನು ವಶ ಪಡಿಸಿಕೊಂಡನು. ಗೋವೆಯ ಬಂದರಕ್ಕೆ ಬಂದು ಅಲ್ಲಿಯ ಸಾಶೀ ಬಂದರವನ್ನು ಮುಟ್ಟಿ ಅಲ್ಲಿಯ ಎಲ್ಲ ಪ್ರದೇಶವನ್ನು ವಶ ಪಡಿಸಿಕೊಂಡನು. ಶಾಹಜಾದಾನ ಸೈನ್ಯ ಕಡಿಮೆಯಾಗಿತ್ತು. ಮುಂದಿನ ದಾರಿ ಮುಚ್ಚಿತ್ತು ಯಾಕೆಂದರೆ ಸಂಭಾಜಿಯು ಈ ಪ್ರದೇಶದಲ್ಲಿ ಕೊಲೆ ಸುಲಿಗೆ ದಂಗೆ ಲೂಟಿ ಮಾಡುತ್ತಿದ್ದನು. ಬಿಜಾಪುರದ ಸೈನ್ಯವೂ ಶಾಹಜಾದಾನ ಸಹಾಯಕ್ಕೆ ಬರಲಿಲ್ಲ. ಜೊತೆಗೆ ತನ್ನಲ್ಲಿದ್ದ ಆಹಾರಸಾಮಗ್ರಿ ಮುಗಿದು ಹೋಗಿತ್ತು ಸೈನ್ಯ ಮತ್ತು ಜನವಾರುಗಳು ಆಹಾರವಿಲ್ಲದೆ ಸಾಯಹತ್ತಿದ್ದರು. ಆದ್ದರಿಂದ ತಿರುಗಿ ಬರಲು ಆದೇಶ ಬಂದಿತು.

ಶಹಜಾದಾ ಆಜಮಶಾಹನಿಗೆ ಬಿಜಾಪುರದ ಸುತ್ತಲಿನ ಪ್ರದೇಶವನ್ನು ಹಾಳು ಕೆಡವಲು ದೊಡ್ಡ ಸೈನ್ಯವನ್ನು ಕಳಿಸಿದನು. ಅವನು ದಂಗೇ ಲೂಟಿ ಸುಲಿಗೆ ಮಾಡುತ್ತ ಧಾರವಾಡ ಕೋಟಗೆ ಮುತ್ತಿಗೆ ಹಾಕಿ ಕೆಲವೇ ದಿನಗಳಲ್ಲಿ ಕೋಟೆಯನ್ನು ಗೆದ್ದು ತಿರುಗಿ ಬಂದನು.

ಹಿಜರಿ ಶಕ ೧೧೯೪, ರಬಿಉಲ್ ಅವ್ವಲ್ ೧೨ನೆಯ ದಿನ, (ಕ್ರಿ. ಶ. ೧೬೮೩)ರಲ್ಲಿ ಸಿಕಂದರ ಆದಿಲಶಾಹನು ಸಿದ್ದೀ ಯಾಕೂತನಿಗೆ ಹವಾಲ್ದಾರಿ ಹುದ್ದೆಯನ್ನು ಕೊಟ್ಟನು. ಇದೇ ತಿಂಗಳು ೨೬ನೆಯ ದಿನ ಸಯ್ಯದ ಮಖದೂಮನಿಗೆ ರಾಜ್ಯದ ಉಸ್ತುವಾರಿಯನ್ನು ವಹಿಸಿದನು. ೨೭ನೆಯ ದಿನ ಸಿಕಂದರ ಬಾದಶಹನು ಕೋಟೆಯ ಬುರುಜಿನಮೇಲೆ ಬಂದು ಪಾಮನಾಯಕನ ಜನರಿಂದ ಸಲಾಮಿ ಮತ್ತು ಮುಜುರೆಯನ್ನು ಪಡೆದನು.

ರಬೀಉಲ್ ಅವ್ವಲ್ ೧೨ನೆಯ ದಿನ ಆಕಾ ಖುಸ್ರುನಿಗೆ ರಾಜ್ಯದ ಪ್ರಧಾನ ಮಂತ್ರಿಯನ್ನಾಗಿ ಮಾಡಿ ಅವನಿಗೆ ವಸ್ತ್ರ, ತಲೆಗೆ ಮುಂಡಾಸು, ನಾಲ್ಕು ಕುದುರೆ, ಒಂದು ಚಾದರ, ಒಂದು ಸರಪಳಿಯನ್ನು ಕಟ್ಟಿದ ಆನೆಯನ್ನು ಕೊಟ್ಟು ಗೌರವಿಸಿದನು. ಮತ್ತು ರಬೀಉಲ್ ಅವ್ವಲ್ ೨೩ನೆಯ ದಿನ ಆಲಂಗೀರ ಬಾದಶಾಹನು ಕಳಿಸಿದ ಫರ್ಮಾನ [ಸಂದೇಶ] ಮತ್ತು ವಸ್ತ್ರಗಳನ್ನು ತೆಗೆದುಕೊಳ್ಳಲು ಖೇಡ ಎಂಬ ಹಳ್ಳಿಯವರೆಗೆ ಬಂದು ತೆಗೆದುಕೊಂಡನು. ಅವನು ಕಳಿಸಿದ ಸಂದೇಶದಲ್ಲಿ ಅನೇಕ ಎಚ್ಚರಿಕೆಗಳಿದ್ದುವು.

೧. ಮೊಗಲ ಸೈನ್ಯಕ್ಕೆ ಶೀಘ್ರವಾಗಿ ಆಹಾರವನ್ನು ಕಳಿಸಬೇಕು.

೨. ನಮ್ಮ ಸೈನ್ಯ ಮತ್ತು ಆಹಾರ ಬರಲು ನಿಮ್ಮ ದಾರಿಯನ್ನು ಮುಕ್ತವಾಗಿ ಇಡಬೇಕು.

೩. ಅಗತ್ಯ ಬಿದ್ದಾಗ ಸೈನ್ಯಕ್ಕೆ ನಿಮ್ಮ ಸೈನ್ಯದ ಬೆಂಬಲ ಮತ್ತು ಸಹಾಯ ನೀಡಬೇಕು.

೪. ರಾಜಪುತ್ರರಿಗೆ ಮತ್ತು ಸರದಾರರಿಗೆ ಸಹಾಯ ಮಾಡಲು ಐದು ಅಥವಾ ಆರು ಸಾವಿರ ಸೈನ್ಯವನ್ನು ಕಳಿಸಬೇಕು.

೫. ಸಂಭಾಜಿಯ ಸ್ನೇಹ ಮತ್ತು ಸಹಾಯದಿಂದ ದೂರವಿರಬೇಕು. ಮತ್ತು ಮನಸ್ಸಿನಿಂದ ಒಳಗೂ ಹೊರಗೂ ಅವನನ್ನು ಬೇರು ಸಹಿತ ಕಿತ್ತು ಹಾಕಲು ಪ್ರಯತ್ನಿಸಬೇಕು.

೬. ಶಾರ್ಜಾಖಾನನಿಗೆ ಇರಲು ಸ್ಥಳ ಕೊಡದೆ ನಿಮ್ಮ ರಾಜ್ಯದಿಂದ ಹೊರಗೆ ಹಾಕಬೇಕು. ಇಲ್ಲಿಗೆ ಆಲಂಗೀರನ ಫರ್ಮಾನಿನಲ್ಲಿಯ ವಿಷಯ ಮುಗಿಯಿತು.

ಜಮಾದಿಲ್ ಅವ್ವಲ್ ೧೪ನೆಯ ದಿನ ಸಿಕಂದರ ಆದಿಲ್‌ಶಹನ ಸವಾರಿಯು ಶಾಹಪುರಿನ ಹೌಜ ವರೆಗೆ ಬಂದಿತು. ಮತ್ತು ಆಲಂಗೀರ ಬಾದಶಹನನ ಸಂದೇಶ ಪತ್ರವನ್ನು ಮತ್ತು ಅವನ ಕಡೆಯಿಂದ ಬಂದ ನಿಶಾನೆಯನ್ನು ಪಡೆದುಕೊಂಡು ತನ್ನ ಸಂತೋಷವನ್ನು ಸೂಚಿಸಿದನು. ಸುಲ್ತಾನ ಸಿಕಂದರನು ಆಲಂಗೀರನಿಗೆ ಪ್ರತಿಯಾಗಿ ಉತ್ತರ ಬರೆದನು. ಅದರ ವಿವರ ಹೀಗಿದೆ:

೧. ಈ ಮೊದಲು ದಿಲೇರಖಾನ ಮೊದಲಾದವರು ನಮ್ಮ ಕಡೆಯಿಂದ ಕಪ್ಪು ಕಾಣಿಕೆ ಮತ್ತು ತೆರಿಗೆಯನ್ನು ವಸೂಲು ಮಾಡುತ್ತಿದ್ದರು. ಈಗ ಅದನ್ನು ಮಾಫ್ ಮಾಡಬೇಕು. ಮತ್ತು ಅದನ್ನು ನಮ್ಮ ಸಹಾಯಕ್ಕಾಗಿ ತಿರುಗಿ ಕೊಡಬೇಕು.

೨. ತಾವು ಆದೇಶಿಸಿದಂತೆ ಶಾರ್ಜಾಖಾನನನ್ನು ಬಿಜಾಪುರ ಮತ್ತು ನಮ್ಮ ರಾಜ್ಯದಿಂದ ಹೊರಗೆ ಹಾಕಿದರೆ ಖಂಡಿತವಾಗಿಯೂ ಅವನು ತನ್ನ ಮನಸ್ಸು ಕೆಡಿಸಿಕೊಂಡು ದುಷ್ಟನ ಮಗ ದುಷ್ಟನ ಜೊತೆಗೆ [ಮರಾಠರು] ಸೇರಿ ಎಲ್ಲ ಕಡೆಗೆ ಗಲಭೆಯನ್ನು ಎಬ್ಬಿಸುವ ಸಾಧ್ಯತೆ ಇದೆ. ಆದ್ದರಿಂದ ನೀವು ಅವನ ತಪ್ಪುಗಳನ್ನು ಮಾಫೀ ಮಾಡುತ್ತೀರೆಂದು ನಾನು ಆಶಿಸುತ್ತೇನೆ ಮತ್ತು ನಾವು ಅವನಿಗೆ ತಿಳಿಸಿಹೇಳಿ ಅವನಿಂದ ಶಪಥ ಮಾಡಿಸಿಕೊಂಡು ಅವನ ಮನಸ್ಸನ್ನು ಗೆದ್ದು ಅವನ ಜೊತೆಗೆ ಒಂದು ದೊಡ್ಡ ಸೈನ್ಯವನ್ನು ಕಳಿಸಿ ಕಾಫಿರನನ್ನು ಬಗ್ಗು ಬಡಿಯಲು ನಮಗೆ ಸಹಾಯವಾಗುತ್ತದೆ ಮತ್ತು ಬಂಡುಖೋರನಿಂದ ನಮ್ಮ ಆಕ್ರಮಿತ ಪ್ರದೇಶಗಳನ್ನು ತಿರುಗಿ ಪಡೆಯಲು ಸಾಧ್ಯವಾಗುತ್ತದೆ. ಆದ್ದರಿಂದ ತಾವು ದಯವಿಟ್ಟು ಶಾರ್ಜಾಖಾನನ ಕುಟುಂಬ ಮತ್ತು ಪರಿವಾರವನ್ನು ನನ್ನ ಹತ್ತಿರ ಕಳಿಸಿಕೊಡಿರಿ. ಅದರಿಂದ ಅವನ ವಿಶ್ವಾಸವನ್ನು ಗೆಲ್ಲಬಹುದು. ಮತ್ತು ಅವನು ನಮ್ಮ ರಾಜ್ಯದ ಬಗ್ಗೆ ಇನ್ನಷ್ಟು ಅಧಿಕ ಗಮನ ಕೊಡುತ್ತಾನೆಂದು ನಾನು ತಿಳಿದಿದ್ದೇನೆ.

೩. ನನ್ನ ರಾಜ್ಯದಲ್ಲಿದ್ದ ಶಾರ್ಜಾಖಾನನ ಜಹಗೀರುಗಳಾದ ಮಂಗಳವೇಢಾ ಮತ್ತು ಸಾಂಗೋಲಾ ಪ್ರದೇಶಗಳನ್ನು ತಮ್ಮ ರಾಜ್ಯಕ್ಕೆ ಸೇರಿಸಿಕೊಂಡು ನವಾಬ ಉಮ್ದತುಲ್ ಮಲಿಕನು ತನ್ನ ವಶದಲ್ಲಿ ಇಟ್ಟುಕೊಂಡಿದ್ದಾನೆ. ಅದನ್ನು ಈ ಮೊದಲಿನ ಒಪ್ಪಂದದ ಪ್ರಕಾರ ತಿರುಗಿ ನನ್ನ ವಶಕ್ಕೆ ಕೊಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

೪. ಇಲ್ಲಿಯವರೆಗೆ ನನ್ನ ರಾಜ್ಯದ ಪ್ರದೇಶಗಳಿಂದ ಪಡೆದ ಹಣವನ್ನು ತಿರುಗಿ ನನಗೆ ಕಳಿಸಿದರೆ ನನ್ನ ಸೈನ್ಯಕ್ಕೆ ಉಪಯೋಗಿಸಿ ಕಾಫಿರನ ವಿರುದ್ಧ ಸೈನ್ಯವನ್ನು ಕಳಿಸಲು ಸಾಧ್ಯವಾಗುತ್ತದೆ.

೫. ನಿಮ್ಮ ಸೈನ್ಯದ ಅಮೀರರು, ವಜೀರರು ಪುಣೆಯ ಮಾರ್ಗವಾಗಿ ಬಂದು ಶತ್ರುವಿನ ಮೇಲೆ ದಾಳಿ ಮಾಡಬೇಕು. ಮತ್ತು ನನ್ನ ಸೈನ್ಯವು ಮಿರಜ, ಗದಗ ಮತ್ತು ಲಕ್ಷ್ಮೇಶ್ವರ ಮಾರ್ಗವಾಗಿ ಬಂದು ಅವನ ಮೆಲೆ ದಾಳಿ ಮಾಡುತ್ತದೆ.

೬. ನನ್ನ ಯೋಗ್ಯತೆಗೆ ತಿಳಿದಂತೆ ನಾನು ಈ ಪತ್ರವನ್ನು ಬರೆದಿರುವೆ. ನಿಮ್ಮಿಂದ ಕೃಪೆಯಾದರೆ ನಾನು ಇದರಲ್ಲಿ ಯಶಸ್ವಿಯಾಗುತ್ತೇನೆಂದು ತಿಳಿದಿರುವೆ.

೭. ಕಾಫಿರನಿಂದ ಆಕ್ರಮಿತ ನನ್ನ ಪ್ರದೇಶವನ್ನು ತಮ್ಮ ಸೈನ್ಯದಿಂದ ದಾಳಿ ಮಾಡಿಸಿ ಗೆದ್ದು ನನಗೆ ಮರಳಿ ಕೊಡಿಸಿರಿ.

೮. ಒಂದುವೇಳೆ ದುಷ್ಟ ಕಾಫಿರನು ತನ್ನದು ತಪ್ಪಾಯಿತೆಂದು ಹೇಳಿ ನಿಮ್ಮ ಹತ್ತಿರ ಒಪ್ಪಂದಕ್ಕೆ ಬಂದರೆ ಮೊದಲು ಅವನು ಆಕ್ರಮಿಸಿದ ನನ್ನ ಪ್ರದೇಶವನ್ನು ಪಡೆದು ನನಗೆ ಕೊಟ್ಟು ಆಮೇಲೆ ನೀವು ಅವನೊಂದಿಗೆ ಒಪ್ಪಂದ ಮಾಡಿಕೊಳ್ಳಿರಿ.

೯. ಕಾಫಿರನೊಂದಿಗೆ ಯುದ್ಧ ಮಾಡಿ ತಿರುಗಿ ಹೋಗುವಾಗ ನಿಮ್ಮ ಸೈನ್ಯದ ವಜೀರರು ಉಮರಾವರು ನನ್ನ ಪ್ರದೇಶದ ಮೇಲೆ ಯಾವ ಹಾನಿಯನ್ನೂ ಮಾಡದೆ ಹೋಗಬೇಕು.

ಇಲ್ಲಿಗೆ ಸಿಕಂದರ ಆದಿಲಶಾಹನ ವಿನಂತಿ ಪತ್ರದ ವಿವರಗಳು ಮುಗಿದುವು.

ಇದೇವರುಷ ಜಮಾದಿಲ್ ಅವ್ವಲ್ ೨೬ನೆಯ ದಿನ ಶಾಹಜಾದಾ [ರಾಜಪುತ್ರ] ಶಾಹ ಆಲಮ ಬಹಾದ್ದೂರನು ಕೊಂಕಣದಿಂದ ಮರಳಿ ಬಂದು ಅಹಮದನಗರಕ್ಕೆ ತಲುಪಿ ತನ್ನ ತಂದೆಯನ್ನು ಭೆಟ್ಟಿಯಾದನು.

ಆಲಂಗೀರ ಬಾದಶಹನು ಸ್ನೇಹದಿಂದ ಮತ್ತು ಪ್ರೀತಿಯಿಂದ ಕಳಿಸಿದ ಸಂದೇಶಗಳಲ್ಲಿಯ ಒಂದನ್ನೂ ಸಿಕಂದರ ಆದಿಲಶಹನು ಪೂರೈಸಲಿಲ್ಲ. ಅವನ ಸೈನ್ಯಕ್ಕೆ ಆಹಾರ ಸಾಮಗ್ರಿಯನ್ನೂ ಕಳಿಸಲಿಲ್ಲ ಜೊತೆಗೆ ಸೈನ್ಯ ಸಹಾಯವನ್ನು ಕಳಿಸಲಿಲ್ಲ. ಇದರಿಂದ ದಿನಂಪ್ರತಿ ಸಿಕಂದರನ ಬಗ್ಗೆ ಆಲಂಗೀರನ ಕೋಪ ಮತ್ತು ವೈರತ್ವಗಳು ಬೆಳೆಯುತ್ತಲೇ ಹೋದುವು. ಸಿಕಂದರನು ಒಳಗಿಂದೊಳಗೆಯೇ ಸಂಭಾಜಿಯೊಂದಿಗೆ ಗೆಳೆತನವನ್ನು ಇಟ್ಟುಕೊಂಡು ಅವನಿಗೆ ಸವಲತ್ತುಗಳನ್ನು ಕೊಟ್ಟು ಸಹಾಯ ಮಾಡುತ್ತಿದ್ದಾನೆಂದು ಆಲಂಗೀರ ಬಾದಶಹನಿಗೆ ಖಾತ್ರಿಯಾಯಿತು. ಮತ್ತು ಆಲಂಗೀರ ಬಾದಶಹನು ಅತ್ಯಂತ ಸಿಟ್ಟಿಗೆದ್ದು ಸಿಕಂದರನ ರಾಜ್ಯದ ಪ್ರದೇಶಗಳಲ್ಲಿ ಅಲ್ಲಲ್ಲಿ ತನ್ನ ಠಾಣೆಗಳನ್ನು ನಿಲ್ಲಿಸಿ ವಸೂಲಿ ಮಾಡ ಹತ್ತಿದನು.

ಸಯ್ಯದ ಮಖದೂಮನ ಸೈನ್ಯದ ಜೊತೆಗೆ ನಡೆದ ಯುದ್ಧದಲ್ಲಿ [ಅವನ ಸರದಾರನಾದ] ಯೂಸುಫಶಾಹನು ಸತ್ತನು ಮತ್ತು ಬಹಳಷ್ಟು ಜನರು ನಿಧನಹೊಂದಿದರು. ಅನೇಕರು ಗಾಯಗೊಂಡರು. ಸಯ್ಯದ ಮಖದೂಮನ ಸೋಲಾಯಿತು. ರಜ್ಜಬದ ೧೫ನೆಯ ದಿನ ಶಾಹಪೂರ, ಶಹಪೇಟೆ ಮತ್ತು ಜೋಹರಾಪುರಗಳು ಚಿಂತು ಜಮ್ಮಣ್ಣಾಜಿಯ ವಶಕ್ಕೆ ಬಂದುವು. ೨೯ನೆಯ ದಿನ ಸಿಕಂದರ ಆದಿಲಶಹನ ಸವಾರಿಯು ಶಾಹಪುರದ ವರೆಗೆ ಬಂದು ಶಹಜಾದಾ ಶಾಹ ಆಲಮನ ಕಡೆಯಿಂದ ಗೌರವವನ್ನು ಸ್ವೀಕರಿಸಿತು.

ಇದೇ ವರುಷ ರಮಜಾನುಲ್ ಮುಬಾರಕ ತಿಂಗಳಿನ ೫ನೆಯ ದಿನ ನವಾಬ ಅಬ್ದುಲ್ ರವೂಫಖಾನನು ಆಜಮಶಾಹನಿಗೆ ಸೈನ್ಯ ಸಹಾಯ ಮಾಡಲು ಶಾಮರಾವನ ಹವೇಲಿಯಿಂದ ಬಂದು ಅಫಜಲಖಾನನ ಹೌಜದ ಹತ್ತಿರ ಇಳಿದುಕೊಂಡನು. ಇದೇ ವರುಷ ರಮಜಾನ ಮುಬಾರಕದ ೨೦ನೆಯ ದಿನ ಸಿಕಂದರ ಆದಿಲಶಾಹನು ಶಾಹಜಾದಾ ಮೊಹಮ್ಮದ ಆಜಮನಿಂದ ನಿಶಾನೆಯನ್ನು ಸ್ವೀಕರಿಸಲು ಶಾಹಪೂರದವರೆಗೆ ಬಂದನು.

ಆಕಾಖುಸ್ರೋನು ಏಳು ತಿಂಗಳ ರಾಜ್ಯ ಭಾರ ಮಾಡಿ, ಹಿಜರಿ ಶಕ ೧೧೯೫, ಜಿಲ್ಕಾದ ತಿಂಗಳ ೧೩ನೆಯ ದಿನ (ಕ್ರಿ. ಶ. ೧೬೮೪)ರಲ್ಲಿ ನಿಧನ ಹೊಂದಿದನು. ಇದೇ ವರುಷ ಜಿಲ್ಕಾದ ತಿಂಗಳ ೨೬ನೆಯ ದಿನ ಆದಿಲಶಾಹನ ಖಾಸಾ ಮಹಲಿನಲ್ಲಿ ಅವನಿಗೆ

ಹೆಣ್ಣು ಮಗು ಹುಟ್ಟಿತು ಮತ್ತು ಜಿಲ್ಹಿಜದ ೧ನೆಯ ದಿನ ಶಾಹಜಾದಾ ಸುಲ್ತಾನ ಮಹಮ್ಮದನು ಹುಟ್ಟಿದನು.

ಇದೇ ದಿನಗಳಲ್ಲಿ ರಾಜ್ಯದ ವ್ಯವಸ್ಥೆ ಸಂಪೂರ್ಣ ಹದಗೆಟ್ಟಿತು. ದರಬಾರದ ಜನರು ದಿನದಿಂದ ದಿನಕ್ಕೆ ನಿರಾಶೆಗೊಂಡರು. ಇದನ್ನು ಕಂಡು ಮೊಗಲರು ಇಲ್ಲಿಯ ಜನರನ್ನು ಸೆಳೆಯಲು ಜಾಲ ಬೀಸಿದರು. ಅದರಲ್ಲಿ ಇತ್ತ ಕಡೆ ಇದ್ದ ಎಲ್ಲ ಪಕ್ಷಿಗಳು ಸಿಗಿಬಿದ್ದುವು. ಅವರಲ್ಲಿ ಪಾಮನಾಯಕನೂ ಒಬ್ಬನಾಗಿದ್ದನು. ಅವನು ಕೂಡ ಆಲಂಗೀರ ಬಾದಶಹನ ಹತ್ತಿರ ಹೋಗಿ ನೌಕರಿ ಮಾಡಹತ್ತಿದನು. ಬಾದಶಹನು ಅವನಿಗೆ ಸನ್ಮಾನ ಮಾಡಿ ಪಂಜಹಜಾರಿ [ಐದುಸಾವಿರ ಕುದುರೆ ಸವಾರರ ಮುಖ್ಯಸ್ಥ] ಹುದ್ದೆಯನ್ನು ಕೊಟ್ಟನು.

ಇದೇ ದಿನಗಳಲ್ಲಿ ಆಜಮಶಾಹನು ಅತಿ ದೊಡ್ಡ ಸೈನ್ಯದೊಂದಿಗೆ ಠಾಣೆಯನ್ನು ಹಾಕಲು ತೊರಗಲ್ಲ ಹತ್ತಿರ ಬಂದು ಮುಟ್ಟಿದನು. ಆಗ ಶಾರ್ಜಾಖಾನ ಮತ್ತು ಅಬ್ದುಲ್ ರವೂಫಖಾನ ಒಂದು ದೊಡ್ಡ ಸೈನ್ಯವನ್ನು ತೆಗೆದುಕೊಂಡು ತೊರಗಲ್ಲದವರಿಗೆ ಸಹಾಯ ಬಂದು ಆಜಮಶಾಹನ ಸೈನ್ಯದ ಜೊತೆಗೆ ಯುದ್ದವನ್ನು ಪ್ರಾರಂಭಿಸಿದರು. ಇವರಿಬ್ಬರ ಹರಕತ್ತನ್ನು ಕೇಳಿದ ಆಲಂಗೀರ ಬಾದಶಹನು ಬಹಳ ಸಿಟ್ಟಿಗೆ ಬಂದು ಬಿಜಾಪುರ ಸುತ್ತ ಮುತ್ತ ಸುರಂಗ ಮಾರ್ಗವನ್ನು ಕೊರೆದು ನಗರಕ್ಕೆ ಮುತ್ತಿಗೆ ಹಾಕಲು ಆದೇಶಿಸಿದನು ಮತ್ತು ಅಬುಲ್ ಹಸನ್ ಕುತುಬಶಾಹನಿಗೆ ಧಮಕಿಯ ಪತ್ರ ಬರೆದು ಅದರಲ್ಲಿ ಯಾವುದೇ ಸಂದರ್ಭದಲ್ಲೂ ನೀನು ಸಿಕಂದರ ಆದಿಲಶಹನಿಗೆ ಸಹಾಯ ಮಾಡಬಾರದು ಎಂದು ತಾಕೀದು ಕೊಟ್ಟನು. ಅಂದಿನಿಂದ ಸಿಕಂದರ ಆದಿಲಶಹ ಮತ್ತು ಆಲಂಗೀರ ಬಾದಶಹನ ನಡುವಿನ ಪತ್ರವ್ಯವಹಾರವು ಸಂಪೂರ್ಣವಾಗಿ ನಿಂತುಬಿಟ್ಟಿತು ಮತ್ತು ಎಲ್ಲಕಡೆಗೆ ದಂಗೆ ಲೂಟಿ ಕೊಲೆ ಸುಲಿಗೆಗಳು ನಡೆದುವು.

ಇದೇ ವರುಷ ರಬೀ ಉಲ್ ಅವ್ವಲ್ ೨೫ನೆಯ ದಿನ ಸಂಭಾಜಿಯ ದಿವಾನನಾದ ಮೇಲಗಿರಿ ಪಂಡಿತನು ರಾಹೇರದಿಂದ ಬಂದು ಜೋಗಿಮಠದ ಹತ್ತಿರ ಇಳಿದುಕೊಂಡನು. ರಬೀಉಸ್ ಸಾನೀ ತಿಂಗಳ ಮೊದಲನೆಯ ದಿನ ಸಿಕಂದರ ಆದಿಲಶಹನು ಜೋಹರಾಪುರ ಬುರುಜದ ಮೇಲೆ ಬಂದನು ಮತ್ತು ಸಂಭಾಜಿಯ ಸರದಾರರಿಂದ ಸಲಾಮುಗಳನ್ನು, ಮುಜುರೆಗಳನ್ನು ಸ್ವೀಕರಿಸಿದನು. ಮೇಲಗಿರಿರಾಯನಿಗೆ ಮೋತಮದ್ ರಾವ ಎಂಬ ಬಿರುದನ್ನು ಕೊಟ್ಟು ಸನ್ಮಾನಿಸಿದನು. ಜಮಾದಿಲ್ ಅವ್ವಲ್ ಮೂರನೆಯ ದಿನ, ಶನಿವಾರ ಖಾಜಾ ಅಬ್ದುರ್ ರಹೀಮ ಮೊಗಲ ಸರದಾರನು ಯುದ್ಧವನ್ನು ಪ್ರಾರಂಭಿಸಿದನು. ಅವನ ಸಹಾಯಕ್ಕೆ ಮೊಗಲರ ಸೈನ್ಯ ಬಂದು ಮುಟ್ಟಿತು. ಇದೇ ತಿಂಗಳು ೪ನೆಯ ದಿನ ನವಾಬ ಬಹಾದ್ದೂರಖಾನನು ಬಿಜಾಪುರಕ್ಕೆ ಮುತ್ತಿಗೆ ಹಾಕುವ ಇರಾದೆಯಿಂದ ದೌಲತಪುರಕ್ಕೆ ಬಂದನು. ೭ನೆಯ ದಿನ ಬಕ್ಷಿ ರೂಹುಲ್ಲಾಖಾನನು ಶಾಹಪುರ ಹತ್ತಿರ ಬಂದು ಕೋಟೆಗೆ ಮುತ್ತಿಗೆ ಹಾಕಿ ಯುದ್ಧ ಪ್ರಾರಂಭಿಸಿದನು. ಜಮಾದಿ ಸಾನೀ ೨೧ನೆಯ ದಿನ ಶುಕ್ರವಾರ ಖಾನಜಹಾನ ಬಹಾದ್ದೂರನು ಅಂಗ್ರೇಜರ ಕೆರೆಯ ಮೇಲೆ ಬಂದು ಇಳಿದುಕೊಂಡನು.

ಜಮಾದಿಸ್ಸಾನೀ ತಿಂಗಳಲ್ಲಿಯೇ ಆಲಂಗೀರ ಬಾದಶಹನು ಅಹಮದನಗರದಿಂದ ಹೊರಟು ರಜಬ್ ತಿಂಗಳ ಮೊದಲನೆಯ ದಿನ ಸೋಲಾಪುರಕ್ಕೆ ಬಂದು ಇರಹತ್ತಿದನು. ಅಲಂಗೀರ ಬಾದಶಹನು ಸೋಲಾಪುರಕ್ಕೆ ಬಂದದ್ದನ್ನು ಕೇಳಿ ಬಿಜಾಪುರ ಕೋಟೆಗೆ ಮುತ್ತಿಗೆ ಹಾಕಿದ ಖಾನ ಜಹಾನ ಬಹಾದ್ದೂರನು ರಜ್ಜಬ ೬ನೆಯ ದಿನ ಇಲ್ಲಿಂದ ಹೊರಟು ಅವನ ಸೇವೆಗೆಂದು ಸೋಲಾಪುರಕ್ಕೆ ಬಂದು ಮುಟ್ಟಿದನು. ರಜ್ಜಬದ ೧೮ನೆಯ ದಿನ ಬಿಜಾಪುರ ಜನರ ಸಹಾಯಕ್ಕೆ ಕಂದನೂಲದಿಂದ [ಕರ್ನೂಲಿನಿಂದ] ಸೈನ್ಯ ಬಂದಿತು. ರಜ್ಜಬದ ೨೨ನೆಯ ದಿನ ಮಹಮ್ಮದ ಆಜಮ ಶಾಹನು ಬಿಜಾಪುರಕ್ಕೆ ಮುತ್ತಿಗೆ ಹಾಕುವ ಇರಾದೆಯಿಂದ ತನ್ನ ಜೊತೆಗೆ ಒಂದು ದೊಡ್ಡ ಸೈನ್ಯವನ್ನು ತೆಗೆದುಕೊಂಡು ಬಂದು ಬೇಗಮ್ ತಾಲಾಬದ ಹತ್ತಿರ ಇಳಿದುಕೊಂಡನು. ಶಾಬಾನ ತಿಂಗಳ ೭ನೆಯ ದಿನ ಯುದ್ಧ ಹಾಗೂ ಕೋಟೆಯನ್ನು ಒಡೆಯುವ ಬಹಳಷ್ಟು ಸಾಮಗ್ರಿಗಳನ್ನು ತೆಗೆದುಕೊಂಡು ಬಂದರು. ಮತ್ತು ಸೈನಿಕರು ಕೋಟೆಯ ಸುತ್ತ ಮುತ್ತ ತೋಪುಗಳನ್ನು ನಿಲ್ಲಿಸಿ, ಅಲ್ಲಲ್ಲಿ ಸುರಂಗ ಮಾರ್ಗವನ್ನು ತೋಡಲು ಪ್ರಾರಂಭಿಸಿದರು.

ಶಾಬಾನ ೯ನೆಯ ದಿನ ಅಬ್ದುಲ್ ರವೂಫಖಾನ ಮತ್ತು ಶಾರ್ಜಾಖಾನರು ಕೋಟೆಯಿಂದ ಹೊರಗೆ ಬಂದು ವೈರಿಗಳನ್ನು ಹೊರಗೆ ಹಾಕಲು ಎಲ್ಲ ರೀತಿಯ ಸಿದ್ಧತೆಗಳನ್ನು ಮಾಡಿದರು. ರಮಜಾನ ತಿಂಗಳ ೪ನೆಯ ದಿನ ಮನಗೂಳಿಯ [ಬಾಗಿಲು] ಹತ್ತಿರ ಆದಿಲ್‌ಶಾಹೀ ಸರದಾರರು ಮತ್ತು ಆಲಂಗೀರ ಸೈನ್ಯದ ಮಧ್ಯ ಘನಘೋರ ಕಾಳಗ ನಡೆಯಿತು. ರಮಜಾನ ತಿಂಗಳ ೨೪ನೆಯ ದಿನ ಅಂಬಾಜಿ ಪಂಡಿತ ಹೈದರಾಬಾದಿಯು ಬಂದು ಬಾದಶಹನನ್ನು ಭೆಟ್ಟಿಯಾದನು. ಹಿಜರಿ ಶಕ ೧೦೯೭, ಮೊಹರ್ರಮ ತಿಂಗಳ ೩ನೆಯ ದಿನ, (ಕ್ರಿ. ಶ. ೧೬೮೬)ರಲ್ಲಿ ಜುಮ್ಮರ ರಾವನು ಸಂಭಾಜಿಯ ಸೈನ್ಯವನ್ನು ಕೂಡಿಕೊಂಡನು. ಸಫರ ತಿಂಗಳ ೩ನೆಯ ದಿನ ಸಂಭಾಜಿಯ ಸೈನ್ಯವು ಮೊಗಲರ ತಾಲೂಕುಗಳಲ್ಲಿ ಲೂಟಿ ಮಾಡಲು ಹೊರಟವು. ಶಾಬಾನ ತಿಂಗಳದ ೧೧ನೆಯ ದಿನ ಪಾಮನಾಯಕನ ಅಲಂಗ ಅಠಾದಿ ಮತ್ತು ಕಾಜಿ ಸಯೀದರು ಕೊಲೆಯಾದರು.

ಇದೆಲ್ಲದರ ಪರಿಣಾಮ ಒಟ್ಟಾರೆಯಾಗಿ ಬಿಜಾಪುರದ ಮೇಲಾಯಿತು. ಬಿಜಾಪುರದ ಮೇಲೆ ಮುತ್ತಿಗೆ ಹಾಕಲಿಕ್ಕೆ ಒಂದು ಕಡೆಯಿಂದ ಖಾನ ಜಹಾನ್ ಬಹಾದ್ದೂರ ಮೊದಲಾದ ಅಮೀರರು, ಇನ್ನೊಂದು ಕಡೆಯಿಂದ ರೂಹುಲ್ಲಾಖಾನ ಮತ್ತು ಕಾಸಿಮಖಾನ ಮೊದಲಾದವರು ಮುತ್ತಿಗೆ ಹಾಕಿದರು. ಇದಾದನಂತರ ಆಜಮಶಾಹನು ಮತ್ತಷ್ಟು ಸೈನ್ಯವನ್ನು ತೆಗೆದುಕೊಂಡು ಬಂದು ಮುತ್ತಿಗೆ ಹಾಕಿದನು. ಕೋಟೆಯನ್ನು ಗೆಲ್ಲಲು ಎಲ್ಲ ವ್ಯವಸ್ಥೆಯನ್ನು ಮಾಡಿಕೊಂಡನು. ಸುರಂಗಗಳನ್ನು ಕೊರೆದು ತೋಪುಗಳನ್ನು ನಿಲ್ಲಿಸಿ ಅಧಿಕ ಒತ್ತಡವನ್ನು ಹಾಕಿದನು. ಈ ಮೊದಲೇ ಹಾಕಿದ ಮುತ್ತಿಗೆಯ ಸೈನ್ಯದಲ್ಲಿ ಆಹಾರದ ಕೊರತೆಯಾಯಿತು. ಅದರಿಂದ ಸೈನ್ಯದಲ್ಲಿ ದೊಡ್ಡ ಪರಿಣಾಮವಾಗಿ ಸೈನಿಕರು ಉಪವಾಸದಿಂದ ಇರಬೇಕಾಯಿತು. ಆಹಾರ ಸಾಮಗ್ರಿ ಬರುವ ದಾರಿಯನ್ನು ಸಂಭಾಜಿಯ ಸೈನ್ಯವು ಮುಚ್ಚಿತಲ್ಲದೆ ಅವರ ಆಹಾರ ಸಾಮಗ್ರಿಯನ್ನು ದೋಚಿ ತೆಗೆದುಕೊಂಡಿತು

ಮತ್ತು ಮೊಗಲರ ಪ್ರದೇಶದಲ್ಲಿ ಲೂಟಿ ದಂಗೆಯನ್ನು ಮಾಡ ಹತ್ತಿತು. ಇದೇ ಸಂದರ್ಭದಲ್ಲಿ ಸುತ್ತಲಿನ ಎಲ್ಲ ನದಿಗಳಲ್ಲಿ ಮಹಾಪೂರ ಬಂದಿತು. ಅದರಿಂದಾಗಿ ಜನರು ಜಾನುವಾರುಗಳು ಬರಹೋಗುವ ದಾರಿ ಮುಚ್ಚಿತು. ಊಟ ಸಿಗದೆ ಜನರು ಆಕಳು, ಎತ್ತು ಮತ್ತು ಒಂಟೆಗಳನ್ನು ಕೊಂದು ಅವುಗಳ ಮಾಂಸ ತಿಂದು ಬದುಕ ಹತ್ತಿದರು.

ಈ ಕಷ್ಟದ ಪರಿಸ್ಥಿತಿಯನ್ನು ಕೇಳಿದ ಆಲಂಗೀರ ಬಾದಶಹನು ಆಜಮಶಹನಿಗೆ ತಿರುಗಿ ತನ್ನ ಹತ್ತಿರ ಬರಲು ಹೇಳಿದನು. ಶಹಾಬುದ್ದೀನಖಾನ ಫೈರೋಜಜಂಗ ನೊಂದಿಗೆ ಒಂದು ದೊಡ್ಡ ಸೈನ್ಯವನ್ನು ಕೊಟ್ಟು, ಅವರೊಂದಿಗೆ ಯುದ್ಧಸಾಮಗ್ರಿ, ಆಹಾರ ಸಾಮಗ್ರಿ ಮತ್ತು ಕೋಟೆಯನ್ನು ಒಡೆಯಲು ಬೇಕಾಗುವ ಸಾಮಗ್ರಿಗಳನ್ನಲ್ಲದೆ ತೋಪುಗಳನ್ನು ಕೊಟ್ಟು ತನ್ನಲ್ಲಿಂದ ಕಳಿಸಿದನು. ಜೊತೆಗೆ ಈ ಮೊದಲೇ ಇದ್ದ ಸೈನ್ಯಕ್ಕೆ ಸಹಾಯ ಮಾಡಲು ಆಹಾರ ಸಾಮಗ್ರಿ ಮತ್ತು ಮತ್ತಷ್ಟು ಸೈನ್ಯವನ್ನು ಕಳಿಸಿದನು. ಶಹಾಬುದ್ದೀನನು ಇಲ್ಲಿ ಬಂದುದಕ್ಕೆ ಅಲ್ಲಿದ್ದ ಮೊಗಲರ ಸೈನ್ಯಕ್ಕೆ ಉತ್ತೇಜನ ದೊರೆಯಿತು.

ಬಿಜಾಪುರದಲ್ಲಿ ಉಳಿದಿದ್ದ ಕಡಿಮೆ ಸೈನ್ಯದಲ್ಲಿ ಯುದ್ಧ ಸಾಮಗ್ರಿಗಳಿರಲಿಲ್ಲ. ಅಲ್ಲಿಯ ದಖಣಿ ಸೈನ್ಯವು ಹೊರಗಿನಿಂದ ಬಂದ ವೈರಿಗಳ ಅತಿ ದೊಡ್ಡ ಸೈನ್ಯದ ವಿರುದ್ಧ ಅತ್ಯಂತ ಧೈರ್ಯದಿಂದ ಯುದ್ಧ ಮಾಡಿ ವೈರಿಗಳನ್ನು ಮುಂದೆ ಬರದಂತೆ ತಡೆಯುವಲ್ಲಿ ಯಶಸ್ವಿಯಾಗುತ್ತಿತ್ತು. ಅದರಿಂದಾಗಿ ಆಲಂಗೀರನ ಗೆಲುವು ತಡವಾದದ್ದಕ್ಕೆ ಆತನಿಗೆ ಬೇಸರವಾಯಿತು. ಹಿಜರಿ ಶಕ ೧೦೯೭, (ಕ್ರಿ. ಶ. ೧೬೮೬), ಆಲಂಗೀರ ಬಾದಶಹನು ಪಟ್ಟಕ್ಕೆ ಬಂದು ೩೦ ವರುಷವಾಗಿತ್ತು. ಯುದ್ಧ ಗೆಲ್ಲುವ ಉದ್ದೇಶದಿಂದ ತನ್ನ ಧ್ವಜವನ್ನು ಹಾರಿಸುತ್ತ ಶಾಬಾನ ೨೧ನೆಯ ದಿನ ಸೋಲಾಪುರದಿಂದ ಎದ್ದು ರಸೂಲಪುರದ ಹತ್ತಿರ ಬಂದು ತನ್ನ ಡೇರೆಯನ್ನು ಹಾಕಿ ಇಳಿದುಕೊಂಡನು.

ಆ ಸಮಯದಲ್ಲಿ ಸಿಕಂದರ ಆದಿಲಶಹನು ಮಸೂದಖಾನನ ಹತ್ತಿರ, ತನ್ನ ಒಬ್ಬ ಖಾಸಾ ವ್ಯಕ್ತಿಯನ್ನು ಒಂದು ಸಂದೇಶದೊಂದಿಗೆ ಬಿಜಾಪುರದ ಹದಗೆಟ್ಟ ಪರಿಸ್ಥಿತಿಯನ್ನು ತಿಳಿಸುತ್ತ ಆತನಿಗೆ ಬೇಗ ಬರಲು ಹೇಳಿ ಕಳಿಸಿದನು. ಮಸೂದಖಾನನು ಈ ರಾಜ್ಯದ ಹಳೆಯ ಸೇವಕನಾಗಿದ್ದನು. ರಾಜ್ಯದ ಉಪ್ಪು ತಿಂದವನೂ, ಶುಭಚಿಂತಕನೂ ಅನುಭವಿಯೂ ಆಗಿದ್ದನು. ಸುಳಿಯಲ್ಲಿ ಸಿಕ್ಕ ರಾಜ್ಯದ ಮುಳುಗುವ ಹಡಗನ್ನು ಎತ್ತಿ ದಂಡೆಗೆ ಹಚ್ಚಲು ಈ ರೀತಿ ಪತ್ರವನ್ನು ಬರೆದನು:

ಈ ಮೊದಲು ನೀವು ಈ ರಾಜ್ಯದ ಮೇಲಿನ ಪ್ರೀತಿ ವಿಶ್ವಾಸಗಳಿಂದ ಬರೆದ ಪತ್ರವು ಬಂದು ನನಗೆ ಮುಟ್ಟಿದೆ. ಆ ಪತ್ರವನ್ನು ಓದಿದೆ. ಅದರಲ್ಲಿ ತಮ್ಮ ಪ್ರೀತಿ ವಿಶ್ವಾಸಗಳು ನನ್ನ ಗಮನಕ್ಕೆ ಬಂದುವು. ಈಗ ನಾನು ಬರೆಯುವುದೇನೆಂದರೆ, ಕಳೆದ ಒಂದು ತಿಂಗಳಿಗಿಂತ ಅಧಿಕ ದಿನಗಳಿಂದ ಔರಂಗಜೇಬನು ಸೋಲಾಪುರದಲ್ಲಿ ಕುಳಿತು ನನ್ನನ್ನು ಬಂಧಿಸಲು ಅನೇಕ ರೀತಿಯ ಯತ್ನಗಳನ್ನು ಮಾಡಿದನು. ಆದರೆ ಅಲ್ಲಾಹನ ಕೃಪೆಯಿಂದ ಇಂದಿನ ವರೆಗೂ ನಾನು ಅವನ ಕೈಗೆ ಸಿಕ್ಕಿಲ್ಲ ಮತ್ತು ಸುರಕ್ಷಿತವಾಗಿ ಇದ್ದೇನೆ. ಈಗ ಒಂದಿಷ್ಟು

ಅವಕಾಶ ದೊರೆತಿದೆ. ನೀವು ಬರುವ ದಾರಿಯನ್ನು ನಾನು ಕಾಯುತ್ತಿದ್ದೇನೆ. ಧರ್ಮಾಜಿ ಮತ್ತು ಇತರ ಸರದಾರರೂ ನಿಮ್ಮ ದಾರಿಯನ್ನು ಕಾಯುತ್ತಿದ್ದಾರೆ. ರಾಜ್ಯದ ಈ ಸಂಕಟ ಪರಿಸ್ಥಿತಿಯಲ್ಲಿ ನೀವು ಬಂದು ಇದಕ್ಕೆ ಹಿಡಿದ ಭೂತವನ್ನು ಬಿಡಿಸುತ್ತೀರೆಂದು ನಾನು ನಂಬಿದ್ದೇನೆ. ನೀವು ಒಂದು ವೇಳೆ ಬರದಿದ್ದರೆ ಈ ರಾಜ್ಯವು ಮೊಗಲರ ಕೈಗೆ ಹೊಗುತ್ತದೆ ಎಂಬುದು ಖಂಡಿತ, ಖಂಡಿತ ಖಂಡಿತ. ಕಳೆದ ನಾಲ್ಕುದಿನಗಳಲ್ಲಿ ಹೊರಗಿನ ಶತೃವು ಯಶಸ್ಸನ್ನು ಗಳಿಸುತ್ತ ನಮ್ಮ ಮೇಲೆಯೇ ಬಂದಿದ್ದಾನೆ. ನ್ಯಾಮತ್ ಬುರುಜನ್ನು ತೋಪಿನಿಂದ ಹೊಡೆದು ನೆಲಸಮ ಮಾಡಿದ್ದಾರೆ. ಯಾವ ವೇಳೆಯಲ್ಲಿ ಏನಾಗುತ್ತದೆ ಎಂಬುದು ನನಗೆ ಗೊತ್ತಿಲ್ಲ. ಈ ಸಮಯದಲ್ಲಿ ನೀವು ನಮಗೆ ಸರಿಯಾದ ದಾರಿಯನ್ನು ತೋರಿಸದಿದ್ದರೆ, ನಮ್ಮ ಸಹಾಯಕ್ಕೆ ಬರದಿದ್ದರೆ ನಮ್ಮ ದೈವವೇ ಕೆಟ್ಟಿದೆ ಎಂದು ತಿಳಿದುಕೊಳ್ಳುವೆ. ಆನಂತರ ಏನಾಗಬಹುದು ಎಂಬುದನ್ನು ನೀವೇ ಕಲ್ಪಿಸಿಕೊಳ್ಳಿರಿ. ನಾನು ಈ ಪತ್ರವನ್ನು ರಮಜಾನ ತಿಂಗಳ ೨೪ನೆಯ ದಿನ ಹಿಜರಿ ಶಕ, ೧೦೯೭ರಂದು ಬರೆಯುತ್ತಿರುವೆ. ಆದರೆ ಪರಮಾತ್ಮನ ಇಚ್ಛೆ ಇದುವೇ ಆಗಿದ್ದಿತೇನೋ, ಮಸೂದಖಾನನು ಬಿಜಾಪುರಕ್ಕೆ ಬರಲಿಲ್ಲ. ಮತ್ತು ಬರುವ ವಿಚಾರವನ್ನೂ ಅವನು ಮಾಡಲಿಲ್ಲ.

ಬಿಜಾಪುರ ಕೋಟೆಯನ್ನು ಗೆಲ್ಲಲು ಆಲಂಗೀರ ಬಾದಶಹನು ಎಲ್ಲ ರೀತಿಯ ಯತ್ನಗಳನ್ನು ಮಾಡಿದನು ವ್ಯವಸ್ಥೆಯನ್ನೂ ಮಾಡಿದನು. ರಸೂಲಪುರದಲ್ಲಿದ್ದ ಔರಂಗಜೇಬ ಶಾಹನ್‌ಶಾಹನು ತೋಪಖಾನೆಯ ಮುಖ್ಯಸ್ಥ ಗಾಜೀಯುದ್ದೀನಖಾನ ಮೊದಲಾದ ಸರದಾರರಿಗೆ ಹೀಗೆ ಬರೆದನು. 'ಎಲ್ಲ ತರಹದ ಪ್ರಯತ್ನಗಳ ಪಟ್ಕಾವನ್ನು [ತಲೆಪಟ್ಟಿಯನ್ನು] ನಿಮ್ಮ ಜೀವದ ಸೊಂಟ ಪಟ್ಟಿಯ ಮೇಲೆ ಕಟ್ಟಿ ಯಾವುದೇ ತರಹದ ಅಂಜಿಕೆಯನ್ನು ತೆಗೆದು ಹಾಕಿ ಯುದ್ಧ ಸಾಮಗ್ರಿಗಳೊಂದಿಗೆ ಮುಂದೆ ಸಾಗಿರಿ. ಮತ್ತು ಕೋಟೆಯ ಗೋಡೆಗಳಲ್ಲಿ ಸುರಂಗ ಕೊರೆಯುವ ಪ್ರಯತ್ನದಲ್ಲಿರಿ ಮತ್ತು ದರಬಾರದಲ್ಲಿಯ ರಾಜಪುತ್ರರು, ಅಮೀರರು, ಮೇಲಧಿಕಾರಿಗಳು ಮತ್ತು ದರಬಾರದ ಸೇವಕರಿಗೆ ದೊಡ್ಡ ಮೊತ್ತದ ಕಾಣಿಕೆಯನ್ನು ಕೊಟ್ಟು ನಮ್ಮತ್ತ ಸೆಳೆಯಿರಿ. ಇದರಿಂದ ಕೋಟೆಯನ್ನು ಗೆಲ್ಲಲು ಸುಲಭವಾಗುತ್ತದೆ' ಎಂದು ಆದೇಶಿಸಿದನು.

ಕೋಟೆಯ ಒಳಗಿದ್ದ ದಖನಿಗಳು ಕೋಟೆಯ ಮೇಲಿನಿಂದ ತೋಪುಗಳನ್ನು ಹಾರಿಸುತ್ತ, ಬಾಣಗಳ ಸುರಮಳೆಯನ್ನು ಮಾಡುತ್ತ, ಹೊರಗಿನ ವೈರಿಗಳನ್ನು ಮುಂದೆ ಬರಲು ಬಿಡದೆ ಹಿಂದೆ ಸರಿಸಹತ್ತಿದರು.

ಬುದ್ಧಿವಂತರು ಮತ್ತು ದೂರದೃಷ್ಟಿಯುಳ್ಳವರಿಗೆ ಗೊತ್ತಿರುವಂತೆ, ಅಲ್ಲಾಹನ ಮನಸ್ಸಿನಲ್ಲಿ ಆದಿಲಶಾಹಿ ವಂಶವನ್ನು ಇಲ್ಲಿಗೆ ನಿಲ್ಲಿಸಬೇಕೆಂದು ಇದ್ದರೆ ಯಾರು ಎಷ್ಟೇ ಶ್ರಮ ಪಟ್ಟರೂ ಅದನ್ನು ನಿಲ್ಲಿಸಲು ಸಾಧ್ಯವಿಲ್ಲ. ಪವಿತ್ರ ಕುರಾನದಲ್ಲೂ ಇದನ್ನೇ ಹೇಳಲಾಗಿದೆ. 'ಹೇ ಪ್ರಭು! ನೀನು ಮನಸ್ಸು ಮಾಡಿದರೆ ಯಾರನ್ನಾದರೂ ಸಿಂಹಾಸನದ ಮೇಲೆ ಕುಳ್ಳಿರಿಸುವಿ ಇಲ್ಲವೆ ಉರುಳಿಸುವಿ'

ಸಿಕಂದರ ಆದಿಲಶಹನು ತನ್ನ ದರಬಾರದ ಉಲೇಮಾಗಳನ್ನು ಆಲಂಗೀರ ಬಾದಶಹನ ಹತ್ತಿರ ಕಳಿಸಿ ಮುಸ್ಲಿಂ ದೇಶದ ಮೇಲೆ ಯಾವ ಆಧಾರದಿಂದ ಹಲ್ಲೆ ಮಾಡುತ್ತಿರುವಿ ಎಂದು ಕೇಳಿದ್ದು ಮತ್ತು ಅಲಂಗೀರ ಬಾದಶಹನು ಅದಕ್ಕೆ ಉತ್ತರ ಕೊಟ್ಟದ್ದು.

ಆಲಂಗೀರ ಬಾದಶಹನು ಬಿಜಾಪುರವನ್ನು ಕೈವಶಮಾಡಿಕೊಳ್ಳಲು ಬಹಳಷ್ಟು ಪ್ರಯತ್ನ ಪಟ್ಟು ದೊಡ್ಡ ಸೈನ್ಯದಿಂದ ಮುತ್ತಿಗೆಯನ್ನು ಬಿಗಿಗೊಳಿಸಿದನು. ಇದರಿಂದ ಕೋಟೆಯ ಒಳಗಿದ್ದ ಜನರ ಪ್ರಾಣಕ್ಕೆ ಕುತ್ತು ಬಂದಿತು. ಬದುಕಿ ಉಳಿಯುವ ಆಶೆ ಇರಲಿಲ್ಲ. ಆಗ ಸಿಕಂದರ ಆದಿಲಶಹನು ರಾಜ್ಯದ ಸರದಾರರನ್ನು, ಬುದ್ಧಿಜೀವಿಗಳನ್ನು ಕರೆಯಿಸಿ ಈ ವಿಷಯದ ಬಗ್ಗೆ ಚರ್ಚೆ ಮಾಡುತ್ತ ಇನ್ನು ಉಳಿಯುವ ಬಗೆ ಹೇಗೆ ಎಂದನು. ಆಗ ಬಂದ ಬುದ್ಧಿಜೀವಿಗಳು, ಸರದಾರರು ಬಹಳ ವಿಚಾರ ಮಾಡಿ ಹೀಗೆ ಹೇಳಿದರು. ಆಲಂಗೀರ ಬಾದಶಹನು ಸ್ವತಃ ಧರ್ಮಪಂಡಿತನಿದ್ದಾನೆ. ಧರ್ಮದ ಪಾಲನೆಯನ್ನು ಮಾಡುತ್ತಾನೆ ಹಾಗೂ ಪವಿತ್ರ ಕುರಾನದ ವಿರುದ್ಧ ಮತ್ತು ಪವಿತ್ರ ಮಹಮ್ಮದರ ಉಪದೇಶಗಳನ್ನು ಮೀರಿ ಅಲ್ಲದೇ ದರಬಾರದ ಮುಥ್ಟಿಗಳ ಮಾತನ್ನು ಮೀರಿ ಯಾವುದೇ ಕೆಲಸಗಳನ್ನು ಮಾಡುವುದಿಲ್ಲ. ನಾವು ಅವನೊಂದಿಗೆ ಯುದ್ಧ ಮಾಡುವ ಪರಿಸ್ಥಿತಿಯಲ್ಲಿ ಇಲ್ಲ ಆದರೆ ಅವನೊಂದಿಗೆ ಮಾತನಾಡುವ ನಮ್ಮ ದಾರಿ ಇನ್ನೂ ತೆರೆದಿದೆ.

ಬಾದಶಹನಿಗೆ ನಮ್ಮ ಪರವಾಗಿ ಪ್ರಶ್ನೆ ಇರುವುದು ಏನೆಂದರೆ ಮುಸಲ್ಮಾನರ ಜೊತೆಗೆ ಇನ್ನೊಬ್ಬ ಮುಸಲ್ಮಾನನು ಯುದ್ಧ ಮಾಡುವುದು ಯಾವ ನ್ಯಾಯ? ಯಾವ ಮುಸಲ್ಮಾನನು ಪ್ರತಿದಿನ ಆಜಾನ, ನಮಾಜ ಮತ್ತು ಇಸ್ಲಾಂ ಧರ್ಮದ ಎಲ್ಲ ತತ್ವಗಳನ್ನು ತನ್ನ ಜಿವನದಲ್ಲಿ ಅಳವಡಿಸಿಕೊಂಡಿದ್ದಾನೆಯೋ ಅಂಥವನನ್ನು ಕೊಲೆ ಮಾಡಿ ಅವನ ಆಸ್ತಿಯನ್ನು ಲೂಟಿ ಮಾಡುವುದು ಇಸ್ಲಾಂ ಧರ್ಮದ ಯಾವ ಕಾನೂನಿನಲ್ಲಿದೆ? ಮತ್ತು ಫತ್ವಾ [ಧರ್ಮಶಾಸ್ತ್ರ ವಿಧಿ] ಏನಿದೆ? ಈ ಪ್ರಶ್ನೆಗಳಿಂದ ಖಂಡಿತವಾಗಿಯೂ ಆ ಕೊಲೆಗಾರನು ಮತ್ತು ಅಪರಾಧಿಯು ತನ್ನ ಕೆಲಸದಿಂದ ದೂರ ಸರಿಯಬಹುದು ಎಂದು ಹೇಳಿದರು. ಅವರ ಸಲಹೆಯು ದರಬಾರದ ಎಲ್ಲರಿಗೂ ಒಪ್ಪಿಗೆಯಾಯಿತು. ಆಗ ಸಿಕಂದರ ಆದಿಲಶಹನು, ಕೆಲವು ಬುದ್ಧಿಜೀವಿಗಳನ್ನು ಕರೆಯಿಸಿ ಇದನ್ನು ಅವನ ಹತ್ತಿರ ಕೇಳಲು ಕಳಿಸಿದನು.

ಸಿಕಂದರ ಆದಿಲಶಾಹನ ಕಡೆಯಿಂದ ಕೆಲವು ಉಲೇಮಾಗಳು ತನ್ನೊಂದಿಗೆ ಕೆಲವು ಪ್ರಶ್ನೆಗಳನ್ನು ಕೇಳಲು ಬರುತ್ತಾರೆಂದು ಆಲಂಗೀರ ಬಾದಶಹನಿಗೆ ಗೊತ್ತಾದಾಗ, ಅವರು ಯಾಕೆ ಬರುತ್ತಿದ್ದಾರೆ ಮತ್ತು ಅವರ ಪ್ರಶ್ನೆ ಏನು ಎಂದು ಕೇಳಲು ಅವನು ತನ್ನ ಕಡೆಯ ಕೆಲವು ಉಲೇಮಾಗಳನ್ನು ಕಳಿಸಿದನು. ಆಗ ಬಿಜಾಪುರದ ಉಲೇಮಾಗಳು ತಮ್ಮ ಸಮಸ್ಯೆಗಳನ್ನು ಹೀಗೆ ವಿವರಿಸಿದರು:

'ಅಲ್ಲಾಹನ ಕೃಪೆಯಿಂದ ಬಾದಶಹನು ನ್ಯಾಯವನ್ನು ನಿರ್ಣಯಿಸುವವನಾಗಿದ್ದಾನೆ. ಧೈರ್ಯವಂತ, ದಯಾಳು, ಧಾರ್ಮಿಕ ಪಂಡಿತ, ಯಾವಾಗಲೂ ಅಲ್ಲಾಹನ ಆರಾಧನೆಯಲ್ಲಿರುವವನು, ಆಶೆ ಇಲ್ಲದವನು, ಪಾಪವನ್ನು ಮಾಡದವನು, ಅಲ್ಲಾಹನಲ್ಲಿ

ಯಾವಾಗಲೂ ಭಯದಿಂದ ಇರುವವನು, ಧರ್ಮವನ್ನು ಪಾಲಿಸುತ್ತಾನೆ. ಇಂಥ ಒಬ್ಬ ಬಾದಶಹನ ರಾಜ್ಯದಲ್ಲಿ ದುರ್ಬಲನು ಬಲಶಾಲಿಯಿಂದ, ಇರುವೆ ಹಾವಿನಿಂದ ತೊಂದರೆಗೊಳಗಾಗುವುದಿಲ್ಲ ಮತ್ತು ಅವನ ಯಾವುದೇ ಆದೇಶ ಇಸ್ಲಾಮ ಧರ್ಮದ ಶರೀಯತ್‌ದಿಂದ ಬೇರೆಯಾಗಿರುವುದಿಲ್ಲ. ಅವನು ಎಂದೂ ಪವಿತ್ರ ಕುರಾನ ಹಾಗೂ ಪವಿತ್ರ ಮಹಮ್ಮದರ ಉಪದೇಶಗಳನ್ನು ಮೀರಿ ಹೋಗುವುದಿಲ್ಲ. ಹೀಗಿದ್ದಾಗ್ಯೂ ಈಗಿರುವ ನಮ್ಮ ಸಮಸ್ಯೆ ಏನೆಂದರೆ, ಈ ಬಿಜಾಪುರ ರಾಜ್ಯ ಮತ್ತು ನಗರದ ಬಾದಶಹನು ಮುಸಲ್ಮಾನನು ಮತ್ತು ಅಲ್ಲಾಹನಲ್ಲಿ ನಂಬಿಗೆಯನ್ನು ಇಟ್ಟವನು. ಇಲ್ಲಿದ್ದ ಎಲ್ಲ ಜನರು ಮುಸಲ್ಮಾನರು, ಮತ್ತು ಹಜರತ್ ಮಹಮ್ಮದ ಪೈಗಂಬರರ ಕಲೀಮಾಗಳನ್ನು ಓದುವವರು. ಮಸೀದಿಗಳಲ್ಲಿ ಆಜಾನ ಮತ್ತು ನಮಾಜಗಳನ್ನು ಮಾಡುವವರು. ಇಸ್ಲಾಂ ಧರ್ಮದ ತತ್ವಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡವರು. ಇಷ್ಟೆಲ್ಲ ಇದ್ದರೂ ಶಾಹನ್‌ಶಾಹರ ಒಂದು ದೊಡ್ಡ ಸೈನ್ಯವು ಮಹಾಸಾಗರದ ತೆರೆಯಂತೆ ಬಂದು ಕೋಟೆಗೆ ಅಪ್ಪಳಿಸಿ ಸಿಟ್ಟಿನಿಂದ ನಿರ್ದೋಷ ಮುಸ್ಲಿಮರನ್ನು, ಅವರಲ್ಲಿ ಯಾವ ತಪ್ಪೂ ಇಲ್ಲದಿದ್ದಾಗ ಇಲ್ಲಿಯ ಆಸ್ತಿಯನ್ನು ಲೂಟಿ ಮಾಡಿ ಅವರನ್ನು ಕತ್ತರಿಸಿ ಹಾಕುವುದು ಸರಿಯೆ? ಹಜರತ್ ಮೊಹಮ್ಮದರ ಇಸ್ಲಾಮ ಧರ್ಮದಲ್ಲಿ ಮುಸಲ್ಮಾನರ ಜೊತೆಗೆ ಯುದ್ಧ ಮಾಡುವುದು ನಿಷಿದ್ಧವಾಗಿದೆ. ಯಾಕೆಂದರೆ ಪ್ರವಾದಿಗಳು ಇದನ್ನು ನಿಷೇಧಿಸಿದ್ದಾರೆ ಮತ್ತು ಈ ಬಗ್ಗೆ ಎಚ್ಚರಿಕೆಯನ್ನು ಕೊಟ್ಟಿದ್ದಾರೆ. ಏನೆಂದರೆ ಕಾಫಿರರ ಪ್ರದೇಶದಲ್ಲಿ ಆಜಾನದ ಶಬ್ದವನ್ನು ತಮ್ಮ ಕಿವಿಯಿಂದ ಕೇಳಿದರೆ ಸಾಕು, ಅಲ್ಲಿ ಕೊಲೆ ಮತ್ತು ಸುಲಿಗೆ ಮಾಡಬಾರದು ಎಂದು ಹೇಳಲಾಗಿದೆ. ಹೀಗಿದ್ದಾಗ ಮುಸಲ್ಮಾನರ ಆಸ್ತಿಯನ್ನು ತೆಗೆದುಕೊಳ್ಳುವುದು ಮತ್ತು ಅವರ ಜೀವವನ್ನು ತೆಗೆಯುವುದು ಧರ್ಮಬಾಹಿರ ಎನಿಸುತ್ತದೆ. ವಿಶೇಷವಾಗಿ ನಿಮ್ಮಂಥ ನ್ಯಾಯಾಧೀಶ, ಧರ್ಮಪಾಲನ ಮಾಡುವವನು, ಸಜ್ಜನ ಮತ್ತು ಅಲ್ಲಾಹನ ಕೃಪೆಯಿಂದ ಯಾವಾಗಲೂ ಜನರನ್ನು ದಯಾಪೂರ್ಣ ದೃಷ್ಟಿಯಿಂದ ನೋಡುತ್ತಿರುವಾಗ ಇಲ್ಲಿಯ ನಿಮ್ಮ ಈ ಕಾರ್ಯ ಅತ್ಯಂತ ಆಶ್ಚರ್ಯವೆನಿಸುತ್ತದೆ.'

ಆಲಂಗೀರ ಬಾದಶಹನು ಈ ಮಾತುಗಳನ್ನು ಕೇಳಿ, ತನ್ನ ಕಡೆಯ ಉಲೇಮಾಗಳಿಗೆ ಹೀಗೆ ಉತ್ತರ ಕೊಡಿರಿ ಎಂದು ಹೇಳಿ ಕಳಿಸಿದನು.

'ನೀವು ಹೇಳಿದ್ದೆಲ್ಲವೂ ಸರಿ ಮತ್ತು ಸತ್ಯ ಇದೆ ಮತ್ತು ನಮಗೆ ನಿಮ್ಮ ನಗರದಿಂದ ಮತ್ತು ರಾಜ್ಯದಿಂದ ಏನನ್ನೂ ಕೊಡ-ತೆಗೆದುಕೊಳ್ಳಲು ಬಂದಿಲ್ಲ. ಮತ್ತು ನಿಮ್ಮೊಂದಿಗೆ ಯುದ್ಧಮಾಡಿ ನಿಮ್ಮನ್ನು ಕೊಲ್ಲುವುದೂ ನಮ್ಮ ಇರಾದೆ ಇಲ್ಲ. ಆದರೆ ಕಾರಣ ಇಷ್ಟೇ, ದುಷ್ಟನ ಮಗ ದುಷ್ಟನಾದ ಕಾಫಿರನು ನಮ್ಮೊಂದಿಗೆ ಯುದ್ಧವನ್ನು ಘೋಷಿಸಿದ್ದಾನೆ. ಒಬ್ಬ ಕವಿಯು ಹೇಳಿದಂತೆ 'ಪವಿತ್ರ ಮಕ್ಕಾ ನಗರದಲ್ಲಿಯ ಕಾಬಾದಲ್ಲಿ ಕಾಫಿರನು ಅಡಗಿದ್ದರೂ ಅಲ್ಲಿ ಅವನನ್ನು ಜಗ್ಗಿ ಇರಿದು ಕೊಲೆ ಮಾಡ ಬೇಕು' ಎಂಬ ಮಾತು ಇವನಿಗೂ ಸಲ್ಲುತ್ತದೆ. ಇಂಥವನಿಗೆ ನೀವು ಆಶ್ರಯಕೊಟ್ಟು ಹತ್ತಿರವೇ ಇಟ್ಟುಕೊಂಡು ಸಹಾಯ

ಮಾಡುತ್ತಿದ್ದುದರಿಂದ ಅವನು ಎಲ್ಲ ಕಡೆಗೆ ಗಲಭೆ, ದಂಗೆ ಎಬ್ಬಿಸಿದ್ದಾನೆ. ಇಲ್ಲಿಂದ ದೆಹಲಿಯವರೆಗೆ ಎಲ್ಲೆಡೆ ಇದ್ದ ಮುಗ್ಧ, ಅಸಹಾಯಕ ಬಡ ಜನರಿಗೆ ಕಷ್ಟ ಕೊಡುತ್ತಿದ್ದಾನೆ ಅವರು ದಿನ ರಾತ್ರಿ ಅಳುತ್ತ ತಮ್ಮನ್ನು ಉಳಿಸಿಕೊಳ್ಳಲು ನನಗೆ ಪ್ರಾರ್ಥನೆ ಮಾಡುತ್ತಿದ್ದಾರೆ. ಇಂಥ ಸಂದರ್ಭದಲ್ಲಿ ಇದು ನನ್ನ ಜವಾಬ್ದಾರಿ ಎಂದು ತಿಳಿದಿದ್ದೇನೆ. ಅವನನ್ನು ಬೇರು ಸಹಿತ ಕಿತ್ತಿ ಇಲ್ಲಿ ಶಾಂತಿಯನ್ನು ಸ್ಥಾಪಿಸಬೇಕಾಗಿದೆ. ಆದ್ದರಿಂದ ನಾನು ಅಲ್ಲಿಂದ ಹೊರಟು ಇಲ್ಲಿಯ ವರೆಗೆ ಬಂದಿದ್ದೇನೆ. ಇದನ್ನು ಬಿಟ್ಟು ನನಗೆ ಬೇರೆ ಉದ್ದೇಶವೇ ಇಲ್ಲ. ಆದ್ದರಿಂದ ಈಗಲೂ ನೀವು ಆ ಯುದ್ಧಲಾಲಸಿ ಕಾಫಿರನನ್ನು ನಮಗೆ ಒಪ್ಪಿಸಿರಿ. ನಾವು ಈ ಜಗತ್ತಿನ ಜನರ ಉಪದ್ರವವನ್ನು ದೂರ ಮಾಡುತ್ತೇವೆ. ಯಾಕೆಂದರೆ ಅವನು ನಿಮ್ಮ ಆಶ್ರಯದಲ್ಲಿ ನಿಮ್ಮ ಸಹಾಯದಿಂದ ಇದೆಲ್ಲವನ್ನೂ ಮಾಡುತ್ತಲಿದ್ದಾನೆ. ಅದಕ್ಕಾಗಿ ನಾವು ನಿಮಗೆ ಅವನನ್ನು ಕೇಳುತ್ತಲಿದ್ದೇವೆ. ಒಮ್ಮೆ ಅವನು ನಮ್ಮ ಕೈಗೆ ಸಿಕ್ಕರೆ ಸಾಕು ತಕ್ಷಣ ನಾವು ಇಲ್ಲಿಂದ ಹೋಗಿ ಬಿಡುತ್ತೇವೆ'. ಬಿಜಾಪುರದವರು ಈ ಉತ್ತರವನ್ನು ಕೇಳಿ ಸುಮ್ಮನಾಗಿ ತಮ್ಮ ನಗರಕ್ಕೆ ಮರಳಿ ಬಂದರು.

ಬಿಜಾಪುರವು ಆಲಂಗೀರಬಾದಶಹನ ವಶವಾಯಿತು.

ಬಿಜಾಪುರ ಕೋಟೆಯ ಗೆಲುವು ತಡವಾಗ ಹತ್ತಿತ್ತು. ಆದರೆ ಎಲ್ಲತರಹದ ಪ್ರಯತ್ನ ಮತ್ತು ಸಾಮರ್ಥ್ಯಗಳು ಎಡೆಬಿಡದೆ ನಡೆದಿದ್ದುವು. ಇಡೀ ಹಿಂದೂಸ್ಥಾನದ ಶಕ್ತಿಯೇ ಅಲ್ಲಿ ಬಂದು ಇಳಿದಿತ್ತು. ಆಲಂಗೀರ ಬಾದಶಹನು ಅತ್ಯಂತ ವ್ಯಾಕುಲನಾಗಿ ತಾಳ್ಮೆಯನ್ನು ಕಳೆದುಕೊಂಡಿದ್ದನು. ಅದಕ್ಕಾಗಿ ತಾನೇ ಸ್ವತಃ ತನ್ನ ಡೇರೆಯಿಂದ ಹೊರಟು ಎಲ್ಲ ಯುದ್ಧ ಸಾಮಗ್ರಿಗಳೊಂದಿಗೆ ಒಂದು ಕೋಸು ದೂರದಲ್ಲಿರುವ ತೋಪಖಾನೆ ಮುಖ್ಯಸ್ಥನಾದ ಗಾಜೀಉದ್ದೀನಖಾನ ಹತ್ತಿರ ಬಂದು 'ಕೋಟೆಯನ್ನು ಒಡೆಯುವ ಮುಜಾಹಿದರು, ಯುದ್ಧದಲ್ಲಿ ತಮ್ಮ ಶಕ್ತಿ ಸಾಮರ್ಥ್ಯ ತೋರುವ ವೀರರು, ನನ್ನ ಶಾಹಜಾದೆಗಳ [ರಾಜಪುತ್ರರ] ವಿಶೇಷ ಸೈನಿಕರು ಇವರೆಲ್ಲರೂ ಕೂಡಿ ಒಮ್ಮೆಲೇ ಎಲ್ಲ ಕಡೆಯಿಂದ ಹಲ್ಲೆ ಮಾಡಿರಿ' ಎಂದು ಆದೇಶಿಸಿದನು.

ಇದನ್ನು ಕಂಡ ಬಿಜಾಪುರದವರು ಅತ್ಯಂತ ನಿರಾಶರಾಗಿ ಅಸಹಾಯಕರಾದರು. ಸಿಕಂದರ ಆದಿಲಶಹನು, ದರಬಾರದ ಎಲ್ಲ ಅಮೀರರು, ವಜೀರರು ಕೂಡ ನಿರಾಶರಾಗಿ ಒಪ್ಪಂದದ ಹೊರತು ಬೇರೆ ದಾರಿ ಇಲ್ಲ ಎಂದು ನಿರ್ಧರಿಸಿದರು. ಜಿಲ್ಕಾಯದಾದ ಮೊದಲ ದಿನ ರಾತ್ರಿಯ ಸಮಯದಲ್ಲಿ ಸಯೀದ ಖಾನ ತರೀನ, ಮುನ್ಶಿ ಅಬ್ದುರ್ ರವೂಫ, ಮುನ್ಶಿ ಶೇಖ ಹುಸೇನ ಮತ್ತು ಸಯ್ಯದ ಮಖದೂಮ ಶಾರ್ಜಾಖಾನರು ಹಾಫಿಜ್ ಅಫಜಲ್ ಜೊತೆಗೆ ಒಪ್ಪಂದದ ಸಲುವಾಗಿ ಗಾಜಿಉದ್ದೀನಖಾನನ ಹತ್ತಿರ ಹೋಗಿ ಅದೇ ರಾತ್ರಿ ತಿರುಗಿ ಬಂದರು. ಎರಡನೆಯ ದಿನ ಅಬ್ದುರ್ ರವೂಫಖಾನ ಮತ್ತು ಶಾರ್ಜಾ ಖಾನ ಇಬ್ಬರೂ ಗಾಜಿಉದ್ದೀನಖಾನನ ಭೆಟ್ಟಿಯಾಗಿ ಒಪ್ಪಂದದ ಕರಾರುಗಳನ್ನು ಮಾತನಾಡಿ ತಿರುಗಿ ಬಂದರು. ಸಿಕಂದರ ಆದಿಲಶಹನ ಜೊತೆಗೆ ಚರ್ಚೆ

ಮಾಡಿ ಕೋಟೆಯನ್ನು ಅವರಿಗೆ ಒಪ್ಪಿಸಲು ನಿರ್ಧರಿಸಿದರು. ಮೂರನೆ ದಿನ ಮತ್ತೆ ಗಾಜೆಉದ್ದೀನಖಾನನ ಹತ್ತಿರ ಹೋಗಿ ಅವನ ಸಲಹೆಯಂತೆ, ಅಲಂಗೀರ ಬಾದಶಹನ ಹತ್ತಿರ ಹೋಗಲು ದಾರಿಯಾಯಿತು. ಅಬ್ದುರ್ ರವೂಫಖಾನನು ಆ ರಾತ್ರಿ ಅಲ್ಲಿಯೇ ಉಳಿದನು. ಶಾರ್ಜಾಖಾನನು ತಿರುಗಿ ಬಂದನು. ಮರುದಿನ ಹಿಜರಿ ಶಕ ೧೦೯೭, ಜಿಲ್ಕಾಯದಾ ತಿಂಗಳ ೪ನೆಯ ದಿನ, (ಕ್ರಿ. ಶ. ೧೬೮೬)ರಂದು ೧೦ ಗಂಟೆಯ ಹೊತ್ತಿಗೆ ಸಿಕಂದರ ಆದಿಲಶಹನು ಕೋಟೆಯಿಂದ ಹೊರಗೆ ಬಂದು ಆಲಂಗೀರನ ಹತ್ತಿರ ಬಂದು ಕೋಟೆಯನ್ನು ಒಪ್ಪಿಸಿದನು.

ಆಲಂಗೀರ ಬಾದಶಹನು ಸಿಕಂದರ ಆದಿಲಶಹನನ್ನು ಅತ್ಯಂತ ಗೌರವದಿಂದ ಸ್ವಾಗತಿಸಿದನು. ಅವನಿಗೆ ಬಹಳಷ್ಟು ಕಾಣಿಕೆಗಳನ್ನು ಕೊಟ್ಟು ಅವನ ಮನಸ್ಸನ್ನು ಸಂತುಷ್ಟಿಗೊಳಿಸಲು ಪ್ರಯತ್ನಿಸಿದನು. ತನ್ನ ಸ್ವಂತ ಡೇರೆಯ ಹಿಂದೆಯೇ ಸಿಕಂದರ ಆದಿಲಶಹನ ವಿಶೇಷ ಡೇರೆಯನ್ನು ನಿಲ್ಲಿಸಿ, ಅಲ್ಲಿ ಅವನಿಗೆ ಉಳಿದುಕೊಳ್ಳಲು ಎಲ್ಲ ರೀತಿಯ ವ್ಯವಸ್ಥೆಯನ್ನು ಮಾಡಿದನು. ಅವನಿಗೂ, ಅವನ ಪರಿವಾರದ ಖರ್ಚಿಗೆಂದೂ ವಾರ್ಷಿಕ ಒಂದು ಲಕ್ಷ ರೂಪಾಯಿಗಳ ಸಹಾಯಧನವನ್ನು ಮಂಜೂರು ಮಾಡಿದನು. ಕೆಲವು ದಿನಗಳ ನಂತರ ಇಸ್ಲಾಮ ಧರ್ಮದ ಶರೀಯತ್‌ದಲ್ಲಿ ಹೇಳಿದಂತೆ ಅಬುಲ್ ಹಸನ್ ಕುತುಬಶಾಹನ ಮಗಳ ಜೊತೆಗೆ ಸಿಕಂದರ ಆದಿಲಶಹನ ನಿಕಾಹ ಮಾಡಿಸಿದನು.

ಅಬ್ದುರ್ ರವೂಫ ಖಾನ ಮಿಯಾನಾ ಮತ್ತು ಸಯ್ಯದ ಮಖದೂಮ ಶಾರ್ಜಾಖಾನರಿಗೆ ಕ್ರಮವಾಗಿ ಹಫ್ತ ಹಜಾರಿ [ಏಳು ಸಾವಿರ] ಮತ್ತು ಛ ಹಜಾರಿ [ಆರು ಸಾವಿರ] ಹುದ್ದೆಗಳನ್ನು ಕೊಟ್ಟನು. ಜೊತೆಗೆ ಅವರಿಗೆ ದಿಲೇರಖಾನ ಬಹಾದ್ದೂರ ದಿಲೇರಜಂಗ ಮತ್ತು ಎರಡನೆಯವನಿಗೆ ರುಸ್ತುಮಖಾನ ಎಂಬ ಬಿರುದುಗಳನ್ನು ಕೊಟ್ಟನು. ಬಿಜಾಪುರ ನಗರಕ್ಕೆ ದಾರುಜ್ಜಫರ್ [ವಿಜಯಪುರ] ಎಂಬ ಹೆಸರನ್ನು ಘೋಷಿಸಿದನು.

ದಿಲೇರಖಾನಬಹಾದ್ದೂರ ದಿಲೇರಜಂಗನಿಗೆ, ಸರಕಾರ ಬಂಕಾಪುರದ ಜಿಲಾದಾರಿ ಮತ್ತು ಸರಕಾರ ಆಜಮನಗರದ ಫೌಜದಾರಿಯ ಸನದನ್ನು ಹಾಕಿಕೊಟ್ಟು ಅವನನ್ನು ಆ ಜಿಲ್ಲೆಯತ್ತ ಕಳಿಸಿಕೊಟ್ಟನು. ಸನದಿನ ನಕಲು ಇಲ್ಲಿದೆ.

ಬಾದಶಹ ಅಲಂಗೀರನು ದಿಲೇರ ಬಹಾದ್ದೂರ ದಿಲೇರಜಂಗನಿಗೆ ಕೊಟ್ಟ ಸನದು

ಇಡೀ ವಿಶ್ವದ ಶಾಹೆನ್‌ಶಾಹ, ಸೂರ್ಯನಂತಿರುವ ಬಾದಶಹನ ಕಡೆಯಿಂದ ಕೊಟ್ಟ ಸನದು ಮತ್ತು ಬಿರುದು. ಬಹು ದೊಡ್ಡ ಹುದ್ದೆಯ ವಜೀರನು ಮತ್ತು ಗೌರವಾನ್ವಿತ ಅಮೀರನು, ಅತಿ ಶಕ್ತಿಶಾಲಿ, ಬಹಾದ್ದೂರ, ರಾಜ್ಯದ ಒಬ್ಬ ಸದಸ್ಯನು ಮತ್ತು ರಾಜ್ಯದ ಅನುಭವೀ ರಾಜಕಾರಣಿ, ಎಲ್ಲಿ ಹೋದಲ್ಲಿ ಗೆದ್ದು ಬಂದ, ರಾಜ್ಯಕ್ಕೆ ಗೌರವ ತಂದ, ಬಾದಶಾಹನ ಕೈಬೆರಳಿನ ಉಂಗುರದ ಬೆಲೆಯುಳ್ಳ ವಜ್ರನು, ವೀರ ಮುಜಾಹಿದನು, ಧರ್ಮವನ್ನು ಪಾಲಿಸುವವನು, ರಣಭೂಮಿಯಲ್ಲಿ ತನ್ನ ಶೌರ್ಯದಿಂದ ಎಲ್ಲ ಶತ್ರುಗಳನ್ನು

ಸೋಲಿಸುವವನು, ವಿಶಿಷ್ಟನು, ಪ್ರಸಿದ್ಧ ವಜೀರನಾದ ಅಬ್ದುರ್ ರವೂಫಖಾನ ತಂದೆ ಅಬ್ದುಲ್ ಕರೀಮಖಾನ ಮಿಯಾನಾ ಅವನಿಗೆ ದಿಲೇರಖಾನ ಬಹಾದ್ದೂರ ದಿಲೇರಜಂಗ ಎಂಬ ಬಿರುದನ್ನು ಕೊಟ್ಟು ಹಪ್ತ ಹಜಾರಿ ಹುದ್ದೆ ಮತ್ತು ಅವನ ಸ್ವಂತಕ್ಕಾಗಿ ಆರು ಸಾವಿರ ಕುದುರೆ ಸವಾರರನ್ನು ಕೊಟ್ಟು, ಸರಕಾರ ಆಜಮನಗರ ಮತ್ತು ಸರಕಾರ ಬಂಕಾಪುರದಲ್ಲಿ ಬರುವ ಪರಗಣೆಗಳ ಜಿಲಾದಾರಿ ಮತ್ತು ಫೌಜದಾರೀ ಹುದ್ದೆಗಳನ್ನು ಕೊಡಲಾಗಿದೆ. ಇದರಲ್ಲಿ ಯಾವ ತರದ ಅದಚಣೆ ತರದೆ ಶೀಘ್ರವಾಗಿ ಈ ಆದೇಶವನ್ನು ಜಾರಿಯಲ್ಲಿ ತರಬೇಕು. ಈ ಸನದನ್ನು ಕೊಟ್ಟ ದಿನ ಜಿಲ್ಕಾಯದಾದ ೪ನೆಯ ದಿನ, ಶಾಹನ್ ಶಾಹನು ಪಟ್ಟಕ್ಕೆ ಬಂದ ೩೦ನೆಯ ವರುಷ ಹಿಜರಿ ಶಕ ೧೧೯೭.

ಮರುದಿನ ಜಿಲ್ಕಾಯದಾದ ೫ನೆಯ ದಿನವಾಗಿತ್ತು. ಆಲಂಗೀರ ಬಾದಶಹನು ಕೋಟೆಯ ಒಳಗೆ ಆಗಮಿಸಿ ಇಡೀ ಬಿಜಾಪುರ ರಾಜ್ಯದ ಅಧಿಕಾರವನ್ನು ತನ್ನ ಕೈಯಲ್ಲಿ ತೆಗೆದುಕೊಂಡನು. ನಂತರ ಮಲಿಕಮೈದಾನ ತೋಪಿಗೆ ಬಂದನು. ಈ ತೋಪು ಅತ್ಯಂತ ದೊಡ್ಡದಾಗಿದೆ. ಅದು ೩೧೦೦ ರತ್ತಲ ಭಾರ ಇದೆ. ೯ ಮೊಳ ಉದ್ದವಿದೆ. ವ್ಯಾಸವೂ ೯ ಮೊಳವಿದೆ. ಮೂಲದಲ್ಲಿ ಅದು ಅಹಮದನಗರದ್ದಾಗಿದೆ. ಹಿಜರಿ ಶಕ ೧೦೪೨, (ಕ್ರಿ. ಶ. ೧೬೩೨)ರಲ್ಲಿ ಸುಲ್ತಾನ ಮೊಹಮ್ಮದನು ಈ ತೋಪನ್ನು ಶಾರ್ಜಾಬುರುಜದ ಮೇಲೆ ಇಟ್ಟನು. ಈ ತೋಪಿನ ಮೇಲೆ ಬರೆಯಿಸಿದ ಸುಂದರ ಶಾಸನವನ್ನು ಓದಿದರೆ ಅದು ಹೀಗಿದೆ :

(ಮೂಲ ಪರ್ಶಿಯನ್ ಶಾಸನ ೧. ಶಾಹೆ ಆಲಂಗೀರ ಗಾಜೀ ಬಾದಶಾಹೆ ದೀನೆಪನಾಹ, ಆಂಕೆ ದಾದ ಅದ್ಲ ದಾದ ವ ಮುಲ್ಕ ಶಾಹಾನರಾ ಗಿರಿಫ್ತ. ೨. ಫತಹ ಬಿಜಾಪುರ ಕರ್ದಾ ಬಹರ್ ತಾರೀಖೆ ಜಫರ, ರೂ ನಮೂದ ಇಕ್ಬಾಲ ಗುಫ್ತಾ ಮಲಿಕ ಮೈದಾನರಾ ಗಿರಿಫ್ತ)

೧. ಶಾಹೆ ಆಲಂಗೀರ ಬಾದಶಾಹ, ಧರ್ಮವನ್ನು ಪಾಲಿಸುವವನು, ನ್ಯಾಯಪಾಲಕನು, ಹಲವಾರು ಬೇರೆ ರಾಜ್ಯಗಳನ್ನು ಗೆದ್ದವನು,

೨. ಬಿಜಾಪುರವನ್ನು ಗೆದ್ದವನು, ಗೆದ್ದ ದಿನ 'ಅವನು ಸುದೈವಿ, ಇಲ್ಲಿ ಬಂದು ಮಲಿಕ್ ಮೈದಾನವನ್ನು ಗೆದ್ದನು.'

ಆಲಂಗೀರ ಬಾದಶಹನು ಅದೇ ದಿನ ತನ್ನ ಸೈನ್ಯಕ್ಕೆ ತಿರುಗಿ ಹೋಗಲು ಆದೇಶಿಸಿದನು. ರೂಹುಲ್ಲಾಖಾನನಿಗೆ ಪಂಜ ಹಜಾರೀ ಬಿರುದನ್ನು ಕೊಟ್ಟು ನಾಲ್ಕು ಸಾವಿರ ಕುದುರೆ ಸವಾರರನ್ನು ಅವನ ಸ್ವಂತಕ್ಕೆ ಕೊಟ್ಟು ಬಿಜಾಪುರ ಸುಬೇದಾರಿಯ ಹುದ್ದೆಯನ್ನು ಕೊಟ್ಟು ಗೌರವಿಸಿದನು. ಆ ದಿನದಿಂದ ಆದಿಲಶಾಹಿಯ ರಾಜ್ಯವು ಅಸ್ತಂಗತವಾಯಿತು. ಅವರ ವಂಶವು ಅಂದಿನಿಂದ ಮುಕ್ತಾಯವಾಯಿತು. ಆ ನಂತರ ಸಿಕಂದರ ಆದಿಲಶಾಹನು ಆಲಂಗೀರ ಬಾದಶಹನ ಸೆರೆಮನೆಯ ಒಂದು ಮೂಲೆಯಲ್ಲಿ ತನ್ನ ಜೀವದ ಅಂತಿಮ

ದಿನಗಳನ್ನು ಅಸಫಲನಾಗಿ ಕಳೆದನು. ಸೆರೆಮನೆಯಲ್ಲಿ ೧೪ ವರುಷ ಅಸಹಾಯಕನಾಗಿ ಕಳೆದನು. ಹೇಳಲು ದುಃಖವಾಗುತ್ತದೆ, ಅವನ ವಿಷಾದ ಜೀವನವು ನಮಗೆ ಪಾಠವನ್ನು ಕಲಿಸುತ್ತದೆ.

ಬಿಜಾಪುರ ರಾಜ್ಯದ ವಿವರ ಹೀಗಿದೆ

ಬಿಜಾಪುರದ ಕೆಳಗೆ ಅದರ ಅಧಿಕಾರದಲ್ಲಿ ೧೮ ಸರಕಾರಗಳಿದ್ದುವು. ೨೮೧ ಪರಗಣೆಗಳಿದ್ದುವು. ಆದಿಲಶಾಹೀ ದಫ್ತರ ಮತ್ತು ಅಸಜಾಹೀ ದಫ್ತರಗಳಲ್ಲಿ ಹೇಳಿದಂತೆ ಇವುಗಳಿಂದ ಒಟ್ಟು ವಾರ್ಷಿಕ ಕಂದಾಯ ಏಳುಕೋಟಿ ಎಂಬತ್ನಾಲ್ಕು ಲಕ್ಷ ಅರವತ್ತೊಂದು ಸಾವಿರ ಎಂಟುನೂರದ ಹದಿನೇಳು ರುಪಾಯಿ ಒಂದೂವರೆ ಆಣೆ ಬರುತ್ತಿತ್ತು. ಇದಲ್ಲದೆ ಬಿಜಾಪುರ ಸರಕಾರದ ಅಧೀನದಲ್ಲಿ ಅನೇಕ ಬಂದರಗಳು ಇದ್ದುವು. ಅವುಗಳ ಹೆಸರು ಮತ್ತು ಕಂದಾಯದ ವಿವರ ಹೀಗಿದೆ.

ಬಂದರ ದಾಬೋಳ	೭೦೦೦
ಬಂದರ ಕಲಹಟ್ಟ	೭೦೦೦
ಬಂದರ ಚೌಲ	೧೫೦೦೦
ಬಂದರ ಸಗರ	೧೦೦೦೦
ಬಂದರ ಗೋವಾ	೩೦೦೦೦
ಬಂದರ ರಾಜಪುರ	೨೪೦೦೦
ಬಂದರ ಸಾಷ್ಟೀ	೧೦೦೦
ಬಂದರ ಖಾರೀಪಟ್ಟನ	೫೦೦೦
ಬಂದರ ಹೋಚರ	೫೦೦೦
ಬಂದರ ಸಾತೋಳಿ	೩೦೦೦

ಬಂದರ ಮಹಮ್ಮದಾಬಾದ ಊರ್ಫ ಸಿದ್ಧೋಟ ೫೦೦೦

ಬಂದರ ಖೇಡಾ ೫೦೦೦

ಇದಲ್ಲದೆ ಕರ್ನಾಟಕದ ಪ್ರದೇಶಗಳಿಂದಲೂ ಕಂದಾಯ ಬರುತ್ತಿತ್ತು.

ಸಿಕಂದರ ಆದಿಲಶಹನ ಮರಣ

ಆಲಂಗೀರ ಬಾದಶಹನು ಬಹಳಷ್ಟು ಹೋರಾಟ ಮಾಡಿ ಬಿಜಾಪುರ ಕೋಟೆಯನ್ನು ತನ್ನ ವಶಕ್ಕೆ ತೆಗೆದುಕೊಂಡ ನಂತರ ಇಲ್ಲಿ ವಿಜಯೋತ್ಸವವನ್ನು ಆಚರಿಸಿದನು. ಯೋಗ್ಯರಿಗೆ ಹುದ್ದೆ ಮತ್ತು ಬಿರುದುಗಳನ್ನು ಕೊಟ್ಟು ಗೌರವಿಸಿದನು. ಬಿಜಾಪುರ ಕೋಟೆಯನ್ನು ಗೆದ್ದರೂ ಸಹಿತ ಬಿಜಾಪುರ ಪ್ರದೇಶ ಒಮ್ಮೆಯೂ ಅವನ ಕೈವಶವಾಗಲಿಲ್ಲ. ಒಂದೊಂದು

ಕೋಟೆಗಳು, ಒಂದೊಂದು ಪ್ರದೇಶಗಳನ್ನು ಗೆಲ್ಲಲು ಅಲಂಗೀರ ಬಾದಶಹನಿಗೆ ಸಮಯ ಹಿಡಿಯಿತು.

ಹೀಗೂ ಹೇಳಲಾಗುತ್ತದೆ. ಅಲಂಗೀರಬಾದಶಹನು ಬಹಳ ದಿನಗಳಿಂದ ಕೈವಶ ಮಾಡಿಕೊಳ್ಳಬೇಕೆಂದು ಇಚ್ಛೆ ಮಾಡಿ, ಹೇಗೆ ಮಾಡಿದರೆ ಇದನ್ನು ಗೆಲ್ಲಬಹುದು ಎಂಬ ಚಿಂತೆಯಲ್ಲೇ ಕೆಲವು ವರುಷಗಳನ್ನು ಕಳೆದನು. ಒಂದು ಘಟನೆ ಹೀಗಿದೆ: ಬಿಜಾಪುರದ ಹತ್ತಿರದ ಒಂದು ಚಿಕ್ಕ ಪ್ರದೇಶ, ಅದೇನು ಅಷ್ಟು ಬಲಾಢ್ಯವೂ ಇರಲಿಲ್ಲ. ಸುಲ್ತಾನನ ಸವಾರಿ ಅತ್ತ ಕಡೆ ಹೊರಟಾಗ, ಆ ಪ್ರದೇಶದ ಮುಖ್ಯಸ್ಥನು ಅವನೇಕೆ ಬರುತ್ತಾನೆ? ಅವನೇನು ನಮ್ಮ ರಾಜನಲ್ಲ. ಇಲ್ಲಿ ಬಂದು ಏನು ಮಾಡುತ್ತಾನೆ ಎಂದು ಹೇಳಿ ಕಳಿಸಿದನಂತೆ. ಇಷ್ಟಾಗಿಯೂ ಬಂದರೆ ಅವನ ಜೊತೆಗೆ ಯುದ್ಧ ಮಾಡಲು ತನ್ನ ಮುಷ್ಟಿಯಷ್ಟಿದ್ದ ಸೈನ್ಯದೊಂದಿಗೆ ಸಿದ್ಧನಾದನು. ಆಗ ಆಲಂಗೀರ ಬಾದಶಹನ ಕಡೆಯ ಕೆಲವರು ಬಂದು ಅವನಿಗೆ ಹೀಗೆ ಬುದ್ಧಿ ಮಾತು ಹೇಳಿದರು:

'ಏನಯ್ಯಾ ಎಷ್ಟು ಸೊಕ್ಕು ನಿನಗೆ? ನಿನ್ನ ತಲೆ ಕೆಟ್ಟಿದೆಯಾ? ನಿನಗೆ ಗೊತ್ತಿದೆಯಾ ನೀನು ಯಾರ ಜೊತೆಗೆ ಯುದ್ಧ ಮಾಡುತ್ತೀ ಎಂಬುದು? ಅವರು ಶಾಹನ್‌ಶಾಹ [ರಾಜರ ರಾಜ] ಆಗಿದ್ದಾರೆ. ನಿಮ್ಮ ಇಡೀ ರಾಜ್ಯ ಅವರ ಕೈವಶವಾಗಿದೆ. ಮತ್ತು ಈ ರಾಜ್ಯದ ರಾಜ ಮತ್ತು ನಿಮ್ಮ ಒಡೆಯ ಕೈದಿಯಾಗಿ ಅವನ ಸೆರೆಮನೆಯಲ್ಲಿದ್ದಾನೆ. ಹಿಗಿದ್ದಾಗ ನೀನು ಯಾರ ಸಲುವಾಗಿ ಈ ತೋಪು, ಬಂದೂಕು, ಬಿಲ್ಲು ಬಾಣ ತೆಗೆದುಕೊಂಡು ಯುದ್ಧ ಮಾಡುತ್ತಿದ್ದೀ? ನೀನು ಒಂದು ವೇಳೆ ಬುದ್ಧಿವಂತನಿದ್ದರೆ, ಇಲ್ಲಿಂದ ಹೊರಟು ಬಂದು ನಮ್ಮ ಶಾಹೆನ್‌ಶಾಹನಿಗೆ ಶರಣು ಹೋಗು' ಎಂದರು. ಆಗ ಆತನು ಅವರ ಮಾತುಗಳಿಗೆ ಬೆಲೆ ಕೊಡದೆ, ಬಂದವರಿಗೆ ಅವಮಾನ ಮಾಡುತ್ತ ಅತ್ಯಂತ ಸೊಕ್ಕಿನಿಂದ ಹೀಗೆ ಹೇಳಿದನು. 'ನಾವು ನಮ್ಮ ದೊರೆಯನ್ನು ಬಿಟ್ಟು ಇನ್ನೊಬ್ಬ ಯಾರನ್ನೂ ಗುರುತಿಸುವುದಿಲ್ಲ. ಎಲ್ಲಿಯವರೆಗೆ ನಮ್ಮ ಬಾದಶಹರು ಜೀವಂತರಾಗಿರುತ್ತಾರೋ, ಅಲ್ಲಿಯವರೆಗೂ ನಾನು ಅವರ ಸೇವೆಯಲ್ಲಿ ವಿಶ್ವಾಸಿಕನಾಗಿ ಜೀವ ಇರುವವರೆಗೂ ಅವರಿಗಾಗಿ ಹೋರಾಡುತ್ತೇನೆ ಆದರೆ ಇವನಿಗೆ ಶರಣು ಹೋಗುವುದಿಲ್ಲ.' ಈ ಮಾತನ್ನು ಕೇಳಿದ ಮೇಲೆ ಎಲ್ಲಿಯ ವರೆಗೆ ಸಿಕಂದರನು ಸೆರೆಮನೆಯಲ್ಲಿ ಜೀವಂತನಿರುತ್ತಾನೋ ನನಗೆ ತೊಂದರೆ ತಪ್ಪಿದ್ದಲ್ಲ ಎಂದು ಆಲಂಗೀರ ಬಾದಶಹನಿಗೆ ಖಾತ್ರಿಯಾಯಿತು.

ಹೀಗೂ ಹೇಳುತ್ತಾರೆ, ಒಂದು ವಿಷಯುಕ್ತ ಖರಬೂಜ ಹಣ್ಣನ್ನು ಆಲಂಗೀರಬಾದಶಹನು ತಂದು ಒಬ್ಬ ನೌಕರನಿಗೆ ಕೊಟ್ಟು ಇದನ್ನು ಸಿಕಂದರ ಬಾದಶಹನಿಗೆ ತಿನ್ನಿಸು ಎಂದು ಹೇಳಿ ಕಳಿಸಿದನು. ಸಿಕಂದರ ಆದಿಲಶಹನು ಖರಬೂಜ ಹಣ್ಣನ್ನು ತಿಂದ ತಕ್ಷಣ ಅವನ ನಾಜೂಕಾದ ಶರೀರದ ಬಣ್ಣವೆಲ್ಲ ಬದಲಾಯಿತು.

ಆಗ ಆಲಂಗೀರ ಬಾದಶಹನು ಮತ್ತೊಬ್ಬ ಸೇವಕನನ್ನು ಕಳಿಸಿ ಸಿಕಂದರನ ಕೊನೆಯ ಆಶೆಯನ್ನು ಕೇಳಿದನು. ಅದಕ್ಕೆ ಸಿಕಂದರನು, ಬಾದಶಹರು ನನಗೆ ಎಲ್ಲವನ್ನೂ ಕೊಟ್ಟಿದ್ದಾರೆ.

ಇನ್ನೇನನ್ನು ಬೇಡಲಿ ಎಂದನು. ಆದರೂ ಸಾಯುವ ಸಮಯದಲ್ಲಿ ನಿನ್ನ ಕೊನೆಯ ಆಶೆಯನ್ನು ಹೇಳು ಎಂದು ಮತ್ತೆ ಕೇಳಿದಾಗ ಸಿಕಂದರನು ಅತ್ಯಂತ ವಿಷಾದದಿಂದ, 'ನನ್ನ ಶವವನ್ನು ಬಿಜಾಪುರಕ್ಕೆ ತೆಗೆದುಕೊಂಡು ಹೋಗಿ ಅಲ್ಲಿರುವ ನನ್ನ ಗುರುಗಳಾದ ಮಿರ್ಜಾ ಶಾಹ ನಯೀಮುಲ್ಲಾರ ಸಮಾಧಿ ಸ್ಥಳದಲ್ಲಿ ಅವರ ಪಾದದ ಕೆಳಗೆ ದಫನ ಮಾಡಿರಿ' ಎಂದು ಹೇಳಿ ಕಳಿಸಿದನು. ಶಾಹ ನಯೀಮುಲ್ಲಾ ಅವರು ಶಾಹ ಹಾಶೀಮರ ಮೊಮ್ಮಗ ಮತ್ತು ಅವರ ಉತ್ತರಾಧಿಕಾರಿಗಳಾದ ಶಾಹ ಬುರ್ಹಾನ ಅವರ ಶಿಷ್ಯರಾಗಿದ್ದರು. ಸಿಕಂದರ ಆದಿಲಶಹನ ಸಮಾಧಿಯು ಸಾದಾ ಇದ್ದು ಬಯಲಿನಲ್ಲಿ ಇದೆ. ಅವನನ್ನು ದಫನ ಮಾಡಿದ್ದು ಹಿಜರಿ ಶಕೆ, ೧೧೧೧ ಮತ್ತು (ಕ್ರಿ.ಶ. ೧೭೦೦) ಸಿಕಂದರ ಆದಿಲಶಹನು ಈ ಕತ್ತಲೆಯ ಜಗತ್ತಿನಿಂದ ಶಾಶ್ವತ ಬೆಳಕಿನ ಮಹಲಿಗೆ ಹೋದದ್ದನ್ನು ಒಬ್ಬ ಕವಿಯು ಹೀಗೆ ಹೇಳಿದ್ದಾನೆ.

'ಈ ಜಗತ್ತಿನಿಂದ ಯಾವಾಗ ಸಿಕಂದರನು ಹೊರಟು ಹೊದನೋ ಅಂದು ಎಲ್ಲ ಜನರ ಎದೆಯಲ್ಲಿಯ ದುಃಖ ಹೊರ ಬಂದಿತು.'

ಸಿಕಂದರ ಆದಿಲಶಹನ ಬಗ್ಗೆ ಒಂದಿಷ್ಟು ವರ್ಣನೆ

ಸಿಕಂದರನು ಬಹು ದೊಡ್ಡ ರಾಜ್ಯವೆಂಬ ತೋಟದಲ್ಲಿ ಹಚ್ಚಿದ ಎಳೆಯ ಸಸಿಯಾಗಿದ್ದನು. ಸುಂದರ ಅಗಸದಲ್ಲಿಯ ಒಂದು ನಕ್ಷತ್ರವಾಗಿದ್ದನು. ಆದರೆ ಅವನ ಜೀವನದಲ್ಲಿ ರಾಜಸುಖ ದೊರೆಯಲಿಲ್ಲ. ಜಗದ ಬಿಸಿ ಗಾಳಿ ಬೀಸಿದಾಗ ಎಳೆಯ ಸಸಿ ಒಣಗಿ ಹೋಯಿತು. ರಾಜ್ಯದ ಸಿಂಹಾಸನದ ಮೇಲೆ ಕುಳಿತಿದ್ದರೂ ಅವನ ದೈವ ಕೆಟ್ಟದಾಗಿತ್ತು. ಅವನ ಹೆಸರಿನ ಮುಂದೆ 'ಬಾದಶಹ' ಎಂದು ಬಂದಿತಾದರೂ ಅವನು ರಾಜ್ಯವನ್ನು ಆಳಲಿಲ್ಲ. ಅವನ ಹೆಸರಿನ ಹಿಂದೆ ಆದಿಲಶಾಹ ಎಂಬ ಶಬ್ದ ಇತ್ತು ಆದರೆ ಅವನ ಹತ್ತಿರ ಯಾವ ಅಧಿಕಾರವೂ ಇರಲಿಲ್ಲ. ೧೪ ವರುಷ ರಾಜ್ಯದ ಸಿಂಹಾಸನದ ಮೇಲೆ ಕುಳಿತಿದ್ದರೂ ದರಬಾರದ ಅಮೀರರು, ವಜೀರರು ಮತ್ತು ಅಧಿಕಾರಿಗಳ ಸೂತ್ರದ ಬೊಂಬೆಯಂತಿದ್ದನು. ೩೩ ವರುಷ ಬದುಕಿದ್ದರೂ ಒಂದು ಕ್ಷಣ ಕೂಡ ಅವನಿಗೆ ಸುಖ ಶಾಂತಿ ದೊರೆಯಲಿಲ್ಲ. ಈ ಜಗತ್ತಿನಲ್ಲಿ ದುರ್ದೈವನಾಗಿ ಅವನಿಗೆ ಯಾವ ಸುಖ ಸಿಗದಿದ್ದರೂ ಮೇಲಿನ ಜಗತ್ತಿನಲ್ಲಿ ಎಲ್ಲ ಸುಖಗಳೂ ದೊರೆಯಲಿ ಎಂದು ಆಶಿಸುವೆ. ಕಾಣುವ ಜಗತ್ತಿನ ರಾಜ್ಯದ ಅಧಿಕಾರ ಅವನಿಗೆ ಸಿಗದಿದ್ದರೂ ಕಾಣದ ಒಳ ಮನಸ್ಸಿನ ಜಗತ್ತಿನಲ್ಲಿ ಅವನೊಬ್ಬ ಬಹು ದೊಡ್ಡ ದೊರೆಯನಾಗಿದ್ದನು. ಅವನ ಮನಸ್ಸು ನಿಷ್ಕಳಂಕವಾಗಿತ್ತು. ಹೀಗಾಗಿ ಮನಸ್ಸಿನ ಜಗತ್ತಿನಲ್ಲಿ ಅವನು ಸುಖ ಪಡೆದನು.

ಸಿಕಂದರನು ಸೂಫೀ ಪಂಥದವನಾಗಿದ್ದನು. ಅತಿ ದೊಡ್ಡ ಸೂಫೀ ಸಂತನ ಶಿಷ್ಯನಾಗಿ ತನ್ನ ಮನಸ್ಸಿನ ಜಗತ್ತನ್ನು ನಿರ್ಮಲಗೊಳಿಸಿದ್ದನು. ಸೂಫೀ ಸಂಗದಲ್ಲಿ ಸೇರಿಕೊಂಡು ಒಳಜಗತ್ತಿನ ರಾಜ್ಯದ ಬಾದಶಹನಾಗಿದ್ದನು. ಅವನು ಆ ಕಾಲದ ಬಹು ದೊಡ್ಡ ಸೂಪೀ ಸಂತರಾದ ಶಾಹ ನಯೀಮುಲ್ಲಾ ಅವರ ಶಿಷ್ಯನಾಗಿದ್ದನು. ಅವರು ಹಾಕಿ ಕೊಟ್ಟ

ಮಾರ್ಗದಲ್ಲಿ ನಡೆಯುತ್ತಿದ್ದನು. ಆ ಮಾರ್ಗವು ಅಲ್ಲಾಹನ ಕಡೆಗೆ ಒಯ್ಯುತ್ತಿತ್ತು. ಮತ್ತು ಅವನು ತನ್ನ ಕಾಲದ ದೊಡ್ಡ ದೊಡ್ಡ ಸೂಫೀ ಸಂತರ ಜೊತೆಗೆ ಕಾಲವನ್ನು ಕಳೆಯುತ್ತಿದ್ದನು.

ಜ್ಞಾನಿ ಶೇಖ ಮಹಮೂದ ಬಹರೀ, ವಿದ್ವಾಂಸರಲ್ಲಿ ವಿದ್ವಾಂಸನಾಗಿದ್ದನು. ಈತ ಬರೆದಿರುವ 'ಜಹ್ವೇರೂಹ' ಗ್ರಂಥದಲ್ಲಿ ಹೀಗೆ ಬರೆಯುತ್ತಾನೆ: "ವಿಜಾಪುರದ ಯಜಮಾನರಲ್ಲಿಯ ಕೊನೆಯ ವ್ಯಕ್ತಿ ಸಿಕಂದರ ಬಾದಶಹ ಆತನು ಕಾರಣಾಂತರಗಳಿಂದ ನನ್ನ ಸಹವಾಸದಲ್ಲಿದ್ದನು. ನಾನು ಸಿಕಂದರ ಬಾದಶಹನ ಖಾಸಾ ಡೇರೆಯಲ್ಲಿಯೇ ಒಂದೆರಡು ವರ್ಷ ಇದ್ದೆನು. ಆ ದಿನಗಳಲ್ಲಿ ಒಂದು ದಿನ, ಸಿಕಂದರ ಬಾದಶಹನು ಬಹಳ ಗೌರವದಿಂದ ನನ್ನನ್ನು ವಿಚಾರಿಸಿದನು. 'ಜೀವ ಎಂದರೆ ಯಾವ ಪದಾರ್ಥ? ಮತ್ತು ಜೀವ ಎಂದು ಯಾತಕ್ಕೆ ಅನ್ನುತ್ತಾರೆ? ಈ ಲಕ್ಷಣಗಳನ್ನು ಹೇಳಿರಿ' ಎಂದು ವಿಚಾರಿಸಿದನು. ಆಗ ನಾನು ಹೇಳಿದೆ 'ಜೀವ ಎಂಬ ಒಂದು ಪದಾರ್ಥ ಇಲ್ಲ. ಯಾರಾದರೂ ಜೀವದ ಅತ್ಯಂತ ಸೂಕ್ಷ್ಮ ಲಕ್ಷಣಗಳನ್ನು ಹೇಳುತ್ತ ಪ್ರತ್ಯಕ್ಷ ತೋರಿಸುವೆ ಎಂಬಂಥ ಪದಾರ್ಥವಲ್ಲ. ಜೀವ ಎಂದರೆ ಅಲ್ಲಾನ ಪ್ರತಿಬಿಂಬ ಅಲ್ಲಾನನ್ನು ಚಿಂತನೆಯಿಂದ ಮತ್ತು ವಿಚಾರಗಳಿಂದ ಸತ್ಯವೆಂದು ಮನ್ನಿಸುವಂತೆ ಜೀವವನ್ನು ಮನ್ನಿಸುವುದು. ಆದರೆ ಅವನನ್ನು ಪ್ರತ್ಯಕ್ಷವಾಗಿ ತಿಳಿದುಕೊಳ್ಳುವ ಗತಿ ಅಲ್ಲಿಯವರೆಗೂ ಮುಟ್ಟುವುದಿಲ್ಲ. ತರ್ಕದ ಕುದುರೆ ಜ್ಞಾನದ ಅರಣ್ಯದಲ್ಲಿ ಓಡಲು ಸಾಧ್ಯವಾಗುವುದಿಲ್ಲ. ಅಂದರೆ, ಜೀವದ ರೂಪ ವರ್ಣನೆ ಮಾಡುವಲ್ಲಿ ತರ್ಕದ ಗತಿಯು ಓಡುವುದಿಲ್ಲ. ಸದ್ಗುರುವು ಕೃಪೆ ಮಾಡಿ, ಯಾರಿಗೆ ಜೀವದ ಲಕ್ಷಣಗಳ ಉಪದೇಶವನ್ನು ಮಾಡುತ್ತಾನೆಯೋ ಮತ್ತು ಪ್ರತ್ಯಯಕ್ಕೆ ತಂದು ಕೊಡುತ್ತಾನೆಯೋ ಆತನ ನಾಲಗೆಯನ್ನು ಮೊದಲು ನಿಲ್ಲಿಸುತ್ತಾರೆ. ಅರ್ಥಾತ್ ಯಾರಿಗೆ ಜ್ಞಾನದ ಪ್ರತ್ಯಯವಾಗುತ್ತದೋ ಆತ ಶಬ್ದ ಪಾಂಡಿತ್ಯವನ್ನು ಮಾಡುವುದಿಲ್ಲ. ಜ್ಞಾನದಲ್ಲಿಯೆ ಮಗ್ನನಾಗಿರುತ್ತಾನೆ. ಒಂದು ವೇಳೆ ಯಾವನೊಬ್ಬ ಮೂರ್ಖನು ನಾನು ಜೀವವನ್ನು ಪ್ರತ್ಯಕ್ಷವಾಗಿ ನೋಡಿರುವೆ ಮತ್ತು ಇನ್ನೊಬ್ಬರಿಗೂ ಅದನ್ನು ತೋರಿಸಿಕೊಡುವೆ ಎಂಬುದಾಗಿ ಹೇಳಿದರೆ, ಅವನು ಸುಳ್ಳು ಹೇಳುತ್ತಿದ್ದಾನೆ. ಅವನಿಗೆ ಯಾವ ಜ್ಞಾನವೂ ಪ್ರತ್ಯಯವಾಗಿಲ್ಲ ಮತ್ತು ಅಲ್ಲಾನ ಮೇಲೆ ಬಿರುಗಾಳಿಯನ್ನೇ ಎಬ್ಬಿಸುತ್ತಿದ್ದಾನೆ. ಆತನ ನಾಲಗೆ ಕಡಿದು ಬೀಳಲಿ ಮತು ಆ ಅಸತ್ಯ ಮಾತುಗಳನ್ನು ಕೇಳಿ ಕಿವಿಯು ಹರಿದುಹೋಗಿ ಕಿವುಡನಾಗಲಿ. ಸಾಧು ಸಜ್ಜನರ ಸಂಗದಲ್ಲಿ ಗೌರವ ಮರ್ಯಾದೆ ಇದೆ. ದುಷ್ಟರ ಸಂಗದಲ್ಲಿದ್ದರೆ ಎಲ್ಲಿಯೂ ಸ್ಥಳವಿಲ್ಲ. ಬುದ್ಧಿಹೀನನಿಗೆ ಸಾಧು ಸಂತರು ಹುಚ್ಚರಂತೆ ಕಾಣುತ್ತಾರೆ. ಜ್ಞಾನಿಯ ದೃಷ್ಟಿಯಿಂದ ಅವರೊಂದು ಸುಂದರ ಹೂವಿನಂತೆ ಕಂಡರೆ ಅಜ್ಞಾನಿಗೆ ಕೆಸರಿನಂತೆ ಕಾಣುತ್ತಾರೆ.

ಶೇಖ ಮಹಮೂದ ಬಹರಿಯು ಬರೆದ 'ಜಹ್ವೇರೆ ದುನಿಯಾ' ಗ್ರಂಥದಲ್ಲಿ ಹೀಗೂ ಬರೆದಿದ್ದಾನೆ. "ಸಿಕಂದರಖಾನ ಆದಿಲಶಾಹನು ವಿಜಾಪುರ ರಾಜ್ಯದ ಬಾದಶಹರುಗಳಲ್ಲಿಯ ಕೊನೆಯ ವ್ಯಕ್ತಿಯಾಗಿದ್ದು, ಆತನು ಫಕೀರನಿಗೆ ಅಂದರೆ ನನಗೆ, ಜಗತ್ತು ಎಂಬುದು ಯಾವ ಪದಾರ್ಥವಾಗಿದೆ? ಎಂದು ಕೇಳಿದನು. ಅದಕ್ಕೆ ನಾನು 'ದೇಹದ ಪರಿತ್ಯಾಗ

ಮಾಡಿದ ಮೇಲೆ ಪರಲೋಕದಲ್ಲಿ ಉಪಯೋಗ ಬೀಳದಿರುವ ಪದಾರ್ಥಕ್ಕೆ ಜಗತ್ತು (ದುನಿಯಾ)ಎಂದು ಹೆಸರು.' ಎಂದು ಹೇಳಿದಾಗ ಸಿಕಂದರ ಬಾದಶಹನು 'ಹೀಗೆ ಎಲ್ಲರೂ ಹೇಳುತ್ತಾರೆ, ಇದು ಸತ್ಯ, ಆದರೆ ನನ್ನ ಮನಸ್ಸಿಗೆ ಮುಟ್ಟುವಂತೆ ಏನಾದರೂ ಗುರುತು ಮಾಡಿ ಕೃಪೆಯಿಟ್ಟು ಹೇಳಿರಿ ಮತ್ತು ಅದರಿಂದ ನಾನು ಜ್ಞಾನಿಯಾಗಿ ಈ ವಿಷಯದಲ್ಲಿ ತಲ್ಲೀನನಾದೇನು' ಎಂದನು. ಆಗ ನಾನು ಹೇಳಿದೆ–'ಯಾವ ಪದಾರ್ಥವು ಕೈಯಲ್ಲಿ ಬರುತ್ತದೆಯೋ ಮತ್ತು ದೃಷ್ಟಿಗೆ ಕಾಣುತ್ತದೆಯೋ, ಚಿತ್ತದಲ್ಲಿ ಮೂಡುತ್ತದೆಯೋ ಮತ್ತು ಯಾವ ಪದಾರ್ಥಕ್ಕೆ ಹೆಸರು ಮತ್ತು ಚಿಹ್ನೆಗಳ ನಿರ್ದೇಶನವಿದೆಯೋ ಆಗ ಆ ಪದಾರ್ಥವು 'ಮುಲ್ಕ'ದ ಅವಸ್ಥೆಯಲ್ಲಿರಲಿ, 'ಮಲಕೂ'ದ ದಶೆಯಲ್ಲಿರಲಿ, ಅದಕ್ಕೆ (ದುನಿಯಾ) ಜಗತ್ತು ಎಂದು ಹೇಳಬೇಕು. ಇಲ್ಲಿ 'ಮುಲ್ಕ' ಅಂದರೆ ಸೂರ್ಯ ಚಂದ್ರರಿಂದ ಭೂಮಿಯವರೆಗೆ ದೃಷ್ಟಿಗೆ ಬೀಳುವ ಪದಾರ್ಥಗಳು. ಮಲಕೂತ ಅಂದರೆ ದೃಷ್ಟಿಗೆ ಕಾಣದಿರುವ ಅಗೋಚರ ಪದಾರ್ಥಗಳು, ಎಷ್ಟೆಲ್ಲ ಇದೆಯೋ ಅದೆಲ್ಲ 'ದುನಿಯಾ' ಎಂಬ ಪದಾರ್ಥವಾಗಿದೆ. ಅದರ ಹೊರತಾಗಿ ಎಷ್ಟೆಲ್ಲ ಇದೆಯೋ ಅದೆಲ್ಲ 'ದೀನ' ಎಂಬ ಪದಾರ್ಥವಾಗಿದೆ' ಈ ರೀತಿ ದೀನ ಮತ್ತು ದುನಿಯಾಗಳಲ್ಲಿ ಭೇದವಿದೆ ಎಂಬುದಾಗಿ ಹೇಳಿದೆನು. ಈ ಮಾತುಗಳನ್ನು ಕೇಳಿ ಸಿಕಂದರ ಬಾದಶಹನು ಆನಂದಪಟ್ಟನು.

ಇದೆಲ್ಲದರಿಂದ ಗೊತ್ತಾಗುವ ಸಂಗತಿಯೆಂದರೆ ಸಿಕಂದರನು ತನ್ನ ಜೀವನದುದ್ದಕ್ಕೂ ಸೂಫಿ ಸಂತರು, ಸಾಧುಗಳು, ಫಕೀರರ ಮಧ್ಯೆಯೇ ಕಳೆದಿದ್ದನು. ದೇವರು ಅವನಿಗೆ ಒಳ್ಳೆಯದನ್ನು ಮಾಡಲಿ. ಅವನ ಆತ್ಮಕ್ಕೆ ಶಾಂತಿ ಇರಲಿ. ಅಲ್ಲಾಹನ ಕೃಪೆಯಿಂದ ಬಿಜಾಪುರ ಆದಿಲಶಾಹಿಗಳ ಸಂಕ್ಷಿಪ್ತ ಚರಿತ್ರೆಯನ್ನು ಬರೆದಿರುವೆ. ಇದರಲ್ಲಿ ಬಂದ ಹಲವು ಸಂಗತಿಗಳು ಅಪರೂಪದ್ದಾಗಿವೆ. ಇಲ್ಲಿಯ ಕಟ್ಟಡಗಳು, ರಾಜರು ಗೆಲ್ಲುವ ಕೋಟೆಗಳ ವಿವರ ಇದೆ. ಈ ಚರಿತ್ರೆಯನ್ನು ಓದುವವರಲ್ಲಿ ನನ್ನ ವಿನಂತಿ ಏನೆಂದರೆ, ಇದರಲ್ಲಿ ಬಂದಂಥ ಘಟನೆಗಳಿಂದ ವಾಚಕರು ಒಂದು ಪಾಠವನ್ನು ಕಲಿಯಬೇಕು. ಈ ಜಗತ್ತು ಶಾಶ್ವತವಲ್ಲ. ಕೃತಘ್ನವಾಗಿದೆ ಎಂಬುದನ್ನು ಇದರಿಂದ ಪಾಠ ಕಲಿಯಿರಿ. ಎಚ್ಚರಗೇಡಿತನದಿಂದ ಎಚ್ಚರವಾಗಿ ಆ ಪರಮಾತ್ಮನನ್ನು ಧ್ಯಾನಿಸಿರಿ.

- ಈ ಜಗತ್ತು ಅಶಾಶ್ವತ, ಇಲ್ಲಿ ಯಾರಿಗೂ ಶಾಶ್ವತ ಸ್ಥಳ ಇಲ್ಲ.
- ಇಲ್ಲಿಯ ಚರಾಚರ ವಸ್ತುಗಳೆಲ್ಲವೂ ಅಶಾಶ್ವತ, ಶಾಶ್ವತ ಅವನೊಬ್ಬನೇ ಅಲ್ಲಾಹ.
- ಎಲ್ಲರೂ ಹೋಗುವವರೇ ಎಂಬುದನ್ನು ತಿಳಿ, ಒಂದು ದಿನ ಎಲ್ಲವೂ ನಾಶವಾಗುತ್ತದೆ.
- ಆ ಯೂಸುಫನೆಲ್ಲಿ ಹೋದ? ದೊಡ್ಡ ಮಹಡಿಯ ಇಸ್ಮಾಯಿಲನೆಲ್ಲಿ? ಗೌರವಾನ್ವಿತ ಇಬ್ರಾಹಿಮ, ಪ್ರಸಿದ್ಧನಾದ ಅಲಿ ಎಲ್ಲಿ ಹೋದರು? ಜಗದ್ಗುರುವಾದ ಇಬ್ರಾಹಿಮನೆಲ್ಲಿ? ಸುಲ್ತಾನ ಮೊಹಮ್ಮದ ದೊಡ್ಡ ಬಾದಶಹನಾಗಿದ್ದ, ಭವ್ಯ ಗುಮ್ಮಟವನ್ನು ಕಟ್ಟಿಸಿದ, ಒಂದು ದಿನ ಅವನ ಗುಮ್ಮಟವೂ ಇರುವುದಿಲ್ಲ, ಅವನ ಗುರುತೂ ಇರುವುದಿಲ್ಲ.

ಎರಡನೆಯ ಅಲಿ ಎಲ್ಲಿ ಹೋದ? ಸಿಕಂದರ ಬಾದಶಹನು ಎಲ್ಲಿರುವನು?

- ಅವರಲ್ಲಿಯ ಕೆಲವು ಒಳ್ಳೆಯ ಕೆಲಸಗಳ ಹೊರತು ಒಬ್ಬರೂ ಶಾಶ್ವತವಾಗಿ ಉಳಿಯಲಿಲ್ಲ.
- ಈ ಜಗತ್ತು ಅಶಾಶ್ವತ ಎಂಬುದರಲ್ಲಿ ಸಂಶಯವೇ ಇಲ್ಲ, ಇಲ್ಲಿರುವವನಿಗೆ ಶಾಶ್ವತ ಜೀವನವಿಲ್ಲ.
- ಈ ಜಗತ್ತು ಯಾರೊಂದಿಗೂ ವಿಶ್ವಾಸದಿಂದ ಇರುವುದಿಲ್ಲ. ಅದು ಕೃತಘ್ನ ಜಗತ್ತು ಅದಕ್ಕೆ ನಿನ್ನ ಮನಸ್ಸು ಕೊಡಬೇಡ.
- ಜಾಣನಾಗಿದ್ದರೆ ಅಹಮ್ಮದನ ಈ ಮಾತುಗಳನ್ನು ಕೇಳು. ದಿನರಾತ್ರಿ ಅಲ್ಲಾಹನ ಧ್ಯಾನದಲ್ಲಿರು.

ಈ ಚರಿತ್ರೆಯನ್ನು ಬರೆಯಲು ಹೇಳಿದವನು ಅಬುಲ್ ಕಾಸೀಮ ಖಾನ. ಅವನು ಈ ಕೃತಿಯ ಬಗ್ಗೆ ಹೀಗೆ ಹೇಳುತ್ತಾನೆ.

೧. ಬಿಜಾಪುರದಲ್ಲಿ ಎಂಟು ಜನ ಬಾದಶಹರಾದರು. ಅವರೆಲ್ಲರೂ ಒಂದೇ ವಂಶದ ಕುಡಿಗಳಾಗಿದ್ದರು.

೨. ಅಹಮದ ಅಲೀಖಾನನಿಂದ ಬರೆದ ಈ ಚರಿತ್ರೆ ತುಂಬಾ ಪ್ರಸಿದ್ಧವಾಯಿತು.

೩. ಕಾಣದ ಅಲ್ಲಾಹನು ಅಹಮದನ ತಲೆಯಲ್ಲಿ ಶಕ್ತಿ ತುಂಬಿದನು. ಆಗ ಬಾದಶಹರ ಈ ಪುಷ್ಪಗುಚ್ಛ ನಿರ್ಮಾಣವಾಯಿತು.

೪. ಕಾಸೀಮಖಾನ ಬಹಾದ್ದೂರನು ಆದೇಶಿಸಿದಂತೆ ಅಹಮದ ಅಲೀಖಾನನು ಈ ಚರಿತ್ರೆಯನ್ನು ಬರೆದನು.

೫. ಹೀಗೆ ಬರೆಯಬೇಕೆಂದು ಆಕಾಶವಾಣಿಯೊಂದು ನುಡಿಯಿತು. ಆಗ ಈ ಹೂಗುಚ್ಛ ಸಿದ್ಧವಾಯಿತು.

೬. ಕಾಸೀಮಖಾನ ಬಹಾದ್ದೂರ ತಂದೆ ನವಾಬ ದಿಲೇರಖಾನರು ಶಹನೂರದಲ್ಲಿ ಈ ಹೂಗುಚ್ಛವನ್ನು ಪ್ರಕಟಿಸಿದರು.

೭. ಮೀರ ಖ್ವಾಜಾ ಅಲೀ ಅಹಮದನು ಈ ಚರಿತ್ರೆಯ ಲೇಖಕನು.

೮. ಈ ಚರಿತ್ರೆಯನ್ನು ಬರೆದ ವರುಷ ಹಿಜರಿ ಶಕ ೧೨೭೯.

■

ಫಿತೂರ್ ಖಾನ ಲ್ಯಾರಿ

ವಿರಚಿತ

ತಾರೀಖೆ ಹಫ್ತಕುರ್ಸಿ

[ಪರ್ಶಿಯನ್]

ಅನುವಾದಕರು

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ
ಮೌಲಾನಾ ಮಹಬೂಬುರ್ ರಹಮಾನ ಮದನಿ

*

ನಿರ್ದೇಶಕರ ಮಾತು

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ಫಿತೂರಖಾನ ವಲ್ಲದ ಅಸದಖಾನ ಲ್ಯಾರಿಯು ಬೆಳಗಾವಿಯ ಪ್ರಸಿದ್ಧ ಅಸದಖಾನ ಲ್ಯಾರಿಯ ಮಗನು. ಶತಾಯುಷಿಯಾಗಿ ಮರಣಹೊಂದಿದ ಅಸದಖಾನ ಹಾಗೂ ಆತನ ಮಗನಿಗೆ ಬಿಜಾಪುರದ ಇತಿಹಾಸವು ಚೆನ್ನಾಗಿ ಗೊತ್ತಿತ್ತು. ಈ ವಿಷಯವು ಎರಡನೆಯ ಅಲಿ ಆದಿಲಶಹನಿಗೂ ಆತನ ಕುಟುಂಬದ ಜನರಿಗೂ ಗೊತ್ತಿತ್ತು. ಅವರು ಫಿತೂರಖಾನನಿಗೆ ಇತಿಹಾಸವನ್ನು ಬರೆಯಲು ಹೇಳಿದರು. ಅದರಂತೆ ಆತನು ತನಗೆ ನೆನಪಿದ್ದಷ್ಟನ್ನು ಬರೆಯಲು ತೊಡಗಿದನು. ಮೂಲತಃ ಅಸದಖಾನ ಲ್ಯಾರಿಯೇ ಇದನ್ನು ಬರೆದಿರಬೇಕೆಂಬ ಊಹೆಯೂ ಇದೆ. ಜುಬೇರಿಯ 'ಬಸಾತೀನೆ ಸಲಾತೀನೆ'ದಲ್ಲಿ ಬರುವ ಮೀರ್ ಇಬ್ರಾಹಿಮ ಅಸದಖಾನೀ ಎಂಬ ಹೆಸರೂ, ಇತರತ್ರ ಅವನ ಹೆಸರಿನಲ್ಲಿ ಬರುವ 'ಅಹವಾಲೆ ಸಲಾತೀನ ಬಿಜಾಪುರ' ಎಂಬ ಗ್ರಂಥವೂ 'ಹಪ್ತಕುರ್ಸಿ'ಯು ಮೂಲರೂಪವಾಗಿರಬೇಕೆಂಬ ಅಭಿಪ್ರಾಯವೂ ಇದೆ. ಈ ಫಿತೂರಖಾನನೆಂಬವನು ಅನಂತರ ಬಂದವನಿರಬೇಕು. ಯಾಕೆಂದರೆ ಎರಡನೆಯ ಅಲಿ ಆದಿಲಶಹನ ಆಣತಿಯಂತೆ ಬರೆದ 'ಹಪ್ತಕುರ್ಸಿ' ಅವನ ಕಾಲದ ವರೆಗಿನ ವಿಷಯಗಳಿಗೆ ಮಾತ್ರ ಸೀಮಿತವಾಗಿರಬೇಕಾಗಿತ್ತು. ಆದರೆ ಇಲ್ಲಿ ಔರಂಗಜೇಬನು ಬಿಜಾಪುರವನ್ನು ವಶಪಡಿಸಿಕೊಂಡದನ್ನು, ಆತನು ಮುಲ್ಕ ಮೈದಾನ ತೋಪಿನ ಮೇಲೆ ಶಾಸನವನ್ನು ಕೆತ್ತಿಸಿದನ್ನೂ ದಾಖಲಿಸಿದ್ದಾನೆ. ಜೊತೆಗೆ ಔರಂಗಜೇಬನ ಮರಣವನ್ನೂ ದಾಖಲಿಸುತ್ತಾನೆ. ಎರಡನೆಯ ಅಲಿ ಆದಿಲಶಹನ ಆಸ್ಥಾನದಲ್ಲಿ ರಚಿತಗೊಂಡ ಈ ಕೃತಿ, ಔರಂಗಜೇಬನ ಮರಣಾನಂತರ ಪರಿಷ್ಕೃತಗೊಂಡಿರಬೇಕು.

ಗ್ರಂಥದಲ್ಲಿ ಬಂದಿರುವ ವಿಷಯಗಳನ್ನು ನೋಡಿದಾಗ, ಅದರಲ್ಲಿ ಎರಡು ಭಾಗಗಳನ್ನಾಗಿ ವಿಂಗಡಿಸಬಹುದು. ಒಂದು ಘಟನೆಗಳ ಸಂಕ್ಷಿಪ್ತ ವರ್ಣನೆ, ನಂತರ ಶಕಾವಲಿ ಅಥವಾ ವರುಷಾನುಕ್ರಮಣಿಕೆ. ಬಿಜಾಪುರದ ಪ್ರತಿಯೊಬ್ಬ ಬಾದಶಹನು ಪಟ್ಟಕ್ಕೆ ಬಂದಂದಿನಿಂದ

ಆತನ ಮರಣದ ವರೆಗಿನ ಘಟನೆಗಳನ್ನು ತನ್ನ ಅಭಿಪ್ರಾಯದೊಂದಿಗೆ ನಮೂದಿಸುತ್ತಾನೆ. ಜೊತೆಗೆ ಅವನ ಕಾಲದಲ್ಲಿ ನಡೆದ ಪ್ರಮುಖ ಘಟನೆಗಳು, ಕಟ್ಟಿದ ಪ್ರಮುಖ ಕಟ್ಟಡಗಳು, ಕೆರೆಗಳು ಇತ್ಯಾದಿಗಳ ವರುಷಗಳನ್ನು ಪ್ರತ್ಯೇಕವಾಗಿ ನಮೂದಿಸುತ್ತಾನೆ.

ಗ್ರಂಥದಲ್ಲಿ ಬರುವ ವಿಷಯಗಳನ್ನು ಸ್ಥೂಲವಾಗಿ ಹೀಗೆ ಹೇಳಬಹುದು: ಗ್ರಂಥದ ಉಪಕ್ರಮ, ಯೂಸುಫನ ಪೂರ್ವವೃತ್ತಾಂತ, ಯೂಸುಫನ ಕಾಲದಲ್ಲಿಯ ಮಾಹಿತಿ, ಇಸ್ಮಾಯಿಲ, ಮಲ್ಲೂ, ಮೊದಲ ಇಬ್ರಾಹೀಮ, ಮೊದಲ ಅಲಿ, ಎರಡನೆಯ ಇಬ್ರಾಹೀಮ, ಮಹಮ್ಮದ ಮತ್ತು ಎರಡನೆಯ ಅಲಿ ಆದಿಲಶಹರ ಕಾಲದಲ್ಲಿ ನಡೆದ ಘಟನೆಗಳ ವಿವರಣೆ ಕಾಲಾನುಕ್ರಮದಲ್ಲಿ ಇದೆ. ಅನಂತರ ಸಿಕಂದರನ ಕಾಲದಲ್ಲಿ ರಾಜ್ಯ ಔರಂಗಜೇಬನ ವಶವಾದ, ಔರಂಗಜೇಬನ ಮರಣದ ಉಲ್ಲೇಖವಿದೆ. ಪ್ರತಿಯೊಬ್ಬ ಬಾದಶಹರ ವಯಸ್ಸು, ರಾಜ್ಯಭಾರ ಕಾಲಗಳನ್ನು ಪ್ರತ್ಯೇಕವಾಗಿ ಕೊಟ್ಟಿದ್ದಾನೆ. ಜೊತಗೆ ಬಿಜಾಪುರದಲ್ಲಿರುವ ಬಜಾರುಗಳ ಹೆಸರುಗಳು, ಉಪನಗರಗಳು, ಬಾವಿಗಳು, ಮುಲ್ಕ ಮೈದಾನ ತೋಪಿನ ವಿವರ ಇತ್ಯಾದಿಗಳು ಸೇರಿಕೊಂಡಿವೆ. ಕಾಲಾನುಕ್ರಮ ವರುಷಗಳಾಗಲೀ, ಅವರ ಕಾಲದಲ್ಲಿ ಕಟ್ಟಿದ ಕಟ್ಟಡಗಳ ಉಲ್ಲೇಖವಾಗಲೀ ಒಂದಕ್ಕೊಂದು ಹೊಂದಾಣಿಕೆ ಇಲ್ಲ.

ಪರ್ಶಿಯನ್ ಭಾಷೆಯ ಹಸ್ತಪ್ರತಿಯು ಹೈದರಾಬಾದಿನ ಸಾಲಾರಜಂಗ ವಸ್ತು ಸಂಗ್ರಹಾಲಯದಿಂದ ದೊರೆಯಿತು. ಕನ್ನಡಕ್ಕೆ ತರುವಲ್ಲಿ ಮೌಲಾನಾ ಮಹಿಬೂಬುರ್ ರಹಮಾನ ಮದನಿ ಅವರು ಸಹಾಯ ಮಾಡಿದ್ದಾರೆ. ಅವರಿಗೂ, ಸಾಲಾರಜಂಗ ವಸ್ತುಸಂಗ್ರಹಾಲಯದ ನಿರ್ದೇಶಕರಿಗೂ ಸಮಿತಿಯು ಆಭಾರಿಯಾಗಿದೆ.

■

ತಾರೀಖೆ ಹಪ್ತಕುರ್ಸಿ

[ಪರ್ಶಿಯನ್]

*

ತಾರೀಖೆ ಹಪ್ತಕುರ್ಸೀ

ಇದು ಬಿಜಾಪುರ ಆದಿಲಶಾಹಿಗಳ ಏಳು ಬಾದಶಹರುಗಳ ಇತಿಹಾಸ. ಯೂಸುಫ ಬೇಗ ಸಾವೀ ಯಿಂದ ಆರಂಭವಾಗಿ, [ನಂತರ ಅವನು ಯೂಸುಫ ಆದಿಲಶಹ ಎಂದು ಇತಿಹಾಸದಲ್ಲಿ ಪ್ರಸಿದ್ಧನಾದನು.] ಸಿಕಂದರ ಆದಿಲಶಹನ ವರೆಗಿನ ಚರಿತ್ರೆ ಇದಾಗಿದೆ.

ಈ ನಗರವು ಬೇರೆ ಬೇರೆ ನಗರಗಳಂತೆ ಮಹಮ್ಮದಪುರ ಎಂಬ ಹೆಸರಿನಿಂದ ಪ್ರಸಿದ್ಧವಾಗಿತ್ತು. ಈ ನಗರದ ಪ್ರತಿಯೊಬ್ಬ ರಾಜನ ಚರಿತ್ರೆಯನ್ನು ಇಲ್ಲಿ ಬರೆಯಲಾಗಿದೆ.

ಬೆಳಗಾವ ಎಂಬುದೊಂದು ಪ್ರಸಿದ್ಧ ನಗರವಿದೆ. ಇಲ್ಲಿ ಮಜಬೂತಾದ ಒಂದು ಕೋಟೆಯೂ ಇದೆ. ಇದು ವಿದ್ಯಾಪುರದ [ವಿಜಾಪುರ] ಅಧೀನದಲ್ಲಿತ್ತು. ಈ ಕೋಟೆಯ ಸರದಾರನು ಅಸದಖಾನ ಲ್ಯಾರಿ ಎಂಬುವವನಾಗಿದ್ದನು. ಆತನು ಇಲ್ಲಿಯ ಬಿಜಾಪುರದ ಬಹಳಷ್ಟು ಮಹಾನ್ ಬಾದಶಹರುಗಳ ಸೇವೆಯನ್ನು ಅತ್ಯಂತ ಪ್ರಮಾಣಿಕತೆಯಿಂದ ಮಾಡಿದ್ದನು. ಅದರಿಂದಾಗಿ ಅವನು ರಾಜ್ಯದಾಡಳಿತವನ್ನು ಮಾಡುವಲ್ಲಿ ಅತ್ಯಂತ ಅನುಭವಿಕನಾಗಿದ್ದನು. ಅವನಿಗೆ ಇತಿಹಾಸ ಮತ್ತು ಚರಿತ್ರೆಯ ಬಗ್ಗೆ ತುಂಬಾ ಇಷ್ಟವಿತ್ತು. ಅವನು ಇತಿಹಾಸವನ್ನು ಬರೆಯುವಲ್ಲಿ ಆನಂದ ಪಡುತ್ತಿದ್ದನು ಅದಕ್ಕಾಗಿ ಬಾದಶಹರುಗಳಿಂದ ಕಾಣಿಕೆಗಳನ್ನು ಪಡೆಯುತ್ತಿದ್ದನು.

ಮೊದಲ ಅಲಿ ಆದಿಲಶಹನಿಗೆ ಈತನ ಬಗ್ಗೆ ಇತಿಹಾಸ ಬರೆಯುತ್ತಾನೆಂಬುದು ಗೊತ್ತಾಗುತ್ತಿದ್ದಂತೆ, ತನ್ನ ದರಬಾರದಲ್ಲಿಯ ಪ್ರಸಿದ್ಧ ಅಮೀರನಾದ ಅಬ್ದುಲ್ ಮೊಹಮ್ಮದ ಊರ್ಫ ಶಾಹನವಾಜ ಖಾನನನ್ನು ಕರೆದು ನೀನು ಈ ರಾಜ್ಯದ ಬಹಳ ಹಳೆಯ ಸೇವಕನಿದ್ದು ಅನೇಕ ವಿಷಯಗಳು ನಿನಗೆ ಗೊತ್ತಿವೆ. ಕಾರಣ ನೀನು ಮಹಮ್ಮದಪುರದ ಹಪ್ತಕುರ್ಸಿಯ ಇತಿಹಾಸವನ್ನು ಬರೆಯಬೇಕು ಎಂದು ಆದೇಶಿಸಿದನು. ಆಗ ಆತನು ತನಗಿಂತ ಮೊದಲು ಬರೆದ ಇತಿಹಾಸಗಳ ವಿಷಯಗಳನ್ನು ಸಂಗ್ರಹಿಸಿದನು ಮತ್ತು ಬಿಜಾಪುರದ ಅನೇಕ ಘಟನೆಗಳ ವಿವರಗಳನ್ನು ಸಂಗ್ರಹಿಸಿದನು. ಎರಡನೆಯ ಇಬ್ರಾಹಿಮ

ಆದಿಲಶಹನ ಕಾಲದಲ್ಲಿ ಈ ನಗರದ ಹೆಸರು ವಿದ್ಯಾಪುರ ಎಂದಾಗಿತ್ತು. ನಂತರ ಮಹಮ್ಮದ ಆದಿಲಶಹನ ಕಾಲದಲ್ಲಿ ಈ ನಗರದ ಹೆಸರು ಮಹಮ್ಮದಪುರ ಎಂದಾಗಿತ್ತು. ಈ ಎಲ್ಲ ಹೆಸರುಗಳು ಬೇರೆ ಬೇರೆಯಾಗಿದ್ದರೂ, ಒಂದೇ ಮನೆತನದ ಯುಸುಫ ಆದಿಲಖಾನನ ಆದಿಲಶಾಹೀ ಚರಿತ್ರೆಯೇ ಆಗಿದೆ. ಈ ರಾಜ್ಯದ ಗಣ್ಯ ವ್ಯಕ್ತಿಗಳ, ಅಮೀರರ, ವಜೀರರ ಇತಿಹಾಸ ಮತ್ತು ಚರಿತ್ರೆಯನ್ನು 'ಹಪ್ತ ಕುರ್ಸಿ' ಎಂಬ ಪುಸ್ತಕದಲ್ಲಿ ಬರೆಯಲಾಗಿದೆ. ಪ್ರತಿಯೊಬ್ಬ ಬಾದಶಹನಿಗೆ ಒಂದು ಅಧ್ಯಾಯದಂತೆ ಏಳು ಅಧ್ಯಾಯಗಳಲ್ಲಿ ಈ ಪುಸ್ತಕವನ್ನು ಬರೆಯಲಾಗಿದೆ.

■

*

ಯೂಸುಫ ಬೇಗ ಸಾವೀ, ಅನಂತರ ಯೂಸುಫ ಆದಿಲಶಹ ಎಂದು ಪ್ರಸಿದ್ಧನಾದನು:

ಯೂಸುಫ ಆದಿಲಶಹನ ವಿವರ ಏನಿದೆ ಎಂದರೆ, ಬೀದರ ಶಹರದಲ್ಲಿ, ಅದರ ಮೊದಲ ಹೆಸರು ಮೊಹಮ್ಮದಾಬಾದ ಎಂದು ಇತ್ತು. ಅಲ್ಲಿ ಸುಲ್ತಾನ ಮಹಮೂದ ಬಹಮನಿ ಎಂಬವನು ರಾಜ್ಯವಾಳುತ್ತಿದ್ದನು. ಒಂದು ದಿನ ಇರಾನದ ಒಬ್ಬ ಪಹಿಲವಾನನು ಎಲ್ಲ ದೇಶ ವಿದೇಶಗಳನ್ನು ತಿರುಗಿ, ಹಿಂದೂಸ್ತಾನಕ್ಕೆ ಬಂದು ಸುಲ್ತಾನ ಮಹಮೂದ ಬಹಮನಿಯ ರಾಜಧಾನಿಗೆ ಬಂದಿದ್ದನು ಮತ್ತು ಅವನ ದರಬಾರದಲ್ಲಿ ಹಾಜರಾದನು. ಅವನ ಜೊತೆಗೆ ೭೦೦ ಶಿಷ್ಯರಿದ್ದರು. ಪ್ರತಿಯೊಬ್ಬರು ಬೇರೆ ಬೇರೆ ದೇಶದ ಯಾವುದೇ ಪಹಿಲವಾನರಗಿಂತಲೂ ಶಕ್ತಿವಂತರಾಗಿದ್ದರು. ಇಂಥ ಶಿಷ್ಯರನ್ನು ತೆಗೆದುಕೊಂಡು ಬೀದರದ ಬಾದಶಹನ ಎದುರಿಗೆ ಬಂದು ಹೀಗೆ ಹೇಳಿದನು. ನಾನು ನಿಮ್ಮ ದರಬಾರದಲ್ಲಿ ನನ್ನ ಕುಸ್ತಿಯ ಯೊಗ್ಯತೆಯನ್ನು ತೋರಿಸಲು ಬಂದಿದ್ದೇನೆ. ನಿಮ್ಮಲ್ಲಿ ಯಾರಾದರೂ ನನ್ನ ಜೊತೆಗೆ ಸ್ಪರ್ಧೆ ಮಾಡಲು ಇದ್ದರೆ ಅವರನ್ನು ಕರೆಯಿರಿ ಎಂದು ಹೇಳಿದನು.

ಪ್ರಪಂಚದಾದ್ಯಂತ ಅವನ ಜೊತೆಗೆ ಕುಸ್ತಿ ಆಡಿದವರೆಲ್ಲ ಸೋತಿದ್ದಾರೆ. ಎಲ್ಲರನ್ನೂ ಗೆದ್ದು ಇಲ್ಲಿಗೆ ಅವನು ಬಂದಿದ್ದನು. ಅಂಥ ಪಹಿಲವಾನನ ಜೊತೆಗೆ ಈ ಬೀದರ ಶಹರಿನಲ್ಲಿ ಕುಸ್ತಿ ಆಡಲು ಬೀದರ ಸುಲ್ತಾನನಿಗೆ ಯಾರೂ ದೊರೆಯಲಿಲ್ಲ. ಆಗ ಸುಲ್ತಾನನು ತನ್ನ ದರಬಾರದ ಜನರಿಗೆ ಕೇಳಿದನು, ಈ ಇರಾನದ ಪಹಿಲವಾನನ ಜೊತೆಗೆ ಕುಸ್ತಿ ಆಡಲು ಯರಾದರೂ ಇದ್ದರೆ ಅವರನ್ನು ಕರೆಯಿರಿ ಎಂದು ಹೆಳಿದನು. ಆಗ ಕೆಲವರು ಹೀಗೆ ಹೇಳಿದರು. ಇಲ್ಲಿ ಒಬ್ಬ ಸರನೌಬತ್ ಎಂಬವನಿದ್ದು ಅವನ ಹೆಸರು ಹುಸೇನ ಆಕಾ ರೂಮಿ ಪಹಿಲವಾನ ಎಂದು ಇದೆ. ಅವನ ಆಖಾಡಾದಲ್ಲಿ ಅನೇಕ ತರುಣರು ಕುಸ್ತಿಯನ್ನು ಕಲಿಯುತ್ತಿದ್ದಾರೆ. ಅವರಲ್ಲಿಯ ಯಾರಾದರೂ ಒಬ್ಬರು ಈತನ ಜೊತೆಗೆ ಕುಸ್ತಿಯನ್ನು ಆಡಬಹುದು ಎಂದರು. ಆಗ ಬಾದಶಹನು ಹುಸೇನ ಆಕಾ ರೂಮಿ ಪಹಿಲವಾನನನ್ನು ದರಬಾರದಲ್ಲಿ ಕರೆಸಿದನು. ಅವನಿಗೆ ಇರಾನ ಪಹಿಲವಾನನ ವಿಷಯವನ್ನು ಹೇಳಿ,

ಅವನಿಗೆಯೇ ಇರಾನ ಬಾದಶಹನ ಜೊತೆಗೆ ಕುಸ್ತಿ ಆಡಲು ಹೇಳಿದನು. ಆಗ ಹುಸೇನ ಆಕಾ ರೂಮಿಯು ಹೀಗೆ ಹೇಳುತ್ತಾನೆ: 'ಖುದಾವಂದ ಜಹಾಂಪನಾ, ಈಗ ನನಗೆ ವಯಸ್ಸಾಯಿತು. ಇರಾಣದ ಪಹಿಲವಾನನು ತರುಣನಾಗಿದ್ದಾನೆ. ಆದ್ದರಿಂದ ತಾವು ಅಪ್ಪಣೆ ದಯಪಾಲಿಸಿದರೆ, ನನ್ನ ಆಖಾಡಾದಲ್ಲಿಯ ಯಾವನಾದರೊಬ್ಬ ಶಿಷ್ಯನು ಈತನ ಜೊತೆಗೆ ಕುಸ್ತಿಯನ್ನು ಆಡಿ ಈತನನ್ನು ಸೋಲಿಸಬಹುದು' ಅದಕ್ಕೆ ಬಾದಶಹನು ಆತನ ಶಿಷ್ಯರನ್ನು ಕರೆಯಲು ಆದೇಶಿಸಿದನು. ಸೂಚನೆಯನ್ನು ಕೊಡುತ್ತಿದ್ದಂತೆ ಹುಸೇನ ಆಕಾ ರೂಮಿಯು ತನ್ನ ಆಖಾಡಾದಲ್ಲಿದ್ದ ಅತ್ಯಂತ ತರುಣರು, ಶಕ್ತವಂತರೂ ಮತ್ತು ತುಂಬಾ ಚಟುವಟಿಕೆಯುಳ್ಳವರೂ ಆದ ಏಳುಜನ ಶಿಷ್ಯರನ್ನು ಕರೆದುಕೊಂಡು ಬಂದು ಬಾದಶಹನ ಎದುರಿಗೆ ನಿಲ್ಲಿಸಿದನು. ಆಗ ಬಾದಶಹನು ಈ ಏಳುಜನರಲ್ಲಿ ಶ್ರೇಷ್ಠನು ಯಾರು? ಅವನನ್ನು ನನ್ನೆದುರಿಗೆ ನಿಲ್ಲಿಸು ಎಂದು ಹೇಳಿದನು. ಆಗ ಹುಸೇನ ಆಕಾನು ಯೂಸುಫಬೇಗ ಸಾವಿ ಎಂಬ ತರುಣನನ್ನು ತಂದು ನಿಲ್ಲಿಸಿ ಹೀಗೆ ಹೇಳಿದನು. ನನ್ನ ಆಖಾಡಾದಲ್ಲಿಯ ಎಲ್ಲ ಶಿಷ್ಯರಲ್ಲಿ ಈತನು ಶ್ರೇಷ್ಠನೂ, ತರುಣನೂ ಆಗಿದ್ದಾನೆ ಎಂದು ಹೇಳಿದನು.

ಆಗ ಬಾದಶಹನು ಯೂಸುಫ ಬೇಗ ಸಾವಿಗೆ ಆದೇಶಿಸುತ್ತ 'ನೀನು ಈ ಇರಾಣದ ಪಹಿಲವಾನನೊಂದಿಗ ಕುಸ್ತಿಆಡಲು ಸಿದ್ಧನಾಗು' ಎಂದನು. ಬಾದಶಾಹನ ಹುಕುಮನ್ನು ಪಡೆಯುತ್ತಿದ್ದಂತೆಯೇ ಯೂಸುಫ ಬೇಗನು, ಪಹಿಲವಾನರ ಲಂಗೋಟಿಯನ್ನು ಕಟ್ಟಿಕೊಂಡನು. ದೇಹದ ಮೇಲೆ ಪರಿಮಳ ದ್ರವ್ಯಗಳನ್ನು ಪೂಸಿಸಿಕೊಂಡನು ಮತ್ತು ಒಂದು ಬೆಲೆಯುಳ್ಳ ಶಾಲನ್ನು ತನ್ನ ಹೆಗಲಮೇಲೆ ಹಾಕಿಕೊಂಡು ಕುಸ್ತಿ ಆಡಲು ಸಿದ್ಧನಾಗಿ ಬಾದಶಹರ ಎದುರಿಗೆ ಬಂದು ಮುಜುರೆಯನ್ನು ಸಲ್ಲಿಸಿದನು. ಅನಂತರ ಬಾದಶಹನು ಮೈದಾನದಲ್ಲಿ ನಿಂತ ಇರಾಣಿನ ಪಹಿಲವಾನನ್ನು ತೋರಿಸುತ್ತ ಅವನೊಂದಿಗೆ ಕುಸ್ತಿಯನ್ನು ಆಡು ಎಂದು ಆದೇಶಿಸಿದನು.

ಅತ್ತ ಇರಾನಿನ ಪಹಿಲವಾನನು ಕೂಡ ಇರಾಣಿನ ಪದ್ಧತಿಯಂತೆ ಚರ್ಮದ ಲಂಗೋಟಿಯನ್ನು ತೊಟ್ಟು ಮೈಮೇಲೆ ಚಂದನ ಮತ್ತಿತರ ಪರಿಮಳ ದ್ರವ್ಯಗಳನ್ನು ಹಚ್ಚಿಕೊಂಡು ಬಂದು ಬಾದಶಹನಿಗೂ ಮತ್ತು ಅವನ ಸುತ್ತ ಮುತ್ತ ಕುಳಿತ ಎಲ್ಲ ಅಮೀರರಿಗೂ ಮುಜುರೆಯನ್ನು ಸಲ್ಲಿಸಿ ಮೈದಾನದಲ್ಲಿ ಬಂದು ನಿಂತನು. ಅವನ ತಾರುಣ್ಯ, ಸೌಂದರ್ಯ, ಎತ್ತರ ಮತ್ತು ಅವನ ಶಕ್ತಿಯನ್ನು ಬೆರಗು ಕಣ್ಣುಗಳಿಂದ ಅಲ್ಲಿ ಕುಳಿತ ಜನರು ನೋಡಿದರು. ಆಗ ಆತನು ಮೈದಾನದಲ್ಲಿ ಒಂದು ಸುತ್ತು ಹೊಡೆದು ಮತ್ತೆ ತಾನು ನಿಂತಲ್ಲಿ ಬಂದು ನಿಂತನು. ಆಗ ಅವನ ಏಳುನೂರು ಶಿಷ್ಯರು ತಮ್ಮ ಗುರುವಿನ ಸುತ್ತಲೂ ವರ್ತುಳಾಕಾರವಾಗಿ ನಿಂತರು.

ಮಹಮ್ಮದ ಬಹಮನಿ ಬಾದಶಹನು ಈ ದೃಶ್ಯವನ್ನು ನೋಡಿ ತುಂಬ ಸಂತೋಷ ಪಟ್ಟನು. ಆಗ ಇರಾನಿನ ಪಹಿಲವಾನನು ಯೂಸುಫ ಬೇಗ ಸಾವಿಯನ್ನು ನೋಡಿ, ಬಾದಶಹನ ಹತ್ತಿರ ಬಂದು ಮುಜುರೆ ಸಲ್ಲಿಸಿ ಹೀಗೆ ಹೇಳಿದನು: 'ನಾನು ಈ ವರೆಗೆ

ಜಗತ್ತಿನಾದ್ಯಂತ ಕುಸ್ತಿ ಆಡಿದ ಪಹಿಲವಾನರು ಈ ಹುಡುಗನ ಎರಡು ಮೂರು ಪಟ್ಟು ಶಕ್ತಿವಂತರಿದ್ದರು. ಈ ಹುಡುಗನ ಜೊತೆಗೆ ಕುಸ್ತಿ ಆಡುವುದೆಂದರೆ ನನಗೆ ಅಪಮಾನವೆಂದು ತಿಳಿಯುತ್ತೇನೆ. ಇವನಿಗಿಂತ ಶಕ್ತಿವಂತರಿದ್ದರೆ ಅವರನ್ನು ಕರೆಯಿರಿ ಅವರೊಂದಿಗೆ ಕುಸ್ತಿ ಆಡಲು ನಾನು ಸಿದ್ಧನಿರುವೆ'.

ಆಗ ಹುಸೇನ ಆಕಾ ರೂಮಿಯು ಇರಾನ ಪಹಿಲವಾನನಿಗೆ ಹೀಗೆ ಹೇಳಿದನು: 'ಮೊದಲು ಈ ಚಿಕ್ಕ ಹುಡುಗನೊಂದಿಗೆ ಕುಸ್ತಿ ಆಡು. ಒಂದು ವೇಳೆ ನೀನು ಇವನನ್ನು ಸೋಲಿಸಿದರೆ ಆಮೇಲೆ ಮತ್ತೊಬ್ಬ ನಿನ್ನ ಜೊತೆಗೆ ಕುಸ್ತಿ ಆಡಲು ಬರುತ್ತಾನೆ'. ಆ ನಂತರ ಇರಾನಿನ ಪಹಿಲವಾನನು ಮತ್ತು ಯೂಸುಫ ಬೇಗ ಸಾವಿಯೂ ಎದುರು ಬದುರು ನಿಂತರು. ಯೂಸುಫ ಬೇಗ ಸಾವಿಯು ಮೊದಲು ಪರಮಾತ್ಮನನ್ನು ಸ್ತುತಿಸಿದನು ಮತ್ತು ಪೈಗಂಬರರನ್ನು ನೆನೆದನು. ಅನಂತರ ಕಾಬಾದ ಕಡೆಗೆ ಮುಖ ಮಾಡಿ ಭೂಮಿಯ ಮೇಲೆ ಹಣೆಯನ್ನು ಇಟ್ಟು ಅಲ್ಲಾಹನಲ್ಲಿ [ಸಜ್ದಾ] ಪ್ರಾರ್ಥಿಸಿದನು. ಅನಂತರ ಇರಾನಿನ ಪಹಿಲವಾನನ ಹತ್ತಿರ ಬಂದು ಅವನ ಹಸ್ತಲಾಘವ ಮಾಡಿದನು. ಅಲ್ಲಿಂದ ಪರಸ್ಪರ ಕುಸ್ತಿ ಪ್ರಾರಂಭವಾಯಿತು.

ಇಬ್ಬರ ನಡುವೆ ಅತ್ಯಂತ ಕುತೂಹಲಕಾರಿ ಕುಸ್ತಿ ನಡೆಯಿತು. ಪರಸ್ಪರ ಕುಸ್ತಿ ಡಾವ ಪೇಚುಗಳನ್ನು ಹಾಕಿದರು. ಅಷ್ಟರಲ್ಲಿ ಯೂಸುಫ ಬೇಗನು ಎದುರಾಳಿ ಇರಾನೀ ಪಹಿಲವಾನನ ಸೊಂಟದ ಮೇಲಿರುವ ಚರ್ಮದ ಲಂಗೋಟಿಯನ್ನು ಒಂದು ಕೈಯಿಂದ ಗಟ್ಟಿಯಾಗಿ ಹಿಡಿದು, ಮತ್ತೊಂದು ಕೈಯಿಂದ ಕುತ್ತಿಗೆಯ ಪಟ್ಟಿಯನ್ನು ಹಿಡಿದು ತನ್ನ ಎರಡೂ ಕೈಗಳಿಂದ ತಲೆಯ ಮೇಲೆ ಎತ್ತಿ ಹಿಡಿದು ಅಲ್ಲಾಹನ, ಪೈಗಂಬರರ ಮತ್ತು ಅಲಿ ಇವರನ್ನು ನೆನೆಸುತ್ತ ಗರ ಗರ ತಿರುಗಿಸಿ ಭೂಮಿಯ ಮೇಲೆ ಒಗೆದು ಬಿಟ್ಟನು. ಅವನ ಒಗೆತದಿಂದ ಇರಾನಿನ ಪಹಿಲವಾನನ ಬೆನ್ನು ಮತ್ತು ಕುತ್ತಿಗೆಯ ಎಲುಬುಗಳು ಮುರಿದು ಚೂರು ಚೂರಾದುವು. ಇರಾನಿನ ಪಹಿಲವಾನನು ಭೂಮಿಯಿಂದ ಮೇಲೆ ಏಳಲು ಸಾಧ್ಯವಾಗಲಿಲ್ಲ.

ಈ ದೃಶ್ಯವನ್ನು ನೋಡಿ ಸುಲ್ತಾನನು, ಅಮೀರರು ಮತ್ತು ಅಲ್ಲಿ ಕುಳಿತ ಎಲ್ಲ ಜನರು ಒಮ್ಮಿಂದೊಮ್ಮೆಲೆ ಹೋ ಎಂದು ಕೂಗುತ್ತ ಯೂಸುಫ ಬೇಗನಿಗೆ ಶಾಹಬಾಸಿ [ಶಾಬ್ಬಾಸ] ಯನ್ನು ಕೊಟ್ಟರು. ಅತ್ತ ಕಡೆಗೆ ಇರಾನಿನ ಪಹಿಲವಾನನನ್ನು ಅವನ ಶಿಷ್ಯರು ಎತ್ತಿಕೊಂಡು ಆಖಾಡಾದಿಂದ ಹೋದರು.

ಇತ್ತ ಬಾದಶಹನು ಯೂಸುಫ ಬೇಗ ಸಾವಿಯನ್ನು ತನ್ನ ಹತ್ತಿರ ಕರೆದು, ವಿಶೇಷ ವಸ್ತ್ರಗಳನ್ನು ಮತ್ತು ಹೇರಳ ಹಣವನ್ನು ಇನಾಮಾಗಿ ಕೊಟ್ಟನು. ಇದನ್ನು ನೋಡಿದ ಹತ್ತಿರದ ಅಮೀರರು, ವಜೀರರು ಮತ್ತು ದರಬಾರದ ಹಿರಿಯ ಅಧಿಕಾರಿಗಳು ತಂತಮ್ಮ ಯೋಗ್ಯತೆಯಂತೆ ವಸ್ತ್ರಗಳನ್ನು ಹಣವನ್ನು ಕೊಟ್ಟರು. ಮತ್ತು ಬಾದಶಹನು ಅದೇ ದಿನ ಯೂಸುಫ ಬೇಗ ಸಾವಿಗೆ ಗೋಗಿ ಮತ್ತು ಅದರ ಸುತ್ತಲಿನ ಐದು ಹಳ್ಳಿಗಳನ್ನು ಇನಾಮು

ಹಾಕಿ ಕೊಟ್ಟನು. ಜೊತೆಗೆ ಅಂದಿನಿಂದ ಯೂಸುಫ ಬೇಗನು ಬಾದಶಹನ ಅಂಗಸೇವಕನಾಗಿ ಇರಲು ಆದೇಶಿಸಿದನು. ಈ ಘಟನೆ ನಡೆದ ದಿನ, ಹಿಜರಿ ಶಕ ೮೯೫.

ಕೆಲವು ದಿನಗಳ ನಂತರ ಯೂಸುಫ ಬೇಗನ ಯೋಗ್ಯತೆಯನ್ನು ಕಂಡು ಸದರ್ ಕೊತವಾಲಿ ಹುದ್ದೆಯನ್ನು ಮತ್ತೆ ಕೆಲವು ದಿನಗಳ ಮೇಲೆ ಹವಾಲದಾರೀ ಹುದ್ದೆಯನ್ನು ಬಾದಶಹನು ಕೊಟ್ಟನು. ಇದೇ ದಿನಗಳಲ್ಲಿ ತೆಲಂಗಾಣದಲ್ಲಿ, ಕೊಲೆ ಸುಲಿಗೆ ಲೂಟಿ ನಡೆದಿದೆ ಎಂಬ ಹಾಗೂ ಮುಸಲಮಾನ ವ್ಯಾಪಾರಸ್ಥರನ್ನು ಕೊಂದು ಅವರ ಮನೆ, ಆಸ್ತಿ ಇತ್ಯಾದಿಗಳ ಲೂಟಿ ಮಾಡುತ್ತಿದ್ದಾರೆ ಮತ್ತು ಇದು ಇನ್ನೂ ಮುಂದುವರಿಯುತ್ತದೆ ಎಂಬ ಸುದ್ದಿ ಬಂದಿತು. ಆದ್ದರಿಂದ ಬಾದಶಹರಾದ ತಾವು ನಮ್ಮ ರಾಜ್ಯದ ಸರಹದ್ದಿನಲ್ಲಿ ಶಾಂತಿಯನ್ನು ಕಾಪಾಡಲು ವ್ಯವಸ್ಥೆ ಮಾಡಬೇಕು ಎಂಬ ಪ್ರಾರ್ಥನೆಯನ್ನು ಸಲ್ಲಿಸಿದ್ದರು.

ಆಗ ಬಾದಶಹನು ತನ್ನ ದರಬಾರದ ಅಧಿಕಾರೀ ಜನರನ್ನು ಕರೆದು ಈ ವಿಷಯವನ್ನು ಚರ್ಚಿಸಿದನು ಮತ್ತು ಇಂಥ ಸಮಯದಲ್ಲಿ ಯಾರನ್ನು ಕಳಿಸುವುದು ಯೋಗ್ಯ ಎಂಬುದನ್ನು ವಿಚಾರಿಸಿದನು. ಆಗ ದರಬಾರದ ಸರದಾರರು ಯೂಸುಫ ಬೇಗನೇ ಈ ಸಂದರ್ಭದಲ್ಲಿ ಯೋಗ್ಯ ವ್ಯಕ್ತಿ ಎಂದು ಹೇಳಿದರು. ಯಾಕೆಂದರೆ ಅವನು ತುಂಬಾ ಶಕ್ತಿಶಾಲಿ ಮತ್ತು ತರುಣನಾಗಿದ್ದಾನೆ. ಆದ್ದರಿಂದ ಅವನನ್ನೇ ಕಳಿಸಬೇಕು ಎಂದು ಹೇಳಿದರು. ದರಬಾರದ ಜನರ ಮಾತನ್ನು ಕೇಳಿ ಸುಲ್ತಾನನು ಯೂಸುಫ ಬೇಗನನ್ನು ಕರೆ ಕಳಿಸಿದನು. ಅವನು ಬಂದ ನಂತರ ಅವನಿಗೆ ವಿಶೇಷ ವಸ್ತ್ರಗಳನ್ನು ಕೊಟ್ಟನು ಮತ್ತು ಅವನಿಗೆ ಮಜಲಿಸ್ ರಫೀಯೇ ಮತ್ತು ಮಲಿಕುಶ್‌ಶರ್ಕ ಎಂಬ ಬಿರುದುಗಳನ್ನು ಕೊಟ್ಟು ಅವನ ಜೊತೆಗೆ ಒಂದು ದೊಡ್ಡ ಸೈನ್ಯವನ್ನು ಕೊಟ್ಟು ತೆಲಂಗಾಣ ಪ್ರದೇಶಕ್ಕೆ ಕಳಿಸಿ ಕೊಟ್ಟನು. ಈ ಘಟನೆ ನಡೆದ ವರುಷ ಹಿಜರಿ ಶಕೆ ೯೦೨.

ಯೂಸುಫ ಬೇಗನು ಸುಲ್ತಾನನ ಆದೇಶದಂತೆ ತೆಲಂಗಾಣ ಪ್ರದೇಶಕ್ಕೆ ಹೋಗಿ ಕೆಲವೇ ದಿನಗಳಲ್ಲಿ ಅಲ್ಲಿಯ ದಂಗೆಯನ್ನು ಹತ್ತಿಕ್ಕಿದನು ಮತ್ತು ದುಷ್ಟರನ್ನು ಸದೆ ಬಡಿದನು. ಅಲ್ಲಿ ಶಾಂತಿಯನ್ನು ಸ್ಥಾಪಿಸಿದನು. ಅದಾದನಂತರ ಬಾದಶಹರಿಗೆ ಕಿಮ್ಮತ್ತಿನ ಕಾಣಿಕೆಗಳನ್ನು ತೆಗೆದುಕೊಂಡು ಬೀದರಿಗೆ ಹೋಗಲು ಸಿದ್ಧನಾಗುತ್ತಿದ್ದನು.

ಇತ್ತ ಕಡೆಗೆ ಬೀದರದ ಸುಲ್ತಾನನಿಗೆ ಒಂದು ದಿನ ಯುಸುಫ ಬೇಗನ ನೆನಪಾಯಿತು. ಮತ್ತು ದರಬಾರದ ಜನರಿಗೆ ಅಲ್ಲಿಯ ಸಂಗತಿಯನ್ನು ಕೇಳುತ್ತ, ಯುಸುಫನು ತೆಲಂಗಾಣ ಪ್ರದೇಶಕ್ಕೆ ಹೋಗಿ ಬಹಳ ದಿನಗಳಾದುವು. ಅವನಿಂದ ಯಾವ ಸುದ್ದಿಯೂ ಬಂದಿಲ್ಲ. ಇದಕ್ಕೆ ಕಾರಣ ಏನಿರಬಹುದು ಎಂದು ಕೇಳಿದನು. ಆದರೆ ಯೂಸುಫ ಬೇಗನು ತೆಲಂಗಾಣ ಪ್ರದೇಶದ ಕ್ಷಣ ಕ್ಷಣದ ಸುದ್ದಿಯನ್ನು ಆವಾಗಾವಾಗ ಕಳಿಸುತ್ತಲೇ ಇದ್ದನು. ಆದರೆ ಬೀದರದ ದರಬಾರದ ಜನರಲ್ಲಿಯ ಯೂಸುಫ ಬೇಗನ ಕೆಲಸವನ್ನು ಮೆಚ್ಚದವರು, ಅಸೂಯೆಯಿಂದ ಅವನ ಸಂದೇಶದ ಕಾಗದಗಳನ್ನು ಬಾದಶಹನವರೆಗೆ ಮುಟ್ಟಿಸುತ್ತಿರಲಿಲ್ಲ. ಅಲ್ಲಿಯೇ ಮುಚ್ಚಿಹಾಕಿ ಬಿಡುತ್ತಿದ್ದರು. ಇಂಥವರಿಗೆ ಬಾದಶಹನು ಕೇಳಿದಾಗ ಹೊಟ್ಟೆಕಿಚ್ಚಿನ

ಜನರು ಬಾದಶಹನಿಗೆ ಹೀಗೆ ಹೇಳಿದರು. ಯೂಸುಫನು ತೆಲಂಗಾಣದ ಪ್ರದೇಶಗಳನ್ನು ತನ್ನ ವಶದಲ್ಲಿ ಇಟ್ಟುಕೊಂಡು ತಾನೇ ಅಧಿಕಾರಿಯೆಂದು ಘೋಷಿಸಿಕೊಂಡು ಬಿಟ್ಟಿದ್ದಾನೆ ಎಂದು ಹೇಳಿದರು.

ಇದನ್ನು ಕೇಳಿದ ಯೂಸುಫ ಬೇಗನ ಗುರುವಾದ ಹುಸೇಮ ಆಕಾ ರೂಮಿಯು ಬಾದಶಹನಿಗೆ ಹೀಗೆ ಹೇಳಿದನು. 'ಯೂಸುಫ ಬೇಗನು ಇಂಥ ಕೀಳುಮಟ್ಟದ ಹರಾಮಖೋರನಾಗಿರಲಾರನು ಮತ್ತು ಬಾದಶಹನ ವಿರುದ್ಧ ಬಂಡು ಖೋರನಾಗಲು ಸಾಧ್ಯವಿಲ್ಲ. ಅವನ ಸುದ್ದಿ ಬರದಿದ್ದಕ್ಕೆ ಯಾವುದೋ ಕಾರಣವಿರಬೇಕು' ಎಂದು ಹೇಳುತ್ತ ದರಬಾರದಲ್ಲಿ ಇದ್ದಂಥ ಇನ್ನೊಬ್ಬ ಅಮೀರ ಬರ್ರೀ ಆಕಾ ಎಂಬವನನ್ನು ತೆಲಂಗಾಣಕ್ಕೆ ಹೋಗಿ ಯೂಸುಫ ಬೇಗನನ್ನು ಕರೆದು ತರಲು ಕಳಿಸಿದನು.

ಬರ್ರೀ ಆಕಾನು ಅಲ್ಲಿಗೆ ಹೋದ ನಂತರ ಅವನು ಅಲ್ಲಿಯ ಸಮಸ್ಯೆಗಳಲ್ಲಿ ತೊಡಗಿ ಬಿಟ್ಟನು. ಅವನಿಂದಲೂ ಯಾವ ಸುದ್ದಿಯೂ ಬರಲಿಲ್ಲ. ಯೂಸುಫ ಬೇಗನನ್ನು ಕರೆದೂ ತರಲಿಲ್ಲ. ಇದನ್ನು ಕಂಡ ದರಬಾರದಲ್ಲಿಯ ಹೊಟ್ಟೆಕಿಚ್ಚಿನ ಜನರು ಬಾದಶಹನ ಹತ್ತಿರ ಬಂದು, ಇಬ್ಬರೂ ಹರಾಮಖೋರರಾಗಿ ಅಲ್ಲಿಯ ಮುಖ್ಯಸ್ಥರಾಗಿ ಇದ್ದು ಬಿಟ್ಟಿದ್ದಾರೆ ಎಂದು ದೊಡ್ಡ ಗದ್ದಲವನ್ನೆ ಎಬ್ಬಿಸಿದರು. ಆಗ ಬಾದಶಹನು ಹುಸೇನ ಆಕಾ ರೂಮಿಗೆ ಸ್ಪಷ್ಟವಾಗಿ ಆದೇಶಿಸುತ್ತ ನೀನು ಸ್ವತಃ ತೆಲಂಗಾಣಾ ಪ್ರದೇಶಕ್ಕೆ ಹೊಗಿ ಯೂಸುಫನನ್ನು ನನ್ನ ಎದುರಿಗೆ ತಂದು ನಿಲ್ಲಿಸು ಎಂದು ಆದೇಶಿಸಿದನು. ಅದನ್ನು ಕೇಳಿ ಹುಸೇನ ಆಕಾ ರೂಮಿಯು ಸ್ವತಃ ಯೂಸುಫನನ್ನು ಕರೆತರಲು ಹೋದನು. ಅಲ್ಲಿ ಹೋಗಿ ಬರ್ರೀ ಆಕಾನನ್ನು ತೆಲಂಗಾಣಾ ಪ್ರದೇಶದ ಮುಖ್ಯಸ್ಥನನ್ನಾಗಿ ನಿಯುಕ್ತಿಗೊಳಿಸಿ ಯೂಸುಫ ಬೇಗನನ್ನು ಕರೆದುಕೊಂಡು ಬಾದಶಹರಿಗೆ ಯೋಗ್ಯವಾದ ಕಾಣಿಕೆಗಳ ಸಹಿತ ಬೀದರ ಕಡೆಗೆ ಹೊರಟನು.

ಯೂಸುಫನು ಯಶಸ್ವೀ ದಂಡಯಾತ್ರೆಯನ್ನು ಮುಗಿಸಿ ಬೀದರಕ್ಕೆ ಬರುತ್ತಿರುವುದನ್ನು ಕೇಳಿದ ಬಾದಶಹನು ತಾನೆ ಸ್ವತಃ ಹಜರತ್ ಖಲೀಲುಲ್ಲಾ ಕಿರ್ಮಾನಿಯವರ ದರ್ಗಾದತ್ತ ಹೋಗಿ ಯೂಸುಫನನ್ನು ಸ್ವಾಗತಿಸಿದನು ಮತ್ತು ಅತ್ಯಂತ ಗೌರವದಿಂದ ಅವರಿಬ್ಬರನ್ನೂ ನಗರಕ್ಕೆ ಕರೆತಂದನು. ಯೂಸುಫನಿಂದ ಬಾದಶಹನು ತೆಲಂಗಾಣಾದ ಸಂಪೂರ್ಣ ವಿಷಯವನ್ನು ಕೇಳಿ ತಿಳಿದನು. ತೆಲಂಗಾಣದಲ್ಲಿ ಬಂಡುಖೋರರನ್ನು ಶಿಕ್ಷಿಸಿ ಅಲ್ಲಿ ಶಾಂತಿಯನ್ನು ಸ್ಥಾಪಿಸಿದ ವಿಷಯವನ್ನು ಯೂಸುಪನಿಂದ ಕೇಳಿ ಬಾದಶಹನು ಸಂತೋಷ ಪಟ್ಟನು. ಆಗ ಯೂಸುಫನು ತಾನು ತಂದಂಥ ಕಾಣಿಕೆಗಳನ್ನು ಬಾದಶಹನಿಗೆ ಒಪ್ಪಿಸಿದನು. ಬಾದಶಹನು ಅವನ ಕಾಣಿಕೆಗಳನ್ನು ಸ್ವೀಕರಿಸಿ ಯೂಸುಫನ ಪ್ರಾಮಾಣಿಕತನವನ್ನು ಮತ್ತು ಆತನು ಮಾಡಿದ ಸುಂದರ ವ್ಯವಸ್ಥೆಯನ್ನು ಕೇಳಿ ಖುಶಿಯಾಗಿ ಅವನಿಗೆ ಇನಾಮುಗಳನ್ನು ಮತ್ತು ಕಾಣಿಕೆಗಳನ್ನು ಕೊಟ್ಟು ಗೌರವಿಸಿದನು. ಇದು ನಡೆದ ಘಟನೆ ಹಿಜರಿ ಶಕೆ ೯೦೮.

ಈ ಘಟನೆಯ ನಂತರ ಬಾದಶಹನು ಯೂಸೂಫಬೇಗನಿಗೆ ಕಾನಕರ್ತಿ, ಕಲ್ಯಾಣದಿಂದ ಮಂಜಾನ ಮತ್ತು ಗೋವೆ, ಕಂಚಿ, ಕಾಳಹಸ್ತಿ, ಮತ್ತು ಪ್ರಾಚೀನ ಕಾಲದಲ್ಲಿ ರಾಜಧಾನಿಯಾಗಿದ್ದ ಮಂಗಳವೇಢೆ ವರೆಗಿನ ಪ್ರದೇಶಗಳನ್ನು ಜಹಗೀರು ಹಾಕಿ ಕೊಟ್ಟನು. ಮತ್ತು ಅವನನ್ನು ಅತ್ತ ಕಡೆಗೆ ಕಳಿಸಿದನು. ಯೂಸುಫ ಬೇಗನು ಇಲ್ಲಿ ಬಂದು ತನ್ನ ಪ್ರದೇಶಗಳ ಅಭಿವೃದ್ಧಿಯನ್ನು ಮಾಡ ಹತ್ತಿದನು. ಈ ಪ್ರದೇಶಗಳಲ್ಲಿಯೇ ಬೆಂಜನಹಳ್ಳಿ ಎಂಬ ಒಂದು ಗ್ರಾಮವಿತ್ತು. ಅದು ರಾಜಧಾನಿಯನ್ನಾಗಿ ಮಾಡಲು ಯೋಗ್ಯವಾಗಿತ್ತು. ಆದ್ದರಿಂದ ಯೂಸುಫನು ಅಲ್ಲಿಯೇ ಇದ್ದು ಅದರ ಸುತ್ತಮುತ್ತ ಕೋಟೆಯನ್ನು ಕಟ್ಟಿಸಿ ಅದರ ಹೆಸರನ್ನು ಬಿಜಾಪುರ ಎಂದು ಇಟ್ಟನು. ಈ ಘಟನೆ ನಡೆದದ್ದು ಹಿಜರಿ ಶಕ ೯೧೯. ಅನಂತರ ಇಲ್ಲಿ ಖ್ವಾಜಾ ಜಹಾನನನ್ನು ಮುಖ್ಯಸ್ಥನನ್ನಾಗಿ ನಿಯುಕ್ತಿ ಗೊಳಿಸಿ ಇಲ್ಲಿಯೆ ಇಟ್ಟನು.

ಹಿಜರಿ ಶಕ ೯೧೯ ಹುಸೇನ ಆಕಾ ಬರ್ರಿ ಪ್ರಬಲವಾದನು.

ಹಿಜರಿ ಶಕ ೮೯೫ ಸುಲ್ತಾನನ ಆದೇಶದಂತೆ ಅಜೀಜುಲ್ ಮುಲ್ಕನು ಬೆಳಗಾವಿಯನ್ನು ಮುಟ್ಟಿದನು.

ಹಿಜರಿ ಶಕ ೮೯೯ ದಿಂದ ೯೦೫ ಶಮ್ಸುದ್ದೀನ ಬೇಗನು ದಬೀರ [ಡಬೀರ–ಕೋಶಾಧಿಕಾರಿ] ನಾಗಿದ್ದನು.

ಹಿಜರಿ ಶಕ ೮೯೬ದಲ್ಲಿ ಅಲಿ ತಬ್ರೆಜಿ, ಖ್ವಾಜಾ ಜಹಾನನ ಸಹಾಯಕನಾಗಿ ಗೋವೆಯನ್ನು ತಲುಪಿದನು.

ಹಿಜರಿ ಶಕೆ ೯೦೨ದಲ್ಲಿ ನರಸನಾಯಕ ದೇವಱಿಯಾ ಸಿದ್ಧನು ಕಂದಾಯ ಸಚಿವನಾದನು.

ಹಿಜರಿ ಶಕ ೯೦೩ದಲ್ಲಿ ಖಿಲ್ದಾಕ್.

ಹಿಜರಿ ಶಕ ೯೦೬ದಲ್ಲಿ ಸಹರೀ ಆಕಾ ಮುಕದ್ದಮ ದಾನ, ಚಾಂದಮಿಯಾ ಪಟ್ಟೇದಾರ ಅವ್ವಲ್ ರಾಗಿದ್ದರು.

ಹಿಜರಿ ಶಕೆ ೯೦೬ದಲ್ಲಿ ಯೂಸೂಫ ಕೋಚಕ್ ಸರ್ ನೌಬತ್‌ನಾದನು.

ಹಿಜರಿ ಶಕ ೯೦೭ದಲ್ಲಿ ಫತಾ ಆಕಾ ವಜೀರನು ಪೇಶ್ವಾ ಆಗಿದ್ದನು.

ಹಿಜರಿ ಶಕ ೯೦೮ದಲ್ಲಿ ಅಮೀನುದ್ದೀನ ಬಿನ್ ಅಲೀ ಬೇಗ್ ಶಿರಾಜಿ, ಖ್ವಾಜಾ ಮೊಯಿನುದ್ದೀನ, ಆಕಾ ಶಹಾಬುದ್ದೀನ ಸುಹರವರ್ದಿ, ನೌರಜ್ ಬೇಗ್ ರೂಮಿ ಇವರುಗಳು ಇದ್ದರು. ಹಿಜರಿ ಶಕ ೯೧೨ರಲ್ಲಿ ಬಾದಶಹನು ಇವರನ್ನು ಗೌರವಿಸಿದನು. ಹಿಜರಿ ಶಕ ೯೧೬ದಲ್ಲಿ ಕೆಲವು ಪರಗಣೆಗಳನ್ನು ಜಹಗೀರು ಹಾಕಿ ಕೊಟ್ಟನು. ಇದೇ ವರುಷ ಮಂಗಳವೇಢಾ, ಮಿರಜ ಮತ್ತು ಮೊಕಾಸಾ, ಗೋವಾ ಮತ್ತು ಕಣಕರ್ತಿಯಿಂದ ಮಂಜಾನ ಸರಹದ್ದಿನವರೆಗೆ, ಗೋವಾದಿಂದ ಕುಂಚಿವರೆಗೆ ಗೌರವಿಸಿ ಜಹಗೀರು ಹಾಕಿ ಕೊಟ್ಟನು. ಇದೇ ವರುಷ ಐನುಲ್ ಮಲಿಕ್‌ನಿಗೆ ಪನ್ಹಾಳಾ ಕೊಟ್ಟನು. ಸಯ್ಯದ ನೇಮತುಲ್ಲಾನಿಗೆ

ಸಹಾಯ ಮಾಡಿದನು. ಸದರೀ ವರುಷದಲ್ಲಿ ಬಂಕಾಪುರ ಮತ್ತು ಬಂಜಾಬಕ್ರಗಳನ್ನು ಕೊಟ್ಟನು.

ಹಿಜರಿ ಶಕ ೯೧೬ ಕೆಲವು ಪ್ರದೇಶಗಳನ್ನು ಕೊಟ್ಟನು. ಹಿಜರಿ ೯೧೬ರಲ್ಲಿ ೯೦೭೦ ಸೈನಿಕರಿಂದ ಯುದ್ಧವಾಯಿತು. ಹಿಜರಿ ೯೧೬ದಲ್ಲಿ ೩೭ ಆನೆಗಳನ್ನು ಕೊಟ್ಟನು. ಹಿಜರಿ ೯೧೬ರಲ್ಲಿಯೆ ೪೧೧೧ ಕಾಲ್ದಳವನ್ನು ಕೊಟ್ಟನು. ಹಿಜರಿ ೯೧೬ದಲ್ಲಿ ಹಳೆಯ ವ್ಯಾಪಾರಸ್ಥರು ಬಂದರು.

ಹಿಜರಿ ಶಕ ೯೧೯ದಲ್ಲಿ ಹಳೆಯ ಫತೇಪುರವನ್ನು ಕಟ್ಟಲಾಯಿತು.

ಹಿಜರಿ ಶಕ ೯೧೭ದಲ್ಲಿ ಯೂಸುಫ ಬೇಗನಿಗೆ ರಾಜ ವಸ್ತ್ರಗಳನ್ನು ಕೊಟ್ಟು ಪ್ರದೇಶಗಳನ್ನು ಜಹಗೀರು ಹಾಕಿ ಕೊಟ್ಟನು. ಅನಂತರ ಅವನು ಗುಲಬರ್ಗಾಕ್ಕೆ ಬಂದನು. ಅಲ್ಲಿ ಬಂದು ಮಖ್ದೂಮ ಮೊಹಮ್ಮದ ಶಿರಾಜಿಯ ದರ್ಗಾ ಮತ್ತು ಮೀನಾರಗಳನ್ನು ಕಟ್ಟಿಸಿ, ಬೆಂಜನಹಳ್ಳಿಗೆ ಬಂದು ಇರಹತ್ತಿದನು.

ಹಿಜರಿ ಶಕ ೯೨೧ದಲ್ಲಿ ಜಮಾಲಖಾನನು ಬಿಜಾಪುರದ ಹವಾಲ್ದಾರನಾಗಿದ್ದನು. ಇದೇವರುಷ ಯೂಸುಫಬೇಗನು ಫರೂಕ ಮಹಲನ್ನು ಕಟ್ಟಿದನು. ಇದೇ ವರುಷ ಯೂಸುಫ ಆದಿಲಶಾಹನ ಅಳಿಯ ಇಮಾದ ಶಾಹ ಪ್ರಬಲನಾದನು. ಇದೇ ವರುಷ ಯೂಸುಫನ ವಯಸ್ಸು ೫೯ ವರುಷದವನಾಗಿದ್ದನು. ಯೂಸುಫ ಆದಿಲಶಹನು ಹಿಜರಿ ಶಕ ೯೨೫ದಲ್ಲಿ ಮರಣ ಹೊಂದಿದನು. ಸುಲ್ತಾನ ಮಹಮೂದ ಬಹಮನಿ ಮೊಹಮ್ಮದಾಬಾದ ಊರ್ಫ ಬೀದರದ ಒಡೆಯನು ೨೪ ಜಿಲ್ಹೇಜ್ ಹಿಜರಿ ಶಕ ೯೧೨ದಲ್ಲಿ ನಿಧನ ಹೊಂದಿದನು. ಅವನ ವಯಸ್ಸು ಆಗ ೪೭ ಆಗಿತ್ತು. ಅವನು ೩೭ ವರುಷ ರಾಜ್ಯವಾಳಿದನು.

ಇಸ್ಮಾಯಿಲ್ ಬಾದಶಹ

ಹಿಜರಿ ಶಕ ೯೨೫ರಲ್ಲಿ ನಡೆದ ಘಟನೆಗಳು

- ಇಸ್ಮಾಯಿಲ ಬಾದಶಹನ ಪಟ್ಟಾಭಿಷೇಕ. ಇಸ್ಮಾಯಿಲ ಶಾಹನು ಪ್ರಬಲನಾದನು.
- ಸಿಕಂದರ ಆಕಾನು ಅವನ ಸಿಪಹ ಸಾಲಾರನಾಗಿದ್ದನು.
- ಅಸದಖಾನನು ಬೆಳಗಾವಿಯಲ್ಲಿ ಇರುತ್ತಿದ್ದನು.
- ಕಮಾಲಖಾನನು 'ದಾರಾಬ್ ಜರ್ವಿ' ಎಂಬ ಹೆಸರಿನಿಂದ ಪ್ರಸಿದ್ಧನಾದನು.
- ಯೂಸುಫ ಕೋಚಕನು ಸರ್ ನೌಬತ್ ಆಗಿದ್ದನು. ಈತನೇ ಫತಹ ಆಕಾ ವಜೀರನೆಂದೂ ಪ್ರಸಿದ್ಧನಾಗಿದ್ದನು. ಮತ್ತು ಅವನು ಮುಕದ್ದಮ ಹುದ್ದೆಯನ್ನು ಪಡೆದಿದ್ದನು.
- ಮನ್ಸೂರ ಆಕಾ ಜಹರಾನೀ ಕದೀಮ ಬಂದನು.

- ಜಮಾಲಖಾನನು ಬಿಜಾಪುರದ ಹವಾಲ್ದಾರನಾದನು.
- ಚಾಂದ ಮಿಯಾ ಪುಣೇದಾರ ವೋಲ್ಗಾಗಿಹಿಯಾದನು. [?]
- ನರಸನಾಯಿಕ ದೇವಟಪ್ಪಾ ಗಚ್ಚಿ ಸಿದ್ಧನಾಗಿದ್ದನು.
- ಚಂದಾಪುರ ಕಟ್ಟಿಸಲು ಇಸ್ಮಾಯಿಲ್‌ನು ಆರಂಭಿಸಿದನು.

ಹಿಜರಿ ಶಕ ೯೨೬ರಲ್ಲಿ ಇಸ್ಮಾಯಿಲನು ಯೆಡಿಯೂರನ್ನು ಗೆದ್ದನು ಮತ್ತು ಬರೀದಶಾಹನ ಪಲ್ಲಂಗನ್ನು ಎತ್ತಿ ತಂದರು.

ಹಿಜರಿ ಶಕ ೯೨೭ರಲ್ಲಿ ನಡೆದ ಘಟನೆಗಳು.

- ೧೭೦ ಕೈದಿಗಳನ್ನು ಬಿಡುಗಡೆ ಮಾಡಲಾಯಿತು.
- ಫಥುಲ್ಲಾ ಇಮಾದುಲ್ ಮುಲ್ಕ, ಶಹಪುರದಲ್ಲಿ ಪ್ರಬಲನಾಗಿದ್ದನು.
- ಇಸ್ಮಾಯಿಲನು ಯುದ್ಧ ಮಾಡಿ ಮುದಗಲ್ ಕೋಟೆಯನ್ನು ಗೆದ್ದನು ಮತ್ತು ಮುದಗಲ್ ಕೋಟೆಯ ಕಿಲ್ಲೇದಾರನನ್ನು ಕುತ್ತಿಗೆ ಕೊಯ್ದು ಕೊಂದರು.
- ಕೋಟೆಯಮೇಲೆ ನಿಂತನು
- ಕಮಾಲಖಾನ ದಾರಾಬ ಜುರ್ವಿಯು ಒಬ್ಬ ಪ್ರಾಮಾಣಿಕ ಸೇವಕನಿಂದ ಕೊಲೆಯಾದನು.
- ಇಸ್ಮಾಯಿಲನು ಚಂಪಾಮಹಲನ್ನು ಕಟ್ಟಲು ಪ್ರಾರಂಭಿಸಿದನು.
- ಬೀದರನ ಮುಖ್ಯಸ್ಥನಾದ ಕಾಸೀಮ ಬರೀದನು ಓಡಿ ಹೋದನು.
- ರಾಯಚೂರು ಕೋಟೆಯು ಇಸ್ಮಾಯಿಲನ ಕೈವಶವಾಯಿತು.
- ಇಸ್ಮಾಯಿಲನ ವಿರುದ್ಧ ಜಮಖಂಡಿಯ ಎಲ್ಲ ದೇಸಾಯರು ಬಂಡು ಎದ್ದರು.

ಹಿಜರಿ ಶಕೆ ೯೨೮ರಲ್ಲಿ ಮಲಿಕ ಕರೀಮುಲ್ಲಾನು ಅವರ ವಿರದ್ಧ ಯುದ್ಧ ಮಾಡಿದನು. ಅದೇ ವರುಷ [ಇಸ್ಮಾಯಿಲನ ಹತ್ತಿರ] ೧೧೬ ಆನೆಗಳು ಇದ್ದುವು. ಮತ್ತು ೧,೪೦,೦೦೦ ಕಾಲ್ದಳದ ಸೈನ್ಯವಿತ್ತು. ಇದೇ ವರುಷ ಅಂಜು ಮಿಯಾ ತಬೀಬ ಎಂಬ ವೈದ್ಯನು ಇಸ್ಮಾಯಿಲನನ್ನು ಉಪಚರಿಸಿದನು.

ಹಿಜರಿ ಶಕ ೯೩೧ದಲ್ಲಿ ಚಾಂದಖಾನನು ವಜೀರನಾದನು. ಇಸ್ಮಾಯಿಲ ಆದಿಲಶಹನಿಗೆ ಈ ಮೊದಲೇ ಒಂದು ಯುದ್ಧದಲ್ಲಿ ಆದ ಗಾಯವು ಮರುಕಳಿಸಿತು ಮತ್ತು ಅದರಿಂದ ಅವನು ನಿಧನ ಹೊಂದಿದನು. ಹಿಜರಿ ಶಕ ೯೩೧ರಲ್ಲಿ ಇಸ್ಮಾಯಿಲ್ ಆದಿಲಶಹನ ವಯಸ್ಸು ೩೦ ವರುಷವಾಗಿತ್ತು.

ಇಬ್ರಾಹಿಮ ಆದಿಲಶಾಹನ ರಾಜ್ಯಾಡಳಿತ

ಮುದಗಲ್ ಸುತ್ತ ಮುತ್ತ ನಡೆಸಿದ ಬಂಡುಖೋರರನ್ನು ಹತ್ತಿಕ್ಕಲು ಇಸ್ಮಾಯಿಲನು ಯುದ್ಧಕ್ಕೆ ಹೋದಾಗ ಅವನಿಗೆ ಈ ಮೊದಲೇ ಆಗಿದ್ದ ಗಾಯದ ಮೇಲೆ ಮತ್ತೆ ಗಾಯವಾಯಿತು. ಅದರಿಂದಲೇ ಅವನು ಸತ್ತನು. ಗೋಗಿಯಲ್ಲಿ ಅವನ ದಫನ ಮಾಡಲಾಯಿತು. ಅವನಿಗೆ ಇಬ್ಬರು ಗಂಡು ಮಕ್ಕಳಿದ್ದರು. ಒಬ್ಬನ ಹೆಸರು ಇಬ್ರಾಹಿಮ ಎಂದಿತ್ತು. ಎರಡನೆಯವನ ಹೆಸರು ಅಲಿ ಎಂದಾಗಿತ್ತು.

ಅಲಿಯು ಖ್ವಾಜಾ ಅಮೀನನ ಜೊತೆಗೆ ಓಡಿ ಗೋವಾಕ್ಕೆ ಹೋದನು ಮತ್ತು ಅಲ್ಲಿಯ ಕ್ಯಾಪ್ಟನ್ನನಿಗೆ ವಿನಂತಿಸಿದ್ದು ಏನೆಂದರೆ, 'ನನ್ನ ಬಾದಶಾಹೀ ಅಧಿಕಾರವನ್ನು ಬೇರೊಬ್ಬನು ತೆಗೆದುಕೊಂಡು ಸಿಂಹಾಸನದ ಮೇಲೆ ಕುಳಿತಿದ್ದಾನೆ. ನಾನು ಓಡಿ ಪೋರ್ತುಗಾಲರ ಬಾದಶಹರ ಶರಣದಲ್ಲಿ ಬಂದಿದ್ದೇನೆ. ಕಾರಣ ತಾವು ನನಗೆ ಸಹಾಯಮಾಡಿ ನನ್ನ ಬಾದಶಾಹೀ ರಾಜ್ಯವನ್ನು ನನಗೆ ಕೊಡಿಸಿರಿ. ಯಾಕೆಂದರೆ ಇದರಿಂದ ಜಗತ್ತಿನಲ್ಲಿ ನಿಮ್ಮ ಹೆಸರು ಬಹಳ ಪ್ರಸಿದ್ಧವಾಗುತ್ತದೆ.' ಅದಕ್ಕೆ ಫಿರಂಗಿಗಳು ೮೦೦೦೦ ಸವಾರರ ಸೈನ್ಯವನ್ನು ತೆಗೆದುಕೊಂಡು ಯುದ್ಧಕ್ಕೆ ಸಿದ್ಧರಾದರು. ಆದಿಲಶಾಹಿ ರಾಜ್ಯವನ್ನು ಅಲಿಗೆ ಕೊಡಿಸಲು ಪ್ರಯತ್ನಿಸ ಹತ್ತಿದರು. ಫಿರಂಗಿಯರ ಈ ಸೈನ್ಯವು ಗೋವಾದಿಂದ ಹೊರಟು ಬಿಜಾಪುರ ಸರಹದ್ದಿನ ಮುರ್ತುಜಾಬಾದ ಊರ್ಫ ಮಿರಜದ ವರೆಗೆ ಬಂದು ಮಿರಜ ಕೋಟೆಯನ್ನು ತಮ್ಮ ಕೈವಶಕ್ಕೆ ತೆಗೆದುಕೊಂಡರು.

ಈ ಸುದ್ದಿಯು ಸಿಕಂದರಖಾನ [ಅಸದಖಾನ]ನಿಗೆ ತಿಳಿಯಲು, ಅವನು ಬಹಳ ಪ್ರಯತ್ನ ಮಾಡಿ ಅವರೊಂದಿಗೆ ಯುದ್ಧವಾಡಿದನು. ಆದರೆ ಅವನಿಗೆ ಅದರಲ್ಲಿ ಯಶಸ್ಸು ದೊರೆಯಲಿಲ್ಲ. ಆದ್ದರಿಂದ ಅವರೊಂದಿಗೆ ಒಪ್ಪಂದ ಮಾಡಿಕೊಳ್ಳಲು ಯೋಚಿಸಿದನು.. ಇದಕ್ಕಾಗಿ ಯಾರನ್ನು ಕಳಿಸಬೇಕೆಂದು ಯೋಚಿಸಿದನು. ಈ ಕೆಲಸಕ್ಕೆ ಸಾವಿರಾರು ಸೈನಿಕರನ್ನು ಹೊಂದಿದ ಒಬ್ಬ ವೀರ ಪುರುಷನು ಬೇಕು. ಅವನು ರಾಜಕೀಯದಲ್ಲಿ ಬಹಳಷ್ಟು ಮುತ್ಸದ್ಧಿಯೂ ಆಗಿರಬೇಕೆಂದು ಯೋಚಿಸಿದನು. ಈ ಕೆಲಸಕ್ಕೆ ಅವನ ದೊಡ್ಡಪ್ಪನ ಮಗ ಕಿಶ್ವರಖಾನ ಝೂಹಿದ ಬೇಗನೇ ಯೋಗ್ಯ ವ್ಯಕ್ತಿ ಎಂದು ಯೋಚಿಸಿದನು. ಯಾಕೆಂದರೆ ಅವನಿಗೆ ದೂರದೃಷ್ಟಿ ಇತ್ತು ಮತ್ತು ಅವನು ಯುದ್ಧದ ವಿಷಯದಲ್ಲಿ ಪರಿಣತನಾಗಿದ್ದನು. ಅವನನ್ನು ಕಳಿಸುತ್ತ ಅವನ ಜೊತೆಗೆ ಬೇರೆ ಸರದಾರರನ್ನೂ ಫಿರಂಗಿಯವರ ಜೊತೆಗೆ ಒಪ್ಪಂದ ಮಾಡಿಕೊಳ್ಳಲು ಕಳಿಸಿದನು.

ಯಾವಾಗ ಝೂಹಿದಬೇಗನು ನಗರದ ಹತ್ತಿರ ಬರುತ್ತಿದ್ದಂತೆ ಫಿರಂಗಿಯವರ ಗುಪ್ತಚಾರರು ಝೂಹಿದ ಬೇಗನು ಬರುತ್ತಿದ್ದಾನೆಂದು ಪೋರ್ತುಗಾಲದ ಬಾದಶಹನಿಗೆ ಸುದ್ದಿ ಕೊಟ್ಟನು. ಆಗ ಪೋರ್ತುಗೀಜರ ಬಾದಶಹನು ಹೀಗೆ ಹೇಳುತ್ತಾನೆ 'ಬರಲಿ, ಅವನ ಬುದ್ಧಿಯ ಮತ್ತು ಚುರುಕುತನದ ಪರೀಕ್ಷೆಯನ್ನು ನಾವು ಮಾಡೋಣ' ಅನಂತರ ಒಂದು ಆದೇಶ ಮಾಡಿ ಎಲ್ಲ ವಜೀರರು, ಅಮೀರರು, ಮತ್ತು ಅಧಿಕಾರಿಗಳು ಒಂದೇ ತರದ, ಒಂದೇ

ಬಣ್ಣದ ವೇಷವನ್ನು ತೊಟ್ಟುಕೊಂಡು ದರಬಾರದಲ್ಲಿ ಹಾಜರಾಗಿ ಕುಳಿತುಕೊಳ್ಳಬೇಕು. ಅದೇ ವೇಷದಲ್ಲಿ ಬಾದಶಹನೂ ಬಂದು ತನ್ನ ೧೮೦ ಸಹಚರರೊಡನೆ ಒಂದು ಡೇರೆಯಲ್ಲಿ ಕುಳಿತುಕೊಂಡರು. ಇದರಿಂದ ಬಾದಶಹನ ಉದ್ದೇಶವೆಂದರೆ ನಮ್ಮಗಳಲ್ಲಿ ಯಾರು ಬಾದಶಹ ಎಂಬುದನ್ನು ಝಾಹಿದ ಖಾನನು ಗುರುತಿಸಬೇಕು.

ಅತ್ತ ಝಾಹೀದಖಾನನೂ ಒಳ್ಳೇಯ ವಸ್ತ್ರಗಳನ್ನು ತೊಟ್ಟು ಬಾದಶಹರ ಡೇರೆಯಲ್ಲಿ ಹೋದನು. ಅಲ್ಲಿ ಹೋಗಿ ನೋಡಿದರೆ ಎಲ್ಲರೂ ಒಂದೇ ವೇಷದಲ್ಲಿ ಕುಳಿತದ್ದನ್ನು ಕಂಡು ಕೆಲವು ಹೊತ್ತು ಹಾಗೆಯೇ ನಿಂತು ಬಿಟ್ಟನು. ಅನಂತರ ಒಬ್ಬೊಬ್ಬರನ್ನಾಗಿ ನಿಂತಲ್ಲಿಂದಲೇ ನೋಡಿ, ಅಲ್ಲಿಯೇ ಕುಳಿತನು. ತುಸು ಹೊತ್ತಿನ ಮೇಲೆ ಅವರಲ್ಲಿ ಬಾದಶಹ ಯಾರೆಂದು ಗುರುತಿಸಿ ಅವನ ಹತ್ತಿರವೇ ಹೊಗಿ ಮುಜುರೆ ಸಲ್ಲಿಸಿದನು. ಪೋರ್ತುಗಾಲದ ಬಾದಶಹನು ಅವನ ಈ ಜಾಣತನಕ್ಕೆ ಬಹುವಾಗಿ ಮೆಚ್ಚಿದನು ಮತ್ತು ಅವನನ್ನು ಆಲಂಗಿಸಿಕೊಂಡು ತನ್ನ ಹತ್ತಿರವೇ ಕುಳ್ಳಿರಿಸಿಕೊಂಡನು. ಗೋವಾದ ಮುಖ್ಯಸ್ಥನಿಗೆ ಒಂದು ಪತ್ರ ಬರೆದನು. ಅದರಲ್ಲಿ ಝಾಹೀದ ಬೇಗನು ಹೇಳಿದಂತೆ ಒಪ್ಪಂದ ಪತ್ರವನ್ನು ಸಿದ್ಧ ಪಡಿಸಬೇಕು ಎಂದು ಹೇಳಿದನು.

ಝಾಹೀದ ಬೇಗನು ಆತನ ಪತ್ರವನ್ನು ತೆಗೆದುಕೊಂಡು ಗೋವಾಕ್ಕೆ ಬಂದನು. ಮತ್ತು ಒಪ್ಪಂದದಲ್ಲಿ ಶಾಸೇಬ ಹಾಗೂ ಬಾರ್ಡೆಜ ಪ್ರದೇಶಗಳನ್ನು ಅವರಿಗೆ ಕೊಟ್ಟು ಒಪ್ಪಂದ ಮಾಡಿಕೊಂಡನು.

ಈ ಒಪ್ಪಂದದಿಂದ ಇಬ್ರಾಹಿಮ ಆದಿಲಶಹನ ರಾಜ್ಯವು ಸುರಕ್ಷಿತವಾಯಿತು. ಮತ್ತು ಬಾದಶಹನು ಝಾಹೀದ ಬೇಗನ ಈ ಉಪಕಾರ ರಾಜ್ಯದ ಮೇಲೆ ತೀರಿಸಲಾರದಷ್ಟು ದೊಡ್ಡದಾಗಿದೆ ಎಂದನು. ಈ ಉಪಕಾರವನ್ನು ನಾನು ಹೇಗೆ ತೀರಿಸಲಿ ಎಂದನು. ಅದೇ ದಿನ ಸಿಕಂದರಖಾನನಿಗೆ ಅಸದಖಾನ ಎಂಬ ಬಿರುದನ್ನು ಕೊಟ್ಟು ಗೌರವಿಸಿದನು. ಅವನನ್ನು ತನ್ನ ತಂದೆಯ ಸಮಾನನಾಗಿ ತಿಳಿಯುತ್ತಿದ್ದನು. ಅಸದಖಾನನ ಮಗಳನ್ನು ಮದುವೆಯಾದನು. ಅಸದಖಾನನು ಈ ರಾಜ್ಯವನ್ನು ತಿರುಗಿ ನನಗೆ ದೊರಕಿಸಿಕೊಟ್ಟಿದ್ದಾನೆ. ಆದ್ದರಿಂದ ಅವನ ಈ ಮಗಳ ಹೊಟ್ಟೆಯಿಂದ ಹುಟ್ಟಿದ ನನ್ನ ಮಗುವೇ ಮುಂದಿನ ಬಾದಶಾಹ ಆಗಬೇಕೆಂದು ಘೋಷಿಸಿದನು. ಯಾಕೆಂದರೆ ಈ ಅಸದಖಾನನೇ ನನ್ನನ್ನು ಬಾದಶಹನನ್ನಾಗಿ ಮಾಡುವಲ್ಲಿ ಪ್ರಯತ್ನಿಸಿದಷ್ಟು ಬೆರೆ ಯಾರೂ ಮಾಡಿಲ್ಲ ಎಂದೂ ಹೇಳಿದನು.

ಬಿಜಾಪುರದಲ್ಲಿ ಜಮಾಲಖಾನನೆಂಬವನು ಹವಾಲ್ದಾರನಾಗಿ ಸೇವೆ ಸಲ್ಲಿಸುತ್ತಿದ್ದನು. ಫತಹಖಾನನ ಮಗ ಮುನ್ನಾಖಾನನು ಯೂಸುಫ ಆದಿಲಶಹನ ದತ್ತು ಮಗನಾಗಿದ್ದನು. ಈ ಮುನ್ನಾಖಾನನ ಮಗ ಒಬ್ಬ ಅಲೀಖಾನ ಎಂಬವನಿದ್ದನು. ಅವನಿಗೆ ಎಲ್ಲ ಜನರು ಮಲ್ಲೂ ಖಾನ, ಉಲ್ಲೂಖಾನ ಎಂದು ಕರೆಯುತ್ತಿದ್ದರು. ಇಸ್ಮಾಯಿಲ್ ಆದಿಖಾನನ

ಮರಣದ ನಂತರ ಜಮಾಲಖಾನನು ಅವನನ್ನು ಆದಿಲಶಾಹೀ ಸಿಂಹಾಸನದ ಮೇಲೆ ಕುಳ್ಳಿರಿಸಿದನು. ಗುಪ್ತಚರರು ಈ ಸುದ್ದಿಯನ್ನು ಅಸದಖಾನನಿಗೆ ತಿಳಿಸಿದರು. ಈ ಸಮಸ್ಯೆಯನ್ನು ಬಗೆಹರಿಸಲು ಸರನೋಬತನಾಗಿದ್ದ ಯೂಸುಫ ಕೋಚಕನಿಗೆ ಪರಗಣಾ ಮಾಣಿಯಲ್ಲಿದ್ದ ಸಿಕಂದರಸಾನೀ ಊರ್ಫ ಅಸದಖಾನನು ಒಂದು ಸಂದೇಶವನ್ನು ಕಳಿಸಿದನು. ಅದರಲ್ಲಿ ಹೀಗೆ ಬರೆದಿದ್ದನು: 'ನಾನು ನಿನ್ನ ಮೇಲೆ ಸಿಟ್ಟಾದಂತೆ ನಾಟಕ ಮಾಡುತ್ತೇನೆ. ನೀನು ಜಮಾಲಖಾನನ ಹತ್ತಿರ ಓಡಿ ಹೋಗು. ನಂತರ ಒಂದು ಸೂಕ್ತ ಸಂದರ್ಭವನ್ನು ನೋಡಿ ಇವರೆಲ್ಲರಿಗೆ ಶಿಕ್ಷೆಯನ್ನು ಕೊಡೋಣ.'

ಇದನ್ನು ಕೇಳಿದ ಯೂಸುಫ ಕೋಚಕನು ತನ್ನ ಕುದುರೆಗಳಿಗೆ ಜೀನಗಳನ್ನು ತೊಡಿಸಿ ಓಡಿ ಹೋಗುವ ಪ್ರಯತ್ನದಲ್ಲಿದ್ದನು. ಈ ಸುದ್ದಿಯನ್ನು ಸಿಕಂದರ ಸಾನಿ ಊರ್ಫ ಅಸದಬೇಗನಿಗೆ ಅವನ ಗುಪ್ತ ಚರರು ತಿಳಿಸಿದರು. ಆಗ ಸಿಕಂದರ ಸಾನಿಯು ತನ್ನ ಜನರಿಗೆ ಸಂದೇಶವನ್ನು ಕೊಡುತ್ತ ತಕ್ಷಣ ಅವನನ್ನು ಬಂಧಿಸಿ ನನ್ನ ಹತ್ತಿರ ಕರೆದುಕೊಂಡು ಬನ್ನಿರಿ ಎಂದು ಹೇಳಿ ಕಳಿಸಿದನು. ಈ ಆದೇಶ ದೊರೆಯುತ್ತಿದ್ದಂತೆ ಅವನ ಜನರು ಅವನನ್ನು ಹಿಡಿಯಲು ಓಡಿದರು. ಆದರೆ ಅವನು ೩೦೦೦ ಕುದುರೆ ಮತ್ತು ೨೦೦೦ ಕಾಲ್ದಳ ಸೈನ್ಯದೊಂದಿಗೆ ಓಡಿ ಹೋಗಿ ಜಮಾಲಖಾನನ್ನು ಸೇರಿದನು.

ಜಮಾಲಖಾನನು ಯೂಸುಫ ಕೋಚಕನ ಹಳೆಯ ಗೆಳೆಯನಾಗಿದ್ದನು. ಅವನು ಯೂಸುಫ ಕೋಚಕನನ್ನು ಬಾದಶಹನ ಹತ್ತಿರ ಕರೆದುಕೊಂಡು ಹೋಗಿ ಮುಜುರೆ ಸಲ್ಲಿಸಿದನು. ಮತ್ತು ಬಾದಶಹನ ಕಡೆಯಿಂದ ಇವನಿಗೆ ರಾಜವಸ್ತ್ರ ಮತ್ತು ಕಾಣಿಕೆಗಳನ್ನು ಕೊಡಿಸಿದನು ಮತ್ತು ಅವನನ್ನು ಯೂಸುಫ ಆದಿಲಶಹನ ತಂಗಿಯ ಹವೇಲಿಯಲ್ಲಿ ಇರಲು ಸ್ಥಳ ಮಾಡಿ ಕೊಟ್ಟನು. ಇದೇ ತಂಗಿಯು ಇಸ್ಮಾಯಿಲ ಆದಿಲಶಹನ ಪಾಲನೆ ಪೋಷಣೆ ಮಾಡಿದ್ದಳು.

ಕೆಲವು ದಿನಗಳ ನಂತರ ನಂತರ ಯೂಸುಫ ಕೋಚಕನು ಹಜರತ್ ಮಹಮ್ಮದ ಪೈಗಂಬರರ ಹೆಸರಿನಲ್ಲಿ 'ನಿಯಾಜ ಮತ್ತು ಫಾತೆಹಾ' [ಹಜರತ್ ರ ಹೆಸರಿನಲ್ಲಿ ಉತ್ಸವ] ಏರ್ಪಡಿಸಿದನು. ಅದರ ನಿಮಿತ್ತವಾಗಿ ಬಾದಶಹ, ವಜೀರರು ಮತ್ತು ಎಲ್ಲ ದರಬಾರಿ ಸಿಬ್ಬಂದಿಗಳಿಗೆ ಊಟದ ಆಮಂತ್ರಣವನ್ನು ಕೊಟ್ಟನು.. ಅವರು ಕೋಚಕನ ಆಮಂತ್ರಣವನ್ನು ಸ್ವೀಕರಿಸಿ ಅವನ ಮನೆಗೆ ಬಂದರು. ಯೂಸುಫ ಕೋಚಕನು ಅಧಿಕ ಪ್ರಮಾಣದ, ರುಚಿಕಟ್ಟಾದ ಒಳ್ಳೆಯ ಅಡುಗೆಯನ್ನು ಮಾಡಿಸಿದ್ದನು. ಅದನ್ನು ತಟ್ಟೆಯಲ್ಲಿಟ್ಟು, ಊಟದ ವಸ್ತ್ರವನ್ನು ಹಾಸಿ ಅದರ ಮೆಲೆ ಇಟ್ಟನು. ಬಂದವರಿಗೆ ಊಟಕ್ಕೆ ಬಂದು ಕೂಡಲು ವಿನಂತಿಸಿಕೊಂಡನು. ಅಲ್ಲಿ ನೀರು, ಎಲೆ ಅಡಿಕೆ, ಸುಗಂಧ ದ್ರವ್ಯಗಳೆಲ್ಲವೂ ಇದ್ದುವು. ಸ್ವತಃ ತಾನೇ ಅವರೆಲ್ಲರ ಕೈಗೆ ನೀರು ಹಾಕಿದನು ಮತ್ತು ತನ್ನ ಸಿಪಾಯಿಗಳಿಂದ ಅಡುಗೆಯನ್ನು ಬಡಿಸಲು ನಿಯುಕ್ತಿಗೊಳಿಸಿದನು. ಎಲ್ಲ ಜನರು ಕೈ ತೊಳೆದುಕೊಂಡು ಊಟಕ್ಕೆ ಕುಳಿತಾಗ ಯೂಸುಫ ಕೋಚಕನು ತನ್ನೆಲ್ಲ ಜನರಿಗೆ ಆದೇಶ ಕೊಡುತ್ತ ಹವೆಲಿಯ ಎಲ್ಲ ಬಾಗಿಲುಗಳನ್ನು

ಮುಚ್ಚಿಸಿದನು. ಅಲ್ಲಿದ್ದ ಎಲ್ಲರನ್ನು ಅವರ ಕುತ್ತಿಗೆ ಮತ್ತು ಕಾಲುಗಳನ್ನು ಕಟ್ಟಿ ಸಿಕಂದರ ಸಾನಿ ಊರ್ಫ ಅಸದಖಾನನಿಗೆ ಈ ಸುದ್ದಿಯನ್ನು ತಿಳಿಸಿದನು ಮತ್ತು ಮುಂದಿನ ಆದೇಶಕ್ಕಾಗಿ ಕಾಯುತ್ತಿರುವೆ ಎಂದು ಹೇಳಿ ಕಳಿಸಿದನು.

ಈ ಸುದ್ದಿಯು ಮುಟ್ಟುತ್ತಿದ್ದಂತೆ ಸಿಕಂದರ ಊರ್ಫ ಅಸದಖಾನನು ಮರು ಸಂದೇಶ ಕಳಿಸುತ್ತ ಹೀಗೆ ಆದೇಶಿಸಿದನು: 'ಬಂಧಿಸಿದ ಎಲ್ಲರನ್ನೂ ಕೊಲೆ ಮಾಡಬೇಕು ಮತ್ತು ಅವರಲ್ಲಿಯ ಒಬ್ಬರೂ ಜೀವಂತ ಉಳಿಯಬಾರದು. ಅನಂತರ ನೀನು ಆದಷ್ಟು ಬೇಗ ಗೋಗಿಗೆ ಹೋಗಿ ಇಬ್ರಾಹಿಮ ಆದಿಲಶಾಹನನ್ನು ಕರೆದುಕೊಂಡು ಬಂದು ಬಿಜಾಪುರದ ಸಿಂಹಾಸನದ ಮೇಲೆ ಕುಳ್ಳಿರಿಸಬೇಕು. ಅಷ್ಟು ಹೊತ್ತಿಗೆ ನಾನು ಅಲ್ಲಿಗೆ [ಬಿಜಾಪುರ] ಬಂದು ನಿನ್ನನ್ನು ಭೆಟ್ಟಿಯಾಗುತ್ತೇನೆ.'

ಈ ಆದೇಶ ದೊರೆಯುತ್ತಿದ್ದಂತೆ ಯೂಸುಫ ಕೋಚಕನು ಬಂಧಿಸಿದ ಎಲ್ಲ ಜನರನ್ನು ಕೊಲ್ಲಿಸಿದನು. ಹೀಗೆ ೩೦೦ರಿಂದ ೪೦೦ ಜನರು ಕುರಿಗಳಂತೆ ಕೊಲೆಯಾದರು. ಅವರಲ್ಲಿ ಮಲ್ಲೂಖಾನ ಮತ್ತು ಅವನ ಪರಿವಾರದವರು ಸೇರಿ ೧೪ ಜನರು ಇದ್ದರು. ಜಮಾಲಖಾನ ಜೊತೆಗೆ ಅವನ ಜನರು ಎಲ್ಲರೂ ಕೊಲೆಯಾದರು. ಮೀರ ಶಮಸುದ್ದೀನನನ್ನು ತನ್ನ ಕಡೆಯಿಂದ ಬಿಜಾಪುರದ ಕೋಟೆಯಲ್ಲಿ ಇಟ್ಟನು. ಅವನು ಸ್ವತಃ ಇಬ್ರಾಹಿಮ ಆದಿಲಶಹನನ್ನು ಕರೆದುಕೊಂಡು ಬರಲು ಗೋಗಿಗೆ ಹೊರಟನು. ಇಷ್ಟರಲ್ಲಿ ಸಿಕಂದರ ಊರ್ಫ ಅಸದಖಾನನು ಅಲ್ಲಿಗೆ ಬಂದು ಮುಟ್ಟಿದ್ದನು. ಗೋಗಿಯಿಂದ ಇಬ್ರಾಹಿಮ ಆದಿಲಶಹನನ್ನು ತಂದು ಬಿಜಾಪುರದ ಸಿಂಹಾಸನದ ಮೇಲೆ ಕುಳ್ಳಿರಿಸಿದರು.

ಹಿಜರಿ ಶಕ ೯೩೧ರಲ್ಲಿ ನಡೆದ ಘಟನೆಗಳು.

- ಇಬ್ರಾಹಿಮ ಆದಿಲಶಹನು ಬಿಜಾಪುರ ಸಿಂಹಾಸನದ ಮೇಲೆ ಕುಳಿತನು.
- ಇಬ್ರಾಹಿಮ ಆದಿಲಶಹನನ್ನು ಗೋಗಿಯಿಂದ ಬಿಜಾಪುರಕ್ಕೆ ಕರೆದು ತಂದರು.
- ಸಿಕಂದರ, ಅಸದಖಾನನು ಪ್ರಧಾನ ಸಿಪಹ ಸಾಲಾರನಾದನು
- ಅಸದಖಾನನು ಬೆಳಗಾವಿಗೆ ಹೋದನು.
- ಯೂಸುಫ ಕೋಚಕನು ಸರನೌಬತನಾದನು.
- ಜಮಾಲಖಾನನು ತನ್ನ ಗದ್ದಾರಿಗೆ (ವಿಶ್ವಾಸ ದ್ರೋಹಕ್ಕೆ) ಶಿಕ್ಷೆಯನ್ನು ಪಡೆದನು.
- ಯೂಸುಫ ಕೋಚಕನು ಒಂದು ದೊಡ್ಡ ಊಟದ ಆಮಂತ್ರಣವನ್ನು ನೀಡಿದನು.
- ಉಲ್ಲೂಖಾನನ ಕೊಲೆಯಾಯಿತು.
- ಅಲಿಯು ಪೋರ್ತುಗಾಲ ಬಾದಶಹನ ಆಶ್ರಯದಲ್ಲಿ ಹೋದನು.
- ಝೂಹಿದ ಬೇಗನು ಫಿರಂಗಿಗಳೊಂದಿಗೆ ಒಪ್ಪಂದ ಮಾಡಿಕೊಂಡನು.

ಹಿಜರಿ ಶಕ ೯೩೨ರಲ್ಲಿ ನಡೆದ ಘಟನೆಗಳು.

- ಗೋವಾದ ಸಾಸ ಮತ್ತು ಬಾರ್ದೀಸ್ ಬಂದರಗಳನ್ನು ಕೊಟ್ಟು ಒಪ್ಪಂದ ಮಾಡಿಕೊಳ್ಳಲಾಯಿತು.
- ಇಲ್ಲಿ ಆಲಂ ಖಾನನು ಮುಖ್ಯಸ್ಥನಾಗಿದ್ದನು.
- ಮನ್ನಜೀ ಪುಣೆದಾರ ಹಸರಿನ ಬಾಜಾರ ಇತ್ತು.
- 'ಕಬಾ ಎಹರಾಮ್ ಮುರೀದ' ಮಸ್ಜಿದನ್ನು ಕಟ್ಟಲಾಯಿತು.
- ಮೊಹಮ್ಮದ ಸರನೌಬತನು ಪ್ರಬಲನಾಗಿದ್ದನು.

ಹಿರಿ ಶಕ ೯೩೩ದಲ್ಲಿ ಇಬ್ರಾಹೀಮಪುರವನ್ನು ಕಟ್ಟಲಾಯಿತು

ಹಿಜರಿ ಶಕ ೯೩೫ದಲ್ಲಿ ಮೊಹಮ್ಮದಖಾನನು ವಜೀರನಾಗಿದ್ದನು.

ಹಿಜರಿ ಶಕ ೯೩೬ದಲ್ಲಿ ಇಬ್ರಾಹೀಮ ಶಾಹನು ಹುಸೇನ ಸಿಕಂದರ ಆಕಾನ ಅಳಿಯನಾದನು.

ಹಿಜರಿ ಶಕ ೯೩೯ದಲ್ಲಿ ಮೊಹಮ್ಮದನು ರಾಜ್ಯದ ಹಿರಿಯ ವಜೀರನಾಗಿದ್ದನು.

ಹಿಜರಿ ಸಕ ೯೪೨ದಲ್ಲಿ ನಡೆದ ಘಟನೆಗಳು

- ಒಬ್ಬ ಬ್ರಾಹ್ಮಣನನ್ನು ಅಸ್ಫಹಾನಿಗೆ ಕಳಿಸಲಾಯಿತು ಮತ್ತು ಅವನು ಹೋದ ಉದ್ದೇಶವನ್ನು ಪೂರೈಸಿಕೊಂಡು ಬಂದನು.
- ಇರಾನದಿಂದ ಮುರಾದಖಾನನು ಬಂದನು ಮತ್ತು ಅವನು ಫಿರಂಗಿಗಳೊಂದಿಗೆ ಯುದ್ಧವಾಡಿದನು.
- ಮುರಾದಖಾನನು ಬೆಳಗಾವಿಗೆ ಹೋಗಿ ಅಸದಖಾನನ್ನು ಭೆಟ್ಟಿಯಾದನು.
- ಮೂರು ಆನೆಗಳ ಭಾರದ ವಸ್ತುಗಳನ್ನು ಕೊಟ್ಟು ಮುರಾದಖಾನನ್ನು ಗೌರವಿಸಲಾಯಿತು
- ಐನುಲ್ ಮುಲ್ಕನು ಗೋವೆಯಿಂದ ಫಿರಂಗಿಗಳನ್ನು ಯುದ್ಧಕ್ಕೆ ಕರೆಯಿಸಿಕೊಂಡನು.
- ಐನುಲ್ ಮುಲ್ಕನು ಸೋತು ಓಡಿ ಹೋದನು.
- ಸೋಲಾಪುರದ ಮೊದಲಿನ ಹೆಸರು ಸಿರಾಪೋಲ ಎಂದಿತ್ತು.
- ಅಹಮದನಗರದ ನಿಜಾಮಶಾಹನು ಬಿಜಾಪುರದ ಮೇಲೆ ದಾಳಿ ಮಾಡಿದನು.
- ಮಲಿಕ್ ರುಕ್ನುದ್ದೀನನು ಯುದ್ಧಕ್ಕೆ ಬಂದನು.
- ಐನುಲ್ ಮುಲ್ಕನು ಬಂಡುಖೋರನಾದನು.

ಹಿಜರಿ ಶಕ ೯೪೩ದಲ್ಲಿ ಐನುಲ್ ಮುಲ್ಕ ಇಬ್ರಾಹಿಮ ಆದಿಲಶಹನ ವಿರುದ್ಧ ಬಂಡೆದ್ದನು. ಈ ಸುದ್ದಿಯು ಯಾವಾಗ ಬೆಳಗಾವಿಯ ಅಸದಖಾನನಿಗೆ ಮುಟ್ಟಿತೋ,

ಅವನು ನರಸೂ ಪಂಡಿತ ಹೆಸರಿನ ಒಬ್ಬ ಬ್ರಾಹ್ಮಣ, ಅವನು ವಿದ್ವಾಂಸನಿದ್ದ, ವಾಕ್ಚತುರನಿದ್ದನು ಮತ್ತು ಕಾರ್ಯಸಿದ್ಧಿಯ ಮನುಷ್ಯನಾಗಿದ್ದನು. ಅವನನ್ನು ಬೆಲೆಯುಳ್ಳ ಕಾಣಿಕೆಗಳೊಂದಿಗೆ ಒಂದು ವಿನಂತಿ ಪತ್ರವನ್ನು, ಅದರಲ್ಲಿ ನಮ್ಮ ಸಹಾಯಕ್ಕಾಗಿ ನಿಮ್ಮ ಬೆಂಬಲವನ್ನು ನೀಡಿರಿ ಎಂದು ಬರೆದು ಖುರಾಸಾನದ ಬಾದಶಾಹನ ಹತ್ತಿರ ಕೊಟ್ಟು ಕಳಿಸಿದನು. ಖುರಾಸಾನದ ಬಾದಶಹನು ಅಸದಖಾನನ ಈ ಪತ್ರವನ್ನು ನೋಡಿದ ತಕ್ಷಣ, ಮುರಾದಖಾನ ಮಂತ್ರಿಗೆ ತುರ್ಕಸ್ಥಾನದ ಏಳು ಪ್ರಾಂತಗಳನ್ನು ಜಹಗೀರು ಹಾಕಿ ಕೊಟ್ಟು, ಶಾಹ ಮುರಾದ ಎಂಬ ಬಿರುದನ್ನು ಕೊಟ್ಟು, ಒಂದು ದೊಡ್ಡ ಸೈನ್ಯದೊಂದಿಗೆ ಇತ್ತ ಕಡೆಗೆ ಕಳಿಸಿಕೊಟ್ಟನು.

ಶಾಹ ಮುರಾದನು ಇಲ್ಲಿಗೆ ಬಂದು ಬೆಳಗಾವಿಯ ಮುಖ್ಯಸ್ಥನನ್ನು [ಅಸದಖಾನ] ಕೂಡಿಕೊಂಡು ಬಿಜಾಪುರದ ಸರಹದ್ದಿನಲ್ಲಿದ್ದ ಬಂಡುಖೋರರನ್ನು ಹತ್ತಿಕ್ಕಿದರು. ಅನಂತರ ಬಿಜಾಪುರಕ್ಕೆ ಬಂದನು. ಅಹಮದನಗರದ ಬಾದಶಹನೊಂದಿಗೆ ಯುದ್ಧವಾಡಿ ಅವನನ್ನು ಸೋಲಿಸಿದನು. ಆ ನಂತರ ಇಬ್ರಾಹಿಮ ಆದಿಲಶಹನನ್ನು ಭೆಟ್ಟಿಯಾದನು. ಆದಿಲಶಾಹನು ಅವನನ್ನು ಅತ್ಯಂತ ಆದದರದಿಂದ ಗೌರವಿಸಿದನು. ಅವನಿಗೆ ರಾಜ್ಯ ವಸ್ತ್ರಗಳನ್ನು ಕೊಟ್ಟು, ೧೦೧ ಆನೆಗಳನ್ನು ಕೊಟ್ಟನು. ಅನಂತರ ಅವನು ಕಲಬುರ್ಗಿಗೆ ಹೋದನು. ಅಲ್ಲಿಯ ಕೋಟೆಯನ್ನು ಪುನರ್ನವೀಕರಿಸಿದನು.

ಹಿಜರಿ ಶಕ ೯೫೩ರಲ್ಲಿ ಇಬ್ರಾಹೀಮ ಆದಿಲಶಹನು ಖ್ವಾಜಾ ಕಮಾಲ ಬಿನ್ ಅರ್ಶದ್ ಖಾನನನ್ನು ಕರೆಯಿಸಿ ಅವನಿಗೆ ಕಿಶ್ವರಖಾನ ಎಂಬ ಬಿರುದನ್ನು ಕೊಟ್ಟನು. ಅಹಮದನಗರದ ನಿಜಾಮಶಾಹನು ಧೂಳಖೇಡದವರೆಗೆ ಬಂದಿದ್ದನು. ಇಬ್ರಾಹೀಮ ಆದಿಲಶಹನೊಂದಿಗೆ ಯುದ್ಧವನ್ನು ಮಾಡುತ್ತಿದ್ದನು. ಅಸದಖಾನನು ತಕ್ಷಣ ತನ್ನ ಸೈನ್ಯದ ಜೊತೆಗೆ ಅಲ್ಲಿಗೆ ಹೊಗಿ ನಿಜಾಮಶಾಹನೊಂದಿಗೆ ಯುದ್ಧಮಾಡಿ ಅವನನ್ನು ಸೋಲಿಸಿದನು. ನಿಜಾಮಶಾಹನ ಎಲ್ಲ ಸೈನ್ಯವೂ ಓಡಿ ಹೋಯಿತು. ಈ ಯುದ್ಧದಲ್ಲಿ, ನಿಜಾಮಶಾಹಿಯ ಎಲ್ಲ ರಾಜ ಚಿಹ್ನೆಗಳು ಚಿತ್ರಶಾಹಿ ನಗಾರಿಗಳು, ನಿಶಾನೆ ಮೊದಲಾದವುಗಳಲ್ಲದೆ ತೋಫುಗಳು ಮತ್ತು ಅನೇಕ ಆನೆಗಳು ಅಸದಖಾನನ ಕೈವಶವಾದುವು.

ಇಷ್ಟರಲ್ಲಿ ಒಂದು ಸುದ್ದಿ ಬಂದಿತ್ತು. ಪರಗಣೆ ಜಮಖಂಡಿಯ ದೇಸಾಯಿಯು ಬಂಡುಖೋರನಾಗಿ ತಲೆಬೇನೆಯಾಗಿದ್ದನು. ಬಾದಶಹನು ಅಸದಖಾನನಿಗೆ ಹೀಗೆ ಹೇಳಿದನು. 'ನೀವು ಹೇಗಾದರೂ ಬೆಳಗಾವಿಗೆ ಹೋಗುತ್ತಿದ್ದಿರಿ, ದಾರಿಯಲ್ಲಿಯೇ ಜಮಖಂಡಿ ಇದೆ. ಹೋಗ ಹೋಗುತ್ತ ಅವನಿಗೆ ಪಾಠ ಕಲಿಸಿ ಹೋಗಿರಿ' ಇದನ್ನು ಕೇಳಿದ ಅಸದಖಾನನು ಹೀಗೆ ಉತ್ತರಿಸಿದನು. 'ಈ ಕೆಲಸಕ್ಕೆ ನಾನು ಹೋಗುವ ಅವಶ್ಯಕತೆ ಇಲ್ಲ. ನಿಮ್ಮ ದರಬಾರಿನ ಯಾರನ್ನಾದರೂ ಕಳಿಸಿದರೆ ಸಾಕು ಕೆಲಸ ಆಗುತ್ತದೆ'. ಅನಂತರ ಅಸದಖಾನನೇ ಖ್ವಾಜಾ ಕಮಾಲನಿಗೆ ಹೀಗೆ ಹೇಳಿದನು. 'ನಾನು ನಿನ್ನನ್ನು ಜಮಖಂಡಿಯ ಹವಾಲ್ದಾರನನ್ನಾಗಿ ನಿಯುಕ್ತಿ ಗೊಳಿಸುತ್ತೇನೆ. ಜೊತೆಗೆ ಬೇರೆ ನಾಲ್ಕು ಯೋದ್ಧರನ್ನು ಕೊಡುತ್ತೇನೆ' ಇದನ್ನು ಕೇಳಿದ ದರಬಾರದ ಜನರು ಹೀಗೆ ಹೇಳಿದರು: 'ಇಂಥ ಕಷ್ಟದ ಸಂದರ್ಭದಲ್ಲಿ ನಾಲ್ಕು

ಜನರಿಂದ ಏನಾದೀತು?' ಆಗ ಅಸದಖಾನನು ಹೇಳಿದನು. 'ನಾನು ಕೂಡ ಇಲ್ಲಿಗೆ ಬಂದಾಗ ನಾಲ್ಕೇ ಜನರು ನನ್ನೊಂದಿಗೆ ಇದ್ದರು ಮತ್ತು ಒಂದು ಬಡಿಗೆ ಮಾತ್ರ ಇತ್ತು. ಆದರೂ ಕೂಡ ಇಂದು ನಾನು ಈ ಮಟ್ಟಕ್ಕೆ ಬೆಳೆದಿದ್ದೇನೆ. ಮತ್ತು ನನ್ನ ಮಗನೇ ಆದರೂ ಹೀಗೆಯೇ ಮಾಡಬೇಕೆಂದರೆ ಮಾಡುತ್ತಾನೆ.'

ಅನಂತರ ಅವನು ಬಾಬಾಜಿ ನಾಯಕವಾಡಿ ಜೊತೆಗೆ ೬೦ ಜನರನ್ನು ಅತ್ತ ಕಡೆಗೆ ಕಳಿಸಿದನು. ಖ್ವಾಜಾಕಮಾಲನು ಕೇವಲ ಇಷ್ಟೇ ಜನರೊಂದಿಗೆ ಜಮಖಂಡಿಗೆ ಹೋದನು. ಇವರೆಲ್ಲರೂ ಜಮಖಂಡಿಗೆ ಹೋದಾಗ ದೈವ ಪ್ರೇರಣೆಯಿಂದ ಜಮಖಂಡಿಯ ದೇಸಾಯಿಯು ೩ ಕೋಸ ದೂರದ ಒಂದು ತೋಟದಲ್ಲಿ ತನ್ನ ಕುಟುಂಬದೊಂದಿಗೆ ವಿಶ್ರಾಂತಿಯಲ್ಲಿದ್ದನು. ಇದರಿಂದಾಗಿ ವಿರೋಧವಿಲ್ಲದೆ ಜಮಖಂಡಿಯನ್ನು ತಮ್ಮ ಕೈವಶಕ್ಕೆ ತೆಗೆದುಕೊಂಡರು. ಅರಮನೆಯಲ್ಲಿ ಹೋದಾಗ ಅಲ್ಲಿ ಬೀಗ ಹಾಕಿದ ೯ ದ್ರವ್ಯ ಭಾಂಡಾರಗಳನ್ನು ಕಂಡರು. ಅವುಗಳನ್ನು ಕಾಯಲು ನಾಲ್ಕು ಜನ ಹವಾಲ್ದಾರರಿದ್ದರು. ದೇಸಾಯಿಯು ಎಲ್ಲಿದ್ದಾನೆಂದು ಅವರನ್ನು ಕೇಳಿದಾಗ ಅವರು, ಅವನು ೩ ಕೋಸ ದೂರದ ತೋಟವೊಂದರಲ್ಲಿ ಇದ್ದುದನ್ನು ಹೇಳಿದರು. ಅನಂತರ ಈ ಕೋಣೆಗಳಲ್ಲಿ ಏನಿದೆ ಎಂದು ಕೇಳಿದರು. ಮೊದಲು ಅದಕ್ಕೆ ಅವರು ಏನೂ ಹೇಳಲಿಲ್ಲ. ಆಗ ಅವರಿಗೆ ತುಸು ಹಣವನ್ನು ಲಂಚವನ್ನಾಗಿ ಕೊಟ್ಟು ಕೇಳಿದರು. ಅದಕ್ಕೆ ಅವರು ಬಾಯಿ ಬಿಟ್ಟರು. ಈ ಕೋಣೆಗಳಲ್ಲಿ ಶಕ್ತಿವಂತರಾದ ಮತ್ತು ಹರೆಯದ ತರುಣ ಸೈನಿಕರನ್ನು ಬಂಧಿಸಿ ಇಡಲಾಗಿದೆ ಮತ್ತು ಅವರನ್ನು ಕಾಯಲು ನಮ್ಮನ್ನು ಇಟ್ಟಿದ್ದಾರೆ ಎಂದು ಹೇಳಿದರು. ಆಗ ಬಿಜಾಪುರದ ಜನರು ಆ ನಾಲ್ವರನ್ನೂ ಕಂಬಕ್ಕೆ ಕಟ್ಟಿ ಬಿಗಿದರು ಮತ್ತು ಲೋಹಾರನನ್ನು ಕರೆಯಿಸಿ ಕೋಣೆಗಳ ಬೀಗಗಳನ್ನು ಒಡೆದರು. ಬಂಧಿತ ಸೈನಿಕರನ್ನು ಬಿಡುಗಡೆ ಮಾಡಿದರು. ೯ ಕೋಣೆಗಳಲ್ಲಿಯ ೮ ಕೋಣೆಗಳಲ್ಲಿ ಸೈನಿಕರನ್ನು ತುಂಬಿದ್ದರು. ೯ನೆಯ ಕೋಣೆಯಲ್ಲಿ ವಿವಿಧ ಶಸ್ತ್ರಗಳನ್ನು ಆಯುಧಗಳನ್ನು ತುಂಬಿದ್ದರು.

ಖ್ವಾಜಾ ಕಮಾಲನು ಆ ಎಲ್ಲ ಶಸ್ತ್ರಗಳನ್ನು ಹೊರ ತೆಗೆದು ಬಂಧಮುಕ್ತ ಸ್ಯನಿಕರಿಗೆ ವಿತರಿಸಿ ಅವರನ್ನು ಕರೆದುಕೊಂಡು ದೇಸಾಯಿಯ ಮೇಲೆ ಯುದ್ಧ ಮಾಡಲು ಹೊರಟನು. ಈ ಸುದ್ದಿಯು ದೇಸಾಯಿಗೆ ಗೊತ್ತಾಗುತ್ತಿದ್ದಂತೆ ಅವನೂ ತನ್ನ ಸ್ಯನಿಕರನ್ನು ಕರೆಯಿಸಿ ಖ್ವಾಜಾ ಕಮಾಲನನ್ನು ಎದುರಿಸಲು ಹೊರಟನು. ಉಭಯತರ ಮಧ್ಯ ಘನಘೋರ ಯುದ್ಧವಾಯಿತು. ಈ ಯುದ್ಧದಲ್ಲಿ ಖ್ವಾಜಾ ಕಮಾಲನು ಜಮಖಂಡಿಯ ದೇಸಾಯಿ ಮತ್ತು ಅವನ ಕುಟುಂಬ ಜೊತೆಗೆ ಅವನ ಸೈನ್ಯವನ್ನು ಕತ್ತರಿಸಿ ತುಂಡು ಮಾಡಿದನು. ಹೀಗೆ ಕತ್ತರಿಸಿದ ೧೨೦೦ ಶಿರಗಳನ್ನು ತನ್ನ ಕಕ್ಕನಿಗೆ [ಅಸದಖಾನನಿನಗೆ] ಕಳಿಸಿ ಅವನಿಗೆ ಒಂದು ಪತ್ರವನ್ನು ಬರೆದನು. ಅದರಲ್ಲಿ 'ಇಷ್ಟು ಶಿರಗಳನ್ನು ಅತ್ಯಾದರಿಂದ ತಮಗೆ ಕಳಿಸುತ್ತಿರುವೆ. ತಾವು ಇಚ್ಛಿಸಿದರೆ, ಇವುಗಳನ್ನು ಕೋಟೆಯ ಬುರುಜುಗಳ ಮೇಲೆ ತೂಗು ಹಾಕಬೇಕು.' ಎಂದು ಬರೆದನು. ಅವನ ಒಕ್ಕಣಿಕೆಯಂತೆ ಆ ಎಲ್ಲ ಶಿರಗಳನ್ನು ಕೋಟೆಯ

ಬುರುಜುಗಳ ಮೇಲೆ ತೂಗು ಹಾಕಿದರು. ಖ್ವಾಜಾ ಕಮಾಲನ ಈ ಬಹಾದ್ದೂರಿ ಕೆಲಸಕ್ಕಾಗಿ ಅವನಿಗೆ ಗೌರವವನ್ನು ಸೂಚಿಸುತ್ತ ವಸ್ತ್ರಗಳನ್ನು, ಕುದುರೆಗಳನ್ನು ಕಳಿಸುತ್ತ ಅವನನ್ನು ಜಮಖಂಡಿಯ ಹವಾಲ್ದಾರನನ್ನಾಗಿ ನಿಯಮಿಸಿದರು. ಬಿಜಾಪುರಕ್ಕೆ ಬರಲು ಅಸದಖಾನನು ಖ್ವಾಜಾ ಕಮಾಲನಿಗೆ ತಿಳಿಸಿದನು. ಅದರಂತೆ ಖ್ವಾಜಾ ಕಮಾಲನು ಬಿಜಾಪುರಕ್ಕೆ ಬಂದು ತಲುಪಿದನು.

ಖ್ವಾಜಾ ಕಮಾಲನು ಬಿಜಾಪುರಕ್ಕೆ ಬಂದ ನಂತರ ಅಸದಖಾನನು ಬೆಳಗಾವಿಗೆ ಹೊರಟನು. ಆಗ ಇಬ್ರಾಹಿಮ ಆದಿಲಶಹನು ಅಸದಖಾನನಿಗೆ ವಿನಂತಿಸುತ್ತ, 'ನೀವು ನನ್ನ ಜೊತೆಗೆಯೇ ಇರಬೇಕು' ಎಂದು ಹೇಳಿದನು. 'ನೀವು ಇಲ್ಲಿದ್ದರೆ ಬಿಜಾಪುರದ ಬಾದಶಾಹೀ ಪ್ರಭಾವವು ಅಧಿಕವಾಗುತ್ತದೆ' ಎಂದನು. ಆಗ ಅಸದಖಾನನು, 'ನಾನು ಹೋಗದಿದ್ದರೆ, ಬೆಳಗಾವಿಯು ಸುರಕ್ಷಿತವಾಗಿ ಇರುವುದಿಲ್ಲ.' ಎಂದನು. ಅದಕ್ಕೆ ಬಾದಶಹನು 'ಹಾಗಾದರೆ, ನೀವು ಹೋಗಬೇಕೆಂದೇ ಆದರೆ ಈ ಖ್ವಾಜಾ ಕಮಾಲಖಾನನ್ನಾದರೂ ನನ್ನ ಹತ್ತಿರ ಇರಲು ಹೇಳಿರಿ' ಎಂದು ಹೇಳುತ್ತ, ಖ್ವಾಜಾ ಕಮಾಲಖಾನನಿಗೆ ಕಿಶ್ವರಖಾನ ಎಂಬ ಬಿರುದನ್ನು ಕೊಟ್ಟನು ಮತ್ತು ಬಾದಶಹನು ತನ್ನ ಹತ್ತಿರವೇ ಇಟ್ಟುಕೊಂಡನು.

ಪ್ರತಿ ವರುಷ ನಾಟಕ ಸಂಗಿತ ನಡೆಯುತ್ತಿದ್ದ ನವರಸವನ್ನು ಅವನಿಗೆ ಜಹಗೀರು ಹಾಕಿ ಕೊಟ್ಟನು. ಅರಕಿಲ್ಲೆಯಲ್ಲಿಯ ಫಾರೂಕ ಮಹಲಿನಲ್ಲಿ ಇರಲು ಸ್ಥಳ ಕೊಟ್ಟು ಅವನಿಗೆ ಸರಕಾರೀ ಸಿಕ್ಕಾ, ಮೊಹರುಗಳನ್ನು ಕೊಟ್ಟನು ಮತ್ತು ರಾಜ್ಯದ ಮುಖ್ಯ ಆಡಳಿತಗಾರನನ್ನಾಗಿ ನಿಯಮಿಸಿ ತನ್ನ ಹತ್ತಿರವೇ ಇಟ್ಟುಕೊಂಡನು.

ಹಿಜರಿ ಶಕೆ ೯೫೨ ಅಲಿಖಾನ ಸ್ವತಃ ಓಡಿ ಹೋದನು. ಹಿಜರಿ ಶಕ ೯೫೩ದಲ್ಲಿ ಮುರಾದಖಾನನೆ ಗೋವಾ ನತ್ತು ದಾಬುಲಗಳನ್ನು ಗೆದ್ದನು, ಚೌಲದಿಂದ ಅವನಿಗೆ ಬಹಳಷ್ಟು ಹಣ ದೊರಕಿತು., ಪನ್ಹಾಳಾ, ತಳಕೊಂಕಣಗಳು ಇಬ್ರಾಹಿಮನ ವಶಕ್ಕೆ ಬಂದುವು. ರಾಜ್ಯದ ಆಡಳಿತವನ್ನು ವ್ಯವಸ್ಥಿತವಾಗಿ ಮಾಡಿದರು.

ಹಿಜರಿ ಶಕ ೯೫೫ದಲ್ಲಿ ಇಬ್ರಾಹಿಮನು ಅಸದಖಾನನಿಂದ ಕಿಶ್ವರಖಾನನನ್ನು ಪಡೆದನು.

ಹಿಜರಿ ಶಕ ೯೫೭ದಲ್ಲಿ ಕಾಲ್ದಳವು ೨,೩೦,೯೫೦ ಇತ್ತು.

ಹಿಜರಿ ಶಕ ೯೫೮ದಲ್ಲಿ ಕಾಬಾದ ನೆರಳಿನಂತೆ ಜಾಮಿಯಾ ನಿರ್ಮಾಣವಾಯಿತು, ೨,೯೦,೩೫೦ ಸವಾರರಿದ್ದರು.

ಹಿಜರಿ ಶಕ ೯೫೯ದಲ್ಲಿ ಆದಿಲಶಾಹಿ ಖುತಬಾ ಜಾರಿಯಲ್ಲಿ ಬಂದಿತು.

ಹಿಜರಿ ಶಕ ೯೬೦ದಲ್ಲಿ ಮಿರ್ ಜಂಜೀಖಾನನು ಹೆಸರಾಂತ ವಜೀರರಾಗಿದ್ದನು.

ಹಿಜರಿ ಶಕ ೯೬೨ದಲ್ಲಿ ಮೊಹಿಬ್ಬುಖಾನನು ವಜೀರನಾದನು.

ಹಿಜರಿ ಶಕ ೯೬೫ರಲ್ಲಿ ಇಬ್ರಾಹಿಮ ಆದಿಲಶಾಹನ ವಯಸ್ಸು ೫೦ ವರುಷವಾಗಿತ್ತು. ಇಬ್ರಾಹಿಮ ಆದಿಲಶಹನು ಮರಣ ಹೊಂದಿದನು.

ಅಲಿ ಆದಿಲಶಹನು ಪಟ್ಟಕ್ಕೆ ಬಂದದ್ದು

ಅಲಿ ಆದಿಲಶಹನು ಮಿರಜದ ಕೋಟೆಯಲ್ಲಿದ್ದನು. ಅದರ ವಿವರ ಹೀಗಿದೆ: ಸಿಕಂದರ ಅಸದಖಾನನಿಗೆ ಥಮಾಸ್ಪ [ಮಗಳ ಮಗ] ಎಂಬವನಿದ್ದನು. ಇಬ್ರಾಹಿಮ ಆದಿಲಶಹನನು ತನ್ನ ನಂತರ ಥಮಾಸ್ಪನನ್ನೇ ಪಟ್ಟಕ್ಕೆ ಕುಳ್ಳಿರಿಸಬೇಕೆಂದು ಇಚ್ಛಿಸಿದ್ದನು. ಈ ಕುರಿತು ಇಚ್ಛಾಪತ್ರವನ್ನೂ ಬರೆದಿಟ್ಟಿದ್ದನು. ಅವನ ಹಿರಿಯ ಮಗ ಶಾಹ ಅಲಿಯನ್ನು ಅವನು ಇಚ್ಛಿಸುತ್ತಿದ್ದಿಲ್ಲ ಮತ್ತು ಅವನನ್ನು ಕೊಲ್ಲಬೇಕೆಂದು ಮಾಡಿದ್ದನು. ಅಸದಖಾನನು ಮಿರಜ ಕೋಟೆಯ ಮುಖ್ಯಸ್ಥನಾಗಿದ್ದನು ಮತ್ತು ಮಿರಜ ಪ್ರದೇಶವೆಲ್ಲ ಅಸದಖಾನನ ವಶದಲ್ಲೇ ಇತ್ತು. ದರಬಾರದ ಜನರಿಗೆ ಅಲಿಯನ್ನು ಇಲ್ಲಿ ಕೊಲ್ಲಬೇಕೆಂಬ ಮನಸ್ಸಿರಲಿಲ್ಲ. ಅದರಂತೆ ಅವರು ಬಾದಶಾಹನಿಗೆ ಹೇಳುತ್ತ, ನೀವು ತಹಮಾಸ್ಪನನ್ನೇ ಉತ್ತರಾಧಿಕಾರಿಯನ್ನಾಗಿ ಮಾಡಬೇಕೆಂದಿದ್ದರೆ, ಶಾಹ ಅಲಿಯನ್ನು ಅಸದಖಾನನ ವಶಕ್ಕೆ ಕೊಡಿರಿ. ಅವನು ಈತನನ್ನು ಕೊಲ್ಲಬೇಕೆಂದರೆ ಕೊಲ್ಲುತ್ತಾನೆ ಇಲ್ಲವಾದಲ್ಲಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತಾನೆ ಎಂದು ಹೇಳಿದರು.

ಆಗ ಅಲಿಯನ್ನು ಬಂಗಾರದ ಸರಪಳಿಯಲ್ಲಿ ಬಂಧಿಸಿ ಅವನನ್ನು ಅಸದಖಾನನ ಹತ್ತಿರ ಮಿರಜಕ್ಕೆ ಕಳಿಸುತ್ತ, ಇಬ್ರಾಹಿಮ ಆದಿಲಶಾಹನು ಅಸದಖಾನನಿಗೆ ಹೀಗೆ ಪತ್ರ ಬರೆದನು: 'ನಾನು ತಹಮಾಸ್ಪನನ್ನು ಸಿಂಹಾಸನದ ಮೇಲೆ ಕುಳ್ಳಿರಿಸಬೇಕೆಂದು ನಿರ್ಧರಿಸಿದ್ದೇನೆ, ಆದ್ದರಿಂದ ನಿನಗೆ ಆಣೆಯಾಗಿದೆ. ನೀನು ಶಾಹ ಅಲಿಯನ್ನು ಕೊಲ್ಲಬೇಕು ಅಥವಾ ಅವನ ಎರಡೂ ಕಣ್ಣುಗಳನ್ನು ತೆಗೆದು, ಕುರುಡನನ್ನಾಗಿ ಮಾಡಬೇಕು ಅಥವಾ ಅವನ ಕೈಯ ಬೆರಳನ್ನು ಕತ್ತರಿಸಿ ಗುರುತಿಗಾಗಿ ನನಗೆ ಕಳಿಸಬೇಕು.'

ಆದರೆ ದರಬಾರದಲ್ಲಿಯ ಕಮಾಲ ಕಿಶ್ವರಖಾನನು, ಅಸದಖಾನನಿಗೆ ರಹಸ್ಯವಾಗಿ ಹೀಗೆ ಪತ್ರ ಬರೆದನು. 'ತಾವು ಬುದ್ಧಿವಂತರು, ದೂರದೃಷ್ಟಿಯುಳ್ಳವರು, ೧೦೫ ವರುಷ ಹಿರಿಯರು, ಶಾಹ ಅಲಿಗೆ ಯಾವುದೇ ಹಾನಿಯಾಗಬಾರದು ಎಂದು ನನಗೆ ಅನಿಸುತ್ತದೆ, ಯಾಕೆಂದರೆ ಭವಿಷ್ಯದಲ್ಲಿ ಅವನೇ ಬಾದಶಹನಾಗುತ್ತಾನೆ' ಎಂದು ಬರೆದನು. ಅಸದಖಾನನೂ ಸ್ವತಃ ಜ್ಯೋತಿಷ್ಯ, ಹಸ್ತ ಸಾಮುದ್ರಿಕೆ ಮತ್ತು ಮುಖ ಲಕ್ಷಣಗಳಿಂದ ಭವಿಷ್ಯ ಹೇಳುವ ಕಲೆಯಲ್ಲಿ ಪರಿಣತನಾಗಿದ್ದನು. ಒಂದು ದಿನ ಅವನು ಈ ಇಬ್ಬರೂ ರಾಜಪುತ್ರರ ಜಾತಕಗಳನ್ನು ಪರೀಕ್ಷಿಸಿದನು. ತಹಮಾಸ್ಪನ ದೈವದಲ್ಲಿ ಬಾದಶಾಹಿ ಇಲ್ಲ ಎಂದು ಗೊತ್ತಾಯಿತು. ಆದರೆ ಅವನ ಒಬ್ಬ ಮಗನಿಗೆ ಬಾದಶಾಹೀ ಯೋಗವಿದೆ ಎಂಬುದೂ ಗೊತ್ತಾಯಿತು. ಅಲಿಯ ಜಾತಕದಲ್ಲಿ ಬಾದಶಾಹೀ ಯೋಗವಿದೆ ಎಂದು ತಿಳಿದುಕೊಂಡನು. ಆಗ ಒಂದು ಚಿಗರೆಯ ಕಣ್ಣುಗಳನ್ನು ಕತ್ತರಿಸಿ ಜೊತೆಗೆ ಅಲಿಯ ವಯಸ್ಸಿನ ಒಬ್ಬ ಹುಡುಗನ

ಬೆರಳನ್ನು ಕತ್ತರಿಸಿ ಇಬ್ರಾಹೀಮ ಆದಿಲಶಾಹನಿಗೆ ಕಳಿಸಿದನು. ಮತ್ತು ಹೀಗೆ ಬರೆದನು: 'ತಮ್ಮ ಆದೇಶದಂತೆ ನಾನು ಮಾಡಿದ್ದೇನೆ'

ಇಬ್ರಾಹೀಮ ಆದಿಲಶಹನ ಮರಣದ ನಂತರ ಬಿಜಾಪುರದ ಹವಾಲ್ದಾರನಾದ ಜೀತಖಾನನು ಅವನ ಶವವನ್ನು ಗೋಗಿಗೆ ಕಳಿಸಿಕೊಟ್ಟನು. ಶಾಹ ಥಮಾಸ್ಪ ಮತ್ತು ಅವನ ಇಬ್ಬರು ಸಹೋದರರನ್ನು ಬಂಧನದಲ್ಲಿಟ್ಟರು. ಆಗ ದರಬಾರದ ವಜೀರರು ಜೀತಖಾನನಿಗೆ ಹೇಳುತ್ತ ಅಣ್ಣತಮ್ಮಂದಿರಲ್ಲಿಯ ಒಬ್ಬ ರಾಜಪುತ್ರನನ್ನು ನಮಗೆ ಕೊಟ್ಟರೆ ಅವನನ್ನು ಬಾದಶಹನನ್ನಾಗಿ ಮಾಡುತ್ತೇವೆ ಎಂದು ಹೇಳಿದರು.

ಆಗ ಅದು ನನ್ನ ಕೆಲಸವಲ್ಲ ಎಂದು ಜೀತಖಾನನು ಹೇಳುತ್ತ ಇಲ್ಲಿಯ ವಿಷಯಗಳನ್ನು ನಾನು ಅಸದಖಾನನಿಗೆ ಬರೆದು ತಿಳಿಸುತ್ತೇನೆ ಮತ್ತು ಅವನಿಗೆ ಹೇಗೆ ಯೋಗ್ಯ ಅನಿಸುತ್ತದೆಯೋ ಹಾಗೆ ಮಾಡುತ್ತಾನೆ ಎಂದು ಉತ್ತರಕೊಟ್ಟು, ಇಲ್ಲಿಯ ಎಲ್ಲ ವಿಷಯಗಳ ವಿವರಗಳನ್ನು ಬರೆದು ಅಸದಖಾನನಿಗೆ ತಿಳಿಸಿದನು. ಸಿಕಂದರ ಅಸದಖಾನನಿಗೆ ಇಲ್ಲಿಯ ವಿಷಯ ತಿಳಿದಾಗ, ಮಿರಜ ಕೋಟೆಯಲ್ಲಿ ಬಂಧಿತನಾಗಿದ್ದ ಅಲಿಯನ್ನು ಬಾದಶಹ ಎಂದು ಘೋಷಿಸಿ ಅವನ ತಲೆಯ ಮೇಲೆ ಶಾಹೀ ಛತ್ರವನ್ನು ಹಿಡಿದರು. ಅಲ್ಲಿಯೇ ದರಬಾರವನ್ನು ಮಾಡಿದರು. ಅಮೀರರು ಬಾದಶಹನಿಗೆ ನಜರಾನೆಗಳನ್ನು ಕೊಟ್ಟರು ಮತ್ತು ಅಲಿಯನ್ನು ಕರೆದುಕೊಂಡು ಅಸದಖಾನನು ದರಬಾರದ ಜನರೊಂದಿಗೆ ಬಿಜಾಪುರದತ್ತ ಹೊರಟನು.

ಅಲ್ಲಿಂದ ಹೊರಟವರು ದಾರಿಯಲ್ಲಿ ತೊರವಿಗೆ ಬಂದು ಇಳಿದುಕೊಂಡರು. ಮತ್ತು ಜೀತಖಾನನಿಗೆ ಪತ್ರ ಬರೆಯುತ್ತ, 'ನೀನು ತಹಮಾಸ್ಪ ಮತ್ತು ಅವನ ಇಬ್ಬರು ತಮ್ಮಂದಿರ ಕಣ್ಣುಗಳನ್ನು ತೆಗೆದು ಬಿಡು. ನಾವು ಶಾಹ ಅಲಿಯನ್ನು ರಾಜ ಸಿಂಹಾನದ ಮೇಲೆ ಕುಳ್ಳಿರಿಸುತ್ತೇವೆ' ಎಂದು ಆದೇಶ ಮಾಡಿದನು. ಆಗ ಜೀತಖಾನನು ಉತ್ತರ ಕಳಿಸುತ್ತ, 'ನಾನು ಈ ರಾಜ್ಯದ ವಾರಸದಾರನೂ ಅಲ್ಲ ಮತ್ತು ಆಗಬೇಕೆಂದು ಇಚ್ಛಿಸಿದವನೂ ಅಲ್ಲ. ಎಂದು ಹೇಳುತ್ತ ತಹಮಾಸ್ಪ ಮತ್ತು ಅವನ ತಮ್ಮಂದಿರನ್ನು ಅಲಿ ಆದಿಲಶಹನ ಸಮ್ಮುಖಕ್ಕೆ ಕಳಿಸಿದನು. ಆಗ ಅಲಿ ಆದಿಲಶಹನು ತಹಮಾಸ್ಪ ಮತ್ತು ಅವನ ಇಬ್ಬರೂ ತಮ್ಮಂದಿರ ಕಣ್ಣುಗಳನ್ನು ಕೀಳಿಸಿದನು. ಅನಂತರ ಬಿಜಾಪುರಕ್ಕೆ ಬಂದು ಆದಿಲಶಾಹೀ ಸಿಂಹಾಸನವನ್ನು ಅಲಂಕರಿಸಿದನು. ತಹಮಾಸ್ಪನನ್ನು ಕಾಮಿಲಖಾನನ ವಶಕ್ಕೆ ಕೊಟ್ಟನು. ಅಲಿ ಆದಿಲಶಹನ ಪಟ್ಟಕ್ಕೇರಿದ ಹಿಜರಿ ಶಕೆ ೯೬೫.

ಹಿಜರಿ ಶಕ ೯೬೫ ದಲ್ಲಿ, ಸಿಕಂದರ ಸಾನೀ ಅಸದಖಾನ ಮಿರಜದಲ್ಲಿ ಶಾಹಅಲಿಯ ತಲೆಯಮೇಲೆ ಶಾಹೀಛತ್ರವನ್ನು ಹಿಡಿದರು. ಕಮಾಲ ಕಿಶ್ವರಖಾನನು ದೊಡ್ಡ ದರಬಾರಿಯಾಗಿದ್ದನು. ಕಾಮಿಲಖಾನನು ವಜೀರನಿದ್ದನು. ಹೈದರಖಾನನು ಅಧಿಕಾರಿಯಾಗಿದ್ದನು. ಹಮೀದಖಾನನು ವಜೀರನಾಗಿದ್ದನು. ಅಂಬರ ಹಬಶಿಯು ಚತುರ ವಜೀರನಾಗಿದ್ದನು. ನಿಯಾಮತುಲ್ಲಾಹರ ದರ್ಗಾವನ್ನು ನಿರ್ಮಿಸಿದರು.

ಹಿಜರಿ ಶಕೆ ೯೬೬ದಲ್ಲಿ, ಆಲಮಖಾನನು ಹಳೆಯ ಸೇವಕನಾಗಿದ್ದನು. ಕಿಶ್ವರಖಾನನು ನಗರದಲ್ಲಿ ನೀರಿನ ವ್ಯವಸ್ಥೆಯನ್ನು ಮಾಡಿದ್ದನು.

ಹಿಜರಿ ಶಕೆ ೯೬೭ ಶಾಹಪುರ ಉಪನಗರವನ್ನು ಕಟ್ಟಲು ಪ್ರಾರಂಭವಾಯಿತು. ರಾಯಚೂರು ಕೋಟೆ ಇಬ್ರಾಹೀಮನ ವಶವಾಯಿತು. ತೊರಗಲ್ ಮತ್ತು ಬದಾಮಿ ಕೋಟೆಗಳನ್ನು ಕೈವಶ ಮಾಡಿಕೊಳ್ಳಲಾಯಿತು. ಶಾಹ ಅಕಮಲ್‌ನು ಬಂಡುಕೋರನಾದನು. ಶಾಹಬುರುಜ ಮತ್ತು ಮಹಾ ಬುರುಜುಗಳ ಬುನಾದಿಯನ್ನು ಹಾಕಿದರು. ಆಲಮ ಮುಸ್ತಫಾಖಾನನು ಕಿಯಾನಿ ನ್ಯಾಯ ನಿಬಂಧನೆಗಳನ್ನು ರಚಿಸಿದನು.

ಹಿಜರಿ ಶಕ ೯೬೮ದಲ್ಲಿ ನಯಮತುಲ್ಲಾನನ್ನು ಸವಾರಿಯಾಗಿ ಕಳಿಸಿದನು. ಅಲಿ ಆದಿಲಶಹನು ಸಬ್ಜಮಹಲನ್ನು ಕಟ್ಟಿಸಿದನು. ಗಗನ ಮಹಲನ್ನು ಕಟ್ಟಿಸಿದನು. ಜಗತ್ ರಾವನು ಕೊನಕರ್ತಿಯಲ್ಲಿದ್ದನು. ಮೊಹಮ್ಮದ ಅಲಿಯು ಅಧ್ಯಾಪಕ ವೃತ್ತಿಯಲ್ಲಿದ್ದನು. ಸಯ್ಯದ ಮುಸ್ತಫಾಖಾನನು ವಜೀರನಿದ್ದನು.

ಹಿಜರಿ ಶಕ ೯೬೯ದಲ್ಲಿ, ಬಾದಶಹನು ಕೈಯಲ್ಲಿ ಹೂವುಗಳನ್ನು ಹಿಡಿದನು. ಅಲಿ ಬಾದಶಹನು ಧಾರವಾಡವನ್ನು ಕೈವಶ ಮಾಡಿಕೊಂಡನು. ಶಾಹ ಅಬ್ದುಲ್ ಹಸನನು ಮಹಾಲ್ದಾರನಾಗಿದ್ದನು. ಶಾಹ ಅಬು ತುರಾಬನು ಅಮೀರ ಸರ್‌ನೌಬತ್ ನಾಗಿದ್ದನು. ಅಲಿ ಆದಿಲಶಹನು ರಾಮರಾಜನನ್ನು ಭೆಟ್ಟಿಯಾಗಲು ಹೋದನು,

ಹಿಜರಿ ಶಕ ೯೭೦ದಲ್ಲಿ, ಶಕರಲ್ಲಾನು ಗೋವಾದಿಂದ ಬಂಕಾಪುರಕ್ಕೆ ಬಂದನು. ಅಲಿಯು ಮಹಾ ಶಕ್ತಶಾಲಿಯಾದನು. ಮಂಜಲೀಖಾನನು ಮಹಾ ವಜೀರನಾದನು.

ಹಿಜರಿ ಶಕ ೯೭೧ದಲ್ಲಿ, ಕಿಶ್ವರಖಾನನೊಂದಿಗೆ ಸೇರಿದನು. ಹುಸೇನಶಾಹ, ಅಲಿ ಆದಿಲಶಹ ಮತ್ತು ಕುತುಬಶಾಹ ಎಲ್ಲರೂ ಕೂಡಿಕೊಂಡು ರಾಮರಾಜನ ಮೇಲೆ ದಾಳಿ ಮಾಡಿದರು. ಜಾಮಿನಖಾನ ಮಲಿಕ್ ಪ್ರಬಲನಾದನು. ನೂರಖಾನನು ವಜೀರನಾದನು. ದಿವೇಂದ್ರ ಕಸಾಯಿಯು ಸಭಾಪಂಡಿತನಾದನು. ಮೀರ ಜವ್ವಾದನು ಸಿಪಾಯಿಯಾದನು. ಅವನ ಜೊತೆಗೆ ಜಹಾಂಗೀರಖಾನನಿದ್ದನು. ನನ್ನಹೆ [ಸಣ್ಣ] ಮೀರ ಮತ್ತು ಬಡೇ [ದೊಡ್ಡ] ಮೀರ ಎಂಬ ಇಬ್ಬರು ಸಿಪಾಯಿಗಳಿದ್ದರು, ರಾಮನಾಥ ಕಸಾಯಿಯು ಜಾಣಾಕ್ಷನಾಗಿದ್ದನು. ಅನ್‌ಸಫ್ ಜೋರ್ ಮತ್ತು ಕದೀರ ಮುದಾಮಿ ವಜೀರರಾಗಿದ್ದರು. ಎರಡು ಉದ್ಯಾನವನಗಳನ್ನು ನಿರ್ಮಿಸಲಾಯಿತು.

ಹಿಜರಿ ಶಕ ೯೭೨ದಲ್ಲಿ ಅಲಿಶಹ ಅಮ್ಜದುಲ್ ಮುಲುಕನು ಪ್ರಬಲ ಅಮೀರನಾಗಿದ್ದನು. ಆಲಂಖಾನನಿಗೆ ಆನೆಯನ್ನು ಕೊಡಲು ಆದೇಶವಾಯಿತು. ೩೦,೫೫೦ ಸವಾರರಿದ್ದರು. ಕೋಟೆಯ ಗೋಡೆಗಳನ್ನು ಕಟ್ಟಿದರು.

ಹಿಜರಿ ಶಕ ೯೭೩ದಲ್ಲಿ, ಮೋತಿಖಾನನು ದೊಡ್ಡ ವಜಿರನಾಗಿದ್ದನು. ಒಟ್ಟು ಆನೆಗಳು

೭೩೫ ಇದ್ದುವು. ಘೋಲಾದಖಾನನು ವಜೀರನಾಗಿದ್ದನು. ಇದ್ರೀಸನ ಜೊತೆಗೆ ಒಂದು ಸೈನ್ಯವನ್ನು ಕೊಟ್ಟು ಕಳಿಸಿದನು.

ಹಿಜರಿ ಶಕ ೯೭೫ದಲ್ಲಿ ಅಲಿ ಬಾದಶಹನು ಶಾಹದುರ್ಗದ ಕೋಟೆಯನ್ನು ಕೈವಶ ಮಾಡಿಕೊಂಡನು. ಮೂವರು ಬಾದಶಹರು ಸೇರಿ ಬಿಜಾಪುರ ಮೇಲೆ ದಾಳಿ ಮಾಡಿದರು. ೨೦ ಸಾವಿರ ಸೈನ್ಯದೊಂದಿಗೆ ಕಿಶ್ವರಖಾನನು ಮಲ್ನಾಡದತ್ತ ಹೊರಟನು. ಮಲ್ನಾಡದ ಕಿಲ್ಲೇದಾರನು ಅಲ್ಲಿಂದ ಮೂರು ಸಲ ಓಡಿ ಹೋದನು. ಮೂವರು ಬಾದಶಹರು ಏಳು ಲಕ್ಷ ಹೊನ್ನುಗಳನ್ನು ಕೊಟ್ಟರು. ಇಲ್ಲಿ ಫತಹುಲ್ ಮುಲುಕ ಮಹಾಲ್ದಾರನಾಗಿದ್ದನು. ಅವನು ಶಾರ್ಜಾ ಅಹಮದ ಬಕ್ರಿಯ ಹತ್ತಿರ ಹೊಸದಾಗಿ ಬಂದಿದ್ದನು. ಮೀರ ಹುಸೇನನು ಮೀರ್ ಜುಮ್ಲಾನಾಗಿದ್ದನು. [ಪ್ರಧಾನ ಲೆಕ್ಕಾಧಿಕಾರಿ] ಕಿಶ್ವರಖಾನನು ಧಾರವಾಡದಲ್ಲಿ ಇರುತ್ತಿದ್ದನು. ಕಮಾಲ ಕಿಶ್ವರಖಾನನ ನಿಧನ.

ಹಿಜರಿ ಶಕ ೯೭೬ದಲ್ಲಿ ಹಾಜಿ ಕಿಶ್ವರಖಾನನು ಸಿಪೇಹ ಸಾಲಾರ ಮತ್ತು ಗೌರವಾನ್ವಿತ ವಜೀರನಾಗಿದ್ದ ತನ್ನ ತಂದೆಯ ಹುದ್ದೆಯನ್ನು ಅಲಂಕರಿಸಿದನು.

ಹಿಜರಿ ಶಕ ೯೭೭ದಲ್ಲಿ ಸಯ್ಯದ ಮುಸ್ತಫಾ ನೌಕರಿಯಮೇಲೆ ಬಂದನು. ಬುಲ್ ಬುಲ್ ಖಾನನು ಒಬ್ಬ ದೊಡ್ಡ ವಜೀರನಾಗಿದ್ದನು.

ಹಿಜರಿ ಶಕ ೯೭೮ದಲ್ಲಿ ಅಲಿ ಆದಿಲಶಹನ ದರಬಾರದಲ್ಲಿ ಅನೇಕ ಜೋಗಿಗಳು, ಜ್ಯೋತಿಷಿಗಳು, ವೈದ್ಯರು, ರಮಲ ಹೇಳುವವರು, ಇರುತ್ತಿದ್ದರು.

ಹಿಜರಿ ಶಕ ೯೭೯ದಲ್ಲಿ ತಾಜನ್‌ಮುಲುಕ ಎಂಬ ಒಬ್ಬ ವಜೀರನಿದ್ದನು.

ಹಿಜರಿ ಶಕ ೯೮೮ದಲ್ಲಿ ಅಲಿ ಆದಿಲಶಹನು ಹುತಾತ್ಮನಾದನು. ಆಗ ಅವನ ವಯಸ್ಸು ೪೭ ಇತ್ತು.

ಎರಡನೆಯ ಇಬ್ರಾಹಿಮ ಆದಿಲಶಹನು ಪಟ್ಟಕ್ಕೆ ಬಂದದ್ದು

ಎರಡನೆಯ ಇಬ್ರಾಹಿಮ ಆದಿಲಶಹನು ಪಟ್ಟಕ್ಕೆ ಬಂದ ಕಾರಣವು ಹೀಗಿದೆ: ಶಾಹ ಥಮಾಸ್ಪನನ್ನು ಕಾಮಿಲಖಾನನ ಉಸ್ತುವಾರಿಯಲ್ಲಿ ಕೊಟ್ಟಿದ್ದರು. ಅವನ ಒಂದು ಕಣ್ಣಾಗಿ ಅವನ ಪಾಲನೆ ಪೋಷನೆಯನ್ನು ಮಾಡುತ್ತಿದ್ದನು. ಶಾಹ ಥಮಾಸ್ಪನಿಗೆ ಇಬ್ಬರು ಗಂಡು ಮಕ್ಕಳಿದ್ದರು. ಒಬ್ಬನು ಇಬ್ರಾಹಿಮ ಇನ್ನೊಬ್ಬನು ಇಸ್ಮಾಯಿಲ. ಅಲಿ ಆದಿಲಶಹನು ಸಹೋದರನ ಈ ಇಬ್ಬರೂ ಮಕ್ಕಳನ್ನು ತನ್ನ ಹತ್ತಿರವೇ ಇಟ್ಟುಕೊಂಡು ಪೋಷಿಸುತ್ತಿದ್ದನು. ಪ್ರತಿ ದಿನವೂ ಈ ಇಬ್ಬರನ್ನೂ ತನ್ನ ಹತ್ತಿರವೇ ಮಲಗಿಸಿಕೊಳ್ಳುತ್ತಿದ್ದನು. ದೈವ ಪ್ರೇರಣೆ ಹಾಗೂ ಅಲ್ಲಾಹನ ಆಜ್ಞೆಯಂತೆ ಬಾದಶಹನು ಮರಣಹೊಂದುವ ಸಮಯ ಬಂದಾಗ, ಬಾದಶಹನು ಮಲಗುವ ಕೋಣೆಯಲ್ಲಿ ನಿದ್ರೆ ಮಾಡುತ್ತಿದ್ದನು. ಒಬ್ಬ ನೀಚ, ದುಷ್ಟ ಸೇವಕನು ತನ್ನ ಚೂರಿಯಿಂದ ಬಾದಶಾಹನನ್ನು ಗಾಯಗೊಳಿಸಿದನು. ಬಾದಶಹನು ಈ

ತನ್ನ ಅಂತ್ಯ ಸಮಯದಲ್ಲಿ ತನ್ನ ಸಹೋದರನ ಇಬ್ಬರೂ ಮಕ್ಕಳನ್ನು ಕೂಗಿ ಕರೆದನು. ಆಗ ಇಬ್ರಾಹಿಮನು ಎಚ್ಚರದಿಂದ ಇದ್ದನು. ಬಾದಶಹನ ಹತ್ತಿರ ಬಂದನು ಮತ್ತು ಕೇಳಿದನು. ಆಗ ಬಾದಶಹನು, ಅಲ್ಲಾಹನ ಆದೇಶದ ಮುಂದೆ ಯಾರದ್ದೂ ಏನೂ ನಡೆಯುವುದಿಲ್ಲ. ಕಾಮಿಲಖಾನನ್ನು ಕರೆಯಲು ಹೇಳಿದನು. ಅನಂತರ ಬಾದಶಹನು ತನ್ನ ನಂತರ ಇಬ್ರಾಹೀಮನನ್ನು ಪಟ್ಟದ ಮೇಲೆ ಕುಳ್ಳಿರಿಸಲು ಹೇಳಿದನು ಮತ್ತು ಅರ್ಧರಾತ್ರಿಯ ನಂತರ ಬಾದಶಹನು ಮರಣ ಹೊಂದಿದನು. ಬೆಳಗಿನ ಜಾವ ಇಬ್ರಾಹೀಮನನ್ನು ಪಟ್ಟದ ಮೇಲೆ ಕುಳ್ಳಿರಿಸಿದರು. ಆಗ ಇಬ್ರಾಹೀಮನು ಒಂಬತ್ತು ವರುಷದವನಿದ್ದನು. ಅಲಿ ಆದಿಲಶಾಹನನ್ನು ನವಬಾಗದಲ್ಲಿ ದಫನ ಮಾಡಲಾಯುಯಿತು. ಇಂದಿನ ವರೆಗೂ ಅಲಿ ಆದಿಲಶಹನ ಗೋರಿಯು ಅಲಿರೋಜಾ ಎಂದು ಪ್ರಸಿದ್ಧವಾಗಿದೆ.

ಎರಡನೆಯ ಮಗ ಇಸ್ಮಾಯಿಲನು ಬೆಳಗಾವಿಗೆ ಓಡಿ ಹೋದನು. ಈ ಘಟನೆ ನಡೆದದ್ದು ಹಿಜರಿ ಶಕ ೯೮೮. ಇದೇವರುಷ

- ಮಂಜನಖಾನನು ವಜೀರನಾಗಿದ್ದನು.
- ಕಾಮಿಲಖಾನನ ಮರಣವಾಯಿತು.
- ಸಲಾಬತಖಾನನು ವಜೀರನಾಗಿದ್ದನು.
- ಚಾಂದಮಿಯಾ ಪಟ್ಟೇದಾರ, ಎರಡನೆಯ ಐನುಲ್ ಮುಲ್ಕರು ವಜೀರರಾಗಿದ್ದನು.
- ಹಾಜಿ ಕಿಶ್ವರ ಓಡಿ ಹೋದನು.
- ದಿಲಾವರಖಾನನು ಅಮೀರನಾಗಿದ್ದನು.

ಹಿಜರಿ ಶಕ ೯೯೦ದಲ್ಲಿ ಬಹು ದೊಡ್ಡದಾದ ಹಪ್ತಗಗನ [ಸಾತಮಂಜಲಿ], ವನ್ನು ಕಟ್ಟಿಸಿದನು.

ಹಿಜರಿ ಶಕ ೯೯೧ದಲ್ಲಿ ಮೊಹಮ್ಮದಖಾನ ದಿಲಾವರನ ಉಸ್ತುವಾರಿಯಲ್ಲಿ ದಿಲ್ ಕಶ್ ಮಹಲ ಕಟ್ಟಡವನ್ನು ಕಟ್ಟಿಸಿದನು.

ಹಿಜರಿ ಶಕ ೯೯೨ದಲ್ಲಿ ಅಲಿ ಹೈದರೀ ಬುರುಜ [ಉಪಲಿ ಬುರುಜ] ಕಟ್ಟಲಾಯಿತು. ಕಮಾಲಖಾನ, ಯೂಸುಫ ಸವಾಲಾಖಿ, ಮಕ್ಸೂದ ಆಕಾ, ಬಂಡೀ ಶಹನಾ, ಸಯ್ಯದ ಹೈದರ ಮೊದಲಾದವರು ವಜೀರರಾಗಿದ್ದರು.

ಹಿಜರಿ ಶಕ ೯೯೫ದಲ್ಲಿ ನವರಸ ಮಹಲದ ಕಟ್ಟುವಿಕೆ ಪ್ರಾರಂಭವಾಯಿತು. ಮಲಿಕ ಜಹಾಂ ಮಸೀದ ಕಟ್ಟಲಾಯಿತು.

ಹಿಜರಿ ಶಕ ೯೯೬ದಲ್ಲಿ ಭಲ್ಲಮಖಾನನು ವಜೀರನಾಗಿದ್ದನು, ಮೀರ ರಫಿ ಹವಾಲ್ದಾರನಾಗಿದ್ದನು.

ಹಿಜರಿ ಶಕ ೯೮ದಲ್ಲಿ ಐನುಲ್ ಮುಲ್ಕನ ಶಿರಚ್ಛೇದನವಾಯಿತು, ಇಬ್ರಾಹಿಮ ಆದಿಲಶಹನು ಇಲಿಯಾಸಖಾನ ವಜೀರನ ಕಣ್ಣರಿಕೆಯಲ್ಲಿ ಆನಂದಮಹಲನ್ನು ಕಟ್ಟಿಸಿದನು.

ಹಿರಿಶಕ ೯೯ದಲ್ಲಿ ದಿಲಾವರ ಖಾನ ಸಗರಿ, ಮಿಯಾ ಅಲಿ ಉಸ್ತಾದ ಕಾರ ಸಾಹೇಬ, ಮಂಜನಖಾನ ಬಹಾದ್ದೂರ, ಶಾಹ ನವಾಜ ಮಾಲಿಕ ಮತ್ತು ಸ್ಮಜಾತ ಬಹಾದ್ದೂರರು ರಾಜ್ಯದ ವಜೀರರಾಗಿದ್ದರು.

ಹಿಜರಿ ಶಕೆ ೧೦೦೫ದಲ್ಲಿ, ಮಲಿಕ ಜಹಾಂ ಖಾನನು ಕಲವಿ ಕಾಲ ಸೊಕ್ಕಿನಿಂದ ಇದ್ದವನು ಅಹಮದನಗರಕ್ಕೆ ಓಡಿ ಹೋದನು.

ಹಿಜರಿ ಶಕೆ ೧೦೦೬ದಲ್ಲಿ ಆಹಂಗಖಾನನು ವಜೀರನಾಗಿದ್ದನು, ಮಲಿಕ ಸೋಯೀಲ್ ಸೈನ್ಯಾಧಿಪತಿಯಾಗಿದ್ದನು.

ಹಿಜರಿ ಶಕ ೧೦೦೭ದಲ್ಲಿ ಮಿಯಾಂ ಮಂಜೂ ತನ್ನ ಮಕ್ಕಳೊಂದಿಗೆ ಇಲ್ಲಿಗೆ ಬಂದನು. ಮಜಾಲಿಸಖಾನ ವಜೀರನಾಗಿದ್ದನು. ಮಂಜನಖಾನನು ಬಹಳ ಪ್ರಸಿದ್ಧಿಯನ್ನು ಪಡೆದನು.

ಹಿಜರಿ ಶಕ ೧೦೧೦ದಲ್ಲಿ ಜೊಹರಾಪುರ ಉಪನಗವನ್ನು ಕಟ್ಟಲಾಯಿತು.

ಹಿಜರಿ ಶಕೆ ೧೦೧೨ದಲ್ಲಿ ಅಕ್ಬರ ಬಾದಶಹನ ನಿಧನವಾಯಿತು.

ಹಿಜರಿ ಶಕೆ ೧೦೧೨ದಲ್ಲಿ ೯೫೫ ಆನೆಗಳಿದ್ದುವು. ನವರಸದಲ್ಲಿ ೧೪೪೫ ಶಿಷ್ಯರಿದ್ದರು.

ಹಿಜರಿ ಶಕೆ ೧೦೧೫ದಲ್ಲಿ ಬಾದಶಹರ ಲೆಕ್ಕಣಿಕೆ ಎಲ್ಲ ಲೆಕ್ಕಣಿಕೆಗಳ ಬಾದಶಹವಾಗಿತ್ತು.

ಹಿಜರಿ ಶಕ ೧೦೧೬ದಲ್ಲಿ ದರ್ವೇಶ ಮೊಹಮ್ಮದನು ಬಹಳ ಬುದ್ಧಿವಂತ ವಜೀರನಾಗಿದ್ದನು. ಫರಹಾದ ಖಾನನು ಬಂದಿದ್ದನು.

ಹಿಜರಿ ಶಕ ೧೦೧೭ದಲ್ಲಿ ಖಾನ ಹಾಜಿ ಮಲಿಕನು ಹಳೆಚಿಯ ವಜೀರನಾಗಿದ್ದನು, ಮುಲ್ಲಾ ಬಾಬಾ ಸೈನ್ಯದ ಸರದಾರನಾಗಿದ್ದನು

ಹಿಜರಿ ಶಕ ೧೦೨೧ದಲ್ಲಿ ಅಹಮದನಗರದ ಬಹು ದೊಡ್ಡ ಯುದ್ಧವಾಯಿತು. ಬಾದಶಹನು ಬೀದರವನ್ನು ಗೆದ್ದನು.

ಹಿಜರಿ ಶಕ ೧೦೨೬ದಲ್ಲಿ, ಧುಂಡೂ ಪಂಡಿತನು ಬೀದರದ ಸಿಪೇಹಸಾಲಾರನಾಗಿದ್ದನು. ಮಾಣಿಕನು ದೊಡ್ಡ ಯೋಧನಾಗಿದ್ದನು. ಮಲಿಕ ಅನಿಸನು ಮಹಾಲ್ದಾರನಾಗಿದ್ದನು. ನಜಾಕತುಲ್ ಮುಲ್ಕನನ್ನು ಹೊರಗೆ ಹಾಕಲಾಯಿತು.

ಹಿಜರಿ ಶಕ ೧೦೩೦ರಲ್ಲಿ ಕರ್ನೂಲದಿಂದ ಬಾದಶಹನು ಕಾಫಿರರನು ಹೊರ ಹಾಕಿದನು.

ಹಿಜರಿ ಶಕ ೧೦೩೩ದಲ್ಲಿ ಮಲಿಕ ರಸೂಲ ಖಲೀಫನಾಗಿದ್ದನು. ಅಗಡೂಶಾಹಜಿ ವಜೀರನಾಗಿದ್ದನು. ಐತಮಾದ ಕುರುಬದಾರ[ಬಾದಶಹನ ಹತ್ತಿರದ] ಸರದಾರನಾಗಿದ್ದನು.

ಹಿಜರಿ ಶಕೆ ೧೦೩೫ದಲ್ಲಿ ಇಬ್ರಾಹಿಮ ಆದಿಲಶಹನು ನಿಜವಾಗಿಯೂ ಜಗತ್ ಗುರುವಾಗಿದ್ದನು. ಕಾಸೀ ಧನಾಜೀ, ಯಮಾಜೀ, ವೇದರಾವ್, ಮೋಹನದಾಸ, ಭಿಕಾಜೀ ಮತ್ತು ಫರ್ನಾಲೂಬರು ದರಬಾರೀ ವೈದ್ಯರಾಗಿದ್ದರು.

ಹಿಜರಿ ಶಕ ೧೦೩೭ದಲ್ಲಿ ಎರಡನೆಯ ಇಬ್ರಾಹಿಮ ಆದಿಲಶಹನ ವಯಸ್ಸು ೫೭ ವರುಷವಾಗಿತ್ತು. ಮತ್ತು ಇದೇ ವರುಷ ಅವನು ನಿಧನ ಹೊಂದಿದನು.

ಸುಲ್ತಾನ ಮೊಹಮ್ಮದ ಆದಿಲಶಾಹನ ಪಟ್ಟಾಭಿಷೇಕ

ಜಗತ್ ಗುರು ಇಬ್ರಾಹಿಮ ಆದಿಲಶಾಹನ ನಂತರ ಸುಲ್ತಾನ ಮೊಹಮ್ಮದ ಆದಿಲಶಹನು ಪಟ್ಟಕ್ಕೆ ಬಂದನು. ಅದರ ವಿವರ ಹೀಗಿದೆ: ಇಬ್ರಾಹಿಮ ಆದಿಲಶಹನಿಗೆ ಭಗಂದರ ಎಂಬ ರೋಗದ ಹುಣ್ಣು ಆಗಿತ್ತು ಅದರ ಗಾಯದಿಂದ ಬಳಲುತ್ತಿದ್ದನು. ಈ ಬೇನೆಗೆ ಬಹಳಷ್ಟು ಉಪಚಾರ ಮಾಡಿದರೂ ಅವನ ರೋಗ ಗುಣವಾಗಲಿಲ್ಲ. ಏಳು ಎಂಟು ತಿಂಗಳುಗಳಿಂದ ರೋಗಗ್ರಸ್ತನಾಗಿ ಹಾಸಿಗೆಯ ಮೇಲೆಯೇ ಮಲಗಿದ್ದನು. ಕೊನೆಗೆ ಮೊಹರಮ್ ದ ೧೦ನೆಯ ದಿನ ಹಿಜರಿ ಶಕ ೧೦೩೭ರಂದು ನಿಧನ ಹೊಂದಿದನು.

ಬಾದಶಹನಿಗೆ ನಾಲ್ಕು ಅಥವಾ ಐದು ಗಂಡು ಮಕ್ಕಳಿದ್ದರು. ಅವರಲ್ಲಿ ಸುಲ್ತಾನ ಮೊಹಮ್ಮದನನ್ನು ತನ್ನ ಕಣ್ಣರಿಕೆಯಲ್ಲಿಯೇ ಬೆಳೆಸಿದ್ದನು. ಮತ್ತು ಅವನನ್ನು ತನ್ನ ಪಲ್ಲಂಗದ ಹತ್ತಿರದಲ್ಲಿಯೇ ಮಲಗಿಸಿಕೊಳ್ಳುತ್ತಿದ್ದನು. ಅವನ ಅಂತ್ಯ ಸಮಯ ಬಂದಾಗ ಅವನು ಮೊಹಮ್ಮದನನ್ನೇ ತನ್ನ ಉತ್ತರಾಧಿಕಾರಿ ಎಂದು ಇಚ್ಛಾಪತ್ರವನ್ನು ಬರೆದಿದ್ದನು. ಅನಂತರ ಅವನ ಕಾಲದಲ್ಲಿಯೇ ಕಟ್ಟಿಸಿದ [ರೋಜಾ] ಸಮಾಧಿಯಲ್ಲಿ ಇಬ್ರಾಹಿಮ ಜಗತ್ ಗುರುವನ್ನು ದಫನ ಮಾಡಲಾಯಿತು. ಇಬ್ರಾಹಿಮ ಆದಿಲಶಹನ ಮರಣದ ನಂತರ ಸುಲ್ತಾನ ಮೊಹಮ್ಮದನನ್ನು ಸಿಂಹಾಸನದ ಮೇಲೆ ಕುಳ್ಳಿರಿಸಲಾಯಿತು. ಪಟ್ಟಾಭಿಷೇಕದ ಸಮಯದಲ್ಲಿ ಸುಲ್ತಾನ ಮೊಹಮ್ಮದನ ವಯಸ್ಸು ೧೭ ವರುಷವಿದ್ದಿತು.

ಹಿಜರಿ ಶಕ ೧೦೩೭ರಲ್ಲಿ ನಡೆದ ಘಟನೆಗಳು.

- ಮೊಹಮ್ಮದ ಪಾದಶಾಹ ಸಾಹೇಬ ಸಲಾಮತ
- ಈತನ ಮುಖಲಕ್ಷಣಗಳು ಬಹಳ ಸುದೈವಿಯಾಗಿದ್ದುವು. ಆಳ ಸಮುದ್ರದ ಅಮೌಲ್ಯ ಮುತ್ತು. [ಮರ್ಜಾನ್ ಇಖಲಾಸ್ ದೀದ]
- ನವಾಬಖಾನ ಬಾನೀ ಪ್ರಾಮಾಣಿಕ ಅಮೀನನಾಗಿದ್ದನು.
- ನವಾಬ ಮುಸ್ತಫಾಖಾನನು ಬಹಳ ಪ್ರಾಮಾಣಿಕನಾಗಿದ್ದನು.

- ಎಕ್ಕಾ ಖವಾಸ ನಾಮದಾರನಾಗಿದ್ದನು.
- ದಿಯಾನುತುಲ್ ಮುಲ್ಕನು ಕಂದಾಯ ಮುಖ್ಯಸ್ಥನಾಗಿದ್ದನು. [ಉಮೂರುಲ್ಮುಲ್ಕ]
- ಅಂಬರಖಾನ ಬನಿಯಾ ಪೇಶ ಜಂಗಖಾನನಾಗಿದ್ದನು.
- ಫರಹಾದಖಾನನು ಪ್ರಾಮಾಣಿಕ ವಜೀರನಾಗಿದ್ದನು.
- ಅಂಕುಶಖಾನ ಮತ್ತು ದರ್ವೇಶ ಮೊಹಮ್ಮದರು ವಜೀರರಾಗಿದ್ದರು.
- ಮಲಿಕ ಸುಂದರ ಒಳ್ಳೆಯವನಾಗಿದ್ದನು.
- ಮಿಯಾ ಅಲಿಯು ಆಸಾರದ ಹವಾಲ್ದಾರನಾಗಿದ್ದನು.
- ಸಂದಲ್ ದ ಹತ್ತಿರ ತಾಜ ಸುಲ್ತಾನ.
- ದೈವದ ಹಸ್ತ ಅಲಿಯಮೇಲೆ ಇದ್ದುದರಿಂದ ಅವನು ಸರಪರದಾದಾನಾಗಿದ್ದನು. [ಬಾದಶಹನ ಅಂತಃಪುರದ ದ್ವಾರಪಾಲಕ]
- ಬಿದ್ಯಾಪುರದ ಹವಾಲ್ದಾರನಾಗಿ ಮಾಲಿಕ ಕುರ್ದನಿದ್ದನು.
- ಅಮೀನ ಆತಿಶೀ ಪ್ರಸಿದ್ಧ ವೈದ್ಯನಾಗಿದ್ದನು.
- ನಜಾಕತ್ ಅಲ್ ಮುಲುಕನನ್ನು ಹೊರಗೆ ಹಾಕಿದರು.
- ಮೊಹಮ್ಮದ ಅಲಿಯು ಹಳೆಯ ಸರಪರದಾರನಾಗಿದ್ದನು.
- ಶೇಖ ಅಮೀನ ಮತ್ತು ರಂದೋಲಾ ಖಾನ. [?]
- ಮಲಿಕ ಮೊಹಬ್ಬತನು ರುಕಾನವೇಸನಾಗಿದ್ದನು [ರಾಜ್ಯಪತ್ರಕಾರನಾಗಿದ್ದನು]
- ಮಲಿಕ ಜಕರಿಯಾ, ಖಲಾಸ್ ಮತ್ತು ಮುಲ್ಲಾ ಹಬೀಬುಲ್ಲಾ ಇವರೆಲ್ಲರೂ ಸುಲ್ತಾನ ಮೊಹಮ್ಮದನ ಸಂಗಡಿಗರಾಗಿದ್ದರು.
- ಹಳೆಯ ದಾಸಿ ಮಗ ಖಾನಜಿ ಮಲಿಕ.
- ಸೈನ್ಯವು ಜಿಂಜೀಯನ್ನು ಗೆದ್ದಿತು.
- ಖೇಲೂಜಿ ಭೋಸಲೆ ಮರಾಠನು ಪ್ರಬಲನಾಗಿದ್ದನು.
- ಅಬೂಬಕರ ಹವಾಲ್ದಾರ, ರೋಶನ್ ಮಹಲಿನಲ್ಲಿಯ ಶ್ರೇಷ್ಠ ಕವಿಯಾಗಿದ್ದನು.
- ಮಿನಿಕೊಯಿ ಸರಖೇಲ [?]
- ದೌಲತಪುರವನ್ನು ಕಟ್ಟಿದರು.
- ಸಿದೀ ರೇಹಾನನು ಬಾದಶಹನ ರುಕಾನವೀಸನಾಗಿದ್ದನು.
- ಮತ್ತೊಬ್ಬ ಮುರಾರಿ ಪಂಡಿತನು ಬಹಳ ಪ್ರಾಮಾಣಿಕನಾಗಿದ್ದನು. ಅವನು ಆಡಳಿತವನ್ನು ನಡೆಸುತ್ತಿದ್ದನು.

ಹಿಜರಿ ಶಕ ೧೦೩೭ರಲ್ಲಿ ಮಲಿಕ ಮೈದಾನ ತೋಪನ್ನು ಪರೆಂಡಾದಿಂದ ರಿಜ್ವಾನನು, ಮಹಮ್ಮದ ಸುಲ್ತಾನನ ಹತ್ತಿರ ತಂದನು.

ಹಿಜರಿ ಶಕ ೧೦೩೮ರಲ್ಲಿ ೯೦೪೦ ಸವಾರರಿದ್ದರು. ಆಸಿಫಖಾನನು ಬಿಜಾಪುರದಲ್ಲಿ ಸರ ಸಿಪಾಹಿ ಮುರಾರಿಯ ಸಹಾಯಕ ವಜೀರನಾಗಿದ್ದನು.

ಹಿಜರಿ ಶಕ ೧೦೪೧ರಲ್ಲಿ ಬರೀದದಿಂದ ವಧು ಬಂದಮೇಲೆ ಮೇಜವಾನಿ ಮಾಡಿತು. ಅವನು [?] ಉತ್ಕೃಷ್ಟ ದಬೀರನಾಗಿದ್ದನು.

ಹಿಜರಿ ಶಕ ೧೦೪೨ರಲ್ಲಿ ಮುರಾರಿಯು ಗೋಗಿಯಲ್ಲಿ ಚೌಖಂಡಿಯ ಬುನಾದಿಯನ್ನು ಹಾಕಿದನು.

ಹಿಜರಿ ಶಕ ೧೦೪೫ರಲ್ಲಿ ನವಾಬ ಮತ್ತು ಖವಾಸರ ಯುದ್ಧ. ಮಹಾಬತಖಾನನು ದೌಲತಾಬಾದಿಗೆ ಹೋದನು.

ಹಿಜರಿ ಶಕ ೧೦೪೬ರಲ್ಲಿ ಒಬ್ಬ ಮಹಾಲದಾರನನ್ನು ಕೊಂದರು. ಖವಾಸಖಾನನು ಹುದ್ದೆಯನ್ನು ಪಡೆದನು. ರೈಹಾನ ಇಖ್ಲಾಸನು ಸರನೌಬತಿಯ ಮುಖ್ಯಸ್ಥನಾದನು. ಸುಲ್ತಾನ ಮೊಹಮ್ಮದನು ಇಕ್ಕೇರಿಯನ್ನು ಗೆದ್ದನು. ಭವ್ಯವಾದ ಪಾದಶಾಹಪುರದ ಬುನಾದಿಯನ್ನು ಹಾಕಲಾಯಿತು. ರುಸ್ತುಮ ಜಮಾನನು ಬೇಲೂರ. ಶಾಹಜಹಾನನು ದೌಲತಾಬಾದಿಗೆ ಬಂದನು ಮತ್ತು ಒಪ್ಪಂದ ಮಾಡಿಕೊಂಡನು. ದೇವರ ದಯದಿಂದ ಶಾಹ ಅಲಿ ಹುಟ್ಟಿದನು.

ಹಿಜರಿ ಶಕ ೧೦೪೭ರಲ್ಲಿ ಅವನನ್ನು ಹಿಡಿಯಲು ನವಾಬನು ಗೋವೆಗೆ ಹೋದನು. ಅಫಜಲ್ ಹೆಸರಿನವನು ಪ್ರಬಲ.

ಹಿಜರಿ ಶಕ ೧೦೪೯ ರಲ್ಲಿ ಅಹಸನಾಬಾದ ಪಟ್ಟಣದ ಕಡೆಗೆ ಸವಾರಿಯು ಮೊದಲನೆಯ ಸಲ ಹೊರಟಿತು.

ಹಿಜರಿ ಶಕ೧೦೫೧ರಲ್ಲಿ ಸವಾರಿಯು ಬಂಕಾಪುರಕ್ಕೆ ಹೋಯಿತು.

ಹಿಜರಿ ಶಕ ೧೦೫೨ರಲ್ಲಿ ಇಖ್ಲಾಸ ಅಮೀರಜುಮ್ಲಾ [ಆದನು]

ಹಿಜರಿ ಶಕ ೧೦೫೫ರಲ್ಲಿ ಈ ಹೊತ್ತಿನಲ್ಲಿ ಪಾದಶಾಹ ಸಾಹಿಬನಿಗೆ ಸಹಾಯ ಮಾಡಿದನು ಜಿಂಜಿಯನ್ನು ಪೂರ್ಣಪ್ರಮಾಣದಲ್ಲಿ ಗೆದ್ದರು.

ಹಿಜರಿ ಶಕ ೧೦೫೬ರಲ್ಲಿ ದಾದ ಮಹಲಗೆ ಉತ್ತಮ ಸೋನೇರಿ ಬಣ್ಣವನ್ನು ಹಚ್ಚಲು ಪ್ರಾರಂಭ.

ಹಿಜರಿ ಶಕ ೧೦೫೭ರಲ್ಲಿ ಮೊಹಮ್ಮದ ಮೋಮಿನ ವಿಶ್ವಾಸಿಕ ಸಭಾಸದ ಅವನು ಖಾತೆಗಳಲ್ಲಿಯ ದಬೀರರ ಮುಖ್ಯಸ್ಥನಾದನು. ಅಮೀನುಲ್ ಮುಲ್ಕನ ವಯಸ್ಸು ೧೧೩. ಗಗನ ಮಹಲ, ಬೆಂಕಿಯಿಂದ ಸುಟ್ಟಿತು.

ಹಿಜರಿ ಶಕ ೧೦೫೮ರಲ್ಲಿ ಸುಲ್ತಾನ ಮೊಹಮ್ಮದನ ದಬೀರರು ಅಲಿಯ ಚೌಖಂಡಿಯ ಕಿನೆಯ ಭಾಗದ ಬುನಾದಿಯನ್ನು ಹಾಕಿದರು. ಅದರಿಂದ ಶಾಹೀ ಎಂಬ ಬಿರುದು ಬಂದಿತು. ಆನೆಗಳ ಖಾತೆಯು ದಾವರಖಾನ ಮುಬಾರಕನ ಹತ್ತಿರ. ಸವಾರಿಯು ಮೊದಲು ಬೀದರ ಕಡೆಗೆ ಹೋಯಿತು. ನವಾಬ ಮುಸ್ತಫಾಖಾನನು ಅಮೀನನಾದನು. ಆದರೆ ಶಾಹಜೀರಾವನನ್ನು ದರಬಾರದ ಕಡೆಗೆ ತಂದರು.

ಹಿಜರಿ ಶಕ ೧೦೫೯ರಲ್ಲಿ ಜಮಾದಿಲಾವಲದಲ್ಲಿ ಪಾದಶಾಹ ತಾಯೀ [ಮಾ] ಸಾಹೇಬಳ ಜನ್ಮ. ಮೊಹಮ್ಮದ ಪಾದಶಾಹನು ಜಿಂಜಿಯನ್ನು ಗೆದ್ದನು. ಮೇಲಿನ ಹಲ್ಲುಗಳಿಗೆ ಬಲವಾದ ಪೆಟ್ಟಾಯಿತು.

ಹಿಜರಿ ಶಕ ೧೦೬೦ರಲ್ಲಿ ಛಟ್ಟಾ ನಾಯಕರ ಸಲುವಾಗಿ ಕಂದೂರೀ [ಉತ್ಸವ] ನಡೆಯಿತು. ಬಾದಶಾಹ ಸಾಹೇಬನ ಮರಣದಿಂದ ಬಹಳ ದುಃಖವಾಯಿತು ಆಗ ಅವನು ಸ್ವರ್ಗಕ್ಕೆ ಹೋದನು.

ಹಿಜರಿ ಶಕ ೧೦೬೧ರಲ್ಲಿ ವಿಜಯದಿಂದಾಗಿ ಅಹಮದನ ಹುದ್ದೆಯು ಕಾಯಂ ಆಯಿತು. ಪಿಲಕೊಂಡೆಯನ್ನು ಕೈವಶ ಮಾಡಿಕೊಂಡರು. ಮುಲ್ಲಾ ಅಹಮದನು ಬಹಳ ಪ್ರಾಮಾಣಿಕನಾಗಿದ್ದನು. ಮಹಮ್ಮದನ ಕಾಲದಲ್ಲಿ ಭೂಕಂಪವಾಯಿತು. ಆ ಸಮಯದಲ್ಲಿ ಸುಲ್ತಾನ ಮಹಮ್ಮದನು ವೆಲ್ಲೂರಿಗೆ ಬಂದಿದ್ದನು.

ಹಿಜರಿ ಶಕ ೧೦೬೫ರಲ್ಲಿ ಜಮನ್ಯಾ ಬಾಜೀ ವೈದ್ಯನು ಔಷಧಿಯನ್ನು ಕೊಟ್ಟನು. ಫತಹಖಾನನು ನೀರಿನ ಹೌದನ್ನು [ಪುಷ್ಕರಣಿ, ಬಾವಿ] ಕಟ್ಟಿಸಿದನು. ಮುಹಮ್ಮದ ಖಾನನು ಹುಲ್ಲು ಬಿತ್ತಿದನು.

ಹಿಜರಿ ಶಕ ೧೦೬೭ರಲ್ಲಿ ಮೊಹಮ್ಮದ ಬಾದಶಾಹನ ಆರೋಗ್ಯ ಕೆಟ್ಟಿತು. ಅವನು ಬೇಹೋಶ್‌ನಾದನು. ಮಹಮ್ಮದ ಶಾಹನು ಅಲ್ಲಾಹನ ಕೃಪೆಯಿಂದ ಶಾಶ್ವತ ಸ್ವರ್ಗವಾಸಿಯಾದನು. ಸುಲ್ತಾನ ಮಹಮ್ಮದನ ವಯಸ್ಸು ೪೭ ವರುಷ.

ಅಲೀ ಆದಿಲಶಾಹನು ಪಟ್ಟಕ್ಕೆ ಬಂದದ್ದು. ಅದರ ವಿವರ ಹೀಗಿದೆ.

ಕುತುಬಶಾಹನ ಮಗಳು ಬಡೀ ಸಾಹೇಬಳು ಸುಲ್ತಾನ ಮಹಮ್ಮದನ ಹೆಂಡತಿಯಾಗಿದ್ದಳು. ಅಲಿಯು ಹುಟ್ಟಿದಂದಿನಿಂದ ಅವನನ್ನು ತನ್ನಿಂದ ದೂರ ಮಾಡದೆ ಎಲ್ಲ ರೀತಿಯ ಅವನ ಪಾಲನ ಪೋಷಣೆಯನ್ನು ಮಾಡುತ್ತಿದ್ದಳು. ಅಲಿಗೆ ೪ ವರುಷ ೪ ತಿಂಗಳು ಮತ್ತು ೪ ದಿನಗಳಾದಾಗ ಶಾಹೀ ಶಾಲೆಯ ಕಾನೂನಿನಂತೆ ಅವನನ್ನು ಶಾಲೆಗೆ ಕಳಿಸಿದರು. ಅಲ್ಲಿ ಅವನು ಬರೆಯುವುದು, ಓದುವುದು, ಅರ್ಥ ಹಚ್ಚುವುದು, ವ್ಯಾಯಾಮ, ಕುದುರೆ ಸವಾರಿ, ತಲವಾರ ತಿರುಗಿಸುವುದು, ಬಿಲ್ಲು ಬಾಣ ಮತ್ತು ಇತರ ಎಲ್ಲ ಕಲೆಗಳಲ್ಲಿ ಸಿದ್ಧನಾದನು.

ಸುಲ್ತಾನ ಮಹಮ್ಮದನು ಸತ್ತ ನಂತರ ದರಬಾರದ ಎಲ್ಲ ಮುತ್ಸದ್ದಿಗಳು ಶುಭ ಮುಹೂರ್ತವನ್ನು ನೋಡಿ, ಮೊಹರಮ್ ತಿಂಗಳ ೨೬ನೆಯ ದಿನ ಮಂಗಳವಾರದಂದು ಅಲಿ ಆದಿಲಶಹನನ್ನು ಸಿಂಹಾಸನದ ಮೇಲೆ ಕುಳ್ಳಿರಿಸಿದರು. ಅದರ ಹಿಜರಿ ಶಕ ೧೦೬೭. ಆಗ ಅವನಿಗ ೧೯ ವರುಷ ವಯಸ್ಸಾಗಿತ್ತು.

ಹಿಜರಿ ಶಕ ೧೦೬೭ರಲ್ಲಿ ನಡೆದ ಘಟನೆಗಳು.

- ಪಟ್ಟಾಭಿಷೇಕದ ಸಮಯದಲ್ಲಿ ಅಲಿ ಆದಿಲಶಹನು ೧೯ ವರುಷದವನಿದ್ದನು.
- ಯೂಸುಫ, ಇಸ್ಮಾಯಿಲ್, ಇಬ್ಬರು ಇಬ್ರಾಹಿಮರು, ಅಲಿ ಮತ್ತು ಮಹಮ್ಮದರ ನಂತರದ ಅಲಿಯು ಎಲ್ಲ ಬಾದಶಹರುಗಳು ಚೆನ್ನಾಗಿದ್ದರು.
- ಈ ಅಲಿ ಆದಿಲಶಹನೂ ಚೆನ್ನಾಗಿದ್ದನು.
- ಅಸಹಾಯಕರು, ಬಡವರು, ಭಿಕ್ಷುಕರು ಸಂತೋಷದಿಂದ ಇದ್ದ ಕಾಲ.
- ಖಾನ ಮೊಹಮ್ಮದನು ಕಾರ್ಯಕರ್ತನಿದ್ದನು.
- ಸಯ್ಯದ ಅಬುಲ್ ಹಸನ ಮಕೂನಾ ಸಾನೀ [ಎರಡನೆಯ] ನವಾಬನು ರುಸ್ತುಮ ಝಮಾನ ವಜೀರ ಎಂಬ ಹೆಸರಿನಿಂದ ಪ್ರಸಿದ್ಧನಾಗಿದ್ದನು.
- ಬಹಲೂಲಖಾನ ವಜೀರ ಪ್ರಬಲನಾಗಿದ್ದನು.
- ಅಬ್ದುಲ್ ಮಹಮ್ಮದ ಅಲೀ ಆದಿಲಶಹನ ನಿಕಟ ಅಮೀನನಾಗಿದ್ದನು.
- ಮಹಮ್ಮದ ಯಾಕೂತ ಆಡಳಿತಕಾರರಲ್ಲಿ ಇದ್ದನು.
- ಅಝೀಝಖಾನನು ಗೋವಾದಲ್ಲಿ ಸುಬೇದಾರನಾಗಿದ್ದನು. ಮಲಿಕ ಐತಬಾರನು ವಜೀರನಾಗಿದ್ದನು.
- ಮುಲ್ಲಾ ಅಹಮದನು ವಿಶ್ವಾಸಿಕರಲ್ಲಿ ಇದ್ದನು.
- ಆಕಾ ಖುಸ್ರೋ ಒಳ್ಳೇಯವನಿದ್ದನು.
- ಮಹಾರಾಜ ಶಹಾಜೀ ಕಾಯಂ ಆಗಿ ಇದ್ದನು.
- ಮಂಬಾಜೀ ಭೋಸಲೆ ಮಾಲಕನ ವಿಶ್ವಾಸದಲ್ಲಿ ಇದ್ದನು.
- ಶರ್ಜಾರಾವ ಅನಸೋಜೀ ಕಬೀರ. [ದೊಡ್ಡವನಾಗಿದ್ದನು]
- ರೈಹಾನನ ಮಕ್ಕಳು ಸೋಲಾಪುರದ ಮಾಲಕರಾಗಿದ್ದರು.
- ಅಬ್ದುಲ್ಲಾ ಖಾನ ವಜೀರ.
- ಅಜಮ ಬಂದಿದ್ದನು.

- ಬಾದಶಹರ ಹಳೆಯ ಸೇವಕನಾದ ಮಲಿಕ ಮರಜಾನನು ಬೀದರದಲ್ಲಿ.
- ಶಾಹ ನೂರುಲ್ಲಾಹ ಇಬ್ಬರ ಸರದಾರ.
- ಎರಡನೆಯ ಅಜೀಝು ಮಿರ್ಜಾ ಯೂಸುಫನು ಶಿಕಾರ [ಬೇಟೆ] ಖಾತೆಯಲ್ಲಿ ಮುಖ್ಯ. ನಾಸಿರ ಮಹಮ್ಮದ ಕಾಯಂ ಆದನು.
- ಮುಹಮ್ಮದನೂರ [ಕರ್ನೂಲ] ದಲ್ಲಿ ಸೀದೀ ರೈಹಾನನು ವಜೀರ.
- ಯಾಕೂತ ಅಜೀಜ್‌ನ ಜೊತೆಗೆ ಮಹಮ್ಮದ ಅಲೀ ಸೇರಿ ಕಾರ್ಯ ಸಾಧಿಸಿದರು.
- ಯೂಸೂಪಖಾನನ ಸಹೋದರ ಬಾಕೀರನು ದ್ವಾರಪಾಲಕನಾಗಿದ್ದವನು ಡಬೀರನಾಗಿ, ಅವನು ರಾಜ್ಯದ ಡಬೀರರಲ್ಲಿ ಮುಖ್ಯಸ್ಥನಾದನು.
- ವಿಶ್ವಾಸರಾವು ಪಂಡಿತರಲ್ಲಿ ಮುಖ್ಯಸ್ಥನಾಗಿದ್ದನು.
- ಮಲಿಕ ಹಬಶ ನಿಜವಾಗಿಯೂ ಅನಾಡಿಆಗಿದ್ದನು. [ವ್ಯವಹಾರಜ್ಞಾನ ವಿಲ್ಲದವನು]
- ಖವಾಸ ಮಹಲ್ ಇಬ್ರಾಹಿಮನ ವಶಕ್ಕೆ ಬಂದಿತು.
- ಮಿಯಾ ಮುಸ್ತಫಾ ಹಲಾಲ ಪೇಶದಾರ ಜೊತೆಗೆ ಇದ್ದನು.
- ಮಖದೂಮನು ಮಹಲಿನ ಜಾಮದಾರಖಾನೆಯ ಹವಾಲದಾರ.
- ಮತ್ತೊಮ್ಮೆ ಗಂಗಾಶಹನಾ ಬಂದು ಇರಹತ್ತಿದನು.
- ಕಾಜಿ ಅಲೀ ಬಂದನು.
- ಸಿಬಗತುಲ್ಲಾ ಗಟ್ಟಿಯಾಗಿದ್ದನು.
- ನಡುವಿನವನು ಹಳೆಯ ಅಂತಃಪುರದ ಅಧಿಕಾರಿಯಾಗಿದ್ದನು.
- ಅಮರಖಾನನು ಬೀದರ ಪಟ್ಟಣವನ್ನು ಕೊಟ್ಟನು.
- ದಾವೂದಖಾನನು ಆನೆಯ ಮೇಲಿನ ಸವಾರ.
- ಮುಹಮ್ಮದ ಅಲೀ ಕೊತವಾಲನೆಂದು ಕಾಯಂ ಆದನು.
- ಇಬ್ರಾಹಿಮುಖಾನನು ವಿದ್ವಾನನಾಗಿದ್ದನು. ಆ ಇಬ್ರಾಹಿಮುಖಾನನು ಸೂಫಿಸಂತನಂತಿದ್ದು ಅವನ ಮೆದುಳು ಶುದ್ಧವಾಗಿತ್ತು.
- ಮಿಯಾ ಅಜೀಜ್ ಖಜಾನದಾರನಾಗಿದ್ದನು.
- ಹುಸೇನೀ ಮಹಲಿನ ಶೋಭೆಯು. ಹುಸೇನೀ ಅಲೀ ಬಿನ್ ಅಬೀ ತಾಲೀಬರಿಗೆ ತಕ್ಕಂತೆ ಇತ್ತು. ಬಾರಾ ಇಮಾಮರ ಸಲುವಾಗಿ ಹುಸೇನೀ ಮಹಲ ಪ್ರಾರಂಭ. ಹುಸೇನೀ ಮಹಲ ಸಿಕಂದರರನ ಗೋಡೆಯಂತೆ ಗಟ್ಟಿಯಾಗಿ ಕಟ್ಟಿದರು. ಹುಸೇನೀ ಮಹಲ ಸ್ವರ್ಗದಂತೆ ಕಟ್ಟಲಾಯಿತು. ಹುಸೇನೀ ಮಹಲ ಪ್ರಪಂಚದ ಸ್ವರ್ಗ.

- ಅಬ್ದುಲ್ ಮಹಮ್ಮದನು ಉತ್ತಮನಾಗಿದ್ದನು.
- ಆ ಶಾಹ ಚುನ್ನಿಯು ಅಂತಃಪುರದ ಮುಖ್ಯಸ್ಥನಾಗಿದ್ದನು.
- ಅಮೀನ ಅಬ್ದುಲ್ ಮುಆಲೀಯು ರಾಜನ ಸದಿಚ್ಛೆಯನ್ನು ಮಾಡುವವನಾಗಿದ್ದನು.
- ಬಾಜೀ ಘೋರಪಡೆಯು ಹಳೆಯ [ಸೇವಕ] ನಾಗಿದ್ದನು.
- ಖಾನಜೀ ಮಲಿಕನು ಹಳೆಯ ಸೇವಕ ಮತ್ತು ಮಿತ್ರನಾಗಿದ್ದನು.

ಹಿಜರಿ ಶಕೆ ೧೦೬೬ರಲ್ಲಿ ನಡೆದ ಘಟನೆಗಳು.

- ದಾರಾ ಶುಕೋಹನನ್ನು ಸಣ್ಣ ತೋಪಿನಿಂದ ಕೊಲ್ಲಲಾಯಿತು.
- ಶತ್ರುಗಳ ದಾಳಿಯನ್ನು ದೂರ ಮಾಡಲಾಯಿತು.
- ಸವಾರಿಯು ಶಾಹಪುರಕ್ಕೆ ಹೋಯಿತು.
- ಶಾಹ ಅಬುಲ್ ಹಸನನನ ಭೆಟ್ಟಿಯಾಯಿತು.
- ಮಾಲಕನಿಗೆ ಈದ ಉಲ್ ಫಿತ್ರದ ಶುಭಾಶಯಗಳು.
- ಸುಂತಿ ಮಾಡಲಾಯಿತು. ಮಾಲಕನಿಗೆ ಉತ್ಸವ ಚೆನ್ನಾಗಿ ಆಗಲಿ.
- ದ್ರಾಕ್ಷಾಸವದ ರಸವನ್ನು ಕುಡಿಯುವುದರಿಂದ ಉತ್ತೇಜನ.
- ಖಾನ ಮಹಮ್ಮದನು ಹುತಾತ್ಮನಾದನು. ಅವನಿಗೆ ಸ್ವರ್ಗದಲ್ಲಿ ಸ್ಥಳವಿದೆ. ಪಲ್ಲಕ್ಕಿಯಲ್ಲಿ ಕೂಡ್ರಿಸಿ ಸೈನ್ಯದ ಅದ್ಭುತ ಮೆರವಣಿಗೆಯಾಯಿತು. ಖಾನ ಮಹಮ್ಮದ ಅವನು ಶಾಶ್ವತ ಮನೆಗೆ ಬೇಗ ಹೋದನು. ಪರಮಾತ್ಮನು ಅವನಿಗೆ ಕೌಸರದ ನೀರು ಕುಡಿಸಲಿ. ಅವನ ಒಳ್ಳೆಯ ನಡತೆಯನ್ನು ಅಲ್ಲಾಹನು ಸ್ವೀಕರಿಸಲಿ.
- ಆಹ ಕನ್ಕತಾ ಬಧರೀ
- ತೊಂದರೆಯನ್ನು ನೋಡಿ ನನಗೆ ದುಃಖವಾಯಿತು.
- ದುಷ್ಟನು ಅನ್ಯಾಯವನ್ನು ಮಾಡಿದನು. ದುಃಖವನ್ನು ಮರೆತು ಬಿಟ್ಟನು. ಸ್ವರ್ಗದಲ್ಲಿ ಪಾದದಷ್ಟು ಸ್ಥಳ [ದೊರೆಯಿತು]
- ದುರ್ದೈವವು ಕಡಿಮೆಯಾಯಿತು.
- ನೀಚ ಹರಾಮಖೋರನಾಗಿದ್ದನು.
- ದುಷ್ಟರಿಗೆ ಇಂದು ಸುಖ. ಒಳ್ಳೆಯವರಿಗೆ ಶಾಶ್ವತ ಸುಖ.
- ಗಂಜನನು ಹಾಸ್ಯಗಾರ.
- ಅಲ್ಲಿಂದ ಸೂರ್ಯೋದಯವಾಯಿತು.
- ಖಾನಜೀ ಮಲಿಕನಿಂದ ಅಲೀ ಮಸೀದಿಯ ಬುನಾದಿ.

- ಅತ್ಯಂತ ಋಣಿ.
- ಅದನ್ ಸ್ವರ್ಗದ ಶರಬತ್ತು.
- ಮಳೆ ಬಂದುದಕ್ಕೆ ಋಣಿ.
- ಸೇರಬೇಕೆಂದು ಆಜ್ಞೆ.
- ಬಾಗಿಲು ಮುಚ್ಚಿರಬಾರದು.
- ಇಚ್ಛೆಯನ್ನು ಮಾಡಿತು.
- ದುರ್ದೈವೀ
- ಅತಾರಿದ ಎರಡು ನಾಲಿಗೆಗಳಿಂದ ಬರೆಯುತ್ತಿದ್ದನು.
- ಅಲ್ಮಾಸ ಮಹಮ್ಮದಶಾಹಿಯು ಮೊದಲಿನಿಂದಲೂ ಅಲೀ ಪಾದಶಾಹನ ಪ್ರಾಮಾಣಿಕ ಸೇವಕನಾಗಿದ್ದನು.
- ಅಲೀಯು ಆಬಾ ಜಲಾಲನನ್ನು ಬಂಧಿಸಿದನು.
- ಪ್ರಿಯಾ ದಾರೂದಿಂದ ಮಸ್ತ
- ಅವನು ಇಚ್ಛೆಗಳನ್ನು ಸೀಮಿತಗೊಳಿಸಿದನು.
- ಸತ್ಯವನ್ನು ತಿಳಿದುಕೊಳ್ಳುವ ಇಚ್ಛೆ.
- ಉತ್ತಮ ಜಾತ ರಾಜೀಜೀವ.
- ಊದಬತ್ತಿಯನ್ನು ಹಚ್ಚಲಾಯಿತು.
- ಸುಂದರ ಮುಖ.
- ನಿನ್ನ ಶುಭೇಚ್ಛೆಗಳನ್ನು ಅಲ್ಲಾಹನು ಸ್ವೀಕರಿಸಲಿ.
- ಕೊಟ್ಟ ಕಾಣಿಕೆಗೆ ಧನ್ಯವಾದಗಳು.
- ದಾಮ ಮಲಿಕ್ ಸಂದಲ್‌ನು ಶತ್ರುವಾಗಿದ್ದನು.
- ನುಸ್ರತೀ ದೊಡ್ಡ ಕವಿಯಾಗಿದ್ದನು.
- ಅದು ಒಂದು ತರ್ಕಶ್‌ಕಮಾನ [ಬತ್ತಳಿಕೆ ?] ಬಾಣಗಳಲ್ಲಿ ದೊಡ್ಡ ಬಾಣ.
- ಶಾಹ ಔರಂಗಜೇಬನು ಮುರಾದನೊಂದಿಗೆ ಬಂದು ಹಲ್ಲೆ ಮಾಡಿ ನಾಶ ಮಾಡಿ ಜನರನ್ನು ಬಂಧಿಸಿದನು.
- ಪೋಪರೀ ತಲತೀ ?
- ಊ ತರಸತಾ ?
- ಆಲತಾ ಬಲತಾ ಜರ್ ?

- ಮಸೀದಿಯ ಕಟ್ಟಡವನ್ನು ಪೂರ್ಣಗೊಳಿಸಿದನು.
- ಪಾನ ಇಂಟೀ ಖರೀ ಹಟೀಲ ಅಪ್ರಾ ನವೀದ.
- ಕಮಾಲ ಮಹಮ್ಮದನು ಯಮನೀ [ಯಮನ ದೇಶದ] ತಲವಾರದಂತಿದ್ದನು. ಹಿಜರಿ ಶಕ ೧೦೬೭ದಲ್ಲಿ ನಡೆದ ಘಟನೆಗಳು.
- ಅಲೀ ಆದಿಲಶಾಹನ ಮದುವೆ ಮೇಜವಾನಿ, ಮದುವೆಯ ಮೇಜವಾನಿಯ ಶುಭಾಶಯಗಳು. ಬಡೀ ಸಾಹೇಬಳ ಮಗನ ಮದುವೆಯ ಶುಭಾಶಯಗಳು. ಅಲ್ಲಾಹನ ಕೃಪೆಯಿಂದ ಒಳ್ಳೆಯದಾಯಿತು.
- ಅಬ್ದುಲ್ ಮಹಮ್ಮದನಿಗೆ ಸರನೌಬತಿಯು ದೊರೆಯಿತು.
- ಶಾಹನವಾಜಖಾನನು ಪ್ರಾಮಾಣಿಕನಾಗಿದ್ದನು.. ಈ ಶಾಹನವಾಜನು ಬಹಳ ಒಳ್ಳೇಯವನಾಗಿದ್ದನು. ಮತ್ತು ಅವನು ಬಾದಶಹನ ಪ್ರಶಸ್ತಿಗೆ ಯೋಗ್ಯನಾಗಿದ್ದನು. ಅವನು ಶಾಹನ ಸರನೌಬತನಾಗಿದ್ದನು. ಅನುಭವೀ ಸರನೌಬತಿಯಾಗಿದ್ದನು. ಸಿಂಹಾಸನದ ಎರಡನೆಯ ಸರನೌಬತಿಯಾಗಿದ್ದನು. ಅವನು ಒಳ್ಳೇಯ ವಿಚಾರದವನಾಗಿದ್ದನು. ರಾಜ್ಯದ ಅತಿ ಪ್ರಾಮಾಣಿಕ ಕಂಬವಾಗಿದ್ದನು. ಎಲ್ಲ ಕಡೆಗೆ ಜಯದ ಮಾಲೆ ಬಂದುವು.
- ಅಲೀ ಮಹಲನ್ನು ಮೇಲಿನಿಂದ ಕೆಳಗಿನವರೆಗೆ ಸಂಪೂರ್ಣವಾಗಿ ಸಾಗವಾನಿ ಕಟ್ಟಿಗೆಯಿಂದ ಕಟ್ಟಲಾಯಿತು.. ಈ ಪವಿತ್ರ ಮಹಲಿನ ನಾಲ್ಕೂ ನಿಟ್ಟಿನಲ್ಲೂ ಶೋಭೆ ಇತ್ತು. ಹಾಗೆ ಅಲಂಕಾರ ಮಾಡಲಾಗಿತ್ತು. ಅಲಿ ಮಹಲು ಬಾದಶಹನ ಮುತ್ತಿನಂತಿದೆ. ಇದು ಹಜರತ್ ಸುಲೇಮಾನ ಪೈಗಂಬರರ ಗದ್ದುಗೆಯನ್ನು ನೆನಪು ಮಾಡುತ್ತದೆ. ಅಲೀ ಮಹಲನ್ನು ನೋಡಿದರೆ ಅತ್ಯಂತ ಸಂತೋಷವಾಗುತ್ತದೆ. ಅದನ್ನು ನೋಡಿದರೆ ಹೃದಯ ಮತ್ತು ಕಣ್ಣುಗಳಿಗೆ ಬೆಳಕು ಕಾಣುತ್ತದೆ. ಅದರಲ್ಲಿಯ ಚಿತ್ರಗಳು ಮತ್ತು ಅಲಂಕಾರವು ಜಗತ್ ಶೋಭಾಯಮಾನವಾಗಿವೆ. ಈ ಮಹಲನ್ನು ನೋಡಿ ಇತರ ಮಹಲುಗಳು ದಿಗಿಲುಗೊಂಡುವು. ಹೊಸದಾಗಿ ಕಟ್ಟಿದ ಚೌಖಂಡಿಯು ಅಲಿಮಹಲಿನ ಆಭರಣದಂತಿತ್ತು.
- ಗೋಡೆಯ ಮೇಲೆ ಬುರುಜಗಳನ್ನು ಕಟ್ಟುವ ಜವಾಬ್ದಾರಿಯನ್ನು ಮಿರ್ಜಾ ಯೂಸುಫನಿಗೆ ಕೊಡಲಾಯಿತು.
- ಅಲಿ ಬಾದಶಾಹ ಮತ್ತು ಬಡೀ ಸಾಹೇಬಳು ಮುಲ್ಲಾಜೀಯ ಮೇಜವಾನಿಗೆ ಬಂದರು.
- ನೌರಸ ಮಹಲುಗಳನ್ನು ನೋಡಲು ಅಲೀ ಆದಿಲಶಹನ ಸವಾರಿ ಬಂದಿತು.
- ಆ ದಿನಗಳಲ್ಲಿ ಹಳೆಯ ಆಶುರಖಾನೆಯ ಶೋಭೆ ಅಧಿಕವಾಗಿತ್ತು. ಹಿಜರಿ ಶಕ ೧೦೬೭ರ ಮೊಹರಮ್ ತಿಂಗಳು ಬಹಳ ಪವಿತ್ರವಾಗಿತ್ತು.

- ಇಂದು ಸಾಹೇಬ ಸುರ್ಖಿಯು ಮೋಸ ಮಾಡಿದನು.
- ಈ ವರುಷ ಮೋಹರಮನ್ನು ರವಿವಾರದಂದು ಆಚರಿಸಲಾಯಿತು.
- ಹಿಜರಿ ಶಕ ೧೦೫೩ ಮತ್ತು ೪೫೦ರಲ್ಲಿ ಮೋಹರಮ್ ದಾಶುರಾ [ಹತ್ತನೆಯ ದಿನ] ರವಿವಾರ ಬಂದಿತ್ತು.
- ಮೇಣಬತ್ತಿಯ ಎಣ್ಣೆಯನ್ನು ಗುಲಾಬಿನ ಪ್ರಮಾಣದಲ್ಲಿ ಸೇರಿಸಲಾಗುತ್ತಿತ್ತು.
- ಸಫರದ ಎರಡನೆಯ ದಿನಾಂಕದಂದು ಸಾಹಿಬೇ ಮಲಿಕಾನನನ್ನು ಮಲಿಕ ಅಲ್ಮಾಸನ ವಶಕ್ಕೆ ಕೊಡಲಾಯಿತು ಮತ್ತು ಹಳೆಯ ಅಲ್ಮಾಸನ ಕೆಲಸ ಅಮೂಲ್ಯವಾಗಿತ್ತು. ಹಜರತ್ ಸುಲೇಮಾನರ ಕೈ ಬೆರಳಿನ ಉಂಗುರದ ಹರಳಿನಂತೆ ಇದ್ದನು. ಅವನನು ಅತ್ಯಂತ ವಿಶ್ವಾಸಿಕನಾಗಿದ್ದನು. ಬಾದಶಹನು ಅವನ ಮೇಲೆ ಕೃಪೆ ಮಾಡ ಬಯಸಿದನು.. ಸಫರ ತಿಂಗಳಿನ ಮೂರನೆಯ ದಿನ ಒಂದು ಕಡೆಗೆ ಬಂದನು.
- ತಾವು ನನ್ನನ್ನು ಕ್ಷಮಿಸಬೇಕು.
- ಅವನು ಯಾವಾಗಲೂ ಸುಖವಾಗಿ ಇದ್ದನು. ಮಿರ ನಿಆಮತುಲ್ಲಾನು ಅಂದಿನ ಕಾಲದ ಒಬ್ಬ ಜಾಣನಾಗಿದ್ದನು. ಅವನು ಎಲ್ಲರಿಗೂ ಬೇಕಾದವನಾಗಿದ್ದನು.
- ಕಮಾಲಖಾನ ಸಾಹೇಬನು ನಿಧನ ಹೊಂದಿದನು. ಯಶಸ್ವಿಯಲ್ಲಿ ಹೆಸರುಗಳಿಸಿದವರು ಸ್ವರ್ಗದಲ್ಲಿರುತ್ತಾರೆ.
- ಜೌಹರಖಾನನು ತಿರುಗಿ ತನ್ನ ದೇಶಕ್ಕೆ ಹೊರಟು ಹೋದನು.
- ಬಾದಶಹನು ತಂಜಾಪುರಕ್ಕೆ ಸುರಕ್ಷಿತವಾಗಿ ಬಂದು ಮುಟ್ಟಿದನು.. ಇವನಿಗಿಂತ ಮೊದಲು ಮುಲ್ಲಾ ಅಹಮದನು ತಂಜಾಪುರಕ್ಕೆ ಬಂದಿದ್ದನು.
- ಬನಾಮ ನವದ ಅಫ್ಜಲ ಬಲೀ.
- ಇಂದು ಬಹು ದುಃಖದ ದಿನ
- ಅಲೀ ಆದಿಲಶಾಹನು ಗೋವೆಯ ಕಡೆಗೆ ಸವಾರಿ ಮಾಡಿ ಮಹಮ್ಮದ ಬಂದರದ ಕಡೆಗೆ ಹೊರಟನು.

ಹಿಜರಿ ಶಕ ೧೦೭೦ರಲ್ಲಿ ನಡೆದ ಘಟನೆಗಳು.

- ಅಫ್ಜಲಖಾನನ ಬಗ್ಗೆ ದುಃಖವಾಗುತ್ತಿದೆ.
- ಸಲಾಬತ ಖಾನನು ಆ ಕಾಲದಲ್ಲಿ ಶ್ರೇಷ್ಠ ಸಿಪಹಸಾಲಾರನಾಗಿದ್ದನು. ಅಲ್ಲದೆ ರಾಜ್ಯದ ಸರನೌಬತಿಯೂ ಆಗಿದ್ದನು.

ಹಿಜರೀ ಶಕ ೧೦೭೧ರಲ್ಲಿ ಅಲೀ ಆದಿಲಶಹನ ಸವಾರಿಯು ಪನ್ಹಾಳಾ ಕೋಟೆಗೆ ಬಂದಿತು. ಗೊತ್ತಿಲ್ಲದೆ ಪರಾಂಡೆಗೆ ಹೋದನು. ಮೊಗಲರ ಕಡೆಗೆ ಹೋದನು.

- ಬಡೀ ಸಾಹೇಬಳು ಮಕ್ಕಾ ಮತ್ತು ಮದೀನಾ ಪಟ್ಟಣಕ್ಕೆ ಹೊರಟಳು.
- ಐತಬಾರ ದೀನದಾರನು ಸ್ವರ್ಗಸ್ಥನಾದನು.
- ಅಜೀಜ ಎಕ್ಕಾ ಅಬುಸ್ ಸತ್ತಾರನು ಸರ್–ಸರನೌಬತನಾಗಿದ್ದನು. ಅವನು ಜಾಧವನನ್ನು ಗೆದ್ದನು. ಸಲಾಬತನನ್ನು ಭೆಟ್ಟಿಯಾದನು. ಅಲೀ ಆದಿಲಶಹನಿಗೆ ಒಂದು ರಹಸ್ಯವನ್ನು ಹೇಳಿದನು.

ಹಿಜರೀ ಶಕ ೧೦೭೨ರಲ್ಲಿ ನಡೆದ ಘಟನೆಗಳು.

- ಅಲಿಯ ಮೇಲೆ ಕೃಪೆ ಇರಲಿ.
- ಎರಡನೆಯ ಅಲೀ ಆದಿಲಶಹನು ಶಿವಾಜಿಯ ಜೊತೆ ಆನೆಯ ಮೇಲಿನ ಅಲಿಯು ಬಹಳ ಚೆನ್ನಾಗಿ ಕಾಣುತ್ತಿದ್ದನು.
- ಜೌಹರನು ಅಲಿ ಆದಿಲಶಹನಿಂದ ಓಡಿ ತೊರಗಲ್ ಕಡೆಗೆ ಹೋದನು. ಜೌಹರ ನ ಮೇಲೆ ಆದಿಲಶಹನ ಜಯ.
- ಸಿಕಂದರನಂತೆ ಜಂಜೀಯನ್ನು ಗೆದ್ದನು ಅನಂತರ ಕರ್ನೂಲು, ಆದೋನಿ ರಾಯಚೂರು ಕಡೆಗೆ ಹೋದನು. ಈ ಜಯವು ಬಾದಶಹನ ಸುದೈವದಿಂದ ಆಯಿತು. ಶತ್ರುಗಳ ತಲೆಗಳು ಅಲಿ ಆದಿಲಶಹನ ಕಾಲಕೆಳಗೆ. ಅಲೀ ಆದಿಲಶಹನಿಂದಾಗಿ ಜೌಹರನು ಸತ್ತನು.
- ಬಾದಶಹನು ತಿರುಗಿ ಮಹಮ್ಮದಪುರಕ್ಕೆ ಬಂದನು. ಅವನ ಬರುವಿಕೆಯಿಂದ ಶೋಭೆ ಬಂದಿತು. ನಗರಕ್ಕೆ ಸೂರ್ಯೋದಯವಾದಂತಾಯಿತು.
- [ಬಾದಶಹರ] ನ್ಯಾಯದಿಂದ ಇಂಡಿಯ ದೈವ ತೆರೆಯಿತು.
- ಒಂದು ವರುಷದ ಸವಾರಿಯನ್ನು ಮಾಡಿ ಅಲಿಯು ತಿರುಗಿ ಬಂದನು.
- ಆದಿಲಶಹನು ಬಂದ ನಂತರ ೨೦ನೆಯ ದಿನ.
- ಅರ್ಶಮಹಲಿಗೆ ಶಾಹೀ ಸೌಂದರ್ಯವು ದೊರೆಯಿತು. ಅರ್ಶಮಹಲಿನಿಂದ ಒಡೆಯನಿಗೆ ಸಂತೋಷವಾಗಲಿ.
- ಹಿಜರಿ ಶಕ ೧೦೭೨ರಲ್ಲಿ, ಅಬ್ದುಲ ಮುಹಮ್ಮದನು ಬಹು ದೊಡ್ಡ ವಿದ್ವಾಂಸರುಗಳಲ್ಲಿಯವನಾಗಿದ್ದನು. ಅವನು ಅಲಿಯ ಹತ್ತಿರದವರಲ್ಲಿ ಒಬ್ಬನಾಗಿದ್ದನು.
- ಸಯ್ಯದ ಮುಹಿಬ್ಬ ಒಳ್ಳೇಯ ತಲವಾರ ಆಡುತ್ತಿದ್ದನು.

- ದಬೀರರ ಮುಖ್ಯಸ್ಥನು ಒಳ್ಳೇಯವನಾಗಿದ್ದನು.
- ಕಾಯಂ ಶೇಖ.

ಹಿಜರಿ ಶಕ ೧೧೦೭೩ರಲ್ಲಿ ಶಾಪೇಟೆ ಶಾಹ. ಶಾಪೇಟೆಯು ವಿಶ್ವದಲ್ಲೆ ಸುಂದರವಾದ ಬಾಜಾರ.

ಇಲ್ಲಿಯವೆರೆಗೆ ಎರಡನೆಯ ಅಲೀ ಆದಿಲಶಹನ ಜೀವನ ಮತ್ತು ರಾಜ್ಯದ ವಿವರಗಳನ್ನು ಪ್ರಾರಂಭದಿಂದ ಅಂತ್ಯದವರೆಗೆ ೩೯ ವರುಷಗಳನ್ನು ಬರೆಯಲಾಯಿತು. ಅಲಿ ಆದಿಲಶಾಹನ ನಿಧನದ ನಂತರ ಅವನ ಮಗ ಸಿಕಂದರನು ಪಟ್ಟಕ್ಕೆ ಬಂದನು. ಅವನ ವಯಸ್ಸು ೩೫ ವರುಷವಿತ್ತು. ಅವನು ರಾಜ್ಯವಾಳುತ್ತಿದ್ದಾಗ ದಿಲ್ಲಿಯ ದಾರುಲ್ ಖಿಲಾಫತ್ [ಶಾಹಜಹಾನಾಬಾದ]ದಿಂದ ರಾಜಕುಮಾರ ಔರಂಗಜೇಬ ಆಲಮಗೀರನು ಹಿಂದುಸ್ಥಾನವನ್ನೆಲ್ಲ ನಾಶ ಮಾಡುತ್ತ ದಕ್ಷಿಣದಲ್ಲಿ ಪಾದಾಕ್ರಾಂತ ಮಾಡುವ ಉದ್ದೇಶದಿಂದ ಹೊರಟನು. ದೊಡ್ಡ ಸೈನ್ಯದೊಂದಿಗೆ ಬಿಜಾಪುರದ ಹತ್ತಿರ ಬಂದು ಮುಟ್ಟಿದನು ಮತ್ತು ವಿಜಾಪುರದ ರಾಜನೊಂದಿಗೆ ಯುದ್ಧ ಮಾಡ ಹತ್ತಿದನು. ಸತತ ಒಂದು ವರುಷ ತೋಪುಗಳಿಂದ ಗೋಲಾಬಾರಿ ಮಾಡುತ್ತ ಘನಘೋರ ಯುದ್ಧ ಮಾಡಿದನು. ನಂತರ ಕೊನೆಗೆ ವಿಜಾಪುರವನ್ನು ಕೈವಶ ಮಾಡಿಕೊಂಡನು. ಬಿಜಾಪುರದ ಬಾದಶಾಹ ಸಿಕಂದರ ಶಾಹನು ಅನಿವಾರ್ಯವಾಗಿ ತನ್ನ ರಾಜ್ಯವನ್ನು ಸ್ವತಃ ತಾನೇ ಅವನಿಗೆ ಒಪ್ಪಿಸಿ ಕೊನೆಗೆ ಪ್ರಾಣವನ್ನು ಪರಮೇಶ್ವರನಿಗೆ ಅರ್ಪಿಸಿದನು. ಅಂದಿನಿಂದ ಬಿಜಾಪುರವು ಆಲಂಗೀರ ಔರಂಗಜೇಬನ ವಶವಾಯಿತು.

ಔರಂಗಜೇಬನಿಗೆ ವಿಜಯ ಸಿಕ್ಕಂದಿನಿಂದ ಅವನು ೨೦ ವರುಷ ದಕ್ಷಿಣದ ರಾಜ್ಯವನ್ನು ಆಳಿದನು. ನಂತರ ಅಹಮದನಗರದ ಹತ್ತಿರ ಭಿಂಗಾರ ಎಂಬ ಹೆಸರಿನ ಹಳ್ಳಿಯ ಒಂದು ಹಳೆಯ ಕಸಬಾದಲ್ಲಿ ಅವನು ತನ್ನ ಆಯುಷ್ಯವನ್ನು ಕಳೆದನು. ಆತನ ಶವವನ್ನು ದೌಲತಾಬಾದದ ರೋಜಾದಲ್ಲಿ ದಫನ ಮಾಡಲಾಯಿತು. ಇಲ್ಲಿಯ ವರೆಗೆ ಬಿಜಾಪುರದ ಎಲ್ಲ ರಾಜರ ವಿವರಗಳನ್ನು ಈ ಹಪ್ತ ಕುರ್ಸಿಯಲ್ಲಿ ಬರೆಯಲಾಗಿದೆ.

ಬಾದಶಹರು ಮತ್ತು ಅವರ ಕಾಲ

ಬಿಜಾಪುರದ ಸುಲ್ತಾನರ ಏಳು ಜನರ ವಿವರ; ಯಾರು, ಹೇಗೆ, ಎಷ್ಟು ವರುಷ, ತಿಂಗಳು ಮತ್ತು ದಿನ ಇದ್ದರು ಎಂಬುದು ಜಿಜ್ಞಾಸುಗಳಿಗೆ ತಿಳಿಯಲಿ ಎಂದು ಟಿಪ್ಪಣಿ ಮಾಡಲಾಗಿದೆ. ಅವರ ಕಾಲಕಿರ್ದಿಯ ವಿವರ ಹೀಗಿದೆ.

ಯೂಸುಫ; ಪಟ್ಟಕ್ಕೆ ಬಂದದ್ದು ಹಿಜರಿ ಶಕ ೮೯೭ ಮರಣ ಹಿಜರಿ ೯೧೮, ರಾಜ್ಯ ಕಾಲ; ೨೨ ವರುಷ ೭ ತಿಂಗಳು ೨ ದಿವಸ.

ಇಸ್ಮಾಯಿಲ; ಪಟ್ಟಕ್ಕೆ ಬಂದದ್ದು ಹಿಜರಿ ಶಕ ೯೧೮, ಮರಣ ೯೪೩. ರಾಜ್ಯಕಾಲ; ೨೫ ವರುಷ ೬ ತಿಂಗಳು ೧೫ ದಿವಸ.

ಮಲ್ಲೂಖಾನ ಪಟ್ಟಕ್ಕೆ ಬಂದದ್ದು ಹಿಜರಿ ೯೮೩; ರಾಜ್ಯಕಾಲ; ೭ ತಿಂಗಳು

ಮೊದಲನೆಯ ಅಲೀ ಆದಿಲಶಾಹ; ಪಟ್ಟಕ್ಕೆ ಬಂದದ್ದು; ಹಿಜರಿ ೯೬೪ ಮರಣ; ೯೮೭. ರಾಜ್ಯ ಕಾಲ; ೨೩ ವರುಷ ೪ ತಿಂಗಳು ೨ ದಿವಸ ಕೋಟೆಯಲ್ಲಿ ಲಷ್ಕರ ಬಾಜಾರದಲ್ಲಿ ದಫನ.

ಇಬ್ರಾಹಿಮ ಜಗತ್ ಗುರು; ಪಟ್ಟಕ್ಕೆ ಬಂದದ್ದು ಹಿಜರಿ ೯೮೭; ಮರಣ ಹಿಜರಿ ೧೦೩೪; ರಾಜ್ಯ ಕಾಲ; ೪೬ ವರುಷ ೧೦ ತಿಂಗಳು ೧೧ ದಿನಗಳು. ಕೋಟೆಯ ಹೊರಗೆ ಜೊಹರಾಪುರದಲ್ಲಿ ದಫನ.

ಸುಲ್ತಾನ ಮಹಮ್ಮದ: ಪಟ್ಟಕ್ಕೆ ಬಂದದ್ದು ಹಿಜರಿ ಶಕ ೧೦೩೪ ಮರಣ; ೧೦೬೪. ರಾಜ್ಯ ಕಾಲ; ೩೧ ವರುಷ ೧೫ ದಿನಗಳು.

ಎರಡನೆಯ ಅಲೀ ಆದಿಲಶಾಹ; ಪಟ್ಟಕ್ಕೆ ಬಂದದ್ದು ಹಿಜರಿ ಶಕ ೧೦೬೪; ಮರಣ ೧೦೮೨ ಹಿಜರೀ, ರಾಜ್ಯ ಕಾಲ ೨೮ ವರುಷ ೩ ತಿಂಗಳು ೪ ದಿನಗಳು; ಕೋಟೆಯ ಒಳಗಡೆ ಶಾಹಪೇಟೆಯಲ್ಲಿ ದಫನ.

ಸಿಕಂದರ; ಪಟ್ಟಕ್ಕೆ ಬಂದದ್ದು ಹಿಜರಿ ಶಕ ೧೦೮೨, ಮರಣ ೧೯೮; ರಾಜ್ಯ ಕಾಲ; ೧೩ ವರುಷ ೬ ತಿಂಗಳು ೫ ದಿನಗಳು. ಆಲಮಗೀರನ ಬಂಧನದಲ್ಲಿ, ನಂತರ ಗೋಗಿ, ತೊರವಿ, ನೌರಸಪುರ ಊರ್ಫ ಮುಹಮ್ಮದಪುರದಲ್ಲಿ [ಇಟ್ಟರು.]

ಬಿಜಾಪುರ ರಾಜರ ಕಾಲಕಿರ್ದಿಯನ್ನು ಪ್ರಾರಂಭದಿಂದ ಕೊನೆಯ ವರೆಗೆ ವಿಸ್ತಾರವಾಗಿ ಇಲ್ಲಿಯ ವರೆಗೆ ಹಪ್ತಕುರ್ಸಿ ಎಂಬ ಈ ಪುಸ್ತಕದಲ್ಲಿ ಕೊಡಲಾಗಿದೆ.

ದಾರುಸ್ ಜಫರ್ ಬಿಜಾಪುರ ನಗರದ ಒಳಗೆ ಮತ್ತು ಹೊರಗಿನ ಪೇಟೆ ಬಾಜಾರುಗಳ ವಿವರ.

ಕೋಟೆಯ ಒಳಗೆ; ಪಾದಶಾಹಪುರ, ಶಾಹಪೇಟ, ಫರಹಾನೀ ಪೇಟ, ಬಾರಾ ಖುದಾ ಬಾಜಾರ, ಪಾಲೆ ಬಾಜಾರ, ಹೈದರ ಬಾಜಾರ, ದಲೀಲಖಾನ ಬಾಜಾರ, ಮುಹಮ್ಮದಶಾಹೀ ಬಾಜಾರ, ಲಂಗರ ಬಾಜಾರ, ಮುರಾದಖಾನ ಬಾಜಾರ, ಕಮಾಲಖಾನ ಬಾಜಾರ, ಆನಿಖಿಂಡಿ ಬಾಜಾರ, ಫಾತಿಮಹ ಬಾಜಾರ, ಕಾರಂಜೀ ಬಾಜಾರ, ಸಫಾ ಬಾಜಾರ, ಮೀರ ಕಾಎ ಬಾಜಾರ, ಠಾನೆ ಬಾಜಾರ, ರಾವ ಬಾಜಾರ, ಮಸಜಿದ ಬಾಜಾರ, ಶಾಹ ಮುರ್ತಜಾ ಬಾಜಾರ, ದೌಲತ ಬಾಜಾರ, ಕಾಲಹ ಬಾವಾ ಬಾಜಾರ, ಮಾಮೂರ ಬಾಜಾರ, ಜಕಾತಿ ಬಾಜಾರ, ಶಿಕಾರಖಾನೆ ಬಾಜಾರ, ಠಾಣೆ ಖಾರ, ಮೀರಕಾಈ ಖಾರ, ಫರೀದಖಾನ ಬಾಜಾರ, ರಂಗೀನ ಮಸಜಿದ, ರೂಮೀಖಾನ ಬಾಜಾರ, ಮುಬಾರಿಕ ಬಾಜಾರ, ನಾಗಠಾಣೆ ಬಾಜಾರ.

ಕೋಟೆಯ ಹೊರಗೆ: ಪಾದಶಾಹಪುರ ಊರ್ಫ ಶಾಹಪುರ, ಜೋಹರಾಪುರ

ಊರ್ಫ ಅಝೀಝುಪುರ, ಖುದಾವಂದಪುರ, ಅಫಜಲಪುರ, ಸಿಕಂದರಪುರ, ಫತಃಗಂಜ, ಯಾಕೂತಪುರ, ತಾಂಬಾ ಖಾನೆ ಬಾಜಾರ, ಖರೀದೀ ಬಾಜಾರ, ಆಲಮಗೀರ-ಶಾರ್ಜಾಪುರ, ಅಬದುಲ್ಲಾಹಪುರ, ಲುತ್ಫುಲ್ಲಾಹಪುರ, ಇಬ್ರಾಹೀಮಪುರ, ತಹವ್ವುರಪುರ, ಸಲಾಬತಪುರ, ಯಾರ ಅಲೀಪುರ, ದಿಯಾನತಪುರ, ಗಾಝೀಉದ್ದೀನಪುರ ಶಾಹಗಂಜ, ಗಂಜೆ ಸುಲತಾನೀ, ಚಿನಕುಲೀಜಖಾನ ಬಾಜಾರ ಸಯ್ಯದ ನಿಯಾಝುನಖಾನ ಬಾಜಾರ, ರಿಕಾಬ ತಾನಿಯಖಾನ ಬಾಜಾರ, ರಸೂಲಪುರ.

ಹೀಗೆ ದಾರುಲ್ ಜಫರ್ ಬಿಜಾಪುರ ಕೋಟೆಯ ಒಳಗೆ ಮತ್ತು ಹೊರಗೆ ಬಾಜಾರಗಳು ಭರಭರಾಟೆಯಲ್ಲಿ ಇದ್ದುವು. ಈಗ ಪ್ರತ್ಯೇಕ ಪೇಠಾ ಮತ್ತು ಬಾಜಾರುಗಳ ಹೆಸರು ಮಾತ್ರ ಉಳಿದಿವೆ. ಅವುಗಳ ವೈಭವ ನಷ್ಟವಾಗಿದೆ. ಬಿಜಾಪುರ ಪಟ್ಟಣದಲ್ಲಿ ಮೊದಲಿನ ಕಾಲದಲ್ಲಿ ಒಳ್ಳೆಯ ಬಾವಿಗಳಿದ್ದುವು. ಆದರೆ ಇಂದು ಅವುಗಳು ನೆಲಸಮವಾಗಿವೆ. ಇದ್ದವುಗಳಲ್ಲಿ ೧೪೦೦ ಬಾವಿಗಳಿವೆ. ದೊಡ್ಡ ತಾಜ ಬಾವಡಿಯು ದೊಡ್ಡದಿದ್ದು ಉಳಿದವುಗಳು ಸಣ್ಣ ಸಣ್ಣ ಬಾವಿಗಳಿವೆ.

ಈ ಎಲ್ಲ ವಿವರಗಳನ್ನು ಸರದಾರ ಮೇಜರ್ ಕಾಲಿನ್ ಮೆಕಂಝೀ ಸಾಹೇಬ ಇಂಗ್ರಜಿ ಬಹಾದ್ದೂರ ಅವರ ಆದೇಶದ ಮೇರೆಗೆ ಬರೆಯಲಾಗಿದೆ. ತಪ್ಪುಗಳಾಗಿದ್ದರೆ ಅವುಗಳನ್ನು ಕೃಪೆಯಿಂದ ಬಿಟ್ಟು ಬಿಡಿರಿ ಮತ್ತು ಸಿಟ್ಟಾಗಬೇಡಿರಿ.

ಬಿಜಾಪುರದಲ್ಲಿ ಒಂದು ತೋಫು ಇದೆ. ಅದರ ಹೆಸರು ಮಲಿಕ್ ಮೈದಾನ ಎಂದು ಇದೆ. ಅದರ ಮೇಲೆ ಫಾರಸೀ ಭಾಷೆಯಲ್ಲಿ ಹೀಗೆ ಬರೆಯಲಾಗಿದೆ.

'ದರ್ ಅಮಲ್ ಮೊಹಮ್ಮದ ಆಲಮ್ ಗೀರ, ಔರಂಗಜೇಬ, ಸೀ ಸಾಲಾ ಜುಲೂಸ್ ಮುತಾಬಿಕ್ ೧೦೯೭. ಶಾಹ ಆಲಮಗೀರ ಗಾಝೀ ಬಾದಶಾಹ ದೀನಪನಾಹ ಫತಹ ಬಿಜಾಪುರ ಕರ್ದ ವ ಬಹರ್ ತಾರೀಖ ಜಫರ್ ಆಂಕೆ ದಾದ ವ ಅದಲ್ ದಾದ್ ವ ಮುಲ್ಕೆ ಶಾಹ ಆನ ರಾ ಗಿರಿಫ್ತ ಹಾ ರೂ ನಮೂದ ಇಕ್ಬಾಲ್ ವ ಗುಫ್ತ ಮಲಿಕ ಮೈದಾನ ರಾ ಗಿರಿಫ್ತ'

(ಆಲಮಗೀರ ಔರಂಗಜೇಬನು ಪಟ್ಟಕ್ಕೆ ಏರಿದ ೩೦ನೆಯ ವರುಷ ಹಿಜರಿ ಶಕ ೧೦೯೭ದಲ್ಲಿ ಬಿಜಾಪುರವನ್ನು ಕೈವಶ ಮಾಡಿಕೊಂಡನು. ಅಂದಿನಿಂದ ಆತನು ಬಹು ದೊಡ್ಡ ನ್ಯಾಯಾಧೀಶನಾಗಿ ಪ್ರಸಿದ್ಧನಾದನು. ಮತ್ತು ಅನೇಕ ರಾಜರ ರಾಜ್ಯಗಳನ್ನು ಕೈವಶ ಮಾಡಿಕೊಂಡು ಶ್ರೇಷ್ಠನಾದನು.) ಅದರ ಅಬಜದೀ ಪ್ರಕಾರ ಹಿಜರಿ ಶಕ ೧೦೯೭ ಎಂದರೆ 'ಮಲಿಕ ಮೈದಾನ ರಾ ಗಿರಿಫ್ತ' ಎಂಬುದರಿಂದ ಬರುತ್ತದೆ.

■

ಈಶ್ವರದಾಸ ನಗರ

ವಿರಚಿತ

ಫುತೂಹತೆ ಅಲಂಗೀರ್ (ಭಾಗಶಃ)

ಅನುವಾದ

ಡಾ. ಆರ್.ಕೆ. ಕುಲಕರ್ಣಿ

*

ನಿರ್ದೇಶಕರ ಮಾತು

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ಫುತೂಹತ್-ಇ-ಅಲಂಗೀರ

ಪರ್ಶಿಯನ್ ಭಾಷೆಯಲ್ಲಿರುವ 'ಫುತೂಹತ್-ಇ-ಅಲಂಗೀರ' ಈ ಗ್ರಂಥವನ್ನು ಬರೆದವನು ಈಶ್ವರದಾಸ ನಗರ ಎಂಬ ಹೆಸರಿನ ಶ್ರೇಷ್ಠ ವಿದ್ವಾಂಸ. ಈಶ್ವರದಾಸನು ಹುಟ್ಟಿದ ಗುಜರಾತದ ನಗರ ಬ್ರಾಹ್ಮಣ ಮನೆತನ ಪಾಂಡಿತ್ಯ, ಪರಿಶುದ್ಧ ಚಾರಿತ್ರ್ಯ ಮತ್ತು ಆಡಳಿತ ಸಾಮರ್ಥ್ಯಕ್ಕೆ ಹೆಸರಾಗಿತ್ತು. ಸುಮಾರು ೧೬೫೪ರಲ್ಲಿ ಜನಿಸಿದ ಈತನು ತನ್ನ ಹದಿನಾಲ್ಕನೇ ವಯಸ್ಸಿನಲ್ಲಿ ದಿಲ್ಲಿಯಲ್ಲಿ ಔರಂಗಜೇಬನ ಪ್ರಮುಖ ಖಾಜಿಯಾಗಿದ್ದ. ಶೇಖ-ಉಲ್-ಇಸ್ಲಾಮನಲ್ಲಿ ಸೇವೆಗೆ ಸೇರಿಕೊಂಡು ತನ್ನ ಮೂವತ್ತನೆಯ ವಯಸ್ಸಿನವರೆಗೆ ಖಾಜಿಗೆ ಆಪ್ತನಾಗಿ ಸೇವೆ ಸಲ್ಲಿಸಿದನು. ಬಾದಶಾಹನ ಸೇನೆಯ ಮುಖ್ಯ ಖಾಜಿಯಾಗಿದ್ದ ಶೇಖ-ಉಲ್-ಇಸ್ಲಾಮ ೧೬೮೪ರಲ್ಲಿ ಸಾಮ್ರಾಜ್ಯ ಸೇವೆಯಿಂದ ನಿವೃತ್ತಿ ಹೊಂದಲು ಈಶ್ವರದಾಸನು ಗುಜರಾತದ ಸುಬೇದಾರನಾಗಿದ್ದ ಸುಜಾತಖಾನನಲ್ಲಿ ಸೇರಿಕೊಂಡನು.

ಸುಮಾರು ಅರ್ಧ ಶತಮಾನದವರೆಗೆ (೧೬೫೭-೧೭೦೦) ಸಾಮ್ರಾಟ, ಔರಂಗಜೇಬನ ಆಳಿಕೆಯಲ್ಲಿ ಘಟಿಸಿದ ಘಟನೆಗಳನ್ನು ಕುರಿತು, ಸಮಕಾಲೀನ ವ್ಯಕ್ತಿಗಳನ್ನು ಕುರಿತು ಅಮೂಲ್ಯ ವಿವರಗಳನ್ನು ಈ ಗ್ರಂಥ ಒಳಗೊಂಡಿದೆ.

ಕಾಲ ಕಾಲಕ್ಕೆ ಮೊಘಲ ಸಾಮ್ರಾಜ್ಯದ ಮೂಲೆ ಮೂಲೆಯಿಂದ ಅಧಿಕಾರಿಗಳು, ಸರದಾರರು, ಸುಬೇದಾರರು ಮತ್ತು ಅನೇಕ ಗಣ್ಯರು ಸಾಮ್ರಾಟ ಔರಂಗಜೇಬನಿಗೆ ಬರೆದ ಪತ್ರಗಳು, ಅಹವಾಲುಗಳು ಹಾಗೆಯೆ ಗುಪ್ತಚಾರರು ಕಳಿಸಿದ ಸಂದೇಶಗಳು, ಸಾಮ್ರಾಟನಿದ್ದಲ್ಲಿಗೆ ಬರುತ್ತಿದ್ದವು. ಅವುಗಳನ್ನೆಲ್ಲ ನೋಡುವ ಪರಿಶೀಲಿಸುವ ಅವಕಾಶ, ಅನುಕೂಲತೆ ಈಶ್ವರದಾಸನಿಗೆ ಲಭ್ಯವಿತ್ತು. ಅವುಗಳನ್ನು ದಾಖಲಿಸುವಾಗ ಈ ಚರಿತ್ರೆಕಾರನು ಅವಶ್ಯ

ಭಾಗಗಳನ್ನು ಇದ್ದಕ್ಕಿದ್ದಂತೆ ಉದ್ಧರಿಸಿದ್ದಾನೆ; ಕೆಲವು ಕಡೆಯಲ್ಲಿ ಮಾತ್ರ ತನ್ನ ಅಭಿಪ್ರಾಯವನ್ನು ಅನಿಸಿಕೆಯನ್ನು ಜೋಡಿಸಿದ್ದಾನೆ. ಸತ್ಯಕ್ಕೆ ಅಪಚಾರವಾಗದಂತೆ ಈಶ್ವರದಾಸನು ಕಾಳಜಿ ವಹಿಸಿದ್ದಾನೆ.

ಈ ಚರಿತ್ರೆ ಗ್ರಂಥದ ಕೆಲವು ವೈಶಿಷ್ಟ್ಯಗಳು ಗಮನಾರ್ಹವಾಗಿವೆ. ಮೊದಲನೆಯದಾಗಿ ಸಾಮ್ರಾಜ್ಯದ ಪ್ರಮುಖ ಖಾಜಿಯ ಆಶ್ರಯದಲ್ಲಿ, ನಂತರ ಸುಬೇದಾರ ಶೂಜಾತಖಾನನ ಆಪ್ತ ಸಂಗಡಿಗನಾಗಿ ಈಶ್ವರದಾಸನು ಗ್ರಂಥದಲ್ಲಿ ದಾಖಲಿಸಲ್ಪಟ್ಟ ಎಲ್ಲ ಆಗು ಹೋಗುಗಳಿಗೂ ಪ್ರತ್ಯಕ್ಷದರ್ಶಿಯಾಗಿದ್ದಾನೆ. ಎರಡನೆಯದಾಗಿ ಈ ಗ್ರಂಥಕಾರ ಸಂಪ್ರದಾಯಸ್ಥ ಹಿಂದೂ ಚರಿತ್ರೆಕಾರನಾಗಿದ್ದರೂ ಧರ್ಮೀಯ, ಮತೀಯ, ಜಾತೀಯ ಪೂರ್ವಗ್ರಹಗಳಿಂದ ದೂರವಿದ್ದ ವಿಶಾಲ ದೃಷ್ಟಿಯ ವಿದ್ವಾಂಸನು. ಮೂರನೆಯದಾಗಿ ಈಶ್ವರದಾಸನು ಆಸ್ಥಾನ ಚರಿತ್ರೆಕಾರನಲ್ಲ. ಔರಂಗಜೇಬನ ಕಾಲದಲ್ಲಿಯೇ ಈ ಚರಿತ್ರಾ ಘಟನೆಗಳನ್ನು ದಾಖಲಿಸಲು ಆರಂಭಿಸಿದ ಈಶ್ವರದಾಸನು ಬಾದಶಾಹನ ಜೀವಿತ ಕಾಲದಲ್ಲಿಯೇ ಮುಗಿಸಿದನು. ಆ ಕಾಲದ ಇತಿಹಾಸಕ್ಕೆ ಸಂಬಂಧಿಸಿದ ಎಲ್ಲ ದಾಖಲೆಗಳಲ್ಲಿ 'ಫುತೂಹತ್-ಇ-ಅಲಂಗೀರಿ' ಅತ್ಯಂತ ವಿಶ್ವಾಸಾರ್ಹವಾದ ಗ್ರಂಥವೆಂದು ಸರ್ವಮಾನ್ಯವಾಗಿದೆ.

ಈಶ್ವರದಾಸನು ಮುಘಲ ಮತ್ತು ರಾಠೋಡರ ನಡುವಿನ ಸುದೀರ್ಘ ಕಾಲದ ವೈರತ್ವವನ್ನು ಶಮನಗೊಳಿಸಿ ಅವರನ್ನು ಕೂಡಿಸಿದ್ದನ್ನು ಗಮನದಲ್ಲಿಟ್ಟುಕೊಂಡು ಚಕ್ರವರ್ತಿ ಔರಂಗಜೇಬನು ಅವನಿಗೆ ಮಾರವಾರದ ಜಾಗೀರ ಕೊಟ್ಟು ಇನ್ನೂರೈವತ್ತು ಸೈನಿಕರ ದಳಪತಿಯನ್ನು ಮಾಡಿ ಅವನನ್ನು ಅಹಮದಾಬಾದಿನಲ್ಲಿರಿಸಿದನು.

ಭಾರತೀಯ ಇತಿಹಾಸ ಅನುಸಂಧಾನ ಹೊಸದೆಹಲಿಯ ಮುಖ್ಯ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದ ಡಾ.ತಸ್ನೀಮ್ ಅಹಮದ ಅವರು 'ಫುತೂಹತ್-ಇ-ಅಲಂಗೀರ್' ಮೂಲ ಪರ್ಶಿಯನ್ ಕೃತಿಯನ್ನು ಪರಿಶೀಲಿಸಿ ಅದರ ಆಂಗ್ಲ ಅನುವಾದವನ್ನು ಮಾಡಿದ್ದಾರೆ. ಅದನ್ನು ಇದಾರಾ-ಇ, ಅದಬಿಯಾತ್-ಇ ದೆಹಲಿ ಅವರು ೧೯೭೮ರಲ್ಲಿ ಪ್ರಕಟಿಸಿದ್ದಾರೆ.

ಔರಂಗಜೇಬನು ಆದಿಲಶಾಹಿ ರಾಜ್ಯವನ್ನು ಕೈವಶ ಮಾಡಿಕೊಂಡ ಸಂದರ್ಭದಲ್ಲಿ ನಡೆದ ಘಟನೆಗಳ ವಿವರ ಇಲ್ಲಿದೆ. ಜೊತೆಗೆ ವಿಶೇಷವಾಗಿ ದಕ್ಷಿಣ ಭಾರತದಲ್ಲಿ ಘಟಿಸಿದ ಘಟನೆಗಳ ವಿವರಗಳುಳ್ಳ ಈ ಗ್ರಂಥದ ಆಂಗ್ಲಾನುವಾದದ ಭಾಗವನ್ನು ಇಲ್ಲಿ ಮೂಲಕ್ಕೆ ಚ್ಯುತಿ ಬರದಂತೆ ಅನುವಾದ ಮಾಡಲಾಗಿದೆ. ಡಾ.ತಸ್ನೀಮ್ ಅಹ್ಮದ್ ಹಾಗೂ ಪ್ರಕಾಶನ ಸಂಸ್ಥೆ ಮತ್ತು ಆಂಗ್ಲ ಭಾಷೆಯಿಂದ ಕನ್ನಡಕ್ಕೆ ತಂದ ಡಾ.ಆರ್.ಕೆ.ಕುಲಕರ್ಣಿ ಅವರಿಗೆ ಕೃತಜ್ಞತೆಗಳು.

■

ಫುತೂಹತೆ ಅಲಂಗೀರ್

*

ಬಿಜಾಪುರ ಪತನ

ಘಟನೆಗಳು – ವಿಜಾಪುರ ಕೋಟೆಯನ್ನು ಗೆಲ್ಲುವುದಕ್ಕಾಗಿ ಸಾಮ್ರಾಟನ [ಔರಂಗಜೇಬ] ನಿರ್ಗಮನ

ತಿಂಗಳುಗಳು ಕಳೆದವು. ಆದರೆ ಮುತ್ತಿಗೆಯ ಮೊದಲು ದಿನವೆಂಬಂತೆ ಸ್ಥಿತಿ ಮುಂದುವರೆಯಿತು. ಸಾಮ್ರಾಟನ ಜಗ ಗೆಲ್ಲುವ ಅಜೇಯ ಧೈರ್ಯ ಅಚಲವಾಗಿತ್ತು. ತನ್ನೀ ಮಹತ್ಕಾರ್ಯವನ್ನು ಸಾಧಿಸಲು ಸಂಕಲ್ಪಬದ್ಧನಾಗಿದ್ದನು. ಆ ಕಾರಣದಿಂದ ಕೋಟೆಯನ್ನು ಕೈವಶಮಾಡಿಕೊಳ್ಳಲು ಅವಶ್ಯವಿದ್ದ ಎಲ್ಲ ವಸ್ತು ಪದಾರ್ಥಗಳು ವಿಜಾಪುರದ ಕಡೆಗೆ ಸಾಗಿದವು. ಚಕ್ರವರ್ತಿಯ ದಂಡಯಾತ್ರೆಯ ಸಮಾಚಾರದಿಂದ ಸಾಮ್ರಾಜ್ಯದ ಅಧಿಕಾರಿಗಳೆಲ್ಲ ಚಿಂತೆಗೀಡಾದರು. ಚಕ್ರವರ್ತಿಯ ವಿಶ್ವಾಸಗಳಿಸಿದ್ದ ಆಪ್ತ ಅಧಿಕಾರಿಗಳು ಕರ್ತವ್ಯದಿಂದ ದೂರ ಉಳಿಯಲೋಸುಗ ಸಬೂಬುಗಳನ್ನು ಸಾದರಪಡಿಸಿ 'ವಿಷಮ ವಾತಾವರಣವಿದೆ, ಮಳೆಗಾಲ ಯಾವ ಕ್ಷಣದಲ್ಲಿಯಾದರೂ ಶುರು ಆಗಬಹುದು. ನೀರಿನ ಅಭಾವ ಹಾಗೂ ಮೇವಿನ ಅಭಾವ ಆಗಬಹುದು' ಎಂದು ಹೇಳಿದರು. ಆದರೆ ವಿಜಾಪುರದ ಕೋಟೆಯನ್ನು ಕೈವಶಮಾಡಿ ಕೊಳ್ಳಲೇಬೇಕೆಂದು ದೃಢಗುರಿ ಹೊಂದಿದ್ದ ಚಕ್ರವರ್ತಿಯು ಆ ಎಲ್ಲ ವಿನಾಯತಿಯ ಸೂಚನೆಗಳನ್ನು ಸಂಪೂರ್ಣವಾಗಿ ತಿರಸ್ಕರಿಸಿದನು.

ಹತ್ತಾರು ಘಟ್ಟಗಳನ್ನು ಕ್ರಮಿಸುತ್ತ ಸಾಮ್ರಾಟನ ಸೇನೆ ಅಹಿರಬಾರಿ[೧] ಎಂಬಲ್ಲಿ ತಲುಪಿತು. ಮಳೆ ಸುರಿಯಲಾರಂಭಿಸಿತು. ಬಹು ದಿನಗಳಿಂದ ಅನಾವೃಷ್ಟಿ ಸ್ಥಿತಿ ಇದ್ದದ್ದರಿಂದ ಮಳೆ ಬಂದದ್ದು ಶುಭಸೂಚಕವೆನ್ನುತ್ತ ಚಕ್ರವರ್ತಿಯು ಸರ್ವಶಕ್ತ ಭಗವಂತನನ್ನು ವಂದಿಸಿದನು[೨]. ಮಳೆಯಿದ್ದರೂ ತನ್ನ ದಂಡಿನ ಪಯಣವನ್ನು ಮುಂದುವರೆಸಿದನು. ಬಹಳ ದಿನಗಳವರೆಗೆ ಒಂದೇ ಸಮನೆ ಮಳೆ ಸುರಿಯಲು ಭೂಮಿಯೆಲ್ಲಾ ಜಲಾವೃತವಾಗಿ ಹಳ್ಳಕೊಳ್ಳಗಳೆಲ್ಲ ತುಂಬಿ ಹರಿಯತೊಡಗಿದವು. ಈ ಎಲ್ಲ ತೊಂದರೆಗಳನ್ನು ಲೆಕ್ಕಿಸದೇ ಚಕ್ರವರ್ತಿಯು ಎಲ್ಲಿಯೂ ಪ್ರಯಾಣ ನಿಲ್ಲಿಸದೆ ಭೀಮಾ ನದಿ ತಲುಪಿದನು. ಎಲ್ಲ ಜಲಜೀವಿಗಳು ತ್ರಸ್ತಗೊಳ್ಳುವಷ್ಟು ನದಿ ತುಂಬಿ ಹರಿಯುತ್ತಿತ್ತು. ನದಿಯ ರೋಷಾವೇಶವು ಅವರೆಲ್ಲರಿಗೆ

ದೈವೀ ಕ್ರೋಧವನ್ನು ನೆನಪಿಸಿತು. ಅನಿವಾರ್ಯವಾಗಿ ಕೆಲಕಾಲ ಚಕ್ರವರ್ತಿಯು ಅಲ್ಲಿಯೇ ಬೀಡುಬಿಟ್ಟನು. ಮಳೆಗಾಳಿ ಶಾಂತವಾಗಲು ಸೇನೆ ಹೊಳೆ ದಾಟಿತು. ಆಂದಿಧ್ಯ[೩] ಎಂಬ ಹಳ್ಳಿಗೆ ತಲುಪಿದರು. ತನ್ಮಧ್ಯ ವಿಜಾಪುರ ಕೋಟೆಯ ಮುತ್ತಿಗೆಯನ್ನು ಅಧಿಕಾರಿಗಳಿಗೊಪ್ಪಿಸಿ ಘಾಜಿ ಉದ್ದದಿನ್ ಖಾನ್‌ನೊಡಗೂಡಿ[೪] ಬಂದು ರಾಜಕುಮಾರ ಮುಹಮದ್ ಅಝುಮ್‌ಶಾಹ್ ಚಕ್ರವರ್ತಿಗೆ ವಂದನೆಗಳನ್ನು ಸಲ್ಲಿಸಿ ವಸ್ತುಸ್ಥಿತಿಯನ್ನು ಅರುಹಿದನು[೫].

ಈ ಪ್ರದೇಶದ ಏಳ್ಗೆಯನ್ನು ಮತ್ತು ಹಾಳಾಗಿ ಹೊರಟಿದ್ದ ಸಿಕಂದರನ ಸಂಪತ್ತಿನ ಸಂರಕ್ಷಣೆಯನ್ನು ಗಮನದಲ್ಲಿಟ್ಟಿದ್ದ ಗಂಭೀರ ಸ್ವಭಾವದ ಸಾಮ್ರಾಟನು ಸಿಕಂದರನಿಗೆ ಸಂದೇಶವೊಂದನ್ನು ಕಳಿಸಿದನು. 'ಎಲ್ಲವೂ ಇನ್ನೂ ನಷ್ಟವಾಗಿಲ್ಲ. ಸುದೈವಪ್ರೇರಿತನಾಗಿ ನಿನ್ನ ವೈರವನ್ನು ಸದಿಚ್ಛೆ ಮತ್ತು ಸ್ನೇಹಕ್ಕೆ ಪರಿವರ್ತಿಸುತ್ತ ಭಯಭಕ್ತಿ ಹುಟ್ಟಿಸುವ ಸಾಮ್ರಾಜ್ಯ ಧ್ವಜವನ್ನು ಸವಿನಯವಾಗಿ ಬರಮಾಡಿಕೊಂಡು ಸಾವಮ್ರಾಜ್ಯದ ಸೇವೆಯನ್ನು ಸ್ವೀಕರಿಸುವುದಾದರೆ ಹಿಂದಿನಂತೆ ಮುಂದೆಯೂ ನಿನ್ನ ರಾಜ್ಯವನ್ನು ನಿನಗೆ ದಯಪಾಲಿಸಲಾಗುವುದು ಮತ್ತು ನೀನು ಯಾವ ಹಾನಿ, ತೊಡಕಿನ ಸ್ಥಿತಿಯನ್ನು ಎದುರಿಸಬೇಕಾಗಿಲ್ಲ.' ಸನ್ನಿವೇಶವನ್ನು ಅರ್ಥಮಾಡಿಕೊಳ್ಳುವಷ್ಟು ವಿವೇಕವಿಲ್ಲದ ಸಿಕಂದರನು ಸೊಕ್ಕಿನಿಂದ ಸಾಮ್ರಾಟನ ದಯೆಯನ್ನು ತಿರಸ್ಕರಿಸುತ್ತ ಅದೆಲ್ಲ ಕಟ್ಟುಕಥೆಯೆಂದು ನಿರಾಕರಿಸಿದನು. ಆತನು ತನ್ನ ನಿರ್ಧಾರದಿಂದ ಕಿಂಚಿತ್ತೂ ಹಿಂದೆ ಸರಿಯಲಿಲ್ಲ. ಕೊನೆಗೆ ಮಹಾಪ್ರಭುವಿನ ಆಜ್ಞೆಗನುಸಾರ ಹಿರಿಯ ರಾಜಮಾನ್ಯರು ತಮ್ಮ ತಮ್ಮ ರಕ್ಷಣಾ ಕಂದಕಗಳನ್ನು ಬಲಪಡಿಸಿಕೊಂಡರು. ಸಾಮ್ರಾಟನ ಸೇನೆ ಮತ್ತು ವಿಜಾಪುರ ಸೈನ್ಯ ಎರಡರ ಮಧ್ಯ ಗುಂಡಿನ ಕಾಳಗ ಆರಂಭವಾಯಿತು. ಬಂದೂಕು ಹೊಗೆಯ ದಟ್ಟ ಹೊದಿಕೆ ಆಕಾಶವನ್ನಾವರಿಸಿ ಸೂರ್ಯನನ್ನು ಮರೆಯಾಗಿಸಲಾಗಿ ಹಗಲು ರಾತ್ರಿಯಾಯಿತು. ಬಂದೂಕು ಗುಂಡುಗಳ ಹಾರಾಟದ ಭೀಕರ ಧ್ವನಿ ಕಿವಿ ಕೊರೆಯುತ್ತಿತ್ತು ಹಾಗೂ ಅನೇಕರು ಪ್ರಜ್ಞೆ ತಪ್ಪಿ ನೆಲಕ್ಕುರುಳಿದರು. ಅಬ್ದುಲ್ ಕರೀಮ ವಿಜಾಪುರಿಯ ಪುತ್ರರಾದ ಅಬ್ದುಲ್ ಗಫೂರ ಅಲಿಯಾಸ್ ಮೀಯಾಖಾನ್ ಮತ್ತು ಅಬ್ದುಲ್ ನಬಿ ಹಾಗೆಯೆ ಸಿಕಂದರನ ಬಳಿಯ ಪ್ರಮುಖ ಯೋಧಶ್ರೇಷ್ಠರು ಸಾವಿರ ಸಾವಿರ ಸಂಖ್ಯೆಯ ಸವಾರರೊಡನೆ ಸಾಮ್ರಾಟ ಸೇನೆಯನ್ನು ಸುತ್ತುವರೆದು ತ್ರಸ್ತಗೊಳಿಸುತ್ತ ಹೋರಾಟಕ್ಕೆ ತೊಡಗಿದರು. ಎರಡೂ ಕಡೆಗೆ ವಿಪರೀತ ಪ್ರಾಣ ಹಾನಿಯಾಯಿತು[೬]. ಈ ತೆರನಾಗಿ ಇಡೀ ಒಂದು ವರ್ಷ ಕಳೆಯಿತು. ಸಾಮ್ರಾಟನ ಸೇನೆ ಧೈರ್ಯಗುಂದಿ ದಣಿದುಹೋಯಿತು. ಧಾನ್ಯಗಳ ಬೆಲೆ ಮುಗಿಲು ಮುಟ್ಟಿತು. ಮೇವಿನ ಅಭಾವ ಗಂಭೀರ ಸ್ಥಿತಿಗೆ ತಲುಪಿತು. ಹಸಿವೆಯ ತಾಪದಿಂದ ಬಾಣದ ತಲೆಯಂತೆ ಜನರು ಬಾಯ್ದೆರೆದರು. ಕುದುರೆಗಳು ಗೋಡೆಯ ಮೇಲಿನ ಚಿತ್ರದಂತೆ ನಿರ್ಜೀವವಾಗಿದ್ದವು. ರೋಗಗಳು ಹರಡಿದವು. ಬಹು ದೊಡ್ಡ ಸಂಖ್ಯೆಯಲ್ಲಿ ಸೈನಿಕರು ವ್ಯಾಧಿಗ್ರಸ್ತರಾಗಿ ಜೀವದ ಆಶೆಯನ್ನೇ ಕಳೆದುಕೊಂಡರು.

ವ್ಯಾಪಾರಿಗಳು ತಾಳ್ಮೆಗೆಟ್ಟರು. ರೋಖ ಕೊಟ್ಟರೆ ಮಾತ್ರ ದವಸ ಧಾನ್ಯ ಕೊಡತೊಡಗಿದರು.

ಪ್ರತಿದಿನವೂ ಕೊನೆಗಾಲದ ಮುಖ ಧರಿಸಿತ್ತು. ಕಷ್ಟ ಕೋಟಲೆಗಳು ಭಗವಂತನ ಕೊನೆ ತೀರ್ಪಿನ ದಿನವನ್ನು ನೆನಪಿಸುತ್ತಿದ್ದವು. ಈ ಎಲ್ಲ ಎಡರು ತೊಡರುಗಳಿದ್ದರೂ ರಾಜಮಾನ್ಯರು ಮತ್ತು ಸಾಮ್ರಾಜ್ಯ ಸೇವಕರೆಲ್ಲ ವೈರಿಯ ಪೆಟ್ಟನ್ನು ಸಹಿಸುತ್ತ ಕುಂದದ ಶ್ರದ್ಧೆ ಮತ್ತು ವಿಶ್ವಾಸದಿಂದ ದಾರಿಗಳನ್ನು ಕಟ್ಟುವ ಪ್ರಯತ್ನ ಮುಂದುವರೆಸಿದರು. ಸತತ ಪ್ರಯತ್ನದಿಂದ ರಕ್ಷಣಾ ಕಂದಕಗಳನ್ನು ತೋಡುತ್ತ ತೋಡುತ್ತ ಸಾಮ್ರಾಜ್ಯ ಧ್ವಜವನ್ನು ಕೋಟೆ ಸುತ್ತಲಿರುವ ನೀರು ಕಂದಕದ ದಡದ ಹತ್ತಿರ ಒಯ್ಯುವಲ್ಲಿ ಅವರು ಯಶಸ್ವಿಯಾದರು.

ಅಷ್ಟರಲ್ಲಿ ಹರಿಕಾರರು ಸಾಮ್ರಾಟನಿಗೆ ಹೀಗೆ ವಿವರಿಸಿದರು: "ಸಿಕಂದರನ ದೂತರು ರಾಜಕುಮಾರ ಮುಹಮ್ಮದಶಾಹ ಆಲಂ ಬಹಾದ್ದೂರನೊಡನೆ ಸಂಪರ್ಕದಲ್ಲಿದ್ದಾರೆ. ರಾಜಕುಮಾರನು ಹಿಡಿದ ದಾರಿಯಾಗಲಿ ಅವನ ಮನದಿಂಗಿತವಾಗಲಿ ವಿಚಾರಣೆಯಿಂದ ಅಷ್ಟಾಗಿ ತಿಳಿದು ಬಂದಿಲ್ಲ." ಇದರಿಂದ ಉನ್ನತ ಮನಸ್ಸಿನ ಸಾಮ್ರಾಟನು ಖಿನ್ನನಾದನು.

ರಾಜಕುಮಾರನನ್ನು ಅಧಿಕಾರದಿಂದ ಅಮಾನತ್ತುಗೊಳಿಸಲಾಗಿದೆ ಎಂದು ಮತ್ತು ಜಮಾಲ್ ಉಲ್ ಮುಲ್ಕ ಮದಾರುಲ್ ಮಹಾಮ್‌ದ ಅಧಿಕಾರಿ ಅಲ್ಲಿಯೇ ಇರಬೇಕೆಂದು ಖಡಕ್ಕಾಗಿ ಪತ್ರ ಬರೆದು ತಿಳಿಸಲು ಸಾಮ್ರಾಟನು ಕಾರ್ಯದರ್ಶಿಗಳಿಗೆ ಆಜ್ಞೆ ಹೊರಡಿಸಿದನು. ಹೈದರಾಬಾದ ಆಡಳಿತಗಾರನ ವಕೀಲ ಮುಹಮ್ಮದ ಮಾಸುಮನು ಇನ್ನು ಮುಂದೆ ರಾಜಕುಮಾರನ (ಶಾಹ ಆಲಂ) ಹತ್ತಿರ ಹೋಗುವುದಿಲ್ಲೆಂದು ಮುಚ್ಚಳಿಕೆ ಬರೆದುಕೊಡಬೇಕೆಂದು ತಿಳಿಸಬೇಕು. ಆ ಬಳಿಕ ಬಕ್ಷಿ ಉಲ್ ಮುಲ್ಕ ಆಶ್ರಫ್‌ಖಾನ್, ಮುಹಮ್ಮದ ಅಲಿ ಖಾನ್, ವಝೀರ್ ಶರೀಫ್ ಉಲ್ ಮುಲ್ಕ, ಫಜಲ್ ಖಾನ್, ಮರಮತ್‌ಖಾನ್, ಖೈಫಿಯತ್‌ಖಾನ್, ಇಹ್ತಮಾಮಖಾನ್ ಮತ್ತು ಇನ್ನುಳಿದ ಕುಲೀನ ರಾಜಮಾನ್ಯರು ಸಾಮ್ರಾಜ್ಯ ಶಿಬಿರದ ಮೇಲೆ ನಿಗಾ ಇಡಬೇಕೆಂದು ಆಜ್ಞಾಪಿಸಿ ಮಹಾ ಪ್ರಭು ತಾನೇ ವಿಜಾಪುರಕ್ಕೆ ಹೊರಟನು.

೨ ಝಿಲ್ಕಾದ ಹಿಜರಿ ಶಕ ೧೦೯೬ರಂದು ಮಹಾಪ್ರಭು ವಿಜಾಪುರದ ಹತ್ತಿರ ಬಂದಿಳಿದನು. ಕೆಳಗಿನಂತೆ ಆತನು ಆಜ್ಞೆ ಹೊರಡಿಸಿದನು: "ಪ್ರತಿಯೊಬ್ಬನು ಭದ್ರ ರಕ್ಷಣಾ ಕಂದಕಗಳನ್ನು ಕಟ್ಟುತ್ತ ಹೋಗಿ ಕೋಟೆಯನ್ನು ಮುತ್ತಿರಿ, ಅದರ ರಕ್ಷಣಾ ಗೋಡೆಗಳನ್ನು ಕೆಡವಿ ಕೋಟೆಯನ್ನು ಧ್ವಂಸಮಾಡಲು ಬೇಕಾಗುವ ಎಲ್ಲ ಸಾಮಗ್ರಿಗಳನ್ನು ಸಂಗ್ರಹಿಸಿರಿ"

ಘಾಜಿ ಉದ್‌ಖಾನ್, ರಣಮಸ್ತಖಾನ್, ದೌದಖಾನ, ರಾವ ಅನೂಪಸಿಂಗ, ಅಬ್ದುಲ್ ವಾಹಿದಖಾನ ಮತ್ತು ಸಾಮ್ರಾಜ್ಯದ ಇನ್ನುಳಿದ ಪ್ರಸಿದ್ಧ ಸರದಾರರು ಕೋಟೆಯ ಸುತ್ತಲಿನ ನೀರು ಕಂದಕದ ವರೆಗೆ ಬಹು ಶ್ರಮಪಟ್ಟು ರಕ್ಷಣಾ ಕಂದಕಗಳನ್ನು ನಿರ್ಮಿಸಿದ್ದು ಹರಕಾರಗಳ ವರದಿಯಿಂದ ಮಹಾಪ್ರಭುವಿಗೆ ಗೊತ್ತಾಯಿತು. ತದ ನಂತರ ಬಾಕೋಜಿ ಮತ್ತು ರಾಘೋಜಿ ಭೋಸಲೆ, ೫೦೦೦ ಕುದುರೆ ಸವಾರರೊಂದಿಗೆ ಕೋಟೆಯ ಹೊರಗೆ ಬಂದು ಅಬ್ದುಲ್ ಕರಿಮಖಾನ ರೊಹಿಲ್ಲಾನ ಇಬ್ಬರು ಮಕ್ಕಳಾದ ಮಿಯಾನ ಖಾನ ಹಾಗೂ ಅಬ್ದುಲ್ ನಬಿಖಾನರೊಡನೆ ಕೈಜೋಡಿಸಿ ಸಾಮ್ರಾಟನ ಸೇನೆಯನ್ನು ಘಾಸಿಗೊಳಿಸತೊಡಗಿದರು.

ಇದನ್ನರಿತ ಮಹಾರಾಜನು, ಘಾಜಿ ಉದ್‌ಖಾನ, ಚಿನ್‌ಖಿಲಿಜಖಾನ, ಬಹ್ರಾಮಂದಖಾನ, ಮುಖಲಿಸಖಾನ, ಝುಲ್ಫಿಕರಖಾನ ಹಾಗೂ ಇನ್ನುಳಿದ ಪ್ರಮುಖ ಸರ್ದಾರರಿಗೆ ಶತ್ರುವನ್ನು ಸದೆಬಡೆಯಲು ಆಜ್ಞಾಪಿಸಿದನು. ಮೇಲೆ ಹೆಸರಿಸಿದ ವೀರ ಯೋಧರೆಲ್ಲ ಒಟ್ಟುಗೂಡಿದರು. ಈ ಕಾಳಗವು ಅವರ ಧೈರ್ಯ ಪ್ರದರ್ಶನಕ್ಕೆ ದೊಡ್ಡ ಅವಕಾಶ ಒದಗಿಸಿತು. ಸಾಮ್ರಾಟ ಸೇನೆ ದೊಡ್ಡ ಸಂಖ್ಯೆಯಲ್ಲಿ ಶತ್ರುಸೇನೆಯ ಸಂಹಾರ ಮಾಡಿತು. ಪ್ರತಿದಾಳಿಯನ್ನು ಎದುರಿಸುವ ಧೈರ್ಯವಿಲ್ಲದೆ ಶತ್ರು ಸೇನೆ ಹಿಮ್ಮೆಟ್ಟಿತು. ಈ ರೀತಿಯ ಗಣನೀಯವಾದ ಧೈರ್ಯ ಪ್ರದರ್ಶನಕ್ಕಾಗಿ ಮತ್ತು ಅದೇ ತೆರನಾದ ಮೆಚ್ಚಬೇಕಾದ ವಿಜಯಕ್ಕಾಗಿ ಮಹಾಪ್ರಭು ಸಾಮ್ರಾಟ ಸೇನೆಯ ವರಿಷ್ಠರನ್ನು ಸನ್ಮಾನಿಸಿದನು.[೧೦]

ಸೈಫ ಮತ್ತು ಇನ್ನಿತರ ಸರ್ದಾರರು ತಮ್ಮ ತಮ್ಮ ರಕ್ಷಣಾ ಕಂದಕಗಳಿಂದ ಹೊರಗೆ ಬಂದು ಕೈಗೆ ಸಿಕ್ಕ ಮಣ್ಣಿನಿಂದ ಕೋಟೆಯ ಸುತ್ತಲಿನ ನೀರಿನ ಕಂದಕವನ್ನು ತುಂಬಲು ಪ್ರಯತ್ನಿಸಿದರು. ಕಂದಕದ ಸಮೀಪ ಹೋದವರೆಲ್ಲ ಕೋಟೆಯಿಂದ ಹಾರಿ ಬರುವ ಗುಂಡಿಗಾಹುತಿಯಾದರು. ಕಂದಕದೆಡೆಗೆ ಧೈರ್ಯದಿಂದ ಹೋದವರೆಲ್ಲ ಕೃಷ್ಣವರ್ಣದ ಬಂದೂಕಧಾರಿಗಳ ಹೊಡೆತಕ್ಕೆ ನೆಲಕ್ಕುರುಳಿದರು. ಯಾರಿಗೂ ತಲೆಯೆತ್ತುವ ಧೈರ್ಯವಾಗಲಿಲ್ಲ. ಮೂರು ತಿಂಗಳುಗಳವರೆಗೆ ಒಬ್ಬನೇ ಒಬ್ಬ ಮನುಷ್ಯನಿಗೂ ಕೋಟೆಯ ಹತ್ತಿರ ಹೋಗುವುದಾಗಲಿಲ್ಲ. ಏಕೆಂದರೆ ಬಹಳ ಆಳ ಮತ್ತು ಅಗಲವಾಗಿದ್ದ ಆ ಕಂದಕವನ್ನು ತುಂಬುವುದು ಸುಲಭವಾಗಿರಲಿಲ್ಲ. ಆ ನಂತರ ಚಪ್ಪರ ಕಟ್ಟುವವರಿಗೆ ಮತ್ತು ಕೆಲಸಗಾರರಿಗೆ ತಿಳಿಸಲಾಯಿತು: "ಕಂದಕದಲ್ಲಿ ಮಣ್ಣುಸುರಿಯುವ ಪ್ರತಿಯೊಬ್ಬರಿಗೂ ತುಂಬಿದ ಬುಟ್ಟಿ ಒಂದಕ್ಕೆ ನಾಲ್ಕಾಣೆಯಂತೆ ಕೊಡಲಾಗುವುದು" ಆಗ ಅಸಂಖ್ಯ ಕೆಲಸಗಾರರು ನೆರೆದು ಕಂದಕ ತುಂಬಲು ತೊಡಗಿದರು. ಅವರಲ್ಲಿ ಬಹು ಸಂಖ್ಯೆಯಲ್ಲಿ ಶತ್ರುಗಳ ಬಾಣಕ್ಕೆ ಇಲ್ಲವೆ ಗುಂಡಿಗೆ ಬಲಿಯಾಗುವ ಅಂಜಿಕೆಯಿಂದ ಕೆಲಸಗಾರರು ಕೆಲಸ ಬಿಟ್ಟೇ ಹೋದರು. ಪ್ರತಿ ಬುಟ್ಟಿಗೆ ಒಂದು ರೂಪಾಯಿಯಂತೆ ಹೆಚ್ಚಿಸಲಾಯಿತು. ಆಮೇಲೆ ಅದನ್ನು ಒಂದು ಬಂಗಾರ ನಾಣ್ಯಕ್ಕೇರಿಸಲಾಯಿತು. ಮಣ್ಣು ತುಂಬುವ ಕೆಲಸ ನಿಲ್ಲಲಿಲ್ಲ. ಮನುಷ್ಯನಾಗಲಿ, ಪ್ರಾಣಿಯಾಗಲಿ ಸತ್ತರೆ ಆ ಹೆಣವನ್ನು ಎಳೆದೊಯ್ದು ಕಂದಕಕ್ಕೆ ಎಸೆಯಲಾಯಿತು. ಇದು ಎಷ್ಟು ವಿಪರೀತ ಹಂತಕ್ಕೆ ಮುಟ್ಟಿತೆಂದರೆ ಕೆಲವು ಕ್ರೂರ ಸೈನಿಕರು ಜೀವಂತ ಗಂಡು ಹೆಣ್ಣುಗಳನ್ನು ಅಲ್ಲೆಸೆದು ದುಡ್ಡು ಗಳಿಸಿದರು. ನಿಜಕ್ಕೂ ಭಯಂಕರ ಕಾಲ ಅದಾಗಿತ್ತು.[೧೧] ಹೀಗೆ ಬಿಡುವಿಲ್ಲದ ಪ್ರಯತ್ನದಿಂದ ರಕ್ಷಣಾ ತಗ್ಗುಗಳನ್ನು ನಿರ್ಮಿಸುತ್ತ ಕೋಟೆಯ ಸುತ್ತಲಿನ ಕಂದಕದ ಅಂಚಿಗೆ ಮುಟ್ಟಿದರು. ಕಂದಕ ಹತ್ತಿರ ಹತ್ತಿರ ತುಂಬುವ ಮಟ್ಟಕ್ಕೆ ಬಂದಿತು. ಘಾಜಿ ಉದ್‌ದೀನ್ ಖಾನನ ಉತ್ಕೃಷ್ಟ ಕೆಲಸಕ್ಕಾಗಿ ಅವನಿಗೆ ಒಂದು ಆನೆ ಮತ್ತು ಎರಡು ಕುದುರೆಗಳನ್ನು ನೀಡಿ ಸನ್ಮಾನಿಸಿದರು. ಉಳಿದ ಸರ್ದಾರರು ಖಡ್ಗ ಹಾಗೂ ಇತ್ಯಾದಿ ಕಾಣಿಕೆಗಳನ್ನು ಪಡೆದರು. ಸಾಮ್ರಾಟನೇ ಸ್ವತಃ ಸೈನ್ಯ ಕಾರ್ಯಾಚರಣೆ ಕೈಕೊಳ್ಳಲು ಸಾಧ್ಯವಾಗಲೆಂದು ಮುಂಚೂಣಿ ಶಿಬಿರದ ಮುಖ್ಯಸ್ಥ, ಮೀರ ಅಬ್ದುಲ್

ಹಾಯಿಗೆ ರಕ್ಷಣಾ ಕಂದಕಗಳ ಸನಿಹದಲ್ಲಿ ಹಗಲಲ್ಲಿಯೇ ತನ್ನ ಡೇರೆ ಹೊಡೆಯಲು ಆಜ್ಞಾಪಿಸಿದನು. ಆ ಪ್ರಕಾರ ದಿಲಿರಖಾನನ ತುಪಾಕಿಬಲ ಸ್ಥಾವರಕ್ಕೆ ಸನಿಹದಲ್ಲಿ ಕೇವಲ ಎರಡು ಕರೋಹ ಅಂತರದಲ್ಲಿ ಚಕ್ರವರ್ತಿಯ ಶಿಬಿರವನ್ನು ಸ್ಥಾಪಿಸಲಾಯಿತು. ಸಶಸ್ತ್ರ ಸಿದ್ಧನಾಗಿ ಸಾಮ್ರಾಟನು ಸುರಕ್ಷಿತ ಮಾರ್ಗದಿಂದ ರಾಜ ಶಿಬಿರ ಪ್ರವೇಶಿಸಿದನು. ಇನ್ನುಳಿದ ಮನಸಬದಾರರೊಡನೆ ಅಲ್ಲಿ ನಿಯಮಿಸಲ್ಪಟ್ಟಿದ್ದ ಘಾಜಿ ಉದ್‌ದಿನ್‌ಖಾನ ಬಹಾದ್ದೂರ ತನ್ನ ರಕ್ಷಣಾ ಕಂದಕಗಳಿಂದ ಹೊರಬಂದು ವಂದನೆಗಳನ್ನು ಸಲ್ಲಿಸಿ ನೂರು ಮೊಹರುಗಳನ್ನು ಕಾಣಿಕೆಯಾಗಿ ಸಾಮ್ರಾಟನಿಗೆ ನೀಡುತ್ತ ವಿಜಾಪುರದ ಕೋಟೆಯ ವಿಜಯಕ್ಕಾಗಿ ತನ್ನ ಶುಭ ಕಾಮನೆಗಳನ್ನು ಅರ್ಪಿಸಿದನು. ಸಾಮ್ರಾಟನು ಖಾನನ ಮುಂದಲೆಯ ಮೇಲೆ ಕೈಯಿಟ್ಟು ಗೌರವಿಸಿದನು. ಇದರಿಂದ ಖಾನನ ಖ್ಯಾತಿ ಆಗಸಕ್ಕೇರಿತು. ಖಾನನು 'ತಸ್ಲಿಮ' ಮತ್ತು 'ಕುರ್ನಿಸ' ನೆರವೇರಿಸಿದನು. ಇದೇ ರೀತಿಯಲ್ಲಿ ಇನ್ನುಳಿದ ಸಾಮ್ರಾಜ್ಯ ಸೈನಿಕರು ಮಂಗಲಕರವಾದ ಕಾಣಿಕೆಗಳನ್ನು ನೀಡುತ್ತ ಶುಭೇಚ್ಛೆಗಳನ್ನು ಹೇಳಿದರು ಮತ್ತು ಅವರವರ ಅಂತಸ್ತಿಗನುಗುಣವಾಗಿ ಸಾಮ್ರಾಟನಿಂದ ಮರ್ಯಾದೆ ಹೊಂದಿದರು.

ರಕ್ಷಣಾ ಕಂದಕದಲ್ಲಿ ಸಾಮ್ರಾಟನು ವಾಸ್ತವ್ಯ ಹೂಡಿದ್ದರಿಂದ ಮತ್ತು ಧನವಿನಿಯೋಗದ ತಗ್ಗುವಿಕೆಯಿಂದ ವಸ್ತುಪೂರೈಕೆ ಎಲ್ಲ ಕಡೆಯಿಂದಲೂ ಸ್ಥಗಿತಗೊಂಡಿದ್ದರಿಂದ ವಿಜಾಪುರ ಜನತೆಯು ಧೈರ್ಯಗುಂದಿತು. ಈ ದುಸ್ಥಿತಿಯಲ್ಲಿ ತಮ್ಮ ಧೈರ್ಯ, ಶೌರ್ಯಕ್ಕೆ ಹೆಸರಾಗಿದ್ದ ಮತ್ತು ಸಾಮ್ರಾಟ ಸೇನೆಯೊಂದಿಗೆ ಅನೇಕ ಬಾರಿ ಹೋರಾಡಿದ್ದ ಶಾರ್ಝಾ ಖಾನ, ಅಬ್ದುಲ್ ರೌತಖಾನ, ಅಬ್ದುಲ್ ನಬಿಖಾನ, ಮಿಯಾನಖಾನ ಮತ್ತು ಇನ್ನು ಅನೇಕ ಖ್ಯಾತ ನಾಮರಾದ ಸಿಕಂದರನ ಅಧಿಕಾರಿಗಳು ಘಾಜಿ ಉದ್ದದಿನ್‌ಖಾನನ ಮಾರ್ಗದರ್ಶನದಲ್ಲಿ ಸಾಮ್ರಾಟನಿಗೆ ಶರಣಾಗತಿ ಸಲ್ಲಿಸಲು ನಿರ್ಧರಿಸಿದರು[೨]. ಇದನ್ನು ಖಾನನು ತಿಳಿಸಲಾಗಿ ಪ್ರಭುತ್ವ ಧರ್ಮಕ್ಕನುಗುಣವಾಗಿ ಮಹಾಪ್ರಭು ಅವರನ್ನು ಕ್ಷಮಿಸಿ ವಂದನೆ ಸಲ್ಲಿಸಲು ಅನುಮತಿ ನೀಡಿದನು. ಘಾಜಿಉದ್‌ದಿನ್‌ಖಾನನ ಮುಖಾಂತರ ಅವರೆಲ್ಲ ಸಾಮ್ರಾಟನ ಸೇವೆಗೆ ಸೇರಿಕೊಂಡು ಎರಡೂ ಲೋಕಗಳ ಸುಖವನ್ನು ಗಳಿಸಿದರು. ಉನ್ನತ ಮನ್ಸಬಗಳನ್ನು, ಬಿರುದು, ಆನೆ ಕುದುರೆಗಳನ್ನು, ಖಡ್ಗ ಕಠಾರಿ, ವಿಶೇಷ ಬಗೆಯ ಪೋಷಾಕ ಮತ್ತು ಜಾಗೀರ-ಇ-ಟಂಖ್ವಾ ಪಡೆದರು. ಹೀಗೆ ಅವರ ಅಭೀಪ್ಸೆಗಳೆಲ್ಲ ಈಡೇರಿದವು.

ಈ ಅವಧಿಯಲ್ಲಿ ಅಬ್ದುಲ್ ರೌತನ ಸಹೋದರನ ಪುತ್ರ ಅಬ್ದುಲ್ ಖುದೂಸ್, ಅಬ್ದುಲ್ ಗಫೂರ ಮತ್ತು ಹುಸೇನ ಮಿಯಾನ ಇವರೆಲ್ಲರು ಸಾಮ್ರಾಜ್ಯಾಧಿಕಾರಿಗಳ ಮಧ್ಯಸ್ಥಿಕೆಯಿಂದ ಸಾಮ್ರಾಟನಿಗೆ ವಂದನೆ ಸಲ್ಲಿಸಿದರು. ಇವರಿಗೂ ಕೂಡ ಮಹಾಪ್ರಭು ಮನ್ಸಬಗಳನ್ನು ಮತ್ತು ಪೋಷಾಕುಗಳನ್ನು ಕೊಟ್ಟನು. ಕಾಲಕ್ರಮದಲ್ಲಿ ಶಾರ್ಝಾ ಖಾನನಿಗೆ ರುಸ್ತುಂಖಾನನೆಂದು ಬಿರುದು ಮತ್ತು ಏಳುಸಾವಿರ ಜಾಟ ಮತ್ತು ಆರು ಸಾವಿರ ಸವಾರರುಳ್ಳ ಮನ್ಸಬ ನೀಡಲಾಯಿತು. ಅಬ್ದುಲ್ ರಾಕಾನಿಗೆ ದಿಲೀರ್‌ಖಾನ ಎಂಬ

ಬಿರುದು ಮತ್ತು ಐದುಸಾವಿರ ಬಾಟ ಹಾಗೂ ಧ್ವಜದೊಂದಿಗೆ ಆರು ಸಾವಿರ ಸವಾರವುಳ್ಳ ಮನಸಬದಾರಿ ಲಭಿಸಿತು.

ಸಾಮ್ರಾಟನ ಡೇರೆ ಸ್ಥಾಪನೆಗೆ ಸರಿಯಾದ ಸ್ಥಳವನ್ನು ಗೊತ್ತುಪಡಿಸಲು ಆತನ ಬೀಡಾರ ಠಾಣ್ಯ ಮತ್ತು ಕೋಟೆಯ ಅಂತರವನ್ನು ಮುಖ್ತಾರಖಾನ ಅಳೆಯಬೇಕಾಯಿತು. ಯಾಕೆಂದರೆ, ತನ್ನ ಅಹಂಕಾರದ ಪಾತಾಳದಲ್ಲಿ ಬಿದ್ದಿದ್ದ ಸಿಕಂದರನನ್ನು ಆತನ ದುಷ್ಕೃತ್ಯಗಳ ಬಂದಿಯನ್ನಾಗಿಸಲು ನಡೆಸಿದ ಕೊನೆಯ ಹೋರಾಟದಲ್ಲಿ ಸಾಮ್ರಾಜ್ಯದ ವೀರಯೋಧರನ್ನು ಕೂಡಿಕೊಳ್ಳಲು ಸಾಮ್ರಾಟನು ಬಯಸಿದ್ದನು. ಆಗ ಮಹಾರಾಜನ ಡೇರೆಯನ್ನು ಮುಖ್ಯ ಠಾಣ್ಯದಿಂದ ಅರ್ಧ ಕರೋಹ ಎರಡೂ ಅರ್ಧ ಜರೀಬ ಅಂತರದಲ್ಲಿ ನೆಡಲು ಖಾನನು ಗೊತ್ತುಪಡಿಸಿದನು. 'ನಾಳೆ ಮೊದಲು ಘಳಿಗೆಯಾದ ಮೇಲೆ ಎಲ್ಲ ನಾಲ್ಕೂ ಚೌಕಿಗಳ ಸೈನಿಕರು ಸುಸಜ್ಜಿತರಾಗಿ ಕಾಳಗಕ್ಕೆ ತಯಾರಿರಬೇಕು' ಎಂದು ರಾಜಾಜ್ಞೆಯಾಯಿತು. ಅಷ್ಟರಲ್ಲಿ ಸಿಯಾದತ್ ಖಾನ ಬಂದು ಹೇಳಿದನು, 'ಮಹಾಪ್ರಭುವಿನ ಪುಣ್ಯದಿಂದ ಪೂರ್ಣ ಮುಚ್ಚದೇ ಉಳಿದಿದ್ದ ಜಲಕಂದಕವು ಪೂರ್ತಿ ಮುಚ್ಚಲ್ಪಟ್ಟಿದೆ' ಈ ಸುದ್ದಿಯಿಂದ ಮಹಾಪ್ರಭುವಿನ ಮನಸ್ಸಿಗೆ ಸಾಕಷ್ಟು ನಿರಾಳವೆನಿಸಿತು.

ಮರುದಿನ ಎಲ್ಲ ಸರದಾರರು ತಮ್ಮ ತಮ್ಮ ಅಂತಸ್ತಿಗನುಗುಣವಾಗಿ ಕಾಳಗಕ್ಕೆ ಜಮಾಯಿಸಿದರು. ಜಗತ್ತು ಬೆಳಗುವ ಸೂರ್ಯನಂತೆ ಅಶ್ವಾರೋಹಿಯಾಗಿ ಬಂದ ಸಾಮ್ರಾಟನು ಮುತ್ತಿಗೆ ಹಾಕಲು ಆಜ್ಞಾಪಿಸಿದನು. ಆ ಬಳಿಕ ಸರ್ದಾರರು ರಾಜಾಜ್ಞೆಯನ್ನು ಕಾರ್ಯಗತಗೊಳಿಸುತ್ತ ಕೋಟೆಗೋಡೆಯ ಕೆಳಭಾಗದವರೆಗೆ ತಲುಪಿದರು. ಕೋಟೆಯ ಮೇಲಿಂದ ರಕ್ಷಣಾ ಪಡೆಯವರು ಸಣ್ಣ ತೋಪುಗಳನ್ನು, ಸಿಡಿಮದ್ದು ಕೋವಿಗಳನ್ನು ಮತ್ತು ನಂತರ ಕೈಗುಂಡುಗಳನ್ನು ಕೋಟೆಯ ಅಡಿಗೆ ಮಳೆ ಸುರಿದಂತೆ ಹಾರಿಸತೊಡಗಿದರು. ಗುಂಡಿನ ಸುರಿಮಳೆಯ ತೀವ್ರತೆಯಿಂದಾಗಿ ಸಾಮ್ರಾಟ ಸೇನೆಗೆ ಕೋಟೆ ಕೈವಶವಾಗದೆ ಹಿಮ್ಮೆಟ್ಟಬೇಕಾಯಿತು. ತನ್ನ ಸೈನ್ಯದ ಪ್ರಯತ್ನವನ್ನು ಮೆಚ್ಚುತ್ತ ಸಾಮ್ರಾಟನು ತನ್ನ ಬೀಡಾರಕ್ಕೆ ತೆರಳಿದನು. ಹಾಗೆಯೇ ಸರದಾರರೆಲ್ಲ ತಮ್ಮ ತಮ್ಮ ರಕ್ಷಣಾ ಕಂದಕಗಳಿಗೆ ತೆರಳಿದರು. ಆದರೆ ಈ ದಾಳಿಯಲ್ಲಿ ಬಹುದೊಡ್ಡ ಸಂಖ್ಯೆಯಲ್ಲಿ ತರುಣ ಯೋಧರು ಮಡಿದರು.

ಇದೇ ಕಾಲಕ್ಕೆ ರುಸ್ತುಂಖಾನ, ದಿಲೇರ್‌ಖಾನ ಖಂಡೋಜಿ, ಖಂಡಿರಾವ ಭೋಸಲೆ ಮತ್ತು ಸಿಕಂದರನ ಇನ್ನುಳಿದ ಪ್ರಮುಖ ಸರ್ದಾರರು ಸಾಮ್ರಾಜ್ಯದ ವಿಶ್ವಾಸಿಕ ಅಧಿಕಾರಿಗಳ ಮುಖಾಂತರವಾಗಿ ಸಾಮ್ರಾಜ್ಯದ ಸೇವೆಯಲ್ಲಿ ಸೇರಿದರು. ಸಾಮ್ರಾಟನು ಅವರಿಗೆ ಜಾಗೀರಗಳನ್ನು ಮತ್ತು ಮನಸಬಗಳನ್ನು ನೀಡಿದನು. [೧೩] ಮತ್ತು ಸಾಮ್ರಾಟನ ಸೇನೆ ಕೋಟೆಗೋಡೆ ತಲುಪಲು ಯಶಸ್ವಿಯಾಯಿತು.

ಅತ್ಯಧಿಕ ಸಂಖ್ಯೆಯಲ್ಲಿ ತನ್ನ ಅಧಿಕಾರಿಗಳು ತನ್ನನ್ನು ತ್ಯಜಿಸಿ ಹೋಗಿ ಸಾಮ್ರಾಟನ ಸೇನೆಯನ್ನು ಸ್ವೀಕರಿಸಿದ್ದನ್ನು ನೋಡಿದ ಮೇಲೆ ಸಾಮ್ರಾಟನ ಕ್ಷಮೆಯೊಂದೇ ತನ್ನ ಸುರಕ್ಷಿತ ದಾರಿಯೆನಿಸಿ ಸಿಕಂದರನು ಸಾಮ್ರಾಟನಿಗೆ ಸಂದೇಶ ಕಳಿಸಿದನು: 'ಉನ್ನತ

ಪ್ರಭುವಿನ ಸೇವೆಗೆ ಸೇರಲು ಸಿದ್ಧನಿದ್ದೇನೆ’[೧೪] ಇದಾದ ಬಳಿಕ ಮಹಾ ಪ್ರಭು ಅವನೆಲ್ಲ ತಪ್ಪುಗಳನ್ನು ಕರುಣೆಯಿಂದ ಕ್ಷಮಿಸಿದನು. ಸಿಕಂದರನನ್ನು ಕೋಟೆಯೊಳಗಿಂದ ಕರೆತರಬೇಕು ಮತ್ತು ಆತನು ಸಾಮ್ರಾಟನ ಕೈಚುಂಬಿಸಿ ಅನುಗ್ರಹ ಪಡೆಯಬೇಕೆಂದು ಅಪ್ಪಣೆಯಾಯಿತು.

ಸಿಕಂದರನಿಗೆ ಬೇಕಾದ ಎಲ್ಲವನ್ನು ಪೂರೈಸಲು ವಜೀರ ಮುಹಮ್ಮದನಿಗೆ ಆಜ್ಞೆಯಾಯಿತು. ಆತನ ವಾಸ್ತವ್ಯಕ್ಕಾಗಿ ಶಿಬಿರ ಸ್ಥಾಪಿಸಲು ಜುಮದಲ್ ಉಲ್ ಮುಲ್ಕ್‌ನಿಗೆ ಹೇಳಲಾಯಿತು. ವಿಜಯ ನಗಾರಿಗಳನ್ನು ಬಾರಿಸಲು ಆಜ್ಞೆಯಾಯಿತು. ಸಿಕಂದರನ ನಿಷ್ಕ್ರಮಣವಾದ ಮೇಲೆ ಸೈಫ್ ಖಾನನಿಗೆ ಕೋಟೆಯ ರಕ್ಷಣೆ ನೋಡಿಕೊಳ್ಳಲು ಅಪ್ಪಣೆಯಾಯಿತು. ದಿನದ ಎರಡು ಘಳಿಗೆಗಳು ಕಳೆದ ಮೇಲೆ ‘ಸಿಕಂದರನು ಕೋಟೆಯ ಹೊರಗೆ ಬಂದಿದ್ದಾನೆ’ ಎಂದು ಸಿಯಾದತ್ ಖಾನ ವರದಿ ಸಲ್ಲಿಸಿದನು. ಎಲ್ಲ ಗಣ್ಯ ಸರದಾರರು ಮತ್ತು ಸಣ್ಣ ದೊಡ್ಡ ಮನಸಬದಾರರು ಸಭಾಗೃಹದಲ್ಲಿ ಹಾಜರಾಗಬೇಕು ಮತ್ತು ತಮ್ಮ ತಮ್ಮ ಸ್ಥಾನಗಳಲ್ಲಿ ನಿಲ್ಲಬೇಕೆಂದು ತಿಳಿಸಲಾಯಿತು. ದರ್ಬಾರವನ್ನು ಒಪ್ಪು ಓರಣದಿಂದ ಸಿಂಗರಿಸುವುದು ಬಹ್ರಾಮಂದ ಖಾನನ ಕೆಲಸವಾಗಿತ್ತು. ಆ ಬಳಿಕ ಫಾಜಿಲುದದಿನ್‌ಖಾನ್, ಮಹಬತ್ ಖಾನ, ಇಕ್ರಾಮ ಖಾನ, ಫಾಥಜಂಗ್ ಖಾನ ಮತ್ತು ಇನ್ನುಳಿದ ಪ್ರಮುಖ ಸರದಾರರನ್ನು ಸಿಕಂದರನಿಗೆ ಸ್ವಾಗತ ಕೋರಿ ಸಾಮ್ರಾಟನ ಶಿಬಿರಕ್ಕೆ ಕರೆದುಕೊಂಡು ಬರಲು ಕಳಿಸಲಾಯಿತು. ಸಿಕಂದರನು ಸಭಾಗೃಹದ ಪ್ರವೇಶದ್ವಾರಕ್ಕೆ ಬರಲು ಬಕ್ಷಿ ಉಲ್ ಮುಲ್ಕ್ ರುಹುಲ್ಲಾಹ ಖಾನ, ಬಹ್ರಾಮಂದ ಖಾನ, ಲುತ್ಫುಲ್ಲಾಹ ಖಾನ ಮತ್ತು ಮಖ್ಲೀಸ ಖಾನ ಆತನನ್ನು ಸ್ವಾಗತಿಸಿ ಸಾಮ್ರಾಟನ ಸನ್ನಿಧಿಗೆ ಕರೆದೊಯ್ದರು. ಎಳೆ ತರುಣನಾಗಿದ್ದ ಸಿಕಂದರನು ಸೌಂದರ್ಯದಲ್ಲಿ ಎರಡನೆಯ ಯೂಸುಫನಾಗಿದ್ದನು. ತನ್ನೆದುರು ನಿಲ್ಲಲು ಹೇಳುತ್ತ ಸಾಮ್ರಾಟನು ಅನ್ನುತ್ತಾನೆ. ‘ದೇವರ ದಯೆ ನಿನ್ನ ಮೇಲಿರಲಿ ನೀನು ಸರಿಯಾಗಿ ನಿರ್ಣಯಿಸಿರುವಿ ಮತ್ತು ನಿನ್ನ ಕಲ್ಯಾಣವನ್ನು ತಿಳಿದುಕೊಂಡಿರುವಿ ದೇವರು ಇಚ್ಛಿಸಿದರೆ ಎಲ್ಲ ಬಗೆಯ ಸೌಕರ್ಯ ಸವಲತ್ತುಗಳನ್ನು ಮತ್ತು ಪ್ರಶಸ್ತಿಗಳನ್ನಿತ್ತು ನಿನ್ನನ್ನು ಉನ್ನತ ಸ್ಥಾನದಲ್ಲಿಡುವೆ. ಅಚ್ಚುಕಟ್ಟಾಗಿರು, ಎಲ್ಲ ರೀತಿಯಲ್ಲಿಯೂ ನಿಶ್ಚಿಂತೆಯಾಗಿರು’ ಆ ಬಳಿಕ ಮಹಾ ಪ್ರಭುವಿನ ಆದೇಶದ ಮೇರೆಗೆ ಬಲ ಬದಿಯಲ್ಲಿ ರಾಜಕುಮಾರ ಸುಲ್ತಾನ ಮುಯಿಝುಉದ್‌ದಿನ್‌ನ ಪಕ್ಕದಲ್ಲಿ ಸಿಕಂದರನು ಆಸೀನನಾದನು. ವಿಶೇಷ ಪ್ರಕಾರದ ಪೋಷಾಕು, ಆಭರಣ ಖಚಿತ ಕಠಾರಿ, ಮುತ್ತಿನ ಹಾರ, ರತ್ನಖಚಿತ ಹಿಡಿಕೆಯ ಕಠಾರಿ, ರೂ. ೨೦,೦೦೦ ಬೆಲೆಯ ವಿಶೇಷ ಬಗೆಯ ಆನೆ, ಅದರ ಜೊತೆಯಲ್ಲಿ ಒಂದು ಹೆಣ್ಣಾನೆ, ಬಂಗಾರ ಮತ್ತು ಅಮೂಲ್ಯ ಲೋಹಗಳುಳ್ಳ ಶೃಂಗಾರ ಹೊದಿಕೆಯ ಐದು ಕುದುರೆಗಳನ್ನು ಸಾಮ್ರಾಟನು ಸಿಕಂದರನಿಗೆ ಕಾಣಿಕೆಯಾಗಿ ಕೊಟ್ಟನು. ಆ ಬಳಿಕ ಸಿಕಂದರನು ತಸ್ಲೀಮ ಕುರ್ನಿಸಗಳನ್ನು ಪೂರೈಸಿದನು.

ಸಾಮ್ರಾಟನ ಪುತ್ರರಾದ ರಾಜಕುಮಾರ ಶಾಹ ಆಲಂ ಬಹಾದೂರ, ರಾಜಕುಮಾರ ಮುಹಮ್ಮದ ಆಝಂ ಶಾಹ, ರಾಜಕುಮಾರ ಕಾಮ ಬಕ್ಷ, ಸುಲ್ತಾನ ಉದ್‌ದಿನ್,

ಅಖಿಮ್ ಉದ್‌ದಿನ್ ಮತ್ತು ಬಳಿಕ ಸರದಾರರು ವಿಜೇತ ಸಾಮ್ರಾಟನನ್ನು ಅಭಿನಂದಿಸಿದರು. ಅವರಲ್ಲಿ ಪ್ರತಿಯೊಬ್ಬರು ತಮ್ಮ ಅಂತಸ್ತಿಗನುಗುಣವಾಗಿ ಕಾಣಿಕೆಗಳನ್ನು ಅರ್ಪಿಸಿದರು. ಆದರೆ ಮಹಾರಾಜನು ಅವುಗಳನ್ನು ಸ್ವೀಕರಿಸಲಿಲ್ಲ. ನಂತರ ಆತನು ತನ್ನ 'ಮಘರಿಬ್' (ಸಂಜೆಯ ನಮಾಜ) ಪ್ರಾರ್ಥನೆಗಳನ್ನು ಸಲ್ಲಿಸಿದನು. ಆ ಬಳಿಕ ಸಿಕಂದರನಿಗೆ ತನ್ನ ಡೇರೆಗೆ ಹೋಗಲು ಅನುಮತಿಸಲಾಯಿತು. ಅವನನ್ನು ಬೆಂಗಾವಲಾಗಿ ಕರೆದುಕೊಂಡು ಹೋಗಲು ಮನಸಬದಾರರಿಗೆ ಆಜ್ಞೆ ನೀಡಲಾಯಿತು.

ಹಿಂದಿನ ಯಾವ ರಾಜ ಮಹಾರಾಜರಿಗೂ ಸಾಧ್ಯವಾಗಿರದ ಈ ಬಹುದೊಡ್ಡ ದಿಗ್ವಿಜಯವನ್ನು ಭಗವಂತನ ಅನುಗ್ರಹದಿಂದ ಸಾಧಿಸಲಾಯಿತು. ಸಾಮ್ರಾಟನು ರಕತ್ ಸಲ್ಲಿಸುತ್ತ ಸರ್ವಶಕ್ತ ಪರಮಾತ್ಮನಿಗೆ ತಲೆಬಾಗಿದನು. ಆ ಬಳಿಕ ಸಾಮ್ರಾಟನು ಮಹಮ್ಮದ ಅಲಿ ಖಾನನಿಗೆ ಆಜ್ಞಾಪಿಸುತ್ತ ಹೇಳಿದನು. 'ನಾಳೆ ಕೋಟೆಯೊಳಗೆ ಹೋಗಿ ಸಿಕಂದರನ ಎಲ್ಲ ಸರಕು ಸಾಮಗ್ರಿಗಳನ್ನು ಕೈವಶಮಾಡಿಕೊಂಡು ಅವುಗಳನ್ನೆಲ್ಲ ಮಾನ್ಯ ಸರ್ಕಾರಕ್ಕೆ ಸೇರಿಸಿಬಿಡು'[೧೬].

ಜಿಲ್ಹಾಜ್ ಎ.ಎಚ್.೧೦೯೭ ರಂದು ಮಹಾ ಪ್ರಭು ಚಲಿಸುವ ಸಿಂಹಾಸನವನ್ನೇರಿ ಸಾಫ್ ಶಿಕಾರ ಖಾನರ ರಕ್ಷಣಾ ಕಂದಕದಲ್ಲಿ ಹಾಯ್ದು ಪ್ರವೇಶ ದ್ವಾರಕ್ಕೆ ಬರಲು ಅಲ್ಲಿ ಹಣವನ್ನು ಬಡವರಿಗೆ ದಾನವಾಗಿ ಹಂಚಿದನು. ಬಡಬಗ್ಗರಿಗೆ ಕೈತುಂಬ ಹಣ ಕೊಟ್ಟು, ಕೋಟೆಯನ್ನು ಪ್ರವೇಶಿಸಿದನು. ವೈಭವ ಮತ್ತು ಸೌಂದರ್ಯದಲ್ಲಿ 'ಚೀನ'ದ ಚಿತ್ರ ಶಾಲೆಯೊಡನೆ ಸ್ಪರ್ಧಿಸುತ್ತಿರುವ ಮನೆಗಳನ್ನು ಅರಮನೆಗಳನ್ನು ಅವಲೋಕಿಸಿದನು. ಆ ಬಳಿಕ ಮಸಜಿದ್ ಇ ಜಾಮಾ ದ ಒಳಗೆ ಪ್ರವೇಶಿಸಿ ಪ್ರಾರ್ಥನೆ ಸಲ್ಲಿಸಿ ಕೃಪಾದಾತನಾದ ಭಗವಂತನೆದುರು ತಲೆ ಬಾಗಿದನು.[೧೭]

ಚಕ್ರವರ್ತಿಯು ಸಿಕಂದರನ ಅರಮನೆಗಳಿಗೆ ಭೇಟಿಯಿತ್ತನು. ಆ ಅರಮನೆಗಳ ಸೌಂದರ್ಯವನ್ನು ನಾಲಗೆ, ಹೇಗೆ ವರ್ಣಿಸಬಲ್ಲದು ಪ್ರತಿಯೊಂದು ಅರಮನೆ, ಕಟ್ಟಡ ಬಂಗಾರ ಮತ್ತು ಬೆಳ್ಳಿಯಿಂದ ಖಚಿತವಾಗಿತ್ತು. ಅಲ್ಲಿ ಕೆಲವು ವಿಚಿತ್ರ ಬಗೆಯ ವಿರಳ ವರ್ಣಚಿತ್ರಗಳಿದ್ದವು. ಶರಿಯತ್ ಪ್ರಕಾರ ಅವು ನಿಷಿದ್ಧವಾಗಿದ್ದವು. ಆದ್ದರಿಂದ ಅವುಗಳನ್ನು ನಾಶಪಡಿಸಲು ಪ್ರಭುವಿನ ಅಪ್ಪಣೆಯಾಯಿತು. ಅಲ್ಲಿ ಕೆಲ ಹೊತ್ತು ಕಳೆದು ನಂತರ ನಿರ್ಗಮಿಸಿದನು.

ಘಾಜಿ ಉದ್‌ದಿನ್ ಖಾನನು ಚಕ್ರವರ್ತಿಗೆ ಐದುನೂರು ಬಂಗಾರ ನಾಣ್ಯಗಳನ್ನು ಕಾಣಿಕೆಯಾಗಿ ಮತ್ತು ರೂ. ೧೦೦೦/–ನ್ನು ನಿಸಾರ ಆಗಿ ಸಲ್ಲಿಸಿದನು. ಬಕ್ಷಿ ಉಲ್ ಮುಲ್ಕ ರುಹುಲ್ಲಾಹ ಖಾನ, ಸಾಫ್ ಶಿಕಾನ ಖಾನ ಮತ್ತು ಉಳಿದ ದೊಡ್ಡ ಸರದಾರರು ಕೂಡ ತಮ್ಮ ಸ್ಥಾನಕ್ಕನುಗುಣವಾಗಿ ನಾಣ್ಯಗಳನ್ನು ಹರಹಿದರು. ಆ ನಂತರ ಚಕ್ರವರ್ತಿಯು ಘಾಜಿ ಉದ್‌ದಿನ್ ಖಾನನನ್ನು ಸಿಕಂದರನನ್ನು ನೋಡಿಕೊಳ್ಳಲು ರಕ್ಷಣೆಗಾಗಿ ನಿಯಮಿಸಿ ತನ್ನ ಡೇರೆಗೆ ತೆರಳಿದನು. ಜುಮಾತ್ ಉಲ್ ಮುಲ್ಕ ಮದಾರುಲ ಮಹಮುದ್‌ನ ಠಾಣೆ

ಎದುರಿಗೆ ಹಾಯ್ದು ಹೋಗುವಾಗ ಅವನಿಗೆ ಮಹಾಪ್ರಭು ರತ್ನಖಚಿತ ಹಿಡಿಕೆಯುಳ್ಳ ಎರಡು ಖಡ್ಗಗಳನ್ನು ಮತ್ತು ಒಂದಷ್ಟು ಮುತ್ತುಗಳನ್ನು ಕೊಟ್ಟನು. ಸಂಜೆಯ ವೇಳೆಗೆ ಸಾಮ್ರಾಟನು ತನ್ನ ಶಿಬಿರ ಸೇರಿದನು.

ರಾಜಾಜ್ಞೆಯ ಮೇರೆಗೆ ಶಮ್ಸಉದ್‌ದಿನ್ ಖಾನನು ಫಿರಂಗಿಗಳನ್ನು ಹಾರಿಸಿದನು. ಯಾವ ರಕ್ಷಣಾ ಕಂದಕದಿಂದ ಕೋಟೆಯ ರಕ್ಷಣಾ ಗೋಡೆಯ ಮೇಲೆ ಬಾಂಬು ಎಸೆದಿತ್ತೋ ಅದರ ಎದುರುಗಡೆಗೆ 'ಫತೇಹ ಮುಬಾರಕ'[೧೮] ಹೆಸರಾಂಕಿತ ಘನಗಾತ್ರದ ದ್ವಾರ ಸ್ಥಾಪಿಸಲು ಆಜ್ಞೆಯಾಯಿತು. ಸರದಾರರನ್ನು ಮರ್ಯಾದಿಸಲಾಯಿತು ಮತ್ತು ಅವರ ಮನಸಬಗಳನ್ನು ಹೆಚ್ಚಿಸಲಾಯಿತು. ಮನಸಬಗಳನ್ನು ಏಳು ಸಾವಿರಕ್ಕೆ ಒಂದು ಸಾವಿರ ಒಂದು ಸಾವಿರಕ್ಕೆ ಐದುನೂರು, ಐದುನೂರಕ್ಕೆ ಒಂದು ನೂರು ಮತ್ತು ಒಂದು ನೂರಕ್ಕೆ ಇಪ್ಪತ್ತು ರಂತೆ ಹೆಚ್ಚಿಸಲಾಯಿತು.

ವಿಜಾಪುರದ ಕೋಟೆ ಎರಡು ಅರ್ಧ ಕರೋಹ ಜರಿಬ ಉದ್ದ 'ಮುಲ್ಕ ಇ ಮೈದಾನ' ಬಹುದೊಡ್ಡ ಭಾರವಾದ ತೋಪು ಇತ್ತು. ಅದು ಐದು ಅರ್ಧ ಮೊಳ (೫.೫) ಉದ್ದ ಇದ್ದು ನಾಲ್ಕು ಕಾಲು (೪.೨೫) ಮಣ ಭಾರವಿತ್ತು. ಎರಡೂ ಅರ್ಧ ಮಣ ಭಾರದ ಗುಂಡನ್ನು ಹಾರಿಸುವ ಶಕ್ತಿ ಅದಕ್ಕಿತ್ತು. 'ರಣಮಹಲ' ಮತ್ತು ಹಜಾರ ಬಾಂಗಡಿ ಎಂಬ ಅದೇ ತರದ ತೋಪುಗಳೆರಡನ್ನೂ ಸ್ವಲ್ಪೇ ದೂರದಲ್ಲಿ ಭದ್ರ ಗೋಪುರಗಳ ಮೇಲೆ ಇಡಲಾಗಿತ್ತು. ಸಿಕಂದರನು ಎರಡು ಬಾರಿ ಮುಲ್ಕ ಇ ಮೈದಾನವನ್ನು ಮದ್ದು ತುಂಬಿ ಹಾರಿಸಿದನು. ಅದು ಕೆಲಸ ಮಾಡಲಿಲ್ಲ. ಸರ್ವಶಕ್ತ ಭಗವಂತನ ಇಚ್ಛೆಯ ಎಚ್ಚರಿಕೆಯೆಂದರಿತು 'ಕೋಟೆ ತನ್ನ ಕೈಬಿಟ್ಟು ಹೋಯಿತು' ಎಂದು ತಿಳಿದನು.[೧೯]

ವಿಜಾಪುರ ರಾಜ್ಯದ ಆದಾಯ ಒಂದು ಕೋಟಿ ಮುವತ್ತೆರಡು ಲಕ್ಷ ಅದಿಲ್‌ಖಾನಿ ಹಣ ಆಗಿತ್ತು ಮತ್ತು ಸಿಕಂದರನ ವಶದಲ್ಲಿದ್ದು ಅವನ ನಿಯಂತ್ರಣದಲ್ಲಿತ್ತು. 'ಪೇನ್ ಘಾಟ' ಎಂದು ಹೆಸರಾಗಿದ್ದ ತಾಲಕೋಕಣದಲ್ಲಿ ಹಲವಾರು ಭದ್ರಕೋಟೆಗಳಿದ್ದು ಅದು ವಿಜಾಪುರ ರಾಜ್ಯದ ಅಧೀನ ಪ್ರದೇಶವಾಗಿತ್ತು. ಆದರೆ ಅದು ದುಷ್ಟ ಸಾಂಭಾನ ಕೈಯ್ಯಲ್ಲಿತ್ತು. ನದಿಯ ಆಚೆಯ ಬದಿಯಲ್ಲಿದ್ದ ಪ್ರದೇಶವು ವಿಜಾಪುರ ರಾಜ್ಯಕ್ಕೆ ಒಳಪಟ್ಟಿತ್ತು. ಆದರೆ ವಿಜಾಪುರದ ದಂಡನಾಯಕ ಸಿದ್ದಿ ಮಸೂದ ಮತ್ತು ಬಂಜರುಭೂಮಿ ಗುಡ್ಡಗಳ ಜಮೀನುದಾರರು ಅದನ್ನು ತಮ್ಮ ಕೈವಶ ಮಾಡಿದ್ದರು. ಆದರೀಗ ವಿಜಾಪುರ ರಾಜ್ಯವು ಸಾಮ್ರಾಟಾಧಿಕಾರಿಗಳ ಆಧೀನಕ್ಕೆ ಬಂದಿತ್ತು. ಆದ್ದರಿಂದ ಈ ಎಲ್ಲ ಕೋಟೆಗಳ ದಂಡನಾಯಕರು ಸಂಬಂಧಪಟ್ಟ ಸಾಮ್ರಾಜ್ಯಾಧಿಕಾರಿಗಳಿಗೆ ತಮ್ಮ ಕೋಟೆಗಳನ್ನು ಒಪ್ಪಿಸಿಕೊಡಬೇಕು ಮತ್ತು ಸಾಮ್ರಾಟನಿಗೆ ಭೇಟಿಯಾಗಿ ವಂದನೆ ಸಲ್ಲಿಸಬೇಕೆಂದು ರಾಜಾಜ್ಞೆಯನ್ನು ಹೊರಡಿಸಲಾಯಿತು. ಅವರಿಗೆಲ್ಲ ಇನಾಮುಗಳನ್ನು ಮತ್ತು ಉನ್ನತ ದರ್ಜೆಯ ಮನಸುಬ್‌ಗಳನ್ನು ಕೊಡಲಾಗುವುದೆಂದು ಭರವಸೆ ನೀಡಲಾಯಿತು. ಈ ಎಲ್ಲ ಕೋಟೆಗಳನ್ನು ಗೆಲ್ಲುವುದಕ್ಕಾಗಿ ಆರಿಸಲ್ಪಟ್ಟಿದ್ದ ನಾಯಕ ಘಾಜಿ ಉದ್ ದಿನ್ ಖಾನ್ ಬಹಾದ್ದೂರನ ಮನಸಬನ್ನು

ಇನ್ನೊಂದು ೧೦೦೦೦ದಿಂದ ಹೆಚ್ಚಿಸಲಾಯಿತಲ್ಲದೆ (ರೂ. ೫೦,೦೦೦,೦೦) ರೂ. ಐವತ್ತು ಲಕ್ಷ ಇನಾಮನ್ನು ಕೊಡಲಾಯಿತು. ಬಹುದೊಡ್ಡ ಸೈನ್ಯವನ್ನು ನೀಡಿ ಈ ಎಲ್ಲ ಕೋಟೆಗಳನ್ನು ಕೈವಶಮಾಡಿಕೊಳ್ಳಲು ಕಳಿಸಲಾಯಿತು[೨೧]. ವಿಜಾಪುರದ ಹವಾಮಾನ ಅನುಕೂಲ ಇಲ್ಲದ್ದರಿಂದ ಸೋಲಾಪುರವು ಸಾಮ್ರಾಟನ ಬೀಡಾರ ಸ್ಥಳವಾಗಬೇಕು ಎಂಬ ಆಜ್ಞೆ ಹೊರಟಿತು.

ಈ ವೇಳೆಯಲ್ಲಿ ಸಿಕಂದರನು (ವಿಜಾಪುರದ ಹಿಂದಿನ ಸುಲ್ತಾನ) ಸಾಮ್ರಾಟನಿಗೆ ಹೀಗೆ ನಿವೇದಿಸಿದನು: "ಹಿಂದೆ ವಿಜಾಪುರದ ಪ್ರಾಂತದಲ್ಲಿಯೇ ಇದ್ದ ಕೃಷ್ಣಾ ನದಿಯ ಆಚೆಗಿರುವ ಜಮೀನದಾರಿಯನ್ನು ನನ್ನ ಕುಟುಂಬ ಮತ್ತು ಮಕ್ಕಳನ್ನಿರಿಸಲು ಸಾಧ್ಯವಾಗುವಂತೆ ನನಗೆ ಬಿಟ್ಟುಕೊಟ್ಟರೆ ಮಹಾಪ್ರಭುವಿನ ಸೇವೆಯಲ್ಲಿರುವೆ". ಆತನ ವಿನಂತಿಯನ್ನು ಮನ್ನಿಸದೆ ಸಾಮ್ರಾಟನು ಹೇಳಿದನು: "ದೈವೀ ನವೀನ ಕಲ್ಪನೆಯ ಅಪರಿಮಿತ ವೈಭವದ ಅದ್ಭುತ ಪ್ರಾಕಟ್ಯದ ಚಿತ್ರಶಾಲೆಯಾಗಿರುವ ಹಿಂದುಸ್ಥಾನದ ಸೌಂದರ್ಯವನ್ನು ನೀನು ನೋಡಿಲ್ಲ. ಸ್ವರ್ಗದೋಪಾದಿಯ ಹಿಂದುಸ್ಥಾನವನ್ನು ನಿನಗೆ ತೋರಿಸಲು ಕರೆದುಕೊಂಡು ಹೋಗುವೆ, ಪ್ರೇಕ್ಷಣೀಯ ಸ್ಥಳಗಳನ್ನು ನೋಡುವ, ಮನರಂಜಿಸುವ ಅನಂದ ತೃಪ್ತಿ ನಿನಗೆ ಲಭಿಸಲಿ, ಆ ಬಳಿಕ ನಿನಗೆ ಲವಲವಿಕೆಯಿಂದ, ಸುಖದಿಂದ ಮತ್ತು ಆನಂದದಿಂದ ಇರಲು ಸುಂದರವಾದ ಮುದ ನೀಡುವ ಸ್ಥಳವನ್ನು ಮಂಜೂರು ಮಾಡುವೆ"[೨೨].

ರುಹಲ್ಲಾಹ ಖಾನನನ್ನು ವಿಜಾಪುರದ ಸುಬೇದಾರನನ್ನಾಗಿ ಹಾಗೂ ಮುಹಮ್ಮದ್ ರಫಿಯನ್ನು ದಿವಾನನ್ನಾಗಿ ನಿಯಮಿಸಲಾಯಿತು. ಕೆಲ ಕಾಲದ ನಂತರ ಸಾಮ್ರಾಟನು ವಿಜಾಪುರಕ್ಕೆ ಹೊರಟನು ಮತ್ತು ಸಿಕಂದರನ ಡೇರೆಯನ್ನು ಸಲಬತ್ ಬಾರಿಯ ಸನಿಹದಲ್ಲಿ ಹಾಕಬೇಕು. ಅಲ್ಲದೆ ವಿಶೇಷ ಸ್ಥಾನದ ಬನಸಬದಾರರು ಆತನ ವಾಸ್ತವ್ಯ ಕಾಯಲು ನಿಯಮಿಸಬೇಕೆಂದು ಅಪ್ಪಣೆ ಮಾಡಿದನು.

ಶಾಹ ಅಲಂನ ಮನಸಬದ (ಸಂಖ್ಯೆಯ) ಇಳಿಕೆ

೧೭ ಜಿಲ್ಹಾಜ್ ೩೦ ಆರ್ ವಾಯ್ ರಂದು ಸಾಮ್ರಾಟನು ಸೋಲಾಪುರಕ್ಕೆ ಬಂದನು.[೨೩] 'ರಾಜಕುಮಾರ ಶಾಹ ಅಲಂ ಆಡಳಿತವನ್ನು ತನ್ನ ಕೆಳಗಿನ ಅಧಿಕಾರಿಗಳಿಗೊಪ್ಪಿಸಿ ಐಹಿಕ ಭೋಗಗಳಲ್ಲಿ ಮುಳುಗಿದ್ದರಿಂದ ಆಡಳಿತ ಹಾಳಾಗಿ ಹೋಗಿದೆ' ಎಂದು ಸಾಮ್ರಾಟನಿಗೆ ಅರುಹಲಾಯಿತು. ಆದ್ದರಿಂದ ರಾಜಕುಮಾರನು ಸಾಮ್ರಾಟನ ಅನುಗ್ರಹಕ್ಕೆ ಎರವಾದನು. ಅಲಂ ಮತ್ತು ಆತನ ಮಗನ ಮನಸಬವನ್ನು ತಗ್ಗಿಸಿದ್ದಲ್ಲದೆ ಅವರು ಚಕ್ರವರ್ತಿಯ ಅವಕೃಪೆಗೀಡಾದರು[೨೪].

ಸಾಹಿಯಾಳೊಡನೆ ರಾಜಕುಮಾರ ಬೀದರ ಬಖ್ತನ ವಿವಾಹ

ರಾಜಕುಮಾರ ಮಹಮ್ಮದ್ ಅಝಂ ಶಾಹನ ಮಗ ರಾಜಕುಮಾರ ಸುಲ್ತಾನ ಬಖ್ತನ ಮದುವೆಯನ್ನು ಮುಖ್ತಾರಖಾನನ ಮಗಳೊಡನೆ ಏರ್ಪಡಿಸಲಾಯಿತು. ಖಾನನು

ಸಮಾರಂಭಗಳನ್ನೇರ್ಪಡಿಸಿದನು. ರಾಜಾಜ್ಞೆಯ ಮೇರೆಗೆ ಜಮ್ಮತ್ ಉಲ್ ಮುಲ್ಕ ಖಾನ ಮತ್ತು ಉಳಿದ ಉನ್ನತ ಸರದಾರರು ವೈಭವಪೂರ್ಣ ಪೋಷಾಕದಲ್ಲಿ ಸಮಾರಂಭಗಳಿಗೆ ಉಪಸ್ಥಿತರಾದರು. ಸಾಯಂಕಾಲ ರಾಜಕುಮಾರ ಆಝುಮ ಶಾಹ ದೀಪಾಲಂಕಾರಕ್ಕೆ ಆಜ್ಞಾಪಿಸಿದನು. ರಾಜಕುಮಾರ ಆಝುಂನ ಅರಮನೆಯಿಂದ ಸಾಮ್ರಾಟನ ಅರಮನೆಯವರೆಗೆ ಮತ್ತು ಸಾಮ್ರಾಟನ ರಾಜಾಲಯದಿಂದ ಮುಖ್ತಾರ ಖಾನನ ಡೇರೆವರೆಗೆ ಮಾರ್ಗದೆರಡೂ ಬದಿಯನ್ನು ಒಂದರಮೇಲೊಂದರಂತೆ ಮೂರು ಸಾಲುಗಳಲ್ಲಿ ಕೈದೀವಿಗೆಗಳಿಂದ ಅಲಂಕರಿಸಲಾಯಿತು.

ರಾಜಕುಮಾರ ಸುಲ್ತಾನ ಬೀದರ ಬಖ್ತ ರಾತ್ರಿ ಎರಡು ಘಳಿಗೆ ಆದ ಮೇಲೆ ರಾಜಕುಟುಂಬದ ಸಂಪ್ರದಾಯದಂತೆ ಭರ್ಜಿ ಪೋಷಾಕ ಧರಿಸಿ ಸಕಲ ಪರಿಕರಗಳೊಂದಿಗೆ, ಮೃದಂಗವಾದ ನುಡಿಸುತ್ತಿರಲು ಸಾಮ್ರಾಟನೆಡೆಗೆ ಬಂದು ವಂದನೆಗಳನ್ನು ಸಲ್ಲಿಸಿದನು. ಮತ್ತು 'ಕುರ್ನೀಶ್' ಕೈಕೊಂಡನು (ನೆರವೇರಿಸಿದನು). ಸಾಮ್ರಾಟನು ಅವನನ್ನು ಅಭಿನಂದಿಸುತ್ತ ಹೊಳೆಯುವ ತೇಜಸ್ಸಿನ ಮಣಿಮಾಣಿಕ್ಯ ವಜ್ರ ಖಚಿತ ಕಿರೀಟವನ್ನು ಅವನ ತಲೆಮೇಲಿರಿಸಿದನು ಮತ್ತು ಮುತ್ತಿನ ಬಾಸಿಂಗವನ್ನು ತನ್ನ ಕೈಯಿಂದಲೇ ಅವನ ಹಣೆಗೆ ಕಟ್ಟಿದನು. ರಾತ್ರಿ ೭ರ ಘಳಿಯಲ್ಲಿ ಮದು ಮಗನು ಮದುವೆಗೆ ಸಾಗಲು ಅನುಮತಿ ಪಡೆದನು.

ಸಾಮ್ರಾಟನ ಅಪ್ಪಣೆಯ ಪ್ರಕಾರ ಮುಖ್ತಾರ ಖಾನ, ಘಝುನಫರ ಖಾನ ಮತ್ತು ಉಳಿದ ಬನಸಬದಾರರು, ಬಂಗಾರ ಮತ್ತು ಬೆಳ್ಳಿಯ ರಾಜದಂಡಗಳನ್ನು ಹಿಡಿದಿರುವ ರಾಜದಂಡಧಾರಿಗಳಿರಲು, ಬಹ್ರಾಮುಂದ ಖಾನ, ಲುತಫುಲ್ಲಾಹ ಖಾನ, ಮುಖಲಿಸ ಖಾನರು ಜೊತೆಯಲ್ಲಿರಲು ರಾಜಕುಮಾರನನ್ನು ಹಿಂಬಾಲಿಸಿದನು.

ಅವರೆಲ್ಲರೂ ಮುಖ್ತರ ಖಾನನ ಡೇರೆ ಹತ್ತಿರ ಬಂದರು. ಜಮ್ಮತ್ ಖಾನ, ಮದುರುಲ್ ಮಹುಮ್ ಅಸಾದ ಖಾನ ಮತ್ತು ಉಳಿದ ಶ್ರೇಷ್ಠ ಸರದಾರರೊಡಗೂಡಿ ಮದುಮಗ ರಾಜಕುಮಾರನನ್ನು ಬರಮಾಡಿಕೊಂಡ 'ಕುರ್ನಿಸ' ದ ವಿಧಿಗಳನ್ನು ಪೂರೈಸಿದರು. ಹದಿನೆಂಟು ಥಾಗೆಗಳನ್ನು (ಸುತ್ತಿಟ್ಟ ಬಟ್ಟೆಯನ್ನು)ವರ ಪಕ್ಷದವರು ಹೆಜ್ಜೆ ಇಡುವುದಕ್ಕೆ ಕಾಣಿಕೆಯಾಗಿ ನೀಡಲಾಯಿತು. ವರನಿಗೆ ಅರವತ್ತು ಮೂರು ಥಾಗೆ ಬಟ್ಟೆಗಳನ್ನು, ಏಳು ಅರಬಸ್ತಾನದ, ಇರಾಕದ ಕುದುರೆಗಳನ್ನು ಮತ್ತು ಸುವರ್ಣಆಲಂಕಾರದ ಹೊದಿಕೆಯುಳ್ಳ ಒಂದು ಆನೆಯನ್ನು ವರನಿಗೆ ಕೊಡಲಾಯಿತು. ಆ ಮೇಲೆ ಎಲ್ಲರೂ ಶಿಬಿರದೊಳಗೆ ಪ್ರವೇಶಿಸಿದರು. ಮದುವೆ ನೆರವೇರಿತು. ಎರಡು ಲಕ್ಷ ರೂ. ಗಳನ್ನು 'ಮಹರ್' ಎಂದು ಗೊತ್ತುಪಡಿಸಲಾಯಿತು. ತದನಂತರ ಎಲ್ಲ ಸರದಾರರು ರಾಜಕುಮಾರನನ್ನು ಅಭಿನಂದಿಸಿದರು.

ಮಧ್ಯರಾತ್ರಿಯ ನಂತರ ರಾಜಕುಮಾರ ಅಝುಮ ಶಾಹ ಮತ್ತು ರಾಜಕುಮಾರ ಸುಲ್ತಾನ ಬೀದರ ಬಖ್ತ ಇವರು ಸರದಾರರೊಡಗೂಡಿ ಮುಖ್ತಾರ ಖಾನನ ಶಿಬಿರದಿಂದ ನಿರ್ಗಮಿಸಿದರು ಮತ್ತು ಸಾಮ್ರಾಟನೆದುರು ಹಾಜರಾಗಿ ತಸ್ಲೀಮ ನೆರವೇರಿಸಿದರು. ಸಾಮ್ರಾಟನು ರಾಜಕುಮಾರನನ್ನು ಅಭಿನಂದಿಸುತ್ತ (ರೂ. ೨,೦೦,೦೦೦) ರೂ. ಎರಡು

ಲಕ್ಷ ಬೆಲೆಯ ರತ್ನಾದಿಗಳನ್ನು ಮತ್ತು ಮುಖ್ತಾರ ಖಾನನ ಮಗಳಾದ ಸಬಿಯಾಗೆ ರತ್ನಖಚಿತ ಆಭರಣಗಳನ್ನು ಕೊಟ್ಟು ಅವರಿಗೆ ಅಲ್ಲಿಂದ ತೆರಳಲು ಅನುಮತಿ ಕೊಟ್ಟನು. ರಾತ್ರಿ ಮುಗಿದಾಗ ಅವರು ತಮ್ಮ ಅರಮನೆಗೆ ತಲುಪಿದರು. ಪರಿಶುದ್ಧ ರಾಶಿಚಕ್ರದಲ್ಲಿಯ ಶಶಿಯಂತಿರುವ ತನ್ನ ಮಡದಿಯೊಡಗೂಡಿ ಅಂತಃಪುರವನ್ನು ರಾಜಕುಮಾರ ಪ್ರವೇಶಿಸಿದನು ಮತ್ತು ಅವರು ಅಲ್ಲಿ ಮನಸಾರೆ ಮನದಣಿ ಆನಂದಿಸಿದರು.

ಮುಂಜಾನೆ ಸರದಾರರು ರಾಜಕುಮಾರನನ್ನು (ಅಝುಂ ಶಾಹ) ಅಭಿನಂದಿಸಿ ತಮ್ಮ ಸ್ಥಾನಕ್ಕನುಗುಣವಾಗಿ 'ನಝರ್' ಮತ್ತು 'ನಿಸಾರ್' ಸಲ್ಲಿಸಿದರು. ಅವರ ಗೌರವಾರ್ಥವಾಗಿ ಮುಖ್ತಾರ ಖಾನನು ಔತಣಕೂಟವನ್ನು, ಸಮಾರಂಭಗಳನ್ನು ಏರ್ಪಡಿಸಿದನು[೨೫].

'ತುರ್ಕೆಲ' ಮತ್ತು ಇಬ್ರಾಹಿಮ್‌ಗಡ ಈ ಕೋಟೆಗಳನ್ನು ಶೌರ್ಯ ಸಾಹಸದಿಂದ ಅನುಕ್ರಮವಾಗಿ ಖಾಸಿಮಖಾನ ಮತ್ತು ಘಾಜಿ ಉದ್‌ದಿನ್ ಖಾನ ಗೆದ್ದಿರುವ ಸುವಾರ್ತೆ ದರ್ಬಾರಕ್ಕೆ ತಲುಪಿತು. ಆ ಕೈವಶಗೊಂಡ ಕೋಟೆಗಳ ಬಂಗಾರ ಕೀಲಿಕೈಗಳನ್ನು ಸಾಮ್ರಾಟನಿಗೆ ಅರ್ಪಿಸಲಾಗಿ ಆತನು ಬಹಳ ಸಂತುಷ್ಟನಾದನು[೨೬]. ಕರ್ಟಲಾಟ ಖಾನನ ಪರಿಶ್ರಮವನ್ನು ಕುರಿತು ಮೇಲಿಂದ ಮೇಲೆ ಬರುತ್ತಿದ್ದ ವರದಿಗಳನ್ನನುಲಕ್ಷಿಸಿ ಸಾಮ್ರಾಟನು ಅವನಿಗೆ ನಗಾರಿಯೊಂದನ್ನಿತ್ತು ಮೇಲಿನ ಸ್ಥಾನವನ್ನು ನೀಡಿದನು.

ಉಝುಬೆಕ್ ಖಾನ್‌ನ ಮಗ ಅಬ್ದುಲ್ ಶಕೂರ, ಅವನ ಮನಸಬದಿಂದ ತೆಗೆದು ಹಾಕಿದ ಬಳಿಕ ಶೋಲಾಪುರದಲ್ಲಿ ಇರುತ್ತಿದ್ದಾನೆಂದು ಗುಪ್ತಚಾರರು ತಿಳಿಸಿದರು. ಸಾಮ್ರಾಟ ಸೇನೆ ಸಾಗಿಬರುವ ಸುದ್ದಿಯಿಂದ ಅವನ ದುಷ್ಟ ಹೃದಯದಲ್ಲಿ ಬಂಡಾಯ ಭಾವನೆ ಹುಟ್ಟಿತು. ಒಂದು ನೂರದಾ ಎಂಟು ಮುಘಲ ಮತ್ತು ಉಝುಕ್ ಸೈನಿಕರೊಂದಿಗೆ ಬಂಡುಕೋರ ಅಕ್ಬರನನ್ನು ಸೇರಿಕೊಂಡನು.

ಅಷ್ಟರಲ್ಲಿ ಶಿರ ವಾಗುಂದೇಹದ ಠಾಣಾದಾರ ಬಹಾದೂರ ಖಾನನ ವರದಿ ರಾಜ ಸಭೆಗೆ ತಿಳಿಸಿತು: "ದುರ್ದೈವಿ ಸಾಂಬಾ ಅಶ್ವಗಳ ಮತ್ತು ಕಾಲ್ದಳದ ದೊಡ್ಡ ಸೈನ್ಯದೊಂದಿಗೆ ಹಿಂದುಸ್ತಾನದ ಕಡೆಗೆ ಬಂಡುಕೋರ ಅಕ್ಬರನನ್ನು ಕಳಿಸಲು ಬಯಸಿದ್ದಾನೆ" (ರೂ. ೨೦,೦೦೦) ರೂ. ಇಪ್ಪತ್ತು ಸಾವಿರ ಬೆಲೆಯ ರತ್ನಖಚಿತ ಕಿರೀಟವನ್ನು ಸುವರ್ಣಾಲಂಕೃತ ಹೊದಿಕೆಯುಳ್ಳ ಒಂದು ಕುದುರೆ ಮತ್ತು ಒಂದು ಆನೆಯನ್ನು ಕಾಣಿಕೆಯಾಗಿ ಸಾಮ್ರಾಟನು ರಾಜಕುಮಾರ ಮುಹಮ್ಮದ್ ಅಝುಮಶಾಹನಿಗೆ ಕೊಟ್ಟು ಮೂವತ್ತು ಸಾವಿರ ಸವಾರರೊಂದಿಗೆ ಬಂಡುಕೋರ ಅಕ್ಬರನು ಹೊರಟ ಮಾರ್ಗದಲ್ಲಿರುವ ಅಹಮ್ಮದನಗರ ಕಡೆಗೆ ಸಾಗಲು ಆಜ್ಞಾಪಿಸಿದನು. ವೇಗವಾಗಿ ಹೋಗಿ ಅಕ್ಬರನ ದಾರಿಯನ್ನು ಅಡ್ಡಗಟ್ಟಿ, ಬಹು ಹುಷಾರಿಯಾಗಿದ್ದು ಅವನು ಎಲ್ಲಿಯೇ ಹೋಗಿರಲಿ ಹಿಡಿಯಬೇಕೆಂದು ಆಜ್ಞಾಪಿಸಲಾಯಿತು.

ರಾಜಕುಮಾರ ಶಾಹ ಅಲಂ ಬಹಾದ್ದೂರನ ಸೇವಕ ದಿ.ಬಹಾದೂರ ಖಾನನ ಮಗ ಆಝುಂ ಖಾನನು ಸಾಮ್ರಾಟನ ಸೇನೆಗೆ ಸೇರಿಕೊಳ್ಳಬೇಕೆಂದು ಆಜ್ಞೆಯಾಯಿತು.

ಸಾಮ್ರಾಟನು ಗುಲ್ಬರ್ಗಾದ ಕಡೆಗೆ ಹೊರಟನು. ಫರ್ ತಿಂಗಳಿನ ೩ ರಂದು ಗುಲ್ಬರ್ಗಾದ ಆನಂದಭರಿತ ಪ್ರದೇಶದಲ್ಲಿ ಸಾಮ್ರಾಟನ ಶಿಬಿರ ಸ್ಥಾಪಿಸಲಾಯಿತು. ಬಾವುಟ ಮತ್ತು ನಗಾರಿಗಳನ್ನಿತ್ತು ಸಿದಿ ಶಾಮುಲ್ ಖಾನ್‌ನ ದರ್ಜೆಯನ್ನು ಹೆಚ್ಚಿಸಲಾಯಿತು. ಮುಂಜಾನೆ ಸೈಯದ್ ಮುಹಮ್ಮದ್ ಗೇಸುದ್‌ರಾಜನ ಸಮಾಧಿ ಭವನಕ್ಕೆ ಸಾಮ್ರಾಟನು ಸಾಗಿದನು. ಸಮಾಧಿಗೆ ಪ್ರದಕ್ಷಿಣೆಗೈದು ರೂ. ೨೦೦೦/– ಗಳನ್ನು ಕಾಣಿಕೆಯನ್ನಾಗಿ ಸಲ್ಲಿಸಿದನು. ಅಲ್ಲಿಂದ ತೆರಳಿದ ಮೇಲೆ, ಏಕಾಕಿಯಾಗಿ ಕಾಲಕಳೆಯುತ್ತಿದ್ದ ಸನ್ಯಾಸಿಗೆ ಭೇಟಿಯಾಗಿ ಅಲ್ಲಿ ಒಂದು ಗಂಟೆ ಚರ್ಚಿಸಿ ನಂತರ ಶಿಬಿರಕ್ಕೆ ತೆರಳಿದನು[೨೭].

ಅದಾದ ಬಳಿಕ, ಸಾಮ್ರಾಟನು ಅನೇಕ ಹಂತಗಳನ್ನು ದಾಟಿ ಬಂದು ಬಹು ವಿಸ್ತಾರ ಮತ್ತು ಆಳವಾಗಿದ್ದ ಮುಖ್ತಾನಾ ಎಂಬ ಪುಷ್ಕರಿಣಿಯ ತಟಾಕದ ಮೇಲೆ ಶಿಬಿರ ಹೂಡಿದನು[೨೮]. ತನ್ಮಧ್ಯ ರುಹುಲ್ಲಾಹ ಖಾನನಿಂದ ಸಾಮ್ರಾಟನಿಗೆ ಬಂದ ಓಲೆಯ ಒಕ್ಕಣಿಕೆ ಇಂತಿತ್ತು: 'ಖಾನನು ಕೃಷ್ಣಾ ನದಿಯ ಆ ಬದಿಯಲ್ಲಿರುವ ಪ್ರದೇಶದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವುದರಲ್ಲಿ ತೊಡಗಿದ್ದಾನೆ. ದುರ್ದೈವಿಯಾದ ಸಾಂಬಾನ ಸುಪ್ರಸಿದ್ಧ ಗೌರವಾನ್ವಿತ ಅಧಿಕಾರಿ ಆನಂದರಾವ ದೊಡ್ಡ ಸೈನ್ಯದೊಡನೆ 'ಚೌಥ' 'ವಸೂಲು' ಮಾಡಲು ಸಾಮ್ರಾಜ್ಯದ ಸೀಮೆಯಲ್ಲಿ ನುಗ್ಗಿದನು. ಖಾನನು ಖಾನಾಹಜದ ಖಾನನ್ನು ಆನಂದರಾವನನ್ನು ಮರ್ದನ ಮಾಡಲು ಕಳಿಸಲಾಗಿ ಅವನನ್ನು ಸೋಲಿಸಿ ವೈರಿ ಸೈನ್ಯವನ್ನು ಓಡಿಸಿದನು. ದುಷ್ಟ ಶಕ್ತಿಗಳನ್ನು ಸದೆಬಡೆಯಲು ಖಾನನು ತೊಡಗಬೇಕೆಂದು (ಹಜ್ಬಲ್ ಹುಕುಂ) ರಾಜಾಜ್ಞೆ ರವಾನಿಸಲ್ಪಟ್ಟಿತು.

೨೫ ಸಫಾರದಂದು ಸಾಮ್ರಾಟನು ತನ್ನ ಸೈನ್ಯದೊಡಗೂಡಿ ಝುಫರಾಬಾದ ಪಟ್ಟಣಕ್ಕೆ (ಬೀದರ) ಬಂದನು[೨೯]. ರಾಜಕುಮಾರ ಶಾಹ ಅಲಂ ಬಹಾದೂರನ ಸೇವಕನಾಗಿದ್ದ, ಆದರೆ ಈಗ ವಜಾಗೊಳಿಸಲ್ಪಟ್ಟ ನಂತರ ಅಲ್ಲಿಯೇ ಉಳಿದುಕೊಂಡಿದ್ದ, ಬಿಂದ್ರಬನ್ನನನ್ನು ಮತ್ತೆ ಪಾರಾಗದಂತೆ ಹಿಡಿಯಬೇಕೆಂದು ಔರಂಗಾಬಾದ ಕೋಟೆಯ ಸೇನಾಧಿಪತಿ ಹಾಜಿ ಶಫಿಖಾನನಿಗೆ ಆಜ್ಞೆ ನೀಡಲಾಯಿತು.

ಅಕ್ಬರನನ್ನು ಶಿಕ್ಷಿಸಿ ಅವನ ಬಂಡಾಯ ಯೋಜನೆಗಳನ್ನು ಮಟ್ಟ ಹಾಕಲು ಕಳಿಸಿದ್ದ ರಾಜಕುಮಾರ ಮುಹಮ್ಮದ್ ಶಾಹ ಕಂದಾಪುರಕ್ಕೆ ತಲುಪಿದ್ದಾಗಿ ಹಾಗೂ ಅನಿರೀಕ್ಷಿತ ಘಟನೆಗಳ ಬಲಿಪಶುವಾದ ಅಕ್ಬರನು ಸಂಕಟ, ತಳಮಳದಲ್ಲಿ ಸಾಲ್ಹೀರ ಕೋಟೆಯ ಸಮೀಪ ಬಂದಿದ್ದಾನೆಂದು ಸಾಮ್ರಾಟನಿಗೆ ವರದಿ ಬಂದಿತು. ಅಕ್ಬರನ ಜಾಡ ಹಿಡಿದು ಮುಹಮ್ಮದ ಆಝುಂ ಶಾಹ ಹಿಂಬಾಲಿಸುತ್ತ ಹನುಮಂತಗಡ ಕೋಟೆಯ ಸಾಮೀಪ್ಯದಲ್ಲಿ ಸೈನ್ಯ ನಿಲ್ಲಿಸಿ ಆತನ ದಾರಿಗೆ ತಡೆಯೊಡ್ಡಿದನು. ಅಲ್ಲಿ ನಿಲ್ಲಲು ಅಸಮರ್ಥನಾಗಿ ಅಕಬರನು ತಾಲಕೋಕನ ಪ್ರದೇಶದಲ್ಲಿ ಮಹಾವಲಿ ಕೋಟೆಗೆ ಹೋಗಿ ಅಲ್ಲಿ ಅವಿತು ಕುಳಿತನು. ಗುಡ್ಡಗಳಲ್ಲಿ ಅಡವಿಗಳಲ್ಲಿ ಅಲೆದಲೆದು ಸಾಕಾಗಿ ಹೋಗಿದ್ದ, ತನ್ನ ಆಯೋಗ್ಯ ಕೃತ್ಯಗಳಿಂದಾಗಿ ಪಶ್ಚಾತ್ತಾಪ ಪಡುತ್ತ ನಾಚಿಕೆಗೊಂಡಿದ್ದ ಅಕ್ಬರನು ಸಾಮ್ರಾಟನಿಗೆ ಭೇಟಿಯಾಗಿ, ಆತನ

ಔದಾರ್ಯವನ್ನು, ಕರುಣೆಯನ್ನು ಬೇಡಿಕೊಳ್ಳುತ್ತ ಕ್ಷಮೆಗಾಗಿ ತಲೆಬಾಗಿ ಪ್ರಾರ್ಥಿಸುತ್ತ ರಾಜ ಹೊಸ್ತಿಲಲ್ಲಿ ತನ್ನ ನೊಸಲನ್ನಿಡಲು ಆಪೇಕ್ಷಿಸಿದನು. ಸತತ ಸಂಗಾತಿಯಾದ ದುರ್ಗಾದಾಸ ರಾಠೋಡನ ದುಷ್ಟ ಪ್ರೇರಣೆಯಿಂದಾಗಿ ತನ್ನ ಹೃದಯಸ್ಥ ಬಯಕೆಯನ್ನು ಅವನಿಗೆ ಸಾಕಾರಗೊಳಿಸಲಾಗಲಿಲ್ಲ. ತದನಂತರ, ಸಿರೋಳದಿಂದ ಸಾಮ್ರಾಟನಿಗೆ ಬಂದ ವರದಿಯ ಪ್ರಕಾರ 'ಅವನು ಎರಡು ಮೂರು ದಿನಗಳನ್ನು ಮಹಾವಲಿ ಕೋಟೆಯಲ್ಲಿ ಕಳೆದು 'ಕಾಲಿಯಾನಿ ಭಿಮರಿ'ಗೆ ಹೋಗಿ ನಂತರ ಗುಡ್ಡುಗಳಲ್ಲಿ ಮರೆಯಾಗಿ ಹೋಗಿದ್ದನು'. ಕೆಲ ಕಾಲದ ನಂತರ ಅವನು ಪನಾಲಾ ಕೋಟೆಗೆ ಹೋಗಿ ಅಲ್ಲಿ ಸಾಮ್ರಾಟ ಸೈನ್ಯದೊಡನೆ ಭೀಕರವಾಗಿ ಹೋರಾಡಿದನು. ಮುಂದೆ ಸಾಗುವ ಶಕ್ತಿಯಿಲ್ಲದೇ ಹಿಮ್ಮೆಟ್ಟಿದನು. ಸಾಮ್ರಾಟ ಸೈನ್ಯವನ್ನು ಬಲಪಡಿಸಲು ಹೋಗಿದ್ದ ಕಾಕರ ಖಾನ ಮತ್ತು ಮರಹಮತ ಖಾನ್ ಇಬ್ಬರೂ ತಮ್ಮ ದಂಡದೊಡನೆ ಸಾಧ್ಯವಿದ್ದಷ್ಟು ಬೇಗನೇ ಮರಳಿ ಬಂದನು.

೧೫ ರಬಿವುಲ್ ಅವಲ್‌ದಂದು ಸಾಮ್ರಾಟನು ಜಫರಾಬಾದ ಸಮೀಪದಿಂದ ಸಾಗಿ ಹೋಗಿ ಮುಖ್ತರ ಖಾನ ಉದ್ಯಾನ ಮತ್ತು ಫರ್ಮನ್ ಬಾರಿ ಸಮೀಪ ಬೀಡಾರ ಹೂಡಿದನು. ಆತನ ಆಗಮನದಿಂದ ಅಲ್ಲಿ ಸ್ಥಳಗಳೆಲ್ಲ ಸ್ವರ್ಗದಂತಾದವು. ಅಲ್ಲಿ ಒಂದು ರಾತ್ರಿ ತಂಗಿ ಮರುದಿನ ಬೆಳಗಿನಲ್ಲಿ 'ಅರಕ' ಕೋಟೆಯ ಕಡೆಗೆ ಸಾಗಿದನು. ದಿನದ ಅರ್ಧಭಾಗ ಕಳೆದ ಮೇಲೆ (ಮಧ್ಯಾಹ್ನದ ನಂತರ) ತನ್ನ ಶಿಬಿರ ಪ್ರವೇಶಿಸಿದನು.

ಸಾಮ್ರಾಟನ ದಯೆಯಿಂದ ಸಾಂಗೋಲಾದ ಕೋಟೆ ಕೈವಶವಾಗಿದೆಯೆಂದು ಹೇಳುವ ಓಲೆಯೊಂದಿಗೆ ಬಂಗಾರದ ಕೀಲಿ ಕೈಯನ್ನು ಸಾಮ್ರಾಟ ಸನ್ನಿಧಿಗೆ ಅಬುಲ್ ಖೈರ ಖಾನನು (ಖೈಬರದ ದಳವಾಯಿ) ಕಳಿಸಿದನು. ರಾಜ್ಯದ ಕ್ರಿಯಾಶೀಲ ಮತ್ತು ಶೂರ ಸೇವಕರ ಸಹಕಾರದಿಂದ ಹೋರಾಟಕ್ಕಿಳಿಯಲೇಬೇಕೆಂದಿದ್ದ ಕೋಟೆಯ ದಳವಾಯಿಯನ್ನು ಬಂಧಿಸಲಾಯಿತು. ಸ್ವತಃ ಸಾಮ್ರಾಟನೇ ಕೋಟೆಯ ಕೀಲಿ ಕೈಯನ್ನು ನೋಡಿದನು. ಮತ್ತು ನಂತರ ಸೆರೆಯಾಳುಗಳನ್ನು ರಾಜಸಭೆಯೆದುರು ತರಬೇಕೆಂದು ಆಜ್ಞಾಪಿಸಿದನು. ಖಾನನ ಒಳ್ಳೆಯ ಸೇವೆಗಾಗಿ ಸಾಮ್ರಾಟನು ಅವನಿಗೆ ಮರ್ಯಾದೆ ಮಾಡಿದನು[೨೦].

ಬಂಡುಕೋರ ಅಕ್ಬರನಿಗೆ ಉಪದೇಶವನ್ನು ಮತ್ತು ಮಾರ್ಗದರ್ಶನವನ್ನು ನೀಡುತ್ತ ಝ್ಯೇಬುನ್ನಿಸಾ ಬರೆದ ಪತ್ರವನ್ನು ರಾಜಾಜ್ಞೆಯ ಮೇರೆಗೆ ಮಾರಿಯಾಮ ಮುಘಲಾನಿಯ ಮಗ ಶೇರ ಮುಹಮ್ಮದ ಅವನಿಗೆ ತಲುಪಿಸಿ ಅವನಿಂದ ಪ್ರತ್ಯುತ್ತರವಾಗಿ ವಿನಂತಿ ಪತ್ರವನ್ನು ತಂದನು. ಆ ಪತ್ರದ ಭಾವವನ್ನು ಸಾಮ್ರಾಟನಿಗೆ ಅರುಹಲಾಯ್ತು. ಅದು ಹೀಗಿತ್ತು: "ಮಹಾಪ್ರಭು ದಯಾಂತಃಕರಣದಿಂದ ನನ್ನನ್ನು ಕ್ಷಮಿಸುವರು ಎಂದು ಆಸೆ ಹೊಂದಿದ್ದೇನೆ. ಮಹಾರಾಜರ ಸಂಶಯ ಅನುಮಾನಗಳಿಂದ ಮುಕ್ತನಾಗಿ ಕ್ಷಮಿಸಲ್ಪಟ್ಟು ಅವರ ದಯೆಗೆ ಪಾತ್ರನಾದರೆ ಬರುವ ದಿನಗಳಲ್ಲಿ ನಾನೆಂದೂ ಔಚಿತ್ಯದ ರೇಖೆಯನ್ನು ದಾಟುವುದಿಲ್ಲ. ವಿಧೇಯತೆಯ ಮತ್ತು ಸ್ವಾಮಿನಿಷ್ಠೆಯ ಮಾರ್ಗವನ್ನು ಅತಿಕ್ರಮಿಸುವುದಿಲ್ಲ". ಭಗವಂತನ ಪ್ರತಿರೂಪನಾದ ಸಾಮ್ರಾಟನು ಕೆಳಗಿನಂತೆ ಆಜ್ಞೆ ಹೊರಡಿಸಿದನು: "ಆ ನನ್ನ

ಪ್ರೀತಿಯ ಮಗನಿಗೆ ಎಂದಿನಂತೆ ನನ್ನ ದಯೆ ಮತ್ತು ನೆರವು ಇದ್ದೇ ಇದೆ ಬಯಲಿನಲ್ಲಿ, ನಿರ್ಜನ ಪ್ರದೇಶದಲ್ಲಿ, ನೀನು ದಿಕ್ಕಿಲ್ಲದೆ ಅಲೆದಾಡಿದ್ದರಿಂದ ನಿನಗಾಗಿರುವ ತೊಂದರೆ ಮತ್ತು ಘಾಸಿಯಿಂದ ನನ್ನ ಮೃದು ಸ್ವಭಾವ ಕ್ಷೋಭೆಗೊಂಡಿದೆ. ಮನಸ್ಸಿನಿಂದ ನಿನ್ನೆಲ್ಲ ಭೀತಿಯನ್ನು ಕಿತ್ತೆಸೆದು ನನ್ನ ದಯೆ ನಿನ್ನ ಶುಭಸಂಕೇತವೆಂದು ತಿಳಿದು ಬಹುಬೇಗನೇ ಬಂದು ಬಿಡು, ನನ್ನ ಕೈಂಕರ್ಯದ ಅನುಗ್ರಹದಿಂದ ಪುನೀತನಾಗು". ಈ ಎರಡು ಪತ್ರಗಳ ಪ್ರತಿಗಳನ್ನು ರಾಜಕುಮಾರ ಮುಹಮ್ಮದ ಅಝಂ ಶಾಹನಿಗೆ ಕಳಿಸಲಾಯಿತು.

ಒಂದು ತಿಂಗಳ ನಂತರ ಸುದ್ದಿ ಸಂದೇಶಕರು ಸಾಮ್ರಾಟನಿಗೆ ತಿಳಿಸಿದರು: "ಬಂಡುಕೋರ ಅಕ್ಬರ ಅಲ್ಲಿಂದ ಇಲ್ಲಿಗೆ ಇಲ್ಲಿಂದ ಅಲ್ಲಿಗೆ ಅಲೆದಾಡಿದನು. ಈಗ ನಿರಾಶವುಳ್ಳವನಾಗಿ ಬೇರೊಂದು ದಾರಿ ಕಾಣದೇ ಶಾಪಗ್ರಸ್ತ ಸಾಂಭಾನ ಹತ್ತಿರ ಹೋದನು. ತನ್ನ ಸೈನ್ಯವನ್ನು ಬಲಪಡಿಸಲು ಯತ್ನಿಸಿದ ಬಳಿಕ ಮಾಹುಲಿ ಕೋಟೆಗೆ ಹೋದನು. ಅವಶ್ಯಕ ಸಾಮಗ್ರಿಗಳಿಂದ ಸುಸಜ್ಜಿತನಾಗಿ ಆ ಬಳಿಕ ಸಮುದ್ರದಿಂದ ಇಪ್ಪತ್ತು ಕರೋಹ ಅಂತರದಲ್ಲಿರುವ ಶಾಹಪುರಕ್ಕೆ ಹೋಗಲು ಬಯಸಿದನು. ಬಲಬದಿಯಲ್ಲಿ ದಾವುವನ್ನು ಬಿಟ್ಟು ಸಾಮ್ರಾಜ್ಯದ ಗಡಿಯಿಂದ ಐದು ಕರೋಹ ಅಂತರದಲ್ಲಿರುವ ದಮನಕ್ಕೆ ಜವಾರದ ದಾರಿಯಿಂದ ಹೋಗಿ ಸಮುದ್ರ ದಾಟಬೇಕೆಂದು ಅವನು ಬಯಸಿದ್ದನು". (ಈ ಸುದ್ದಿಯನ್ನು ಕೇಳಿದ) ಸಾಮ್ರಾಟನು ಅನ್ನುತ್ತಾರೆ: "ಬೆಂಬಿಡದ ದುರ್ದೈವ ಅವನನ್ನು ಕುತ್ತಿಗೆ ಕೈಯಿಕ್ಕಿ ಹಿಡಿದಿದೆ. ಗುಡ್ಡಗಳಲ್ಲಿ, ಅಡವಿಗಳಲ್ಲಿ ಅಲೆಯುತ್ತ ಹೋಗುವನು"[೩೧].

ಸಾಮ್ರಾಟನ ಆಜ್ಞೆಯ ಮೇರೆಗೆ ಸಿಕಂದರ ಬಿಜಾಪುರಿಯ ಕುಟುಂಬವನ್ನು ಔರಂಗಾಬಾದಕ್ಕೆ ಕಳಿಸಲಾಯಿತು. ಖಾಸಿಮ ಖಾನನ ವರದಿಯು ತಿಳಿಸಿದಂತೆ ವಿಜಾಪುರಕ್ಕೆ ಸಂಬಂಧಿಸಿದ ಇಪ್ಪತ್ತು ಕೋಟೆಗಳನ್ನು ಕೈವಶಪಡಿಸಲಾಗಿತ್ತು. ಅವುಗಳಿಗೆ ದಳವಾಯಿಗಳನ್ನು ನೇಮಿಸಲು ಕೇಳಿಕೊಂಡಿದ್ದನು. ಖಾನನ ಸಾಹಸವನ್ನು ಹೊಗಳುವ ಫರ್ಮಾನ್ ಹೊರಡಿಸಲಾಯಿತು. ಹಾಗೆಯೇ ಬಹರಾನ ಖಾನನು ದಂಡನಾಯಕರ ಹೆಸರುಗಳನ್ನು ಸೂಚಿಸಬೇಕು ಮತ್ತು ಅವರನ್ನು ಕಳಿಸಿಕೊಡಬೇಕೆಂದು ತಿಳಿಸಲಾಯಿತು. ಮೆಕ್ಕಾ ಮೌಜಮಾದ ಶರೀಫನ ದೂತನು (ಸಾಮ್ರಾಟನನ್ನು) ಸಂದರ್ಶಿಸಿ ಕುರಾನದ ಒಂದು ಪ್ರತಿಯನ್ನು, ನಿಸ್ವತ್–ಇ–ಇಬ್ರಾಹಿಮ್‌ನನ್ನು ಮತ್ತು ರೌರೂ–ಇ–ಮುನಾವರಾದ ಹೊದಿಕೆಯೊಂದನ್ನು ಹಾಗೆಯೆ ಒಂದು ಕುದುರೆ ಮತ್ತು ಶೇಖ ಉಲ್ ಇಸ್ಲಾಮನಿತ್ತ ವಿನಂತಿಪತ್ರ ಹಾಗೂ ಉಳಿದ ಕಾಣಿಕೆಗಳನ್ನು ಅರ್ಪಿಸಿದನು.

ಹೈದರಾಬಾದ ರಾಜ್ಯದಲ್ಲಿ ಆ ವರ್ಷ ಜಝಿಯಾ ನಿಲ್ಲಿಸಿದ್ದು

ಹೈದರಾಬಾದದ ಪ್ರಜೆಗಳು ಬಡತನದಿಂದಾಗಿ ಜಝಿಯಾ ಕೊಡಲು ಅಸಮರ್ಥರಾಗಿದ್ದಾರೆಂದು ಹೈದರಾಬಾದದ ನಝಿಮ್ ಸಾಮ್ರಾಟನಿಗೆ ತಿಳಿಸಿದನು. ಈ ವಿಷಯದಲ್ಲಿ ತನಗೆ ನೀಡುವ ಆದೇಶದಂತೆ ನಡೆದುಕೊಳ್ಳುವೆನೆಂದು ಹೇಳಿದನು. ಅದರನ್ವಯ ಒಂದು ವರ್ಷದ ಜಝಿಯಾ ಮತ್ತು ಇನ್ನುಳಿದ ನಿಷಿದ್ಧ ಕರಗಳನ್ನು ಜನರಿಂದ ವಸೂಲು

ಮಾಡಬಾರದು, ಅವರೆಲ್ಲರಿಗೆ ತಮ್ಮ ಹಳ್ಳಿಗಳಲ್ಲಿ ಮತ್ತು ಮಹಲುಗಳಲ್ಲಿದ್ದು ವ್ಯವಸಾಯ ಉದ್ಯೋಗಗಳಲ್ಲಿ ತೊಡಗಬೇಕೆಂದು ತಿಳಿಸಲು ಆಜ್ಞೆ ಹೊರಟಿತು. ಆಧೀನ ರಾಜ್ಯಗಳಲ್ಲಿ (ಪರಗಣೆಗಳು) ರೈತರ ಕ್ಷೇಮಾಭಿವೃದ್ಧಿಗೆ ಸಮಂಜಸವಾಗುವಷ್ಟು ಮಾತ್ರ ಕಾಯ್ದಿಟ್ಟ ಸಂಗ್ರಹದ ಮೇಲೆ ಕರ ಹೇರಬೇಕು ಮತ್ತು ನಿಗದಿಪಡಿಸಿದ ನಿಯಮಾನುಸಾರ ವ್ಯಾಪಾರಸ್ಥರಿಂದ ಆಮದು ಸುಂಕ ವಸೂಲು ಮಾಡಬೇಕು ಎಂದು ತಿಳಿಸಲಾಯಿತು.

ಸಾಮ್ರಾಟನು ಖಿಲಿಜಖಾನನಿಗೆ ಹೇಳಿದನು: "ಘಾಜಿ ಉದ್‌ದಿನ್ ಖಾನನಿಗೆ ತನ್ನ ಸೈನ್ಯದೊಂದಿಗೆ ಹೋಗಿ ಮಾಹುಲಿ ಕೋಟೆಯಲ್ಲಿ ಭದ್ರವಾಗಿ ಅಡಗಿ ಕುಳಿತಿರುವ ದುಷ್ಟ ವೈರಿಯ ಪಡೆಯನ್ನು ಕ್ರೂರವಾಗಿ ದಂಡಿಸಬೇಕು ಮತ್ತು ವಿಜಾಪುರದ ಅಧೀನ ರಾಜ್ಯಗಳನ್ನು ಕೈವಶಮಾಡಿಕೊಳ್ಳಬೇಕೆಂದು ನಾನೇ ಸ್ವತಃ ಆಜ್ಞೆ ಇತ್ತಿದ್ದೆ. ಆದರೆ ಆ ಖಾನನು ನಮ್ಮ ಇಚ್ಛೆಗನುಸಾರವಾಗಿ ಮನಸ್ಸುಗೊಟ್ಟು ಕಾರ್ಯದಲ್ಲಿ ತೊಡಗಲಿಲ್ಲ. ಆದ್ದರಿಂದ ನಾನೇ ಸ್ವತಃ ಹೋಗಿ ಆ ನೀಚ ಶತ್ರುವನ್ನು ಸಂಹರಿಸಲು ಹೋಗಲೇಬೇಕಾಗಿದೆ". ಸಮರ್ಪಣಭಾವದ ಸ್ವಾಮಿನಿಷ್ಠ ಖಿಲಿಜಖಾನನು ಆಗ ಹೀಗೆ ನಿವೇದಿಸಿದನು: "ಈ ಕಾರ್ಯವನ್ನು ಪೂರೈಸಲು ಎಷ್ಟೋ ಸ್ವಾಮಿನಿಷ್ಠ ಸೇವಕರು ತಮ್ಮ ಪ್ರಾಣವನ್ನರ್ಪಿಸಲು ಸಿದ್ಧರಿರುವಾಗ ಮಹಾಪ್ರಭು, ನೀವು ಚಿಂತಿಸಬೇಕಿಲ್ಲ. ಒಬ್ಬನೇ ಒಬ್ಬ ಸಾಮಾನ್ಯ ಸೇವಕ ಇದನ್ನು ಮಾಡಿ ಮುಗಿಸಿಬಿಡುವನು. ಮಹಾಪ್ರಭು ಆಜ್ಞೆ ಇತ್ತರೆ ನಾನೇ, ಈ ಕಿಂಕರನೆ ಇದನ್ನು ಸಾಧಿಸಿಬಿಡುವೆ". ಕೊನೆಗೆ ಸಾಮ್ರಾಟನು ಖಾನನ ನಿವೇದನೆಯನ್ನು ಒಪ್ಪಿಕೊಳ್ಳುತ್ತಾನೆ. ಖಾನನೊಡನೆ ಸರಬುಲಂದ ಖಾನ, ರಾಜಾ ಭೀಮ ಸಿಂಘ ಮತ್ತು ಮಾನಸಿಂಘ ರಾಠೋಡ ಇವರನ್ನು ನಿಯಮಿಸುವುದಲ್ಲದೆ ಈ ಮಹತ್ಕಾರ್ಯವನ್ನು ಸಾಧಿಸಲು ಬಹುದೊಡ್ಡ ಸೈನ್ಯವನ್ನು ಅವನ ಅಧಿಕಾರಕ್ಕೊಪ್ಪಿಸಲಾಯಿತು[೨].

ಮೇಲೆ ಹೇಳಿದ ಸರದಾರರೊಡಗೂಡಿ ದೊಡ್ಡ ಸೇನೆಯೊಂದಿಗೆ ಖಾನನು ದುಷ್ಟ ವೈರಿಯ ಹಿಡಿತದಲ್ಲಿದ್ದ ಆ ಸ್ಥಳಕ್ಕೆ (ಮಾಹುಲಿ ಕೋಟೆಗೆ) ಹೋದನು. ಮೊದಲು ಕ್ಷಿಪಣಿಗಳಿಂದ ವೈರಿಯನ್ನು ಚದುರಿಸಲು ಪ್ರಯತ್ನಿಸಿದನು. ನಂತರ ಬಾಣಗಳಿಂದ ಸಿಡಿಗುಂಡುಗಳಿಂದ ದಾಳಿಯಿಟ್ಟನು. ಭೀಕರ ಬಾಣಗಳಿಗೆ ವೈರಿಯನ್ನು ಗುರಿಯಾಗಿಸಿದನು. ಘೋರಕಾಳಗವಾಗಿ ಎರಡೂ ಕಡೆಗೆ ದೊಡ್ಡ ಸಂಖ್ಯೆಯಲ್ಲಿ ಸಾವು ಸಂಭವಿಸಿತು. ಕೊನೆಗೆ ಹೋರಾಡುವ ಶಕ್ತಿಯನ್ನೆಲ್ಲ ಕಳೆದುಕೊಂಡು ದಂಗೆಖೋರರು ಕಾಲುಕಿತ್ತಿದರು. ಘಾಜಿಯ ಯೋಧರು ಯುದ್ಧವಿಜಯದಿಂದ ಶಿಬಿರಗಳನ್ನು ಲೂಟಿ ಮಾಡಿದರು. ವೈರಿ ಸಿಪಾಯಿಗಳನ್ನು ಯುದ್ಧಖೈದಿಗಳನ್ನಾಗಿ ಹಿಡಿದಿಟ್ಟರು. ತದನಂತರ ಸಾಮ್ರಾಟ ಸೈನಿಕರು ತಮ್ಮ ಶಿಬಿರಗಳಿಗೆ ಮರಳಿದರು; ಮೃತರ ಸಂಸ್ಕಾರದಲ್ಲಿ ಹಾಗೂ ಗಾಯಾಳುಗಳ ಸುಶ್ರೂಷೆಯಲ್ಲಿ ತೊಡಗಿದರು.

ಮರುದಿನ ಮುಂಜಾನೆ ಆ ದುಷ್ಟ ಬಂಡುಕೋರರು ಮೂರು ಕಡೆಯಿಂದ ಸಾಮ್ರಾಟ ಸೇನೆಯ ಮೇಲೆ ದಾಳಿಯಿಟ್ಟರು. ಸಾಮ್ರಾಟ ಸೇನೆಯ ಸವಾರರು ಕುದುರೆಯೇರಿ ಎದುರಿಸಲು ಸಿದ್ಧರಾದರು. ಈ ಘರ್ಷಣೆಯ ವಿಷಯ ಸಾಮ್ರಾಟನಿಗೆ ಗೊತ್ತಾಗಲು

ಅವರ ಸಹಾಯಕ್ಕೆ ಅಜೀಯ ಸೈನ್ಯದೊಡನೆ ಸಾಗಿಹೋಗಲು ಮುನಾವರ ಖಾನ ಮತ್ತು ಬಹ್ರಾಮಂದ ಖಾನ ಇವರನ್ನು ರವಾನಿಸಿದನು.

ಇದೇ ವೇಳೆಗೆ ತಮಗೊಪ್ಪಿಸಿದ ವಿಜಾಪುರ ರಾಜ್ಯದ ಕೋಟೆಗಳ ಗೆಲುವನ್ನು ಸಾಧಿಸಿ ಫಾಜಿ ಉದ್ ದಿನ್ ಖಾನ ಮತ್ತು ರುಸ್ತುಂ ಖಾನರು ರಾಜಸಭೆಗೆ ಆಗಮಿಸಿದರು. ರಾಜಾಜ್ಞೆಯಂತೆ ಅವರೂ ಕೂಡ ತ್ವರಿತವಾಗಿ ಕುದುರೆಯೇರಿ ಧಾವಿಸಿ ಸಾಮ್ರಾಟ ಸೇನೆಯೊಂದಿಗೆ ಸೇರಿಕೊಂಡರು. ಹೀಗೆ ಸೈನ್ಯದ ಎಡ ಬಲ ಬದಿಗಳೆರಡೂ ಬಲಗೊಂಡವು. ಆದರೆ ದೂರಾಲೋಚನೆಯಿಲ್ಲದ ಬಂಡುಕೋರರು ಹಿಮ್ಮೆಟ್ಟಿದ್ದರಿಂದ ಫಾಜಿ ಉದ್‌ದಿನ್ ಖಾನ ಒಂದು ಕಡೆಯಿಂದ ಮತ್ತು ರುಸ್ತುಂ ಖಾನ ಇನ್ನೊಂದು ಕಡೆಯಿಂದ ವೈರಿ ಸೇನೆಯ ಮಧ್ಯದಲ್ಲಿ ಆನೆಗಳನ್ನು ನುಗ್ಗಿಸಿದರು. ಒಟ್ಟಾಗಿ ವೈರಿಯನ್ನು ಓಡಿಸಲು ಪ್ರಯತ್ನಿಸಿದರು. ಭೀಕರ ಕದನ ಸಂಭವಿಸಿತು. ರುಸ್ತುಂ ಖಾನನ ಕುತ್ತಿಗೆಯ ಮೇಲೆ ಮತ್ತು ತೋಳ ಮೇಲೆ ಭಲ್ಲೆ ಇರಿತವಾಯ್ತು. ಅವನೇರಿದ್ದ ಆನೆಯ ಸೊಂಡಿಲು ಕತ್ತರಿಸಿ ತುಂಡಾಗಿ ಹೋಗಿ ಅದು ಗಾಯಗೊಂಡಿದ್ದರಿಂದ ನೆಲಕ್ಕುರುಳಿತು. ಇನ್ನೂ ಎರಡು ಆನೆಗಳು ಅಸು ನೀಗಿದವು. ಮನುಷ್ಯರ ಪಾಡೇನು ? ಹೀಗೆ ಕಾಳಗ ರಂಗೇರಿದ್ದಾಗ ಖಿಲಿಜ ಖಾನ ಮತ್ತು ಸರಬುಲಂದ ಖಾನ ದಿಟ್ಟತನದಿಂದ ಧೈರ್ಯವಾಗಿ ಕಣಕ್ಕೆ ಧುಮುಕಿದರು. ಸಾಕಷ್ಟು ಹೋರಾಟದ ನಂತರ ದಂಗೆಕೋರರು ಓಡಿ ಹೋದರು. ವಿಜೇತ ಸೈನಿಕರು ಮೂರು ಕರೋಹದ ವರೆಗೆ ಆವೇಶದಿಂದ ಅವರನ್ನಟ್ಟಿಕೊಂಡು ಹೋಗಿ ಅವರಿಂದ ನಗನಾಣ್ಯವನ್ನು, ವಸ್ತುಗಳನ್ನು ಲೂಟಿ ಮಾಡಿ ಕಿತ್ತುಕೊಂಡು ಬಂದರು. ಆ ಮೇಲೆ ಸಾಮ್ರಾಟನ ಸನ್ನಿಧಿಗೆ ಬಂದು ವಂದನೆ ಸಲ್ಲಿಸಿದರು. ಪ್ರತಿಯೊಬ್ಬರಿಗೂ ಸಾಮ್ರಾಟನು ಕೊಡುಗೆಗಳನ್ನಿತ್ತು ಸನ್ಮಾನಿಸಿದರು.

ವಿಜಾಪುರದ ಸುಬೇದಾರ ರುಹುಲ್ಲಾಹ ಖಾನನು ಸಾಮ್ರಾಟನಿಗೆ ಕಳಿಸಿದ ಪತ್ರದ ಪ್ರಕಾರ ತಿಳಿದು ಬಂದ ವಿಷಯವೇನೆಂದರೆ, ಇಂದಪುರದ ಠಾಣೇದಾರ ಹಬಿಬ ಉಲ್ಲಾಹ ಖಾನನು ಶಾಹಪುರಕೋಟೆಯನ್ನು ನೋಡಿಕೊಳ್ಳಲು ನಿಯಮಿಸಲ್ಪಟ್ಟಿದ್ದರಿಂದ ಅದನ್ನು ನೋಡಿಕೊಳ್ಳುತ್ತಿದ್ದಾಗ ಎಲ್ಲ ದಿಕ್ಕುಗಳಲ್ಲಿ ಅಡ್ಡಾಡುತ್ತಿದ್ದ ದುಷ್ಟ ಸಾಂಬಾನ ಸೈನ್ಯ ಅವನ ಕೋಟೆಗೆ ಮುತ್ತಿಗೆ ಹಾಕಿ ಕೈವಶಪಡಿಸಿಕೊಂಡಿತು; ಖಾನನನ್ನು ಕೈದಿಯನ್ನಾಗಿ ತೆಗೆದುಕೊಂಡು ಹೋದರು.

ರಾಜ ಗುಪ್ತವರದಿಗಾರನಿಂದ ಸಾಮ್ರಾಟನಿಗೆ ಬಂದ ವರದಿಯ ಪ್ರಕಾರ ಜಮೀನದಾರ ತುಕಾರಾಮ ತ್ರಂಬಕನ ಸಹೋದರ ರಘುವೀರ ಖಾಂಡುನ ಸಹಾಯದಿಂದ ಬಂಡುಕೋರ ಅಕ್ಬರನು ಪೋರ್ಚುಗೀಜರ ಪ್ರದೇಶಕ್ಕೆ ಬಂದಿದ್ದು ಹಿಂದುಸ್ತಾನಕ್ಕೆ ಹೋಗಲು ಬಯಸಿದ್ದಾನೆ ಎಂದು ತಿಳಿಯಿತು. ಆ ಪ್ರಕಾರ ಅಕ್ಬರನು ಸಮುದ್ರ ದಾಟಿ ಹೋಗದಂತೆ ಅವನಿಗೆ ತಡೆಯೊಡ್ಡಲು ರಾಜಕುಮಾರ ಮುಹಮ್ಮದ್ ಶಾಹ ತತ್ ಕ್ಷಣ ಸಾಗಬೇಕೆಂದು ಆಜ್ಞಾಪಿಸಲ್ಪಟ್ಟನು.

ಸಂಘುಲಾ (ಸಾಂಗೋಲಾ)ದ ಠಾಣೆದಾರ ನೂರ ಮುಹಮ್ಮದ್ ಮತ್ತು ಅವನಿಗಿಂತ ದೊಡ್ಡ ಸೈನ್ಯವಿದ್ದ ಸಾಂಭಾನೊಡನೆ ತಿಕ್ಕಾಟವಾಗಿದ್ದು ವರದಿಗಾರರಿಂದ ಸಾಮ್ರಾಟನಿಗೆ ತಿಳಿಯಿತು. ಅವನನ್ನು ಎದುರಿಸಲಾಗದ್ದಕ್ಕೆ ಖಾನನು ಹಿಂದೆ ಸರಿಯಬೇಕಾಯಿತು. ಉದ್ಧಟತನದಿಂದ ವೈರಿ ಅವನೆಡೆಗೆ ಧಾವಿಸಿ ಕೈದಿಯನ್ನಾಗಿ ಹಿಡಿದನು.

"ರಾಜಕುಮಾರ ಶಾಹಾ ಅಲಮ್ ಬಹಾದೂರನ ಸೇವಕರು ದರೋಗಾ-ಇ-ಘುಸಾಲ ಖಾನಾ ಮುಖಾಂತರ ಶಿವಾಜಿಯ ಪ್ರದೇಶವನ್ನು ಪ್ರವೇಶಿಸಿದ ಸುದ್ದಿ ತಲುಪಿತು."

ದರೋಗಾ-ಇ-ಘುಸಾಲದ ಹಯಾತಖಾನನು ಕೆಳಗಿನ ಸಂದೇಶ ಕಳಿಸಿದನು: "ಮುಹಮ್ಮದ್ ಅಲಿ (ದರೋಗಾ-ಇ-ಹರಕಾರರ) ತಿಳಿಸಿದ್ದೇನೆಂದರೆ ಅವನ ಗುಪ್ತಚಾರರು ದುಷ್ಟ ಸಾಂಭಾನ ದೇಶದಲ್ಲಿ ಅಡ್ಡಾಡಿ ಆ ಬಂಡುಕೋರನ ರಾಜ್ಯದಲ್ಲಿ ರಾಜಕುಮಾರ ಅಲಂ ಬಹಾದೂರನ ಜನರು ಇರುವುದನ್ನು ತಿಳಿಸಿದ್ದಾರೆ. ಇದಲ್ಲದೆ ರಾಜಕುಮಾರನು ಆ ನೀಚ ಬಂಡುಕೋರನಿಗೆ ತನ್ನ ಸೈನಿಕರನ್ನು ಕಳಿಸಿಕೊಟ್ಟು ಅವನ ಉಪಟಳವನ್ನು ಅಶಾಂತಿಯನ್ನು ಉಂಟು ಮಾಡುವಂತೆ ಮಾಡಿ ಸಾವ್ರಾಟ ಸೇನೆಯೊಡನೆ ಘರ್ಷಣೆಗಿಳಿಯುವಂತೆ ಮಾಡಿದ್ದಾನೆ". ಈ ವಾರ್ತೆ ಕೇಳಿ ಸಾಮ್ರಾಟನು ಬಹಳ ಉದ್ವಿಗ್ನಗೊಂಡನು. ಕೆಲವು ರಾಜದಂಡಧಾರಿಗಳನ್ನು ಆ ದುಷ್ಟ ಸಾಂಭಾನ ಪ್ರದೇಶಕ್ಕೆ ಕಳಿಸಿಕೊಡಬೇಕು ಮತ್ತು ಅವರಲ್ಲಿದ್ದು ಸಾಮ್ರಾಟನ ಸೇನೆಯ ಯಾರಾದರೂ ಇದ್ದದ್ದು ಕಂಡುಬಂದರೆ ಕೈದಿಮಾಡಿ ತನ್ನೆದುರಿಗೆ ತರಬೇಕು ಎಂದು ಬಹ್ರಾಮಂದಖಾನನಿಗೆ ಆಜ್ಞಾಪಿಸಿದನು.

ಈ ಸಾಮ್ರಾಟನ ಆಜ್ಞೆಯನ್ನು ಖಾನನು ಜಾರಿಗೊಳಿಸಿದ ಕೆಲದಿನಗಳಲ್ಲಿ ಆತನ ದಂಡಧಾರಿಗಳು ಅಂಥ ಮೂರು ವ್ಯಕ್ತಿಗಳನ್ನು ರಾಜಸಭೆಗೆ ತಂದರು. ಅವರನ್ನು ವಿಚಾರಣೆಗಾಗಿ ಒಪ್ಪಿಸಿಕೊಡಲಾಯಿತು; ಪ್ರಶ್ನಿಸಲಾಗಿ ಅವರು ಕಾಲಹರಣ ಮಾಡತೊಡಗಿದರು. ಆದ್ದರಿಂದ ಅವರ ದೈಹಿಕ ಹಿಂಸೆಗೆ ಅಪ್ಪಣೆಯಾಯಿತು; ಅವರು ಅದನ್ನೆಲ್ಲ ಸಹಿಸಿದರು. ಆದರೆ ಏನನ್ನೂ ಹೊರಗೆಡಹಲಿಲ್ಲ. ವಿಚಾರಣೆ ಮುಂದುವರೆಯಿತು. ವಿಚಾರಣೆಯ ಕಾಲಕ್ಕೆ ರಾಜಕುಮಾರನ ಮೊಹರೆಯುಳ್ಳ ದುಷ್ಟ ಸಾಂಭಾನಿಗೆ ಕಳಿಸಿದ ಪತ್ರಗಳನ್ನು ವಶಪಡಿಸಿಕೊಳ್ಳಲಾಯಿತು. ಅವುಗಳನ್ನು ಸಾಮ್ರಾಟನೆದುರಿಗಿಡಲು ಆತನ ಅವುಗಳನ್ನು ಗಮನವಿಟ್ಟು ಓದಿದನು. ಗೋಳಕೊಂಡದ ಹಿಂದಿನ ಆಡಳಿತಗಾರ ಕುತುಬಲ್ ಮುಲ್ಕ ಹಸನ ಮತ್ತು ವಿಜಾಪುರದ ಹಿಂದಿನ ದೊರೆ ಸಿಕಂದರ ಇವರಿಗೆ ಸಂಬಂಧಿಸಿದ ವ್ಯವಹಾರದಲ್ಲಿ ಅವರೊಡಗೂಡಿ ರಾಜಕುಮಾರನು ಸಾಮ್ರಾಜ್ಯದ ವ್ಯವಹಾರವನ್ನು ತಲೆಕೆಳಗೆ ಮಾಡುವುದರಲ್ಲಿ ತೊಡಗಿದ್ದರಿಂದ ಅವನ ಮೇಲೆ ಸಾಮ್ರಾಟನಿಗೆ ವಿಶ್ವಾಸವಿರಲಿಲ್ಲ. ಈಗ ಬಂದ ವರದಿಯಿಂದ ಸಾಮ್ರಾಟನು ಮತ್ತಷ್ಟು ಚಿಂತಿತನಾಗಿ ಸಿಟ್ಟಿಗೆದ್ದನು.

ತನ್ನ ವಿಶೇಷ ಹುದ್ದೆಯ ಸೈನಿಕರು ಮತ್ತು ವಿಶೇಷ ಕವಾಯಿತ ಪಡೆಯೊಂದಿಗೆ ಹಾಗೂ ದಂಗೆಕೋರರನ್ನು (ಮರಾಠರನ್ನು) ದಮನಮಾಡಲು ಕಳಿಸಿದ ಸಾಫ್ ಶಿಕಾನ

ಖಾನನೊಂದಿಗೆ ಪ್ರತಿದಿನ ರಾಜಕುಮಾರ ಕಾಣಿಸಿಕೊಳ್ಳಬೇಕೆಂದು ಅವನಿಗೆ ಆಜ್ಞಾಪಿಸಲು ಸಾಮ್ರಾಟನು ಹಯಾತಖಾನನಿಗೆ ತಿಳಿಸಿದನು. ಇದಲ್ಲದೆ ಇಹತಮಮ್ಮ ಖಾನ್, ಜಬರದಸ್ತ ಖಾನ ಮತ್ತು ಅಬ್ದುಲ್ ಹಮೀದ ಖಾನ ಇವರನ್ನು ಪ್ರತಿಯೊಂದರ ಮೇಲೂ ನಿಗಾ ಇಡಲು ಮತ್ತು ಜಾಗರೂಕರಾಗಿರಲು ಕಳಿಸಲಾಯಿತು. ಇದೇ ತೆರನಾಗಿ, "ರಾಜಕುಮಾರನ ಸೈನಿಕರು ಮತ್ತು ದಂಡಧಾರಿಗಳು ಮುಂಜಾನೆ ಬೇಗನೆ ಸಾಮ್ರಾಟನೆದುರು ಬಂದು ಹಾಜರಾಗಲೇಬೇಕು" ಎಂದು ಆಜ್ಞೆಯಾಯಿತು.

ಮರುದಿನ ಮುಂಜಾನೆ ಸೂರ್ಯೋದಯವಾದೊಡನೆ ಸಾಮ್ರಾಟನು ಸಿಂಹಾಸನದ ಮೇಲೆ ಕುಳಿತನು. ಆಮದತ್ ಉಲ್ ಮುಲ್ಕ, ಅಸಾದ ಖಾನ, ಘಾಜಿ ಉದ್ ದಿನ್‌ಖಾನ ಮುಖ್ತಾರ ಖಾನ, ಇಲಾಹವರ್ದಿ ಖಾನ ಖಮ್ರುಸಾನ ಖಾನ, ಹಸನ ಅಲಿಖಾನ ಮತ್ತು ಸಪ್ತ ಪ್ರಮುಖ ಸ್ಥಾನಗಳ ಶ್ರೀಮಂತ ಸರದಾರರು ಶಸ್ತ್ರ ಸನ್ನದ್ಧರಾಗಿ ನಾ ಮೇಲು ನೀ ಮೇಲು ಎನ್ನುವಂತೆ ಆಗಮಿಸಲಾಗಿ ಬಹುದೊಡ್ಡ ಜನಸಮೂಹವೇ ನೆರೆದಿತ್ತು. ಬಹುದೊಡ್ಡ ಸಂಖ್ಯೆಯಲ್ಲಿ ಅಧಿಕಾರಿಗಳು 'ಕುರ್ನೀಶ್' ವನ್ನು ಕೈಕೊಂಡಿದ್ದರು.

ರಾಜಕುಮಾರನು ಯಾವ ಸ್ಥಿತಿಯಲ್ಲಿದ್ದರೂ ಅವನನ್ನು ಪ್ರಭು ಸನ್ನಿಧಿಗೆ ತರಬೇಕೆಂದು ಮುಂಜಾನೆ ಮೂರು ಗಂಟೆಯ ನಂತರ ಹಯಾತ್ ಖಾನನಿಗೆ ಅಪ್ಪಣೆಯಾಯ್ತು. ಆ ಪ್ರಕಾರ ರಾಜಾಜ್ಞೆಯಂತೆ ಹಯಾತ್ ಖಾನರು ರಾಜಕುಮಾರನ ಶಿಬಿರಕ್ಕೆ ಹೋಗಿ ಅರಸು ಕುಮಾರರಾದ ಸುಲ್ತಾನ ಮುಯಿಜ ಉದ್ ದಿನ ಮತ್ತು ಸುಲ್ತಾನ ಅಝುಮ ಉದ್ ದಿನ (ಶಾಹ ಅಲಂನ ಪುತ್ರರು) ಅವರೊಂದಿಗೆ ಶಾಹ ಅಲಂನನ್ನು ಮಹಾಪ್ರಭುವಿನೆದುರಿಗೆ ತಂದು ನಿಲ್ಲಿಸಿದರು. ಅವರು ಕುರ್ನಿಸ್ ಶಿಷ್ಟಾಚಾರವನ್ನು ಮುಗಿಸಿದರು. ಇನ್ನು ಅವರು ತಮ್ಮ ಆಸನಗಳ ಮೇಲೆ ಕೂಡುವುದರಲ್ಲಿಯೇ ಸಾಮ್ರಾಟನ ಆದೇಶದ ಮೇರೆಗೆ ಜಮಾದತ್-ಉಲ್-ಮುಲ್ಕನು ಅವರಿಗೆ ತಸ್ಬಿತ್ ಖಾನಾಕ್ಕೆ ಹೋಗಬೇಕೆಂದು ಅಲ್ಲಿ ಮಹತ್ವದ ವಿಷಯಗಳನ್ನು ಚರ್ಚಿಸಿ ನಿರ್ಣಯ ತೆಗೆದುಕೊಳ್ಳಬೇಕಾಗಿದೆಯೆಂದು ಹೇಳಿದನು. ಸ್ವಲ್ಪದರಲ್ಲಿ ಹೇಳುವುದಾದರೆ ಇದೆಲ್ಲ ಸಾಮ್ರಾಟನ ಆದೇಶದಂತೆ ನಡೆಯಿತು.

ರಾಜಸಭೆಯ ಮತ್ತು ಶಸ್ತ್ರ ಸನ್ನದ್ಧ ಸೈನಿಕ ಸಮೂಹದ ನಿಲುವಿನ ಕಾರಣ ರಾಜಕುಮಾರ ಮತ್ತು ಅವನ ಮಕ್ಕಳ ಚೈತನ್ಯ ಆಗಲೇ ಉಡುಗಿಹೋಗಿತ್ತು. ಜುಮ್ದತ್-ಉಲ್-ಮುಲ್ಕ ಖಾನನ ನಿವೇದನೆಯನ್ನು ಕೇಳಿದ ಮೇಲೆ ಅವರು ಗಾಬರಿಯಾಗಿ ಆತಂಕಗೊಂಡರು. ಆದರೂ ಅವರು ತಾಶ್ವಿಹ ಖಾನಾದೊಳಗೆ ಹೋದರು. ಸಾಮ್ರಾಟನ ಬಾಯಿಂದ ಬಂದ ಉಪದೇಶಪರ ಮತ್ತು ಎಚ್ಚರಿಕೆಯ ಬುದ್ಧಿಮಾತುಗಳನ್ನು ಜುಮ್ದತ್ ಉಲ್ ಮುಲ್ಕ ಖಾನನು ಅವರಿಗೆ ಅಕ್ಷರಶಃ ಹೇಳಿದ್ದಲ್ಲದೆ ಆ ಮಾತುಗಳನ್ನು ಪಾಲಿಸುವುದರಿಂದ ಅವರು ಸದಾಕಾಲ ಸುಖದಿಂದಲೂ ಮತ್ತು ನೆಮ್ಮದಿಯಿಂದಲೂ ಇರುವರು ಎಂಬ ಮಾತನ್ನೂ ಸೇರಿಸಿದನು. ಅದಾದ ಬಳಿಕ ಸಾಮ್ರಾಟನ ಆಜ್ಞೆಯ ಮೇರೆಗೆ ಘಾಜಿ—ಉದ್-ಖಾನನು ತಾಶ್ಬಿಹ ಖಾನಾದ ಒಳಗೆ ಹೋಗಿ ಅವರು ತಮ್ಮ ಕಟಿಬಂಧದ ಕಿರುಗತ್ತಿಗಳನ್ನು ತೆಗೆದು

ತನಗೊಪ್ಪಿಸಲು ಸಾಮ್ರಾಟನ ಅಪ್ಪಣೆಯಾಗಿದೆಯೆಂದು ಹೇಳಿದನು. ಏನೂ ಗೊಣಗದೆ ಬಹು ವಿಧೇಯತೆಯಿಂದ ರಾಜಕುಮಾರನು ತನ್ನ ನಡುಕಟ್ಟಿನ ಕಿರುಗತ್ತಿಯನ್ನು ತೆಗೆದು ಖಾನನಿಗೆ ಅರ್ಪಿಸಿದನು. ಆದರೆ ರಾಜಕುಮಾರರು (ಆತನ ಪುತ್ರರು) ಹಾಗೆ ಮಾಡಲು ಹಿಂದೆ ಮುಂದೆ ನೋಡಿದರಲ್ಲದೆ ತುಸು ಗಲಿಬಿಲಿಗೊಂಡರು. "ಆತಂಕಪಡಬೇಕಿಲ್ಲ. ಈ ಸನ್ನಿವೇಶಕ್ಕೆ ತಾಳ್ಮೆ ಬೇಕು" ಎಂದು ಹೇಳುತ್ತ ರಾಜಕುಮಾರನು ಸಮಾಧಾನಪಡಿಸಿದನು. ಹೀಗೆ ಇಬ್ಬರೂ ಅರಸುಗುವರರು ತಮ್ಮ ನಡುಕಟ್ಟಿನ ಕಿರುಗತ್ತಿಗಳನ್ನು ತೆಗೆದು ಖಾನನಿಗೆ ಇತ್ತರು.

ಹೀಗೆ ಘಾಜಿ-ಉದ್‌ದಿನ್-ಖಾನನು ರಾಜಕುಮಾರನನ್ನು ಅವನ ಪುತ್ರರೊಡನೆ ಸಾಮ್ರಾಟನ ಎದುರು ತಂದು ನಿಲ್ಲಿಸಿದನು. ಸಾಮ್ರಾಟನ ಅಪ್ಪಣೆಯಾಯಿತು: "ಸಲಾಬ್ತ ಬಾರಿ ಅಲ್ಲಿ ಹತ್ತು ಕೋಣೆಗಳುಳ್ಳ ಶಿಬಿರೊಂದನ್ನು ಹೂಡಿರಿ. ಅಲ್ಲಿ ರಾಜಕುಮಾರನು ಒಬ್ಬ ಹೆಂಡತಿಯೊಡನೆ ವಾಸಿಸಬಹುದು ಮತ್ತು ಪ್ರತಿಯೊಬ್ಬ ಅರಸುಗುವರನು ಒಂದೇ ಆಳನ್ನಿಟ್ಟುಕೊಳ್ಳಬೇಕು. ಸಾಮ್ರಾಜ್ಯದ ಸೇವಕರು ಇವರನ್ನೆಲ್ಲ ಈ ಸಭಾಗೃಹದಿಂದ ಕರೆದುಕೊಂಡು ಹೋಗಿರಿ ಮತ್ತು ರಾಜಸೈನಿಕರು ಇವರ ವಸತಿಗೃಹಗಳನ್ನು ಕಾಯಲಿ". ರಾಜಾಜ್ಞೆಯನ್ನು ಪಾಲಿಸಲಾಯಿತು.

ಸಾಮ್ರಾಟನು ವಿಶೇಷ ಕೋಣೆಯಲ್ಲಿ (ದಿವಾನ ಇ ಖಾಸ) ತನ್ನ ಕೆಲಸ ಮುಗಿಸಿಕೊಂಡು ವಶಪಡಿಸಿಕೊಂಡ ಪತ್ರಗಳನ್ನು ಹಯಾತ್ ಖಾನನ ಮೂಲಕ ರಾಜಕುಮಾರನಿಗೆ (ಓದಲು) ಕಳಿಸಿದನು. ರಾಜಕುಮಾರನು ಓದಿದ ನಂತರ ಅವುಗಳನ್ನು ತಿರುಗಿ ತರಬೇಕು ಮತ್ತು ಅವನಿಗೆ ಈ ಮಾತನ್ನು ಹೇಳಬೇಕೆಂದು ಆಜ್ಞಾಪಿಸಿದನು: "ಯಾವನೂ ತಾನು ಮಾಡಿದ್ದನ್ನು ತೊಡೆದು ಹಾಕಲಾರ, ಪ್ರತಿಯೊಬ್ಬರು ಸ್ವಯಂಕೃತ್ಯದ ಪರಿಣಾಮವನ್ನೇ ಕಾಣುತ್ತಾರೆ". ಅದೇ ರೀತಿಯಾಗಿ ಹಮಾತ್ ಖಾನನು ಪತ್ರಗಳನ್ನು ರಾಜಕುಮಾರನೆದುರು ತಂದಿಟ್ಟನು. ಅವುಗಳನ್ನೋದಿ ಧೈರ್ಯಗುಂದಿದ ರಾಜಕುಮಾರನು ಕ್ಷಮೆಗಾಗಿ ಯಾಚಿಸಿದನು. ಹಯಾತ ಖಾನನು ಆ ಪತ್ರಗಳನ್ನು ತಿರುಗಿ ತಂದು ಸಾಮ್ರಾಟನಿಗೊಪ್ಪಿಸಿದನು.

ಘಾಜಿ-ಉದ್‌ದಿನ್-ಖಾನ ಬಹಾದೂರ ಮತ್ತು ಉಳಿದ ಸರದಾರರು ಸಭಾಗೃಹದಲ್ಲಿ ಎದ್ದು ತೋರುವಂತೆ ಉಪಸ್ಥಿತ ಇರಬೇಕು, ಬಹ್ರಾಮಂದ ಖಾನ, ಮಸ್ತೂರ ಖಾನ ಸಭಾಗೃಹದ ಹೊರಗೆ ಜಾಗರೂಕವಾಗಿ ಲಕ್ಷ್ಯವಿರಿಸಬೇಕು, ಇಹತಮಶಾಹ ಖಾನನು ರಾಜಕುಮಾರನ ಆಗಮನವನ್ನು ನೋಡಿಕೊಳ್ಳುವುದಲ್ಲದೆ ಎಲ್ಲ ಚರ ಸ್ಥಿರ ಆಸ್ತಿಯನ್ನು, ಸಂಗ್ರಹ ಸಾಮಗ್ರಿಗಳನ್ನು, ಕುದುರೆ, ಆನೆಗಳ ಸಮೇತ ವಶಪಡಿಸಿಕೊಳ್ಳಬೇಕೆಂದು ಆಜ್ಞೆಯಾಯಿತು. ಶಹಾ ಆಲಂ ಎಂಬ ಬಿರುದನ್ನು ರದ್ದುಗೊಳಿಸಲಾಯಿತು.

ಈ ಪತ್ರಗಳನ್ನು ಬರೆದಿದ್ದ ಮುಹಮ್ಮದ್ ಮುಯಿಜ-ಉದ್‌ದಿನ್‌ನ ಬೇರೆ ಬೇರೆ ವಿಭಾಗಗಳ ಕಾರ್ಯದರ್ಶಿಗಳನ್ನು, ಶಕೀರಖಾನ, ಶೇಖ ಇಬ್ರಾಹಿಮ, ಅಬ್ದುಸ್-ಸಮದ್

ಮತ್ತು ನಾಲ್ವರು ಖ್ವಾಜಾ ಸಾರಾಸರನ್ನೊಳಗೊಂಡು ಎಲ್ಲ ಅನುಚರರನ್ನು ಮತ್ತು ವಕೀಲ ಶ್ಯಾಮ ಸಿಂಘನನ್ನು (ಇವರೆಲ್ಲರು) ರಾಜಕುಮಾರನ ದುರಾಲೋಚನೆಗೆ ಕಾರಣರಾಗಿದ್ದಕ್ಕಾಗಿ ಸೆರೆಯಲ್ಲಿಡಲಾಯಿತು.

ಈ ಘಟನೆಯ ನಂತರ ಸಾಮ್ರಾಟನ ವಿಶ್ವಾಸಕ್ಕೆ ಪಾತ್ರರಾಗಿದ್ದ ಸಾಮ್ರಾಜ್ಯದ ಕೆಲವು ಪ್ರಾಮಾಣಿಕ ಸೇವಕರು ವಿನಂತಿಸಿಕೊಂಡರು: "ಇದು ರಾಜಕುಮಾರರ ತಪ್ಪಲ್ಲ, ಕೆಲವು ದೂರಾಲೋಚನೆ ಇಲ್ಲದ ವಿವೇಚನೆ ರಹಿತ ಕಿಡಿಗೇಡಿಗಳ ಚಿತಾವಣೆಯಿಂದಾಗಿ ತಪ್ಪು ರೀತಿಯಲ್ಲಿ ವರ್ತಿಸಿದ್ದಾನೆ. ಭಗವಂತನ ಉನ್ನತ ರಕ್ಷಣೆಯಲ್ಲಿರುವ ಸಾಮ್ರಾಜ್ಯಕ್ಕೆ ಈ ದುಷ್ಕರ್ಮಿಗಳ ಕುತಂತ್ರದಿಂದ ಯಾವ ಹಾನಿಯಾಗಲೂ ಸಾಧ್ಯವಿಲ್ಲ. ಗೊಲ್ಕೊಂಡ ಮತ್ತು ವಿಜಾಪುರ ಈ ಎರಡೂ ರಾಜ್ಯಗಳ ಮೇಲಿನ ದಂಡಯಾತ್ರೆ ಸುದೀರ್ಘ ಸಾಗಿತು. ಪ್ರತಿದಿನ ವಿಚಿತ್ರ ಬೆಳವಣಿಗೆ ಎದುರಾಯಿತು. ಆದರೆ ಇದರಿಂದಾಗಿ ಈ ಗೆಲುವುಗಳು ನಿಲ್ಲಲಿಲ್ಲ". ಕೊನೆಗೆ ಈ ಎಲ್ಲ ನಿವೇದನೆಗಳ ನಂತರ ಶಕೀರ ಖಾನನು ಈ ಎಲ್ಲ ಚಿತಾವಣೆಗೆ ಕಾರಣನೆಂದು ಸಂದೇಹಪಡಲಾಯಿತು. ಸಾಮ್ರಾಟನು ವಿಧೇಯಕ ರಾಷ್ಟ್ರಸೇವಕರಿಗೆ ಹೇಳಿದನು, "ಶಕೀರ ಖಾನನಿಗೆ ಹೇಳಿರಿ, ನಿನ್ನ ಪ್ರಾಣ ಮತ್ತು ಸ್ಥಾನ ಇವುಗಳ ಬಗ್ಗೆ ಗಮನವಿದ್ದರೆ ರಾಜಕುಮಾರನ ಪ್ರಚೋದಕರನ್ನು ಕುರಿತು ಸಂಪೂರ್ಣ ವಿವರ ಕೊಡಲೇಬೇಕು ಮತ್ತು ಈ ಸಂಚಿನಲ್ಲಿ ಭಾಗಿಯಾಗಿರುವ ಎಲ್ಲರ ಹೆಸರುಗಳನ್ನು ಹೇಳಲೇಬೇಕು. ನೀನೇ ಇದನ್ನು ಹುಟ್ಟು ಹಾಕಿದ್ದರೆ ಸಾಮ್ರಾಟರು ನಿನ್ನನ್ನು ಕ್ಷಮಿಸುವರು. ಆದರೆ ಆ ಉಳಿದೆಲ್ಲರ ಹೆಸರುಗಳನ್ನು ತಿಳಿಸಬೇಕು ಮತ್ತು ಸಮಗ್ರ ಸಂಚನ್ನು ಬಹಿರಂಗ ಪಡಿಸು, ಒಂದು ವೇಳೆ ನೀನು ಹಾಗೆ ಮಾಡದಿದ್ದರೆ ಪರಮಾತ್ಮನ ಕ್ರೋಧದ ಸಾಕ್ಷಿಯಾಗಿರುವ ಸಾರ್ವಭೌಮರ ಕ್ರೋಧಕ್ಕೆ ಭಾಜನನಾಗುವಿ".

ಶಕೀರ ಖಾನನನ್ನು ವಿಚಾರಿಸಲಾಗಿ "ನನಗೆ ಈ ವಿಷಯದ ಬಗ್ಗೆ ಏನೂ ಗೊತ್ತಿಲ್ಲ" ಎಂದು ಹೇಳುತ್ತ ಆ ಎಲ್ಲ ಆಪಾದನೆಗಳನ್ನು ಅಲ್ಲಗಳೆದನು. ಖಾನನು (ಘಾಜಿ-ಉದ್-ದಿನ) ಸಾಮ್ರಾಟನಿಗೆ ನಿವೇದಿಸಿದನು: "(ಗೌಪ್ಯವನ್ನು) ಬಹಿರಂಗಗೊಳಿಸಲೆಂದು ಶಕೀರ ಖಾನನನ್ನು ಬೆದರಿಸಲು ಮಾಡಿದ ಪ್ರಯತ್ನವೆಲ್ಲ ನಿಷ್ಪ್ರಯೋಜಕವಾಗಿದೆ. ಆಪಾದನೆಗಳನ್ನು ನಿರಾಕರಿಸುವುದನ್ನು ಹೊರತುಪಡಿಸಿ ಆತನು ಏನನ್ನೂ ಹೇಳುವುದಿಲ್ಲ ಮತ್ತು ಬಹಳ ಹೊಲಸು ರೀತಿಯಲ್ಲಿ ಬಯ್ಯುತ್ತಾನೆ" ಸಾಮ್ರಾಟನು ಹೇಳಿದನು, "ಅವನು ರಾಜಕುಮಾರನ ಸದಾ ಸಂಗಾತಿಯಾಗಿದ್ದಾನೆ. ಅವನನ್ನು ಬಂಧನದಲ್ಲಿಡಿರಿ, ಇದಕ್ಕೆಲ್ಲ ಯಾರು ಹೊಣೆಯೆಂದು ಕೇಳಿರಿ ಮತ್ತು (ಹಾಗೆ ಮಾಡಲು ಕಾರಣಗಳೇನು)". ಖಾನನು ಶಕೀರ ಖಾನನನ್ನು ಶಿಕ್ಷಾಗೃಹಕ್ಕೊಯ್ದನು. ಹಾಗೂ ಸಾಧ್ಯವಿದ್ದ ಎಲ್ಲ ತೆರದಲ್ಲಿ ಅಂಜಿಕೆ ಹಾಕಿದರೂ ನಿರಾಕರಣೆಯೊಂದನ್ನು ಬಿಟ್ಟು ಅವನು ಏನನ್ನೂ ಉಸಿರಲಿಲ್ಲ. ಆ ಬಳಿಕ ಸಾಮ್ರಾಟನ ಆಜ್ಞಾನುಸಾರ ಶಕೀರಖಾನನನ್ನು ಇಹತಮಾಮ ಖಾನನಿಗೆ ಒಪ್ಪಿಸಲಾಯಿತು. ಇಹತಮಾಮ ಖಾನನು ಕಠೋರವಾಗಿ ಬುದ್ಧಿಮಾತು ಹೇಳಿದ್ದಾಯ್ತು. ಆದರೆ 'ಗೊತ್ತಿಲ್ಲ' ಎನ್ನುವುದಕ್ಕೆ

ಒಗ್ಗಿ ಹೋಗಿದ್ದ ಅವನ ನಾಲಗೆಯಿಂದ ಇನ್ಯಾವುದು ಹೊರಬರಲಿಲ್ಲ. ಎಲ್ಲ ಬಗೆಯ ಒತ್ತಡ ಪ್ರಯೋಗ ಮಾಡಿದರೂ ಆ ಮನುಷ್ಯ ಸರಿದಾರಿಗೆ ಬರಲು ನಿರಾಕರಿಸಿದನೆಂದು ಇಹತಮಾಮಖಾನನು ನಿವೇದಿಸಿದನು. "ಅವನೊಬ್ಬ ನಾಚಿಗ್ಗೇಡಿ ಮನುಷ್ಯ, ಕೆಲದಿನ ಅವನನ್ನು ಕಾರಾಗೃಹದಲ್ಲಿಡಿರಿ". ಎಂದು ಸಾಮ್ರಾಟನು ಆಜ್ಞೆ ಇತ್ತನು. ಅದಾದ ನಂತರ, "ಒಂದು ತಿಂಗಳಾದ ಬಳಿಕ ರಾಜಕುಮಾರನಿಗೆ ವಾಡಿಕೆಯಂತೆ ಊಟ ಮತ್ತು ಪೋಷಾಕು ಕೊಡುವ ರಿಯಾಯತಿ ನೀಡಬಹುದು" ಎಂದು ರಾಜಾಜ್ಞೆಯಾಯಿತು. ಔರಂಗಾಬಾದದಲ್ಲಿ ಬಂಧನವಾಗಿದ್ದ ಮೋಮಿನ ಬೇಗ ಮತ್ತು ಬಿಂದ್ರಾ ಖಾನ ಎಂಬ ರಾಜಕುಮಾರನ ಸೇವಕರನ್ನು ದೌಲತಾಬಾದದ ಕೋಟೆಯಲ್ಲಿಡಬೇಕು,[೩೩] ಎಂದು ತಿಳಿಸಲಾಯಿತು.

ಮಹಾಜನ ಪಂಥದ ಜಮೀನುದಾರ ಅಬ್ದುಲ್ ಕರೀಮನಿಂದ ಬಂದ ಓಲೆಯನ್ನು ಸಾಮ್ರಾಟನಿಗೆ ನೀಡಲಾಯಿತು. ಅದರ ಒಕ್ಕಣಿಕೆ ಹೀಗಿತ್ತು: "ರಾಮ ಸೇಜ ಕೋಟೆಯು ಭಗವಂತನ ಕೃಪೆಯಿಂದ ಮತ್ತು ಸಾಮ್ರಾಟನ ಅನುಗ್ರಹದಿಂದ ಕೈವಶವಾಗಿದೆ ಹಾಗೂ ಚಿರಂತನ ಸಾಮ್ರಾಜ್ಯದ ಸೇವಕರ ಸಮರ್ಥ ಅಧೀನದಲ್ಲಿದೆ". ಅವನು (ಅಬ್ದುಲ್ ಕರೀಮ) ಈ ಗುರಿಯನ್ನು ಸಾಧಿಸಲು ಬಹಳ ಶ್ರಮಿಸಿದ್ದಲ್ಲದೆ ಬಹು ಚಾಣಾಕ್ಷತೆಯಿಂದ ಕಾರ್ಯ ನಿರ್ವಹಿಸಿದ್ದನು. ಆದ್ದರಿಂದ ಸಾಮ್ರಾಟನು ಅವನಿಗೆ ವಿಶೇಷ ಪೋಷಾಕನ್ನು (ಖಿಲಾತ್ ಇ ಖಾಸಾ) ನೀಡಿದನು. ಅವನ ಮನಸಬವನ್ನು ೫೦೦ ಸೈನಿಕರಿಂದ ಹೆಚ್ಚಿಸಿದ್ದಲ್ಲದೆ ಆನೆ ಮತ್ತು ರತ್ನಖಚಿತ ಜಾಮಧಾರದೊಂದಿಗೆ (ರೂ. ೧೦,೦೦೦) ರೂ. ಹತ್ತು ಸಾವಿರ ನಗದು ನಾಣ್ಯವನ್ನು ಇನಾಮವೆಂದು ಕೊಟ್ಟನು. ಮಾಲಹಿಂದ ಸೈನ್ಯಾಧಿಕಾರಿ ನೆಕನಮ್ ಖಾನನ ಸ್ತುತ್ಯ ಪ್ರಯತ್ನದಿಂದಾಗಿ ಸಾಲಹಿರ ಕೋಟೆ ಕೈವಶವಾಯಿತು.

ಸಾಲಹಿರ ಕೋಟೆ ಕೈವಶವಾಯಿತು

ಬಾಕ್ಲಾನಾ ಪ್ರಾಂತ್ಯದಲ್ಲಿ ಬಹು ಭದ್ರವಾಗಿರುವ ಮತ್ತು ಬಹು ಎತ್ತರಲ್ಲಿರುವ ಕೋಟೆಗಳಲ್ಲೊಂದಾದ ಸಾಲಹಿರ ಕೋಟೆಯನ್ನು ಗೆಲ್ಲುವುದಕ್ಕಾಗಿ ಇದಕ್ಕೂ ಹಿಂದೆ ಖಾನ-ಇ-ಜಹಾನ ಬಹದೂರ, ದಿಲೀರ ಖಾನ, ರಾಜಾ ರಾಯ ಸಿಂಘ, ಖುತಬುದ್ದಿನ ಖಾನ ಖೇಷ್ಗಿ ಮತ್ತು ಇನ್ನುಳಿದ ಪ್ರಸಿದ್ಧ ಸರದಾರರನ್ನು ಬಹು ದೊಡ್ಡ ಸೇನೆಯೊಡನೆ ಕಳಿಸಲಾಗಿತ್ತು. ಸುದೀರ್ಘ ಕಾಲ ಅವರೆಲ್ಲ ಶತಪ್ರಯತ್ನ ಪಟ್ಟರೂ ಅದನ್ನು ಗೆಲ್ಲುವುದಾಗಲಿಲ್ಲ. ಪ್ರತಿಯೊಂದು ಕಾರ್ಯವನ್ನು ಸಾಧಿಸಲು ಕಾಲವನ್ನು ನಿಗದಿಪಡಿಸಿದ್ದರಿಂದ ಆ ಎಲ್ಲ ಉನ್ನತ ವೀರರು ಕೋಟೆಯನ್ನು ಗೆಲ್ಲದೆ ನಿರಾಶೆಯಿಂದ ಬರಬೇಕಾಯ್ತು.

ಮಾಲಹಿರ ದಂಡಾಧಿಕಾರಿ ನೆಕನಾಮ ಖಾನನು ಚಾಣಾಕ್ಷ, ಸುಪ್ರಸಿದ್ಧ ಹಾಗೂ ದೂರದೃಷ್ಟಿಯುಳ್ಳವರಲ್ಲೊಬ್ಬನಾಗಿದ್ದ. ಅವನು ತನ್ನಷ್ಟಕ್ಕೆ ತಾನೆ ಹೀಗೆ ಯೋಚಿಸಿದನು "ಗೌರವಾನ್ವಿತ ಸರದಾರರಿಂದ ಕೋಟೆ ಕೈವಶವಾಗದಿದ್ದರೂ ಅದು (ಕೋಟೆ) ಸಾಮ್ರಾಜ್ಯದ ಕೈಗೆ ಬರುವಂತೆ ತಂತ್ರ ಹೂಡಬೇಕು. ಹಾಗಾಗಿ ಈ ಉತ್ತಮ ಕಾರ್ಯಕ್ಕಾಗಿ ನಾನು ಹೊಗಳಿಕೆಗೆ ಪಾತ್ರನಾಗುವೆ" ಈ ಸೈನ್ಯಾಧಿಕಾರಿ ಮಾತಿನಲ್ಲಿ ಚಾಣಾಕ್ಷರಾಗಿದ್ದ ಮತ್ತು ಈ

ವಿಷಯದ ಒಳಗುಟ್ಟನ್ನರಿತಿದ್ದ ತನ್ನ ಒಂದಿಬ್ಬರು ಜನರನ್ನು ಸಾಲಹಿರ ದಂಡನಾಯಕನ ಹತ್ತಿರ ಕಳಿಸಿದನು. ಹೀಗೆ ಆತನು ಪರಸ್ಪರ ಸದ್ಭಾವನೆ ಮತ್ತು ಮಿತ್ರತ್ವಕ್ಕೆ ಬುನಾದಿ ಹಾಕಿದನು.

ವಿಧವಿಧದ ಕಾಣಿಕೆಗಳನ್ನು ಮತ್ತು ಕೊಡುಗೆಗಳನ್ನು ಕಳಿಸುವುದಲ್ಲದೆ ಬೆಳ್ಳಿ ಬಂಗಾರ ಹಾಗೂ ಇರಾಕಿ, ಟರ್ಕಿ ಕುದುರೆಗಳನ್ನು ನೀಡುವ ಮೂಲಕ ನೆಕನಾಮ ಖಾನನು ಅವನೊಡನೆ (ಸಾಲಹಿರ ಸೈನ್ಯಾಧಿಕಾರಿಯೊಡನೆ) ಸ್ವಲ್ಪ ಸಮಯದಲ್ಲಿಯೇ ಗರಿಷ್ಠ ರೀತಿಯಲ್ಲಿ ಪರಸ್ಪರ ಬಾಂಧವ್ಯ ಮತ್ತು ಸ್ನೇಹವನ್ನು ಗಟ್ಟಿಗೊಳಿಸಿದನು. ಆ ಹಿಂಸ್ರ ಪ್ರಾಣಿಯ ಹೃದಯವನ್ನು ಸಂಪೂರ್ಣವಾಗಿ ಗೆದ್ದ ಬಳಿಕ ಅವನು (ಸಾಲಹಿರದ ದಂಡಾಧಿಕಾರಿ) ಸಾಮ್ರಾಜ್ಯ ಸೇನೆಯ ಸೇವೆಯಲ್ಲಿ ಸೇರಿದರೆ ಉನ್ನತ ಹುದ್ದೆ ಮತ್ತು ಬಿರುದುಗಳು ಲಭ್ಯವಾಗುತ್ತವೆಯೆಂಬ ಆಮಿಷವೊಡ್ಡುವ ಸಂದೇಶವನ್ನು ಕಳಿಸಲಾಯಿತು. ಸಾಮ್ರಾಜ್ಯ ಸೇವೆಯಲ್ಲಿದ್ದ ದಕ್ಷಿಣದ ಅಧಿಕಾರಿಗಳು ಮನಸಬ ಮತ್ತು ಉನ್ನತ ಹುದ್ದೆಗಳೊಂದಿಗೆ, ಮುಂಬಡತಿ ಪಡೆದುಕೊಂಡು ತಮ್ಮ ಆಕಾಂಕ್ಷೆಗಳನ್ನು ಮನಸಾರೆ ಪೂರೈಯಿಸಿಕೊಂಡದ್ದನ್ನು ಕಂಡಿದ್ದ ಕೃಷ್ಣಾಜಿ (ಸಾಲಹಿರದ ಸೈನ್ಯಾಧಿಕಾರಿ) ತಾನೇ ಬಂದು ನೆಕನಾಮ ಖಾನ್‌ನನ್ನು ಸೇರಿಕೊಂಡನು. ಆದ್ದರಿಂದ ಕೃಷ್ಣಾಜಿಗೆ ೩೦೦೦/೨೦೦೦ ಜಾಟ ಸೈನಿಕರು ಮತ್ತು ಸವಾರರುಳ್ಳ ಮನಸಬವನ್ನು ನೀಡಬೇಕೆಂದು ಶಿಫಾರಸು ಮಾಡುವ ವಿನಂತಿ ಪತ್ರವನ್ನು ಕೋಟೆಯ ಬಂಗಾರ ಕೀಲಿಕೈಯೊಡನೆ ಖಾನನು ಸಾಮ್ರಾಟರ ರಾಜಸಭೆಗೆ ಕಳಿಸಿದನು. ಅವುಗಳನ್ನು ಸಾಮ್ರಾಟನಿಗೆ ಕೊಡಲು ಆತನು ಬಹಳ ಸಂತೋಷಪಡುತ್ತ ಖಾನನ ಉತ್ತಮ ಸೇವೆಗೆ ಮೆಚ್ಚುಗೆ ವ್ಯಕ್ತಪಡಿಸುತ್ತ ಅನ್ನುತ್ತಾನೆ, "ಇಂಥ ವ್ಯಕ್ತಿಯನ್ನು ಬುದ್ಧಿವಂತ ಮತ್ತು ಜಾಣ ಎಂದು ಕರೆಯಬೇಕು. ಯಾಕೆಂದರೆ ಸೈನಿಕ ಕಾರ್ಯಾಚರಣೆಯಿಲ್ಲದೆ ಮತ್ತು ಯಾವ ಜೀವ ಹಾನಿಯೂ ಇಲ್ಲದೆ ಇಂಥ ಕಠಿಣ ಕೆಲಸವನ್ನು ಇಷ್ಟೊಂದು ಸುಲಭವಾಗಿ ಸಾಧಿಸಿದ್ದಾನೆ". ಪ್ರಮುಖ ಸರದಾರರು ಸಾಮ್ರಾಟನನ್ನು ಅಭಿನಂದಿಸಿದರು. ಖಾನನ ಸೂಚನೆಯ ಪ್ರಕಾರ ಕೃಷ್ಣಾಜಿಗೆ ೩೦೦೦ / ೨೦೦೦ ಜಾಟ ಮತ್ತು ಸವಾರರುಳ್ಳ ಮನಸಬವನ್ನು ನೀಡಿದ್ದಲ್ಲದೆ ಆ ಭಾಗದಲ್ಲಿ ಅವನಿಗೊಂದು ಜಾಗೀರ ಹಾಕಿಕೊಟ್ಟನು. ನೆಕನಾಮ ಖಾನನ ಮನಸಬವನ್ನು ೫೦೦/೫೦೦ ಜಾಟ ಮತ್ತು ಸವಾರರನ್ನು ನೀಡಿ ವೃದ್ಧಿಪಡಿಸಲಾಯಿತು. ಖಾನನಿಗೆ ಧ್ವಜವನ್ನು (ಅಲಂ) ಇತ್ತು. ಸತ್ಕರಿಸಲಾಯಿತು. ೫೦೦ ಜಾಟ ಸೈನಿಕರ ಮನಸಬವುಳ್ಳ ಮಿರ್ಜಾ ಫರೂಕ ಬೇಗನನ್ನು ಕೋಟೆಯ ದಂಡಾಧಿಕಾರಿಯನ್ನಾಗಿ ನೇಮಿಸಿ ಅಲ್ಲಿಗೆ ಹೋಗಲು ಅವನಿಗೆ ಅನುಮತಿ ಕೊಡಲಾಯಿತು. ಸಾಲಹಿರ ಕೋಟೆ ಸುಲ್ತಾನಗಡ ಎಂದು ಮರುನಾಮಕರಣಗೊಂಡಿತು.[೩೪].

ತನ್ಮಧ್ಯ, ಅಪರಾಹ್ನದ ಕಡೆಯ ಭಾಗದಲ್ಲಿ ಹರಕಾರರಿಂದ ಸಾಮ್ರಾಟನಿಗೆ ವರದಿ ಬಂದಿತು. ಸಾಮ್ರಾಟ ಶಿಬಿರದಿಂದ ನಾಲ್ಕು ಕರೋಹ ಅಂತರದಲ್ಲಿ ದುಷ್ಟ ದಂಗೆಕೋರರ ದೊಡ್ಡ ಸೈನ್ಯ ಪಡೆ ದುರುದ್ದೇಶದಿಂದ ಒಟ್ಟುಗೂಡಿತ್ತು. ಆ ನತದೃಷ್ಟ ಕೇಡು ಬುದ್ಧಿಯ

ದಂಗೆಕೋರರರ ಮೇಲುಗೈ ಸಾಧಿಸುವುದಕ್ಕಿಂತ ಮೊದಲು ಅವರನ್ನು ದಮನಮಾಡಬೇಕೆಂದು ಅಪ್ಪಣೆಯಿತ್ತು, ಸಾಮ್ರಾಟನು ಘಾಜಿ-ಉದ್‌ದಿನ್-ಖಾನ್ ಬಹಾದೂರ, ಇಲಾಹವದಿನ್ ಖಾನ ಝುಲ್ಫಿಕರ ಖಾನ, ಮುಖಲಿಸ ಖಾನ, ಅಬ್ದುಸ-ಸಮದ-ಖಾನ, ನಿಜಾಮುದ್ದೀನ ಖಾನ, ಸುಲ್ತಾನ ಅಲಿಖಾನ, ಕಿಶೋರಸಿಂಗ ಹಾಡಾ, ರಾಯಸಿಂಗ ಮತ್ತು ಇನ್ನುಳಿದ ಘಟಾನುಘಟಿಗಳನ್ನು ಕಳಿಸಿದನು. ಮೇಲೆ ಹೇಳಿದ ಖಾನರು ಮತ್ತು ಇನ್ನುಳಿದ ಸರದಾರರು ತಮ್ಮ ಕುದುರೆಗಳನ್ನು ಸಿದ್ಧಗೊಳಿಸುವಷ್ಟರಲ್ಲಿ ಸೂರ್ಯನು ಒಮ್ಮೆಲೆ ಹಗಲಿನ ಹೆಗಲಮೇಲೆ ಸಂಜೆಯ ಬಾಯಿಯನ್ನಿರಿಸಿದನು. ಈ ಸನ್ನಿವೇಶದ (ಸಂಜೆ ಕತ್ತಲೆಯ) ಲಾಭವನ್ನು ಪಡೆಯುತ್ತ ದುಷ್ಟ ಹೃದಯದ, ಸಂಕುಚಿತ ದೃಷ್ಟಿಯ ದಂಗೆಕೋರರು ತಮ್ಮನ್ನು ನಾಲ್ಕು ಗುಂಪುಗಳಲ್ಲಿ ಜೋಡಿಸಿಕೊಂಡು ಅಜೇಯ ಸೇನೆಯ (ಸಾಮ್ರಾಜ್ಯ ಸೇನೆ) ಎದುರು ಕಾಣಿಸಿಕೊಂಡರು. ಆದರೆ ರಾತ್ರಿ ತನ್ನ ಕತ್ತಲೆ ಪರದೆಯನ್ನು ಪಸರಿಸಿದ್ದರಿಂದ ಸಾಮ್ರಾಜ್ಯ ಸೇನೆಗೆ ಯುದ್ಧ ಕಹಳೆಯನ್ನೂದಲು ಆಗಲಿಲ್ಲ. ಹಾಗೆಯೇ ದುಷ್ಟ ವೈರಿ ಸೇನೆ ಮುಂದುವರಿಯಲು ಆಗದೆ ಬೇರೆ ಬೇರೆ ದಿಕ್ಕುಗಳಲ್ಲಿ ಚದುರಿ ಹೋಯಿತು. ವೈರಿಯನ್ನು ಗಮನಿಸುತ್ತಿದ್ದ ಸಾಮ್ರಾಜ್ಯದ ಸರದಾರರು ಅವರು ಹಿಮ್ಮೆಟ್ಟಿ ಹೋದದ್ದನ್ನು ನಂಬದೆ ಸಂಪೂರ್ಣ ಶಸ್ತ್ರ ಸನ್ನದ್ಧರಾಗಿ ರಾತ್ರಿಯುದ್ದಕ್ಕೂ ಅಲ್ಲಿಯೇ ಉಳಿದರು.

ಮರುದಿನ ಬೆಳಿಗ್ಗೆ ಸೂರ್ಯೋದಯದೊಡನೆಯೇ ಆ ನೀಚರು ಒಮ್ಮೆಲೇ ಉದ್ಧಟತನದಿಂದ ಸಾಮ್ರಾಜ್ಯ ಸೈನ್ಯದ ಮೇಲೆ ದಾಳಿಯಿಟ್ಟರು. ಅಶ್ವಾರೋಹಿಗಳಾಗಿದ್ದ 'ಇಸ್ಲಾಮ ಯೋಧರು' ಅವರನ್ನು (ಆಗಲೇ ಅಲ್ಲಿಯೇ) ಯುದ್ಧಕ್ಕೆ ಆಹ್ವಾನಿಸಿದರು. ದುಷ್ಟಬುದ್ಧಿಯ ದಂಗೆಕೋರರು ಸಾಮ್ರಾಜ್ಯ ಸೈನ್ಯವನ್ನು ದಿಟ್ಟತನದಿಂದ ಎದುರಿಸಿದರು. ಸಾಮ್ರಾಜ್ಯ ಸೈನ್ಯ ಧೈರ್ಯದಿಂದ ಕಾಳಗದಲ್ಲಿ ಧುಮುಕಿತು. ಎದುರಿಸಲು ವೈರಿ ಸೈನ್ಯ ತಯಾರಾಯಿತು. ಆದರೆ ಅವರಲ್ಲಿ ಕೆಲವರು ಬಲಾಢ್ಯ ಸೈನ್ಯ ಎದುರಿಸುವ ಧೈರ್ಯವಿಲ್ಲದೆ ಕುದುರೆ ಲಗಾಮು ಹಿಂದಿರುಗಿಸಿದರು (ಹಿಮ್ಮೆಟ್ಟಿದರು). ಇದನ್ನು ಕಂಡ ಕಿಶೋರ ಸಿಂಘ ಹಾಡಾ ತನ್ನ ಮಗ ಮತ್ತು ಅನುಚರ ಯೋಧರೊಂದಿಗೆ ಓಡಿಹೋಗುತ್ತಿದ್ದ ದಂಗೆಕೋರರನ್ನು ಧೈರ್ಯದಿಂದ ಬೆನ್ನಟ್ಟಿ ಭರ್ಚಿ ಖಡ್ಗಗಳಿಂದ ಅವರಲ್ಲಿ ಬಹಳಷ್ಟು ಜನರನ್ನು ಕೊಂದನು. ಹೀಗೆ, ಆ ಕ್ಷುದ್ರ ವೈರಿಯ ಬಾಳಿನ ಆ ದಿನ ಸಾವಿನ ದಿನವಾಯ್ತು. ಕಿಶೋರ ಸಿಂಘ ಹಾಡಾನ ಪುತ್ರರಾದ ರಾಮಸಿಂಘ ಮತ್ತು ಹರನಾಥಸಿಂಘರು ನಲವತ್ತು ಬಹುಶ್ರೇಷ್ಠರೆಂದು ಆರಿಸಲ್ಪಟ್ಟ ರಜಪೂತ ಯೋಧರೊಡನೆ ಸಾವಿಗೆ ತುತ್ತಾದರು. ಕೇಸರಸಿಂಘ, ಮುಹಕಮಸಿಂಘ ಮತ್ತು ಅವನ ಮೊಮ್ಮಗ (ಕಿಶ್ವರ) ಇವರೂ ಎಪ್ಪತ್ತು ರಾಜಪೂತ ಯೋಧರೊಂದಿಗೆ ಸಂಗ್ರಾಮದಲ್ಲಿ ಮಡಿದರು. ಈ ಹಂತದಲ್ಲಿ ಸಾಫ ಶಿಕನ್ ಖಾನನ ಸಹೋದರ ನಿಜಾಮುದ್ದೀನ ಖಾನನು ತನ್ನ ಕೆಲವು ನುರಿತ ಸೈನಿಕರೊಂದಿಗೆ ಕಾಳಗದಲ್ಲಿ ತೊಡಗಿದನು. ಆದರೆ ಗಾಯಗೊಂಡು ಹತನಾದನು. ಸುಲ್ತಾನ ಅಲಿ ಖಾನನ ಪುತ್ರ ಮೆಹದಿ ಅಲಿ ಖಾನನೂ ಗಾಯಗೊಂಡು, ವೀರಯೋಧನಾಗಿ, ಇನ್ನುಳಿದ ಸಾಮ್ರಾಜ್ಯ ಸೈನಿಕರೊಡನೆ ನೆಲಕ್ಕುರುಳಿದನು.

ಕಾಳಗವು ಆತಂಕಕಾರಿ ಸ್ಥಿತಿ ಮುಟ್ಟಿತು. ಸಾಮ್ರಾಜ್ಯ ಸೇನೆ ಬಸವಳಿದು ಹೋಯಿತು. ಆದ್ದರಿಂದ ಸ್ವತಃ ಸಾಮ್ರಾಟನೇ ಕಾಳಗಕ್ಕೆ ಧುಮುಕಲು ನಿರ್ಧರಿಸಿದನು. ಈ ಉದ್ದೇಶಕ್ಕಾಗಿ ತನ್ನ ಆನೆಯನ್ನು ಸಿದ್ಧವಿಡಲು ತಿಳಿಸಿದನು. ಆದರೆ ಸಾಮ್ರಾಟನ ಹತ್ತಿರ ಆನೆ ತರುವುದರೊಳಗಾಗಿಯೇ ಘಾಜಿ–ಉದ್‌ದಿನ್–ಖಾನ ಬಹಾದೂರ, ಹಮೀದ ಉದ್ದಿನ ಖಾನ, ಮುಜಹಾಹಿದ ಖಾನ ಮತ್ತು ಇನ್ನುಳಿದ ಸಾಮ್ರಾಜ್ಯ ಸೇವಕರು ಸವಾರರೊಡಗೊಂಡು ತಮ್ಮ ಕುದುರೆಗಳನ್ನೋಡಿಸುತ್ತ ಧಾವಿಸಿ ಹೋಗಿ ದುಷ್ಟ ಹೃದಯದ ದಂಗೆಕೋರರ ಮೇಲೆ ಬಾಣಗಳಿಂದ ಎರಗಿ ಅವರನ್ನು ದೊಡ್ಡ ಸಂಖ್ಯೆಯಲ್ಲಿ ಕೊಂದರು. ಸಂಕ್ಷಿಪ್ತವಾಗಿ ಹೇಳುವುದಾದರೆ, ಈ ಶರವರ್ಷಾಧಾರೆಯಿಂದ ವೈರಿ ಸೈನ್ಯದಲ್ಲಿಯ ಸಾಮಾನ್ಯ ಸೈನಿಕರು ತ್ರಸ್ತಗೊಂಡರು. ದಾಳಿಯನ್ನು ಎದುರಿಸಲಾಗದೆ ಎಲ್ಲ ದಿಕ್ಕುಗಳಲ್ಲಿ ಚದುರಿಹೋಗಿ ಪ್ರಾಣ ಉಳಿಸಿಕೊಂಡರು. ಈ ಸನ್ನಿವೇಶದಲ್ಲಿ ಯಶಸ್ಸು ಮತ್ತು ವಿಜಯದ ಗಾಳಿ ಸುದೈವೀ ಸಾಮ್ರಾಜ್ಞ ಧ್ವಜದ ಮೇಲೆ ಬೀಸತೊಡಗಿತು ಮತ್ತು ಗೆಲುವಿನ ಶಬ್ದ ಜೋರಾಯಿತು. ಖಾನ ಫಿರೋಜ ಜಂಗ ಖಾನ ಬಹಾದೂರ ಮತ್ತು ಉಳಿದ ಸರದಾರರು ಸಾಮ್ರಾಟನೆದುರು ಉಪಸ್ಥಿತರಾಗಿ 'ಕುರ್ನೀಸದ' ವಿಧಿಗಳನ್ನು ಪೂರೈಸಿದರಲ್ಲದೆ ಅವರ ಮುಖ ನಿಷ್ಠೆ ಹಾಗೂ ಭಕ್ತಿಭಾವದಿಂದ ಬೆಳಗಿತು. ಪರಮಾತ್ಮನ ಪ್ರತಿರೂಪನಾಗಿದ್ದ ಸಾಮ್ರಾಟನು ಅವರ ಸಾಧನೆಗಳನ್ನು ಪ್ರಶಂಸಿಸುತ್ತ ಮನಸಬಗಳನ್ನು, ಪೋಷಾಕುಗಳನ್ನು (ಖಿಲಾತಗಳನ್ನು) ಕುದುರೆ, ಖಡ್ಗಗಳನ್ನು ಅವರವರ ಯೋಗ್ಯತೆಗನುಗುಣವಾಗಿ ನೀಡಿದನು.

ಇದೇ ಅವಧಿಯಲ್ಲಿ, ರಾಜಕುಮಾರ ಅಲಿಜಾಹ ಮುಹಮ್ಮದ ಅಝಂ ಶಾಹನ ಗುಪ್ತ ವಾರ್ತಾ ಬರಹಗಾರನು (ಕುಫಿಯಾ ನವಿಸ್) ಹರಕರಾರಿಂದ ಬಂದ ಸುದ್ದಿಯನ್ನು ಸಾಮ್ರಾಟನಿಗೆ ತಿಳಿಸಿದನು. ಆ ಸುದ್ದಿಯ ಪ್ರಕಾರ ದಂಗೆಕೋರ ಅಕ್ಬರನನ್ನು ದುರ್ಗಾದಾಸ ರಾಠೋಡನು ಹಡುಗಿಗೆ ಹತ್ತಿಸಿ ಅವನಿಂದ ದೂರಾಗಿ ಬಂದು ನರ್ಮದಾ ನದಿಯನ್ನು ದಾಟಿ ಬಂದು ಬದವಾರ ಮತ್ತು ರತ್ಲಮ್‌ಕ್ಕೆ ಹೋಗಿದ್ದನು. ಅಲ್ಲಿ ದುರ್ಬುದ್ಧಿಯ ಅಖರಾಜ ಅವನನ್ನು ಕೂಡಿಕೊಂಡನು. ಮೂರು ನಾಲ್ಕು ದಿನ ದುರ್ಗಾದಾಸನು ಅಖರಾಜನನ್ನು ತನ್ನೊಡನೆ ಇರಿಸಿಕೊಂಡನು. ಉಜ್ಜಯಿನಿಯ ಸುಬೇದಾರ ಮೀರ ಖಾನನು ಈ ವಿಷಯವನ್ನು ತನಿಖೆ ಮಾಡಿ ಸಾಮ್ರಾಟನಿಗೆ ವರದಿ ಮಾಡಬೇಕೆಂದು ತಿಳಿಸಲಾಯಿತು.

ಶಾಪಗ್ರಸ್ತ ಸಾಂಭಾನ ಪ್ರದೇಶದಲ್ಲಿರುವ ಹರಚಂದ ಕೋಟೆಯ ಬಂಗಾರ ಕೀಲಿಕೈಯೊಡನೆ ರಾಜಕುಮಾರ ಮುಹಮ್ಮದ ಅಜಂ ಕಳಿಸಿದ ಓಲೆ ರಾಜಸಭೆಗೆ ಬಂದಿತು. ಎರಡನ್ನೂ ನೋಡಿ ಸಾಮ್ರಾಟನು ರಾಜಕುಮಾರನನ್ನು ಹೊಗಳಿದನು. ಸುರತ ಬಂದರದ 'ಮುತಾಸದ್ದಿ' ಮೊತಾಮಿದ ಖಾನನು ಮಹಾಪ್ರಭುವಿಗೆ ತಿಳಿಸಿದ ಪ್ರಕಾರ ನಿರಾಶೆಯ ಮಳಲುಗಾಡಿನಿಂದ ಹೊರಬಂದ ದಂಗೆಕೋರ ಅಕ್ಬರನು ಮುಸೆತ್ ಬಂದರ ತಲುಪಿದ್ದನು. ಈ ವಿಷಯ ಕಚೇರಿ ದಾಖಲೆಯಲ್ಲಿ ನಮೂದಿಸಲ್ಪಡ ಬೇಕೆಂದು ಸಾಮ್ರಾಟನು ಆಜ್ಞಾಪಿಸಿದನು.

ದಂಡ್ರಾಜಪುರಿಯ ಸೈನ್ಯಾಧಿಕಾರಿ ಯಾಕುತ್ ಖಾನನು ಸಾಮ್ರಾಟನಿಗೆ ಸಲ್ಲಿಸಿದ ವರದಿಯ ಪ್ರಕಾರ ದಂಗೆಕೋರ ಅಕ್ಬರ ಮುಸೆತ್ ಬಂದರವನ್ನು ತಲುಪಿದ್ದನು ಮತ್ತು ಅದರ ಪ್ರಭಾರ ಅಧಿಕಾರಿ ಆತನಿಗೆ ಸಾಂತ್ವನ ಪಡಿಸುತ್ತ "ನಾನು ನನ್ನ ದೂತನನ್ನು ಮಹಾಪ್ರಭುವಿನ ಸನ್ನಿಧಿಗೆ ಕಳಿಸಿ ನಿನ್ನ ತಪ್ಪುಗಳನ್ನು ಕ್ಷಮಿಸಲು ಕೇಳಿಕೊಳ್ಳುತ್ತೇನೆ" ಎಂದು ಹೇಳಿದ್ದನು. ದಂಗೆಕೋರ ಅಕ್ಬರನನ್ನು ಬೆನ್ನಟ್ಟಿದ್ದ ರಾಜಕುಮಾರ ಮುಹಮ್ಮದ ಅಜಂ ಶಾಹಾ ಸಾಮ್ರಾಟನ ಸಭೆಗೆ ಮರಳಿ ಬರಬೇಕೆಂದು ಅಪ್ಪಣೆಯಾಯ್ತು, ಆ ಪ್ರಕಾರ ಅವನು ಹಡಗವೇರಿದನು.

ಬಂದೇಲಖಂಡದ ವರದಿಗಾರನು ಕಳಿಸಿದ ವರದಿಯ ಪ್ರಕಾರ "ಅವಿಶ್ವಾಸಿಕ ಪಹಾಡ ಸಿಂಘ ಗೌರನ ಮಗ ದೇವಿ ಸಿಂಘನು ಚಂಪತ ಸಿಂಘ ಬಂಗೇಲಾನ ಮಕ್ಕಳೊಡನೆ ಕೈಗೂಡಿಸಿ ಖಲೀಫಾ ಶರೀಫಾದ ಪರಗಣೆಗಳಲ್ಲಿ ಮತ್ತು ಆ ಪ್ರದೇಶದ ಉಳಿದ ತಾಲೂಕುಗಳನ್ನು ಕೊಳ್ಳೆಹೊಡೆದನು. ಖಾನ್ ಇ ಜಹಾನ ಬಹಾದೂರನ ಕಿಡಿಗೇಡಿ ಪ್ರತಿನಿಧಿ (ನಾಯಿಬ) ಗಂಗಾ ರಾಮನು ಸರಕಾರ-ಇ-ಕಾಲ್ಪಿಯ ಸುತ್ತಮುತ್ತಲಿನದ ಪ್ರದೇಶದಲ್ಲಿಯ ಕೀಳು ಪುಂಡಪೋಕರನ್ನು ಕಲೆಹಾಕಿ ಯಾವನೊ ಒಬ್ಬ ಅಜ್ಞಾತ ವ್ಯಕ್ತಿಯನ್ನು ಅಕ್ಬರನೆಂದು ಘೋಷಿಸುತ್ತ ಎಲ್ಲವನ್ನು ಹಾಳುಮಾಡಿ ಭಗವಂತನು ಸೃಷ್ಟಿಸಿದ್ದನ್ನು (ಜೀವಿಗಳನ್ನು) ತ್ರಸ್ತಗೊಳಿಸಿದ್ದಾನೆ". ಆದ್ದರಿಂದ ಅವರ ಮೇಲೆ ಕಠಿಣಕ್ರಮ ತೆಗೆದುಕೊಳ್ಳಬೇಕು. ಅವರ ದಂಗೆಯನ್ನು ಸದೆಬಡೆಯಬೇಕು. ಆ ನೀಚ ಖೋಟಾ ವ್ಯಕ್ತಿಯನ್ನು ಹುಡುಕಿ ಶಿಕ್ಷಿಸಬೇಕೆಂದು ಆಜ್ಞೆ ಹೊರಡಿಸಲಾಯಿತು.

ಇದೇ ಅವಧಿಯಲ್ಲಿ ಮುಜಾಹಿದ ಖಾನನ ಸೇವಕ ಹಾಜಿ ಅಬ್ದುಲ್ಲಾ ಬಂದು ಖಾನನ ಓಲೆಯನ್ನು ಸಾದರಪಡಿಸಿದನು. ಅದು ಹೀಗಿತ್ತು: "ಅವಿಧೇಯನಾದ ಅಬ್ದುಲ್ ಅಜೀಜನು ಉದಗಿರದಿಂದ ಐದು ಕರೋಹ ಅಂತರದಲ್ಲಿ ಬಂದು ಠಾಣೆ ಹೂಡಿದ್ದನು. ಈ ಸುದ್ದಿ ತಿಳಿದ ನಾನು ನಿಮ್ಮ ವಿಶ್ವಾಸಿಕ (ಮುಜಾಹಿದ ಖಾನ) ದಂಡಿನೊಡನೆ ಅಲ್ಲಿಗೆ ಧಾವಿಸಿದೆನು. ಆ ಮುಖಾಮುಖಿಯ ವೇಳೆಯಲ್ಲಿ ಅಕಸ್ಮಾತ ಜೋರಾಗಿ ಮಳೆ ಶುರುವಾಗಿ ಆ ಪ್ರದೇಶವೆಲ್ಲ ಜಲಮಯವಾಯಿತು. ಸಾಮ್ರಾಜ್ಯ ಸೇನೆಯನ್ನು ಎದುರಿಸುವ ಧೈರ್ಯವಿಲ್ಲದೇ ಮರಳುವುದೇ ಒಳ್ಳೆಯದೆಂದು ಬಗೆದು ಉದಗಿರದ ಕಡೆಗೆ ಬಂಡುಕೋರರು ತಿರುಗಿದರು. ತಮ್ಮ ಸ್ವಾಮಿನಿಷ್ಠನು (ಮುಜಾಹಿದಖಾನ) ಅವರನ್ನು ಬೆನ್ನಟ್ಟಿದನು. ಅವರನ್ನು ನಾನು ಸಮೀಪಿಸಿದೊಡನೆಯೇ ಅಲ್ಲಿಂದ ತಿರುಗುತ್ತ ಓಡಲಾರಂಭಿಸಿದರು. ಸಾಮ್ರಾಜ್ಯದ ನುರಿತ ವೀರ ಸೈನಿಕರು ಹೋರಾಟಕ್ಕಿಳಿಯಲು ಆ ದುರ್ದೈವಿ ಜನರು ಅವರ ಖಡ್ಗಗಳನ್ನು ಎದುರಿಸಲಾರದೆ ಓಡಿಹೋಗಿ ಸಣ್ಣ ಕೋಟೆಯಲ್ಲಿ ಒಳಹೊಕ್ಕರು. ಕೋಟೆಯನ್ನು ಅರ್ಧದಾರಿಯಲ್ಲಿಯೇ ಕೈವಶಮಾಡಿಕೊಂಡು ದಂಗೆಕಾರರನ್ನು ಬಾಣಗಳಿಗೆ, ಬಂದೂಕುಗಳಿಗೆ ಗುರಿಮಾಡಿದೆವು. ದಂಗೆಕೋರರು ಕೋಟೆಯನ್ನು ತಮ್ಮ ರಕ್ಷಣಾ ಸ್ಥಳವನ್ನಾಗಿಸಿಕೊಳ್ಳಬೇಕೆಂದು ಅಲ್ಲಿಗೆ ಹೋದರು. ಆದರೆ ಶೌರ್ಯಕ್ಕಿಂತ ಪಲಾಯನವೇ ಸರಿಯೆಂದೆನಿಸಿ ಅತ್ತಿತ್ತ ಚದುರಿಹೋದರು. ಸಾಮ್ರಾಜ್ಯದ ಅನುಭವಿಕ ವೀರರು ೧೫೦ ಕುದುರೆಗಳನ್ನು, ೧೦೦

ಒಂಟೆಗಳನ್ನು ಕೈವಶಮಾಡಿಕೊಂಡರು." ಐದು ನೂರು ರೂಪಾಯಿಗಳು ಇನಾಮದೊಂದಿಗೆ ಸಾಮ್ರಾಟನು ಹಾಜಿ ಅಬ್ದುಲ್ಲಾನಿಗೆ ಪೋಷಾಕನ್ನು (ಬಟ್ಟೆಯ) ನೀಡಿದನು. ಮತ್ತು ಹಾಗೆಯೇ ಮುಜಾಹಿದ ಖಾನನಿಗೆ ವಿಶೇಷ ಪೋಷಾಕನ್ನು ಮತ್ತು ರತ್ನಖಚಿತ ಕಿರುಗತ್ತಿಯನ್ನು ಕೊಟ್ಟು ಸನ್ಮಾನಿಸಿದನು.

ಅಷ್ಟರಲ್ಲಿಯೇ ಮುಕಾರಬ ಖಾನನ ಸಂದೇಶಪತ್ರವೊಂದು ಸಾಮ್ರಾಜ್ಯ ಸಭೆಗೆ ಬಂದಿತು: "ಕರ್ನಾಟಕ ಪ್ರಾಂತ್ಯದಲ್ಲಿ ಸುಪ್ರಸಿದ್ಧ ಮತ್ತು ಶ್ರೇಷ್ಠ ಕೋಟೆಗಳ ಸಾಲಿಗೆ ಸೇರಿರುವ ಕೋಲಾಸ ಮತ್ತು ನಾಲಕಂಡ ಕೋಟೆಗಳನ್ನು ಖಾನನು ಶ್ರಮಪಟ್ಟು ಕೈವಶಮಾಡಿಕೊಂಡಿದ್ದನು. ಅವು ಕೈವಶವಾದ ಮೇಲೆ ಅಲ್ಲಿಯ ನಿವಾಸಿಗಳು ಸಂಕಷ್ಟದಿಂದ ಅಲ್ಲಿಂದಿಲ್ಲಿ ಇಲ್ಲಿಂದಲ್ಲಿ ಅಲೆದಾಡುತ್ತಿದ್ದರು. ಖಾನನು ಅವರನ್ನು ಸಾಂತ್ವನಪಡಿಸಿದ ಮೇಲೆ ತಮ್ಮ ತಮ್ಮ ಸ್ಥಳಗಳಿಗೆ ಮರಳಿ ಬಂದರು". ಆದ್ದರಿಂದ ಸೇರ್ಪಡೆಗೆ ಯೋಗ್ಯವಾಗಿರುವ ಅರಮನೆಗಳನ್ನು ಖಾಲಿಸಾ ಶರೀಫಾಕ್ಕೆ ಸೇರಿಸಬೇಕು ಮತ್ತು ಉಳಿದವುಗಳನ್ನು ಖಾನನಿಗೆ ಅವನ ಪುತ್ರರಿಗೆ ಅನುಯಾಯಿಗಳಿಗೆ ಭೋಗ್ಯಕ್ಕಾಗಿ ಬಿಟ್ಟುಬಿಡಬೇಕೆಂದು ಸಾಮ್ರಾಜ್ಯದ ದಿವಾನರಿಗೆ ಆಜ್ಞಾಪಿಸಲಾಯಿತು.

ಮುಹಮ್ಮದ ಅಜಂ ಶಾಹ ಸಾಮ್ರಾಟನ ಠಾಣ್ಯದ ಹೊರಾಂಗಳಕ್ಕೆ ಬಂದದ್ದು ತಿಳಿಯಿತು. "ರಾಜಕುಮಾರ ಕಾಮಬಕ್ಷ, ಬಕ್ಷಿಉಲ್-ಮುಲ್ಕ-ರಹುಲ್ಲಾಹ ಖಾನ, ಮತ್ತು ಇನ್ನುಳಿದ ಪ್ರತಿಷ್ಠಿತ ಸರದಾರರು ಧ್ವಜಸಮೇತ ಹೋಗಿ ಅವರನ್ನು ಸ್ವಾಗತಿಸಬೇಕು" ಎಂದು ಸಾಮ್ರಾಟನು ಆಜ್ಞಾಪಿಸಿದನು. ಹಾಗೆಯೇ ಮಾಡಲಾಯಿತು. ಜಲಧಿವಿಸ್ತಾರ ಕೀರ್ತಿಯ ಮತ್ತು ರಾಜಪ್ರಭುತ್ವದ ವಾರಸುದಾರರು ಒಬ್ಬರನ್ನೊಬ್ಬರು ನೋಡಿದರು. ತಮ್ಮ ಉನ್ನತ ಪೀಠದಿಂದ ಇಳಿದು ಬಂದು ಒಬ್ಬರನ್ನೊಬ್ಬರು ಆಲಂಗಿಸಿದರು. ಆ ಬಳಿಕ, ಸರದಾರರು ರಾಜಕುಮಾರ ಮುಹಮ್ಮದ ಅಜಂನಿಗೆ ತಮ್ಮ ವಂದನೆ ಸಲ್ಲಿಸಿದರು. ಅವರು ಘುಸಾಲ ಖಾನಾದ ದ್ವಾರವನ್ನು ಸಮೀಪಿಸಿದಾಗ ತಶಿಹ ಖಾನಾದಲ್ಲಿ ಕುಳಿತಿದ್ದ ಸಾಮ್ರಾಟನು ಮುಜಲಿಶ ಖಾನ, ಝುಲ್ಫಿಕರ ಖಾನ, ಕಾಮಗಾರ ಖಾನ ಮತ್ತು ಇನ್ನುಳಿದ ಪ್ರಮುಖ ಸರದಾರರನ್ನು ಅವನನ್ನು ಮತ್ತೆ ಆಹ್ವಾನಿಸಲು ಸಭಾಗೃಹದ ಪ್ರವೇಶದ್ವಾರಕ್ಕೆ ಹೋಗಲು ಕಳಿಸಿದನು. ಕಡೆಗೆ ಹಗಲು ಅರ್ಧಗಳೆದ ಮೇಲೆ ರಾಜಕುಮಾರನು ಸಾಮ್ರಾಟನಿಗೆ ಭೇಟಿಯಾಗಿ ವಂದನೆ ಸಲ್ಲಿಸಿದನು. ಅವನು ೧೦೦೦ ಮೊಹರುಗಳನ್ನು ನಜರ್ ಎಂದು ಮತ್ತು ೧೦೦೦ ರನ್ನು ನಿಸಾರ ಎಂದು ಸಲ್ಲಿಸಿದನು. ಸಾಮ್ರಾಟನು ರಾಜಕುಮಾರನನ್ನು ಆಶೀರ್ವದಿಸುತ್ತ ಮುಂದಲೆಯ ಮೇಲೆ ಕೈಯಿಟ್ಟು, ವಿಶೇಷ ಅಂಗವಸ್ತ್ರವನ್ನು (ಖಿಲಾತ-ಇ-ಖಾಸಾ), ರತ್ನಖಚಿತ ಕಿರೀಟವನ್ನು, ಒಂದು ಲಕ್ಷ ರೂ.ಗಳನ್ನು, ಐವತ್ತು ಸಾವಿರ ರೂ.ಗಳನ್ನು ಬೆಲೆಯ 'ಕಮರಬಂದ' ನ್ನು, ಐದು ಆನೆಗಳನ್ನು, ಐವತ್ತು ಕುದುರೆಗಳನ್ನು (ಅವುಗಳಲ್ಲಿ ಹನ್ನೆರಡು ಕುದುರೆಗಳನ್ನು ಬಂಗಾರದ ಆಭರಣಗಳಿಂದ ಸಿಂಗರಿಸಲಾಗಿತ್ತು.) ನೀಡಿದನು. ರಾಜಕುಮಾರ ಕಾಮಬಕ್ಷಿಗೆ ಕೂಡ ವಿಶೇಷ ಪೋಷಾಕನ್ನು ಮತ್ತು ಬಂಗಾರ ಆಭರಣಾಲಂಕೃತ ಹೊದಿಗೆಯುಳ್ಳ ಕುದುರೆಯೊಂದನ್ನು ನೀಡಲಾಯಿತು.

ಶಹಾಜಹಾನಾಬಾದದ ಮೇಲೆ ದಾಳಿ ಮಾಡಲು ದುರ್ಗಾದಾಸನ ಉದ್ದೇಶ :

ಶಹಾಜಹಾನಾಬಾದದಿಂದ ಬಂದ ವರದಿಯ ಪ್ರಕಾರ ತಿಳಿದು ಬಂದುದೇನೆಂದರೆ ದೊಡ್ಡ ರಜಪೂತ ಸೈನ್ಯದೊಂದಿಗೆ ದುರ್ಗಾದಾಸನು ದುರುದ್ದೇಶದಿಂದ 'ಮೊವಾತ' ತಾಲೂಕುಗಳಲ್ಲಿರುವ ಕೆಲವು ಪರಗಣೆಗಳನ್ನು ಲೂಟಿ ಮಾಡಿದ್ದನ್ನಲ್ಲದೆ ಶಹಾಜಹಾನಾಬಾದದ ಕಡೆಗೆ ಅವನ ದಂಡು ಸಾಗಿತ್ತು. ಆದ್ದರಿಂದ ಶಹಾಜಹಾನಾಬಾದದ ಪ್ರಾಂತ್ಯದ ನಜೀಮನಾಗಿದ್ದ ಮುಹಮ್ಮದ್ ಅಖಿಲಖಾನ ನಾಲ್ಕು ಸಾವಿರ ಕುದುರೆ ಸವಾರರೊಂದಿಗೆ ಸಿದ್ಧನಾಗಿದ್ದುಕೊಂಡು ಆ ಪ್ರಾಂತ್ಯದ ಬಕ್ಷಿಯಾಗಿದ್ದ ತನ್ನ ಮಗ ಅಬ್ದುಲ್ ಹಾಯಿಖಾನನ್ನು ಆ ದಂಗೆಕೋರನನ್ನು ದಮನ ಮಾಡಲು ಕಳಿಸಿದನು. ಅಬ್ದುಲ್ ಹಾಯಿ ಎರಡು ಕರೋಹ ಅಂತರದಲ್ಲಿ ಇದ್ದಾಗ ಆ ಕಿಡಿಗೇಡಿಗಳು ಕಾಲ್ದೆಗೆದು ಸಿರಹಿಂದದ ಕಡೆಗೆ ದೌಡಾಯಿಸಿದನು.

ರಹೀಮ ದಾದ ಖಾನನ ದಂಗೆ :

ವಿಜಾಪುರದಿಂದ ಬಂದ ವರದಿ ತಿಳಿಸಿದ್ದೇನೆಂದರೆ "ಸೈತಾನ ಸಾಂಭಾನ ಸೇವಕನಾದ ರಹಿಮ ದಾದ ಖಾನನು ಪಂಚಮಗರದ ಸಮೀಪದ ಪ್ರದೇಶವನ್ನು ದೋಚಿದ್ದಾನೆ ಮತ್ತು ಲೂಟಿ ಮಾಡಿ ಹಾಳುಮಾಡಿದ್ದಾನೆ. ಆದ್ದರಿಂದ ಇಹತಿಶಾಮ ಖಾನ ಮತ್ತು ನರೋಜಿ ರಘು ಅವನನ್ನು ಎದುರಿಸಿದರು. ಕೊನೆಗೆ ಕಾಳಗ ಸಂಭವಿಸಿ ಅದರಲ್ಲಿ ಎರಡೂ ಕಡೆಗೆ ಎರಡು ಸಾವಿರ ಸೈನಿಕರ ಸತ್ತರು. ಈ ವೀರ ಸಾಧನೆಯ ನಂತರ ಈ ವೀರ ಯೋಧರು ಅವನನ್ನು (ರಹಿಮ ದಾದ ಖಾನನನ್ನು) ಸೆರೆ ಹಿಡಿದರು." ಸಾಮ್ರಾಟನೆದುರು ಆ ಕೈದಿಯನ್ನು ಹಾಜರಪಡಿಸಬೇಕು ಎಂದು ಆಜ್ಞೆಯಾಯಿತು.

ಆಥೋನಿ ತಾಲೂಕಿನಲ್ಲಿ ಕೃಷ್ಣಾನದಿಯ ಆ ಬದಿಯಲ್ಲಿ ಇರುವ ಕರ್ನೂಲ ಕೋಟೆಯನ್ನು ಖಮರುದ್ದೀನ ಖಾನನು ಬಹು ಶ್ರಮಪಟ್ಟು ಗೆದ್ದಿದ್ದನು. ಮುತ್ತಾಬಿರಖಾನನ ಪ್ರಯತ್ನದಿಂದ ಉಧಿಲಾ ಕೋಟೆಯನ್ನು ಗೆಲ್ಲಲಾಗಿತ್ತು. ಮೂರನೆಯ ಕೋಟೆಯನ್ನು ಅಬ್ದುಲ್ ಖೈರ ಖಾನನು ಗೆದ್ದಿದ್ದನು. ಘಾಜಿ–ಉದ್–ದಿನ ಖಾನನು ಈ ಮೂರು ಕೋಟೆಗಳ ಬಂಗಾರ ಕೀಲಿಕೈಗಳನ್ನು ಸಾದರ ಪಡಿಸಿದನು. ಪ್ರತಿಯೊಬ್ಬ ವಿಜೇತರನ್ನು ಹೊಗಳಿ ಚಪ್ಪಾಳೆ ತಟ್ಟಲಾಯಿತು. ಕರ್ನೂಲ ಕೋಟೆಗೆ ಖಮರಗಢ ಎಂದು ಹೆಸರಿಡಲಾಯಿತು.

ಪರ್ಷಿಯಾದ ಶಾಹನನ್ನು ಅಕ್ಬರ ಭೇಟಿಯಾದದ್ದು :

ದಂಗೆಕೋರ ಅಕ್ಬರನು ಮುಶೀತ ಬಂದರದಲ್ಲಿ ಎರಡು ಮೂರು ತಿಂಗಳು ಕಾಲ ವಾಸಿಸಿದ್ದನೆಂದು ಖ್ಯಾತಿವಂತ ಸಾಮ್ರಾಟನಿಗೆ ತಿಳಿಯಿತು. ಆ ಬಳಿಕ ಆತನು (ಅಕ್ಬರನು) ಇರಾಣದ ರಾಜನಾಗಿದ್ದ ಸುಲೈಮಾನ ಶಾಹನಿಗೆ ಸಹಾಯಕ್ಕಾಗಿ ವಿನಂತಿಸಿಕೊಂಡನು. ಅದರ ಪ್ರಕಾರ, ಇರಾಣದ ಆಧೀನದಲ್ಲಿದ್ದ ಬಂದರ–ಇ–ಅಬ್ಬಾಸದ ಪ್ರಭಾರ ಅಧಿಕಾರಿ ಮುಹಮ್ಮದನು ಅಕ್ಬರನನ್ನು ಕರೆತರಲು ಹರಿಮೂರು ನಾವೆಗಳನ್ನು ಕಳಿಸಬೇಕೆಂದು

ಇರಾಣದ ಶಹಾ ಆಜ್ಞಾಪಿಸಿದನು. ಅದರಂತೆಯೆ ಇರಾಕದ ವರೆಗೆ ಅಕ್ಬರನನ್ನು ರಾಜಮರ್ಯಾದೆಯೊಂದಿಗೆ ನೋಡಿಕೊಳ್ಳಬೇಕೆಂದು ತಿಳಿಸಲಾಯಿತು. ಎಲ್ಲ ನಜಿಮರು ಮತ್ತು ಫೌಜುದಾರರು ತಮ್ಮ ಅರಮನೆಗಳಲ್ಲಿ ಅಕ್ಬರನಿಗೆ ಭರ್ಜರಿ ಆತಿಥ್ಯ ನೀಡಬೇಕಾಗಿತ್ತು ಮತ್ತು ಆತನ ನಿರ್ಗಮನ ಕಾಲಕ್ಕೆ ತಮ್ಮ ಪ್ರದೇಶದ ಗಡಿಯವರೆಗೆ ಅವನ ಬೆಂಗಾವಲಾಗಿ ಹೋಗಬೇಕಾಗಿತ್ತು. ಆ ಬಳಿಕ, ಇರಾಣ ಪ್ರಭುತ್ವದ ವಾರ್ತಾ ಬರಹಗಾರ ಅಕ್ಬರನ ಆಗಮನವನ್ನು ಕೀರ್ತಿವಂತ ಶಾಹನಿಗೆ ತಿಳಿಸಿದನು. ಶಾಹನ ಆಜ್ಞೆಯಂತೆ ಆ ಸ್ಥಾನಿಕ ಸುಬೇದಾರನು ಅಕ್ಬರನಿಗೆ ಒಂದುನೂರಾ ಮೂವತ್ತು ಅಲಂಕೃತ ಹೊಂದಿಕೆಯುಳ್ಳ ಅರೇಬಿ ಮತ್ತು ಇರಾಕಿ ಕುದುರೆಗಳನ್ನು ಕಾಣಿಕೆಯಾಗಿ ಕೊಟ್ಟನು. ಅವುಗಳಲ್ಲಿ ಕೆಲವನ್ನು ನತದೃಷ್ಟ ಸಾಂಭಾನಿಗೆ ಕೊಡಬೇಕೆಂದು ಅಕ್ಬರನು ಬಯಸಿದ್ದರೂ ಶಾಹನ ಅನುಮತಿಯಿಲ್ಲದೆ ಹಾಗೆ ರವಾನಿಸುವುದು ಸಾಧುವಲ್ಲದ್ದೆಂದು ನಜಿಮ ಸ್ಪಷ್ಟಪಡಿಸಿದನು. ಸ್ವಲ್ಪದರಲ್ಲಿ ಹೇಳುವುದಾದರೆ, ಅಕ್ಬರನು ಇಸ್ಫಾಹಾನದ ಕಡೆಗೆ ಹೊರಟನು. ಆತನು ಪುರಪ್ರವೇಶ ಮಾಡುವುದರಲ್ಲಿಯೇ ಶಾಹಾನು ತನ್ನ ದಿವಾನ ಬೇಗಿಯನ್ನು ಅವನನ್ನು ಸ್ವಾಗತಿಸಲು ಕಳಿಸಿದನು. ಸಭಾಗೃಹದಲ್ಲಿ ಎರಡು ರತ್ನಗಂಬಳಿಗಳನ್ನು ಹಾಸಲಾಯಿತು. ಅಕ್ಬರನು ಸಭಾಗೃಹಕ್ಕೆ ಬರಲು ಅರಮನೆಯಿಂದ ಹೊರ ಬಂದು ಶಾಹ ಆತನನ್ನು ಆಲಂಗಿಸಿಕೊಂಡನು. ರತ್ನಗಂಬಳಿಯ ಮೇಲೆ ಕೂಡಲು ಶಾಹ ಹೇಳಿದರೂ ಅಕ್ಬರನು ಅದರೊಂದು ಮೂಲೆಯಲ್ಲಿ ಆಸೀನನಾದನು. ಆತನಿಗೆ ಸಂಬಂಧಿಸಿದ ವಿಷಯಗಳನ್ನು ಕುರಿತು ಶಾಹ ಪ್ರಶ್ನಿಸಲಾಗಿ ಅಕ್ಬರನು ಎದ್ದು ನಿಂತು ವಿನಂತಿಸಿಕೊಂಡನು. "ಈ ನಿಮ್ಮ ಕೀರ್ತಿವಂತ ಮನೆತನವು ಹುಮಾಯೂನ ಬಾದಶಾಹನಿಗೆ ಸಹಾಯ ಮಾಡಿತ್ತು. ಅದೇ ತೆರದಲ್ಲಿ ನನಗೂ ಸಹಾಯ ಮಾಡಿದರೆ ಅದೇ ರೀತಿಯಲ್ಲಿ ನನ್ನ ಗುರಿಯೂ ಸಫಲವಾಗುವುದೆಂದು ಆಶಿಸುತ್ತೇನೆ". 'ಇದಕ್ಕೆ ಶಾಹನು ಹೀಗೆ ಹೇಳಿದನು, 'ಹುಮಾಯೂನ ಬಾದಶಾಹನಿಗೆ ಕೊಟ್ಟಿದ್ದ ಸೈನ್ಯಕ್ಕಿಂತಲೂ ದೊಡ್ಡದಾದ ಮತ್ತು ಶ್ರೇಷ್ಠವಾದ ಸೈನ್ಯವನ್ನು ನಿನಗೆ ನೀಡುವೆ ಎಲ್ಲ ರೀತಿಯಲ್ಲಿಯೂ ನಿಶ್ಚಿಂತೆಯಿಂದಿರು". ಅಕ್ಬರನ ಕೈಯನ್ನು ಹಿಡಿದು ಆತನನ್ನು ರತ್ನಗಂಬಳಿಯ ಮೇಲೆ ಕೂಡಿಸಿ ಹೇಳಿದನು, "ನಿನ್ನನ್ನು (ಹಿಂದುಸ್ಥಾನದ) ಸಿಂಹಾಸನದ ಮೇಲೆ ಕೂಡಿಸುವೆ". ಕೆಲ ಗಳಿಗೆಯಾದ ಮೇಲೆ ಅಕ್ಬರನು ಮತ್ತೊಂದು ನಿವೇದನೆಯನ್ನು ಸಾದರಪಡಿಸಿದನು, "ಸಾಧನೆ ಸಲಕರಣೆಗಳನ್ನು ಮತ್ತು ಸೈನಿಕರನ್ನು ನೀಡಿದರೆ ನಾನು ಇದೀಗಲೇ ಹಿಂದುಸ್ತಾನಕ್ಕೆ ಹೊರಡುವೆ. ಅದಕ್ಕೆ ಶಾಹ ಹೇಳಿದನು, "ತಂದೆಯ ಜೀವಿತ ಕಾಲದಲ್ಲಿ ಹಾಗೆ ಮಾಡುವುದು ಪವಿತ್ರ ಶರಿಯತ್ ಕಾನೂನಿನ ವಿರುದ್ಧವಾಗುತ್ತದೆ. ಪರಮಾತ್ಮನ ಇಚ್ಛೆಯಿದ್ದರೆ ಕಾಲ ಬಂದಾಗ ಈ ವಿಷಯವನ್ನು ತರ್ಕಬದ್ಧ ಕೊನೆಗೆ ಮುಟ್ಟಿಸಲು ಶಕ್ಯವಿದ್ದ ಎಲ್ಲ ಪ್ರಯತ್ನವನ್ನು ಮಾಡಲಾಗುವುದು".[೩೫]

ದುರ್ಜನಸಿಂಘ ಹಾಡಾ ಸೃಷ್ಟಿಸಿದ ಉಪಟಳ :

ಅನಿರುದ್ಧ ಸಿಂಘ ಹಾಡಾನೊಡನೆ ದುರ್ಜನಸಿಂಘ ಹಾಡಾನಿಗೆ ವೈರತ್ವವಿತ್ತು. ಆದ್ದರಿಂದ

ಅನಿರುದ್ಧ ಸಿಂಘನ ಹುಟ್ಟೂರಾದ ಉಂಧೈರಾದಲ್ಲಿ ಅವನು ಗಲಭೆ ಎಬ್ಬಿಸಿದ್ದಾನೆ ಎನ್ನುವುದು ಸಾಮ್ರಾಟನಿಗೆ ಗೊತ್ತಾಯಿತು. ದುರ್ಜನ ಸಿಂಘನು ಆ ಪಟ್ಟಣದ ಮೇಲೆ ದಾಳಿ ಮಾಡಿ ದೊಡ್ಡ ಹಣದ ಮೊತ್ತವನ್ನು ಕಿತ್ತುಕೊಂಡು ಹೋದನು. ಆ ಬಳಿಕ ದೊಡ್ಡ ಸೈನ್ಯದೊಂದಿಗೆ ನುಗ್ಗಿ ಹೋಗಿ ರಣತಂಬೋರ ಕೋಟೆಯ ಸುತ್ತ ಮುತ್ತಲಿದ್ದ ಬರಣ ಮತ್ತು ಬರೋಥ ಪರಗಣೆಗಳನ್ನು ಹಾಗೆಯೆ ತಾಳಪುರ, ತೊಂಕ ಮತ್ತು ತೋಡಾಗಳನ್ನು ಧ್ವಂಸಮಾಡಿ ಹಾಳುಮಾಡಿದನು. ಆ ಎಲ್ಲ ಪರಗಣೆಗಳನ್ನು ಲೂಟಿ ಮಾಡಿ ಮಾರವಾರ ಕಡೆಗೆ ಸಾಗಿದನು. ಅಲ್ಲಿ ದುರ್ಗಾದಾಸ ರಾಠೋರನನ್ನು ಕೂಡಿಕೊಂಡು ಮಾಹಿಮದ ಅಧೀನ ಪ್ರದೇಶಗಳನ್ನು ಮತ್ತು ರಾಜಧಾನಿ ಶಹಾಜಹಾನಬಾದದ ಪರಗಣೆಗಳಾದ ರೋಹತಕ, ರೇವಾರಿಗಳನ್ನು ಕೊಳ್ಳೆ ಹೊಡೆದನು. ಸಾಕಷ್ಟು ಹಣವನ್ನು ಕಿತ್ತುಕೊಂಡು ಅವನು ಮರಳಿ ಮಾರವಾರಕ್ಕೆ ತಿರುಗಿದನು. ಇದನ್ನು ತಿಳಿದು ಜೋಧಪುರದ ಸುಬೇದಾರ ಇನಾಯತ ಉಲ್ಲಾಹ ಖಾನನು ಅವನನ್ನು ಬೆನ್ನಟ್ಟಿದನು. ಖಾನನನ್ನು ಎದುರಿಸುವುದು ಅಸಾಧ್ಯವೆಂದು ದುರ್ಜನ ಸಿಂಘ ಕಾಲಿಗೆ ಬುದ್ಧಿ ಹೇಳಿದನು. ದುರ್ಜನ ಸಿಂಘನ ಮೃತ್ಯು ಸಮೀಪಿಸಿದ್ದರಿಂದ ಮಂಡಲದ ಪರಗಣೆಯನ್ನು ಧ್ವಂಸಮಾಡಲು ಸಾಗಿದನು. ಅಲ್ಲಿ ಬಂಜಾರರ (ಊರಿಂದ ಊರಿಗೆ ಕಾಳು ಮಾರುತ್ತ ಹೋಗುವ ವ್ಯಾಪಾರಿಗಳು) ತಂಡವೊಂದು ಬೀಡು ಬಿಟ್ಟಿತ್ತು. ಅವರು ದುರ್ಜನಸಿಂಗನ ಮೇಲೆ ದಾಳಿ ಮಾಡಿದರು. ಬಿಲ್ಲು ಬಾಣ ಮತ್ತು ಕೋವಿಯಿಂದ ಹೋರಾಟ ಶುರುವಾಯ್ತು. ಅಷ್ಟರಲ್ಲಿ ಮಂಡಲದ ಫೌಜದಾರ ದಿಂಡರಖಾನ ಮತ್ತು ಅನಿರುದ್ಧ ಸಿಂಘ ಹಾಡಾನ ಸೇವಕ ರಘುನಾಥ ಸಿಂಘ ಅಲ್ಲಿಗೆ ಬಂದು ಕಾಳಗದಲ್ಲಿ ತೊಡಗಿದರು. ಅಕಸ್ಮಾತ್ ದುರ್ಜನ ಸಿಂಘ ಹಾಡಾನಿಗೆ ಗುಂಡಿನೇಟು ಬಿದ್ದು ಸ್ಥಳದಲ್ಲಿಯೇ ಆತನು ಮರಣ ಹೊಂದಿದನು.[೩೬]

ಇದೇ ಕಾಲಕ್ಕೆ ಬಂಗಾಲ ಪ್ರಾಂತ್ಯದಿಂದ ಬಂದ ವರದಿಯ ಪ್ರಕಾರ ರಾಜಾ ತೋಡರಮಲ್ಲನ ಮಗನಾದ ಅಮೀರ-ಉಲ್-ಉಮರಾದ ಅಧಿಕಾರಿ ಭವಾನಿದಾಸನು ಕೂಚ ಬಿಹಾರದ ಜಮೀನುದಾರನನ್ನು ಸದೆಬಡೆದು ಅವನನ್ನು ಅಧಿಕಾರದಿಂದ ಕಿತ್ತು ಹಾಕಿ ಅವನ ಮನೆ ಮತ್ತು ಆಸ್ತಿಪಾಸ್ತಿಯನ್ನೆಲ್ಲ ಕೈವಶಪಡಿಸಿಕೊಂಡನು. ಅವನು ತನ್ನ ನಾಲ್ಕು ಸಾವಿರ ಸವಾರರೊಂದಿಗೆ ಅಲ್ಲಿ ತಂಗಿದ್ದಾಗ ಭೀಕರ ಬೆಂಕಿ ಹತ್ತಿ ಹೆಚ್ಚಿನ ಸೈನ್ಯವೆಲ್ಲ ಅಗ್ನಿಗಾಹುತಿಯಾಯಿತು. ಒಂದು ನರಪಿಳ್ಳೆಯೂ ಉಳಿಯಲಿಲ್ಲ. ಗುಡ್ಡಗಳಲ್ಲಿ ಅಲೆದಾಡುತ್ತಿದ್ದ ಆ ಸ್ಥಾನಭ್ರಷ್ಟ ಜಮೀನುದಾರನಿಗೆ ಈ ಘಟನೆಯಿಂದಾಗಿ ತನ್ನ ಕೋಟೆಯನ್ನು ಸಂಪತ್ತನ್ನು ವಾಪಸ ಪಡೆದುಕೊಳ್ಳಲು ಅವಕಾಶ ಒದಗಿ ಬಂತು.

ತನ್ಮಧ್ಯ, ನತದೃಷ್ಟ ಸಾಂಭಾನಿಂದ ಕೈವಶಮಾಡಿಕೊಂಡ ಕೋಟೆಗಳನ್ನು ಆಡಳಿತದ ಉದ್ದೇಶಕ್ಕಾಗಿ ಕೆಳಗಿನಂತೆ ವ್ಯವಸ್ಥೆಗೊಳಿಸಬೇಕೆಂದು ಆಜ್ಞೆ ಹೊರಡಿಸಲಾಯಿತು. ಭೀಮಾ ತೀರದ ಈಚೆಗಿರುವ ಕೋಟೆಗಳನ್ನು ಔರಂಗಾಬಾದ ಪ್ರಾಂತ್ಯಗಳಲ್ಲಿ ಸೇರಿಸಬೇಕು ಮತ್ತು ಭೀಮೆಯ ಆ ಬದಿಯಲ್ಲಿರುವ ಕೋಟೆಗಳನ್ನು ವಿಜಾಪುರ ಪ್ರಾಂತ್ಯ (ಸುಬಾ)ಕ್ಕೆ ಒಳಪಡಬೇಕು.

ಸಾಮ್ರಾಟನ ಸೇನೆ ವಿಜಾಪುರ ಪ್ರದೇಶಕ್ಕೆ ಬಂದ ಮತ್ತು ಆದೋನಿ (ಆದವಾನಿ) ಕೋಟೆಯನ್ನು ಜಯಿಸಿದ ವಾರ್ತೆ ತಲುಪಿದ್ದು :

ದಾರು ಜಫಾರ ವಿಜಾಪುರಕ್ಕೆ ಹೋಗಲು ಸಾಮ್ರಾಟನು ನಿರ್ಧರಿಸಿದನು. ಆದ್ದರಿಂದ, ಜ್ಯೋತಿಷಿಗಳು ಗೊತ್ತುಪಡಿಸಿದ್ದ ಒಂದು ಶುಭ ಮೂಹೂರ್ತದಲ್ಲಿ ಹೊರಟನು. ಇಪ್ಪತ್ತೈದು ದಿನಗಳ ಸುದೀರ್ಘ ಪ್ರಯಾಣಮಾಡಿ ವಿಜಾಪುರದ ಭಾಗಕ್ಕೆ ಕಾಲಿಟ್ಟನು. ಆತನ ಆಗಮನದಿಂದ ವಿಜಾಪುರ ಭಾಗವೆಲ್ಲ ಸ್ವರ್ಗವಾಗಿ ಮಾರ್ಪಾಟವಾಗಿತ್ತು. ಅಲ್ಲಿ ನಿಯಮಿಸಲ್ಪಟ್ಟಿದ್ದ ಪ್ರಾಂತಾಧಿಕಾರಿ ನಜಿಮ್ ರುಹುಲ್ಲಾ ಖಾನ ಮತ್ತು ಉಳಿದ ಸರದಾರರು ಸಾಮ್ರಾಟನನ್ನು ಸ್ವಾಗತಿಸಿ 'ನಜರ' ಮತ್ತು 'ನಿಸಾರ' ಸಂಪ್ರದಾಯವನ್ನು[೩೭] ಪೂರೈಸಿದರು. ನೀರಿನ ಅಭಾವ ಇದ್ದದ್ದರಿಂದ "ಸರ್ವಶಕ್ತನು ಸೃಷ್ಟಿಸಿದ ಜೀವಿಗಳು ತ್ರಾಸ ಪಡದಿರಲಿ ಕಾರಣ ಕೃಷ್ಣಾ ನದಿಯಿಂದ ಕಾಲುವೆಯೊಂದನ್ನು ಅಗೆಯಿಸಿ ವಿಜಾಪುರದ ಕೋಟೆಯೊಳಕ್ಕೆ ತರಬೇಕು" ಎಂದು ಸಾಮ್ರಾಟನು ಆಜ್ಞೆ ಮಾಡಿದನು. ಆ ಮೇಲೆ ರಾಜಾಜ್ಞೆಯ ಮೇರೆಗೆ ಸಯೀದ–ಹಸನ–ಮುಶ್ರೀಫ–ಉಲ್–ಅಸಮ್ (ರೂ. ೩೦,೦೦೦) ರೂ. ಮೂವತ್ತು ಸಾವಿರ ಖರ್ಚಿನ ಅಂದಾಜ ಪತ್ರವನ್ನು ತಯಾರಿಸಿದನು. ಇದಕ್ಕೆ ಸಂಬಂಧಿಸಿ ವಿಜ್ಞಾಪನಾ ಪತ್ರವೊಂದನ್ನು ಸಾದರಪಡಿಸಲು ರಾಜ್ಯ ಖಜಾನೆಯಿಂದ ಅಷ್ಟು ಹಣವನ್ನು ಕೊಡಬೇಕೆಂದು ಸಾಮ್ರಾಟನು ಆಜ್ಞೆ ಮಾಡಿದನು[೩೮].

ಆಧೋನಿ (ಆದವಾನಿ) ಕೋಟೆಯನ್ನು ಗೆದ್ದದ್ದು :

ವಿಜಾಪುರದ ಆಧೀನ ಪ್ರಾಂತ್ಯವಾಗಿದ್ದ ಆಧೋನಿ ಕೋಟೆಯನ್ನು ಸಾಮ್ರಾಟ ಸೇನೆಯು ಶುಭ ಸಮಯದಲ್ಲಿ ಕೈವಶಮಾಡಿಕೊಂಡಿತು. ಆ ವಿಜಯದ ವಿವರಗಳು ಕೆಳಗಿನಂತಿವೆ: "ಬಹು ಸುಂದರವಾದ ಮತ್ತು ಬಹು ಭದ್ರವಾದ ಕೋಟೆಗಳಲ್ಲೊಂದಾಗಿರುವ ಆಧೋನಿ ಕೋಟೆಗೆ ಸಮಾನವಾದದ್ದು ಬೇರೊಂದಿಲ್ಲ. ಇದು ಸಿದ್ದಿ ಮಸೂದನ ಒಡೆತನದಲ್ಲದೆ. ಈ ದುರ್ದೈವಿ ಮನುಷ್ಯ ಮಸೂದನು ನಿಷ್ಠೆಯ ದಾರಿಯಿಂದ ದೂರ ಸರಿದಿದ್ದನೆಂದು ಮತ್ತು ಕಿಡಿಗೇಡಿಗಳ ದೊಡ್ಡ ಸೈನ್ಯ ಕಟ್ಟಿಕೊಂಡು ದಂಗೆಯ ಧ್ವಜ ಹಾರಿಸುತ್ತ ಸೈನ್ಯ ತುಕಡಿಯೊಂದನ್ನು ನದಿಯ (ಕೃಷ್ಣಾ ನದಿಯ) ದಂಡೆಯ ಮೇಲೆ ಠಾಣೆ ಹಾಕಿಸಿ ಸಾಮ್ರಾಜ್ಯ ಸೇನೆಗೆ ಸರಬರಾಜವಾಗುತ್ತಿದ್ದ ಧಾನ್ಯ ಸಾಗಾಟವನ್ನು ಅಸ್ತವ್ಯಸ್ತಗೊಳಿಸಿದ್ದಾನೆಂದು ಮೇಲಿಂದ ಮೇಲೆ ಸಾಮ್ರಾಟರ ಗಮನಕ್ಕೆ ತರಲಾಗಿತ್ತು".[೩೯]

ಈ ಸಂಗತಿಯನ್ನು ಲಕ್ಷ್ಯದಲ್ಲಿಟ್ಟು ತನ್ನ ಸೈನ್ಯದೊಂದಿಗೆ ಫಾಜಿ–ಉದ್–ದಿನ್–ಖಾನ್ ಬಹಾದೂರನು ಅವನನ್ನು ಶಿಕ್ಷಿಸಲು ಹೊರಟನು. ಅಲ್ಲಿ ಹೋಗಿ ಆಧೋನಿಯಿಂದ ಇಪ್ಪತ್ತು ಕರೋಹ ಅಂತರದಲ್ಲಿ ಠಾಣ್ಯ ಹೂಡಿದನು. ಪ್ರತಿದಿನ ದಂಗೆಕೋರ ಸೈನ್ಯ ಸಾಮ್ರಾಟ ಸೇನೆಯೊಡನೆ ಹೋರಾಡಿತು. ಇದಕ್ಕಿಂತ ಹೆಚ್ಚಾಗಿ ದಿನೇ ದಿನೇ ಹೆಚ್ಚುತ್ತಿದ್ದ ಸಾಮ್ರಾಟ ಸೈನ್ಯಕ್ಕೆ ಬೇಕಾಗುವ ಆಹಾರ ಪದಾರ್ಥಗಳ ಏರುತ್ತಿರುವ ಬೆಲೆಗಳು ಸಮಸ್ಯೆಯೊಡ್ಡಿದವು. ಕೊನೆಗೆ ಅವು ಮಿತಿ ಮೀರಿದವು. ತತ್ಪರಿಣಾಮವಾಗಿ ಫತಾಫತ್

ಜಂಗಖಾನ ಮತ್ತು ರುಸ್ತುಮಖಾನರು ದೊಡ್ಡ ಸೈನ್ಯದೊಂದಿಗೆ ಬೇಗನೆ ಸಾಗಿ ಹೋಗಿ ಘಾಜಿ–ಉದ್–ದಿನ ಖಾನನನ್ನು ಕೂಡಿಕೊಂಡು ಸಿದಿ ಮೂಸೂದನ ದಂಗೆಯನ್ನು ಸದೆಬಡೆಯಬೇಕೆಂದು ಸಾಮ್ರಾಟನು ಮುನ್ನೆಚ್ಚರಿಕೆಯ ಕ್ರಮವಾಗಿ ಆಜ್ಞೆ ಹೊರಡಿಸಿದನು. ಫತ್ ಜಂಗ್ ಖಾನ ಸಮೀಪಿಸಿದೊಡನೆಯೇ ಹೋರಾಟದಲ್ಲಿ ತೊಡಗಿದ್ದ ದಂಗೆಕಾರರು ಎದುರಿಸುವ ಸಾಮರ್ಥ್ಯವಿಲ್ಲದೆ ಕಾಲಿಗೆ ಬುದ್ಧಿ ಹೇಳಿದರು. ಆ ಮೇಲೆ ಆಧೋನಿ ಕೋಟೆಗೆ ಸರಬರಾಜದ ಆಧಾರವಾಗಿದ್ದ ಎರಡು ಕೋಟೆಗಳಲ್ಲಿ ರುಸ್ತುಮಖಾನನು ಸಂಚೋಲಿ ಕೋಟೆಯನ್ನು, ಫಾತ ಜಂಗ ಖಾನನು ಹರಕುಮಾರ ಕೋಟೆಯನ್ನು ಗೆಲ್ಲಲು, ಇವರಿಬ್ಬರನ್ನು ಖಾನ ಫಿರೋಜ ಜಂಗಖಾನನು ಕಳಿಸಿಕೊಟ್ಟನು. ಇಬ್ಬರೂ ಖಾನರು ತಮ್ಮ ನಿಶ್ಚಿತ ಸ್ಥಾನಗಳಿಗೆ ಹೋಗಿ, ಸಾಕಷ್ಟು ಹೋರಾಡಿ ಎರಡೂ ಕೋಟೆಗಳನ್ನು ಗೆದ್ದು ಅವುಗಳ ಕೀಲಿ ಕೈಗಳನ್ನೊಡನೆ ಓಲೆಗಳನ್ನು ಸಾಮ್ರಾಟನಿಗೆ ರವಾನಿಸಿದರು. ಅವರವರು ಗೆದ್ದ ಆಯಾ ಕೋಟೆಗಳಿಗೆ ಅವರನ್ನು ದಂಡಾಧಿಕಾರಿ ಗಳನ್ನಾಗಿ ಸಾಮ್ರಾಟನು ನೇಮಿಸಿದನು.

ಸಾಮ್ರಾಟ ಸೇನೆಗೆ ಈ ಎಲ್ಲ ಕೋಟೆಗಳು ಕೈವಶವಾದ ಬಳಿಕ ಸಿದಿ ಮಸೂದನ ಅನುಯಾಯಿಗಳಲ್ಲಿ ಭಿನ್ನ ಮತ ಪುಟಿದೆದ್ದಿತು. ಅಲ್ಲಿ ಅವನು ತನ್ನ ಮುಂಚಿನ ಪರಮಾಧಿಕಾರವನ್ನು ಕಳೆದುಕೊಂಡನು. ತನ್ಮಧ್ಯ ಖಾನ ಫಿರೋಜ ಜಂಗನು ತನ್ನ ಸೈನ್ಯವನ್ನು ಇಬ್ಬರು ಖಾನರ (ರುಸ್ತುಮ ಖಾನ ಮತ್ತು ಫಾತ ಜಂಗಖಾನ) ಸೈನ್ಯದೊಡನೆ ಕೂಡಿಸಿಕೊಂಡು, ಆದೋನಿ ಕೋಟೆಯ ಹತ್ತಿರ ಬಂದು, ಒಂದು ಕರೋಹ ಅಂತರದಲ್ಲಿ ಠಾಣ್ಯ ಹೂಡಿ ಅದರ ಮೇಲೆ ದಾಳಿ ಮಾಡಲು ಸಿದ್ದತೆ ನಡೆಸಿದನು. ಸುರಂಗಗಳನ್ನು ಮತ್ತು ಗುಪ್ತ ಮಾರ್ಗಗಳನ್ನು ಕೊರೆಯಲು ಶುರು ಮಾಡಿದನು. ಇದನ್ನೆಲ್ಲ ನೋಡಿ ಸಿದಿ ಬಹಳ ಗಾಬರಿಯಾಗಿ ಓಡಿ ಹೋಗಲು ದಾರಿ ಕಾಣದಾದನು. ತನ್ನ ಸಾವು ಖಾತ್ರಿ ಎನಿಸಲು ಹೋರಾಟದ ಅಪಾಯಕ್ಕೆ ಸಿದ್ಧನಾದನು. ದೊಡ್ಡ ಸೈನ್ಯವನ್ನು ಕೂಡಿಸಿ ಹೋರಾಟಕ್ಕೆ ಇಳಿದನು. ಇದರೊಳಗಾಗಿ ಖಾನ ಫಿರೋಜ ಜಂಗ ಬಹಾದೂರ ಕೆಳಗಿನಂತೆ ತನ್ನ ಕ್ರಿಯಾ ಯೋಜನೆಯನ್ನು ತಯಾರಿಸಿದನು: "ನುರಿತ ಸೈನಿಕರ ತಂಡದೊಂದಿಗೆ ಗಿಡಗಳ ಗುಂಪಿನಲ್ಲಿ ತಾನು ಅಡಗಿ ಕುಳಿತು ತನ್ನ ವಿಶ್ವಾಸಿಕ ವ್ಯಕ್ತಿಯಾಗಿದ್ದ ಮುಹಮ್ಮದ ಸಾಲೇಹನನ್ನು ಸವಾರರ ತಂಡದೊಂದಿಗೆ ಕೋಟೆಯ ವಿರುದ್ಧ ಬದಿಯಲ್ಲಿದ್ದು ವೈರಿಯೊಡನೆ ಹೋರಾಡಲು ಕಳಿಸಿದನು." (ಸಂಕ್ಷಿಪ್ತದಲ್ಲಿ ಹೇಳುವುದಾದರೆ) ಮೇಲೆ ಹೇಳಿದ ದಂಡನಾಯಕನ ಧುರೀಣತ್ವದಲ್ಲಿ ಸಣ್ಣ ಸಂಖ್ಯೆಯಲ್ಲಿ ಸಾಮ್ರಾಟನ ಸೇನೆ ಬೆಟ್ಟಗಳನ್ನಿಳಿದು ಬರುವುದನ್ನು ನೋಡಿದ ದಂಗೆಕಾರರು ಕುದುರೆಯೇರಿ ಬಂದು ದಾಳಿ ಮಾಡಿದರು. ಸಾಮ್ರಾಟನ ಸೇನೆ ಗಟ್ಟಿಯಾಗಿ ಅಲ್ಲಿಯೇ ನಿಂತಿತು. ವೈರಿ ಸೇನೆ ಸಮೀಪ ಬರಲು ಕುದುರೆಯೇರಿ ತಮ್ಮ ಠಾಣ್ಯದ ಕಡೆಗೆ ಧಾವಿಸಿದರು. ತತ್ಕ್ಷಣ ವೈರಿಸೇನೆ ಇವರನ್ನು ಬೆನ್ನಟ್ಟಿತು. ವೈರಿಗಳು ಸಮ ಪ್ರದೇಶಕ್ಕೆ ಬರಲು ಒಂದು ಕಡೆಯಿಂದ ಖಾನನು ಮತ್ತು ಮತ್ತೊಂದು ಕಡೆಯಿಂದ ಮುಹಮ್ಮದ ಸಾಲೇಹನು ಅವರನ್ನು ಮುತ್ತಿದರು. ದಂಗೆಕೋರರ ಮಾರಣಹೋಮ ಆರಂಭವಾಯ್ತು. ಮುಹಮ್ಮದ ಧೈರ್ಯದಿಂದ ಹೋರಾಡುತ್ತ ತನ್ನ ಒಂದು ನೂರಾ ಐವತ್ತು ಸೈನಿಕರೊಂದಿಗೆ ಮಡಿದನು.

ದೊಡ್ಡ ಸಂಖ್ಯೆಯಲ್ಲಿ ಗಾಯಾಳುಗಳಾದರು. ದಂಗೆಕೋರರು ಅಗಣಿತ ಸಂಖ್ಯೆಯಲ್ಲಿ ಕುರಿಗಳಂತೆ ಸತ್ತು ಬಿದ್ದರು, ಇಲ್ಲವೆ ಗಾಯಗೊಂಡರು; ಉಳಿದವರು ತಮ್ಮ ಪ್ರಾಣ ಉಳಿಸಿಕೊಂಡು ದಿಕ್ಕು ದಿಕ್ಕಿಗೆ ಚದುರಿಹೋದರು.

ಈ ಯಶಸ್ಸಿನ ವಿಷಯ ತಿಳಿದಾಗ ಸಾಮ್ರಾಟನು ಫಿರೋಜ ಜಂಗಖಾನನಿಗೆ ಒಂದು ವಿಶೇಷ ಉಡುಪನ್ನು (ಖಿಲಾತ್-ಇ-ಖಾಸಾ), ಒಂದು ಲೋಹಾಲಂಕಾರ ಖಚಿತ ಕಿರುಗತ್ತಿಯನ್ನು, ರತ್ನಮಣಿ ಕಿರುಗುಚ್ಛವನ್ನು ಲೋಹಾಲಂಕೃತ ಪರಖಾನಾಹವನ್ನು ಒಂದು ಕುದುರೆ ಮತ್ತು ಆನೆಯನ್ನು ನೀಡಿದನು. ರುಸ್ತುಮ ಖಾನ ಮತ್ತು ಫತ್‌ಜಂಗಖಾನರು ಅನುಕ್ರಮವಾಗಿ ಪೋಷಾಕನ್ನು ಮತ್ತು ಕುದುರೆಗಳನ್ನು ಪಡೆದರು. ಸಾಮ್ರಾಟನು ಖಾನ ಫಿರೋಜ ಜಂಗ ಮತ್ತು ರುಸ್ತುಮ ಖಾನರನ್ನು ಸಾಕಷ್ಟು ಸೈನ್ಯದೊಂದಿಗೆ ಆ ಅಡವಿಯನ್ನು ತೊಡೆದು ಹಾಕಲು ನಿಯಮಿಸಿದನು. ದಂಗೆಕೋರರಿಗೆ ಅಡಗಲು ಬಾರದಂತೆ ಕೋಟೆಯ ಸುತ್ತಮುತ್ತಲೂ ನಾಲ್ಕು ಕರೋಹಗಳವರೆಗೆ ಆ ಪ್ರದೇಶದಲ್ಲಿ ಒಂದೂ ಗಿಡವಿಲ್ಲದಂತೆ ಮಾಡಬೇಕು. ಅದಲ್ಲದೆ ಹದಿನೈದು ಕರೋಹಗಳ ವರೆಗೆ ಅವರನ್ನು ಬೆನ್ನಟ್ಟಿ ಅವರನ್ನು ಮತ್ತು ಅವರ ಕುಟುಂಬಗಳನ್ನು ಸೆರೆಹಿಡಿಯಬೇಕು, ಎಂದು ಅಪ್ಪಣೆಯಾಯಿತು. ಆ ನೀಚ ದಂಗೆಕೋರರು ವಿಜಾಪುರಕ್ಕೆ ಸಾಗುತ್ತಿದ್ದ ಧಾನ್ಯವನ್ನು ಲೂಟಿ ಮಾಡುತ್ತಿದ್ದದ್ದರಿಂದ ಆ ಪ್ರದೇಶದಲ್ಲಿ ನಿರ್ವಿಘ್ನವಾಗಿ ಪ್ರವಾಸ ಸಾಧ್ಯವಾಗಬೇಕೆಂಬ ಉದ್ದೇಶದಿಂದ ಅಧೋನಿಯಿಂದ ವಿಜಾಪುರದವರೆಗಿನ ಅರವತ್ತು ಕರೋಹ ದಾರಿಯಲ್ಲಿ ಹದಿನೈದು ಕರೋಹಕ್ಕೆ ಒಂದರಂತೆ ನಾಲ್ಕು ಸೈನಿಕ ನೆಲೆಗಳನ್ನು ಸ್ಥಾಪಿಸಲಾಗಿತ್ತು.

ಆಧೋನಿ ಕೋಟೆಯನ್ನು ಸಮೀಪಿಸಿ ಅದನ್ನು ಕಾಯುತ್ತಿದ್ದ ಬಂದೂಕುಧಾರಿಗಳ ಮಡದಿ ಮಕ್ಕಳನ್ನು ಬಂಧುಗಳನ್ನು ಸಾಮ್ರಾಟ ಸೇನೆ ಬಂಧಿಸಿತು. ಈ ಸನ್ನಿವೇಶವನ್ನು ಅವಲೋಕಿಸುತ್ತಿದ್ದ ಪ್ರಮುಖ ಬಂದೂಕುಧಾರಿಗಳಲ್ಲೊಬ್ಬನು ಖಾನ ಫಿರೋಜ ಜಂಗ ಖಾನನ ಹತ್ತಿರ ಬಂದು ವಾಗ್ದಾನ ಮಾಡಿ ಹೀಗೆ ಬಿನ್ನವಿಸಿಕೊಂಡನು: “ನಮ್ಮ ಕುಟುಂಬಗಳಿಗೆ ತೊಂದರೆಯಾಗದೆ ಒಂದೇ ಸ್ಥಳದಲ್ಲಿದ್ದು ಅವರ ಮರ್ಯಾದೆಗೆ ಭಂಗ ಬರದಿದ್ದರೆ ಕೋಟೆಯ ಬಾಗಿಲನ್ನು ತೆರೆದಿಟ್ಟು ಸಾಮ್ರಾಟ ಸೈನ್ಯಕ್ಕೆ ಶರಣಾಗುತ್ತೇವೆ. ಕೋಟೆಯನ್ನು ಆಕ್ರಮಿಸಿಕೊಂಡ ಬಳಿಕ ನಮ್ಮ ಕುಟುಂಬಗಳನ್ನು ನಮಗೊಪ್ಪಿಸಬೇಕು” ಅವನಿಗೆ ಸಮಾಧಾನವಾಗುವಂತೆ ಈ ಎಲ್ಲ ಮಾತುಗಳನ್ನು ಖಾನ ಫಿರೋಜ ಜಂಗ ಖಾನನು ಪೂರೈಸಿದನು.

ಹರಕರಾನಿಂದ ಇದೆಲ್ಲ ತಿಳಿದಾಗ ಸಿದಿ ಮಸೂದನು ಗಲಬಿಲಿಗೊಂಡನು. ಶರಣಾಗತಿ ಬಿಟ್ಟು ಬೇರೇನೂ ಅವನಿಗೆ ತೋರಲಿಲ್ಲ. ಆದ್ದರಿಂದ ತನ್ನ ಅಂತರಂಗದ ವಿಶ್ವಾಸಿಯೊಬ್ಬರೊಡನೆ ಖಾನನಿಗೆ ತನ್ನ ವಿನಂತಿಪತ್ರ ಕಳಿಸಿದನು. “ಸಾಮ್ರಾಟರು ತಮ್ಮ ಪಾಂಜನ್ನು (ಐದು ಬೆರಳುಗಳು) ಒತ್ತಿದ ಫರ್ಮಾನನ್ನು ಹೊರಡಿಸುವ ದಯೆ ನನ್ನ ಮೇಲಾಗಬೇಕು. ಅದು ಮುಟ್ಟಿದೊಡನೆ ಕೋಟೆಯನ್ನು ಒಪ್ಪಿಸುವೆ”, ಎಂದು ಪ್ರಾರ್ಥಿಸಿದನು.

ತನ್ನ ಕುಟುಂಬದೊಡನೆ ಹಾಯಾಗಿ ನೆಮ್ಮದಿಯಿಂದ ಇರಲು ಸಾಧ್ಯವಾಗುವಂತೆ ದಕ್ಷಿಣದಲ್ಲಿ ಪ್ರದೇಶವೊಂದನ್ನು ತನಗೆ ನೀಡಲು ಸಾಮ್ರಾಟನಿಗೆ ಖಾನನು ಶಿಫಾರಸು ಮಾಡಬೇಕೆಂದು ಪ್ರಾರ್ಥನೆಯನ್ನು ಸೇರಿಸಿದನು. ವಿಶ್ವಾಸದಿಂದ, ನಿಷ್ಠೆಯಿಂದ ಇರುವುದಾಗಿ ಭರವಸೆಯಿತ್ತನು: ಆ ಬಳಿಕ ಸಿದಿ ಮಸೂದನ ಮಗನಾದ ಸಿದಿ ಖಾನ ಮಸೂದನು ಖಾನನನ್ನು ಕಂಡು ಅವನಿಗೆ ವಂದನೆಗಳನ್ನು ಸಲ್ಲಿಸಿ ಕೋಟೆಯ ಕೀಲಿಕೈಯನ್ನು ಒಪ್ಪಿಸಿದನು [೪೦]. ಸಂಕ್ಷಿಪ್ತದಲ್ಲಿ ಹೇಳಬೇಕೆಂದರೆ, ಖಾನ ಫಿರೋಜ ಜಂಗ ಖಾನನು ಅವನನ್ನು ಸಂತೈಯಿಸಿ ಅವನೆಲ್ಲ ಭಯವನ್ನು ನಿವಾರಿಸುತ್ತ ತನ್ನ ಮಗನಂತೆ ಅವನನ್ನು ಸಂಭೋದಿಸಿದನು. ರಕ್ಷಣೆಯ ಕೈಯನ್ನಿತ್ತು, ಕ್ಷಮೆಯ ಭರವಸೆಯಿತ್ತು ಸಿದಿಗೆ ಕೆಳಗಿನ ಸಂದೇಶವನ್ನು ಕಳಿಸಿದನು: "ನಿನ್ನೆಲ್ಲ ಬಿನ್ನಹಗಳನ್ನೊಳಗೊಂಡ ಪ್ರಾರ್ಥನಾ ಪತ್ರವನ್ನು ಮಹಾಪ್ರಭುವಿನ ಸನ್ನಿಧಿಗೆ ಕಳಿಸುತ್ತಿದ್ದೇನೆ. ಪ್ರತ್ಯುತ್ತರ ಬರುವವರೆಗೆ ಮತ್ತು ನಿಮ್ಮ ಪ್ರಾರ್ಥನೆ ಸ್ವೀಕಾರವಾಗುವವರೆಗೆ ನೀವು ಕೋಟೆಯಲ್ಲಿರಿ".

ಇದಾದ ಬಳಿಕ ಕೋಟೆಯ ಗೆಲುವನ್ನು ತಿಳಿಸುತ್ತ, ಅದರ ಬಂಗಾರದ ಕೀಲಿಕೈಯನ್ನು, ಅದರೊಡನೆ ಸಿದಿಯ ಮನವಿಯನ್ನು ಹಾಗೆಯೇ ಒಂದು ಸಾವಿರ ಮೊಹರನ್ನು ನಜರ ಮತ್ತು ನಿಸಾರವಾಗಿ ಜೊತೆಯಲ್ಲಿರಿಸಿ. ಖಾನನು ಪತ್ರ ಬರೆದು ಸಾಮ್ರಾಟನ ಸಭೆಗೆ ಕಳಿಸಿದನು. ಇವುಗಳನ್ನು ಸ್ವೀಕರಿಸಿದ ಸಾಮ್ರಾಟನು 'ಪಾಂಜಾ-ಇ-ಮುಬಾರಕದಿಂದ ಭೂಷಣಗೊಳಿಸಿದ ಮತ್ತು ಆಶ್ವಾಸನೆಗಳನ್ನೊಳಗೊಂಡ ಮುದಗಿಲ ಕೋಟೆಯ ತಮಘಾ ವನ್ನು ಅವನ ಜನರಿಗೆ ವತನದಾರಿ ಎಂದು ಮಂಜೂರು ಮಾಡಿದ ಆಜ್ಞೆಯನ್ನು ಖಾನನಿಗೆ ಹೊರಡಿಸಿದನು. ಸಿದಿ ಮಸೂದನಿಗೆ ೭೦೦೦ / ೫೦೦೦ (ಜಾಟ್ ಮತ್ತು ಸವಾರರು) ರುಳ್ಳ ಮನಸಬನ್ನು, ಅವನ ಅಳಿಯ ಸಿದಿ ಖಾನ ಮುಹಮ್ಮದನಿಗೆ ೫೦೦೦/ ೩೦೦೦ (ಜಾಟ ಮತ್ತು ಸವಾರರು) ದ ಮನಸಬವನ್ನು ಮತ್ತು ಇದೇ ರೀತಿಯಲ್ಲಿ ಅವನ ಇನ್ನುಳಿದ ಅನುಯಾಯಿಗಳಿಗೆ ಅವರವರ ಸ್ಥಾನಕ್ಕೆ ತಕ್ಕಂತೆ ಮನಸಬಗಳನ್ನು ನೀಡುವ ಆಜ್ಞೆಯನ್ನು ಸಿದಿ ಮಸೂದನಿಗೆ ನೀಡಲು ರಾಜದಂಡಧಾರಿ ಅಬುದ ಸಮದನಿಗೆ ಒಪ್ಪಿಸಲಾಯಿತು. ಖಾನ ಫಿರೋಜ ಜಂಗನು ಸನದದೊಂದಿಗೆ ಸಾಮ್ರಾಟನ ಫರ್ಮಾನುವನ್ನು ಸಿದಿಗೆ ಕಳಿಸಿದನು. ಅವನು ಸಾಮ್ರಾಟನ ಫರ್ಮಾನನ್ನು, ರಾಜಪೋಷಾಕವೊಂದನ್ನು ಮತ್ತು ಒಂದು ಕುದುರೆಯನ್ನು ಕುರ್ನೀಶ ಮತ್ತು ತಸ್ಲಿಮ ನಿಧಿಗಳನ್ನು ಪೂರೈಸಿದ ಬಳಿಕ ಸ್ವೀಕರಿಸಿದನು[೪೧] ದಂಡಧಾರಿಗೆ ಸೇವಾ ಪ್ರತಿಫಲವೆಂದು ಎರಡು ಸಾವಿರ ಹಾನ್ಸನ್ನು ಕೊಟ್ಟು ಖಾನನನ್ನು ನೋಡಲು ಕೋಟೆಯ ಹೊರಗೆ ಬಂದನು. ಸಿದಿ ಮಸೂದ ಕೋಟೆಯ ಹೊರಗೆ ಬಂದದ್ದು ಕೇಳಿ ಸಶಸ್ತ್ರಧಾರಿ ಪ್ರಮುಖ ಸರದಾರರನ್ನು ಅವರವರ ಸ್ಥಾನದಲ್ಲಿ ನಿಲ್ಲಿಸಿ ಸಭೆಯನ್ನು ಏರ್ಪಡಿಸಿದನು. ಶಿದಿ ಮಸೂದ ಬೀಡಾರದ ಹತ್ತಿರ ಬಂದೊಡನೆ ಖಾನ ಫಿರೋಜ ಜಂಗನು ಹಾಸಿದ ಜಮಖಾನೆಯ ಮೇಲೆ ಅರ್ಧ ದಾಟಿ ಬಂದು ಅವನನ್ನು ಆಲಂಗಿಸಿಕೊಂಡು ತನ್ನ ರತ್ನಗಂಬಳಿಯ ಮೇಲೆ ಕೂಡಿಸಿದನು. ಮೂರು ಗಂಟೆಗಳ (ಪಹರ) ವರೆಗೆ ಆ ಕೂಟ ಮುಂದುವರೆಯಿತು. ಎಲ್ಲ ಬಗೆಯ ತಿನಿಸುಗಳನ್ನು, ಪಾನೀಯಗಳನ್ನು ಮತ್ತು ಫಲಗಳನ್ನು ನೀಡಲಾಯಿತು. ಹಗಲು ಮುಗಿಯುವ

ಸಮಯಕ್ಕೆ ಅವನಿಗೆ (ಸಿದಿಗೆ) ಹೋಗಲು ಅನುಮತಿಸಲಾಯಿತು. ಆ ಬಳಿಕ ರುಸ್ತುಮ ಖಾನ, ಫಾತ ಜಂಗ ಖಾನ ಮತ್ತು ಇನ್ನುಳಿದ ಸರದಾರರೊಡಗೂಡಿ ಕೋಟೆಯನ್ನು ಪ್ರವೇಶಿಸಿದನು. ಹಾಗೂ ಸಿದಿ ಮಸೂದನಿಗೆ ಮುದಗಿಲ ಕೋಟೆಗೆ ಹೊರಡಲು ಅನುಮತಿ ಇತ್ತನು. ಸಿದಿ ಮಸೂದನು ತಾನು ಮುಟ್ಟಬೇಕಾದ ಸ್ಥಳಕ್ಕೆ ಹೊರಟರೂ ತನ್ನ ಮಗ ಸಿದಿ ಖಾನ ಮತ್ತು ಇನ್ನುಳಿದ ಅನುಯಾಯಿಗಳನ್ನು, ಸಂಬಂಧಿಕರನ್ನು ಖಾನ ಫಿರೋಜ ಜಂಗನ ಸೇವೆಯಲ್ಲಿರಿಸಿ ಹೋದನು. ಈ ಶುಭ ಸಮಾಚಾರ ತಿಳಿದೊಡನೆ ಮರ್ಯಾದೆ ಪೋಷಾಕ ರತ್ನಖಚಿತ ಕಿರೀಟ, ಒಂದು ಆನೆ ಮತ್ತು ಎರಡು ಕುದುರೆಗಳನ್ನು ಖಾನನಿಗಿತ್ತು ಅವನನ್ನು ಸಾಮ್ರಾಟನು ಸತ್ಕರಿಸಿದನು. ಹಾಗೆಯೆ ಉಳಿದ ಸರದಾರರರ ಮನಸಬಗಳನ್ನು ಹೆಚ್ಚಿಸಲಾಯಿತು. ಈ ಅದ್ದೂರಿಯಾದ ಸಮಾರಂಭದಲ್ಲಿ ರಾಜಕುಮಾರ ಮುಹಮ್ಮದ ಅಜಂ ಶಾಹ ಒಂದು ಸಾವಿರ ಸುವರ್ಣ ನಾಣ್ಯಗಳನ್ನು ಮತ್ತು ಇನ್ನುಳಿದ ಉನ್ನತ ಸ್ಥಾನದ ಸರದಾರರು ತಮ್ಮ ಅಂತಸ್ತಿಗನುಗುಣವಾಗಿ ನಜರ ಮತ್ತು ನಿಸಾರ ಸಲ್ಲಿಸಿದರು. ಸಡಗರದ ಉತ್ಸವಕ್ಕಾಗಿ ವಿಜಯ ದುಂದುಭಿ ಮೊಳಗಿದವು.

ಅದೋನಿ ಕೋಟೆ ತನ್ನ ಭದ್ರತೆಯಲ್ಲಿ ವಿಜಾಪುರದ ಸಿಕಂದರನ ಕೋಟೆಯನ್ನು ಹೋಲುತ್ತಿದ್ದು ಬೆಟ್ಟದ ನೆತ್ತಿಯ ಮೇಲೆ ನಿಂತಿದೆ. ಇದು ಏಳುವರೆ ಕರೋಹ ಉದ್ದವು ನಾಲ್ಕುವರೆ ಕರೋಹ ಅಗಲವೂ ಮತ್ತು ತಳದಿಂದ ತುದಿಯವರೆಗೆ ೨ ಕರೋಹ ಎತ್ತರವೂ ಇದ್ದಿತು. ಅದರ ಸುತ್ತಲೆಲ್ಲ ದಟ್ಟ ಅಡವಿ ಇತ್ತು. ವಿಜಾಪುರದ ಅಲಿ ಆದಿಲ್ ಶಾಹನ ಆಳಿಕೆಯಲ್ಲಿ ಸಿದಿ ಮಸೂದನು ಮುಖ್ಯ ಆಡಳಿತಗಾರನೂ (ವಝಿರ ಇ ಮುತ್ಲಾಖ) ಮತ್ತು ವಿಜಾಪುರ ರಾಜ್ಯದ ಸಿಪಾಹಸಲಾರನೂ ಆಗಿದ್ದನು. ತನ್ನ ಅಧಿಕಾರಾವಧಿಯಲ್ಲಿ ಈತನು ಕೌಶಲ್ಯದಿಂದ ಆಡಳಿತ ನಡೆಸಿದನು. ತನ್ನ ಕರ್ತವ್ಯಗಳನ್ನು ಜಾಗ್ರತೆಯಿಂದ ನಿರ್ವಹಿಸುತ್ತ ಕಾನೂನು ವ್ಯವಸ್ಥೆಯನ್ನು ಚೆನ್ನಾಗಿ ಕಾಯ್ದುಕೊಂಡನು. ಆದಿಲ್ ಶಾಹಿ ಸಾಮ್ರಾಜ್ಯ ಪತನವಾಗುವ ಮೊದಲು ಶಾರಜಾ ಖಾನ ಅಫಗಾನನು ಈತನ ವಿಝೂರತ್‌ದ ಕರ್ತವ್ಯಗಳಲ್ಲಿ ಹಸ್ತಕ್ಷೇಪ ಮಾಡಿ ಇವನ ವಿರುದ್ಧ ಸಂಚು ಹೂಡಿದನು. ಶರಜಾ ಖಾನನು ಸಿದಿಯನ್ನು ಮುಗಿಸಿ ಹಾಕಲು ಏನೆಲ್ಲಾ ಮಾಡಿದರೂ ಯಶಸ್ವಿಯಾಗಲಿಲ್ಲ. ಸಂಕ್ಷಿಪ್ತದಲ್ಲಿ ಹೇಳಬೇಕೆಂದರೆ, ಆಡಳಿತವು ಸಿಕಂದರ ಖಾನನ ಮನೆತನದಿಂದ ಕೈತಪ್ಪಿ ಹೋಯಿತು. ಕೊನೆಗೆಯಲ್ಲಿ, ಸಾಮ್ರಾಟನು ರಾವ ದಳಪತ ಬುಂಬೇಲಾನನ್ನು ಆದೋನಿಕೋಟೆಯ ಸೈನ್ಯಾಧಿಕಾರಿಯನ್ನಾಗಿ ನಿಯಮಿಸಿ ಆತನಿಗೆ ಅಲ್ಲಿ ಹೋಗಲು ಅನುಮತಿ ಇತ್ತನು. ಆದೋನಿ ಕೋಟೆಗೆ ಹೋಗಿ ಆತನು ತನ್ನ ಯಾವ ಕರ್ತವ್ಯಗಳನ್ನು ನಿರ್ವಹಿಸಲು ತೊಡಗಿದನು. ಖಾನ ಫಿರೋಜ ಜಂಗ ಮತ್ತು ಉಳಿದ ಸರದಾರರು ಆಸ್ಥಾನಕ್ಕೆ ಬಂದು ಸಾಮ್ರಾಟನ ಆಜ್ಞೆಯಂತೆ ಪ್ರಪಂಚದ ಮಹಾಪ್ರಭುವಿಗೆ ತಮ್ಮ ವಂದನೆಗಳನ್ನು ಸಲ್ಲಿಸಿದರು.

■

ಅಡಿಟಿಪ್ಪಣಿಗಳು :

೧. ಸಾಕಿ ಮತ್ತು ಜುಬೈರಿ ಪ್ರಕಾರ "ಸಾಮ್ರಾಟನು ೧೪ ಜೂನ ೧೬೮೬ ರಂದು ಸೋಲಾಪುರ ಬಿಟ್ಟನು ಮತ್ತು ವಿಜಾಪುರದಿಂದ ೨ ಕೋಸ ಅಂತರದಲ್ಲಿರುವ ರಸೂಲಪುರವನ್ನು ೩ ಜುಲೈರಂದು ತಲುಪಿದನು".

೨. ಪಠ್ಯ : 'ವುಖು ಅಮದೆ' ತಪ್ಪು ಅದು 'ವುಖನ ಅಮದೆ' ಇರಬೇಕು. ಪ್ರತಿ ಮಾಡುವವನು ತಪ್ಪಿರಬಹುದು.

೩. ಒಂದು ಶ್ಲೋಕವನ್ನು ಬಿಡಲಾಗಿದೆ.ಪೋ ೯೮ಬ ನೋಡಿರಿ. ಉಳಿದ ಆಕರಗಳು ಇದನ್ನು ಕುರಿತು ಮೌನವಾಗಿವೆ.

೪. ಘಾಜ–ದ್ದೀನ–ಖಾನ ಎಂಬುದು ಸರಿಯಾದ ಪಠ್ಯ ಅದು ಘಾಜಿವು ದಿನ ಖಾನ ಅಲ್ಲ. ಪ್ರತಿ ಮಾಡುವವನು ಮಾಡಿದವನ ತಪ್ಪು.

೫. ಶನಿವಾರ, ೧೪ ಶಬನ ದಿನ (೨೬ ಜೂನ, ೧೬೮೬) ರಾಜಕುಮಾರ ಮುಹಮ್ಮದ ಅಜಂ ಶಾಹ ಮತ್ತು ರಾಜಕುಮಾರ ಬೀದರ ಬಖ್ತ ಸಾಮ್ರಾಟನೊಡನೆ ಸಂದರ್ಶನ ಪಡೆದರು ಮತ್ತು ನಿಲುವಂಗಿಗಳನ್ನು ಸ್ವೀಕರಿಸಿದರು. ವಿಜಾಪುರದಿಂದ ೨ ಕೋಸ ದೂರ ಇರುವ ರಸುಲಪುರದಲ್ಲಿ ಫಿರೋಜ ಜಂಗ ಬಹಾದೂರ ವಂದನೆ ಸಲ್ಲಿಸಿದನು.

೬ ರಾಜಕುಮಾರ ಅಜಂ ವಿಜಾಪುರ ಕೋಟೆಯ ಸಮೀಪಕ್ಕೆ ಬರುತ್ತಾನೆ. (೨೯ ಜೂನ ಕ್ರಿ.ಶ.೧೬೮೫) ಮತ್ತು ಮುತ್ತಿಗೆಗೆ ಹೆಚ್ಚಿನ ಚೈತನ್ಯ ತುಂಬಿದನು (೨೬೨). ಸ್ಫೋಟದ ಕರ್ಕಶ ಶಬ್ದ ಅದಾಗಿತ್ತು. ೩೯ ಕೋಸ ಅಂತರದಲ್ಲಿರುವ ನಳದುರ್ಗಕ್ಕೆ ಅದರ ಧ್ವನಿ ಸ್ಪಷ್ಟವಾಗಿ ಕೇಳಿಸಿತು'.

೭. ಅಧಿಕೃತ ಇತಿಹಾಸ ಮತ್ತು 'ನುಸಖಾಯಿ–ದಿಲಕುಶಾ'ಗಳ ಲೇಖಕರು ಸೈನಿಕ ಬೀಡಾರದಲ್ಲಿ ಉಪಸ್ಥಿತರಿದ್ದರೂ. ಅವು ಈ ವಿಷಯಕ್ಕೆ ಮೌನವಾಗಿವೆ ನೋಡಿರಿ.

೮. ರಹಸ್ಯ ಚಟುವಟಿಕೆಯಲ್ಲಿದ್ದ ಆಸ್ಥಾನಿಕರಲ್ಲಿ ಕೆಲವರನ್ನು ಗಲ್ಲಿಗೇರಿಸಲಾಯಿತು. ಎಂ.ಎ. ನೋಡಿರಿ.

೯. ಸಾಮ್ರಾಟನು ರಾಜಕುಮಾರ ಮುಹಮ್ಮದ ಅಜಂನ ಪ್ರಗತಿಯಿಂದ ಅತೃಪ್ತಿಗೊಂಡನೆಂದು ಕೆ.ಕೆ. ಕೂಡ ತಿಳಿಸುತ್ತದೆ. ಆದ್ದರಿಂದ ಆತನು ತಾನೇ ಸ್ವತಃ ಶಹಬನದ ಆರಂಭದಲ್ಲಿ ತನ್ನ ಆಳಿಕೆಯ ಇಪ್ಪತ್ತೆಂಟನೆಯ ವರ್ಷದಲ್ಲಿ ಸೋಲಾಪುರಕ್ಕೆ ಹೊರಟನು. ಆ ತಿಂಗಳಿನ ೨೧ನೆಯ ದಿನ ಮುತ್ತಿಗೆಗೊಳಗಾದವರು ಬಹಳ ಭೀತಿಗೊಳಗಾಗುವಂತೆ ಕೋಟೆಯ ಎದುರು ಬಂದನು.

೧೦. "ಮುತ್ತಿಗೆಯ ಕಾರ್ಯಾಚರಣೆಯಲ್ಲಿ ರಾಜಕುಮಾರನಿಗೆ ಸಹಾಯ ಮಾಡಲು ತನ್ನ ಸರ್ವಶ್ರೇಷ್ಠ ಅಧಿಕಾರಿಗಳಲ್ಲಿ ಕೆಲವರನ್ನು ನಿಯಮಿಸಿದನು. ಅವರನ್ನುದ್ದೇಶಿಸಿ ಸ್ಫೂರ್ತಿದಾಯಕ ಮಾತುಗಳನ್ನಾಡಿದನು. ಅವರು ತಮ್ಮ ಗಮ್ಯ ಸ್ಥಾನಕ್ಕೆ ತಲುಪಲು ಮಾರ್ಗ ರಚನೆ ಮಾಡಲು, ಸುರಂಗತೊಡಲು ಮತ್ತು ಕಂದಕ ತುಂಬಲು ಮನಸಾರೆ ತಮ್ಮನ್ನು ತೊಡಗಿಸಿಕೊಂಡರು".

೧೧. ಇಲ್ಲಿ ಕಾವ್ಯ ಪಂಕ್ತಿಗಳನ್ನು ಬಿಡಲಾಗಿದೆ.

೧೨. ಅಬ್ದುಲ್ ರೌಫ ಮತ್ತು ಶಾರ್ಜಾ ಖಾನ ಇಬ್ಬರು ಸಿಕಂದರನ ಶರಣಾಗತಿಯ ನಂತರ ಸಂದರ್ಶನಕ್ಕೆ ಬಂದರು ಮತ್ತು ಗೌನ, ಖಡ್ಗ ಮುತ್ತುಗಳಿಂದ ಅಲಂಕೃತವಾದ ಕಿರುಗತ್ತಿ, ಐಲಾಖಾ, ಸುವರ್ಣಾಲಂಕಾರದ ಹೊದಿಕೆಯುಳ್ಳ ಕುದುರೆ ಮತ್ತು ೬೦೦೦/೬೦೦೦ ಜಾಟ್ ಮತ್ತು ಸವಾರವುಳ್ಳ ಹುದ್ದೆಯನ್ನು ಸ್ವೀಕರಿಸಿದರು. ಮೊದಲನೆಯವನು ದಿಲಿರ್ ಖಾನ ಮತ್ತು ಎರಡನೆಯವನು ರುಸ್ತುಮ ಖಾನ ಎಂಬ ಬಿರುದು ಪಡೆದರು.

೧೩. "ಸಾಮ್ರಾಜ್ಯದ ಯೋಧರು ಎರಡು ತಿಂಗಳು ಹನ್ನೆರಡು ದಿನಗಳಲ್ಲಿ ಶತ್ರುವನ್ನು ನಾಶಪಡಿಸಲು ಬೇಕಾದ ಎಲ್ಲವನ್ನೂ ಸಂಗ್ರಹಿಸಿದ್ದರಿಂದ ಸಿಕಂದರನು ಮತ್ತು ಅವನ ಸಂಗಾತಿಗಳು ತಮ್ಮ ಸಾವು ಸನ್ನಿಹಿತವಾಗಿದ್ದನ್ನು ಕಂಡು ತಮ್ಮ ತಪ್ಪುಗಳನ್ನು ಕ್ಷಮಿಸಲು ಬೇಡಿಕೊಳ್ಳುತ್ತ ಕರುಣೆಗಾಗಿ ಹಲುಬಿದರು. ರವಿವಾರ ೪ ಝಿಲ್ ಕ್ಯೂ ಎ.ಎಚ್. ೧೦೯೭,ರ ದಿನ ಕೋಟೆಯನ್ನು ಅಲಂಗೀರ ಕೈವಶಮಾಡಿಕೊಂಡನು. ದೇಶದ ಎಲ್ಲ ಜನರು, ಮೇಲ್ವರ್ಗದವರು ಕೆಳವರ್ಗದವರೆಲ್ಲರೂ ಸಾಮ್ರಾಟನ ಆಳಿಕೆಗೆ ಒಳಪಟ್ಟಿದ್ದರಿಂದ ಸಂತಸಪಟ್ಟರು.

೧೪. "೧೧ ಸಪ್ಟಂಬರ್ ೧೬೮೬ ರಂದು ವಿಜಾಪುರದ ಸಿಕಂದರ ಆದಿಲ್ ಶಾಹನ ಕಡೆಯಿಂದ ಅಬ್ದುಲ್ ರೌಫ್ ಖಾನನು ಬಂದು ಫಿರೋಜ ಜಂಗನಿಗೆ ಭೆಟ್ಟಿಯಾದನು ಮತ್ತು ಮುಘಲ್ ಶಾಂತಿ ಒಪ್ಪಂದದ ಶರತ್‌ಗಳನ್ನು ತೀರ್ಮಾನಿಸಿದನು"– ಬಸಾತಿನ್ ೬೦೭.

೧೫. "ಸಾಮ್ರಾಟನ ಕ್ರೋಧಕ್ಕೀಡಾಗದ ಹಾಗೆ ಸಿಕಂದರನು ಕ್ಷಮೆಗಾಗಿ ಸಲ್ಲಿಸಿದ ಪ್ರಾರ್ಥನೆಯನ್ನು ಚಕ್ರವರ್ತಿಯವರು ಕರುಣೆಯಿಂದ ಸ್ವೀಕರಿಸಿದರು. ಸಾರ್ವಜನಿಕ ಸಭಾಗೃಹದಲ್ಲಿ ಆತನಿಗೆ ಭೇಟಿ ನೀಡಲಾಯಿತು. ಆತನಿಗೆ ವಿಶೇಷ ನಿಲುವಂಗಿಯನ್ನು, ಮುತ್ತಿನಿಂದ ಅಲಂಕೃತವಾದ ಕಿರುಗತ್ತಿಯನ್ನು, ಇತಾಕಾ ಮತ್ತು ೭೦೦ ರೂ. ಬೆಲೆಯುಳ್ಳ ಫುಲ್ ಕತಾರಾ, ರೂ.೧೩೦೦೦ ಬೆಲೆಯ ಪಚ್ಚೆ ಮಣಿ ಲೋಲಕದಿಂದ ಕೂಡಿದ ಒಂದು ಮುತ್ತಿನ ಕಂಠಹಾರವನ್ನು, ಆಭರಣಭೂಷಿತ ಕಾಲ್ಗಿಯನ್ನು ಮತ್ತು ಆಭರಣಾಲಂಕೃತ ಅಸಾವನ್ನು ನೀಡಲಾಯಿತು. ಸಿಕಂದರ ಖಾನ ಎಂಬ ಬಿರುದನ್ನು ಮತ್ತು ಒಂದು ಲಕ್ಷ ರೂಪಾಯಿಗಳ ವಾರ್ಷಿಕ ಪಿಂಚಣಿಯನ್ನು ಕೊಡಲಾಯಿತು. ಗುಲಾಲಬಾರ ದಲ್ಲಿ ಅವನ ವಾಸಕ್ಕಾಗಿ ಶಿಬಿರ ಹಾಕಲಾಯಿತು. ಮತ್ತು ಎಲ್ಲ ಅವಶ್ಯಕ ವಸ್ತುಗಳನ್ನು ಪೂರೈಸಲಾಯಿತು. ಸಿಕಂದರ ಬೇಗನು ಸಿಕಂದರ ಖಾನ ಎಂಬ ಬಿರುದನ್ನು ಹೊಂದಿದ್ದರಿಂದ ಅವನ ಹೆಸರಿಗೆ ಅಲಿಫ ಅಕ್ಷರವನ್ನು ಜೋಡಿಸಲಾಯಿತು. (ಉದಾ – ಇಸ್ಕಂದರಖಾನ). ಎಲ್ಲ ವಿಜಾಪುರದ ಅಧಿಕಾರಿಗಳನ್ನು ಸಾಮ್ರಾಜ್ಯ ಸೇನೆಗೆ ಸೇರಿಸಲಾಯಿತು. ವಿಜಾಪುರ ಕೋಟೆಯನ್ನು ಸಿಕಂದರನು ೧೨ ಸಪ್ಟಂಬರ ೧೬೮೬ ರಂದು ಚಕ್ರವರ್ತಿಗೆ ಒಪ್ಪಿಸಿದನು. ಬಸಾತಿನ ೬೦೭; ಜೆಧೆ (೫೫.೭೩೦ ನೋಡಿರಿ ಕೆ.ಕೆ.೨, ೩೨೩, ಭೀಮಸೇನ ೨, ೧೦೧೬.

೧೬. ಶನಿವಾರ ೨೨ ಝಿಲ್ ಎಚ್.ಎ.ಎಚ್.೧೦೯೨ (೩೦ ಅಕ್ಟೋಬರ್ ೧೬೮೬) ರಂದು ಸಾಮ್ರಾಟನು ವಿಜಾಪುರ ಬಿಟ್ಟನು ಮತ್ತು ಮಂಗಳವಾರ ೨೫ ಝಿಲ್ ಹಿಜ್ (೨ ನವಂಬರ ದಂದು) ಸೋಲಾಪುರ ತಲುಪಿದನು. ಸಿಕಂದರನ ಮಾಹಿಮರತಿಬ ಕೊಡೆ ಮತ್ತು ಇನ್ನಿತರ

ರಾಜಲಾಂಛನಗಳನ್ನು ಉಗ್ರಾಣ ಕೊಠಡಿಯಲ್ಲಿರಿಸಲು ಆಜ್ಞೆ ಮಾಡಿದನು. ಎಂ.ಎ.೨೮೪.

೧೭. ಸಾಮ್ರಾಟನು ವಿಜಾಪುರ ಕೋಟೆಯನ್ನು ೧೪ ಸಪ್ಟಂಬರ ೧೬೮೬ ರಂದು ಪ್ರವೇಶಿಸಿದನು. ಬಸಾತಿನ ೬೦೮; ಎಂ.ಎ.೨೮೪.

೧೮. ದಿಲಕುಶಾ ೨.

೧೯. ದಿಲ್‌ಕುಶಾ ೨, ೨೦೨ ಬಸಾತಿನ್, ೩೦೭–೮; ಮುಹಮ್ಮದ ನಾಮಾ (ಅನು. ಬಿ.ಡಿ.ವರ್ಮಾ) ಶಿವಾಜಿ ನಿಬಂಧವಾಲಿ (ಪುಣೆ, ೧೯೩೧) ೮೨–೮೩.

೨೦. ಆದಿಲ್ ಶಾಹ ೧೬೫೬ ನವೆಂಬರದಲ್ಲಿ ತೀರಿಕೊಂಡಾಗ ಅವನ ರಾಜ್ಯದ ವಾರ್ಷಿಕ ಆದಾಯ ಏಳು ಕೋಟಿ ಎಂಬತ್ತು ನಾಲ್ಕು ಲಕ್ಷ ರೂಪಾಯಿ ಇದ್ದಿತಲ್ಲದೆ ಮಾಂಡಲಿಕರು ಮತ್ತು ಜಮೀನುದಾರರಿಂದ ಕಾಣಿಕೆಯಾಗಿ ೫೧/೪ ಕೋಟಿ ಬರುತ್ತಿತ್ತು. ಭೀಮಸೇನವನ್ನೂ ನೋಡಿರಿ.

೨೧. ಸಾಕಿಲನು ಹೆಚ್ಚಿನ ವಿವರ ಕೊಡುತ್ತಾನೆ (೨೨) "೧೭ ಝಿಲ್ ಕ್ಯೂ ಎ.ಎಚ್.೧೦೯೭ (ಸಪ್ಟಂಬರ್ ೨೫, ೧೬೮೭) ದಿನದಂದು ಸಾಮ್ರಾಟನು ಸಿಕಂದರನನ್ನು ತನ್ನ ಸನ್ನಿಧಿಗೆ ಕರೆಸಿದನು. ಕರುಣೆಯಿಂದ ಕೆಳಗೆ ಕೂಡಲು ಹೇಳಿ ವಜ್ರಕಿರೀಟ ನೀಡಿ ಮೂರು ವೀಳೆದೆಲೆ ಪೊಟ್ಟಣಗಳನ್ನು ಕೊಟ್ಟನು. ಆ ಬಳಿಕ ರುಹುಲ್ಲಾ ಖಾನನನ್ನು ವಿಜಾಪುರದ ನಜಿಮ್ ನನ್ನಾಗಿ ನೇಮಿಸಲಾಯಿತು. ಮತ್ತು ಆ ಹುದ್ದೆಯನ್ನು ದಾರುಲ್ ಝುಫರ್ ಎಂದು ಕರೆಯಲಾಯಿತು. ಒಂದು ಹಜಾರಿ ಜಾಟ್ ಮತ್ತು ಸವಾರರನ್ನು ಹೆಚ್ಚಿಸಿ ಆತನನ್ನು ಐದು ಹಜಾರಿಯನ್ನಾಗಿ ಮಾಡಲಾಯಿತು. ಅಜಿಜ ಉಲ್ಲಾಹ ಖಾನ ಕೋಟೆಯ ಸೈನ್ಯಾಧಿಕಾರಿಯಾಗಿ ಮುಹಮ್ಮದ ರಫಿ ದಿವಾನನಾಗಿ ನಿಯಮಿಸಲ್ಪಟ್ಟರು; ಸಾದಾತ್ ಖಾನ ಬಕ್ಷ ವಾರ್ತಾ ಬರಹಗಾರನಾದನು; ಸಿದಿ ಇಬ್ರಾಹಿಮ ಕೊತ್ವಾಲ ಫೌಜದಾರನಾದನು. ಹಾಜಿ ಮುಕಿಮ ಫಿರಂಗಿ ದಳದ ದರೋಗನಾದರೆ, ಝೈನ್–ಉಲ್–ಅಬಿದಿನ ಮತ್ತು ಮುಹಮ್ಮದ್ ಜಾಫರ ಇವರು ಸೈನಿಕರಿಗೆ ಲಾಂಛನ ಒತ್ತುವುದು ಹಾಗೂ ಪರಿಶೀಲಿಸುವ ಅಧಿಕಾರಿಗಳಾದರು, ಅಬ್ದುಲ್ ಬರ್ಕಾತ್ ಖಾಜಿ ಮತ್ತು ಮುಹಮ್ಮದ್ ಅಫಜಾ ಇವರು ಸರಕಾರಿ ಮಾಹಿತಿ ಪತ್ರಗಳ ಪೂರ್ವ ಪರೀಕ್ಷಾಧಿಕಾರಿಗಳಾದರು" ಅಲ್ಲೇ, ೨೮೨.

೨೩. "ಶನಿವಾರ, ೨೨ ಝಿಲ್ ಎಚ್.ಎ.ಎಚ್.೧೦೯೭ ರಂದು (ಅಕ್ಟೋಬರ್ ೩೦, ೧೬೮೭) ಸಾಮ್ರಾಟನು ವಿಜಾಪುರವನ್ನು ಬಿಟ್ಟು ಮಂಗಳವಾರ ೨೫ ಝಿಲ್. ಎಚ್ (ನವಂಬರ್ ೨) ರಂದು ಸೋಲಾಪುರ ತಲುಪಿದನು" ಎಂ.ಎ.೨೮೪.

೨೪. ಉಳಿದ ಐತಿಹಾಸಿಕ ದಾಖಲೆಗಳು ಈ ವಿಷಯ ಕುರಿತು ಮೌನವಾಗಿವೆ.

೨೫. ಈಶ್ವರನದಾಸನು ಈ ವಿವಾಹಕ್ಕೆ ಸಂಬಂಧಿಸಿ ಕಣ್ಣುಕಟ್ಟುವಂತೆ ವಿವರ ನೀಡುತ್ತಾನೆ. ರವಿವಾರ ಮುಹರಾಮದ ೧೫ ನೇ ದಿನ, ಎ.ಎಚ್., ೧೦೯೭ (ನವೆಂಬರ್ ೬, ೧೬೮೭) ರಾಜಕುಮಾರ ಬೀದರ ಬಖ್ತನು ಮುಖ್ತಾರ ಖಾನನ ಮಗಳನ್ನು ಮದುವೆಯಾದನು. ಖಾಜಿ ಅಬ್ದುಲ್ಲಾ ವಿವಾಹವನ್ನು ಘೋಷಿಸಿದನು. ಹಾಗೆಯೇ ನೋಡಿ.

೨೬. ಈ ಕೋಟೆಗಳು ಕೈವಶವಾದ ವರ್ಷವನ್ನು ಈಶ್ವರದಾಸನು ಹೇಳಿಲ್ಲ. ಎರಡನೆಯದಾಗಿ ಈ ವಿಜಯವನ್ನು ವಿಜಾಪುರ ಮತ್ತು ಗೋಲಕೊಂಡ ಕೋಟೆಗಳ ವಿಜಯದ ನಂತರ ನಮೂದಿಸುತ್ತಾನೆ. ಸಾಖಿ ಹೇಳುತ್ತಾನೆ. ಶನಿವಾರ ೨೨ ಝಿಲ್ ಎಚ್.ಎ.ಎಚ್.೧೦೮೭ (೩೦ ಅಕ್ಟೋಬರ್ ೧೬೮೭) ರಂದು ಹೈದರಾಬಾದದಲ್ಲಿರುವ ಇಬ್ರಾಹಿಮಗಡನ್ನು ಕೈವಶಮಾಡಿಕೊಳ್ಳಲು ಫಿರೋಜ ಜಂಗನನ್ನು ಕಳಿಸಲಾಗಿತ್ತು, ಅವನು ಮುಂದೆ ಹೇಳುವುದೇನೆಂದರೆ "ಆ ಕೆಲಸವನ್ನು ಸಾಧಿಸಿದ ಬಳಿಕ ಹೈದರಾಬಾದದ ಮೇಲೇ ಹಾಯ್ದು ಫಿರೋಜ ಜಂಗನು ಆಸ್ಥಾನಕ್ಕೆ ಧಾವಿಸಿದನು. ಅವನು ೨೦ ರಬ ೧, ಎ.ಎಚ್.೧೯೯೭ (ಜನೆವರಿ ೧೬೮೭) ರಂದು ಆಸ್ಥಾನಕ್ಕೆ ತಲುಪಿದನು".

೨೭. ಡಿಸೆಂಬರ್ ೧೬೮೬ ಮತ್ತು ಮತ್ತೆ ಫೆಬ್ರುವರಿ ೨೫, ೧೬೮೧ ರಂದು ಗುಲ್ಬರ್ಗಾಕ್ಕೆ ಹೋದನು. ವಿವರಗಳಿಗಾಗಿ ಅದೇ ಆಕರ ೨೮೭ ನೋಡಿರಿ.

೨೮. ಅವನು ಫೆ ೭ ೧೬೮೭ ರಂದು ಬಿಡಾರ ಹೂಡಿದನು. ಅಲ್ಲೇ ನೋಡಿ ೨೮೮.

೨೯. ಈಶ್ವರದಾಸನು ಸಾಮ್ರಾಟನು ಬೀದರಕ್ಕೆ ಎರಡು ಬಾರಿ ಭೆಟ್ಟಿಯಿತ್ತಿದ್ದನ್ನು ನಮೂದಿಸಿದ್ದಾನೆ. (ಡಿ.೧೬೮೬ ಮತ್ತು ಪುನಃ ಫೆ ೭ ೧೬೮೮).

೩೦. ೧೬೮೭ ಮೇದಲ್ಲಿ ಅದನ್ನು ಕೈವಶಪಡಿಸಿಕೊಳ್ಳಲಾಯಿತು.

೩೧. ೧೬೮೫ ಎಪ್ರಿಲ್ ೧೨ ರಂದು "ಅಕಬರನ ಗುಲಾಮನೊಬ್ಬನು ಎರಡು ಕುದುರೆಗಳ ಕಾಣಿಕೆಗಳೊಡನೆ ಸಾಮ್ರಾಟನ ಹತ್ತಿರ ಬಂದನು. ಆದರೆ ಅವನಿಗೆ ಭೆಟ್ಟಿಯನ್ನು ನಿರಾಕರಿಸಿ ಝಿನತ್-ಉನ್-ನಿಸಾ ಬೇಗಮಳೊಡನೆ ಮಾತಾಡಬೇಕೆಂದು ಕಳಿಸಲಾಯಿತು."

೩೨. ಮಾಹುಲಿ ಕೋಟೆ ಮುಂಬಯಿಯ ಈಶಾನ್ಯಕ್ಕೆ ೫೦ ಮೈಲು ದೂರದಲ್ಲಿ ಇರುವ ಠಾಣಾ ಜಿಲ್ಲೆಯಲ್ಲಿ ಶೋಲಾಪುರ ಹತ್ತಿರ ಇದೆ.

೩೩. ಶಾಹ ಅಲಂನ ಬಂಧನ ಕುರಿತು ಸಾಕಿ ಮತ್ತು ಕಾಫಿಖಾನ ಬೇರೆ ಬೇರೆ ಕಾರಣಗಳನ್ನು ಕೊಡುತ್ತಾರೆ. ನೋಡಿ. ಎಂ.ಎ.೨೯೩-೨೯೫; ಎಂ.ಎಲ್.೨, ೩೩೦-೩೦೪; 'ದಿಲ್ ಕುಶಾ', ೨೦೭ (ಕೇವಲ ಐದು ಸಲ) ಹಮೀದ ಉದ್ ದಿನ ನ 'ಅಹಕಂ' ೯, ಸ್ಟೋರಿಯಾ, ೨, ೩೦೨-೩೦೪, ತಾರೀಖು ೨೧ ಫೆಬ್ರವರಿ ೧೬೮೭.

೩೪. "ಸೈನ್ಯದ ನಾಯಕ ಅಸುಜೀ ದಖನಿ ಎಂಬವನಿದ್ದನು" ಎಂ.ಎ.೨೯೭ (ಈ ವಿಷಯ ಕುರಿತು ಅಲ್ಪ ಪ್ರಮಾಣದ ವಿವರವಿದೆ).

೩೫. ಶಾಹ ಅಲಂನನ್ನು ಸೆರೆಯಲ್ಲಿಟ್ಟ ಬಳಿಕ (ಇದು ಘಟಿಸಿದ್ದು ಫೆಬ್ರವರಿ ೧೬೮೭) ರಲ್ಲಿ) ಅಕ್ಬರನು ಹಿಂದುಸ್ತಾನದಿಂದ ಹೊರಟು ಹೋದನೆಂದು ಈಶ್ವರದಾಸ ದಾಖಲಿಸುತ್ತಾನೆ. ಜೆಧೆ ಶಕಾವಲಿಯು ಹೇಳುವಂತೆ ಅಕ್ಬರನು ಪರ್ಶಿಯಕ್ಕೆ ಹಡಗದ ಮೂಲಕ ಫಾಲ್ಗುಣ ಶಕೆ ೧೬೦೮ (ಫೆಬ್ರುವರಿ ೧೬೮೭) ರಲ್ಲಿ ತೆರಳಿದನು. ಕೆಂಪೊ (ಒರ‍್ಮೆಜ ಫ್ರಾಗ್ಮೆಂಟ್ಸ ಉದ್ಧರಿಸುವಂತೆ ೨೯೨) ಇದನ್ನು ಸಮರ್ಥಿಸುತ್ತಾನೆ. ಅವನು ಹೇಳುವುದು ಹೀಗೆ, "ಪರ್ಶಿಯಾದ ಗಡಿಗೆ

ಹೊಂದಿರುವಂತ ಅರೇಬಿಯಾದ ಭಾಗಕ್ಕೆ ೧೬೮೭ ಆರಂಭದಲ್ಲಿ ಬಂದಿಳಿದನು. ಮತ್ತು ೧೬೮೮ ಜನವರಿ ೨೪ರ ದಿನ ಇಸ್ಫಾಹನಕ್ಕೆ ತಲುಪಿದನು". ಓರ್ಮೆನ್ ಹೇಳಿಕೆಯಂತೆ (ಪ್ರಾಗ೧೪೯) ಅಕ್ಬರ ೧೬೮೬ ರಲ್ಲಿ ಮಳೆಗಾಲ ಬದಲಿಯಾದೊಡನೆಯೆ ಅಕ್ಬರನು ರಾಜಾಪುರದಲ್ಲಿ ಹಡಗು ಹತ್ತಿದನು. ಮತ್ತು ನವಂಬರದಲ್ಲಿ ಮುಸ್ಕೆಟ್‌ಕ್ಕೆ ಬಂದನು. ೨೯ ಸಪ್ಟಂಬರ ೧೬೮೭ ರ ಓ.ಸಿ. ೫೬೨೧, 'ಮದ್ರಾಸ ಟು ಸುರತ್' ದಾಖಲಿಸುತ್ತದೆ. " ಕಾಲಿಕಟ್‌ದ ಮಿ ಡೊಬ್ಸನ್ ಭರವಸೆಯೊಂದಿಗೆ ಹೇಳುವುದೆಂದರೆ ಸುಲ್ತಾನ್ ಅಕ್ಬರನನ್ನು ಕೊನೆಯ ಬಾರಿಗೆ ನವಂಬರದಲ್ಲಿ ಮುಸ್ಕೇಟದಲ್ಲಿ ನೋಡಿದ್ದಲ್ಲದೆ ಆತನು ತನ್ನ ಪರಿವಾರದೊಂದಿಗೆ ಪರ್ಶಿಯಾಕ್ಕೆ ಹೋಗಲು ಅಣಿಯಾಗಿದ್ದನು". ಸ್ಪಷ್ಟವಾಗಿ ಈ ಹೇಳಿಕೆಯ ಮೇಲೆ ಓರ್ಮೆನ ಹೇಳಿಕೆ ಆಧಾರಿತವಾಗಿದೆ. ಇಲ್ಲಿ ಹೇಳಿದ ತಿಂಗಳು ತಪ್ಪಾಗಿರಲೇ ಬೇಕು. ಪರ್ಶಿಯಾದಲ್ಲಿಯ ಅಕ್ಬರನ ಜೀವನದ ಸಂಪೂರ್ಣ ವಿವರವನ್ನು ನೋಡಿರಿ. ಕೆ.ಕೆ.೨, ೨೮೬-೨೯೦, ೪೫೦, ೫೪೬, ಸ್ಟೋರಿಯಾ, ೨, ೨೭೯, ೩೨೨; ರುಗತ ನಂ.೯೫: ಎಂ.ಎ.೪೮೪ (ಎಎನ್ ೩, ೦೪, ೨೭೭ (೩)).

೩೬. ದುರ್ಜನ ಸಿಂಘ ಹಾಡಾ ಬುಂದಿಯನ್ನು ಮುತ್ತಿಗೆ ಹಾಕಿ ಕೈವಶಮಾಡಿಕೊಂಡಿದ್ದಾನೆ ಎನ್ನುವುದು ಸಾಮ್ರಾಟನಿಗೆ ೨೧ ಎಪ್ರಿಲ್ ೧೬೮೩ ರಂದು ತಿಳಿಯಿತು. ಅದರಂತೆಯೆ ಮುಘಲ್ ಖಾನನಿಂದ ೧೩ ಅಗಸ್ಟರಂದು ಬಂದ ಓಲೆಯ ಪ್ರಕಾರ ಆತನು (ಖಾನನು) ಮಿಂಚಿನಂತೆ ಬುಂದಿಯ ಮೇಲೆ ದಾಳಿ ಮಾಡಿ ಒಂಬತ್ತು ಗಂಟೆಗಳ ಕಾಲ ಹೋರಾಡಿ, ಅನಿರುದ್ಧನು ಸಾಮ್ರಾಟ ಸೇನೆಯೊಡನೆ ನಗರ ಪ್ರವೇಶ ಮಾಡುತ್ತಿರಲಾಗಿ, ದುರ್ಜನನನ್ನು ಅಲ್ಲಿಂದ ಓಡಿಸಿದನು.

೩೭. ಬುಧವಾರ ೧ನೇ ದಿನ ರಬಿಯಸ್ ಸಾನಿ, ೧.೧೧.೧೦೯೮ ರಂದು (೨೫.ಜ.೧೬೮೮) ಸಾಮ್ರಾಟನು ವಿಜಾಪುರಕ್ಕೆ ಹೊರಟನು. ಅಲ್ಲೇ ೩೦೮.

೩೮. ಕೃಷ್ಣಾನದಿಯಿಂದ ಕಾಲುವೆ ತೋಡಿ ನಗರಕ್ಕೆ ನೀರು ಬರುವಂತೆ ಮಾಡಲು ಮುಖಾಲಖಾನನಿಗೆ ಆಜ್ಞಾಪಿಸಲಾಯಿತು.

೩೯. ಮಸೂರ ಹಬಶಿಯಾದ ಆಧೋತಿ ಕೋಟೆಯನ್ನು ವಶಪಡಿಸಿಕೊಳ್ಳಲು ಖಾನ ಬಹಾದೂರ ಫಿರೋಜ ಜಂಗನನ್ನು ಒಂದು ಶುಭ ಮುಹೂರ್ತದಲ್ಲಿ ನೇಮಿಸಲಾಯಿತು. ರಾಜಾ ಘುಲಾಮನ ತಂದೆಯ ಗುಲಾಮನಾಗಿದ್ದ ಹಬಶಿ ಈ ರಾಜ ಮನೆತನ ರಾಜಕೀಯ ವಿಪ್ಲವದ ಕಾಲದಲ್ಲಿ ಎಲ್ಲ ವಿದ್ಯಮಾನಗಳ ಪರಮಾಧಿಕಾರವನ್ನು ಚಲಾಯಿಸುತ್ತ, ಕೃತಘ್ನವಾಗಿ ತನ್ನ ಒಡೆಯನ ಪುತ್ರನಿಂದ ಎಲ್ಲವನ್ನೂ ಕಿತ್ತುಕೊಂಡು, ಕೇವಲ ಹೆಸರಿಗೆ ಅವನನ್ನು ರಾಜನನ್ನಾಗಿರಿಸಿ, ವಿಶೇಷ ಬೆಲೆಯುಳ್ಳ ವಸ್ತುಗಳನ್ನು ಮತ್ತು ಅಮೂಲ್ಯ ಆಭರಣಗಳನ್ನು ಒಳಗೊಂಡಿದ್ದ ಭದ್ರಕೋಟೆಯ ಮುಖ್ಯ ಖಜಾನೆಯನ್ನು ಕೊಳ್ಳೆ ಹೊಡೆದು ಎಲ್ಲವನ್ನೂ ಸಾಗಿಸಿದ್ದನು. ೨೫೦೦೦ ಸೈನಿಕ ಬಲದೊಂದಿಗೆ ಖಾನನನ್ನು ಕಳಿಸಲಾಯಿತು.

೪೦. ಇಲ್ಲಿ ಕವನದ ಪಂಕ್ತಿಯೊಂದನ್ನು ಬಿಡಲಾಗಿದೆ. ಘೋ: ೧೨೫೬ ಇದನ್ನು ನೋಡಿ.

೪೧. ಮಸೂದನ ಮನವಿಯನ್ನು ಸ್ವೀಕರಿಸಿ ಅವನಿಗೆ ಸಾಮ್ರಾಟನು ಬರೆದ ಪತ್ರವನ್ನು ಎ.ಎಸ್.ಬಿ.ಎಫ್. ೫೬, ೧೨೮ ಮತ್ತು ಅಸಾಫಿಯಾ ಲೈಬ್ರರಿಯ ಹಸ್ತಪ್ರತಿಯಲ್ಲಿ ದಾಖಲಿಸಲಾಗಿದೆ.

೪೨. ಈಶ್ವರದಾಸನ ವಿವರಣೆ ಉತ್ಕೃಷ್ಟವಾಗಿದೆ. ಸಾಕಿ ಕೇವಲ ಸ್ವಲ್ಪ ಮಾಹಿತಿ ಕೊಡುತ್ತಾನೆ. ಎಂ.ಎ.೩೦೮, ೩೧೫-೩೧೬, ಕೆ.ಕೆ.೨, ೩೭೨ ಮತ್ತು ಭೀಮಸೇನ, ೨, ೯೬ಎ (೬ ಆಗಸ್ಟ್ ೧೬೮೮ ರ ದಿನ ಅದು ಕೈವಶವಾಯಿತು).

■

*

ಬೆಂಗಳೂರು ಕೋಟೆಯ ವಿಜಯ

ಸಾಮ್ರಾಟನ ಸುದೈವಕ್ಕೆ ಒದಗಿ ಬಂದ ಮಹತ್ವದ ಘಟನೆಯೆಂದರೆ ಬೆಂಗಳೂರು ಕೋಟೆಯನ್ನು ಗೆದ್ದದ್ದು. ಆ ಗೆಲುವಿನ ವಿವರಗಳು ಕೆಳಗಿನಂತಿವೆ. ಕರ್ನಾಟಕದ ಕೋಟೆಗಳಲ್ಲೆಲ್ಲ ಎತ್ತರಕ್ಕೆ ಮತ್ತು ಭದ್ರತೆಗೆ ಇದು ಸುಪ್ರಸಿದ್ಧವಾಗಿತ್ತು. ಈ ಕೋಟೆಯ ಸೇನಾಪತಿ ಸಿದಿ ಖಾನ ಮುಹಮ್ಮದ ತನ್ನ ಶೌರ್ಯಕ್ಕೆ ಮತ್ತು ಪ್ರತಾಪ ಸಾಧನೆಗಳಿಗೆ ಸುತ್ತೆಲ್ಲ ಪ್ರಸಿದ್ಧಿ ಹೊಂದಿದ್ದನು. ಅಲಿ ಆದಿಲ್ ಶಾಹಿಯಿಂದ ಪಾಲನೆ ಪೋಷಣೆಗೊಂಡ ಇವನು ಸಿರಿವಂತನೂ, ಸುಖಿಯೂ ಆಗಿದ್ದನು. ಬಹು ಬೇಗನೆ ದಕ್ಷಿಣ ಭಾರತದಲ್ಲಿಯೇ ಮಂಚೂಣಿಯ ಸರದಾರನಾಗಿದ್ದನು. ೧೦೦೦೦ ದಿಂದ ೧೨೦೦೦ ಅನುಭವಿಕ ವೀರ ಕುದುರೆ ಸವಾರರು ಈತನ ಕೈಯಲ್ಲಿದ್ದರು. ಅಲಿ ಆದಿಲ್ ಶಾಹಿ ಇವನನ್ನು ತನ್ನ ಮಗನೆಂದು ಸ್ವೀಕರಿಸಿದ್ದನು. ಸಾಮ್ರಾಜ್ಯದ ಅಧಿಕಾರಿಗಳು ಕರ್ನಾಟಕ ಪ್ರದೇಶವನ್ನು ಸ್ವಾಧೀನಪಡಿಸಿಕೊಂಡ ಬಳಿಕ ಪ್ರಮುಖ ಸರದಾರರಾದ ಝುಲ್ಫಿಕರ ಖಾನ ಬಹಾದೂರ ಘಾಜಿ–ಉದ್–ಖಾನ ಬಹಾದೂರ ಮತ್ತು ಕಾಶಿಮ ಖಾನ ಮುಂತಾದವರ ನೇತೃತ್ವದಲ್ಲಿ ಅದರ ಆಡಳಿತಕ್ಕಾಗಿ ಬಹು ದೊಡ್ಡ ಸೈನ್ಯವನ್ನು ಕಳಿಸಲಾಯಿತು.

ಸಾಮ್ರಾಟನ ವಿಜೇತ ಸೇನೆ ಅಲ್ಲಿ ತಲುಪಿದೊಡನೆ ಅದರ (ಬೆಂಗಳೂರಿನ) ದಂಡನಾಯಕ ಸಿದಿ ಮುಹಮ್ಮದನು ಝುಲ್ಫಿಕಾರ ಖಾನನಿಗೆ ಸಂದೇಶ ಕಳಿಸಿದನು, "ಸಾಮ್ರಾಟನು ನನ್ನನ್ನು ಕರುಣೆಯಿಂದ ಕಂಡರೆ ಮತ್ತು ನನ್ನ ತಪ್ಪುಗಳನ್ನು ಕ್ಷಮಿಸಿದರೆ, ಅವರ ಉನ್ನತ ಹೊಸ್ತಿಲಕಡೆಗೆ (ಸ್ಥಾನದೆಡೆಗೆ) ಮುಖಮಾಡಿಕೊಂಡು ಅವರ ಸಾಮ್ರಾಜ್ಯ ಸೇವೆಗೆ ಸೇರುವೆ ಮತ್ತು ಬೆಂಗಳೂರು ಕೋಟೆನ್ನು ಅದರ ಅಧೀನ ಪ್ರಾಂತ್ಯಗಳೊಡನೆ ಸಾಮ್ರಾಜ್ಯದ ಅಧಿಕಾರಿಗಳಿಗೆ ಒಪ್ಪಿಸುವೆ". ಆ ಪ್ರಕಾರ ಸಿದಿ ಮುಹಮ್ಮದನ ಬಯಕೆಯನ್ನು ತಿಳಿಸುವ ಪತ್ರವನ್ನು ಖಾನನು ಮಹಾಪ್ರಭುವಿಗೆ ಕಳಿಸಿದನು. ಸಾಮ್ರಾಟನ ಉನ್ನತ ಸನ್ನಿಧಿಗೆ ಆ ಮನವಿಯನ್ನು ಸಾದರಪಡಿಸಲು ಅದು ಸ್ವೀಕೃತವಾಯಿತು. ಸಿದಿಯೊಡನೆ ಮಾಡಿಕೊಂಡ ಒಪ್ಪಂದದಿಂದ ತೃಪ್ತನಾದ ಖಾನನು ಬಾಧೂರದ ದಾಲ–ಖೋ–

ಠಾಣೆಯೊಡನೆ ಮಾತುಕತೆಯಲ್ಲಿ ತೊಡಗಿದ್ದರಿಂದ ಆರು ತಿಂಗಳು ಕಾಲ ಅದೇ ಪ್ರದೇಶದಲ್ಲಿ ಉಳಿದುಕೊಂಡನು. ತತ್ಪರಿಣಾಮವಾಗಿ ರಾಣೆಯು ತನ್ನ ಸ್ವಾಮಿನಿಷ್ಠೆಯನ್ನು ಸಾಮ್ರಾಟನೆಡೆಗೆ ಬದಲಿಸಲಾಗಿ ಅಲ್ಲಿಯ ಆಡಳಿತವನ್ನು ಸುಧಾರಿಸಿ ಅಲ್ಲಿಂದ ಮರಳಿದನು. ಆದರೆ ಕೆಲವು ಕೆಲಸವಿಲ್ಲದ ಉಡಾಳ ವ್ಯಕ್ತಿಗಳಿಂದಾಗಿ ಕೆಟ್ಟು ಹೋಗಿ ಸಿಡಿ ಸಾಮ್ರಾಟನ ಸ್ವಾಮಿನಿಷ್ಠೆ ಮತ್ತು ನಂಬಿಗೆಯಿಂದ ದೂರಾದನು. ತಾನು ಮಾಡಿಕೊಂಡಿದ್ದ ಒಪ್ಪಂದವನ್ನು ಧಿಕ್ಕರಿಸಿ ಮುರಿದು ಹಾಕಿ ಬೆಂಗಳೂರು ಕೋಟೆಯನ್ನು ಭದ್ರಪಡಿಸುತ್ತ ಹೋರಾಟಕ್ಕೆ ಸಿದ್ಧನಾದನು. ಈ ರೀತಿಯಾಗಿ ಆತನ ದುಷ್ಟ ಉದ್ದೇಶ ಸ್ಪಷ್ಟವಾಯಿತು. ಶಸ್ತ್ರಾಸ್ತ್ರಗಳಿಂದ ಸಂಪೂರ್ಣ ಸನ್ನದ್ಧನಾಗಿ ಹೋರಾಟಕ್ಕೆ ಸಿದ್ಧನಾದನು. ಸ್ವಲ್ಪದರಲ್ಲಿ ಹೇಳುವುದಾದರೆ ಸನ್ನಿವೇಶ ಈ ತಿರುವು ಪಡೆದಿದ್ದರಿಂದ ಮೇಲೆ ಹೇಳಿದ ಖಾನ ಮತ್ತು ಘಾಜಿ-ಉದ್-ದಿನ ಖಾನ ಇವರು ಕೋಟೆಯನ್ನು ವಶಪಡಿಸಿಕೊಳ್ಳಲು ಮತ್ತು ಬಂಡುಕೋರನನ್ನು ಕಠಿಣವಾಗಿ ದಂಡಿಸಲು ನಿರ್ಧರಿಸಿದರು. ಕೋಟೆಯಿಂದ ಎಂಟು ಕರೋಹ ಅಂತರದಲ್ಲಿ ಠಾಣ್ಯ ಹಾಕಿದರು. ಸಿದಿಯ ಮೋಸವನ್ನು ಮತ್ತು ಒಪ್ಪಂದದ ಉಲ್ಲಂಘನೆಯನ್ನು ತಿಳಿಸುವ ಓಲೆಯೊಂದನ್ನು ಅವರು (ಸಾಮ್ರಾಟನಿಗೆ) ಕಳಿಸಿದರು. ಈ ವಿಷಯವನ್ನು ವಿವರಿಸಿದಾಗ ಸಾಮ್ರಾಟನು ಬಂಡುಕೋರನನ್ನು ಶಿಕ್ಷಿಸಲು ನಿರ್ಧರಿಸಿದನು. ಆದುದರಿಂದ ಸಾಮ್ರಾಟನು ರಾಜಕುಮಾರ ಮಹಮ್ಮದ್ ಅಜಂ ಶಾಹನಿಗೆ ಒಂದು ವಿಶೇಷ ನಿಲುವಂಗಿ (ಖಿಲಾತ್-ಇ-ಖಾಸಾ), ಮುತ್ತಿನ ಕಂಠಹಾರ, ಆಭರಣಾಲಂಕೃತ ಇದ್ರಿಸ, ಒಂದು ಆನೆ ಮತ್ತು ಐದು ಕುದುರೆಗಳನ್ನು ಕೊಟ್ಟು ಬೆಂಗಳೂರು ಕೋಟೆಯನ್ನು ಗೆದ್ದು ಬಂಡುಕೋರನನ್ನು ಸದೆ ಬಡೆಯಲು ಸೈನ್ಯ ತೆಗೆದುಕೊಂಡು ಹೋಗಲು ನಿಯಮಿಸಿದನು. ತರಬಿಯಾತ ಖಾನ, ಕಾಮ್ಯಾಬ ಖಾನ, ರಾವ ಮುಖಂ ಸಿಂಘ, ರಜಾ ದುರ್ಗ ಸಿಂಘ ಮತ್ತು ರಾಜಾ ಕಿಶೋರ ಸಿಂಘ ಇವರು ರಜಕುಮಾರನೊಡನೆ ಹೋಗಬೇಕೆಂದು ತಿಳಿಸಲಾಯಿತು. ಅವರಲ್ಲಿ ಪ್ರತಿಯೊಬ್ಬರಿಗೂ ಪುರಸ್ಕಾರ ನೀಡಲಾಯಿತು. ನಿಲುವಂಗಿಗಳು (ಖಿಲಾತಗಳು) ಚಿಲಕತ್ತಗಳನ್ನು, ಕುದುರೆಗಳನ್ನು, ಆಯುದ ಮತ್ತು ಹಣವನ್ನು ಅವರೆಲ್ಲರಿಗೂ ನೀಡಲಾಯಿತು. ಈ ಎಲ್ಲ ಸರದಾರರೊಡನೆ ಕೂಡಿಕೊಂಡು ರಾಜಕುಮಾರನು ಸೈನ್ಯಠಾಣ್ಯಕ್ಕೆ ಹೋದೊಡನೆ ಅಲ್ಲಿ ಝುಲ್ಫಿಕಾರ ಖಾನ ಬಹಾದೂರ ಘಾಜಿ-ಉದ್-ದಿನ್ ಖಾನ್ ಬಹಾದೂರ ಮತ್ತು ಆ ಪ್ರಾಂತದ ಉಳಿದ ಸರದಾರರು ಆತನನ್ನು ಬರಮಾಡಿಕೊಂಡರು. ಅವರೆಲ್ಲ ಬಂದು ಆತನಿಗೆ ತಮ್ಮ ವಂದನೆಗಳನ್ನು ಸಲ್ಲಿಸಿದರು. ಅದೇ ಸ್ಥಳವನ್ನು ರಾಜಕುಮಾರನ ವಾಸ್ತವ್ಯಕ್ಕೆ ಗೊತ್ತುಪಡಿಸಲಾಯಿತು. ಕೋಟೆಯ ಗೋಪುರಗಳನ್ನು ಮತ್ತು ಕೋವಿಧಾರಿಗಳ ಅಡಗುತಾಣಗಳನ್ನು ಭದ್ರಪಡಿಸಿಕೊಂಡು ಕೋಟೆಯ ನಾಯಕ ಸಿದಿ ಮುಹಮ್ಮದನು ಕಾಳಗಕ್ಕಾಗಿ ಮೊದಲೇ ಸೈನ್ಯ ತುಕುಡಿಯನ್ನು ಕಳಿಸಿದನು. ಹೀಗೆ ದಂಗೆಕೋರರು ಯುದ್ಧ ಭೂಮಿಯ ಕಡೆಗೆ ಸಾಗುವದು ಕಂಡಿತು. ಆದ್ದರಿಂದ ಝುಲ್ಫಿಕಾರ ಖಾನ ಬಹದೂರ ಮತ್ತು ಘಾಜಿ-ಉದ್-ದಿನ ಖಾನ ಬಹದೂರ ಇವರನ್ನು ರಾಜಕುಮಾರನು ಮಂಚೂಣಿ ಸೈನ್ಯದ ಮುಂದಾಳುಗಳನ್ನಾಗಿ ನಿಯಮಿಸಿದನು. ಕಾಮ್ಯಾಬಖಾನ ಮತ್ತು ರಾವ ಮುಹಖಮ

ಸಿಂಘ ಇವರನ್ನು ಬಲರ್ಕ ಮತ್ತು ತಲ್ಬಿಯತ್ ಖಾನ ಮತ್ತು ರಾಜಾ ದುರ್ಗ ಸಿಂಘರನ್ನು ಎಡಕ್ಕೂ ನಿಲ್ಲಿಸಲಾಯಿತು. ಹೀಗೆ ಯೋಜಿಸಿದ ಸೈನ್ಯವು ಕೋಟೆಯ ಕಡೆಗೆ ಸಾಗಿತು. ದಕ್ಷಿಣದ (ಸಿದಿಯ) ಸೈನ್ಯದ ಒಂದು ತುಂಡು ಮುಖ್ಯ ವಾಹಿನಿಯಿಂದ ಬೇರ್ಪಟ್ಟು ಬಂದು ಸಾಮ್ರಾಜ್ಯ ಸೇನೆಯ ಮೇಲೆ ದಾಳಿ ಮಾಡಿತು. ಸಾಮ್ರಾಜ್ಯ ಸೈನ್ಯದ ವೀರ ಯೋಧರು ಆ ಆಕ್ರಮಣವನ್ನು ಎದುರಿಸಿದರು. ಕಾಳಗ ಆರಂಭವಾಯಿತು. ಆ ದುರ್ದೈವಿ ದಕ್ಷಿಣದವರನ್ನು ಇವರು ಖಡ್ಗಗಳಿಂದ ಕತ್ತರಿಸಿದರೆ, ಅವರು ಇವರನ್ನು ಭರ್ಜಿಗಳಿಂದ ಕೊಲ್ಲುತ್ತಿದ್ದರು. ಹಿಂದೆ ಉಳಿದಿದ್ದ ಉಳಿದ ಬಂಡುಕೋರರು ತಡಮಾಡದೇ ಬಂದು ಕೂಡಿಕೊಂಡರು. ಅದರಿಂದಾಗಿ ಕಾಳಗವು ಮತ್ತಷ್ಟು ದೊಡ್ಡದಾಯಿತು. ಎರಡೂ ಕಡೆಗೆ ಸಾವಿರಾರು ಯೋಧರು ಮಡಿದರು, ಗಾಯಗೊಂಡರು. ಸಾಮ್ರಾಜ್ಯದ ಸೇವಕರ ಮೇಲೆ ಸಾಮ್ರಾಟನ ಕೃಪೆಯಿರುವುದರಿಂದ ಆ ದರಿದ್ರ ಬಂಡುಕೋರರು ನಿಲ್ಲಲಾಗದೆ ಕೋಟೆಯ ಕಡೆಗೆ ಹಿಂದುರಿಗಿದರು. ಮರುದಿನ ವೈಭವದಿಂದ ಮತ್ತು ಕೀರ್ತಿಯಿಂದ ಕೂಡಿದ ರಾಜಕುಮಾರನ ದಂಡು ಕೋಟೆಯ ಕಡೆಗೆ ಸಾಗಿತು. ಐದು ದಿನಗಳಲ್ಲಿ ಅಲ್ಲಿಗೆ ತಲುಪಿದ ಅವನು ಕೋಟೆಯಿಂದ ಎರಡು ಮೂರು ಕರೋಹ ಅಂತರದಲ್ಲಿ ಬೀಡು ಬಿಟ್ಟನು. ಅವನು ರಕ್ಷಣಾ ಕಂದಕಗಳನ್ನು ಬಲಪಡಿಸತೊಡಗಿದನು. ಬಂದೂಕುಗಳನ್ನು ಮತ್ತು ಸಣ್ಣ ತೋಪುಗಳನ್ನು ವ್ಯವಸ್ಥೆಗೊಳಿಸಿದನು. ಕೋಟೆಕೊತ್ತಳಗಳ ಮೇಲೆ ಗುಂಡಿನ ದಾಳಿ ಆರಂಭಿಸಿದನು. ಕೋಟೆಯ ಮೇಲಿಂದ ಫಿರಂಗಿ ದಾಳಿ ಪ್ರಖರವಾಗಿದ್ದರಿಂದ ಸಾಮ್ರಾಜ್ಯ ಸೇನೆಯ ಯಾರೊಬ್ಬರೂ ತಲೆ ಎತ್ತಲೂ ಧೈರ್ಯಮಾಡಲಿಲ್ಲ. ಇದಲ್ಲದೆ, ವೈರಿ ಸೈನ್ಯದ ಗುಂಪೊಂದು ಕೋಟೆಯ ಒಳಗಿಂದ ನುಗ್ಗಿ ಒಂದು ಸಾಮ್ರಾಜ್ಯ ಸೇನೆಯೊಡನೆ ಕಾದಲಾರಂಭಿಸಿದರು. ಅವರು ಹುಲ್ಲುಗಾವಲಿನ ಮೇಲೆ ಧುಮುಕಿ ಅಲ್ಲಿ ಮೇಯುತ್ತಿದ್ದ ಕುದುರೆಗಳನ್ನು ಮತ್ತು ಒಂಟೆಗಳನ್ನು ದೋಚಿಕೊಂಡು ಓಡಿದರು.

ಈ ಬೆಳವಣಿಗೆಗಳನ್ನು ತಿಳಿದು ರಾಜ ಕುಮಾರನು ಶಾಹ ಖಲಿ ಖಾನ ಬಕ್ಷಿ ಮತ್ತು ಹುಸೇನ ಖಾನ ತರಿನ್ ಇವರಿಗೆ ದೊಡ್ಡ ಸೈನ್ಯವಿತ್ತು ಬಂಡುಕೋರರನ್ನು ಹೊಡೆದೋಡಿಸಲು ನಿಯಮಿಸಿದನು. ತತ್‌ಕ್ಷಣವೇ ಆ ಇಬ್ಬರು ಖಾನರು ಆ ಸ್ಥಳಕ್ಕೆ ತಲುಪಿ ದಂಗೆಕೋರರನ್ನು ಸದೆಬಡೆಯಲು ಆರಂಭಿಸಿದರು. ಕೊನೆಯಲ್ಲಿ ವೈರಿಗಳಲ್ಲನೇಕರು ಕೊಲ್ಲಪಟ್ಟರು ಮತ್ತು ಗಾಯಗೊಂಡರು. ಅನೇಕರು ಗಾಯಗೊಂಡು ಅಲ್ಲಿಯೇ ನಾಶಹೊಂದಿದರು. ಸಾಮ್ರಾಜ್ಯದ ಅನೇಕ ಸೈನಿಕರು ಕೊಲ್ಲಲ್ಪಟ್ಟರು ಹಾಗೂ ಅನೇಕರು ಗಾಯಗೊಂಡರು. ಅದಾಗಲೇ ರಾವ ಮಹಕಮ್ ಸಿಂಘ ಮತ್ತು ರಾಜಾ ಕಿಶೋರ ಸಿಂಘ ಸೈನ್ಯವನ್ನು ಬಲಪಡಿಸಿಕೊಂಡು ವೈರಿಯಿಂದ ಕುದುರೆ, ಒಂಟೆಗಳನ್ನು ಬಲವಾಗಿ ಕಿತ್ತುಕೊಳ್ಳುವಲ್ಲಿ ಸಮರ್ಥರಾದರು. ಈ ಸೈನ್ಯಾಧಿಕಾರಿಗಳು ಮರಳಿ ಬಂದ ಮೇಲೆ ರಾಜಕುಮಾರನು ಅವರನ್ನು ಸನ್ಮಾನಿಸಿದನು. ಶಾಹ ಖಲಿ ಖಾನನಿಗೆ ವಿಶೇಷ ನಿಲುವಂಗಿಯನ್ನು (ಖಿಲಾತ್-ಇ-ಖಾಸಾ) ಕುದುರೆಯನ್ನಿತ್ತರೆ, ರಾವ ಮುಹಬ ಸಿಂಘನಿಗೆ ವಿಶೇಷ ನಿಲುವಂಗಿ ಮತ್ತು ಸುವರ್ಣ ಹಿಡಿಕೆಯ ಖಡ್ಗವನ್ನು ಹಾಗೆಯೇ ರಾಜಾ ಕಿಶೋರ ಸಿಂಘನಿಗೆ ವಿಶೇಷ ನಿಲುವಂಗಿ

ಮತ್ತು ರಜತ ಹಿಡಿಕೆಯ ಖಡ್ಗವನ್ನು ನೀಡಲಾಯಿತು. ಆ ಬಳಿಕ ಸಾಮ್ರಾಜ್ಯ ಸೇನೆಯ ವೀರರು ತಮ್ಮ ಕಾರ್ಯಾಚರಣೆಯಲ್ಲಿ ಅಂದರೆ ಸುರಂಗವೊಂದನ್ನು ಕೊರೆಯುವುದರಲ್ಲಿ ಮತ್ತು ಕೋಟೆಯನ್ನು ಧ್ವಂಸಗೊಳಿಸಲು ಬೇಕಾಗುವ ಸಾಮಗ್ರಿಗಳನ್ನು ಕಲೆ ಹಾಕುವುದರಲ್ಲಿ ತೊಡಗಿದರು. ಸುರಂಗವು ಕೋಟೆಯನ್ನು ತಲುಪಿದಾಗ, ಸೈನಿಕರು ಹಗ್ಗದ ಆಧಾರದಿಂದ ಕೋಟೆಯ ಗೋಡೆಯನ್ನೇರಿ, ರಕ್ಷಣೆ ಮಾಡಿಕೊಳ್ಳುತ್ತ ಹಾಗೆಯೇ ಆಕ್ರಮಣ ಮಾಡುತ್ತ, ಒಳಗೆ ಪ್ರವೇಶಿಸಬೇಕೆಂದು ಯೋಜಿಸಿದರು. ಆದರೆ ಒಮ್ಮಿಂದೊಮ್ಮೆಲೇ ಶತ್ರು ಸೈನಿಕರು ಬಹು ದೊಡ್ಡ ಸಂಖ್ಯೆಯಲ್ಲಿ ಕೋಟೆಯ ರಕ್ಷಣಾ ಗೋಡೆಯ ಮೇಲೆ ಜಮಾಯಿಸಿ ಇವರ ಮೇಲೆ ಮೇಲಿಂದ ಕೋವಿಗಳನ್ನು ಸಿಡಿ ಗುಂಡಿಗಳನ್ನು ಮತ್ತು ಇನ್ನುಳಿದ ಜ್ವಾಲಾಯುಧಗಳನ್ನು ಹಾರಿಸತೊಡಗಿದರು. ಈ ಕಡೆಯಿಂದಲೂ ತೂರಿಬಂದ ಕ್ಷಿಪಣಿಗಳಿಂದ ಸಿಡಿಗುಂಡುಗಳಿಂದ ಕೋಟೆಯ ಮೇಲಿದ್ದ ಕಾವಲುದಳಗಳು ಸಂಕಟಗೊಂಡರು. ಸಂಜೆಯವರೆಗೆ ಮುಂದುವರೆದ ಫಿರಂಗಿ ಗುಂಡಿನ ಚಕಮಕಿಯಿಂದ ದೊಡ್ಡ ಸಂಖ್ಯೆಯಲ್ಲಿ ಜನರು ಸತ್ತರು. ರಾತ್ರಿಯಲ್ಲಿ ಕತ್ತಲೆ ಕವಿದಿದ್ದರಿಂದ ಹೋರಾಟಗಾರರು ಕಾಳಗ ನಿಲ್ಲಿಸಿದರು.

ಬೆಳಗಾದೊಡನೆಯೇ ಬಹು ದೊಡ್ಡ ಸಂಖ್ಯೆಯಲ್ಲಿ ಶತ್ರು ಸೇನೆ ಕೋಟೆಯ ಹೊರ ಬಂದು ಸಾಮ್ರಾಜ್ಯ ಸೇನೆಯ ವೀರರೊಡನೆ ಮತ್ತೆ ಕದನಕ್ಕಿಳಿದರು. ಭೀಕರ ಹೋರಾಟ ಘಟಿಸಿ ಅನೇಕರು ಹತರಾದರು. ಸಾಯದೇ ಉಳಿದವರು ಕಾಲಿಗೆ ಬುದ್ಧಿ ಹೇಳಿ ಕೋಟೆಯನ್ನಾಶ್ರಯಿಸಿದರು. ತನ್ನ ಅತಂತ್ರ ಸ್ಥಿತಿಯನ್ನು ಅರಿತ ಸಿದಿ ಮುಹಮ್ಮದನು ಕೋಟೆಯನ್ನು ಒಪ್ಪಿಸಿಕೊಟ್ಟು ಶರಣಾಗದ ಹೊರತು ಬೇರೆ ದಾರಿ ಇಲ್ಲೆಂದು ಕಂಡುಕೊಂಡನು. ರಾಜಕುಮಾರನ ಹತ್ತಿರ ತನ್ನೋರ್ವ ಜವಾಬ್ದಾರಿಯುಳ್ಳ ಅಧಿಕಾರಿಯನ್ನು ಕಳಿಸಿದರು ಮತ್ತು ತನ್ನ ಸಂದೇಶವಾಹಕನ ಮೂಲಕ ತನ್ನ ಅಪರಾಧವನ್ನು ಕ್ಷಮಿಸಬೇಕೆಂದು ಬಿನ್ನವಿಸಿದನು. ಅಪಮಾನದ ಸ್ಥಿತಿಯಲ್ಲಿ ಅವನು ರಾಜಕುಮಾರನೆದುರು ಬಂದು ಖಜಾನೆ ಸಹಿತ ಕೋಟೆಯ ಕೈಯನ್ನು ಅವನಿಗೊಪ್ಪಿಸಿದನು. ಸಾಮ್ರಾಟನ ದಯೆಯ ವಿಷಯಕ್ಕೆ ಭರವಸೆಯಿತ್ತು ರಾಜಕುಮಾರನು ಸಿದಿಯ ಭಯವನ್ನು ನಿವಾರಿಸಿದನು. ಒಂದು ನಿಲುವಂಗಿ, ಸುವರ್ಣಲಂಕಾರ ಹೊದಿಕೆಯುಳ್ಳ ಕುದುರೆ ಇವುಗಳನ್ನಿತ್ತು ಸಿದಿಯನ್ನು ಸನ್ಮಾನಿಸಿ ರಾಜಕುಮಾರನು ಅವನಿಗೆ ಮರಳಿ ಹೋಗಲು ಅನುಮತಿ ಇತ್ತನು. ನಂತರ ಅವನು (ರಾಜಕುಮಾರನು) ಶಾಹ ಖುಲಿ ಖಾನ ಬಕ್ಷಿಗೆ ಕೋಟೆ ಮತ್ತು ಸಿದಿ ಮುಹಮ್ಮದನ ಆಸ್ತಿಯ ಹೊಣೆ ಹೊತ್ತುಕೊಳ್ಳಬೇಕೆಂದು ಹೇಳಿದನು. ಆ ಬಳಿಕ ಬೆಂಗಳೂರು ಕೋಟೆಯನ್ನು ವಶಪಡಿಸಿಕೊಂಡಿದ್ದನ್ನು ವರ್ಣಿಸುವ ಪತ್ರವನ್ನು ಅದರ ಬಂಗಾರದ ಕೀಲಿ ಕೈಯೊಡನೆ ಕಳುಸುವುದಲ್ಲದೆ ತನ್ನ ಪರವಾಗಿ ಒಂದು ಸಾವಿರ ಮೊಹರುಗಳನ್ನು ಮತ್ತು ರಾಜಕುಮಾರ ಮುಹಮ್ಮದ ಬೀದರ ಬಖ್ತನ ಪರವಾಗಿ ಏಳು ನೂರು ಮೊಹರುಗಳನ್ನು ನಜರೆಂದು ಕಳಿಸಿದನು.

ಸ್ವಲ್ಪದರಲ್ಲಿ ಹೇಳುವುದಾದರೆ, ಕೋಟೆಯು ಕೈವಶವಾದ ಸುದ್ದಿಯನ್ನು ಹಾಗೆಯೆ

ಕಳಿಸಿದ ವಸ್ತುಗಳನ್ನು ಸ್ವೀಕರಿಸಿದ ಸಾಮ್ರಾಟನು ಬಹಳ ಸಂತಸಗೊಂಡನು. ರೂ. ನಲವತ್ತೈದು ಸಾವಿರ ಬೆಲೆಯ ರತ್ನಖಚಿತ ಕಿರುಗತ್ತಿಯನ್ನು ಮತ್ತು ರೂ.ಮೂವತ್ತು ಸಾವಿರ ಬೆಲೆಯ ಮುತ್ತಿನ ಹಾರವನ್ನು ಕೊಟ್ಟನು. ಕೋಟೆಗೆ ಅಝುಮನಗರ ಎಂದು ಹೆಸರಿಡಲಾಯಿತು. ಫಿರಂಗಿದಳದ ಮುಖ್ಯಸ್ಥನಾಗಿದ್ದ (ದರೋಗಾ-ತೋಪೆ-ಖಾನಾ) ಅಕಾ ಅಲಿ ಖಾನನನ್ನು ಕೋಟೆಯ ದಂಡನಾಯಕನೆಂದು ನೇಮಿಸಿ ಅಲ್ಲಿಗೆ ಕಳಿಸಲಾಯಿತು. ಈ ವಿಜಯ ಯಾತ್ರೆ ಮೂರು ತಿಂಗಳ ಹದಿನೈದು ದಿನಗಳಲ್ಲಿ ಪೂರ್ತಿಗೊಂಡಿತು. ಈ ವಿಜಯಕ್ಕಾಗಿ ಸಾಮ್ರಾಟನನ್ನು ಅಭಿನಂದಿಸಲಾಯಿತು. ಈ ವಿದ್ಯಮಾನಗಳಿಂದ ಮನಸಾರೆ ತೃಪ್ತಿಹೊಂದಿದ ಸಾಮ್ರಾಟನು ರಾಜಕುಮಾರ ಮುಹಮ್ಮದ ಅಜಮ್ ಶಾಹ ಮತ್ತು ರಾಜಕುಮಾರ ಮುಹಮ್ಮದ ಬೀದರ ಬಖ್ತ ಇವರು ಅಲ್ಲಿ ನಿಯಮಿಸಿದ್ದ ಎಲ್ಲ ಸರದಾರರೊಂದಿಗೆ ಆಸ್ಥಾನಕ್ಕೆ ವಾಪಸಾಗಬೇಕೆಂದು ಆಜ್ಞಾಪಿಸಿದನು. ದೂರದ ದಾರಿಯನ್ನು ಕ್ರಮಿಸಿ ಅವರೆಲ್ಲ ಸಾಮ್ರಾಟನ ಆಸ್ಥಾನಕ್ಕೆ ಮರಳಿದರು. ರಾಜಕುಮಾರ ಕಾಮಬಕ್ಷನು ಸಾಮ್ರಾಟನ ಆಜ್ಞೆಯ ಮೇರೆಗೆ ಏಳು ಸೈನಿಕ ನೆಲೆಗಳ ಸರದಾರರೊಡನೆ ಕೂಡಿಕೊಂಡು ರಾಜಕುಮಾರನನ್ನು ಬರಮಾಡಿಕೊಳ್ಳಲು ಹೋದನು ಮತ್ತು ಸಕಲ ಮರ್ಯಾದೆಯೊಂದಿಗೆ ಕರೆದುಕೊಂಡು ಬಂದನು. ದಿನದ ಒಂದು ಪಹರೆ ನಾಲ್ಕು ಘರಿಗಳು ಕಳೆದ ಮೇಲೆ ರಾಜಕುಮಾರನು ಸಾಮ್ರಾಟನಿಗೆ ವಂದನೆ ಸಲ್ಲಿಸಿದನು. ಮತ್ತು ಒಂದು ಸಾವಿರ ಮೊಹರುಗಳನ್ನು ನಜರೆಂದು ಒಂದು ಸಾವಿರ ನಿಸಾರ ಎಂದು ನೀಡಿದನು. ಹಾಗೆಯೆ ರಾಜಕುಮಾರ ಮುಹಮ್ಮದ ಬೀದರ ಬಖ್ತನು ಐದು ನೂರು ಮೊಹರುಗಳನ್ನು ನಜರೆಂದು ಮತ್ತು ಐದು ನೂರು ನಿಸಾರ ಎಂದು ಸಲ್ಲಿಸಿದನು. ರಾಜಕುಮಾರನ ರಾಜ ಪರಿವಾರದಲ್ಲಿದ್ದ ಝುಲ್ಫಿಕರ ಖಾನ ಬಹಾದೂರ, ಘಾಜಿ-ಉದ್-ಖಾನ ಬಹಾದ್ದೂರ ಮತ್ತು ಉಳಿದ ಸರದಾರರು ತಮ್ಮ ತಮ್ಮ ಅಂತಸ್ತಿಗನುಗುಣವಾಗಿ ನಜರ್ ಮತ್ತು ನಿಸಾರ ಸಲ್ಲಿಸಿದರು. ಸಾಮ್ರಾಟನು ರಾಜಕುಮಾರನಿಗೆ ರೂ. ಎರಡು ಲಕ್ಷ ಐವತ್ತು ಸಾವಿರ ಬೆಲೆಯ ಮುತ್ತು ಖಚಿತ ಅರ್ಧ ತೋಳಿನ ನೀಮ ಅಸ್ತಿನವನ್ನು, ರೂ. ಅರವತ್ತೈದು ಸಾವಿರ ಬೆಲೆಯುಳ್ಳ ರತ್ನಾಲಂಕೃತ ತುರಾವನ್ನು, ಮುತ್ತಿನ ಕಂಠ ಹಾರವನ್ನು (ಇದ್ರಿಸಿ), ರೂ. ಒಂದು ಲಕ್ಷ ಬೆಲೆಯ ಮಾಣಿಕ್ಯವನ್ನು ಮತ್ತು ರೂ. ಐವತ್ತು ಸಾವಿರ ನಗದು ಹಣವನ್ನು ನೀಡಿದನು. ರಾಜಕುಮಾರ ಮುಹಮ್ಮದ್ ಬಖ್ತ ಬೀದರನು ವಿಶೇಷ ನಿಲುವಂಗಿಯನ್ನು (ಖಿಲಾತ-ಇ-ಖಾಸಾ), ರೂ. ಒಂದು ಲಕ್ಷ ಬೆಲೆಯ ಆಭರಣಗಳನ್ನು, ರೂ. ನಲವತ್ತು ಸಾವಿರ ನಗದು ಹಣವನ್ನು ಪಡೆದನು. ಉಳಿದ ಸರದಾರರು ತಮ್ಮ ತಮ್ಮ ಅಂತಸ್ತಿನ ಪ್ರಕಾರ ನಿಲುವಂಗಿ, ಆನೆಗಳು, ಮತ್ತು ಬೆಲೆಯುಳ್ಳ ಆಯುಧಗಳು ಇವುಗಳ ಹೆಚ್ಚಳದಿಂದ ಸ್ಥಾನವರ್ಧನೆಗೊಂಡರು. ರಾಜಕುಮಾರನು ತನ್ನ ಸೇವಕರ ಸೇವೆಯನ್ನು ಮನ್ನಿಸಿ ಅವರಿಗೆ ನಿಲುವಂಗಿಗಳನ್ನು, ಸರೋಪಾಸನ್ನು, ಆನೆಗಳನ್ನು, ಕುದುರೆಗಳನ್ನು ಮತ್ತು ಆಯುಧಗಳನ್ನು ನೀಡಿದನು. ಸಿದಿ ಮುಹಮ್ಮದನು (ಹಿಂದಿನ ದಂಡಾಧಿಪತಿ) ಉನ್ನತ ಕಾರ್ಯದರ್ಶಿಗಳ ಮುಖಾಂತರ ಮಹಾ ಪ್ರಭುವಿನಿಂದ ಮನ್ನಿಸಲ್ಪಟ್ಟನು. ೫೦೦೦ / ೪೦೦೦ ಜಾಟ್ ಮತ್ತು ಸವಾರರ

ಮನಸಬನ್ನು ಪಡೆದರೆ ಆತನ ಬಂಧುಗಳು ಮತ್ತು ಉಳಿದ ಅನುಯಾಯಿಗಳು ಅವರವರ ಯೋಗ್ಯತೆಗನುಸಾರವಾಗಿ ಮನಸಬಗಳನ್ನು ಪಡೆದುಕೊಂಡರು.

ಅಡಿ ಟಿಪ್ಪಣಿ :

೧) "೪೦೦೦೦ ಸುರಿತ ಅಶ್ವದಳದೊಡನೆ ಸಾಂಭಾನೊಡನೆ ಹೋರಾಡಲು ರಾಜಕುಮಾರ ಮುಹಮ್ಮದ ಅಜಂನನ್ನು ಕಳಿಸಲಾಯಿತು. (೨೫ ಜನೇವರಿ ೧೬೮೮ ರ ದಿನ) ಅವನು ವಿಜಾಪುರ ರಾಜ್ಯದ ನೈಋತ್ಯ ದಿಕ್ಕಿನಲ್ಲಿ ದೂರದ ಪ್ರದೇಶಕ್ಕೆ ದಂಡುಗೈದನು. ಮುತ್ತಿಗೆ ಹಾಕಿ ಬೆಳಗಾಂವಿಯ ಭದ್ರ ಕೋಟೆಯನ್ನು ಕೈವಶಮಾಡಿಕೊಂಡನು. ಆ ಮೇಲೆ ಆಸ್ಥಾನಕ್ಕೆ (ಮಳೆಗಾಲ ಕಳೆಯಲು ವಿಜಾಪುರದ ಠಾಣ್ಯಕ್ಕೆ) ಮರಳಿದನು"

■

*

ಅಕಬರಾಬಾದದ ಸಮೀಪದಲ್ಲಿ ಜಾಟರ ರಾಜಾನ ದಂಗೆ:

ಈ ಕೃತಿಯ ಮೊದಲಿನ ಭಾಗದಲ್ಲಿ ದುಷ್ಟ ಸ್ವಭಾವದ ಜಾಟ ರಾಜನ ದಂಗೆಕೋರ ಚಟುವಟಿಕೆಗಳನ್ನು ದಾಖಲಿಸಲಾಗಿದೆ. ಇತ್ತೀಚಿನ ಅವಧಿಯಲ್ಲಿ ಹಿಂದಿನ ರಾಜರಿಗಿಂತ ಇವನ ಕಿಡಿಗೇಡಿತನ ಹೆಚ್ಚು ಉಪಟಳದಾಯಕವೂ, ಕ್ಷೋಭೆಯನ್ನು ಉಂಟು ಮಾಡುವುಂತಾಗಿದ್ದು ಪ್ರಸ್ತುತ ರಾಜನು ಜನರನ್ನು ಹಿಂಸಿಸತೊಡಗಿದನು. ಆ ದುರುಳನ ಗಲಭೆಯಿಂದಾಗಿ ಪಕ್ಷಿಯೂ ಕೂಡ ತನ್ನ ರೆಕ್ಕೆ ಬಿಚ್ಚಲಾರದಷ್ಟು ಆಕಾಶವೆಲ್ಲ ಸ್ತಬ್ಧವಾಯಿತು. ಅದೇ ರೀತಿಯಾಗಿ ರಾಜಧಾನಿಯ ಭಾಗವಾಗಿದ್ದ ಅಧೀನ ಪ್ರದೇಶಗಳನ್ನು (ಪರಗಣೆಗಳನ್ನು) ಈತನು ಸೂರೆಗೈದು ಹಾಳು ಮಾಡಿದನು. ಆ ಬಳಿಕ ಸಿಕಂದರ ಪಟ್ಟಣವನ್ನು ವಿಧ್ವಂಸಗೊಳಿಸಲೋಸುಗ ಶಹಾಜಹಾನಬಾದದ ಕಡೆಗೆ ಹೊರಟನು. ತನ್ಮಧ್ಯ ಪರಗಣೆಯ ಫೌಜದಾರ ಮೀರ ಅಬುಲ್ ಫಜಲ್‌ನು ಈ ಸುದ್ದಿ ತಿಳಿದೊಡನೆ ತನ್ನ ಸೈನ್ಯದೊಂದಿಗೆ ಹೋಗಿ ಈ ದುಷ್ಟನನ್ನು ಹೊಡೆದೋಡಿಸಲು ಸಾಹಸಗೈದನು. ಸಿಕಂದರಾದಿಂದ ಐದು ಕರೋಹ ಅಂತರದಲ್ಲಿ ಅವನೊಡನೆ ಹೋರಾಟಕ್ಕಿಳಿದನು. ದೊಡ್ಡ ಸಂಖ್ಯೆ ಹೊಂದಿದ್ದರೂ ದಂಗೆಕೋರರು ಫೌಜದಾರನ ಯೋಧರಿಂದ ಹಿಮ್ಮೆಟ್ಟಿಸಲ್ಪಟ್ಟರು. ಈ ಪ್ರಕ್ರಿಯೆಯಲ್ಲಿ ಅನೇಕರು ಗಾಯಗೊಂಡರು. ಅನೇಕರು ಯುದ್ಧಭೂಮಿಯಲ್ಲಿ ಮಡಿದರು. ಸಿಕಂದರಾ ಪಟ್ಟಣವನ್ನು ಯಾವ ರೀತಿಯಲ್ಲಿಯೂ ಹಾನಿಗೊಳಿಸಲಾಗದೆ ಅವನು ಶಿಕಾರಪುರದ ಮೇಲೆ ದಾಳಿ ಮಾಡಿ ಅದನ್ನ ಭಗ್ನಗೊಳಿಸಿದನು. ಅಲ್ಲಿಂದ ನಗದು ಹಣ ಮತ್ತು ವಸ್ತುಗಳ ರೂಪದಲ್ಲಿ ಸಾಕಷ್ಟು ದೋಚಿಗೊಂಡು ರತನಪುರಿಯ ಕಡೆಗೆ ಸಾಗಿದನು. ಆ ದುಷ್ಟ ದಂಗೆಕೋರರ ಸೋಲಿನ ಸುದ್ದಿ ತಿಳಿದಾಗ ಸಾಮ್ರಾಟನು ಮೀರ ಅಬುಲ್ ಫಜಲ್‌ನಿಗೆ ಇಫ್ತಿಕಾರ ಖಾನ ಎಂಬ ಬಿರುದನ್ನಿತ್ತು ಆತನ ಮನಸಬವನ್ನು ಎರಡು ನೂರು ಸವಾರರಿಂದ ಹೆಚ್ಚಿಸಿದನು.

ಲಾಹೋರದ ದಾರುಸ ಸುಲ್ತಾನ ಸುಬೇದಾರಿಯನ್ನು ಮಹಾಬತ ಖಾನನಿಗೆ ಕೊಟ್ಟೊಡನೆ ಆತನು ಅಲ್ಲಿಗೆ ಹೊರಟನು. ಆದರೆ ಅವನು ಯಮುನಾ ನದಿಯ ದಂಡೆಗೆ ತಲುಪಿ

ಬೀಡಾರ ಹೂಡಿದಾಗ ದುರ್ಭಾವನೆಯ ರಾಜಾ ದೊಡ್ಡ ಸೈನ್ಯದೊಂದಿಗೆ ಸಾಗಿ ಬಂದು ಅವನ ಮೇಲೆ ದಾಳಿ ಮಾಡಿದನು. ಪ್ರಸಿದ್ಧ ಯುದ್ಧ ತಂತ್ರಗಾರನಾಗಿದ್ದ ಖಾನನು ದೊಡ್ಡ ಸಂಖ್ಯೆಯಲ್ಲಿರುವ ದಂಗೆಗಾರರನ್ನು ಗಮನದಲ್ಲಿಟ್ಟು ತನ್ನ ಠಾಣ್ಯದ ಸುತ್ತಲೂ ಫಿರಂಗಿ ದಳವನ್ನು ವ್ಯವಸ್ಥೆಗೊಳಿಸಿ ಘರ್ಷಣೆಗೆ ಸಿದ್ಧನಾದನು. ಶತ್ರು ಎರಡು ಮೂರು ದಿನಗಳಲ್ಲಿ ಹೊರಟು ಹೋದರೆ ಸರಿ, ಇಲ್ಲದಿದ್ದರೆ ದೈವೇಚ್ಛೆಯಂತೆ ಆಗಬೇಕಾದದ್ದು ಆಗಲಿಯೆಂದು ಖಾನನು ಯೋಚಿಸಿದನು. ಇದೆಲ್ಲದರ ಸುಳಿವು ಪಡೆದ ಆ ನೀಚ ಜಾಟ ರಾಜನು ಉದ್ಧಟತನದಿಂದ ಮುನ್ನುಗ್ಗಿ ಬಂದನು. ಆಗ ತನ್ನ ಸವಾರರನ್ನು ವ್ಯವಸ್ಥೆಗೊಳಿಸಿ ಖಾನನು ಯುದ್ಧಕ್ಕೆ ಧುಮಿಕಿದನು. ಘೋರ ಕಾಳಗದಲ್ಲಿ ವೈರಿಯ ನಾಲ್ಕು ನೂರು ಸೈನಿಕರು ಮತ್ತು ಖಾನನ ಒಂದು ನೂರೈವತ್ತು ಯೋಧರು ಮೃತರಾದರು. ಹಾಗೂ ನಲವತ್ತು ಜನರು ಗಾಯಗೊಂಡರು. ಕೊನೆಗೆ ಎದುರಿಸುವ ಧೈರ್ಯವಿಲ್ಲದಾಗಿ ಶತ್ರು ರಣಾಂಗಣದಿಂದ ಓಡಿಹೋದನು. ಅಲ್ಲಿಯೇ ಒಂದು ದಿನ ತಂಗಿ ಆ ಬಳಿಕ ಖಾನನು ತೆರಳಬೇಕಾದ ಸ್ಥಳಕ್ಕೆ ಹೋದನು[೨].

ದಂಗೆಕೋರ ಜಾಟ ರಾಜನ ಉಪಟಳ ದಿನವೂ ಹೆಚ್ಚತೊಡಗಿತು. ಈ ವಾರ್ತೆಯು ತಲುಪಿದೊಡನೆ ಸಾಮ್ರಾಟನು ಅಮೀರ-ಉಲ್-ಉಮರಾನನನ್ನು ಅಕಬರಾಬಾದ ಸುಬೇದಾರನನ್ನಾಗಿ ನಿಯಮಿಸಿದನು. ಪ್ರತಿನಿಧಿ ಮುರ್ಝಾಫರ ಖಾನ ಬಿರುದುವುಳ್ಳ ಖಾನ-ಇ-ಜಹಾನದ ಮುಹಮ್ಮದ ಬಾಖಾ ಇವನನ್ನು ಪ್ರತಿನಿಧಿಯಾಗಿ ನಿಯಮಿಸಿ ಅಮೀರ-ಉಲ್-ಉಮರಾ ಬರುವವರೆಗೆ ಆಡಳಿತ ನಡೆಸಬೇಕೆಂದು ಹಸ್ತಬುಲ ಹುಕುಂ ಹೊರಡಿಸಲಾಯಿತು. ಅಕಬುರಾಬಾದದಿಂದ ಬಂದ ವರದಿಗಳ ಪ್ರಕಾರ ಆ ನೀಚ ದಂಗೆಕಾರನು ಸಿಕಂದರಾದಲ್ಲಿ ಕಾಣಿಸಿಕೊಂಡು ಹಜರತ ಅಶಾನಿ ಸಮಾಧಿಯನ್ನು ಸೂರೆಗೊಂಡು ಅಲ್ಲಿದ್ದ ರತ್ನಗಂಬಳಿಗಳನ್ನು, ಬಂಗಾರಬೆಳ್ಳಿಯನ್ನು ದೋಚಿದ್ದಲ್ಲದೆ ಆ ಕಟ್ಟಡಕ್ಕೆ ಹಾನಿ ಉಂಟು ಮಾಡಿದ್ದನ್ನು ಸಾಮ್ರಾಟನ ಗಮನಕ್ಕೆ ತರಲಾಯಿತು. ಅಲ್ಲಿ ನಿರ್ಮಿಸಲ್ಪಟ್ಟಿದ್ದ ಬಹಳಷ್ಟು ಗೋರಿಗಳು ಮತ್ತು ಸಮಾಧಿಗಳು ನೆಲಸಮಗೊಂಡಿದ್ದವು. ಆಗ ಅಕಬರಾಬಾದದಲ್ಲಿದ್ದ ಖಾನ-ಇ-ಜಹಾನನ ಪ್ರತಿನಿಧಿ ಮುಹಮ್ಮದ ಬಾಖಾ ಆ ನೀಚ ದಂಗೆಕೋರನನ್ನು ಶಿಕ್ಷಿಸುವ ಗೊಡವೆಗೆ ಹೋಗಲಿಲ್ಲ. ಆದ್ದರಿಂದ ಭಗವಂತನ ಛಾಯೆಯು (ಸಾಮ್ರಾಟನು) ಅವನ ಮನಸಬವನ್ನು ೫೦೦ ಕುದುರೆಗಳಿಂದ ಕಡಿತಗೊಳಿಸಿ ಮತ್ತು ಖಾನ-ಇ-ಬಹಾದೂರ ಹುದ್ದೆಯನ್ನು ೧೦೦೦ ಸವಾರರಿಂದ ಕಡಿಮೆಗೊಳಿಸಿ ಶಿಕ್ಷಿಸಿದನು[೩].

ದುಷ್ಟ ಜಾಟ ರಾಜಾನನ್ನು ಶಿಕ್ಷಿಸುವುದಕ್ಕಾಗಿ ಕಾಬೂಲದಿಂದ ರಾಜಾರಾಮ ಸಿಂಘನನ್ನು ಕರೆಸಲಾಯಿತು. ಆದರೆ ಸಾವು ಅವನನ್ನು ಸೆಳೆದುಕೊಂಡಿತು. ಆತನ ಮರಣಾನಂತರ ಅವನ ಮಗನಾದ ರಾಜಾ ಬಾಶನಸಿಂಘನಿಗೆ ಸಾಮ್ರಾಟನು ೨೦೦೦/೨೦೦೦ ಜಾಟ ಸೈನಿಕರು ಮತ್ತು ಸವಾರರುಳ್ಳ ಮನಸಬನ್ನು ಒಂದು ಆನೆಯನ್ನು, ಒಂದು ಧ್ವಜ ಮತ್ತು ನಗಾರಿಯನ್ನಿತ್ತನು. ಅಮೀರ ಎಂಬ 'ಟಿಕಾ'ವನ್ನು ಮತ್ತು ರಾಜಾ ಎಂಬ ಬಿರುದನ್ನು

ಮಥುರಾ ಪಟ್ಟಣದ ಜಮೀನದಾರಿಯನ್ನು ಮತ್ತು ಜಾಟ ಬಂಡುಕೋರರ ಕೇಂದ್ರಸ್ಥಾನವಾಗಿದ್ದ ಸಿನಸಾನಿಯನ್ನು ನೀಡಿರುವ ಬಗ್ಗೆ ಫರಮಾನವನ್ನು ಹೊರಡಿಸಲಾಯಿತು. ದಂಗೆಕೋರರನ್ನು ಸದೆಬಡೆಯಲು ಅವನನ್ನು ನಿಯಮಿಸಲಾಯಿತು.

ಲಾಹೋರದ ಸುಬೇದಾರ ಮಹಬತ್ ಖಾನನು ತೀರಿಕೊಂಡದ್ದು ಮಕ್ರಮತ್ ಖಾನನಿಂದ ತಿಳಿದ ಮೇಲೆ ಹೊಸ ಸುಬೇದಾರನ ನೇಮೂಣಕಿ ಆಗುವವರೆಗೆ ಆತನೇ ಆಡಳಿತ ನೋಡಿಕೊಳ್ಳಬೇಕೆಂದು ಸಾಮ್ರಾಟನ ತಿಳಿಸಿದನು. ಸಾಮ್ರಾಟರ ಅನುಮತಿಯ ಮೇರೆಗೆ ತಂದೆಯ ಹತ್ತಿರ ಹೋಗಿದ್ದ ದಿವಂಗತ ಖಾನನ ಪುತ್ರ ಅಲಿ ಖಲಿ ಖಾನನು ಇದ್ದಲ್ಲಿಂದ ಹೊರಟು ಬರಬೇಕೆಂದು ಸಾಮ್ರಾಟಾಜ್ಞೆಯಾಯಿತು. ಮೇಲೆ ಹೇಳಿದ ಸುಬೆಯನ್ನು ರಾಜಕುಮಾರ ಮುಹಮ್ಮದ್ ಅಝುಮ್ ಶಾಹನಿಗೆ ಒಪ್ಪಿಸಲಾಯಿತು. ಗುಜರಾತ ಪ್ರಾಂತ್ಯದ ಆಡಳಿತ ಮತ್ತು ಜೋಧಪುರದ ಹಾಗೂ ಮೆರ್‍ತ್ರಾಗಳ ಫೌಜದಾರಿ ಮೊದಲಿನಂತೆ ಮೇಲೆ ಹೇಳಿದ ಖಾನನಿಗೆ ಉಳಿಯಿತು. ಅವನು ಗುಜರಾತ ಮತ್ತು ಮಾರವಾ ನಾಡಿನ ಕರ್ತವ್ಯವನ್ನು ಕಾಳಜಿಪೂರ್ವಕ ನಿರ್ವಹಿಸಿದ್ದನು; ಆ ಪ್ರದೇಶಗಳಲ್ಲಿ ಸರ್ವಶಕ್ತ ಭಗವಂತನ ಜೀವಿಗಳಿಗೆ ಶಾಂತಿ ಸಮಾಧಾನ ತಂದಿದ್ದನು.

ಇರಾಣದಿಂದ ಸಾಮ್ರಾಟನಿಗೆ ಬಂದ ವಾರ್ತೆಯ ಪ್ರಕಾರ ಅಹಮ್ಮದ ಹರವಿಯನ್ನು ದಂಡಿಸುವ ಸಲುವಾಗಿ ಇರಾಣದ ಅರಸನು ಮುಹಮ್ಮದ ಜಾಫರ ಮತ್ತು ನಜಾಫ ಖಲಿ ಖಿಜಾಲಬಾಶ ಇವರನ್ನು ಹತ್ತು ಸಾವಿರ ಅಶ್ವಗಳ ಬಲದೊಡನೆ ಕಳುಹಿಸಿದ್ದನು. ಈ ಇರಾಣ ವೀರರು ಅಹಮ್ಮದ ಹರವಿಯ ಪ್ರದೇಶವನ್ನು ಪ್ರವೇಶಿಸಿ ದಾಳಿ ಮಾಡಿದರು. ಆದರೆ ಅವನು ಶೌರ್ಯದಿಂದ ಅವರನ್ನು ಸೋಲಿಸಿದನು. ನಾಚಿಕೆ, ಅಪಮಾನ ಪಟ್ಟು ರಣಾಂಗಣದಿಂದ ಪಲಾಯನಗೈದ ಅವರು ಹತಾಶದಿಂದ ಕಂದಹಾರದ ಕಡೆಗೆ ದಂಡುಗೈದನು. ಕಂದಹಾರವನ್ನು ಅವರ ಮುತ್ತಿಗೆಯಿಂದ ಮುಕ್ತಗೊಳಿಸುವ ಉದ್ದೇಶದಿಂದ ದೊಡ್ಡ ಸೈನ್ಯದೊಂದಿಗೆ ಅವರನ್ನು ಬೆನ್ನಟ್ಟಿದನು. ಠಾಟ್ಟಾ ಪ್ರಾಂತ್ಯಕ್ಕೆ ತಾನು ಹೋಗಬೇಕಾದದ್ದನ್ನು ಮುಂದೂಡಿ ಮುಲ್ತಾನದ ನಜಿಯ ಮಕ್ರಮತ್ ಖಾನನು ಅಹಮ್ಮದ ಹರವಿಯ ಸಹಾಯಕ್ಕೆ ಹೋಗಬೇಕು ಮತ್ತು ಕಂದಹಾರವನ್ನು ವಶಪಡಿಸಿಕೊಂಡು ಗೆಲುವು ಸಾಧಿಸಿದ ಬಳಿಕ ತನ್ನ ಸ್ಥಳಕ್ಕೆ ಹೊರಡಬೇಕು ಎಂದು ಸಾಮ್ರಾಟನು ಆಜ್ಞಾಪಿಸಿದನು.

ಅಡಿಟಿಪ್ಪಣಿ :

೧) ಆಗ್ರಾದ ಸುಬೇದಾರ ಸಫಿಖಾನನಿಂದ ದಂಗೆಯನ್ನು ಹತ್ತಿಕ್ಕುವುದಾಗಲಿಲ್ಲ. ಫ್ರೆಂಚದಲ್ಲಿರುವ ಹಸ್ತ ಪ್ರತಿಯ ವಿವರವೊಂದು ಜಾಟರ ಬಗ್ಗೆ ಇದ್ದು ಇದು ಇಂಡಿಯಾ ಕಚೇರಿಯಲ್ಲಿ ಲಂಡನ್ನದಲ್ಲಿದೆ. (ನಂ.೨, ಪ್ರತಿ ಸಂ.೧೫, ನಂ.೧೧), ಇದನ್ನು ಬರೆದವನು ಫಾದರ ಝೇವಿಯಾರ್ ವೆಂಡೆಲ್ ಇನ್ನಲಾಗಿದ್ದು ರಾಮಚಹರಾನನ್ನು ಹೆಸರಿಸುವ ಆಕರ ಇದೊಂದೇ ಆಗಿದೆ. ಸಿನಸಾನಿ ಮತ್ತು ಸೋನಾರದ ಸಣ್ಣ ಜಮೀನದಾರರಾಗಿದ್ದ ರಾಜಾರಾಮ ಮತ್ತು ರಾಮಚಹುರಾ ಹದಿನೈದು ವರ್ಷಗಳ ನಂತರ ಮುಘಲರನ್ನು ವಿರೋಧಿಸಿದವರಲ್ಲಿ ಮೊದಲಿಗರಾಗಿದ್ದರು.

೨) ಘಟನಾವಳಿಗಳ ಕ್ರಮದಲ್ಲಿ ಈಶ್ವರದಾಸನು ತಪ್ಪಿದ್ದಾನೆ. ಅಘರಖಾನನ್ನನ್ನು ಜಾಟರು ಹತ್ಯೆ ಮಾಡಿದ ಮೇಲೆ ಮಹಬತ ಖಾನನ ಮೇಲೆ ದಾಳಿ ಮಾಡಲಾಯಿತು. ಮೇ ೧೬೮೬ ರಲ್ಲಿಯೇ ಔರಂಗಜೇಬನು ಸನ್ನಿವೇಶದ ಬಿಕ್ಕಟ್ಟನ್ನರಿತು ಬಲಿಷ್ಠ ಸೇನಾನಿ ಖಾನ-ಇ-ಜಹಾನ ಕೋಕಲ್ತಾಶ ಝಾಫರ ಜಂಗನನ್ನು ಜಾಟರ ವಿರುದ್ಧ ಹೋರಾಡಲು ಕಳಿಸಿದನು. – ರಾಜಾರಾಮನ ಕೈ ಮೇಲಾದದ್ದರಿಂದ ಸಾಮ್ರಾಟನು ರಾಜಕುಮಾರ ಆಜಂನನ್ನು ಕಳಿಸಬೇಕಾಯ್ತು. ಆದರೆ ಗೋಳಕೊಂಡದ ಮುತ್ತಿಗೆಯ ಬಲವತ್ತರವಾದ ಕಾರಣಕ್ಕಾಗಿ ಆತನನ್ನು ಬರ್ಹಾಣಪುರದಿಂದ ಮರಳಿ ಕರೆಸಿಕೊಳ್ಳಬೇಕಾಯಿತು. "ರಾಜಕುಮಾರ ಅಜಂನ ಪುತ್ರ ರಾಜಕುಮಾರ ಬೀದರ ಬಖ್ತನನ್ನು ಜಾಟ ಯುದ್ಧದ ಮಹಾ ದಂಡನಾಯಕನನ್ನಾಗಿ ಕಳಿಸಲಾಯಿತು. (ಡಿಸೆಂಬರ್ ೧೬೮೭). ಖಾನ-ಇ-ಜಹಾನನ್ನು ಅವನಿಗೆ ಸಲಹೆಗಾರನಾಗಿ ಮತ್ತು ಪ್ರಧಾನ ಅಧಿಕಾರಿಯಾಗಿ ಮುಂದುವರೆಯಬೇಕಾಯ್ತು. ಅಲ್ಲಿಯೇ, ೧೬೮೮ರ ಆರಂಭದಲ್ಲಿ ಹೈದರಾಬಾದದ ಮೀರ ಇಬ್ರಾಹಿಮನು (ಹೊಸದಾಗಿ ಮಹಾಬತಖಾನ ಎಂಬ ಬಿರುದು ಹೊಂದಿದ್ದನು). ರಾಜಾರಾಮನ ದಾಳಿಗೊಳಗಾದನು.

೩) "ಅವರು ಅದರ ಕಂಚಿನ ಮಹಾದ್ವಾರವನ್ನು ಮುರಿದು ಪಟ್ಟಣವನ್ನು ಕೊಳ್ಳೆ ಹೊಡೆಯಲು ಆರಂಭಿಸಿದರು. ಬೆಲೆಯುಳ್ಳ ರತ್ನಗಳನ್ನು ಮತ್ತು ಬೆಳ್ಳಿ ಬಂಗಾರದ ತಾಟುಗಳನ್ನು ಕದ್ದೊಯ್ದರಲ್ಲದೆ ತಮಗೆ ಹೊತ್ತುಕೊಂಡು ಹೋಗಲಾರದ್ದನ್ನೆಲ್ಲ ನಾಶಗೊಳಿಸಿದರು. ಅಕ್ಬರನ ಮೂಳೆಗಳನ್ನು ಹೊರದೆಗೆದು ಸಿಟ್ಟಿನಿಂದ ಅವುಗಳನ್ನು ಬೆಂಕಿಯಲ್ಲಿ ಎಸೆದು ಸುಟ್ಟರು".

■

*

ರಾಜಕುಮಾರನ ಉದಾಸೀನತೆ–ಜ್ಞಾನಾರ್ಜನೆಯ ಕುರಿತು ರಾಜಕುಮಾರ ಮುಹಮ್ಮದ ಬಕ್ಷನ ಧೋರಣೆ ಮತ್ತು ಅವನಿಗೆ ಬುದ್ಧಿಮಾತು :

ರಾಜಕುಮಾರ ಮುಹಮ್ಮದ ಕಾಮ ಬಕ್ಷನ ಶಿಕ್ಷಕ (ಮೌಲಿಮ) ಸಿಯಾಬತ ಖಾನ ಉನ್ನತವಾದ ಅಭ್ಯಾಸ ಕೋಣೆಗೆ ಬಂದು ರಾಜಕುಮಾರನಿಗೆ ಬರಲು ಹೇಳಿದನು. ಖಾನನು ಮೂರು ಗಂಟೆಗಳವರೆಗೆ ಕಾಯ್ದನು. ಆದರೆ ರಾಜಕುಮಾರ ಬರಲೇ ಇಲ್ಲ. ಆದ್ದರಿಂದ ಆತನು ಸಾಮ್ರಾಟನ ಸನ್ನಿಧಿಗೆ ಬಂದು ಘಟಿಸಿದ್ದನ್ನೆಲ್ಲ ಹೇಳಿದಾಗ ಕಾರಣವನ್ನು ಹುಡುಕಿ ತಿಳಿಸಬೇಕೆಂದು ಅವನಿಗೆ ಸಾಮ್ರಾಟನು ಹೇಳಿದನು. ಅದೇ ಪ್ರಕಾರ ಪ್ರಭು ಸನ್ನಿಧಿಗೆ ಮತ್ತೆ ಬಂದು ಖಾನನು ರಾಜಕುಮಾರನು ಅಂದದ್ದನ್ನು ಹೇಳಿದನು, "ನಾನು ಜ್ಞಾನವನ್ನು ಸಂಪಾದಿಸುತ್ತಲೇ ಇದ್ದೇನೆ. ನಾನು ಏನು ಪಡೆಯಬೇಕಾಗಿತ್ತೋ ಅದನ್ನು ಪಡೆದಿದ್ದೇನೆ. ಇಡೀ ನನ್ನ ಜೀವನವನ್ನೇ ಅಭ್ಯಾಸ ಕೋಣೆಯಲ್ಲಿ (ಮಕ್ತಾಬ ಖಾನಾದಲ್ಲಿ) ಕಳೆಯಬೇಕೇನು ?" ರಾಜಕುಮಾರನ ಜಂಬದಿಂದ ಸಾಮ್ರಾಟನಿಗೆ ತೀರ ಅಸಮಾಧಾನವೆನಿಸಿ ಅವನನ್ನು ಕರೆಸಿದನು. ಮತ್ತು ಹೀಗೆ ಹೇಳಿದನು, "ಜ್ಞಾನವಿಲ್ಲದ ಮನುಷ್ಯ ಜೀವಿ ಕೇವಲ ಪಶು, ರಾಜಕುಮಾರರಿಗೆ ಇದರಿಂದ ಬಿಡುಗಡೆ ಇಲ್ಲ". ಆ ಬಳಿಕ ರಾಜಕುಮಾರನು ತನ್ನ ಶಿಬಿರದಿಂದ ಶುಕ್ರವಾರದ ಪ್ರಾರ್ಥನೆಗೂ ಹೊರಗೆ ಹೋಗತಕ್ಕದ್ದಲ್ಲ ಎಂದು ಸಾಮ್ರಾಟನ ಅಪ್ಪಣೆಯಾಯಿತು. ಹೀಗಾಗಿ ಒಂದು ತಿಂಗಳು ಹದಿನೈದು ದಿನಗಳ ವರೆಗೆ ರಾಜಕುಮಾರನಿಗೆ ತನ್ನ ಕುರ್ನಿಶನ್ನು ಮಾಡುವುದಾಗಲಿಲ್ಲ. ತದನಂತರ ಪಿತೃವಾತ್ಸಲ್ಯದಿಂದಾಗಿ ಅವನ ತಪ್ಪನ್ನು ಮನ್ನಿಸಿ ಹೇಳಿದನು, "ಸುಖದ (ವಿದ್ಯೆಯ) ಪ್ರಾಪ್ತಿಯ ವಿಷಯದಲ್ಲಿ ಈ ಬಗೆಯ ಔದಾಸೀನ್ಯವನ್ನು ಸಹಿಸಲು ಸಾಧ್ಯವಿಲ್ಲ".

ರಾಜಾ ಜಾಟನ ನರಕಾಗಮನ :

ಇದೇ ಅವಧಿಯಲ್ಲಿ ಸರ್ವಶಕ್ತನ ಕೃಪೆ ಮತ್ತು ಸಾಮ್ರಾಟನ ಸುದೈವ ರಾಜಾ ಜಾಟನ

ಮೃತ್ಯುವಿನಲ್ಲಿ ಕಾಣಿಸಿತು. ಅದರ ವಿವರ ಇಂತಿದೆ. ಪಾರಖಾ ಮತ್ತು ಖತಾರಿಯಾ ಇವುಗಳ ಜಮೀನುದಾರಿಯನ್ನು ಕುರಿತು ಶೇಖಾವತ್ ಹಾಗೂ ಚೌಹಾನ ಕುಲಗಳ ನಡುವೆ ಭಿನ್ನಾಭಿಪ್ರಾಯಗಳಿದ್ದವು. ಕಾಲಕ್ರಮದಲ್ಲಿ ಅವರಲ್ಲಿ ದ್ವೇಷ ಮತ್ತು ವೈರತ್ವದ ವಾತಾವರಣ ಸೃಷ್ಟಿಯಾಗಿ ದೊಡ್ಡ ಸಂಖ್ಯೆಯಲ್ಲಿ ಸೈನಿಕರ ತಂಡಗಳು ಜಮಾಯಿಸಿ ಕೆಲವು ಸಲ ಒಬ್ಬರಿಗೊಬ್ಬರು ಬಡಿದಾಡುತ್ತಿದ್ದರು. ಒಮ್ಮೆ ಶೇಖಾವತರು ಯಶಸ್ವಿಯಾದರೆ ಮತ್ತೊಮ್ಮೆ ಚೌಹಾನರದು ಮೇಲುಗೈ ಆಗುತ್ತಿತ್ತು. ಆದ್ದರಿಂದ ಚೌಹಾನರು ಜಾಟ ರಾಜಾನ ಸಹಾಯ ಯಾಚಿಸಿದರೆ, ಶೇಖಾವತರು ಸಿಪೇದಾರ ಖಾನನ ಭಾವನಾದ ಶಾಹಜೀಯನ್ನು ವಿನಂತಿಸಿಕೊಂಡರು. ಶಾಹಜೀ ಮೇವಾಡ್ದ ಫೌಜದಾರನಾಗಿದ್ದು ಪ್ರತಿನಿಧಿಯ (ನಾಯಿಬ) ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದನು.

ಸ್ವಲ್ಪದರಲ್ಲಿ ಹೇಳುವುದಾದರೆ, ಪಿಜಾಲ ಎಂಬ ಹಳ್ಳಿಯ ನೆರೆಹೊರೆಯಲ್ಲಿ ಮತ್ಸುರದ ಈ ರಜಪುತರ ಎರಡೂ ಬಣಗಳಲ್ಲಿ ಕಾದಾಟವಾಗಿ ಅನೇಕರು ಸತ್ತರು. ಅಷ್ಟರಲ್ಲಿ ಅಹಂಕಾರ ಮತ್ತು ಶೌರ್ಯದಿಂದ ತುಂಬಿದ್ದ ರಾಜಾ ಜಾಟನು ಅಲ್ಲಿಗೆ ಬಂದು ಕಾಳಗದಲ್ಲಿ ಧುಮಿಕಿದನು. ಆಗ ಸಿಪೇಹದಾರ ಖಾನ ಬಹಾದೂರನ ಸೇವೆಯಲ್ಲಿದ್ದ ಒಬ್ಬ ನಿಷ್ಣಾತ ಗುರಿಕಾರನಿಗೆ ರಾಜಾ ಜಾಟನು ಯುದ್ಧಕ್ಕೆ ತೊಡಗಿದ್ದು ತಿಳಿಯಿತು. ಅವನು ಗಿಡವೊಂದನ್ನೇರಿ ರಾಜಾನ ಮೇಲೆ ಗುರಿಯಿಟ್ಟನು. ಅವನ ಬಾಣ ರಾಜಾನ ಎದೆಯಲ್ಲಿ ನೆಟ್ಟಿತು. ಕುದುರೆಯ ಮೇಲಿಂದ ನೆಲಕ್ಕುರುಳಿದ ರಾಜಾ ತತ್‌ಕ್ಷಣವೇ ಅಸುನೀಗಿದನು. ಚೌಹಾನರು ಓಡಿ ಹೋದರು. ಆಗ ವಿಜಯ ದುಂದುಭಿ ಮೊಳಗಿದವು. ದೇವರಿತ್ತ ಈ ಯಶಸ್ಸನ್ನು ಅನುಸರಿಸುತ್ತ ಶಾಹಜಿ ಆ ದುಷ್ಟ ದಂಗೆಕೋರನ ತಲೆ ಕತ್ತರಿಸಿ ಅದನ್ನು ತನ್ನ ಸೇವಕನೊಬ್ಬನ ಮೂಲಕ ಪ್ರಭು ಸನ್ನಿಧಿಗೆ ಕಳಿಸಿದನು. ಅಜಮೀರದಿಂದ (ವಿಜಾಪುರದ ವರೆಗೆ) ಇಪ್ಪತ್ತೆರಡು ದಿನಗಳಲ್ಲಿ ದಾರಿ ಕ್ರಮಿಸಿ ಬಂದು ಆ ಸೇವಕನು ಖಾನನ ಓಲೆಯೊಂದಿಗೆ ಆ ತಲೆಯನ್ನು ಸಾಮ್ರಾಟನಿಗೆ ಹಾಜರುಪಡಿಸಿದನು. ಆ ಶಾಪಗ್ರಸ್ತ ತಲೆಯನ್ನು ಕೊತವಾಲಿಯ ಬಾಗಿಲಿಗೆ ತೂಗುಹಾಕಬೇಕೆಂದು ಆಜ್ಞೆಯಾಯಿತು. ಖಾನನ ಮನಸಬವನ್ನು ೫೦೦ ಜಾಟ್‌ರಿಂದ ಮತ್ತು ತಲೆ ತಂದವನ ಮನಸಬವನ್ನು ೨೦೦ ಜಾಟರಿಂದ ಬೇಷರತ್ತಾಗಿ ಹೆಚ್ಚಿಸಲಾಯಿತು.

ಅಡಿ ಟಿಪ್ಪಣಿ :

೧) ಇನ್ನುಳಿದ ಸಮಕಾಲೀನ ಮತ್ತು ಆ ಕಾಲದ ಹತ್ತಿರದ ಆಕರಗಳು ಇದನ್ನು ಬೆಂಬಲಿಸುವುದಿಲ್ಲ. ರಾಜಕುಮಾರನನ್ನು ಎರಡು ಸಲ ಬಂಧನದಲ್ಲಿಡಲಾಯಿತು, ಮೊದಲನೆಯ ಬಾರಿ ಅವನು ರಾಜಾರಾಮನೊಡನೆ ಗುಪ್ತ ಸ್ನೇಹ ಸಂಬಂಧ ಹೊಂದಿದಾಗ ಮತ್ತು ಎರಡನೆ ಬಾರಿ ಸಾಮ್ರಾಟನನ್ನು ಧಿಕ್ಕರಿಸಿದಾಗ. ನೋಡಿ:

೨) ವಾಡಿಕೆಯಂತೆ ಈಶ್ವರದಾಸನು ಕಾಲಕ್ರಮ ನಿರೂಪಣೆಯಲ್ಲಿ ತಪ್ಪು ಮಾಡುತ್ತಾನೆ. ಮೊದಲು ರಾಜಾ ಜಾಟನ ಮರಣವನ್ನು ಕುರಿತು ಬರೆಯುತ್ತಾನೆ. ಆ ಬಳಿಕ ಅವನ ವಿಧ್ವಂಶಕ ಕೃತ್ಯಗಳನ್ನು

ಮತ್ತು ದೌರ್ಜನ್ಯಗಳನ್ನು ಕುರಿತು ವಿವರಿಸುತ್ತಾನೆ. ವ್ಯಕ್ತಿಗಳು ಹಾಗೂ ದಿನಾಂಕಗಳ ವಿಷಯಕ್ಕೆ ಸಂಬಂಧಿಸಿ ಒಂದಿಷ್ಟು ಗೊಂದಲವನ್ನು ಹೊರತುಪಡಿಸಿ ಈತನ ವಿವರಣೆ ಸರ್ವಶ್ರೇಷ್ಠವಾಗಿದೆ. ಫ್ರೆಂಚ ಹಸ್ತಪ್ರತಿ ಹೇಳುವಂತೆ "ರಾಮಚಹರಾ ರಾಜಕುಮಾರನ ಕೈಯಲ್ಲಿ ಸಿಕ್ಕನು ಮತ್ತು ಬೆನ್ನಟ್ಟಲ್ಪಟ್ಟನು. ಗಾಯಗೊಂಡ ರಾಜಾರಾಮನು ಆ ಮೇಲೆ ಬೇಗನೇ ಗಾಯಗಳಿಂದಾಗಿ ಸತ್ತನು. ರಾಮಚಹರಾನ ತಲೆಯನ್ನು ಆಗ್ರಾದಲ್ಲಿ ಕತ್ತರಿಸಿ ಕೋಟೆಯ ದೊಡ್ಡ ಗೇಟಿನ ಮೇಲೆ ಸಾರ್ವಜನಿಕವಾಗಿ ಬಜಾರದಲ್ಲಿ ಎತ್ತರದಲ್ಲಿ ಪ್ರದರ್ಶಿಸಲಾಯಿತು." ಸಾಕಿ ಮತ್ತು ಈಶ್ವರದಾಸ ಇಬ್ಬರೂ ರಾಮಚಹರಾನನ್ನು ಅಲಕ್ಷಿಸಿದ್ದಾರೆ. ಮತ್ತು ಇಬ್ಬರು ಹೇಳುವುದೆಂದರೆ ರಾಜಾರಾಮನ ತಲೆಯನ್ನು ಕತ್ತರಿಸಿ ಅದನ್ನು ವಿಜಾಪುರದಲ್ಲಿದ್ದ ಸಾಮ್ರಾಟನಿಗೆ ಕಳಿಸಿಕೊಡಲಾಯಿತು.

■

*

ಪರಿಣತ ಅಶ್ವಾರೋಹಿ ಸಾಘ್ ಖಾನನಿಂದ ಕುದುರೆಯೊಂದರ ತರಬೇತಿ

ಪರಿಣತ ಅಶ್ವಾರೋಹಿ ಸಾಘ್‌ಖಾನನು ತಾನು ತರಬೇತಿಗೊಳಿಸಿದ ಕುದುರೆಯ ಪ್ರದರ್ಶನವನ್ನು ನೀಡಿದ್ದರಿಂದ ಸಾಮ್ರಾಟನು ಅದನ್ನು ನೋಡಿ ಬಹಳ ಖುಷಿಪಟ್ಟನು. ಆ ಅಶ್ವಾರೋಹಿ ನೆಲದ ಮೇಲೆ ಒಂದು ಅರಿವೆ ತುಂಡನ್ನು ಹಾಸಿ ಕುದುರೆಗೆ ಬೊಟ್ಟು ಮಾಡಿ ಸನ್ನೆಗೈದನು. ಆಗ ಕುದುರೆ ಅರಿವೆಯ ಮೇಲೆ ಬಂದು ಕುಳಿತು ಅರಿವೆಯನ್ನು ಮೈಯೆಲ್ಲ ಸುತ್ತಿಕೊಂಡಿತು. ಒಂದು ಗಂಟೆಯಾದರೂ ಅದು ಅಲ್ಲಿಂದ ಕದಲಲಿಲ್ಲ. ಆ ಮೇಲೆ ಕುದುರೆಯನ್ನು ಆ ಕಟ್ಟಿನಿಂದ ಹೊರತರಲಾಯಿತು. ಆ ಬಳಿಕ ಬಿಡಾ ಒಂದನ್ನು ಒಬ್ಬ ವ್ಯಕ್ತಿಯ ಕೈಯಲ್ಲಿತ್ತು, ಕುದುರೆಗೆ ಸಂಜ್ಞೆ ಕೊಡಲಾಯಿತು. ಆ ಬಿಡಾ ಹಿಡಿದ ವ್ಯಕ್ತಿಯ ಹತ್ತಿರ ಹೋಗಿ ಕುದುರೆಯು ತನ್ನ ತುಟಿಗಳೆರಡರಲ್ಲಿ ಆ ಬಿಡಾ ಹಿಡಿದುಕೊಂಡು ಅಶ್ವಾರೋಹಿಗೆ ಒಯ್ದು ಕೊಟ್ಟಿತು.

ಇದನ್ನು ನೋಡಿ ಸಾಮ್ರಾಟನು ಮುಗುಳ್ನಕ್ಕು ಐದು ಸುವರ್ಣ ನಾಣ್ಯಗಳನ್ನು ಇನಾಮವಾಗಿ ಆ ಅಶ್ವಾರೋಹಿಗೆ ಕೊಟ್ಟನು.

■

*

ಗ್ವಾಲಿಯರದ ಸಮೀಪದಲ್ಲಿ ಪಹಾಡ ಸಿಂಘ ಗೌರನ ಮೊಮ್ಮಗ ಗೋಪಾಲ ಸಿಂಘನ ಬಂಡಾಯ ಮತ್ತು ಆಂಧ್ರಾಖಿ ಕೋಟೆಯನ್ನು ಅವನು ಮುತ್ತಿಗೆ ಹಾಕಿದ್ದು

ಗ್ವಾಲಿಯರದಿಂದ ಬಂದ ವರದಿಯು ಸಾಮ್ರಾಟನಿಗೆ ತಿಳಿಸಿದ್ದೇನೆಂದರೆ ಪಹಾಡ ಸಿಂಘ ಗೌರನ ಮೊಮ್ಮಗ ಗೋಪಾಲ ಸಿಂಘನು ಕಿಡಿಗೇಡಿಗಳ ದೊಡ್ಡ ತಂಡವನ್ನು ಕಟ್ಟಿಕೊಂಡು ಬಂದು ಆಂದ್ರಾಖಿಯ ಕೋಟೆಗೆ ನುಗ್ಗಿ ಮುತ್ತಿಗೆ ಹಾಕಿದನು.[1] ತನ್ನ ಜಮೀನುದಾರಿಯಲ್ಲಿದ್ದ ಕೋಟೆಗಾಗಿ ತನ್ನ ಬಖತವಾರ ಭಡೌರಿಯಾ ಶೂರತನದಿಂದ ಅವನ ವಿರುದ್ಧ ಹೋರಾಡಿದನು. ಆದರೆ ಎರಡು ದಿನಗಳ ಬಳಿಕ ದಂಗೆಕೋರರ ಸಂಖ್ಯೆ ಆತನ ಸೈನ್ಯಕ್ಕಿಂತ ದೊಡ್ಡದಾಗುತ್ತ ಹೋಗಿ ಕೋಟೆ ಗೋಪಾಲೆ ಸಿಂಘನ ಕೈವಶವಾಯಿತು. ತನ್ನ ಜಮೀನನ್ನು ತನ್ನೆಲ್ಲ ವಸ್ತುಗಳನ್ನು ಬಿಟ್ಟು ಭಡೌರಿಯಾ ಗ್ವಾಲಿಯರಕ್ಕೆ ಓಡಿ ಹೋದನು;[3] ಫೌಜದಾರ ಸಫ್ತರಖಾನ ಅವನಿಗೆ ಸಹಾಯ ಮಾಡಲಿಲ್ಲ. ಆದ್ದರಿಂದ ಸಪ್ತರಖಾನನ ಮನಸಬದಿಂದ ೧೦೦ ಸವಾರರನ್ನು ಕಡಿಮೆಗೊಳಿಸಬೇಕೆಂದು ಮತ್ತು ದಂಡಧಾರಿ ಮೊಹಮ್ಮದ ಅಖಿಲನನ್ನು ಗ್ವಾಲಿಯರದ ಫೌಜದಾರ (ಖಾನ) ನಲ್ಲಿಕೆ ಕಳಿಸಿಕೊಡಬೇಕೆಂದು ಆಜ್ಞೆ ಹೊರಟಿತು.

ನ್ಮಧದ ಫೌಜದಾರ ಸುರತಸಿಂಘ ಮತ್ತು ಅಜ್ದ-ಇ-ಹಾಥಿಯ ಫೌಜದಾರ ದಿಲವಾರ ಖಾನ[2] ಇವರಿಬ್ಬರೂ ದಂಗೆಕೋರರನ್ನು ಸದೆಬಡೆಯಲು ಸೈನ್ಯದೊಡನೆ ಹೋಗಬೇಕೆಂದು ಮತ್ತು ಗೋಪಾಲಸಿಂಘನನ್ನು ಹೊರಹಾಕಿ ಆಂದ್ರಖಿ ಕೋಟೆಯನ್ನು ಬಖತವಾರ ಜವಾಬ್ದಾರಿಗೆ ಒಪ್ಪಿಸಬೇಕೆಂದು ತಿಳಿಸಲಾಯಿತು.

ದಿವಂಗತ ರಾಜಾನ ಸಹೋದರನ ಪುತ್ರ ಚುರಮನ ಜಾಟನ ದಂಗೆ :

ಹಿಂದಿನ ಪುಟಗಳಲ್ಲಿ ಜಾಟ ರಾಜಾನ ಸಾವನ್ನು ದಾಖಲಿಸಲಾಗಿದೆ. ಈಗ ಮೃತನಾಗಿದ್ದ ರಾಜಾನ ಸಹೋದರ ಪುತ್ರ ಚುರಮನ ಜಾಟನು ತನ್ನ ಕಕ್ಕನ ಸಾವಿನ ಸೇಡನ್ನು

ತೀರಿಸಿಕೊಳ್ಳಲು ನಿರ್ಧರಿಸಿ ಬಹುದೊಡ್ಡ ಸಂಖ್ಯೆಯಲ್ಲಿ ಕಿಡಿಗೇಡಿಗಳನ್ನು ಕೂಡಿ ಹಾಕಿದನು. ಸಿನಸಾನಿ ಮತ್ತು ಸೋಕರದಂತಹ ಕೋಟೆಗಳನ್ನು ಭದ್ರಪಡಿಸುತ್ತ ಬಂಡಾಯದ ಬಾವುಟವನ್ನು ಮೊದಲಿನ ರಾಜಾನಿಗಿಂತ ಹೆಚ್ಚು ಉಗ್ರವಾಗಿ ಹಾರಿಸಿದನು. ಅಕಬರಾಬಾದ ಮತ್ತು ಶಾಹಜಹಾನಾಬಾದಗಳಲ್ಲಿಯ ಬಹಳಷ್ಟು ಪರಗಣೆಗಳನ್ನು ಇವನು ನೆಲಸಮ ಮಾಡಿದನು. ದಂಗೆಯ ಕಾರಣದಿಂದಾಗಿ ಮಾರ್ಗಗಳು ಮತ್ತು ಇನ್ನುಳಿದ ಸಂಚಾರ ಸಾಧನಗಳು ಅಸ್ತವ್ಯಸ್ತಗೊಂಡವು.

ಶಹಾಜಹಾನಾಬಾದ ಮತ್ತು ಅಕ್ಬರಾಬಾದ ಕುರಿತು ಸಾಮ್ರಾಟನಿಗೆ ಬಂದ ವರದಿಗಳಿಂದ ವಿಷಯ ತಿಳಿದು ಆ ಪ್ರದೇಶಗಳ ನಜಿಮರು ಮತ್ತು ಫೌಜದಾರರು ಆ ದಂಗೆಕೋರರನ್ನು ಹತ್ತಿಕ್ಕಬೇಕೆಂದು ಹಜಬಲ ಹುಕುಂ ಹೊರಡಿಸಲಾಯಿತು. ಆ ಪ್ರಕಾರ ದೊಡ್ಡ ಸೈನ್ಯ ಬಲವನ್ನು ನಿಯೋಜಿಸಲಾಯಿತು.

ಈ ಮಧ್ಯದಲ್ಲಿ ರಾಜಾ ಬಿಶನಸಿಂಘನೂ ಸಾಮ್ರಾಟ ಸೇನೆಗೆ ಕೂಡಿಕೊಂಡನು. ಸಾಮ್ರಾಟನ ಆಜ್ಞೆಯ ಮೇರೆಗೆ ಸಾಮ್ರಾಜ್ಯ ಸೇನೆ ಮತ್ತು ರಾಜಾನ ಸೇನೆ ಕೂಡಿಕೊಂಡು ಚುರಮನ ಜಾಟನನ್ನು ಶಿಕ್ಷಿಸಲು ಸಾಗಿದವು. ರಾಜಾ ಉನ್ನತ ದರ್ಜೆಯ ಮನಸಬವನ್ನು ಹಾಗೆಯೇ ಇನ್ನುಳಿದ ಉಪಕಾರಗಳನ್ನು ಹೊಂದಿದ್ದರಿಂದ ತನ್ನ ಮರ್ಯಾದೆ ಮತ್ತು ಸ್ಥಾನವನ್ನು ಲಕ್ಷ್ಯದಲ್ಲಿಟ್ಟು ತನ್ನ ಪ್ರಭುವಿನ ಮೇಲೆ ಪ್ರಭಾವ ಬೀರಬೇಕೆಂದು ೨೦೦೦ ಸವಾರರನ್ನು ಮತ್ತು ೨೦೦೦೦ ಕಾಲಾಳುವನ್ನು ಹೊಸದಾಗಿ ಸೇರಿಸಿಕೊಂಡನು. ಇವರೆಲ್ಲ ಸಾಮ್ರಾಜ್ಯ ಸೇನೆ ಮಂಚೂಣಿಯನ್ನು ರಚಿಸಿದನು. ಆ ದಂಗೆಕೋರರ ಬಲಿಷ್ಠ ಸ್ಥಾನದಿಂದ ಐದು ಕರೋಹ ಅಂತರದಲ್ಲಿ ಠಾಣ್ಯ ಹೂಡಿದರು. ಬಹಳ ದಿಟ್ಟತನದಿಂದ ಬಂಡುಕೋರರು ಸಾಮ್ರಾಜ್ಯ ಸೈನ್ಯದ ಮೇಲೆ ಯುದ್ಧದ ದಾಳಿಯಿಟ್ಟಿದ್ದರಿಂದ ಘೋರ ಕಾಳಗ ಆರಂಭವಾಯಿತು.

ತತ್ಪರಿಣಾಮವಾಗಿ ಕೊಳಗಳಿಂದ ನೀರು ತರುವುದು ಮತ್ತು ಸಾಮ್ರಾಜ್ಯ ಸೇನೆಗೆ ಆಹಾರ ಪದಾರ್ಥಗಳನ್ನು ಪೂರೈಸುವುದು ಕಷ್ಟವಾಯಿತು. ಜಾಟರ ಅನಿರೀಕ್ಷಿತ ದಾಳಿಗಳು ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸಿದವು. ಆಹಾರ ಧಾನ್ಯ ಮತ್ತು ಮೇವು ಬಹು ವಿರಳವಾದವು. ಅಪರೂಪವಾದವು. ಎರಡು ಮೂರು ದಿನಗಳಲ್ಲಿ ಮೇವು ಮತ್ತು ನೀರು ಅಭಾವವೆನಿಸಿದವು. ಇಂತಹ ವಿಷಮ ಸ್ಥಿತಿಯಲ್ಲಿ ಹಸಿವಿನಿಂದ ಮನುಷ್ಯ, ಜಾನುವಾರುಗಳ ನಾಶ ಆರಂಭವಾಯಿತು. ಆದರೂ ನಾಲ್ಕು ತಿಂಗಳ ಅವಧಿಯಲ್ಲಿ ಕೋಟೆಯ ದ್ವಾರದ ಎದುರಿಗೆ ರಕ್ಷಣಾ ಕಂದಕವನ್ನು ತೋಡುವಲ್ಲಿ ಅವರು ಯಶಸ್ವಿಯಾದರು. ಮತ್ತು ಅದರ ಮುತ್ತಿಗೆಯನ್ನು ತೆರವುಗೊಳಿಸಿದರು. ದೊಡ್ಡ ತೋಪುಗಳನ್ನು ವ್ಯವಸ್ಥಿತವಾಗಿ ಇಡಲಾಯಿತು. ಸುರಂಗಗಳನ್ನು ತೋಡಲಾಯಿತು ಮತ್ತು ಸುರಕ್ಷಿತ ಗುಪ್ತ ದಾರಿಗಳನ್ನು ನಿರ್ಮಿಸಲಾಯಿತು. ಕೋಟೆಯ ಸುತ್ತಲಿನ ಅರಣ್ಯವನ್ನೆಲ್ಲ ಕತ್ತರಿಸಿ ಆ ಪ್ರದೇಶವನ್ನು ಬಯಲು ನೆಲವನ್ನಾಗಿಸಲಾಯಿತು. ಸುರಂಗ ಮಾರ್ಗವು ಕೋಟೆಯ ದ್ವಾರದ ಸಮೀಪ ಬಂದಾಗ ಅದನ್ನು ತೋಪು ಮದ್ದಿನಿಂದ ತುಂಬಿ ಸ್ಫೋಟಗೊಳಿಸಲು ಸಿದ್ಧವಿಡಲಾಯಿತು. ಆದರೆ

ಆ ದುಷ್ಟ ಜಾಟರಿಗೆ ಈ ವಿಷಯ ತಿಳಿದು ಅವರು ಸುರಂಗದ ಬಾಯಿಯನ್ನು ಮಣ್ಣು ಮತ್ತು ಗುಂಡುಕಲ್ಲುಗಳಿಂದ ಮುಚ್ಚಿದರು. ಮದ್ದಿಗೆ ಬೆಂಕಿ ಇಟ್ಟಾಗ ಅದು ಸರಿಯಾಗ ಕಾರ್ಯ ಮಾಡಲಿಲ್ಲ. ಅದರ ಬಾಯಿ ಮುಚ್ಚಿದ್ದರಿಂದ ಅದು ಹಿಂದೆ ಸ್ಫೋಟಗೊಂಡಿತು. ಆ ಸ್ಫೋಟವು ಸುರಂಗದ ಹೊರಮೈಯನ್ನು ಅರಳಿಯಂತೆ ಹವೆಯಲ್ಲಿ ಕಿತ್ತೆಸೆಯಿತು. ತತ್ಪರಿಣಾಮವಾಗಿ ಫಿರಂಗಿ ದಳದವರು, ಮೇಲ್ವಿಚಾರಕರು ಮತ್ತು ಸೈನಿಕರು ಆ ಸ್ಫೋಟದ ತೀಕ್ಷ್ಣ ಶಾಖದಿಂದಾಗಿ ಮೇಲೆ ಎಸೆಯಲ್ಪಟ್ಟರಲ್ಲದೆ ಅನೇಕರು ನೆಲಕ್ಕುರುಳಿದರು. ಆದರೆ ಮತ್ತೆ ಸಾಮ್ರಾಜ್ಯ ಸೈನಿಕರು ಸುರಂಗಗಳನ್ನು ಇಡುವ ಕಾರ್ಯದಲ್ಲಿ ತೊಡಗಿದರು. ಒಂದು ತಿಂಗಳೊಳಗಾಗಿ ಸುರಂಗ ಮಾರ್ಗವನ್ನು ಕೊರೆಯುತ್ತ ಅದನ್ನು ಕೋಟೆಯ ಅಡಿಗೆ ತಂದು ಅದರ ಬಾಯಿಯನ್ನು ಸಿಡಿಮದ್ದಿನಿಂದ ತುಂಬಿದರು. ರಾಜ್ಯ ಮತ್ತು ಆ ರಾಜ್ಯದ ಸೇವಕರೆಲ್ಲ ಕೋಟೆಯ ಒಳಕ್ಕೆ ನುಗ್ಗಲು ಎಲ್ಲ ಕಡೆಗಳಲ್ಲೂ ಸಿದ್ಧರಾಗಿ ನಿಂತರು. ಸಾಮ್ರಾಜ್ಯದ ಸೈನಿಕರು ಸುರಂಗಕ್ಕೆ ಬೆಂಕಿ ಇಡಲಾಗಿ ಅದು ಸ್ಫೋಟಗೊಂಡು ಕೋಟೆಯ ಮೇಲ್ಭಾಗದ ರಕ್ಷಣಾ ಗೋಡೆಗಳನ್ನು ಹಾರಿಸಿ ಬಿಟ್ಟಿತು. ಮುರಿದು ಬಿದ್ದ ಗುಪ್ಪೆ ಅರ್ಧ ಒಳಗೆ ಅರ್ಧ ಹೊರಗೆ ಸಾಮ್ರಾಜ್ಯ ಸೈನ್ಯದ ಶಿಬಿರದ ಕಡೆಗೂ ಬಿತ್ತು. ಕೋಟೆಯ ಗೋಡೆಯ ಮೇಲೆ ಜಮಾಯಿಸಿದ್ದ ಅನೇಕ ದುಷ್ಟಸ್ವಭಾವದ ಜಾಟರು ಮೇಲೆ ಎಸೆಯಲ್ಪಟ್ಟರು. ಅನೇಕರು ಗುಪ್ಪೆಯ ಕೆಳಗೆ ಸಿಕ್ಕು ಸತ್ತರು. ಸುರಂಗಗಳ ಬೆಂಕಿ ಆರಿದ ಮೇಲೆ ರಾಜಾ ಮತ್ತು ಎಲ್ಲ ಕಡೆಯಿಂದ ಬಂದ ಅವನ ಅನುಯಾಯಿಗಳು ತಮ್ಮ ಕುದುರೆಗಳನ್ನು ಹುರುಪುಗೊಳಿಸಿ ಕೋಟೆಯ ಬಿರುಕಿನೊಳಗಿಂದ ಹಾಯ್ದು ಒಳನುಗ್ಗಿದರು. ಆದರೆ ಜಾಟ ಸೈನಿಕರು ಗಟ್ಟಿಯಾಗಿ ನಿಂತು ದಿಟ್ಟತನದಿಂದ ಕೋಟೆಯನ್ನು ರಕ್ಷಿಸಿದರು. ಎರಡು ಮೂರು ಗಂಟೆಗಳವರೆಗೆ ಕಾಳಗ ನಡೆಯಿತು; ಕ್ರೋಧಾವೇಶದಿಂದ ಸಾಗಿತು. ಕೊನೆಗೆ ಸಾಮ್ರಾಜ್ಯ ಸೇನೆಗೆ ಜಯವಾಯಿತು. ಶತ್ರುವಿಗೆ ಸೋಲಾಯಿತು. ಈ ರೀತಿಯಾಗಿ ಶಾಶ್ವತ ಸಾಮ್ರಾಜ್ಯದ ಸೇವಕರು ವಿಜಯಿಗಳಾದರು. ಸುಮಾರು ೧೫೦೦ ಸಾಮ್ರಾಜ್ಯದ ಸೈನಿಕರು ಕೊಲ್ಲಲ್ಪಟ್ಟರು. ಇಲ್ಲವೆ ಗಾಯಗೊಂಡರು. ಮಾಮೂರ ಖಾನನು ತನ್ನ ೨೦೦ ಸವಾರರೊಂದಿಗೆ ಯುದ್ಧಭೂಮಿಯಲ್ಲಿ ಮಡಿದನು. ರಾಜಾನ ಸೇವೆಯಲ್ಲಿದ್ದ ರಜಪೂತರಲ್ಲಿ ಸುಮಾರು ೧೦೦ ಜನ ಮಡಿದರು, ಗಾಯಗೊಂಡರು. ರಾಜಾ ಮತ್ತು ಉಳಿದ ಸಾಮ್ರಾಜ್ಯ ಸೇವಕರು ಅಲ್ಲಿಯೇ ಬೀಡು ಬಿಟ್ಟರು.

ಮರುದಿನ ರಾಜಾ ಬಿಶನ್ ಸಿಂಘನಿಗೆ ತಿಳಿದು ಬಂದದ್ದೇನೆಂದರೆ "ಶತ್ರು ಸೋಕರ ಕೋಟೆಯಲ್ಲಿ ಆಶ್ರಯ ಹೊಂದಿದ್ದು ಅವನ ಕೇಡು ಬುದ್ಧಿಯಿಂದ ಸೈನಿಕರನ್ನು ಕಲೆ ಹಾಕುತ್ತಿದ್ದಾನೆ." ಸಾಮ್ರಾಜ್ಯದ ಉಳಿದ ಸೇವಕರೊಡಗೂಡಿ ಕೋಟೆಯ ಮೇಲೆ ದಾಳಿಯಿಟ್ಟನು. ಅಕಸ್ಮಾತ್ತಾಗಿ ಸರಕು ಸಾಮಾನುಗಳನ್ನು ತರುವುದಕ್ಕಾಗಿ ಕೋಟೆಯ ಬಾಗಿಲುಗಳು ತೆರೆದಿದ್ದನು. ಅಡೆತಡೆಯಿಲ್ಲದೆ ಸಾಮ್ರಾಜ್ಯ ಸೇನೆ ಒಳಗೆ ಸವಾರಿಗೈದಿತು. ಅಡ್ಡಗಟ್ಟಿದವರನ್ನೆಲ್ಲ ಖಡ್ಗದಿಂದ ಕತ್ತರಿಸುತ್ತ ಸಾಗಿದರು. ಐದುನೂರು ಜನರೊಂದಿಗೆ ದಂಗೆಗಾರನು ಯುದ್ಧ ಕೈದಿಯಾಗಿ ಸೆರೆಯಾಳಾದನು. ಆ ಬಳಿಕ ಸಾಮ್ರಾಜ್ಯ ಸೇನೆ ಕೇಂದ್ರ ಕಚೇರಿಗೆ (ಸ್ಥಾನಕ್ಕೆ) ಮರಳಿತು.

ಶಿಬಿರಕ್ಕೆ ತೆರಳಿದ ಮೇಲೆ ಬಿಶನ್ ಸಿಂಘನು ವಿಜಯದ ವಿಷಯವನ್ನು ಮತ್ತು ಅಪರಾಧದಲ್ಲಿ ಶಾಮೀಲಾದ ೫೦೦ ಜನರೊಂದಿಗೆ ವೈರಿಯನ್ನು ಬಂಧಿಸಿದ್ದನ್ನು ವಿವರಿಸುವ ಓಲೆಯನ್ನು ಕಳಿಸಿದನು. ಪತ್ರದ ವಿಷಯವನ್ನು ತಿಳಿದುಕೊಂಡು ಮಹಾಪ್ರಭು ರಾಜಾನನ್ನು ಮತ್ತು ಉಳಿದ ಅಧಿಕಾರಿಗಳನ್ನು ಅವರವರ ಯೋಗ್ಯತೆಗೆ ತಕ್ಕಂತೆ ಮರ್ಯಾದೆ ಮಾಡಿ ಸತ್ಕರಿಸಿದನು ಮತ್ತು ಎಲ್ಲ ಕೈದಿಗಳನ್ನು ಸರಿಯಾಗಿ ಕಾಯಬೇಕು ಎಂದು ಆಜ್ಞೆ ಹೊರಡಿಸಿದನು.[೫]

ಕಾಶಘರದ ದೊರೆಯ ರಾಜದೂತನ ಆಗಮನ :

ತನ್ಮಧ್ಯ ಕಾಶಘರದ ದೊರೆಯ ರಾಜದೂತನು ಸಾಮ್ರಾಟನನ್ನು ಭೇಟಿ ಮಾಡಿದನು[೬]. ಅವನು ಸಾಮ್ರಾಟನ ಶಿಬಿರದ ಹತ್ತಿರ ಬಂದೊಡನೆ ಸಾಮ್ರಾಟನ ಆಜ್ಞೆಯ ಮೇರೆಗೆ ಅವನನ್ನು ಕರೆತಂದು ಸಾಮ್ರಾಟನಿಗೆ ಪರಿಚಯಕ್ಕೆಂದು ಖುಸ್ರೌ ಬೇಗನನ್ನು ಆಸ್ಥಾನದಿಂದ ಕಳಿಸಿಕೊಡಲಾಯಿತು. ಅವನು ಬಂದು ತಸ್ಲೀಮಗಳ ಎಲ್ಲ ವಿಧಿಗಳನ್ನು ಪೂರೈಸಿದ ಬಳಿಕ ಸಾಮ್ರಾಟನಿಗೆ ಕಾಶಘರ ದೊರೆಯ ಪರವಾಗಿ ಕುರಾನದ ಒಂದು ಪ್ರತಿಯನ್ನು, ಒಂದು ಚೀಲ ಮಸಿಯನ್ನು ಮತ್ತು ತನ್ನ ಪರವಾಗಿ ತುಪ್ಪಳ ಚರ್ಮದ ಉಡುಪನ್ನು ಕೊಡಲಾಗಿ ಅದೆಲ್ಲವನ್ನು ಸಾಮ್ರಾಟನು ಸ್ವೀಕರಿಸಿದನು. ಅವನಿಗೆ ವಿಶೇಷ ನಿಲುವಂಗಿಯನ್ನಿತ್ತು ಬಂಗಾರ, ಬೆಳ್ಳಿ ಹಾಗೂ ನಗದು ಹಣವನ್ನು ಕಾಣಿಕೆಯಾಗಿ ಕೊಡಲಾಯಿತು. ಅವನು ಆಸ್ಥಾನದಿಂದ ನಿರ್ಗಮಿಸಲು ಅನುಮತಿ ಪಡೆದನು. ಕಾಶಘರದ ದೊರೆಗೆ ಒಂದು ಲೇಖನಿ ಒಂದು ರತ್ನಖಚಿತ ಕಿರುಗತ್ತಿ, ಬಟ್ಟೆ ಮತ್ತು ಹಿಂದುಸ್ತಾನದ ಇನ್ನುಳಿದ ವಸ್ತುಗಳನ್ನು ಕಳಿಸಲಾಯಿತು.

ಕೊನೆ ಟಿಪ್ಪಣಿಗಳು:

೧. ಬಂಧನದಿಂದ ಬಿಡುಗಡೆಗೊಂಡು ದಂಗೆಯೆದ್ದ (ಸುಮಾರು ೧೭೦೪) ಸಿರೋಜದ ಗೋಪಾಲ ಚೌಧುರಿಯೆಂದು ಅಥವಾ ರಾವ ಗೋಪಾಲ ಸಿಂಘ ಛಾಂದವಾಟನೆಂದು (ಇನಾಯತದ ಅಖಮ, ೩೬) ಈ ಗೋಪಾಲ ಗೌರನನ್ನು ತಪ್ಪಾಗಿ ಭಾವಿಸಬಾರದು.

೨. ಮೀರ ಜಮಾಲುದ್ದೀನ ಹುಸೇನ, ಸಫ್ದರ ಖಾನನು ೨೦೦೦ ದ ಮನಸಬದಾರನಾಗಿದ್ದನು.

೩. ಶೇಖ ಅಬ್ದುಲ್ ಅಜೀಜ, ಅಬ್ದುಲ್ ಅಜಿಜ್ ಖಾನ್ ದಿಲ್ವಾರ ಖಾನ್ ೧೫೦೦/೭೦೦ ಜಾಟ ಮತ್ತು ಸವಾರರ ಮನಸಬ ಹೊಂದಿದ್ದನು.

೪. ಚುರಮನನು ರಾಜಾರಾಮನ ಸಹೋದರನ ಮಗನೆಂದು ಈಶ್ವರದಾಸ ಹೇಳುತ್ತಾನೆ. ಆದರೆ ಉಳಿದೆಲ್ಲ ಆಕರಗಳು ರಾಜಾರಾಮನೊಡನಿದ್ದ ಈತನ ಬಂಧುತ್ವದ ವಿಷಯಕ್ಕೆ ಮೌನವಾಗಿದೆ. ವಿಲಿಯಂ ಇರವಿನ್ ಉಪಯೋಗಿಸಿದ ಪರ್ಶಿಯನ್ ಗ್ರಂಥವೊಂದು ಭಜ್ಜಾ ಈತನ ತಂದೆ ಎಂದು ಹೇಳುತ್ತದೆ. 'ಲೇಟರ್ ಮುಘಲ್; ೧, ೩೨೨. ಚುರಮನ್‌ನ ಜೀವನವನ್ನು ಕುರಿತು ವಿವರವನ್ನು (ಔರಂಗಜೇಬನ ಮರಣದ ನಂತರ ದಾಖಲಿಸಲಾಗಿದ್ದು)

೫. ಸಿನಸಾನಿ ಕೋಟೆಯನ್ನು ಕೈವಶಮಾಡಿಕೊಂಡ ಬಳಿಕ ತ್ವರಿತವಾಗಿ, ಸೋಕರವನ್ನು ವಶಪಡಿಸಿಕೊಳ್ಳಲಾಯಿತೆಂದು ಮತ್ತು ದಂಗೆಕೋರನು ಸೋಕರದಲ್ಲಿ ಸೆರೆ ಸಿಕ್ಕನೆಂದು ಈಶ್ವರದಾಸ

ಹೇಳುತ್ತಾನೆ. ಇದು ತಪ್ಪು. ಈ ಎರಡು ವಿಜಯಗಳ ನಡುವೆ ಒಂದು ವರುಷದ ಅಂತರವಿದೆ. ಸಿರಸಾನಿಯನ್ನು ಗೆದ್ದದ್ದು ೧೬೯೦ ರಲ್ಲಿಯಾದರೆ ಸೋಕರವನ್ನು ೨೧ನೇ ಮೇ ೧೬೯೧ ರಲ್ಲಿ ಗೆಲ್ಲಲಾಯಿತು. ನೋಡಿ ಎಂ.ಎ.೩೩೪, ೩೪೦; ಹಮೀದ ಉದ್ ದಿನ್‌ನ 'ಅಖಮ್', ೨೮

೬ ಸಾಕಿ ಅವನನ್ನು ಅಬ್ದುಲ್ ರಹೀಮ ಬೇಗ ಎಂದು ಕರೆಯುತ್ತಾನೆ.

■

*

ಪಹಾಡ ಸಿಂಘನ ದೊಮ್ಮದ ಗೋಪಾಲ ಸಿಂಘನು ಗ್ವಾಲಿಯರ ಸಮೀಪದಲ್ಲಿ ಬಂಡೆದ್ದುದು

ಗ್ವಾಲಿಯರ ಆಡಳಿತಕ್ಕೊಳಪಟ್ಟ ಮಲೋಹ ಪ್ರದೇಶದಲ್ಲಿದ್ದ ಖಾನಜೌದಾಹರ ಎಂಬ ಹಳ್ಳಿಯ ಕಡೆಗೆ ಗ್ವಾಲಿಯರದ ಫೌಜದಾರ ಸಫ್ತರ್ ಖಾನನು ಹೋಗುತ್ತಿದ್ದಾಗ ಅವನ ಮೇಲೆ ದಂಗೆಕೋರರು ದಾಳಿ ಮಾಡಿದರೆಂದು ಗ್ವಾಲಿಯರದಿಂದ ಬಂದ ವರದಿಗಳಿಂದ ಸಾಮ್ರಾಟನಿಗೆ ತಿಳಿದು ಬಂದಿತು. ಬಳಿಕ ಆ ದಂಗೆಕೋರರು ಹಿಂದಿರುಗಿ ಕೋಟೆಯಲ್ಲಿ ಹೊಕ್ಕು ಹೋರಾಟಕ್ಕೆ ಅಣಿಯಾದರು. ಆಗ ಖಾನನೂ ಕೋಟೆಯ ಮೇಲೆ ಮುತ್ತಿಗೆ ಹಾಕಿದನು. ಬಾಣಗಳ ಮತ್ತು ಬಂದೂಕಿನ ಕಾಳಗ ಆರಂಭವಾಗಿ ಹದಿನೈದು ದಿನ ಹೋರಾಟವಾದರೂ ಕೋಟೆ ಕೈವಶವಾಗಲಿಲ್ಲ. ಯುದ್ಧ ತಾರಕಕ್ಕೇರಿದಾಗ ಭೀಕರ ಬಂದೂಕಿನ ಬೆಂಕಿಯನ್ನು ಮತ್ತು ಬಾಣಗಳ ಸುರಿಮಳೆಯನ್ನು ಲೆಕ್ಕಿಸದೆ ಧೈರ್ಯದಿಂದ ಕೆಲ ಸೈನಿಕರೊಂದಿಗೆ ಮನ್ನುಗ್ಗಿದ ಖಾನನು ಕೋಟೆಯನ್ನು ಏರುವಲ್ಲಿ ಯಶಸ್ವಿಯಾದನು. ಕೋಟೆ ಗೋಡೆಯ ನೆತ್ತಿಯ ಮೇಲಿಂದ ಕಲ್ಲುಗಳನ್ನು ಉರುಳಿಸುತ್ತಿದ್ದ ಶತ್ರುಗಳನ್ನು ಕೆಳಗುರುಳಿಸಿ ತನ್ನ ಜನರನ್ನು ಅಲ್ಲಿ ಗಟ್ಟಿಯಾಗಿ ನಿಲ್ಲಿಸಿದನು. ಹೀಗೆ ಮಾಡಿ ಮರುದಿನ ಕೋಟೆಯ ಮೇಲೆ ಶೀಘ್ರವಾಗಿ ಮುತ್ತಿಗೆ ಹಾಕಬೇಕೆಂದು ನಿರ್ಣಯಿಸಿ ಶಿಬಿರಕ್ಕೆ ಮರಳಿದನು. ಆದರೆ ಈ ಎಲ್ಲ ವ್ಯವಸ್ಥೆಯಿಂದ ದಂಗೆಕೋರ ಪಹಾಡ ಸಿಂಘನು ಬಹಳ ಗಾಬರಿಯಾದನು. ಪ್ರಾಣದ ಆಸೆ ಬಿಟ್ಟವನಾಗಿ ಅವನು ರಾತ್ರಿ ದಾಳಿ ಮಾಡಿದನು. ಖಾನನ ಮರಣ ಗಳಿಗೆ ಬಂದಿದ್ದರಿಂದ ಕ್ಷಾತ್ರ ಪ್ರತಿಷ್ಠೆಯಿಂದ ವೈರಿಗಳೊಡನೆ ಹೋರಾಡಲು ಹೋದನು. ಆ ಕೋಲಾಹಲದಲ್ಲಿ ಬಾಣವೊಂದು ಅವನ ಹೊಟ್ಟೆಯಲ್ಲಿ ನಟ್ಟು ಅವನು ಅಸು ನೀಗಿದನು. ಈ ಘಟನೆಯ ನಂತರ ಸಾಮ್ರಾಟನು ಸಫ್ತರ್ ಖಾನನ ಸಹೋದರನನ್ನು ಗ್ವಾಲಿಯರದ ಫೌಜದಾರನನ್ನಾಗಿ ನಿಯಮಿಸಿ ದಂಗೆಕೋರರನ್ನು ಶಿಕ್ಷಿಸಲು ಅವನಿಗೊಪ್ಪಿಸಿದನು.

ಶ್ರೀರಂಗ ಪಟ್ಟಣದ ಜಮೀನುದಾರನಾದ ರಾವ ಜಗದೇವನು ಕಳಿಸಿದ ರೂ. ಎರಡು ಲಕ್ಷ ಐವತ್ತು ಸಾವಿರ ಕಪ್ಪನ್ನು ರಾಜದಂಡಧಾರಿ ಮೀರ ಅಲಂ ತಂದಿತ್ತನು. ಅದನ್ನು

ಸಾಮ್ರಾಜ್ಯದ ಬೊಕ್ಕಸಕ್ಕೆ ಸೇರಿಸಲಾಯಿತು. ಅಸಿರಗಢದಲ್ಲಿ ಹಿಡಿದಿಡಲ್ಪಟ್ಟಿದ್ದ ಸಾಂಭಾನ ಪತ್ನಿಯ ಮೇಲೆ ಅಲ್ಲಿಯ ಸೈನ್ಯಾಧಿಕಾರಿ ಶೇಖ ಜಹಾನನು ಬಲಾತ್ಕಾರದಿಂದ ಅತ್ಯಾಚಾರವೆಸಗಿದ್ದ. ಅವಳು ಗರ್ಭಿಣಿಯಾಗಿದ್ದಳು. ಈ ವಿಷಯವನ್ನು ಸಾಮ್ರಾಟನಿಗೆ ತಿಳಿಸಿದಾಗ ಆ ಸೈನ್ಯಾಧಿಕಾರಿಯನ್ನು ಆಸ್ಥಾನಕ್ಕೆ ಕರೆಸಲಾಯಿತು. ಅವನ ಮೇಲೆ ಕಣ್ಣಿಡಲು ಸಲಾಹತ್ ಖಾನನಿಗೆ ಆಜ್ಞಾಪಿಸಲಾಯಿತು. ಅವನನ್ನು ನಿಶ್ಶಸ್ತ್ರಗೊಳಿಸಿ ರಾತ್ರಿಯಲ್ಲಿ ಕರೆತರಲು ಖಾನನು ತನ್ನ ಸೇವಕರಿಗೆ ಹೇಳಿದನು. ಆದರೆ ಶೌರ್ಯಪ್ರಜ್ಞೆಯಿಂದ ಪ್ರಚೋದಿಸಲ್ಪಟ್ಟ ಆತನು ತನ್ನ ಮೈಮೇಲಿನ ಶಸ್ತ್ರಗಳನ್ನು ತೆಗೆಯಲು ನಿರಾಕರಿಸಿದನು. ಈ ವಿಷಯದಲ್ಲಿ ವಾದವಿವಾದ ನಡೆದಾಗ ಶೇಖನು ತನ್ನ ಟೊಂಕದಿಂದ ಜಾಮಧಾರವನ್ನು ತೆಗೆದು ತನ್ನ ಹೊಟ್ಟೆಯಲ್ಲಿ ಚುಚ್ಚಿಕೊಂಡು ಪ್ರಜ್ಞೆ ಕಳೆದುಕೊಂಡು ನೆಲಕ್ಕುರುಳಿದನು. ಈ ಎಲ್ಲ ಘಟನೆಯನ್ನು ಸಾಮ್ರಾಟನಿಗೆ ತಿಳಿಸಲಾಗಿ ಸದ್ಯಕ್ಕೆ ಅವನನ್ನು ಪ್ರಧಾನ ಖಾಜಿಗೆ ಒಪ್ಪಿಸಬೇಕು, ಆದರೆ ಗುಣಮುಖನಾದ ಬಳಿಕ ಅವನನ್ನು ಆಸ್ಥಾನಕ್ಕೆ ಹಾಜರಪಡಿಸಬೇಕು, ಎಂದು ರಾಜಾಜ್ಞೆಯಾಯಿತು. ತಾರಂಕ ಕೋಟೆಯನ್ನು ಕೈವಶಮಾಡಿಕೊಂಡ ಮುತಾಮಿದ ಖಾನನಿಗೆ ರೂ. ಮೂವತ್ತು ಸಾವಿರಗಳನ್ನು ಇನಾಮವಾಗಿ ಕೊಡಲಾಯಿತು.

ಕೆಳಗಿನ ಆಜ್ಞೆಯನ್ನು ಹೊರಡಿಸಲಾಯಿತು. "ಸುಲ್ತಾನ ಮಯಿಝುದ್ದೀನ ಮತ್ತು ಅಝೀಮುದ್ದೀನ ಇವರ ಬೆಂಗಾವಲಿನಲ್ಲಿ ರಾಜಕುಮಾರ ಮುಹಮ್ಮದ ಮೌಝುಮ್‌ನ ತಾಯಿ ಬಾಯಿಜೀವು ಹಾಗೂ ರಾಜಕುಮಾರನ ಪರಿವಾರದ ಉಳಿದ ಸ್ತ್ರೀಯರನ್ನು ಶಾಹಜಹಾನಾಬಾದಕ್ಕೆ ಕರೆದುಕೊಂಡು ಹೋಗಬೇಕು ಮತ್ತು ಸುಲ್ತಾನ ಖುಜಿಸ್ತಾ ಅಖ್ತರ ತನ್ನ ತಂದೆಯನ್ನು ಕೂಡಿಕೊಳ್ಳಲು ಸಾಮ್ರಾಟರ ಸನ್ನಿಧಿಗೆ ಬರಬೇಕು." ಆ ಪ್ರಕಾರ ಖುಜಿಸ್ತಾ ಅಖ್ತರನು ರಾಜಾಜ್ಞೆಯ ಮೇರೆಗೆ ಸಾಮ್ರಾಟ ಸನ್ನಿಧಿಗೆ ಬಂದನು ಮತ್ತು ಹಮ್ಮೀದುದ್ದೀನ ಖಾನನಿಗೆ ಅವನನ್ನು ಅವನ ತಂದೆಯ ಹತ್ತಿರ ಕರೆದುಕೊಂಡು ಹೋಗಲು ಅಪ್ಪಣೆಯಾಯಿತು. ಇದಲ್ಲದೆ ರಾಜಯೋಗ್ಯ ಮನ್ನಣೆಯ ಕುರುಹುಗಳಾದ ಗುಲಾಬಿಸತ್ವ ಸೌರಭ, ಗುಲಾಬಿ ಪನ್ನೀರು ಮತ್ತು 'ಬೇದ–ದೆ–ಮುಸ್ಕ' ನೀರು, ಒಣಗಿದ ಹಾಗೂ ತಾಜಾ ಹಣ್ಣುಗಳನ್ನು ಹಾಗೂ ಉಡುಪುಗಳನ್ನು ನೀಡಲಾಯಿತು. ದೌಲತಾಬಾದದ ಕೋಟೆಯಲ್ಲಿ ಬಂಧಿತನಾಗಿದ್ದ ಖಾಜಿ ಮೀರನನ್ನು ಶಹಾಜಹಾನಬಾದ ಬೆಂಗಾವಲಾಗಿ ಕರೆದುಕೊಂಡು ಹೋಗಲು ಕಾಮಗಾರ ಖಾನನಿಗೆ ಆಜ್ಞಾಪಿಸಲಾಯಿತು.

ಅಹ್ಮದಾಬಾದದ ದಿವಾನ ಇತಿಮುದ ಖಾನನನ್ನು ದಿವಾನನೆಂದು ಉಳಿಸಿಕೊಳ್ಳುವುದಲ್ಲದೆ ಅವನಿಗೆ ಸುರತದ ಮುತಾಸದ್ದಿ ಹುದ್ದೆಯನ್ನು ಒಪ್ಪಿಸಲಾಯಿತು. ಇದ್ರಿಸಖಾನ ಸಹೋದರನ ಪುತ್ರ ಮತ್ತು ಇತ್ತಿಮದ್‌ಖಾನನ ಅಳಿಯನಾದ ಸಯೀದ ಮೋಹಸಿನನನ್ನು ಅಹಮದಾಬಾದದ ಆಧೀನ ದಿವಾನನ್ನಾಗಿ ನೇಮಿಸಲಾಯಿತು.

ಸಿನಸಾನಿ ಕೋಟೆಯನ್ನು ಕೆಡಹುವುದನ್ನು ಕುರಿತು ಮತ್ತು ಮಥುರಾ ಜಿಲ್ಲೆಯ ಆಡಳಿತಕ್ಕೆ ಸಂಬಂಧಿಸಿ ಮುಚ್ಚಳಿಕೆಯನ್ನು ಕಳಿಸಲು ರಾಜಾ ಬಿಶನ್ ಸಿಂಘನ ಹೆಸರಿನಲ್ಲಿ

ಸುಪ್ರಸಿದ್ಧ ಫರಮಾನವನ್ನು ಹೊರಡಿಸಲಾಯಿತು. ಅಮಿರುಲ್ ಉಮರಾನ ಸೈನ್ಯದ ಒಂದು ನೂರು ಸವಾರರನ್ನು ಆಗಾ ಅಲಿ ಖಾನ್ ಹಾಗೂ ಅತುಲ್ಲಾ ಖಾನ ಇವರ ನೇತೃತ್ವದಲ್ಲಿ ರಾಜಾನೊಡನೆ ಕಳಿಸಲಾಯಿತು. ಹಿಂದುಸ್ತಾನದಿಂದ ಬಂದ ರಾಜಕುಮಾರ ಮುಹಮ್ಮದ ಕಾಮ ಬಕ್ಷನ ದಿವಾನ ಮೀರ ಹುಸೇನನು ಸಾಮ್ರಾಟನಿಗೆ ವಂದನೆ ಸಲ್ಲಿಸಿ ಕುರಾನದ ಒಂದು ಪ್ರತಿಯೊಡನೆ ರೂ. ಒಂದು ಸಾವಿರಗಳನ್ನು ಕಾಣಿಕೆಯಾಗಿ ಕೊಡಲು ಅದನ್ನು ಸ್ವೀಕರಿಸಲಾಯಿತು. ಅಲಿ ಮರ್ದನಖಾನ ಹೈದರಾಬಾದಿಯನ್ನು ಕರ್ನಾಟಕ ಪ್ರದೇಶದ ಫೌಜದಾರನೆಂದು ನಿಯಮಿಸಿದ ಲಿಖಿತ ಆಜ್ಞೆಯನ್ನು ನೀಡಲಾಯಿತು.

ಹರಕರಾನಿಂದ ಸಾಮ್ರಾಟನಿಗೆ ಮೌಖಿಕವಾಗಿ ಹೀಗೆ ತಿಳಿಸಲಾಯಿತು: "ಬಂಡುಕೋರ ಮರಾಠರು ಫೇಯಿನ ಘಾಟದ ಠಾಣಾದಾರ ಖಿದಮತ್ ತಲಾಬಿಖಾನನ ಮೇಲೆ ದಾಳಿ ಮಾಡಿದರು. ಭೀಕರ ಕದನ ಘಟಿಸಿತು. ಹೆಚ್ಚಿನ ಸಂಖ್ಯೆಯಲ್ಲಿ ದಂಗೆಕೋರರು ಖಾನನನ್ನು ಪರಾಭವಗೊಳಿಸಿ ಸೆರೆಯಾಳಾಗಿ ಹೊತ್ತೊಯ್ದರು."

ಇತಿಖಾದ ಖಾನನ ಓಲೆ ಕೆಳಗಿನಂತೆ ತಿಳಿಸಿತು: "ಉಪಟಳಕಾರ ಸಾಂಭಾನ ಅಯೋಗ್ಯ ಪ್ರಮುಖರಲ್ಲೊಬ್ಬನಾದ ಬಂಡುಕೋರ ಹಮೀರನ ಸಹೋದರರು ಸಾಮ್ರಾಜ್ಯದ ಪ್ರದೇಶಗಳ ಮೇಲೆ ದಾಳಿಯಿಟ್ಟರು. ಮೇಲೆ ಹೇಳಿದ ಖಾನ ಮತ್ತು ಅವನ ಜನರು ಮಲ್ಕಾಪುರದ ಸಮೀಪದಲ್ಲಿ ಜಮಾಯಿಸಿ, ಅಲ್ಲಿ ಹೋರಾಟ ಸಂಭವಿಸಿ ಅನೇಕ ಕಿಡಿಗೇಡಿ ದಂಗೆಗಾರರು ಸತ್ತರು ಇಲ್ಲವೆ ಗಾಯಗೊಂಡರು. ಸಾಮ್ರಾಜ್ಯದ ಸೈನಿಕರಲ್ಲಿ ಕೆಲವರು ಮಡಿದರೆ ಇನ್ನುಳಿದವರು ಗಾಯಗೊಂಡರು. ಕಾಳಗದ ಹೊಡೆತವನ್ನು ತಾಳಲಾರದೆ ತಾವು ದೋಚಿ ತಂದಿದ್ದ ನಗದು ಹಣ ಮತ್ತು ವಸ್ತುಗಳನ್ನು ಅಲ್ಲಿಯೇ ಬಿಟ್ಟು ಗುಲಶಾನಾಬಾದ, ನಾಸಿಕದ ಕಡೆಗೆ ಹಿಂದಿರುಗಿದರು." ಈ ವಿವರಗಳನ್ನು ತಿಳಿಸಲಾಗಿ ಖಾನನ ಸೇವೆಯನ್ನು ಮೆಚ್ಚಿ ಸಾಮ್ರಾಟನು ಖಾನನಿಗೆ ವಿಶೇಷ ನಿಲುವಂಗಿನ್ನಿತ್ತು ಅವನ ಮನಸಬವನ್ನು ಹೆಚ್ಚಿಸಿದನು. ಖಾನನನ್ನು ಪ್ರೋತ್ಸಾಹಿಸುವ ಆಜ್ಞೆಯನ್ನು ಹೊರಡಿಸಿ ಆ ದಂಗೆಕಾರರನ್ನು ಸಂಪೂರ್ಣವಾಗಿ ಸದೆಬಡಿಯಲು ತಿಳಿಸಲಾಯಿತು.

ಗೂಢಚಾರರು ಸಾಮ್ರಾಟನಿಗೆ ವರದಿ ಮಾಡಿದರು: "ರಾಹಿರಿ ಕೋಟೆಯನ್ನು ತಲುಪಿರುವ ಸಯೀದ ಅಬ್ದುಲ್ಲಾ ಖಾನನು ಅದರ ಮೇಲೆ ಮುತ್ತಿಗೆ ಹಾಕಲು ಬಯಸುತ್ತಾನೆ." ಆದ್ದರಿಂದ ಆಜ್ಞೆ ಹೊರಡಿಸಲಾಯಿತು: "ನಾಚಿಕೆಗೇಡಿ ಸಾಂಭಾನ ಮೊಮ್ಮಗ ಮಹದಾಜಿ ಕೋಟೆಯ ನಕ್ಷೆಯನ್ನು ಹಾಕಿ ಅದನ್ನು ಸಾಮ್ರಾಟನಿಗೆ ಸಲ್ಲಿಸಬೇಕು ಮತ್ತು ಕುಬಕಲಾಸನ ಮಗನು ಮಹದಾಜಿಯ ಮನೆಗೆ ಹೋಗಿ ಅದನ್ನು ಸಿದ್ಧಗೊಳಿಸಲು ಸಹಾಯ ಮಾಡಬೇಕು." ಹಾಗಾಗಿ ಸಾಮ್ರಾಟನಾಜ್ಞೆಯ ಮೇರೆಗೆ ಮಹದಾಜಿ ಕೋಟೆಯ ನಕಾಶವನ್ನು ತಯಾರಿಸಿ ಬಹ್ರಾಮಂದಖಾನನ ಮುಖಾಂತರ ಸಾದರಪಡಿಸಿದನು. ರಾಜಕುಮಾರ ಮುಹಮ್ಮದ ಅಜಂ ಶಾಹನ ಸೈನ್ಯ ಕುರಿತು ವಿವರವಾದ ವಿವರಣೆಯನ್ನು ಸಿದ್ಧಪಡಿಸಲು ತಿಳಿಸಲಾಯಿತು. ತನ್ಮಧ್ಯ ಮಹದಾಜಿ ಮನವಿ ಸಲ್ಲಿಸಿದನು: "ಸಾಮ್ರಾಟರು ಅನುಮತಿ ಕೊಟ್ಟರೆ ನಾನು

ನನ್ನ ಕುಟುಂಬವನ್ನು ತಮ್ಮ ರಕ್ಷಣೆಯಲ್ಲಿಟ್ಟು ಆ ಪಾಪಿಷ್ಠನನ್ನು ಕೊಲ್ಲಲು ಅಥವಾ ಸೆರೆಹಿಡಿಯಲು ಹೋಗುವೆ. ಒಂದು ವೇಳೆ ಅವನ ಅಪರಾಧಗಳನ್ನು ಮನ್ನಿಸಿದರೆ ತಮ್ಮ ಸನ್ನಿಧಿಗೆ ಅವನನ್ನು ತರುವೆ. "ಈ ವಿನಂತಿಯನ್ನು ಕೇಳಿದ ಸಾಮ್ರಾಟನು ಹೀಗೆ ಆಜ್ಞಾಪಿಸಿದನು: "ಅವನು ಸಿದ್ಧನಾಗಲಿ ಅವನು ಬಂದೊಡನೆ ಅವಶ್ಯವಾದ ಆಜ್ಞೆಯನ್ನು ಹೊರಡಿಸಲಗುವುದು ಮತ್ತು ಅಬ್ದುಲ್ಲಾ ಖಾನನು ತನ್ನ ವಿಚಾರವಾಗಿ (ಮೇಲ್ಕಾಣಿಸಿದ ಕೋಟೆಯ ಮುತ್ತಿಗೆ) ಮುಂದೂಡಲಿ."

ಪಾಪಿಷ್ಠ ಸಾಂಭಾನ ಪ್ರದೇಶದಲ್ಲಿರುವ ಪರನಾಲಾದ ದಂಡನಾಯಕನು ತನ್ನ ಸಹೋದರಿಯೊಡನೆ ಓಲೆಯೊಂದನ್ನು ಕಳಿಸಿದ್ದಾನೆಂದು ಮೊಹಸಿನ ಖಾನನು ತಿಳಿಸಿದನು. ನವಾಬ ಬಾಯಿ ಝೀನತ–ಉನ್–ವೀಸಾಳ ಹತ್ತಿರ ಅವಳನ್ನು ಕರೆದುಕೊಂಡು ಹೋಗಬೇಕು. ಅವಳು (ಬೇಗಂ) ಆ ವಿಷಯವನ್ನು ಪರಿಶೀಲಿಸಿ ಅದನ್ನು ಕುರಿತು ತನ್ನ ಅಭಿಪ್ರಾಯ ತಿಳಿಸುವಳು ಎಂದು ಅಪ್ಪಣೆಯಾಯಿತು. ಆ ವಿನಂತಿಯನ್ನು ಓದಿದ ಮೇಲೆ ಬೇಗಂ ಸಾಹಿಬಾ ಅದಕ್ಕೆ ಲಕ್ಷ್ಯ ಕೊಡಲಿಲ್ಲ. ಈ ವಿಷಯ ಗೊತ್ತಾದ ಬಳಿಕ ಸಾಮ್ರಾಟನು ಆ ದಂಡನಾಯಕನ ಸಹೋದರಿಯನ್ನು ತನ್ನ ಸನ್ನಿಧಿಗೆ ಕರೆಸಿ ಪ್ರಶ್ನಿಸಿದನು. ಅದಕ್ಕೆ ಅವಳು ವಿನಂತಿಸಿದಳು: "ಸಾಮ್ರಾಟರು ಕೃಪೆ ಮಾಡಿ ಈ ಕೆಳದರ್ಜೆಯ ವ್ಯಕ್ತಿಗೆ ೫೦೦೦/ ೫೦೦೦ ಜಾಟ ಮತ್ತು ಸವಾರರುಳ್ಳ ಮನಸಬವನ್ನು ನೀಡಿದರೆ ತಾನು ಕೋಟೆಯನ್ನು ಸಾಮ್ರಾಟರ ಸೇವಕರಿಗೊಪ್ಪಿಸುವುದಾಗಿ ದಂಡನಾಯಕನ ಪ್ರಾರ್ಥನೆಯಾಗಿದೆ." ಅವಳ ವಿನಂತಿಯ ನಂತರ ಸಾಮ್ರಾಟನ ಆಜ್ಞೆಯಾಯಿತು: ಮೋಹಿಸಿನ ಖಾನನು ವಿಶ್ವಾಸದ ವ್ಯಕ್ತಿಯೊಬ್ಬನನ್ನು ಆ ದಂಡನಾಯಕನ ಹತ್ತಿರ ಕಳಿಸಲಿ ಮತ್ತು ಅವನಿಂದ ಪ್ರಾರ್ಥನಾ ಪತ್ರ ಬಂದ ಬಳಿಕ ಒಂದು ರೀತಿಯ ಫರ್ಮಾನ ಹೊರಡಿಸಲಾಗುವುದು" ದಂಡನಾಯಕನ ಸಹೋದರಿಗೆ ಒಂದು ಶಾಲನ್ನು ರತ್ನ ಖಚಿತ ಇದ್ರಿಸಿ ಮತ್ತು ರೂ. ಐದುನೂರು ನಗದು ಹಣ ಕೊಡಲಾಯಿತು.

ಫಿರಂಗಿದಳದ ಮುಖ್ಯಾಧಿಕಾರಿಯನ್ನು ಮುಖ್ತಾರಖಾನನಿಗೆ (ದರೋಗಾ ಇ ತೋಪಖಾನಾ) ಅಶ್ವಾಧಿಪತಿಯ ಸ್ಥಾನಕ್ಕೆ ಬಡತಿ ಕೊಟ್ಟು ವಿಶೇಷ ನಿಲುವಂಗಿಯನ್ನು (ಖಿಲಾತೆ ಖಾಸಾ) ನೀಡಲಾಯಿತು.

ಅಡಿ ಟಿಪ್ಪಣಿಗಳು :

೧. ಸಾಕಿ ದಿನಾಂಕವನ್ನು ನೀಡುತ್ತಾನೆ. (ಮೇ. ೧೬೯೦) ನೋಡಿ : ಎಂ.ಎ.೩೩೫

೨. ಶಾಹಾ ಅಲಂನ ಸ್ತ್ರೀಯರು ಡೆಲ್ಲಿಗೆ ತೆರಳಿದರು. (ಜೂನ ೧೬೮೯)

೩. ಈಶ್ವರದಾಸನು ರಾಹಿರಿ ಕೋಟೆಯೆಂದು ಹೇಳುತ್ತಾನೆ. ಆದರೆ ಅದು ರಾಯಗಡ ಕೋಟೆಯಾಗಿತ್ತು. ನೋಡಿ: ಎಂ.ಎ.ಹಾಗೂ ದಿಲಕಶ ಎರಡನ್ನೂ.

■

*

ಕೊಲ್ಹಾಪುರದ ದುಷ್ಟ ವೈರಿಯಿಂದ ಉಪಟಳ, ಖಾನೆ-ಇ-ಝುಮನ್ನನು ವೈರಿಯನ್ನು ಎದುರಿಸಿದ್ದು, ಕೊಲ್ಹಾಪುರದ ಹತ್ತಿರ ಕಾಳಗ ಮತ್ತು ಶತ್ರುವಿನ ಗೆಲುವು

ಮೇಲೆ ಹೇಳಿದ ಘಟನೆಯ ವಿವರಗಳು ಕೆಳಗಿನಂತಿವೆ: ದಂಗೆಕೋರರ ಗುಂಪೊಂದು ಕೊಲ್ಹಾಪುರದಲ್ಲಿ ಕಾಣಿಸಿಕೊಂಡು ದಂಗೆ ಮತ್ತು ಗೊಂದಲ ಎಬ್ಬಿಸಿತು. ಖಾನ್-ಇ-ಝುಮನ್ ಪಥ ಜಂಗ ಖಾನನು ಅವರನ್ನು ಶಿಕ್ಷಿಸಲು ತ್ವರಿತವಾಗಿ ದಂಡಿನೊಡನೆ ಧಾವಿಸಿದನು. ಕೊಲ್ಹಾಪುರದ ನೆರೆಹೊರೆಯಲ್ಲಿ ಕಾಳಗ ಶುರುವಾಗಿ ಕಾಲು ಪಹರೆ ನಾಲ್ಕು ಘಳಿಗೆಗಳ ವರೆಗೆ ಮುಂದುವರೆಯಿತು. ಸಾಮ್ರಾಜ್ಯದ ಶೂರ ಸೈನಿಕರು ಏಳುನೂರು ಬಂಡುಗಾರರನ್ನು ಖಡ್ಗದಿಂದ ಕತ್ತರಿಸಿದರು. ಸಾಮ್ರಾಜ್ಯ ಸೈನಿಕರಲ್ಲಿ ೪೦೦ ಜನ ಹೋರಾಡುತ್ತ ಮಡಿದರು. ಹೆಚ್ಚಿನ ಸಂಖ್ಯೆಯಲ್ಲಿದ್ದ ಬಂಡುಕೋರರು ಸಾಮ್ರಾಜ್ಯ ಸೇನೆಯ ಮೇಲೆ ಮತ್ತೆ ದಾಳಿಯಿಟ್ಟರು. ಅನುಭವಿಕ ಶೂರ ಸೈನಿಕರು ಶೌರ್ಯಾಭಿಮಾನದಿಂದ ಹೋರಾಟದಲ್ಲಿ ನುಗ್ಗಿ ದಂಗೆಕೋರ ಪಡೆಗೆ ಬಹಳ ಹಾನಿ ಮಾಡಿದರು. ಖಾನನಿಗೆ ಮತ್ತು ಅವನ ಮಗ ಖಾನೆ-ಅಲಂನಿಗೆ ಖಡ್ಗ ಮತ್ತು ಕಿರುಗತ್ತಿಗಳ ಗಾಯವಾದವು. ಕಾಳಗದ ಪೆಟ್ಟನ್ನು ತಡೆದುಕೊಳ್ಳಲಾಗದೆ ಬಂಡುಕೋರರು ಕಾಲಿಗೆ ಬುದ್ಧಿ ಹೇಳಿದರು. ಸಂಕ್ಷಿಪ್ತದಲ್ಲಿ ಹೇಳುವುದಾದರೆ, ಈ ಎಲ್ಲ ಸಂಗತಿಗಳನ್ನರಿತಿದ್ದ ಸಾಮ್ರಾಟನು ಎರಡು ಸಾವಿರ ಸವಾರರೊಂದಿಗೆ ಮುಹಮ್ಮದ ತಾಖಿ ಖಾನನು ಜಂಗಖಾನನ ಸಹಾಯಕ್ಕೆ ಹೋಗಬೇಕೆಂದು ಆಜ್ಞಾಪಿಸುತ್ತ ವಿಶೇಷ ನಿಲುವಂಗಿ (ಖಿಲಾತೆ-ಖಾಸಾ) ಮತ್ತು ಒಂದು ಖಡ್ಗವನ್ನು ನೀಡಿದನು[೧]. ಹಕೀಮ ಸೆಬಿಸ್ಟಿಯನ್ ಫರಂಗಿಯನ್ನು ಸೈನ್ಯ ತುಕಡಿಯೊಂದಿಗೆ ಹೋಗಿ ಖಾನನ ಗಾಯಗಳನ್ನು ತೊಳೆದು ಶುಚಿಗೊಳಿಸಿ ಅರಿವೆ ಕಟ್ಟಲು ಕಳಿಸಲಾಯಿತು[೨].

ಅಡಿ ಟಿಪ್ಪಣಿಗಳು :

೧) ಖಾನೆ-ಝುಮನ್ ಹೈದರಾಬಾದಿಯನ್ನು ಕೊಲ್ಲಾಪುರಕ್ಕೆ ಫೌಜದಾರನೆಂದು ಕಳಿಸಲಾಯಿತು. ಪನ್ನಾಲಾ ಕೋಟೆಯ ಸಮೀಪದಲ್ಲಿ ಅವನ ಮೇಲೆ ಹಲ್ಲೆ ಮಾಡಲಾಯಿತು. ಅದು ಆದದ್ದು

೧೬೮೮ ರಲ್ಲಿ ಭೀಮಸೇನ, ೨, ೯೬ಅ, ಹಾಗೆಯೆ ನೋಡಿ: ಎಂ.ಎ. ೧೯೩ ಮತ್ತು ಕೆ.ಕೆ.೨, ೧೩೧.

೨) ಹಕೀಮ ಸೆಬೆಸ್ಟಿಯನ್ ಫರಂಗಿ ಪೋರ್ಚುಗೀಜನಾಗಿರಬಹುದು. ಇದು ನನ್ನ ತರ್ಕ.

■

*

ಸಾತಾರಾ ಕೋಟೆಯ ಸಮೀಪದಲ್ಲಿ ದುಷ್ಟ ದಂಗೆಕೋರರೊಡನೆ ರುಸ್ತುಂ ಖಾನ ವಿಜಾಪುರಿಯ ಹೋರಾಟ

ಆಕಾಶದೊಡನೆ ಸ್ಪರ್ಧಿಸುವ ಎತ್ತರದ ಮೇಲೆ ನಿಂತಿದ್ದ ಸಾತಾರಾ ಕೋಟೆಯ ಸಮೀಪಕ್ಕೆ ರುಸ್ತುಂ ಖಾನ ವಿಜಾಪುರಿ ತಲುಪಿದನು. ಆ ಕೋಟೆಯನ್ನು ಸಾಮ್ರಾಟನ ಆಧಿಪತ್ಯಕ್ಕೆ ತರುವ ಬಯಕೆ ಅವನದಾಗಿತ್ತು. ಶಾಪಗ್ರಸ್ತ ಸಾಂಭಾನ ಆಯೋಗ್ಯ ಪ್ರಮುಖ ಸರದಾರರಾದ ಸಾಂಭಾ ಗೌರಪಾಡ, ಜದು ಪಾರ್ಬಿಯಾ ಮತ್ತು ಇನ್ನುಳಿದವರಿಗೆ ಈ ವಿಷಯ ತಿಳಿದು ಅವರು ದೊಡ್ಡ ಸೈನ್ಯವನ್ನು ವ್ಯವಸ್ಥೆಗೊಳಿಸಿ ಖಾನನ ಮೇಲೆ ದಾಳಿ ಮಾಡಿದರು[೧]. ಐದು ಸಾವಿರ ಅಶ್ವಗ್ಗಳ ಮತ್ತು ಐದು ಆನೆಗಳ ಬಲ ಹೊಂದಿದ್ದ ಖಾನನು ತನ್ನ ಮಗ ಘಾಲಿಬ ಖಾನನನ್ನು[೨] ಅವರನ್ನೆದುರಿಸಲು ಕಳಿಸಿದನು. ಕಾಳಗ ಇನ್ನೂ ಆರಂಭವಾಗಿರಲಿಲ್ಲ. ಅಷ್ಟರಲ್ಲಿಯೇ ದಂಗೆಕೋರ ಬಂದೂಕುಧಾರಿಗಳು ಮಂಚೂಣಿಗೆ ನುಗ್ಗಿ ಸಾಮ್ರಾಜ್ಯ ಸೇನೆಯನ್ನು ಎದುರಿಸುತ್ತ ಗುಂಡು ಹಾರಿಸಲು ಆರಂಭಿಸಿದರು. ಬಂದೂಕಿನ ಗುಂಡುಗಳು ಬಡಿದಾಗ ಮಂಚೂಣಿಯಲ್ಲಿದ್ದ ಆನೆಗಳು ಓಡಿದವು ಮತ್ತು ಗಾಯಗೊಂಡ ಸೈನಿಕರು ನೆಲಕ್ಕೆ ಬಿದ್ದರು. ಈ ಕಾಳಗಕ್ಕೆ ತಾನೇ ಸಜ್ಜುಗೊಳಿಸಿದ್ದ ಸೈನ್ಯಕ್ಕೊದಗಿದ ಸ್ಥಿತಿಯನ್ನು ಪ್ರತ್ಯಕ್ಷ ನೋಡುತ್ತಿದ್ದು ರುಸ್ತುಂ ಖಾನನು ತ್ವರಿತವಾಗಿ ತನ್ನ ಸೈನಿಕರ ರಕ್ಷಣೆಗೆ ಧಾವಿಸುತ್ತ ಶತ್ರುವಿನ ಮೇಲೆರಗಿದನು. ದಂಗೆಕೋರರ ಕಡೆಯ ಕೆಲವು ಆನೆಗಳು ಖಾನನ ಸೈನಿಕರ ಮೇಲೆ ಆಕ್ರಮಣ ಮಾಡಲು ಬೆದರಿದ ಕುದುರೆಗಳು ಹೊಡಮರಳಿ ಓಡಿಹೋದವು. ಆ ಕುದುರೆಗಳ ಸವಾರರು ಅವುಗಳನ್ನು ಹೊರಳಿಸಿ ತರಲು ಪ್ರಯತ್ನಿಸಿದರೂ ಆಗಲಿಲ್ಲ. ತನ್ನ ಹತ್ತಿರ ಕೆಲವೇ ಕೆಲವು ವೀರ ಸೈನಿಕರು ಉಳಿದಿದ್ದರೂ ಅವರೊಂದಿಗೆ ದಂಗೆಕೋರರ ಮೇಲೆ ಆಕ್ರಮಣ ಮಾಡಿ ಧೈರ್ಯಹೊಂದಿ ಅವರ ದಾಳಿಯನ್ನು ಹಿಮ್ಮೆಟ್ಟಿಸುವಲ್ಲಿ ಖಾನನ ಯಶಸ್ವಿಯಾದನು. ಈ ಒಳಗೆ ಚದುರಿಹೋಗಿದ್ದ ಖಾನನ ಸೈನಿಕರ ತಂಡಗಳು ಎಲ್ಲ ದಿಕ್ಕುಗಳಿಂದ ಬರಲಾರಂಭಿಸಿದರು. ತನ್ನ ಜನರನ್ನು ಪುನಃ ಸಜ್ಜುಗೊಳಿಸಿ ಸಾಂಭಾ ಗೌರಪಾದ ಮತ್ತು ಜದು ಪಾರ್ಬಿಯಾ ಇವರ ಸೈನ್ಯದ ಮೇಲೆ ದಾಳಿ ಮಾಡಿದನು.

ಅಪಾಯವಿದೆಯೆಂದು ತಿಳಿದುಕೊಂಡು ಇಬ್ಬರೂ ತಮ್ಮ ಕುದುರೆಗಳನ್ನು ತಿರುಗಿಸಿ ಹಿಮ್ಮೆಟ್ಟಿದರು. ಅವರ ಅನುಚರರು ಅವರನ್ನು ಹಿಂಬಾಲಿಸಿದರು. ಸಾಮ್ರಾಜ್ಯದ ವೀರ ಸೈನಿಕರು ದಂಗೆಕೋರರನ್ನು ನಿರ್ದಯದಿಂದ ಖಡ್ಗದಿಂದ ಕತ್ತರಿಸಿ ಹಾಕಿದರು. ಆಗ ಒಮ್ಮೆಲೇ ಬಂಡುಕೋರರ ಗುಂಪೊಂದು ಖಾನನ ಸೇನೆಯ ಮೇಲೆ ದಾಳಿ ಮಾಡಿ, ಅವರನ್ನು ಗಾಯಗೊಳಿಸಿ, ತಾವೂ ಗಾಯಗೊಂಡು, ಸಾಮ್ರಾಜ್ಯದ ಧ್ವಜವನ್ನು ಧ್ವಜಧಾರಿಯಿಂದ ಕಿತ್ತುಕೊಂಡರು. ಆಗ ಸ್ವಾಭಿಮಾನದಿಂದ ರೊಚ್ಚಿಗೆದ್ದು ಖಾನನು ತನ್ನ ಆನೆಯನ್ನು ಹೊರಳಿಸಿ ಸವಾರರೊಡಗೂಡಿ ಆ ದಂಗೆಕೋರರ ಮೇಲೆರಗಿದನು. ದೈವೇಚ್ಛೆಯಿಂದಾಗಿ ಖಾನನ ಟೊಂಕದ ಕೆಳಗಿರುವ ಉಡುಪಿಗೆ ಬೆಂಕಿ ಹತ್ತಿತು. ಈ ಸನ್ನಿವೇಶದಲ್ಲಿ ಖಾನನ ಸೇನೆಯ ಮಂಚೂಣಿಯಲ್ಲಿಯ ಕರ್ನಾಟಕಿ ಬಂದೂಕುಧಾರಿಗಳು ಶತ್ರುವಿನೊಡನೆ ಹೋರಾಡುವುದನ್ನು ಬಿಟ್ಟು ತಿರುಗಿ ಹೋಗುತ್ತ ಕೊಳ್ಳೆ ಹೊಡೆಯಲು ತೊಡಗಿದ್ದರಿಂದ ಸೈನ್ಯದ ಹಿಂದಿನ ಸಾಲುಗಳು ಹಾಗೂ ಠಾಣ್ಯ ಹಾಳಾಗಿ ಹೋದವು[೩]. ಇದನ್ನು ನೋಡಿದ ಖಾನನು ದೃಢವಾಗಿ ನಿಲ್ಲದಾದನು. ಈ ದಿಕ್ಕುಗಾಣದ ಸ್ಥಿತಿಯಲ್ಲಿ ಅವನು ಹಿಮ್ಮೆಟ್ಟಲು ಅವನ ಅನುಯಾಯಿಗಳು ಚದುರಿಹೋದರು. ಸತತವಾಗಿ ಗುಂಡುಗಳಿಂದ ಮತ್ತು ಬಾಣಗಳಿಂದ ಘಾತಿಗೊಳ್ಳುತ್ತಿದ್ದ ಖಾನನು ಆನೆಯ ಮೇಲಿಂದ ಕೆಳಗುರುಳಿದನು. ಹೀಗಾದಾಗ ಖಾನನೊಡನೆ ಹೋರಾಡುತ್ತಿದ್ದ ಬಾಬಾಜಿ ಮೌರ್ಯನು ಅವನು ಬಿದ್ದ ಸ್ಥಳಕ್ಕೆ ಧಾವಿಸಿ ಅವನನ್ನು ತನ್ನ ಶಿಬಿರಕ್ಕೆ ಹೊತ್ತೊಯ್ದನು. ಘಾಲಿಬ ಖಾನನ ನೇತೃತ್ವದಲ್ಲಿದ್ದ ಖಾನನಸೇನೆಯ ಬಲ ಭಾಗವು ಆ ದಂಗೆಕೋರರಿಂದ ಮುತ್ತಲ್ಪಟ್ಟು ಸೋಲಿಗೀಡಾಯಿತು. ಬಹಳ ಶೌರ್ಯದಿಂದ ಹೋರಾಡುತ್ತ ಬಾಣಗಳಿಂದ ಭರ್ಚಿಗಳಿಂದ ಗಾಯಗೊಂಡು ಅಸುನೀಗಿದರು. ಒಂದು ಸಾವಿರದ ಐದುನೂರು ಸೈನಿಕರು ಕೊಲ್ಲಲ್ಪಟ್ಟರು. ಹಾಗೆಯೇ ದಂಗೆಕೋರರಲ್ಲಿಯೂ ಅಷ್ಟೇ ಸಂಖ್ಯೆಯಲ್ಲಿ ಯಮಲೋಕಕ್ಕೆ ಹೋದರು.

ಐದು ಸಾವಿರ ಅಶ್ವದಳ ಮತ್ತು ಕಾಲ್ದಳದೊಂದಿಗೆ ಹಮೀರನು ಸಾತಾರಾ ಕೋಟೆಯ ಹೊರಗೆ ಬಂದರು. ಅವನ ಉದ್ದೇಶ ಖಾನನ ಸಂಬಂಧಿಗಳನ್ನು ಅಪಮಾನ ಮಾಡುವುದಾಗಿತ್ತು. ಆದರೆ ಖಾನನ ಸ್ತ್ರೀಯರು ಮತ್ತು ಮಕ್ಕಳು ಸೆರೆಯಾಳಾಗಿ ಬಂಧಿತರಾಗುವುದಕ್ಕಿಂತ ತಮ್ಮನ್ನು ತಾವು ಕೊಂದುಕೊಳ್ಳುವುದಾಗಿ ನಿರ್ಣಯಿಸಿದರು. ಈ ವಿಷಯ ಗೊತ್ತಾದಾಗ ಹಮೀರ ಜೋರಾಗಿ ಗುಡುಗಿದನು, "ನಿಮ್ಮ ಮುಖ್ಯ ಸರದಾರನು ಇನ್ನೂ ಜೀವಂತನಾಗಿರುವಾಗ ನಿಮ್ಮೊಡನೆ ಹೋರಾಡಲು ನಾನು ಬಂದಿಲ್ಲ. ಆತ್ಮಾಹುತಿಯ ನಿರರ್ಥಕ ವಿಚಾರವನ್ನು ಬಿಟ್ಟು ಬಿಡಿರಿ". ಹೀಗೆ ಈ ಮಾತು ನಡೆಯುತ್ತಿದ್ದಾಗಲೇ ಕೆಲವು ನೀಚರು ಖಾನನ ಶಿಬಿರವನ್ನು ಹೊಕ್ಕು ಆತನ ತಾಯಿ ಹೆಂಡತಿ ಮತ್ತು ಮಗಳನ್ನು ಸೆರೆಯಾಳಾಗಿ ಹಿಡಿದು ಸಾತಾರಾದ ಕೋಟೆಗೆ ಒಯ್ದರು.

ಇದೆಲ್ಲವನ್ನು ವಿವರವಾಗಿ ಸಾಮ್ರಾಟನಿಗೆ ತಿಳಿಸಿದಾಗ ಸಾಮ್ರಾಟನು ಆಜ್ಞಾಪಿಸಿದನು: "ಘಾಝಿ-ಉದ್-ದಿನ್ ಖಾನ್ ಮತ್ತು ದಿಲಿರಖಾನ ಇವರು ದೊಡ್ಡ ಸೇನೆಯೊಂದಿಗೆ

ಸಾತಾರಾ ಕೋಟೆಗೆ ಧಾವಿಸಿ ಹೋಗಿ ಅದನ್ನು ಮುತ್ತಿಗೆ ಹಾಕಲಿ." ಫತ್ ಜಂಗ ಖಾನನ ಸಹಾಯಕ್ಕಿದ್ದ ಮರಹಮತ್ ಖಾನ ಸಯೀದ ಅಬ್ದುಸಮದ ಖಾನ, ಮುಹಮ್ಮದ ನಾಖಿ ಖಾನ ಮತ್ತು ಮುಹಮ್ಮದ್ ಮುರಾದ ಖಾನ ಇವರೆಲ್ಲ ಘಾಜಿ–ಉದ್–ದಿನ ಖಾನ ಬಹಾದ್ದೂರನ ಸೈನ್ಯದೊಂದಿಗೆ ಕೂಡಿಕೊಳ್ಳಬೇಕು. ಆ ಪ್ರಕಾರ ಅವರೆಲ್ಲ ಅವನನ್ನು ಸೇರಿಕೊಂಡರು. ಅದೇ ದಿನ ತನ್ನ ಪ್ರದೇಶದಿಂದ (ಪರಗಣೆಯಿಂದ) ಮರಹಮತ ಖಾನನೆಡೆಗೆ ಸಾಗಿದ್ದ ಸಿದಿ ಅಬ್ದುಲ್ ಖಾದಿರನ ಮೇಲೆ ದೊಡ್ಡ ಸೈನ್ಯ ಪಡೆಯೊಂದಿಗೆ ರೂಪಾ ಬೋಂಸಲೆ ದಾಳಿ ಮಾಡಿದನು. ಧೈರ್ಯಶಾಲಿಯಾಗಿದ್ದ ಖಾನನು ಗಟ್ಟಿಯಾಗಿ ನಿಂತು ಅವನೊಡನೆ ಹೋರಾಡಿದನು. ಆ ದುಷ್ಟರ ಸಂಖ್ಯೆ ಬಹಳ ದೊಡ್ಡದಿದ್ದದ್ದರಿಂದ ಅವರೆಲ್ಲ ಎಲ್ಲ ಕಡೆಯಿಂದಲೂ ಖಾನನನ್ನು ಸುತ್ತುಗಟ್ಟಿದರು. ಹೋರಾಡುತ್ತಲೇ ತನ್ನ ಐವತ್ತು ಸೇವಕರೊಂದಿಗೆ ಸಾವನ್ನಪ್ಪಿದನು. ಆಗ ಹುರುಪಗೊಂಡ ದಂಗೆಕಾರರು ನಗದು ಮತ್ತು ಸರಕು ಸಾಮಗ್ರಿಗಳ ರೂಪದಲ್ಲಿದ್ದ ಖಾನನ ಆಸ್ತಿಯನ್ನು ದೋಚಿದರು.

ಕನೌಜದಿಂದ ಬಂದ ವರದಿಯಿಂದ ಸಾಮ್ರಾಟನಿಗೆ ತಿಳಿದಿದ್ದೇನೆಂದರೆ ರುಸ್ತುಂ ಖಾನ ಕುಟುಂಬದ ನಾಲ್ಕು ಜನರು ಅಂದರೆ ಇಬ್ಬರು ಪುತ್ರರು ಮತ್ತು ಇಬ್ಬರು ಮಹಿಳೆಯರು (ಆತನ ಹೆಂಡತಿ ಮತ್ತು ಮಗಳು) ಅಲ್ಲಿಗೆ ತಲುಪಿದ್ದರು (೪). ಅವರು ಅಲ್ಲಿಗೆ ಆಗಮಿಸಿದ್ದರ ಕಥೆ ಕೆಳಗಿನಂತಿದೆ: "ಶತ್ರು ಅವರನ್ನು ಬಂಧಿಸಲು ಬಂದಾಗ ಅವರು ತಮ್ಮ ಮುಖಗಳನ್ನು ಹಳೆಯ ಅರಿವೆಗಳಿಂದ ಮುಚ್ಚಿಕೊಂಡು ಖಾನನ ಪರಿಚಾರಕರೆಂದು ಹೇಳಲು ಅದನ್ನು ನಂಬಿ ಅವರನ್ನು ಹೋಗಲು ಬಿಡಲಾಯಿತು. ಅದು ತಮಗೊದಗಿ ಬಂದ ಉತ್ತಮ ಅವಕಾಶವೆಂದು ತಿಳಿದು ಅವರು ಆ ನಾರಕ ಸ್ಥಳದಿಂದ ಹೊರಬಂದು, ಇಬ್ಬರು ಮೂವರು ಸೇವಕರ ಮಾರ್ಗದರ್ಶನದಲ್ಲಿ ದಟ್ಟವಾದ ಗುಡ್ಡಗಳಲ್ಲಿ ಹೋಗಿ ಅಡಗಿಕೊಂಡರು. ರಾತ್ರಿಯಲ್ಲಿ ಗುಡ್ಡ ಬೆಟ್ಟಗಳೊಳಗಿಂದ ಹೊರಬಂದು ಅನಾಥರಂತೆ ಬಟ್ಟೆ ಧರಿಸಿ ಗುಡ್ಡ ಕಣಿವೆಗಳಲ್ಲಿ ಅಲೆದಾಡುತ್ತ ಸಾಮ್ರಾಜ್ಯದ ಸೀಮೆಗೆ ತಲುಪಿದರು." ಆದ್ದರಿಂದ ಆಜ್ಞೆಯನ್ನು ಹೊರಡಿಸಲಾಯಿತು: "ದಂಡಧಾರಿ ಮೀರ ಹುಸೇನನು ತನ್ನೊಡನೆ ಎರಡು ಮೇಣೆಗಳನ್ನು ಮತ್ತು ನಾಲ್ಕು ಕುದುರೆಗಳನ್ನು ತೆಗೆದುಕೊಂಡು ಹೋಗಿ ಅವರನ್ನು ತಮ್ಮ ಬೆಂಗಾವಲಿನಲ್ಲಿ ಪ್ರಭು ಸನ್ನಿಧಿಗೆ ಕರೆತರಬೇಕು"[೫]. ರುಸ್ತುಂ ಖಾನನ ಇಬ್ಬರು ಪುತ್ರರು, ಪತ್ನಿ ಮತ್ತು ಮಗಳು ಶಿಬಿರಕ್ಕೆ ಬಂದಿದ್ದಾರೆ. ಅವರನ್ನು ಸರಿಯಾಗಿ ನೋಡಿಕೊಳ್ಳಲಾಗುವುದು ಮತ್ತು ಆತನ ಬಿಡುಗಡೆಗೆ ಬಲಿಷ್ಠವಾದ ಸೇನಾ ಬಲ ಹೊರಟಿದೆ ಎಂದು ಅವನಿಗೆ ತಿಳಿಸಲು ಹರಿಕಾರರನ್ನು ನೇಮಿಸಬೇಕೆಂದು ಸಾಮ್ರಾಟನು ಫಜಲ ಖಾನನಿಗೆ ಹೇಳಿದನು.

ಸಾಮ್ರಾಟನಿಗೆ ರುಸ್ತುಂ ಖಾನನಿಂದ ಓಲೆ ಬಂದಿತು. ದಂಗೆಕೋರರಿಗೆ ದಂಡವೆಂದು ೧೦೦೦೦೦ ಹುನಗಳನ್ನು ಕೊಡುವುದಾಗಿ ಒಪ್ಪಿಕೊಂಡಿದ್ದನು. ಅದಕ್ಕೆ ಆಧಾರವಾಗಿ ತನ್ನ ತಾಯಿ ಮತ್ತು ಹಿರಿಯ ಮಗನನ್ನು ಅವರಲ್ಲಿ ಬಿಟ್ಟಿದ್ದು, ಪ್ರಭುವಿಗೆ ವಂದನೆ ಸಲ್ಲಿಸಲು

ಅವನು ಸಾಂಕೋಲಾಕ್ಕೆ ಬಂದಿದ್ದನು. ಸಾಮ್ರಾಟನು ಅವನಿಗೆ ಆಜ್ಞಾಪಿಸಿದನು: "ನೀನು ಎಲ್ಲಿರುವಿಯೋ ಅಲ್ಲೇ ನಿಲ್ಲು". ಆತನು ಹದಿನಾರು ದಿನಗಳವರೆಗೆ ಹಾಗೆಯೇ ಬಂಧನದಲ್ಲಿಯೇ ಉಳಿದನು.

ರಾಜಕುಮಾರ ಮುಹಮ್ಮದ ಅಜಂ ಶಾಹನಿಗಿಂತ ಮೂರು ಹಂತ ಮುಂಚೆಯೇ ದಂಡುಗೈದು ಬಂದು ಝುಲ್ಫಿಕರ ಖಾನ ಬಹಾದೂರ ಮತ್ತು ಖಾಸಿಂ ಖಾನರು ಎತ್ತರ ಬೆಟ್ಟಗಳ ಅಡಿಯಂಚಿಗೆ ತಲುಪಿದರು. ದುಷ್ಟಬುದ್ಧಿಯ ದಂಗೆಕೋರರು ಬೆಟ್ಟದ ದಾರಿಯನ್ನು ಬಂದ ಮಾಡಿದ್ದರಿಂದ ಧಾನ್ಯ ಪೂರೈಕೆ ನಿಂತು ಹೋಗಿತ್ತು. ಆಹಾರ ಧಾನ್ಯದ ಬೆಲೆ ವಿಪರೀತ ಹೆಚ್ಚಾಗಿದ್ದರಿಂದ ಸಾಕಷ್ಟು ಸೈನ್ಯದೊಡನೆ ಝುಲ್ಫಿಕರ ಖಾನ ಮಿಫ್ತಾಹ ಖಾನ ಮತ್ತು ಬಖ್ತಿಯಾರ ಖಾನನನ್ನು ರಾಜಕುಮಾರನು ಬೆಟ್ಟದ ತುದಿಯ ಕಡೆಗೆ ಕಳಿಸಬೇಕಾಯಿತು. ಕಾಲ್ನಡಿಗೆಯಿಂದ ಬೆಟ್ಟದ ಅಡಿಯಂಚನ್ನು ಪ್ರವೇಶಿಸಿದರು. ಬಹು ಬೇಗನೆ ಹೋರಾಟ ಶುರು ಆಯಿತು. ಆ ಕ್ಷೇತ್ರವನ್ನು ಹತೋಟಿಯಲ್ಲಿಟ್ಟುಕೊಂಡಿದ್ದ ಕಿಡಿಗೇಡಿ ದಂಗೆಕೋರರನ್ನು ಸಾಮ್ರಾಜ್ಯ ಸೈನಿಕರು ಧೈರ್ಯದಿಂದ ಚದುರಿಸಿದರು. ಅವರನ್ನೆಲ್ಲ ಅಲ್ಲಿಂದ ತಳ್ಳಿದ ಬಳಿಕ ಬಲಿಷ್ಠ ಠಾಣೆಯನ್ನು ಅಲ್ಲಿ ಸ್ಥಾಪಿಸಿದರು.

ಝುಲ್ಫೀಕರ ಖಾನ ಬಹದ್ದೂರ ಮತ್ತು ಕಾಶಿಮ ಖಾನ ಇವರು ಕೋವರಾಮ ಕೋಟೆಗೆ ಮುತ್ತಿಗೆ ಹಾಕಿದರು. ಬಂದೂಕು ಮತ್ತು ಬಾಂಬುಗಳಿಂದ ಕಾಳಗವು ಆರಂಭವಾಯಿತು. ಸಾಮ್ರಾಟನ ಸುದೈವದಿಂದ ಕೋಟೆಯ ಸೈನ್ಯಾಧಿಪತಿ ಸತ್ತನು ಕೋಟೆ ಕೈವಶವಾಯಿತು.

ರಮ್‌ದ (ಟರ್ಕಿ) ದೊರೆ ಖಾವಂಡಕರನ ದೂತನು ಹಿಂದುಸ್ತಾನಕ್ಕೆ ಬಂದಿದ್ದಾನೆಂದು ಸಾಮ್ರಾಟನಿಗೆ ವರದಿ ಬಂದಿತು. ಆದ್ದರಿಂದ ಸುಬೆಗಳ ಸುಬೇದಾರರು ಅವನಿಗೆ ಹಾರ್ದಿಕ ಸ್ವಾಗತ ನೀಡಬೇಕು. ಸುಯೋಗ್ಯ ರೀತಿಯಲ್ಲಿ ಮಾನ ಮರ್ಯಾದೆಯಿಂದ ಅವನನ್ನು ನೋಡಿಕೊಳ್ಳಬೇಕು ಮತ್ತು ಆಯಾ ಪ್ರದೇಶಗಳಲ್ಲಿ ಸುರಕ್ಷಿತ ಬೆಂಗಾವಲಾಗಿ ಸಾಗಿಸಬೇಕು ಎಂದು ಆದೇಶ ಹೊರಡಿಸಲಾಯಿತು.

ಸಾಮ್ರಾಟನಿಗೆ ಗೌರವ ಸಲ್ಲಿಸಲು ಬಯಸಿ ಸಿದಿ ಮಸೂದ ಖಾನನು ಆಗಮಿಸಿದನು. ರಾಜಾಜ್ಞೆಯ ಮೇರೆಗೆ ಮುತಾಲಿಬ ಖಾನನು ಅವನನ್ನು ಸಭಾಗೃಹ ದ್ವಾರದಲ್ಲಿ ಸ್ವಾಗತಿಸಿದನು. ಬಹರಾಮ ಖಾನನು ಅವನನ್ನು ಘುಸಾಲ ಖಾನಾದ ಬಾಗಿಲಲ್ಲಿ ಬರಮಾಡಿಕೊಂಡು ಪ್ರಭು ಸನ್ನಿಧಿಗೆ ಕರೆದೊಯ್ದನು. ಕುರ್ನೀಸ ಮತ್ತು ತಸ್ಲೀಮಗಳ ವಿಧಿಗಳನ್ನು ಪೂರೈಸಿ ಖಾನನು ನೂರು ಸುವರ್ಣ ನಾಣ್ಯಗಳನ್ನು ಮತ್ತು ರೂ. ಒಂದು ಸಾವಿರಗಳನ್ನು ಕಾಣಿಕೆಯಾಗಿ ಸಲ್ಲಿಸಲು ಅದನ್ನೆಲ್ಲ ಸಾಮ್ರಾಟನು ಸ್ವೀಕರಿಸಿದನು. ವಿಶೇಷ ನಿಲುವಂಗಿಯನ್ನಿತ್ತು ಸಾಮ್ರಾಟನು ಅವನನ್ನು ಗೌರವಿಸಿದನು. ಆ ಬಳಿಕ ಸಾಮ್ರಾಟನ ಆಜ್ಞೆಯ ಮೇರೆಗೆ ಶಿಷ್ಟಾಚಾರ ಅಧಿಕಾರಿ ಮತ್ತು ಆಸ್ಥಾನದ ವಕೀಲರು ಅವನನ್ನು ಅಸದ ಖಾನನ ಕೆಳಗಿನ ಸ್ಥಾನದಲ್ಲಿ ನಿಲ್ಲಿಸಿದರು. ಮರುದಿನ ೨೦೦೦/೨೦೦೦ ಜಾಟ ಮತ್ತು ಸವಾರರುಳ್ಳ

ಮನಸಬವನ್ನು ಅದರ ಜೊತೆಗೆ ರತ್ನಖಚಿತ ಕಿರುಗತ್ತಿ, ಲೋಹಾಲಂಕೃತ ಹಿಡಿಕೆಯುಳ್ಳ ಖಡ್ಗ ಮತ್ತು ಇನ್ನುಳಿದ ರಾಜ ಕಾಣಿಕೆಗಳನ್ನು ಖಾನನಿಗೆ ನೀಡಲಾಯಿತು[೮].

ಮುಹಮ್ಮದ ರಾಜಾ ತೀರಿಕೊಂಡನು. ಭಗವಂತನ ಪ್ರತಿರೂಪವಾಗಿದ್ದ ಸಾಮ್ರಾಟನಿಗೆ ಆತನ ವಿಷಯಕ್ಕೆ ಬಹಳ ಕರುಣೆಯಿದ್ದದ್ದರಿಂದ ಆತನ ಶವಪೆಟ್ಟಿಗೆಯನ್ನು ತನ್ನೆದುರು ತರ ಹೇಳಿ ಅಂತಿಮ ಪ್ರಾರ್ಥನೆಯನ್ನು ತಾನೇ ನಡೆಸಿದನು[೯].

ರಾಜಕುಮಾರ ಮುಹಮ್ಮದ ಮೌರುಮನ ಪುತ್ರ ಸುಲ್ತಾನ ದೌಲತ ಅಫಝೂ ಮೃತನಾದನು. "ಅವನನ್ನು ಅಲಿ ಆದಿಲಶಾಹನ ಸಮಾಧಿಯ ಹತ್ತಿರ ಹೂಳಬೇಕು" ಎಂದು ಸಾಮ್ರಾಟನು ಅಪ್ಪಣೆಯಿತ್ತನು. ಮೊಮ್ಮಗನಿಗಾಗಿ ಗಾಢವಾದ ಪೈತೃಕ ಪ್ರೇಮ ಇದ್ದುದ್ದರಿಂದ, ಆ ಸಂಸ್ಕಾರ ಕ್ರಿಯೆ ವ್ಯಥೆ ಮತ್ತು ಯಾತನೆಯಿಂದ ಕೂಡಿತ್ತು[೧೦].

ರಾಜಾಜ್ಞೆಯ ಮೇರೆಗೆ ತುರಾಣಕ್ಕೆ ರಾಯಭಾರಿಯಾಗಿ ಹೋಗಿದ್ದ ಜಬರದಸ್ತ ಖಾನನು ದಾರುಲ್ ಸಾಮ್ರಾಟನಲ್ಲಿ (ಲಾಹೋರದಲ್ಲಿ) ತಂಗಿದ್ದನು. ಅವನನ್ನು ಥಟ್ಟಾದ ಸುಬೇದಾರನನ್ನಾಗಿ ನಿಯಮಿಸಲಾಯಿತು; ಅವನು ಮುರಿದ ಖಾನನ ಜಾಗೆಗೆ ಬಂದನು.

ಈದ ಹಬ್ಬ ಬಂದಿತು. ನ್ಯಾಯಾಧೀಶ ಸಿಯಾದತ ಖಾನ ಮತ್ತು ಪ್ರಧಾನ ಖಾಜಿ ಅಬ್ದುಲ್ಲಾ ಇಬ್ಬರೂ ಗ್ರಂಥಗಳನ್ನು ಪರಿಶೀಲಿಸಿ ವಿಜಾಪುರದ ಮತ್ತು ಝುಹರಾಪುರದ ಮಸೂತಿಗಳಲ್ಲಿ ಈದ ಪ್ರಾರ್ಥನೆಗಳನ್ನು ಸಲ್ಲಿಸಬಹುದೆ ಎಂದು ಹುಡುಕಬೇಕೆಂದು ಸಾಮ್ರಾಟನು ಕಳಕಳಿಯ ಧಾರ್ಮಿಕ ಭಕ್ತಿಯಿಂದ ಆಜ್ಞೆ ಮಾಡಿದನು. ಅಧಿಕೃತ ಧಾರ್ಮಿಕ ಗ್ರಂಥಗಳನ್ನು ಪರಿಶೀಲಿಸಿದ ಬಳಿಕ "ಈದ ಪ್ರಾರ್ಥನೆಯನ್ನು ಈ ಎರಡೂ ಮಸೂತಿಗಳಲ್ಲಿ ಮಾಡಲು ಬರುವುದಿಲ್ಲ" ಎಂದು ಅವರು ಹೇಳಿದರು. ಈ ವಿಷಯಕ್ಕೆ ಸಂಬಂಧಿಸಿ ವಿವಾದಾತೀತ ಆಧಾರವನ್ನು ಸಾಮ್ರಾಟನಿಗೆ ಅವರು ನೀಡಿದರು. ಆದ್ದರಿಂದ ಇಹತಮಾಮ ಖಾನನ ಹೆಸರಿನಲ್ಲಿ "ಮೆಕ್ಕಿ ದ್ವಾರದ ಬದಿಯಲ್ಲಿ ಈದಗಾ ಒಂದು ನಿರ್ಮಾಣವಾಗಬೇಕು" ಎಂದು ಆಜ್ಞೆಯನ್ನು ಹೊರಡಿಸಲಾಯಿತು.

ರಾಜಕುಮಾರ ಮುಹಮ್ಮದ ಕಾಮ ಬಕ್ಷನ ಮನೆಯಲ್ಲಿ ಅವನ ಪತ್ನಿ ಮನೋಹರ ಪಾರಿಗೆ ಗಂಡು ಮಗು ಹುಟ್ಟಿತು. ಸಾಮ್ರಾಟನು ರಾಜಕುಮಾರನನ್ನು ಕರೆಸಿ ಶುಭಾಶಯಗಳನ್ನು ಹೇಳಿ ಒಂದು ಸಾವಿರ ಸುವರ್ಣ ನಾಣ್ಯಗಳನ್ನು ಕಾಣಿಕೆಯಾಗಿ ಕೊಟ್ಟು ತಸ್ಲೀಮ ವಿಧಿಗಳನ್ನು ಪೂರೈಸಿದನು. ಆ ಬಳಿಕ ವಿಜಯ ದುಂದುಭಿ ಮೊಳಗಲಿ ಮತ್ತು ಸರದಾರರೆಲ್ಲ ತಾವೇ ರಾಜಕುಮಾರನ ಶಿಬಿರಕ್ಕೆ ಹೋಗಿ ಅವನಿಗೆ ಅಭಿವಂದನೆ ಸಲ್ಲಿಸಲಿ ಎಂದು ಆಜ್ಞೆಯಾಯಿತು[೧೧].

ಉಜ್ಜಯಿನಿಯಿಂದ ಬಂದ ವರದಿಯ ಪ್ರಕಾರ ಉಜ್ಜಯಿನಿ ಸುಬಾದಲ್ಲಿರುವ ರತ್ಲಂ ಪರಗಣೆಯ ಶಿವಸಿಂಘನ ಗುಮಾಸ್ತನು ಆನೆ ಕಾಳಗಕ್ಕೆ ಆಜ್ಞೆಯಿತ್ತಿದ್ದನು. ಈ ಗೌರವ ಕೇವಲ ಕೀರ್ತಿವಂತ ಚಕ್ರವರ್ತಿಗಳಿಗೆ ಮಾತ್ರ ಇದ್ದದ್ದರಿಂದ ಜಮೀನುದಾರನ ಮನಸಬದಿಂದ

೫೦೦ ಸವಾರರನ್ನು ಕಡಿಮೆಗೊಳಿಸಲಾಯಿತು. ಆ ಜಮೀನುದಾರನನ್ನು ಕಠಿಣವಾಗಿ ಸದೆಬಡಿದು ದುರ್ವರ್ತನೆಗೆ ತಕ್ಕ ಶಿಕ್ಷೆಯಾಗುವುದಕ್ಕಾಗಿ ಅವನನ್ನು ಆನೆಗಳ ಸಮೇತ ಸಾಮ್ರಾಟನೆದುರು ಹಾಜರಪಡಿಸುವುದಕ್ಕೆಂದು ಅಸದ ಮತ್ತು ಇನ್ನಿಬ್ಬರು ದಂಡಧಾರಿಗಳನ್ನು ನೇಮಿಸಲಾಯಿತು.

ಬಿಕಾನೇರ ಪರಗಣೆಯ ಜಮೀನುದಾರ ರಾಜಾ ಅನುಪಮ ಸಿಂಘನ ವಿನಂತಿ ಪತ್ರವನ್ನು ಸಾಮ್ರಾಟನೆದುರು ಸಾದರಪಡಿಸಲಾಯಿತು. ಅದು ಇಂತಿತ್ತು: "ನನ್ನ ಸ್ವಾಸ್ಥ್ಯ ತೀರ ಕೆಟ್ಟಿದೆ. ನನಗೆ ಬದುಕುವ ಆಸೆ ಉಳಿದಿಲ್ಲ. ಈ ವಂಶಪರಂಪರಾಗತ ಸೇವಕನ ಇಬ್ಬರು ಪತ್ನಿಯರು ಗರ್ಭಿಣಿಯಿದ್ದಾರೆ. ಈ ವಿಶ್ವಾಸಿಕ ಸೇವಕನ ಸಾವಿನ ನಂತರ ಅವರಲ್ಲಿ (ಪತ್ನಿಯರಲ್ಲಿ) ಒಬ್ಬಳಿಗೆ ಪುತ್ರ ಜನಿಸಿದರೆ ಬಿಕಾನೇರದ 'ಟಿಕಾ' ವನ್ನು ಅವನಿಗೆ ಕೊಡಬೇಕು." ರಾಜಾ ವಂಶಪರಂಪರಾಗತ ಸೇವಕನಾಗಿ ಸ್ವಾಮಿನಿಷ್ಠೆಯಿಂದ ಉತ್ತಮ ಸೇವೆಗೈದದ್ದರಿಂದ ಅವನಿಗೆ ಗಂಡು ಮಗು ಹುಟ್ಟಿದಾಗ ಬಿಕಾನೇರದ 'ಟಿಕಾ' ವನ್ನು ನೀಡಲಾಗುವುದೆಂದು ಅವನನ್ನು ಸಾಂತ್ವನ ಪಡಿಸುವ ಮತ್ತು ಭರವಸೆ ಕೊಡುವ ಆಜ್ಞೆಯನ್ನು ತನ್ನ ಹೆಸರಿನಲ್ಲಿ ಹೊರಡಿಸಬೇಕೆಂದು ಸಾಮ್ರಾಟನು ಅಪ್ಪಣೆ ಮಾಡಿದನು. ಈ ವಿಷಯ ಕುರಿತು ಅವನಿಗೆ ಸಂಪೂರ್ಣ ಭರವಸೆ ಕೊಟ್ಟು ಸಮಾಧಾನ ನೀಡಬೇಕು. ಆದರೂ ರಾಜಾ ಇನ್ನೂ ಕೆಲ ಕಾಲ ಜೀವಿಸಿದನು. ಅವನಿಗೆ ಗುಣಮುಖವಾಯಿತು ಮತ್ತು ಇಬ್ಬರೂ ಪತ್ನಿಯರಿಗೂ ಗಂಡು ಮಕ್ಕಳು ಹುಟ್ಟಿದರು.

ಘಾಜಿ–ಉದ್–ದಿನ ಖಾನ ಬಹಾದೂರನ ಅಂಧತ್ವ :

ಘಾಜಿ–ಉದ್–ಖಾನ ಬಹಾದೂರನನ್ನು ಸಾತಾರಾ ಕೋಟೆಯನ್ನು ಗೆಲ್ಲುವುದಕ್ಕೆ ಕಳಿಸಿದ್ದನ್ನು ಹಿಂದಿನ ಪುಟಗಳಲ್ಲಿ ತಿಳಿಸಲಾಗಿದೆ. ಅವನು ಎರಡು ಹಂತಗಳನ್ನು ದಾಟಿ ಹೋದಾಗ ದೈವೇಚ್ಛೆಯಿಂದಾಗಿ ಕುರುಡನಾದನು. ಅದರ ವಿವರಗಳು ಕೆಳಗಿನಂತಿವೆ: "ಒಂದು ದಿನ ಖಾನನು ಜಾಜ್ವಲ್ಯಮಾನವಾದ ಉಡುಪನ್ನು ಧರಿಸಿ ಕೈಯಲ್ಲಿ ಕನ್ನಡಿ ಹಿಡಿದು ತನ್ನ ಶಿಬಿರದಲ್ಲಿ ಪೀಠೊಂದರಲ್ಲಿ ಕುಳಿತು ತನ್ನ ಸುಂದರ ಪ್ರತಿಬಿಂಬವನ್ನು ನೋಡಿ ಸಂತೋಷಪಡುತ್ತಿದ್ದನು. ಅವನ ಗುಲಾಮರಲ್ಲಿ ಕೆಲವರು ಅಲ್ಲಿದ್ದರು. ಅವರಲ್ಲೊಬ್ಬನು ಹೊಗಳುತ್ತ ಹೀಗೆಂದನು, "ಈ ನಿಮ್ಮ ಸೌಂದರ್ಯ ಮತ್ತು ಪ್ರಭುತ್ವಕ್ಕೆ ಚಕ್ರಾಧಿಪತ್ಯ ಯೋಗ್ಯವಾದದ್ದು. ತಮ್ಮ ಸುದೈವಕ್ಕೆ ಸಿಂಹಾಸನವು ಬಂದಿದ್ದಾದರೆ, ಅದು ತಮ್ಮೆಲ್ಲ ಸದ್ಗುಣಗಳಿಂದ ಶೃಂಗಾರಗೊಳ್ಳುವುದು" ನಸುನಕ್ಕು ಖಾನನು ಅನ್ನುತ್ತಾನೆ, "ಸರ್ವಶಕ್ತ ಪರಮಾತ್ಮನು ಅದನ್ನು ಸಾಧ್ಯಮಾಡಬಲ್ಲನು". ವಿವೇಕ ಮತ್ತು ಮುಂಧೋರಣೆಯುಳ್ಳ ಅವನ ತಾಯಿಗೆ ಇದು ತಿಳಿದಾಗ ಅವಳು ಹೇಳಿದಳು. "ಸಿಂಹಾಸನವು ಕೇವಲ ತಿಮುರಿದ್ ಮನೆತನಕ್ಕೆ ಸಲ್ಲುವುದು; ಅವರ ವಂಶಜರಿಗೆ ಭಗವಂತನು ಅದನ್ನು ದಯಪಾಲಿಸಲಿ. ಈ ಉನ್ನತ ಮನೆತನದ ಸೇವೆ ಮತ್ತು ಸ್ವಾಮಿನಿಷ್ಠೆಯ ಸಂತೋಷವೇ ಸೇವಕರಾದ ನಮಗೆ ಸಾಕು". ಹರಕರಾರಿಂದ ಈ ಕಹಿ ಸುದ್ದಿ ಸಾಮ್ರಾಟನಿಗೆ ಅಕ್ಷರಶಃ ಗೊತ್ತಾಗಲು ಅವನು

ಬಹಳ ದುಃಖಿತನಾದನು. ಖಾನನ ಸಮರ್ಪಣ ಸೇವೆಯನ್ನು ಗಮನದಲ್ಲಿಟ್ಟು ಸಾಮ್ರಾಟನು ಈ ತಮಾಶೆಗೆ ಪ್ರತಿಕ್ರಿಯಿಸುವುದನ್ನು ಸಮಂಜಸ ಕಾಲದಲ್ಲಿ ನೋಡೋಣವೆಂದು ಮುಂದೂಡಿದನು. ಅಕಸ್ಮಾತ್ತಾಗಿ ಖಾನನು ಅಸ್ವಸ್ಥನಾದನು. ಮನುಷ್ಯ ಸಹಜವಾದ ತಲೆನೋವು ಶುರುವಾಯಿತು. ನಿಸರ್ಗದತ್ತವಾಗಿ ಸಾಮ್ರಾಟನಿಗೆ ಪ್ರಬಲಗುಣಗಳಾದ ತೀಕ್ಷ್ಣ ಸ್ಮರಣ ಶಕ್ತಿ ಮತ್ತು ಧಾರಣ ಶಕ್ತಿ ಇದ್ದದ್ದರಿಂದ ಹೀಗೆ ಎಂದೋ ನೋಡಿದ್ದ ವ್ಯಕ್ತಿಯನ್ನು ಗುರುತಿಸುವ ಮತ್ತು ಕೇಳಿದ್ದ ಮಾತನ್ನು ನೆನಪಿಸಿಕೊಳ್ಳಬಲ್ಲವನಾಗಿದ್ದನು. ಖಾನನ ಅಪ್ರಿಯವಾದ ಮಾತನ್ನು ಮತ್ತು ನಗೆಯನ್ನು ಸಾಮ್ರಾಟನು ಈಗಲೂ ನೆನಪಿಸಿಕೊಂಡನು. ಖಾನನು ನಿಷ್ಠಾವಂತ ಸೇವಕನಾಗಿದ್ದರಿಂದ ಅವನ ಜೀವ ಉಳಿಸಬೇಕು, ಆದರೆ ಇಂದ್ರಿಯ ವಿಹೀನನನ್ನಾಗಿಸ ಬೇಕೆಂದು ನಿರ್ಣಯಿಸಿದನು. ಲಾಭದಾಶೆಗಾಗಿ ಮನುಷ್ಯ ಜೀವಿ ಆಮಿಷಕ್ಕೊಳಗಾಗುವ ದೌರ್ಬಲ್ಯ ಉಳ್ಳವನು ಆದ್ದರಿಂದ ಪಾಥ ಖಾನ ಹಕೀಮನನ್ನು ಕರೆಸಿ ಹೇಳಿದನು, "ಘಾಜಿ-ಉದ್-ದಿನ ಕಾಯಿಲೆ ಬಿದ್ದಿದ್ದಾನೆ. ಅವನಲ್ಲಿಗೆ ಹೋಗಿ ನನ್ನ ಪರವಾಗಿ ಸಾಂತ್ವನ ಹೇಳು. ಅವನ ಕಾಯಿಲೆ ವಾಸಿಯಾಗುವಂತೆ ಚಿಕಿತ್ಸೆ ನೀಡು. ಆತನ ಕಣ್ಣು ಗುಡ್ಡೆಗಳು ಊನವಾಗದಂತೆ ಆದರೆ ದೃಷ್ಟಿ ಹೋಗಿ ಬಿಡುವಂತೆ ಉಪಾಯ ಕೈಕೊಳ್ಳು." ಹಕೀಮನು ಖಾನನಿದ್ದಲ್ಲಿಗೆ ತಲುಪಿದನು. ಖಾನನ ಕಾಯಿಲೆಯನ್ನು ತಪಾಸಿಸಿ ಚಿಕಿತ್ಸೆ ನೀಡಲು ಅವನ ರೋಗ ಕಡಿಮೆಯಾಯಿತು. ಆದರೆ ತಲೆಶೂಲೆ ಹಾಗೆಯೇ ಉಳಿಯಿತು. ಆ ಬಳಿಕ ಹಕೀಮನು ಆತನ ಹಣೆಯಿಂದ ರಕ್ತ ಹೊರತೆಗೆದು ಚಿಕಿತ್ಸೆ ನೀಡಲಾಗಿ ತಲೆಶೂಲೆ ಶಮನವಾಯ್ತು, ಆದರೆ ಅವನು ದೃಷ್ಟಿ ಕಳೆದುಕೊಂಡನು. ತತ್‌ಕ್ಷಣವೇ ಖಾನನ ಶಿಬಿರದ ಹೊರಬಂದು ಅವನ ಅನುಮತಿ ಪಡೆದು ತೀವ್ರಗತಿಯಲ್ಲಿ ಹೊರಟೆದ್ದು ಬಂದು ಸಾಮ್ರಾಟನ ಸನ್ನಿಧಿಯಲ್ಲಿ ಈ ವಿಷಯವನ್ನು ಅರುಹಿದನು. ಆ ಮೇಲೆ ಸಾಮ್ರಾಟನು ಈ ವಿಷಯ ಖಾತ್ರಿ ಮಾಡಿಕೊಳ್ಳಲು ಹರಕರಾನನ್ನು ಕಳುಹಿಸಿದನು. ಅವನು ಖಾನನ ಅಂಧತ್ವವನ್ನು ತಿಳಿಸಿದನು. ಸೇನಾ ನಿಯಮದನ್ವಯ ಖಾನನ ಅಧೀನದಲ್ಲಿದ್ದ ಸೈನ್ಯವು ಖಾನನ ಮಗನ ಮತ್ತು ಅವನ ಉಳಿದ ಸಂಬಂಧಿಗಳ ಕೆಳಗೆ ಇರಬೇಕೆಂದು ಆಜ್ಞೆಯಾಯಿತು.

ಮಹಾಪ್ರಭುವಿನ ಅಪ್ಪಣೆಯ ಮೇರೆಗೆ ರಾಜಕುಮಾರ ಮುಹಮ್ಮದ ಅಝಂ ಶಾಹ ಖಾನನ ಶಿಬಿರಕ್ಕೆ ಅವನಿಗೆ ಸಮಾಧಾನ ಹೇಳಲು ಹೋದನು. ಇದನ್ನು ಕೇಳಿ ತಿಳಿದ ಖಾನನು ತನ್ನ ಮಗ ಚಿನ್ ಖಿಲಿಜ ಖಾನನನ್ನು ರಾಜಕುಮಾರನನ್ನು ಬರಮಾಡಿಕೊಳ್ಳಲು ಕಳಿಸಿ ತಾನೇ ಸ್ವತಃ ಬಾಗಿಲಿಗೆ ಬಂದು ಆತನಿಗೆ ತನ್ನ ಗೌರವ ಸಲ್ಲಿಸಿದನು. ರಾಜಕುಮಾರನನ್ನು ಒಳಗೆ ಕರೆದುಕೊಂಡು ಹೋಗಿ ಮೆತ್ತನೆಯ ಪೀಠದ ಮೇಲೆ ಕೂಡಿಸಿ ಎರಡು ನೂರು ಬಂಗಾರ ನಾಣ್ಯಗಳನ್ನು, ಒಂದು ಆನೆ, ಲೋಹಾಲಂಕೃತ ಹಿಡಿಕೆಯುಳ್ಳ ಒಂದು ಕಿರುಗತ್ತಿ, ಮೂರು ಮಣಿಖಚಿತ ಮತ್ತು ಒಂದು ಅಖಂಡ ವಸ್ತ್ರವನ್ನು ಕಾಣಿಕೆಯಾಗಿ ನೀಡಿದನು. ರಾಜಕುಮಾರನು ಮೂರು ನಾಲ್ಕು ಘಳಿಗೆ ಅಲ್ಲಿದ್ದು ಸಾಮ್ರಾಟನ ಕಾಣಿಕೆಗಳನ್ನು ಮರ್ಯಾದೆ ಪೂರ್ವಕ ನೀಡಿ ತನ್ನ ಮನೆಗೆ ಮರಳಿದನು.

ಅಡಿ ಟಿಪ್ಪಣಿಗಳು :

೧) ರಾಮಚಂದ್ರ ಸಂಕರಾಜಿ, ಸಂತ ಮತ್ತು ಧನಾ ಇವರು ಮರಾಠಾ ನಾಯಕರಾಗಿದ್ದರು" ಭೀಮಸೇನ, ೨ – ೧೪೬ ಬ.

೨) ಘಾಲಿಬ ಖಾನ ಬಿಜಾಪುರಿ ೪೦೦೦/೪೦೦೦ ಮನಸಬ ಹೊಂದಿದ್ದನು. ಎ.ಎನ್. ೫೯೬, ೫೯೮; ಎಂ.ಎ.೩೩, ಎಂ.ಯು.೨, ೫೮೫, ದಿಲಕುಶ, ೨, ೧೪೬೬, ಅದರಂತೆಯೇ ಅಠಾರ ಅಲಿ, ೧೮೦.

೩) "ಡೆಕ್ಕನ್ ಸೈನಿಕರು ಖಡ್ಗ ಮತ್ತು ಭರ್ಚಿ ಬಿಟ್ಟು ಇನ್ನಾವ ಶಸ್ತ್ರಗಳನ್ನು ಹೊಂದಿಲ್ಲ ಮತ್ತು ಬಿಜಾಪುರಿಗಳು (ಮರಾಠರನ್ನು ಹೊರತುಪಡಿಸಿ) ಭರ್ಚಿಯನ್ನು ಕೂಡ ಉಪಯೋಗಿಸುವುದಿಲ್ಲ. ಉತ್ತರ ಭಾರತದ ಜನರ ಅನುಕರಣೆ ಮಾಡುತ್ತ ಅವರು ಫಿರಂಗಿದಳ ಹೊಂದಿದ್ದರೂ ಅದರಿಂದ ಅವರಿಗೆ ಪ್ರಯೋಜನ ಏನೂ ಇಲ್ಲ." ಭೀಮಸೇನ, ೨, ೧೪೬ ಬ, ಸಾಕಿ ಹೇಳುವಂತೆ ಅದು ಮೇ, ೧೬೯೦, ಎಂ.ಎ. ೩೩೬.

೪) ಅದು ಕರರಗಾಂವ ಆಗಿದ್ದು ರಹೀಮ ಖಾನನ ಸಹೋದರ ಮೀರ ಹುಸೇನನು ೧೫೦೦/೧೫೦೦ ದ ಮನಸಬ ಹೊಂದಿದ್ದನು. ಎ.ಕೆ.ಎಚ್., ೩೦ ಮೊಹರಂ, ೪೩ನೆ ಆರ್.ವೈ.; ಅದರಂತೆಯೇ ಅಠಾರ ಅಲಿ, ೨೫೩.

೬) ಉದ್ಧರಣವು ಪರ್ಶಿಯನ್ ಭಾಷೆಯಲ್ಲಿದೆ.

೭) 'ಅವನ ಹೆಸರು ಅಹಮ್ಮದ ಅಖಾ' ಎಂದಿತ್ತು. ಎಂ.ಎ. ೩೩೭ ನೋಡಿರಿ. ಅವನು ೧೬೯೦ರಲ್ಲಿ ಬಂದನು.

೮) ಸಿದಿ ಮಸೂದನ ಆದೋನಿ ಕೋಟೆಯನ್ನು ಒಪ್ಪಿಸಿದನು. ಅದೇ ಕಾಲಕ್ಕೆ ಅವನಿಗೆ ಮನಸಬ ಕೊಡಲಾಯಿತು. ಭೀಮಸೇನ, ೨, ೯೬ಎ.

೯) ಮಹಾರಾಜಾ ಬಸವಂತ ಸಿಂಘನ ಪ್ರತಿರೂಪ (ಸಂವಾದಿ) ಆಗಿದ್ದ ಮುಹಮ್ಮದ ರಾಜನು ತನ್ನ ಹದಿಮೂರನೇ ವರ್ಷದಲ್ಲಿ ೧೬೮೮ ರಲ್ಲಿ ತೀರಿಕೊಂಡನು. ಅವನ ಸಾವು ಮತ್ತು ಅದರ ವಿವರಕ್ಕಾಗಿ ನೋಡಿ. ಎಂ.ಎ.೩೧೮.

೧೦) ದೌಲತ ಅಫಜಾ ಡಿಸೆಂಬರ ೧೫, ೧೬೯೯ ರಲ್ಲಿ ಜನಿಸಿದನು. ರೂಪಸಿಂಘ ರಾಠೋಡನ ಮಗಳು ಇವನ ತಾಯಿ. ಅವನು ೧೬೮೮ ರಲ್ಲಿ ತೀರಿಕೊಂಡನು. ಎಂ.ಎ. ೯೩ ಮತ್ತು ೩೧೪.

೧೧) ಮಗನು ೧೭ ಮೇ ೧೬೮೪ ರಂದು ಹುಟ್ಟಿದ್ದು.

೧೨) ಮೊಹರಂ ತಿಂಗಳ ಮಧ್ಯದಲ್ಲಿ (೧೦ ಅಕ್ಟೋಬರ–ನವಂಬರ ೧೬೮೮) ಭೀಕರ ಪ್ಲೇಗ ಪಿಡುಗು ಒಮ್ಮೆಲೇ ಶುರುವಾಗಿ ಜನರನ್ನು ಕೊಂದಿತು. ಅದರಿಂದ ಬಾಧಿತರಾದ ಉನ್ನತ ಜನರಲ್ಲಿ ಒಬ್ಬನು ಪಿರೋಝು ಜಂಗ ಬಾಹದೂರ ಸಾಂಭಾನೊಡನೆ ಹೋರಾಡಲು ನಿಯಮಿಸಲ್ಪಟ್ಟಿದ್ದನು. ಈತನು ಕಣ್ಣು ಬೇನೆಯಿಂದಾಗಿ ವಿಜಾಪುರ ರಾಜ್ಯದಲ್ಲಿ ಉಳಿಯಬೇಕಾಯಿತಲ್ಲದೆ, ಆ ಬೇನೆ ಮುಂದುವರೆದು ಅವನ ಸಂಪೂರ್ಣ ಅಂಧತ್ವದಲ್ಲಿ ಪರ್ಯಾವಸಾನವಾಯಿತು. ಆಗ ಆ ಕಾರ್ಯವನ್ನು ರಾಜಕುಮಾರ ಅಜಂನಿಗೆ ಒಪ್ಪಿಸಲಾಯಿತು. (ಸುಮಾರು ಡಿಸೆಂಬರ ಮಧ್ಯ ೧೬೮೮) ೩೧೮, ೩೧೯.

ಘಾಜಿ–ಉದ್–ಖಾನ ಬಹಾದೂರನು ಆದೋನಿಯನ್ನು ಗೆದ್ದ ಬಳಿಕ ವಿಜಾಪುರ ಸಮೀಪ ಬಂದಾಗ ಪ್ಲೇಗ ಪೀಡಿತನಾದನು. ಅವನ ಚಿಕಿತ್ಸೆಗೆ ಸಾಮ್ರಾಟನು ಆಜ್ಞೆ ಮಾಡಿದನು. ಆದರೆ. ಅದು ನಿಷ್ಫಲವಾಯಿತು. ಕೊನೆಗೆ ಅವನು ತನ್ನ ದೃಷ್ಟಿಯನ್ನೇ ಕಳೆದುಕೊಂಡನು.

■

*

ನತದೃಷ್ಟ ಸಾಂಭಾನ ಬಂಡುಕೋರ ಚಟುವಟಿಕೆಗಳು

ಸಾಮ್ರಾಜ್ಯದ ಪ್ರದೇಶದಲ್ಲಿ ಅವನ ಉಪಟಳ ಮತ್ತು ಅವನನ್ನು ಸದೆಬಡಿಯಲು ಮಹಾಪ್ರಭುವಿನ ನಿರ್ಗಮನ :

ದಾರುಲ್ ಝುಪಾರದ (ಬಿಜಾಪುರದ) ಗೆಲುವಿನ ನಂತರ ಹದಿನಾಲ್ಕು ತಿಂಗಳ ಕಾಲ ಕಳೆಯಿತು. ಸಮಾನತೆ ಮತ್ತು ನ್ಯಾಯ ಇವುಗಳನ್ನು ಅನುಭವಿಸದಿದ್ದ ಅಲ್ಲಿಯ ನಿವಾಸಿಗಳು ಆತಂಕದಿಂದ ಮುಕ್ತರಾದರು. ಬಹುಬೇಗನೆ ಅವರು ಸಿರಿವಂತರಾದರು. ಆ ನಾಡೆಲ್ಲ ಕಿಡಿಗೇಡಿಗಳಿಂದ ಮುಕ್ತವಾಗಿ ಆಡಳಿತದಲ್ಲಿ ಸುಧಾರಣೆಯಾಯಿತು. ಸಾಮ್ರಾಜ್ಯದ ಹೊಸ್ತಿಲಕ್ಕೆ ಸಮೀಪವಿದ್ದವರು ಬೆರಾರ, ಖಾನದೇಶ ಮತ್ತು ಬಕಲಾನಾಗಳಿಂದ ಬಂದ ಸಮಾಚಾರದ ಆಧಾರದ ಮೇಲೆ ಮೇಲಿಂದ ಮೇಲೆ ಸಾಮ್ರಾಟನಿಗೆ ಹೇಳಿದ್ದೇನೆಂದರೆ, "ನತದೃಷ್ಟ ಸಾಂಭಾ ಮತ್ತು ದುಷ್ಟ ಹಮೀರ ಇವರು ಸ್ವಾಮಿನಿಷ್ಠೆಯ ಮತ್ತು ಸೇವೆಯ ರೇಖೆಯನ್ನು ಮೀರಿ ಸಾಮ್ರಾಜ್ಯದ ಪ್ರದೇಶಗಳ ಮೇಲೆ ದಾಳಿಯಿಟ್ಟರು. ಈ ದುರ್ದೈವಿ ನೀಚರು ನಗರಗಳನ್ನು, ಪಟ್ಟಣಗಳನ್ನು ಮತ್ತು ಹಳ್ಳಿಗಳನ್ನು ದಬ್ಬಾಳಿಕೆಯಿಂದ ಧ್ವಂಸಮಾಡುತ್ತ ಅವಗಳನ್ನು ದೋಚಿಕೊಂಡು ಕೊಳ್ಳೆ ಹೊಡೆದು ಹಾಳುಗೆಡುವಿದ್ದಾರೆ. ಅದರಲ್ಲೂ ಮುಸ್ಲಿಮ ಸಮಾಜದಲ್ಲಿ ಪೂಜ್ಯರಾದ, ವಂದನೀಯರಾದ ಸಯೀದರು, ಶೇಖರನ್ನು, ವಿದ್ವಾಂಸರನ್ನು, ಶ್ರೀಮಂತರನ್ನು ಮತ್ತು ದೈವಜ್ಞರನ್ನು ಅವಮಾನಗೊಳಿಸಿ ಸುಲಿದು ಹಾಕಿದ್ದಾರೆ. ಈ ಪ್ರತಿಷ್ಠಿತ, ಗೌರವಾನ್ವಿತ ವ್ಯಕ್ತಿಗಳಲ್ಲನೇಕರು ಕಾಲನ ಹೊಡೆತಕ್ಕ ಸಿಕ್ಕು ಮತ್ತು ದೈವಿ ಅವಕೃಪೆಗೊಳಗಾಗಿದ್ದರಿಂದ ತಾಳಕೋರಣ ಕಡೆಗೆ ಓಡಿ ಹೋಗಿ ಅಲ್ಲಿ ನೆಲೆಯೂರಿದರು. ಅಲ್ಲಿಯೂ ಕೂಡ ಮುಸ್ಲಿಮರಿಗೆ ಹೊಂದದ ರೀತಿಯಲ್ಲಿ ನಡೆಸಿಕೊಳ್ಳಲಾಯಿತು. ಈ ದಂಗೆಕೋರರನ್ನು ಶಿಕ್ಷಿಸಲು ಕಳಿಸಿದ್ದ ಸಾಮ್ರಾಜ್ಯ ಸೈನಿಕರು ಸೋಲಲ್ಪಟ್ಟು ಅವರನ್ನು ಯುದ್ಧ ಕೈದಿಗಳಾಗಿ ಒಯ್ಯಲಾಯಿತು. ಅನೇಕ ಪ್ರವಾಸಿಗರನ್ನು ಹಿಡಿದೊಯ್ಯಲಾಗಿದೆ. ಸಂಕ್ಷಿಪ್ತದಲ್ಲಿ ಹೇಳುವುದಾದರೆ, ಅವರ (ದಂಗೆಕೋರರ) ದಬ್ಬಾಳಿಕೆ, ಪೀಡೆ ಆಕಾಶದೆತ್ತರವನ್ನೂ ಮೀರಿದ್ದಾಗಿತ್ತು." ಸ್ವಲ್ಪದರಲ್ಲಿ ಹೇಳುವುದಾದರೆ, ಕ್ರೌರ್ಯ ಮತ್ತು ದಬ್ಬಾಳಿಕೆಯ ನೆಲೆಗಳನ್ನು

ಮೂಲೋತ್ಪಾಟನೆ ಮಾಡಲು ಮತ್ತು ಪ್ರಜಾಪೀಡಕ ಅರಸರನ್ನು ಶಿಕ್ಷಿಸಲು ಬಯಸಿದ್ದ, ಆಶ್ರಯದಾತನೆನಿಸಿದ್ದ, ತ್ರಸ್ತರಾಗಿದ್ದವರನ್ನು, ಪೀಡೆಗೊಳಗಾಗಿದ್ದವರನ್ನು ರಕ್ಷಿಸಿ ಉಳಿಸಲು ಕಟಿಬದ್ಧನಾಗಿದ್ದ, ಜಗತ್ತಿಗೆ ಆಶ್ರಯ ನೀಡುವವನಾಗಿದ್ದ, ಸತ್ಯ ಪ್ರೇಮ ಮತ್ತು ನ್ಯಾಯದ ದಾತಾನೆನಿಸಿದ ಸಾಮ್ರಾಟನ ಲಕ್ಷ್ಯವು ಈ ದಂಗೆಕೋರರನ್ನು ಬೇರು ಸಹಿತ ಕಿತ್ತು ಹಾಕಿ ನಿರ್ನಾಮಗೊಳಿಸುವ ಕಡೆಗೆ ತಿರುಗಿತು. ಒಂದು ಶುಭ ಮುಹೂರ್ತದಲ್ಲಿ ಮತ್ತು ಸಮಂಜಸ ಕಾಲದಲ್ಲಿ ಸಾಮ್ರಾಜ್ಯ ಸೇನೆಯು ದಾರುಲ್ ಝಫರ್ (ವಿಜಾಪುರ)ವನ್ನು ಬಿಟ್ಟು ಜುನ್ನೈರಕ್ಕೆ ನಡೆಯಿತು. ಎಲ್ಲ ಖ್ಯಾತರಾದ ಅಮೀರರಿಗೆ ಅವರು ಎಲ್ಲೇ ಇರಲಿ ಹೊರಟೆದ್ದು ಬಂದು ತ್ವರಿತವಾಗಿ ಸಾಮ್ರಾಜ್ಯ ಸೇನೆಗೆ ಸೇರಬೇಕೆಂದು ಆಜ್ಞೆ ಹೊರಡಿಸಲಾಯಿತು. ಅನೇಕ ಹಂತಗಳನ್ನು ಕ್ರಮಿಸಿ ಬಂದು ಸಾಮ್ರಾಜ್ಯ ಸೇನೆ ಭೀಮ ತಟಾಕದಲ್ಲಿ ಬೀಡಾರ ಹೂಡಿತು. ಅದೇ ವೇಳೆಯಲ್ಲಿ ಸಾಮ್ರಾಟನು ಆನೆಗಳ ಕಾಳಗವನ್ನು ನೋಡುವ ಬಯಕೆ ಹೊಂದಿದ್ದನು. ಮೂರು ನಾಲ್ಕು ಬಾರಿ ಆನೆಗಳು ಹೋರಾಡುವುದನ್ನು ನೋಡಿ ಅವನು ಖುಷಿ ಪಟ್ಟನು. ಅದೇ ಸ್ಥಳದಲ್ಲಿ ಅಬ್ದುಲ್ ರಜಾಕ ಹೈದರಾಬಾದಿ ಸಾಮ್ರಾಜ್ಯ ಸೇವೆಗೆ ಸೇರಿದನು. ಸಾಮ್ರಾಟನು ಅವನಿಗೆ ೪೦೦೦/೩೦೦೦ ಜಾಟ ಮತ್ತು ಸವಾರರುಳ್ಳ ಮನಸಬವನ್ನು ಖಡ್ಗ, ಮರ್ಯಾದಾ ನಿಲುವಂಗಿ (ಖಿಲಾತೆ-ಖಾಸಾ), ಧ್ವಜ ಮತ್ತು ನಗಾರಿ ಇವುಗಳನ್ನು ನೀಡಿದನು.

ಘಾಜಿ-ಉದ್-ಖಾನ ಬಹಾದೂರನು ಕಾಯಿಲೆಯಿಂದ ಚೇತರಿಸಿಕೊಂಡು ಸಾಮ್ರಾಟನಿಗೆ ವಂದನೆ ಸಲ್ಲಿಸಲು ಬಂದನು. ಮುತಾಲಿಬ ಖಾನನು ಖಾನನನ್ನು ಸಭಾಮಂದಿರದ ದ್ವಾರದಲ್ಲಿ ಸ್ವಾಗತಿಸಬೇಕು ಮತ್ತು ಬಹ್ರಾಮಂದಖಾನನು ಅವನನ್ನು ಘುಸಾಲ ಖಾನಾಕ್ಕೆ ಕರೆದುಕೊಂಡು ಹೋಗಬೇಕೆಂದು ಆಜ್ಞೆ ಹೊರಟಿತು. ಆ ಪ್ರಕಾರ ಮೇಲ್ಕಾಣಿಸಿದ ಖಾನರು ಮುಂದೆ ಹೋಗಿ ಅವನನ್ನು ಸ್ವಾಗತಿಸಿ ಆಸ್ಥಾನಕ್ಕೆ, ಸಭಾಮಂದಿರಕ್ಕೆ ಕರೆತಂದರು. ತಸ್ಲೀಮ ಮತ್ತು ಕುರ್ನೀಸಗಳ ವಿಧಿಗಳನ್ನು ಪೂರ್ತಿಗೊಳಿಸಿ ಸಾಮ್ರಾಟನಿಗೆ ತನ್ನ ವಂದನೆ ಸಲ್ಲಿಸಿದನು. ಒಂದು ಸಾವಿರ ಬಂಗಾರ ಮೊಹರುಗಳನ್ನು ನಜರ ಎಂದು ಮತ್ತು ರೂ.ಎರಡು ಸಾವಿರ ನಿಸಾರ ಎಂದು ಸಲ್ಲಿಸಿ ಸಾಮ್ರಾಟನ ಪಾದಗಳನ್ನು ಚುಂಬಿಸಿದನು. ಸಾಮ್ರಾಟನು ಖಾನನ ಬೆನ್ನ ಮೇಲೆ ಕೈಯಿರಿಸಿದನು. ಆಗ ಅವನ ಮರ್ಯಾದೆ ಮುಗಿಲೆತ್ತರಕ್ಕೆ ಹೋಯಿತು. ಸಾಮ್ರಾಟನು ಅವನಿಗೆ ವಿಶೇಷ ನಿಲುವಂಗಿ ಮತ್ತು ನಗದು ರೂ. ಐದು ಸಾವಿರ ನೀಡಿದನು. ಘಾಜಿ-ಉದ್-ಖಾನನೊಡನೆ ನಜರ್ ನೀಡಿದ್ದ ರುಸ್ತುಂ ಖಾನನಿಗೂ ನಿಲುವಂಗಿ ನೀಡಿದ್ದರಿಂದ ಅವನ ಅಂತಸ್ತು ಉನ್ನತಗೊಂಡಿತು. ಆ ಬಳಿಕ ಸಿದಿ ಮಸೂದ ಖಾನನ ಪುತ್ರರಾದ ಹುಸೇನ ಖಾನ ಮತ್ತು ಬಾದಶಾಹ ಖುಲಿಖಾನ ಇವರು ಸಾಮ್ರಾಟನಿಗೆ ವಂದನೆ ಸಲ್ಲಿಸಿ 'ನಜರ್' ಮತ್ತು 'ನಿಸಾರ್' ಕೊಟ್ಟರು; ವಿಶೇಷ ನಿಲುವಂಗಿಗಳನ್ನು ಕೊಟ್ಟು ಅವರ ಅಂತಸ್ತನ್ನು ಹೆಚ್ಚಿಸಲಾಯಿತು.

ಸಾಮ್ರಾಟನು ಭೀಮಾ ನದಿ ತೀರದಲ್ಲಿ ಬೀಡು ಬಿಟ್ಟನು[೧]. ಮಧ್ಯರಾತ್ರಿಯಲ್ಲಿ ಖಾನ ಫಿರೋಜ ಜಂಗನನ್ನು ಗುಪ್ತವಾಗಿ ಕರೆಸಿ ರಾಹಿರಿ ಕೋಟೆಯನ್ನು ಕುರಿತು ತನ್ನ ಯೋಜನೆಗಳನ್ನು

ಅವನೊಡನೆ ಚರ್ಚಿಸಿ ಅದರ ಕೈವಶಕ್ಕಾಗಿ ವ್ಯವಸ್ಥೆ ಮಾಡಲು ಆಜ್ಞಾಪಿಸಿದನು. ನಾಲ್ಕು ದಿನಗಳ ನಂತರ ಮೇಲೆ ಹೇಳಿದ ಖಾನನಿಗೆ ವಿಶೇಷ ನಿಲುವಂಗಿ, ದಾರಾ ಶಿಕೋಹನ ಬಂಗಾರ ಹಿಡಿಯ ಖಡ್ಗ, ಆನೆ, ಸುವರ್ಣಾಭರಣ ಅಲಂಕೃತ ಕುದುರೆಯೊಂದನ್ನೊಳಗೊಂಡ ಐದು ಕುದುರೆಗಳು, ಇವುಗಳನ್ನು ನೀಡಿದನು. ಆ ಮೇಲೆ ಸರ್ವಶಕ್ತ ಅಲ್ಲಾಹನಿಗೆ ಪ್ರಾರ್ಥಿಸಿ, ಯಶಸ್ವಿಗಾಗಿ 'ಫತಾಹ' ಓದಿ, ನತದೃಷ್ಟ ಸಾಂಭಾನನ್ನು ಸದೆಬಡೆಯುವುದಕ್ಕೆ ಹೊರಡಲು ಮತ್ತು ರಾಹಿರಿ ಕೋಟೆಯನ್ನು ಗೆದೆಯಲು ಅನುಮತಿ ಇತ್ತನು. ಖಾನನಿಗೆ ಸಹಾಯಕ್ಕೆಂದು ಎರಡು ಲಕ್ಷ ರೂಪಾಯಿಗಳನ್ನು ನಗದು ಕೊಡಲಾಯಿತು. ಹಾಗೆಯೆ ನೀಚ ಸಾಂಭಾನ ಪ್ರದೇಶದ ಒಳಹೊಕ್ಕು ತಮ್ಮ ಸರ್ವಶಕ್ತಿಯನ್ನು ಪಣಕ್ಕಿಟ್ಟು ಅವನನ್ನು ಹಿಡಿಯಬೇಕು ಇಲ್ಲವೆ ಕೊಲ್ಲಬೇಕು ಎಂದು ರಾಜಕುಮಾರ ಅಜಂಶಾಹ ಮತ್ತು ಝುಲ್ಫೀಕರ ಖಾನ ಬಹಾದೂರ ಇವರಿಗೆ ಆಜ್ಞೆ ನೀಡಲಾಯಿತು. ಆ ದುಷ್ಟನ ಪ್ರದೇಶಗಳಲ್ಲಿ ಸೀಮೆಯೊಳಗೆ ಬಹುದೊಡ್ಡ ಸಾಮ್ರಾಜ್ಯ ಸೈನ್ಯ ಪ್ರವೇಶಿಸಿತು[೨].

ಸಾಮ್ರಾಟನು ರಾಜಕುಮಾರ ಮುಹಮ್ಮದ ಮೌಝುಂನಿಗೆ ಕಾಣಿಕೆಗಳನ್ನು ನೀಡಿದನು. ವಿವರಗಳು ಕೆಳಗಿನಂತಿವೆ. "ರಾಜಕುಮಾರ ಮೌಝುಂನನ್ನು ಅವನ ಪುತ್ರರೊಡನೆ ಕರೆದುಕೊಂಡು ಬರಬೇಕು. ಅವರು ಸಭಾಗೃಹ ಹಾಗೂ ಘುಸಾಲಾ ಖಾನಾ ಮತ್ತು ನ್ಯಾಯಾಲಯಗಳನ್ನು ನೋಡಿ ಆನಂದಿಸಲಿ ಎಂದು ಖ್ವಾಜಾ ಸಾರಾ ಯಾಕೂಬ ಖಾನನಿಗೆ ಅಪ್ಪಣೆಯಾಯಿತು". ಖ್ವಾಜಾ ಸಾರಾನು ಆಜ್ಞೆಯನ್ನು ನೆರವೇರಿಸಿದನು. ಆ ಮೇಲೆ ಅವನು ರಾಜಕುಮಾರನ ವಿನಂತಿಯನ್ನು ನಿರೂಪಿಸಿದನು. "ಮಹಾಪ್ರಭುವಿನ ಸದಾಕಾಲದ ಕರುಣೆಯನ್ನು ಕೃತಜ್ಞತೆಯಿಂದ ಸ್ಮರಿಸುತ್ತ ರಾಜಕುಮಾರನು ಪ್ರಾರ್ಥಿಸುವುದೇನೆಂದರೆ, ಇದೇ ತೆರನಾದ ಔದಾರ್ಯವು ದಯೆಯ ದಿಗಂತದಿಂದ ತನ್ನ ಆಗುಹೋಗುಗಳ ಕ್ಷೇತ್ರದ ಮೇಲೆಯೂ ಕಾಣಿಸಿದರೆ ಮುದ ನೀಡುವ ತಮ್ಮ ಪಾದಗಳ ಚುಂಬನದಿಂದ ಹೊಮ್ಮಿದ ಬೆಳಕಿನಿಂದ ತನ್ನ ಸುದೈವದ ನೊಸಲನ್ನು ಸಂತಸದಿಂದ ತುಂಬಿಕೊಳ್ಳಲು ಸಮರ್ಥನಾಗುವನು." ಸಾಮ್ರಾಟನು ಇದಕ್ಕೆ ಉತ್ತರಿಸಿದನು: "ಈ ರೀತಿಯ ಸೌಜನ್ಯಾಭಿವ್ಯಕ್ತಿಯು ವಾಂಛಿತಗಳ ಸಿದ್ಧಿಗಾಗಿ ಪರಿಪೂರ್ಣ ಸಾಧನವಾಗಿದೆ." ಒಂದು ಕಾವ್ಯ ದ್ವಿಪದಿಯನ್ನು ಬರೆದನು: "ಪ್ರತಿಯೊಂದು ಕಾರ್ಯಕ್ಕೆ ನಿಶ್ಚಿತ ಕಾಲವಿದೆ. ದೇವನ ಇಚ್ಛೆ ಇದ್ದರೆ ಸರಿಯಾದ ಸಂದರ್ಭದಲ್ಲಿ ಆ ಕಾಲವು ಲಭ್ಯವಾಗುವುದು". ಸಿದಿ ಮಸೂದ ಖಾನನು ತೀರಿಕೊಂಡನು. ಸೈನ್ಯಾಧಿಕಾರಿ ಇಹ್ತಮಮ್ ಖಾನನು ಅವನ ಶಿಬಿರವನ್ನು ಹೊರಗಿನವರು ಪ್ರವೇಶಿಸದಂತೆ ತಡೆಗಟ್ಟಿದನು; ಅವನೆಲ್ಲ ಆಸ್ತಿಯನ್ನು ಕೈವಶಪಡಿಸಿಕೊಳ್ಳಬೇಕೆಂದಿದ್ದನು. ಆದರೆ ಖಾನನ ಸಂಬಂಧಿಗಳ ಅರಿಕೆಯ ಮೇರೆಗೆ ಮಹಾಪ್ರಭು ಕರುಣೆಯಿಂದ ಅದನ್ನು ಅವರಿಗೆ ಮರಳಿಸಿದನು. ಆಜ್ಞೆಯ ಮೇರೆಗೆ ಸಲಾಬತ ಖಾನ ಮತ್ತು ಹುಸೇನ ಖಾನ ಮೊದಲಾದವರು ದಿವಂಗತ ಖಾನನ ಪುತ್ರರನ್ನು ಶೋಕಾಚರಣೆಯಿಂದ ಹೊರತಂದು, ಆಸ್ಥಾನದೊಳಗೆ ಕರೆತಂದರು. ಸಾಮ್ರಾಟನು ಅವರಲ್ಲಿ ಪ್ರತಿಯೊಬ್ಬರಿಗೂ ನಿಲುವಂಗಿಗಳನ್ನು ನೀಡಿದನು.

ಗೋಪಾಲಸಿಂಘ ಮತ್ತು ದಿವಂಗತ ಪಹಾಡ ಸಿಂಘ ಗೌರನ ಬಾಂಧವರು ಹಾಗೂ ಪುತ್ರರ ಪೈಕಿ ಆರು ಜನರು ಅಮೀರ-ಉಲ್-ಉಮರಾನ ಹತ್ತಿರ ಬಂದು ಮೇಲ್ದರ್ಜೆಯ ಮನಸಬಗಳನ್ನು ಮತ್ತು ಕಾಬೂಲದಲ್ಲಿ ಅಧಿಕಾರ ಸ್ಥಾನ ಕೊಡಬೇಕೆಂಬ ಕರಾರಿನ ಮೇಲೆ ರೂ. ೮೫,೦೦೦ ಮತ್ತು ಸಾಮಗ್ರಿಗಳನ್ನು ಕೊಟ್ಟಿದ್ದಾರೆ ಎಂದೂ, ಆ ನಗದು ಹಣವನ್ನು ಅಕಬರಾಬಾದದ ಸರ್ಕಾರಿ ಖಜಾನೆಯಲ್ಲಿ ಇಟ್ಟಿರುವುದಾಗಿಯೂ ಅಮೀರ-ಉಲ್-ಉಮರಾನ ಓಲೆಯಿಂದ ಸಾಮ್ರಾಟನಿಗೆ ತಿಳಿದು ಬಂದಿತು. ಸಾಮ್ರಾಟರು ಅವರ ತಪ್ಪುಗಳನ್ನು ಕ್ಷಮಿಸುವಿರೆಂದು ಆಶಿಸುವೆನೆಂದೂ ಮಾತನ್ನು ಸೇರಿಸಿದ್ದನು. ರಾಜ್ಯದ ಸ್ಥಂಭವಾಗಿದ್ದ ರುಕ್ನುಸ ಸುಲ್ತಾನತ್‌ನ ಶಿಫಾರಸು ಸರಿಯಾಗಿ ಮತ್ತು ಯೋಗ್ಯವಾಗಿದ್ದರಿಂದ ಅದನ್ನು ಸ್ವೀಕರಿಸಲಾಯಿತು. ಪ್ರತಿಯೊಬ್ಬನನ್ನು ಅವನ ಮೊದಲಿನ ಸ್ಥಾನ ಮತ್ತು ಹುದ್ದೆಯಲ್ಲಿ ಪುನಃ ಪ್ರತಿಷ್ಠಾಪಿಸಲಾಯಿತು. ಅವರು ಸರಿಯಾಗಿ ಸನ್ನದ್ಧರಾದಾಗ ಆರು ತಿಂಗಳ ನಂತರ ಕಾಬೂಲಕ್ಕೆ ಹೊರಡಬಹುದೆಂದು ತಿಳಿಸಲಾಯಿತು . ಶಹಾಜಹಾನಾಬಾದ ಸುಬೆಯ ನಝಿಂ ಆಗಿದ್ದ ಅಖಿಲ್ ಖಾನನು ಒಂದು ನೂರುದಾ ಎಪ್ಪತ್ತು ಮಿಸ್ಕಲ್ ತೂಕದ ಮಾಣಿಕ್ಯ ಸಹಿತ ತನ್ನ ಕಾಣಿಕೆಯನ್ನು ಕಳಿಸಿದನು. ರೂ.೪೦೦೦ ಬೆಲೆಯುಳ್ಳ ಅದನ್ನು ಮಹಾ ಪ್ರಭುವಿನ ಸನ್ನಿಧಿಗೆ ಸಲ್ಲಿಸಲು ಅದನ್ನು ಸ್ವೀಕರಿಸಲಾಯಿತು. ಗುಜರಾತದಲ್ಲಿ ತಯಾರಾಗಿದ್ದ ಸುವರ್ಣ ಕಸೂತಿಯುಳ್ಳ ವಸ್ತ್ರವನ್ನು ಮಹಾ ಸನ್ನಿಧಿಗೆ ಸಲ್ಲಿಸಲಾಯಿತು. ಹಾಗೆಯೆ ಸುಬಾತ ಖಾನನ ಕಾಣಿಕೆಯನ್ನು ಪ್ರಭುವಿಗೆ ಅರ್ಪಿಸಲು ಸಂತೋಷದಿಂದ ಸ್ವೀಕರಿಸಲಾಯಿತು.

ಇತ್ತೀಚೆಗೆ ಅಪರಿಮಿತ ವಿಜಯ ಶಾಲಿಯ ಕೃಪೆಯಿಂದ ಪಾಪಿ ಸಾಂಭಾನ ಬಂಧನ ಸಾಧಿಸಲ್ಪಟ್ಟಿತು. ಅದರ ವಿವರಗಳು ಕೆಳಗಿನಂತಿವೆ. ನಿರ್ಲಜ್ಜ ಸಾಂಭಾನ ಮುಖ್ಯ ವಕೀಲನಾಗಿದ್ದ ಕಬಕಲಾಸನು (ಕವಿಕಲಶನು) (ಇವನನ್ನು ಕುರಿತು ಈ ಗ್ರಂಥದ ಮೊದಲು ಭಾಗದಲ್ಲಿ ಬರೆಯಲಾಗಿದೆ) ಅವನ ಎಲ್ಲ ಚುಟವಟಿಕೆಗಳ ಸೂತ್ರಧಾರನಾಗಿದ್ದನು. ಶಿವಾಜಿಯ ಮರಣದ ನಂತರ ನಿರ್ಲಜ್ಜನಾದ ಈತನು ಎಲ್ಲ ಅಧಿಕಾರವನ್ನು ತನ್ನ ಕೈಯಲ್ಲಿ ತೆಗೆದುಕೊಂಡನು. ಕೋಟೆಗಳು ಭದ್ರಗೊಳಿಸುವುದರಲ್ಲಿ, ಆಡಳಿತದಲ್ಲಿ ಮತ್ತು ರಾಜ್ಯದ ವಿದ್ಯಮಾನಗಳನ್ನು ವ್ಯವಸ್ಥೆಗೊಳಿಸುವಲ್ಲಿ ಪರಮಾಧಿಕಾರಿಯಾಗಿ ಅಧಿಕಾರದ ಪರಾಕಾಷ್ಠೆಗೇರಿದನು. ಆದ್ದರಿಂದ ಸಾಂಭಾನ ಕೆಲವು ಅಧಿಕಾರಿಗಳು ಅವನ ಏಳ್ಗೆಯನ್ನು ಸಹಿಸದಾದರು. ಅವನನ್ನು ಅಧಿಕಾರದಿಂದ ಕೆಳಗಿಳಿಸಿ ಬೇರೊಬ್ಬನನ್ನು ಸ್ಥಾಪಿಸಬೇಕೆಂದು ಬಯಸಿದರು. ಇವನನ್ನು ನಾಶಗೊಳಿಸಲು ಹಗಲು ರಾತ್ರಿ ಯತ್ನಿಸುತ್ತಿದ್ದ ಈ ಅಧಿಕಾರಿಗಳು ಆತನ ಸದ್ಗುಣಗಳನ್ನು ಮತ್ತು ಒಳ್ಳೆಯ ಕಾರ್ಯವನ್ನು ತಪ್ಪಾಗಿ ನಿವೇದಿಸುತ್ತ ದಿವಾನ ಹುದ್ದೆಯಿಂದ ಇವನನ್ನು ತೆಗೆದು ಹಾಕುವಲ್ಲಿ ಸಮರ್ಥರಾದರು. ಭಗ್ನ ಮರ್ಯಾದೆಯ ಕವಿಕಲಶನು ಖಿಲ್ನಾ ಕೋಟೆಯಲ್ಲಿ ಇರತೊಡಗಿದನು. ಆದರೆ ಮಂದದೃಷ್ಟಿಯುಳ್ಳ ಅವನ ಶತ್ರುಗಳು ಆತನು ಅಲ್ಲಿರುವುದು ಸರಿಯಲ್ಲವೆಂದು ಬಗೆದರು. ಆದ್ದರಿಂದ ಅವನ ಮೃತ್ಯುವಿಗಾಗಿ ಕಂಕಣಬದ್ಧರಾದರು. ತನ್ನ ರಕ್ಷಣೆ ಗಂಡಾಂತರದಲ್ಲಿರುವುದನ್ನು ತಿಳಿದ

ಈತನು ಸಾಂಭಾನ ಕೆಲವು ಅತೃಪ್ತ ಸೇವಕರನ್ನು ಕೂಡಿಕೊಂಡು ಮಹಾಪ್ರಭುವಿನ ಆಸ್ಥಾನಕ್ಕೆ ಬಂದನು. ಸಾಮ್ರಾಜ್ಯದ ಹೊಸ್ತಿಲನ್ನು ಚುಂಬಿಸುವ ಸೌಭಾಗ್ಯದಿಂದಾಗಿ ಉನ್ನತ ಸ್ಥಾನ ಪಡೆದನು. ಕಬಕಲಾಸ (ಕವಿಕಲಶ) ಮತ್ತು ಅವನ ಅನುಯಾಯಿಗಳಿಗೆ ಅವರವರ ಯೋಗ್ಯತೆಗೆ ಅನುಗುಣವಾಗಿ ಸಾಮ್ರಾಟನು ಮನಸಬಗಳನ್ನು ದಯಪಾಲಿಸಿದನು[೪]. ದಂಗೆಕೋರ ಸಾಂಭಾನಿಗೆ ಈ ವಿಷಯ ತಿಳಿದಾಗ ಅವರ ಸಹೋದರರನ್ನು ಮತ್ತು ಸಂಬಂಧಿಗಳನ್ನು ಹಿಂಸೆಗೀಡುಮಾಡಿದನು. ಕಬಕಲಾಸ (ಕವಿಕಲಶ) ಮತ್ತು ಅವನ ಹಿಂಬಾಲಕರ ಯಶಸ್ಸನ್ನು ಕಂಡ ಸಾಂಭಾನ ಕೆಲವು ಸೇವಕರು ತಾವೇ ಬಂದು ಸಾಮ್ರಾಜ್ಯ ಸೇನೆಯನ್ನು ಸೇರಿದ್ದರಿಂದ ಆತನ ರಾಜ್ಯದ ಆಡಳಿತ ಅಲ್ಲೋಲಕಲ್ಲೋಲವಾಯ್ತು.

ಈ ಮಧ್ಯ ಸಾಮ್ರಾಜ್ಯ ಸೇನೆ ಯಶಸ್ವಿಯಾಗಿ ಜುನ್ನೈರ ಹತ್ತಿರ ಬಂದಿತು. ಅದನ್ನು ಗೆದ್ದ ಮೇಲೆ ಅಲ್ಲಿಯ ನಿವಾಸಿಗಳ ಮೇಲೆ ಉದಾರ ಧರ್ಮಬುದ್ಧಿಯನ್ನು ತೋರಲಾಯಿತು. ಸಾಮ್ರಾಟನ ನ್ಯಾಯಯುತವಾದ ಸಮತಾಭಾವದ ಆಡಳಿತದ ತೊಟಿಲಲ್ಲಿ ಆ ಪ್ರಜೆಗಳು ಆನಂದದಿಂದ ಮತ್ತು ತೃಪ್ತಿಯಿಂದ ಇದ್ದರು[೫] ಈ ಅವಧಿಯಲ್ಲಿ ರಾಜಕುಮಾರ ಮುಹಮ್ಮದ ಅಜಂ ಶಾಹ ತನ್ನ ಅಮೀರರೊಡಗೂಡಿ ರಾಜಗಢ, ರಾಹಿರಿ ಮತ್ತು ಮಹಾವೇಲಿ ಕೋಟೆಗಳಿಗೆ ಮುತ್ತಿಗೆ ಹಾಕುವ ಕಾರ್ಯದಲ್ಲಿ ತೊಡಗಿದನು. ನೆರೆಹೊರೆಯ ಕೋಟೆಗಳಲ್ಲಿ ಜಯಶೀಲರಾಗುತ್ತಿದ್ದ ಯೋಧಪಡೆಗಳ ಯಶಸ್ಸಿನ ವಾರ್ತೆ ಅವಿಧೇಯ ದಂಗೆಕಾರರ ಕಿವಿಗೆ ತಲುಪಿತು. ಕೋಟೆ ಕೈವಶಮಾಡಿಕೊಳ್ಳುವ ಸಾಮರ್ಥ್ಯದ ಹುಯಿಲು ಸಾಂಭಾನನ್ನು ದಿಕ್ಕು ತಪ್ಪಿಸಿತು. ಅವನಿಗೆ ತನ್ನ ಯಾವ ಅಧಿಕಾರಿಗಳ ಮೇಲೂ ವಿಶ್ವಾಸ ಇಲ್ಲದ್ದರಿಂದ ಅವರು ಕಬಕಲಾಸ (ಕವಿಕಲಶ) ನನ್ನು ಮರಳಿ ಕಳಿಸಿಕೊಳ್ಳಲು ನಿರ್ಧರಿಸಿ ಪತ್ರ ಮುಖೇನ ರಾಜೆಗಾಗಿ ಸೂಚಿಸಿದನು. "ನಿನ್ನ ನನ್ನ ಮಧ್ಯ ಮನಸ್ತಾಪಕ್ಕೆ ಕಾರಣವೆಂದರೆ ನಿನ್ನನ್ನು ದ್ವೇಷಿಸುವ ಕೆಲವು ಶತ್ರುಗಳೇ. ಸತ್ಯವನ್ನು ಊಹಿಸದ ನನ್ನ ಅಸಾಮರ್ಥ್ಯಕ್ಕಾಗಿ ನಾನು ಪಶ್ಚಾತ್ತಾಪ ಪಡುತ್ತೇನೆ. ಆ ನೀಚ ಗುಂಪಿನ ಕೃತ್ಯವನ್ನು ಗಣನೆಗೆ ತೆಗೆದುಕೊಳ್ಳಬೇಡ, ಈ ಸ್ಥಿತಿಯಲ್ಲಿ ನನಗೆ ಸಹಾಯ ಮಾಡುವುದಕ್ಕಲ್ಲದೆ ಈ ದೇಶವನ್ನು ರಕ್ಷಿಸುವ ಹೊಣೆಯನ್ನು ನಿನ್ನ ಕೈಗೆ ತೆಗೆದುಕೊಂಡು ವೈರಿಯನ್ನು ಹೊಡೆದಟ್ಟಿಸುವುದಕ್ಕೆ ತ್ವರಿತವಾಗಿ ಬಂದು ಬಿಡು. ಎಷ್ಟೋ ವರ್ಷಗಳವರೆಗೆ ನೀನು ತಿಂದಿರುವ ಉಪ್ಪಿನ ಋಣವನ್ನು ತೀರಿಸಲು ನೀನು ಸಮರ್ಥನಾಗುವಿ. ನೀನು ಈ ವಿಷಯಕ್ಕೆ ಕಣ್ಣು ಮುಚ್ಚಿಕೊಂಡು ಕುಳಿತು ದೇಶ ಹಾಳಾಗಿ ಬೇರೊಬ್ಬರ ಕೈಗೆ ಬೀಳಲಿ ಎಂದು ಬಯಸಿದ್ದರೆ ಅದು ನಿನ್ನ ಇಷ್ಟ " ಸ್ವಲ್ಪದರಲ್ಲಿ ಹೇಳುವುದಾದರೆ ಶಿಕ್ಷೆ ಮತ್ತು ಹಿಂಸೆಯ ಶರಾಘಾತದಿಂದ ಸೀಳಲ್ಪಟ್ಟ ಕಬಕಲಾಸನ (ಕವಿಕಲಶ)[೬]. ಹೃದಯ ಶಮನಗೊಳ್ಳದೇ ಇದ್ದದ್ದರಿಂದ ಆತನ ಸ್ವಭಾವ ತಪ್ಪು ದಾರಿ ತುಳಿದಿತ್ತು; ವಿಪರೀತ ಕ್ಷತಿಗೊಳಗಾಗಿ ಸೀಳಲ್ಪಟ್ಟ ಸ್ವಭಾವದ, ಕೇಡಿನ ಹೃದಯದ ಈ ವ್ಯಕ್ತಿ ಸೇಡು ತೀರಿಸಿಕೊಳ್ಳಲು ಸರಿಯಾದ ವೇಳೆಯೆಂದುಕೊಂಡು ಅವನನ್ನು (ಸಾಂಭಾನನ್ನು) ಕೊಲ್ಲಲು ಅಡಗಿದ್ದು ಹೊಂಚು ಹಾಕುತ್ತ ಉತ್ತರ ಕಳಿಸಿದನು, "ಅದೇ ಸ್ವಾಮಿನಿಷ್ಠ ಸೇವಕನಾಗಿರುವ ನಾನು ತ್ಯಾಗಗೈವ ಅನುಚರನು, ನನ್ನ ಬಾಳಿನುದ್ದಕ್ಕೂ ನಿಮ್ಮಿಂದ

ರಾಜಾಶ್ರಯವನ್ನು ಪಡೆದು ಪೋಷಿಸಲ್ಪಟ್ಟಿರುವ ನಾನು ಅತ್ಯಾನಂದದ ಸಾರ್ಥಕ ಕಾಲನ್ನು ಕಳೆದಿದ್ದೇನೆ. ಕಳಕಳಿಯಿಂದ ಕೂಡಿದ ನನ್ನ ಹೃದಯವು ನಿರರ್ಥಕ ಕರ್ತವ್ಯ ಚ್ಯುತಿಯಿಂದ ಮುಸುಕಿದಂತಿದೆ. ನನಗೆ ನೀಡಿದ ಶಿಕ್ಷೆಯು ನನ್ನ ಕೇಡಿನ ದಿನಗಳಿಗೆಂದು ಬಗೆದು ನನ್ನ ಸ್ವಾಮಿಯ ಕರುಣೆ ಮತ್ತು ಔದಾರ್ಯಕ್ಕೆ ಬದ್ಧನಾಗಿದ್ದೇನೆ. ನಿಮ್ಮೆಡೆಗೆ ಬರುವುದೆಂದರೆ ನನ್ನ ಸೌಭಾಗ್ಯವೆಂದು ತಿಳಿಯುತ್ತೇನೆ. ಆದರೆ ಸ್ವಾರ್ಥಿಗಳಾದ ವೈರಿಗಳಿಗೆ ಮತ್ತು ಕ್ಷುಲ್ಲಕ ಪ್ರತಿಸ್ಪರ್ಧಿಗಳಿಗೆ ನಾನು ಅಂಜಿದ್ದೇನೆ. ಏಕೆಂದರೆ ನಾನು ಉನ್ನತಿ ಹೊಂದಿದರೆ ನನ್ನನ್ನು ಪುನಃ ಅಲ್ಲಸಲ್ಲದ ಟೀಕೆಗಳಿಂದ ನಿರ್ದಯದ ನುಡಿಗಳಿಂದ ಆಪತ್ತಿನ ತಿರುಗಣೆ ಮಡುವಿಗೆಸೆದರೆ ಅದೆಲ್ಲ ಸತ್ಯವೆಂಬಂತೆ ಕಂಡು ಆರೋಪ ಹೊರಿಸಿ ವಿಪರೀತ ರೀತಿಯಲ್ಲಿ ನನ್ನ ನಿರ್ನಾಮ ಮಾಡಬಹುದು. ಆದ್ದರಿಂದ ನನ್ನೊಡೆಯರಾದ ತಾವು ನನ್ನನ್ನು ಕರೆಸಬೇಕೆಂದಿದ್ದರೆ ತಮ್ಮ ಕೆಲವು ಸರದಾರರು ಖಿಲ್ನಾಹ ಕೋಟೆಯಲ್ಲಿದ್ದಾರೆ. ಅಲ್ಲಿ ನಾನು ಬರಲು ಸಿದ್ಧನಿದ್ದೇನೆ; ಅಲ್ಲಿ ನಿಮ್ಮ ಸೇವೆಯಲ್ಲಿ ತೊಡಗುವೆ. ನೀವು ನೀಡುವ ಭರವಸೆಗಳಿಂದ ನನ್ನ ಮನಸ್ಸು ಸಮಾಧಾನಗೊಂಡು ನೀವು ನನಗೊಪ್ಪಿಸಿದ ಕರ್ತವ್ಯಗಳನ್ನು ನಿರ್ವಹಿಸುವೆ." ಸಾಂಭಾನು ಕೆಟ್ಟ ದಿನಗಳನ್ನು ಕಾಣುವುದಿತ್ತು. ಆದ್ದರಿಂದಲೇ ಕಬಕಲಾಸನ ಮೋಸಕ್ಕೆ ಬಲಿಯಾದನು. ತನ್ನ ಕೆಲ ಜನರೊಂದಿಗೆ ಅಲ್ಲಿಗೆ ತಲುಪಿದನು. ಅಲ್ಲಿಗೆ ಹೋದ ಬಳಿಕ ಕಬಕಲಾಸನಿಗೆ ಕರೆ ಕಳಿಸಿದನು. ಸಾಂಭಾನ ಬರುವು ತಿಳಿದೊಡನೆ ಪರ್ನಾಲಾ ಕೋಟೆಯ ಮುತ್ತಿಗೆಯಲ್ಲಿ ತೊಡಗಿದ್ದ ಇಖ್ಲಾಸ ಖಾನ ಮತ್ತು ಬಹಾದೂರ ಖಾನ ಇವರಿಗೆ ಕೆಳಗಿನಂತೆ ಸಂದೇಶ ಕಳಿಸಿದನು: "ಎಷ್ಟೋ ವರ್ಷಗಳವರೆಗೆ ಎಷ್ಟು ಪ್ರಯತ್ನಿಸಿದರೂ ಸ್ವೇಚ್ಛೆಯಿಂದ ಕೈಗೆ ಸಿಗದೆ ಓಡಾಡುತ್ತಿದ್ದ ಮೃಗ ಈಗ ಬಲಿ ಬಿದ್ದಿದೆ. ಅದು ನಿಮ್ಮ ಕೈಯಲ್ಲಿ ಬೀಳುವಂತೆ ನೀವು ಧಾವಿಸಿ ಬೇಗಲೇ ಖಿಲ್ನಾಹ ಕೋಟೆಗೆ ಬನ್ನಿರಿ. ನೀವು ಬರುವವರೆಗೆ ಅವನನ್ನು ಶಾಂತವಾಗಿ ಸಮಾಧಾನದಿಂದ ಇಡಲು ನನ್ನೆಲ್ಲ ಪ್ರಯತ್ನ ಮಾಡುವೆ." ಆ ಬಳಿಕ ತ್ವರಿತವಾಗಿ ಕಬಕಲಾಸನು ಕೋಟೆಯ ಒಳಗೆ ಹೋಗಿ, ನತದೃಷ್ಟ ಸಾಂಭಾನ ಎದುರು ಹಾಜರಾಗಿ, ತನ್ನ ಕಳಕಳಿ ಮತ್ತು ಸ್ವಾಮಿ ನಿಷ್ಠೆಯನ್ನು ಎಲ್ಲ ರೀತಿಯಿಂದ ಪ್ರಕಟಗೊಳಿಸುತ್ತ ಅವನನ್ನು ಸಾಂತ್ವನಗೊಳಿಸಲು ಪ್ರಯತ್ನಿಸಿದನು.

ಮೇಲೆ ಹೇಳಿದ ಖಾನರು ಪರ್ನಾಲಾ ಕೋಟೆಯ ಮೇಲಿನ ಮುತ್ತಿಗೆಯನ್ನು ಹಿಂತೆಗೆದು, ಈ ಕೆಲಸವು ಅದಕ್ಕಿಂತ ಮಹತ್ವದ್ದೆಂದು ತಿಳಿದು ಇದನ್ನು ಸಾಧ್ಯವಾದಷ್ಟು ಬೇಗನೇ ಸಾಧಿಸಬೇಕೆಂದು ಹೊರಟರು[೭]. ಆರು ಪಹರೆಗಳಲ್ಲಿ ನಲವತ್ತು ಕರೋಹ ಅಂತರ ಕ್ರಮಿಸಿ ಖಿಲ್ನಾಹ ಕೋಟೆಗೆ ತಲುಪಿ ಅದರ ಮೇಲೆ ಮುತ್ತಿಗೆ ಹಾಕಿದರು. ಕೊನೆಗೆ ಆ ದುರ್ದೈವಿ ಸಾಂಭಾ ತನ್ನ ಗಾಢ ನಿದ್ರೆಯಿಂದ ಎಚ್ಚೆತ್ತನು[೮]. ಕೋಟೆಯನ್ನು ಬಲಿಷ್ಠವಾಗಿಡುವಷ್ಟು ಸಾಕಷ್ಟು ಸಾಮಗ್ರಿಗಳು ಮತ್ತು ಆಹಾರ ಇರಲಿಲ್ಲ. ಅವನಲ್ಲಿ ದೊಡ್ಡ ಸೈನ್ಯವಿತ್ತು. ಆದರೆ ಧೈರ್ಯಗುಂದಿದನು. ಅವನು ಮರಣಕ್ಕೆ ಶರಣಾದನು. ತನ್ನ ಪ್ರಾಣವನ್ನು ತನ್ನ ಅಂಗೈಯಲ್ಲಿರಿಸಿ, ಕೆಲವೇ ಜನರೊಂದಿಗೆ ಕೋಟೆಯ ಹೊರಬಂದು ಅಲ್ಲಿಂದ ಪಾರಾಗಲು ಅವಕಾಶ ಸಿಗಬಹುದೆಂದು ಬಗೆದು ಸಾಮ್ರಾಜ್ಯ ಸೈನ್ಯದ ಮೇಲೆರಗಿದನು. ಆದರೆ ತಮ್ಮ

ಸೈನ್ಯ ದಳಗಳನ್ನು ಹೋರಾಟಕ್ಕೆ ಸಂಪೂರ್ಣ ಸಿದ್ದಬಿಟ್ಟಿದ್ದ ಖಾನರಿಬ್ಬರೂ ಎಲ್ಲ ಕಡೆಗಳಿಂದಲೂ ನುಗ್ಗಿ ಬಂದು ಅವನನ್ನು ಸುತ್ತುವರೆದರು. ತತ್ಪರಿಣಾಮವಾಗಿ ಕಾಳಗ ಘಟಿಸಿ ಮೇಲಗೈ ಸಾಧಿಸಲು ಹೆಣಗಾಡುವ ಸಾಮ್ರಾಜ್ಯ ಸೈನಿಕರು ಸಾಂಭಾನ ನಾಲ್ಕು ನೂರು ಜನರನ್ನು ಹಾಗೆಯೇ ವೈರಿ ಸೈನಿಕರು ಸಾಮ್ರಾಜ್ಯ ಸೇನೆಯ ಎರಡು ನೂರ ಐವತ್ತು ಸೈನಿಕರನ್ನು ಕೊಂದರು. ಕಿಡಿಗೇಡಿ ಸಾಂಭಾನು ಓಡಿ ಹೋಗಲು ಏನು ಪ್ರಯತ್ನ ಪಟ್ಟರೂ ಸಾಧ್ಯವಾಗಲಿಲ್ಲ. ಕೊನೆಗೆ ಸಾಮ್ರಾಜ್ಯದ ಶೂರ ಸೈನಿಕರು ಅವನನ್ನು ಯುದ್ಧ ಕೈದಿಯಾಗಿ ಬಂಧಿಸಿದರು. ತನ್ನ ಸುರಕ್ಷತೆಯ ವಿಧಾನವಾಗಿ ಸಾಂಭಾನೊಡನೆ ಕಬಕಲಾಸನು (ಕವಿ ಕುಲಶ) ತಾನೇ ಬಂಧನಕ್ಕೊಳಗಾದನು.[೧೦]

ರಾಜಕುಮಾರ ವಾಲಾ ಜಾಹ ಮುಹಮ್ಮದ ಅಜಂಶಾಹನ ಓಲೆಯಿಂದ ನೀಚ ಸಾಂಭಾನ ಬಂಧನದ ವಿಷಯ ಸಾಮ್ರಾಟನಿಗೆ ತಿಳಿಯಿತು. ಮರುದಿನ ಇಖಲಾಸಖಾನನ ವರದಿಗಾರ ಖಾಂಡೋಜಿ ಸಾಮ್ರಾಟನೆದುರಿಗೆ ಹಾಜರಾಗಿ ಘಟನೆಯ ಸವಿಸ್ತಾರ ವಿವರವನ್ನು ಒಪ್ಪಿಸಿದನು. ಉಳಿದ ಸುದ್ದಿಯನ್ನು ಪುನಃ ಪುನಃ ಎಲ್ಲರಿಗೂ ತಿಳಿಸಿದರು. ಆದ್ದರಿಂದ ವಿಜಯ ನಗಾರಿಯನ್ನು ಬಾರಿಸಲು ಸಾಮ್ರಾಟನ ಆಜ್ಞೆಯಾಯಿತು. ಅಲ್ಲಿದ್ದ ಅಮೀರರು ಸಾಮ್ರಾಟನನ್ನು ಅಭಿನಂದಿಸಿ ತಮ್ಮ ಅಂತಸ್ತು ಮತ್ತು ಸ್ಥಾನಕ್ಕನುಗುಣವಾಗಿ 'ನಜರ' ಮತ್ತು 'ನಿಸಾರ' ಅರ್ಪಿಸಿದರು.[೧೧] ರಾಜಕುಮಾರ ಅಜಂನ ಓಲೆ ತಂದವನಿಗೆ ಮತ್ತು ಇಖಲಾಸಖಾನನ ಹರಕಾರಾ ಖಾಂಡೋಜಿಗೆ ನಿರೀಕ್ಷೆ ಮಿರಿ ಬಹುಮಾನಗಳನ್ನು ನೀಡಲಾಯಿತು. ಇಖಲಾಸಖಾನ ಮತ್ತು ಬಹಾದೂರಖಾನರ ಮನಸಬವನ್ನು ಹೆಚ್ಚಿಸಲಾಯಿತು. ಅದಲ್ಲದೆ ಅವರಿಗೆ ನಿಲುವಂಗಿಗಳನ್ನು, ಲೋಹಖಚಿತ ಹಿಡಿಕೆಯ ಖಡ್ಗಗಳನ್ನು, ಆನೆಗಳನ್ನು ಮತ್ತು ಕುದುರೆಗಳನ್ನು ನೀಡಲಾಯಿತು. ಮೇಲೆ ಹೇಳಿದ ಖಾನರಿಗೆಲ್ಲ ಆಜ್ಞೆಯನ್ನು ಕಳಿಸಲಾಯಿತು. "ದುರ್ದೈವಿ ಸಾಂಭಾನನ್ನು ಬಹಳ ಕಾಳಜಿಯಿಂದ ಸಾಮ್ರಾಜ್ಯದ ಹೊಸ್ತಿಲಕ್ಕೆ (ಸೀಮೆಗೆ) ಕರೆದುಕೊಂಡು ಹೋಗಬೇಕು."[೧೨]

ರಾಹಿರಿ ಕೋಟೆಯನ್ನು ಗೆದ್ದದ್ದು:

ಸಾಂಭಾನ ಪ್ರಮುಖ ಅಯೋಗ್ಯ (na-sardars) ಸರದಾರರಾದ ಜಾನೋಜಿ, ಕೇಶೋಜಿ ಮತ್ತು ಇತರರು ಅವನ ಕುಟುಂಬವನ್ನು ರಾಹಿರಿ ಕೋಟೆಗೆ ಕರೆದೊಯ್ದಿದ್ದಾರೆಂದು ಆ ಕೋಟೆಯನ್ನು ಸಾಕಷ್ಟು ಫಿರಂಗಿ ದಳದಿಂದ ಸುಭದ್ರಗೊಳಿಸಲಾಗಿದೆಯೆಂದು ಹರಕಾರದಿಂದ ಸಾಮ್ರಾಟನಿಗೆ ಗೊತ್ತಾಯಿತು. ದೊಡ್ಡ ಸೈನ್ಯವನ್ನು ಕಲೆಹಾಕಿ ಅಲ್ಲಿದ್ದ ರಾಜಕುಮಾರ ಮುಹಮ್ಮದ ಅಜಂಶಾಹನೊಡನೆ ಕಾಳಗ ಮಾಡಲು ನಿರ್ಧರಿಸಿದ್ದರು. ಆಗ ಸಾಮ್ರಾಟನು ರಾಜಕುಮಾರನ ಸಹಾಯಕ್ಕೆ ಹೋಗಲು ಕೆಲವು ಮನಸಬದಾರರೊಡನೆ ಬಹ್ರಾಮಂದಖಾನನನ್ನು ಅಲ್ಲಿಗೆ ಕಳುಹಿಸಿದನು. ಸಾಮ್ರಾಟನು ಖಾನನಿಗೆ ಬಿಲ್ಲು ಬಾಣಗಳನ್ನಿಟ್ಟು ಕಳುಹಿಸಿದನು. ಸಾಮ್ರಾಟನ ಆಜ್ಞೆಯ ಮೇರೆಗೆ ರಾಜಕುಮಾರನಿಂದ ಬೇರ್ಪಟ್ಟು ಸಾಂಭಾನ ರಾಜ್ಯವನ್ನು ಗೆಲ್ಲಲು ಹೋಗಿದ್ದನು. ಅವನು ಅಲ್ಲಿಂದ ಸಾಮ್ರಾಟನಿಗೆ

ಕೋಟೆಯನ್ನು ಗೆದ್ದ ಸುದ್ದಿಯನ್ನು ತಿಳಿಸುವ ಪತ್ರವನ್ನು ಮತ್ತು ಅದರ (ಕೋಟೆಯ) ಬಂಗಾರದ ಕೀಲಿ ಕೈಯನ್ನು ಕಳುಹಿಸಿದನು. ಸಾಮ್ರಾಟನು ಖಾನನಿಗೆ ಬಹುಮಾನಗಳನ್ನು ನೀಡಿದ್ದಲ್ಲದೇ ಆಸ್ಥಾನಕ್ಕೆ ಬರಹೇಳಿದನು. ಝುಲಿಫಿಕರಖಾನ ಬಹಾದೂರ ಸೈನ್ಯಕ್ಕೆ ಜೋಡಿಸಲ್ಪಟ್ಟಿದ್ದ ದಿಲೀರಖಾನ, ರುಸ್ತುಂಖಾನ ಮತ್ತು ರಾಜಾ ಅನುಪಮ ಸಿಂಘ ಇವರು ರಾಜಕುಮಾರ ಅಜಂನನ್ನು ಕೂಡಿಕೊಳ್ಳಬೇಕೆಂದು ತಿಳಿಸಲಾಯಿತು. ಸಿದ್ದಿ ಮಿಪ್ತಾಹಖಾನ ಮಾನಸಿಂಘ, ಹಾಜಿ ಅಫಜಲ ಮತ್ತು ಉಳಿದ ಅಮೀರರು ತಮ್ಮ ಮನಸಬಗಳ ಹೆಚ್ಚಳದೊಂದಿಗೆ ನಿಲುವಂಗಿಗಳನ್ನು, ಖಡ್ಗ ಮತ್ತು ಕಿರುಗತ್ತಿಗಳನ್ನು ಸ್ವೀಕರಿಸಿದ ಬಳಿಕ ಹೋಗಲು ಅಪ್ಪಣೆ ಪಡೆದರು. ಕೆಲವು ದಿನಗಳು ಕಳೆದ ಬಳಿಕ ಝುಲ್ಫಿಕರಖಾನ ಬಹಾದೂರನನ್ನು ಬಾದಶಾಹಾ ಸನ್ನಧಿಗೆ ಬರಮಾಡಿಕೊಳ್ಳಲಾಯಿತು. ಮತ್ತು ಆತನು ಸಾಮ್ರಾಟನಿಗೆ ವಂದನೆ ಸಲ್ಲಿಸಿದ ಮತ್ತು ಬಹು ಕಾಣಿಕೆಗಳನ್ನು ಪಡೆದವನಾದನು.

ರಾಹಿರಿ ಕೋಟೆಯನ್ನು ಗೆಲ್ಲುವುದು ಸಾಮ್ರಾಟನ ಉನ್ನತ ಬಯಕೆಯಾಗಿತ್ತು. ಆ ಕೆಲಸವನ್ನು ರಾಜಕುಮಾರ ಮುಹಮ್ಮದ ಆಜಂಶಾಹ ಮತ್ತು ಪ್ರಾಜಿ–ಉದ್–ದಿನ್ ಖಾನ ಇವರಿಗೆ ಒಪ್ಪಿಸಲಾಯಿತು. ವೈರಿಯೊಡನೆ ಕೆಲವು ಬಾರಿ ಹೋರಾಡಿದರೆ ಹೊರತು ಬೇರೇನನ್ನು ಅವರಿಗೆ ಸಾಧಿಸಲಾಗಲಿಲ್ಲ. ಆದುದ್ದರಿಂದ ಝುಲ್ಫಿಕರಖಾನ ಬಹಾದೂರನಿಗೆ ವಿಶೇಷ ನಿಲುವಂಗಿ, ಸುವರ್ಣಾಲಂಕೃತ ಹಿಡಿಕೆಯುಳ್ಳ ಖಡ್ಗವನ್ನು ನೀಡಿ ಸಾಮ್ರಾಟನು ಅವನನ್ನು ಈ ಕೋಟೆಯನ್ನು ಗೆಲ್ಲಲು ನೇಮಿಸಿದನು. ಅದಲ್ಲದೆ ಸಾಮ್ರಾಟನು ಖಾನನಿಗೆ ಆದೇಶಿಸಿದ್ದೇನೆಂದರೆ ಅವನು ರಾಜಕುಮಾರನನ್ನು ಭೇಟಿಯ ಬಳಿಕ ಕೋಟೆಯನ್ನು ಗೆಲ್ಲುವುದಕ್ಕೆ ಬೇಕಾಗುವ ಎಲ್ಲವನ್ನು ಪೂರೈಸಲು ರಾಜಕುಮಾರನಿಗೆ ವಿನಂತಿಸಿಕೊಂಡನು. ಅವನ ಜನರಲ್ಲಿ ಯಾರು ಬೇಕೊ ಅವರನ್ನು ತೆಗೆದುಕೊಳ್ಳಬೇಕು ಮತ್ತು ಕೋಟೆಯ ಹತ್ತಿರ ಬಂದಾಗ ಅದು ಸಾಮ್ರಾಜ್ಯದ ಅಧಿಕಾರಿಗಳ ಅಧೀನಕ್ಕೆ ಬರುವಂತೆ ಮತ್ತು ಆ ಜಿಲ್ಲೆಯ ದಂಗೆಕಾರರನ್ನು ಶಿಕ್ಷಿಸಲು ಅವರ ವಿಧಾನಗಳನ್ನು ಅಳವಡಿಸಿಕೊಳ್ಳಬೇಕು. ಖಾನನು ಸಾಮ್ರಾಟನಿಂದ ಅನುಮತಿ ಪಡೆದು ಹೊರಟು ಪ್ರಯಾಣದ ಅನೇಕ ಘಟ್ಟಗಳನ್ನು ಕ್ರಮಿಸಿ ಬಂದು ರಾಜಕುಮಾರನಿಗೆ ಭೇಟಿಯಾಗಿ ವಂದನೆ ಸಲ್ಲಿಸಿದನು. ಅಲ್ಲಿ ಅವನು ಮೂರು ದಿನಗಳವರೆಗೆ ತಂಗಿದ್ದನು. ರಾಜಕುಮಾರನ ಅನುಯಾಯಿಗಳಲ್ಲಿ ಕೆಲವು ನುರಿತವರನ್ನು ಆಯ್ಕೆ ಮಾಡಿಕೊಂಡು ಅವನು ಬಹು ತುರ್ತಾಗಿ ರಾಹಿರಿ ಕೋಟೆಯೆಡೆಗೆ ದಂಡುಗೈದನು. ಅಲ್ಲಿಂದ ಎರಡು ಕರೋಹ ಅಂತರದಲ್ಲಿ ಆತನು ಬೀಡು ಬಿಟ್ಟನು. ಭವ್ಯತೆಯಲ್ಲಿ ಈ ಕೋಟೆಗೆ ಸರಿಸಮಾನವಾದದ್ದು ಬೇರೊಂದಿಲ್ಲ. ತಾಳಕೋಕನದ ಬಹುಭದ್ರವಾದ ಕೋಟೆಗಳಲ್ಲಿ ಅದೊಂದಾಗಿತ್ತು. ಒಂದೇ ಒಂದು ದಾರಿಯನ್ನು ಹೊರತುಪಡಿಸಿ ಬೇರೊಂದು ಮಾರ್ಗದಿಂದ ಅಲ್ಲಿಗೆ ಹೋಗಲು ಸಾಧ್ಯವಿರಲಿಲ್ಲ. ಗುಡ್ಡ ಬೆಟ್ಟಗಳಿಂದ ರಕ್ಷಿಸಲ್ಪಟ್ಟ ಈ ಕೋಟೆಗೆ ಸುರಂಗ ಮಾರ್ಗ ಕೊರೆಯುವುದು ಮತ್ತು ಕುಣಿಕೆ ಹಗ್ಗ ಮೇಲೇರಿಸುವುದು ಸಾಧ್ಯವಿರಲಿಲ್ಲ. ಕೋಟೆಯ ಅಡಿಯಲ್ಲಿ ಠಾಣೆ ಹೂಡಿದ್ದ ನೀಚ ದಂಗೆಕೋರರರು ಇದ್ದಲ್ಲಿಗೆ ಆಗಾ ಅಲಿಖಾನ ಮತ್ತು ಸೈನ್ಯದ ಪಡೆಯೊಡನೆ

ನಾಗಾಲೋಟದಿಂದ ಕುದುರೆಗಳನ್ನು ಓಡಿಸುತ್ತ ಖಾನನು ಬಂದನು. ಕೋಟೆಯ ಮೇಲಿಂದ ಕಾವಲು ದಂಡು ಗುಂಡು ಹಾರಿಸಲು ಅನುಯಾಯಿಗಳು ಮಡಿದರು. ಹೀಗಾಗಲು ಅವರ ಠಾಣೆಗೆ ಬೆಂಕಿ ಇಟ್ಟ ಖಾನನು ಅಲ್ಲಿಂದ ತಿರುಗಿದನು. ಖಾನನು ಇನ್ನೂ ಬೆಟ್ಟದಿಂದ ಇಳಿಯುವಷ್ಟರಲ್ಲಿಯೇ ನೀಚ ದಂಗೆಕೋರ ಹಮೀರನು ಸಾತಾರಾ ಕೋಟೆಯ ಕಡೆಯಿಂದ ದೊಡ್ಡ ಸೈನ್ಯದೊಂದಿಗೆ ಬಂದು ಸಾಮ್ರಾಜ್ಯ ಸೇನೆಗೆ ಆಹಾರ ಧಾನ್ಯ ಪೂರೈಕೆಯನ್ನು ಬಂದ ಮಾಡಲು ಸೈನಿಕರ ಪಡೆಯನ್ನು ನಿಲ್ಲಿಸಿದನು. ತನ್ನ ಸಂಖ್ಯೆ ಜನಜಂಗುಳಿಯೊಂದಿಗೆ ಹಮೀರನು ಸಾಮ್ರಾಜ್ಯ ಸೈನ್ಯದ ಠಾಣೆದಾರರು ಬಂದು ಹೋರಾಡಲು ಆರಂಭಿಸಿದನು. ತನ್ನ ಬಲಿಷ್ಠ ಸೇನೆಯೊಂದಿಗೆ ದಂಗೆಕೋರರೊಡನೆ ಹೋರಾಟಕ್ಕಿಳಿದನು. ಫಿರಂಗಿ ಗುಂಡುಮಳೆಯ ವಿನಿಮಯ ಎರಡೂ ಕಡೆಗಳಲ್ಲಿ ನಡೆದು ದೊಡ್ಡ ಪ್ರಮಾಣದಲ್ಲಿ ಮನುಷ್ಯರು ಸತ್ತರು ಹಾಗೆಯೇ ಕುದುರೆಗಳು ಹತವಾದವು. ಅಷ್ಟರಲ್ಲಿ ಸಾಮ್ರಾಜ್ಯ ಸೇನೆಯ ತುಕುಡಿಯೊಂದು ಎರಡು ಹೆಜ್ಜೆ ಮುಂದೆ ಹೋಗಿ ಶತ್ರುವನ್ನು ಕೆಣಕಲು ಬೀಕರ ಹೋರಾಟ ಶುರುವಾಯಿತು. ದಂಗೆಕೋರರ ಕಡೆಗೆ ಒಂದು ಸಾವಿರದ ಐದು ನೂರು ಜನರು ಸತ್ತರೆ ಸಾಮ್ರಾಜ್ಯ ಸೇನೆಯಲ್ಲಿ ಒಂಬತ್ತು ನೂರು ಸೈನಿಕರು ನಾಶವಾದರು. ಈ ಸ್ಥಿತಿಯಲ್ಲಿ ನಿರ್ಭಾಗ್ಯ ಶತ್ರುಗಳು ಎದುರಿಸಲಾಗದೆ ಯುದ್ಧಭೂಮಿಯಿಂದ ಓಡಿದರು. ಸಂಪರ್ಕ ಸಾಧನೆಗಳಿಗೆ ತಡೆಯೊಡ್ಡುವುದಕ್ಕಾಗಿ ಹೊರವಲಯದಲ್ಲಿ ನಿಲ್ಲಿಸಲಾಗಿದ್ದ ನತದೃಷ್ಟ ವೈರಿದಳವೂ ಕಾಲಿಗೆ ಬುದ್ದಿ ಹೇಳಿತು. ಸಾಮ್ರಾಜ್ಯ ಸೇನಾಠಾಣೆಯ ಸಂಪರ್ಕವನ್ನು ದುರಸ್ತಿಗೊಳಿಸಲಾಯಿತು. ಖಾನನು ಕೋಟೆಯನ್ನು ಎಲ್ಲ ಕಡೆಯಿಂದಲೂ ಸುತ್ತುವರಿದು ದೊಡ್ಡ ತೋಪುಗಳನ್ನಿಡಲು ಸ್ಥಾವರಗಳನ್ನು ನಿರ್ಮಿಸಲು ಆರಂಭಿಸಿದನು. ಆ ಸ್ಥಾವರಗಳ ತುದಿಯಲ್ಲಿ ಖಾನನು ಫಿರಂಗಿಗಳನ್ನಿರಿಸಿ, ಗುಂಡಿನ ಮಳೆಗರೆಯಲು ಆರಂಭಿಸಲಾಗಿ ಕಾವಲು ಪಡೆಯವರಿಗೆ ವಿಪರೀತ ಶಾಖ ಸಹಿಸದ ಸ್ಥಿತಿಯೊದಗಿತ್ತು. ಕೋಟೆಯ ರಕ್ಷಕರಿಗೊದಗಿದ ತಾಪವೆಷ್ಟಿತ್ತೆಂದರೆ ಅವರು ಬಸವಳಿದು ಕೋಟೆಯ ಕೀಲಿಕೈಯನ್ನು ಒಪ್ಪಿಸುವುದೊಂದೇ ಪಾರಾಗುವ ದಾರಿಯೆಂದು ಕಂಡುಕೊಂಡರು. ಅವರು ಕೀಲಿಕೈಗಳನ್ನು ಒಪ್ಪಿಸುವ ಭರವಸೆ ನೀಡುವ ಶಾಂತಿ ಸಂದೇಶವನ್ನು ಖಾನನಿಗೆ ಕಳಿಸಿದರು. ತಮ್ಮ ತಪ್ಪುಗಳನ್ನು ಕ್ಷಮಿಸಲು ಖಾನನಿಗೆ ಪ್ರಾರ್ಥಿಸುತ್ತ ಸಾಮ್ರಾಟನ ಭರವಸೆಯನ್ನು ಯಾಚಿಸಿದರು. ದುರ್ದೈವಿ ಸಾಂಭಾನ ಕುಟುಂಬದೊಂದಿಗೆ ಕೋಟೆಯ ಹೊರಗೆ ಬಂದು ಆ ದಂಗೆಕೋರರು ಸಾಮ್ರಾಜ್ಯ ಸೈನ್ಯವನ್ನು ಸೇರಿದರು. ಝುಲ್ಫಿಕಾರ ಖಾನ ಬಹಾದೂರ ಅವರನ್ನು ಅವರವರ ಅಂತಸ್ತಿಗೆ ಅನುಗುಣವಾಗಿ ನಡೆಸಿಕೊಳ್ಳುತ್ತ ಸಮಾಧಾನಗೊಳಿಸಿ ಸಂತೋಷಪಡಿಸಿದನು. ಆ ಬಳಿಕ ಖಾನನು ಕೋಟೆಯ ವಿಜಯವನ್ನು ಅಲ್ಲದೆ ಅದರ ಬಂಗಾರದ ಕೀಲಿಕೈಗಳನ್ನು ಪಡೆದದ್ದನ್ನು ತಿಳಿಸುವ ಪತ್ರವೊಂದನ್ನು ರಾಜಸ್ಥಾನಕ್ಕೆ ಕಳಿಸಿದ್ದಲ್ಲದೆ ಆ ಕೋಟೆಯ ರಕ್ಷಣೆಗಾಗಿ ಸಾಮ್ರಾಜ್ಯದ ಸೈನಿಕರನ್ನು ಅಲ್ಲಿಗೆ ಕಳಿಸಿದನು.[೧೨] ಆನಂತರ ತನ್ನೊಡನೆ ನಿಯಮಿಸಲ್ಪಟ್ಟಿದ್ದ ಮನಸಬದಾರರೊಡಗೂಡಿ ಖಾನನು ಪ್ರತಾಪಗಡಕ್ಕೆ ಹೋಗಿ ಅದರ ಮೇಲೆ ಮುತ್ತಿಗೆ

ಹಾಕಿದನು. ಕಾಲ ಬಡಿದಾಡಿದ ಮೇಲೆ ಆ ಕೋಟೆ ಕೈವಶವಾಗಿ ಅದನ್ನು ಸಾಮ್ರಾಜ್ಯ ಸೇನೆಯ ಅಧೀನಕ್ಕೊಳಪಡಿಸಿದನು. ಖಾನನು ಸಾಮ್ರಾಟನಿಗೆ ಪ್ರತಾಪಗಡ ಕೋಟೆಯನ್ನು ಗೆದಿದ್ದನ್ನು ತಿಳಿಸುವ ಓಲೆಯೊಂದಿಗೆ ಅದರ ಬಂಗಾರದ ಕೀಲಿಕೈಗಳನ್ನು, ಒಂದು ಮಾಣಿಕ್ಯವನ್ನು ಮತ್ತು ಬೆಲೆಯುಳ್ಳ ಮುತ್ತುಗಳನ್ನು ಕಳಿಸಿದನು. ಆ ಓಲೆಯನ್ನು ಮತ್ತು ಕಾಣಿಕೆಗಳನ್ನು ಅರ್ಪಿಸಲು ಸಂತೋಷಗೊಂಡ ಸಾಮ್ರಾಟನು ವಿಜಯದ ನಗಾರಿಯನ್ನು ಬಾರಿಸಲು ಆಜ್ಞಾಪಿಸಿದನು. ರಾಹಿರಿ ಕೋಟೆಯನ್ನು ಉತ್ತಮ ಗಡ ಎಂದು ಹೆಸರಿಸಲಾಯಿತು."

ಜುಮದತ-ಉಲ್-ಮುಲ್ಕ ಮಾದರುಲ್ ಮಹಮ್ ಎರಡು ನೂರು ಸುವರ್ಣ ನಾಣ್ಯಗಳನ್ನು ನಜರ ಎಂದು ಮತ್ತು ರೂ. ಒಂದು ಸಾವಿರವನ್ನು ನಿಸಾರ ಎಂದು ಕೊಡುವುದಲ್ಲದೆ ಶೆರಟೊನ (Sheraton)ರತ್ನಖಚಿತ ಚೌಕ್ರ (Chaukra)ವನ್ನು ಮತ್ತು ಒಂದು ಸಾವಿರ ಮುತ್ತುಗಳುಳ್ಳ ಕಂಠಹಾರವನ್ನು ಕಾಣಿಕೆಯಾಗಿ ಕೊಟ್ಟನು. ರುಹುಲ್ಲಾಹಖಾನನು ಐದು ನೂರು ಸುವರ್ಣ ನಾಣ್ಯಗಳನ್ನು ಮತ್ತು ಉಳಿದ ಅಮೀರರು ಕೂಡ ನಜರ ಮತ್ತು ನಿಸಾರವನ್ನು ತಮ್ಮ ಅಂತಸ್ತಿಗೆ ತಕ್ಕಂತೆ ಕೊಟ್ಟರು. ಜುಮದಲ್-ಉಲ್-ಮುಲ್ಕನ ನಜರ ಮತ್ತು ನಿಸಾರಗಳನ್ನು ಹೊರತುಪಡಿಸಿ ಮದುರುಲ್ ಮಹಮ ಮತ್ತು ರುಹುಲ್ಲಾಹ ಖಾನ ಮತ್ತು ಉಳಿದವರ ಕೊಡುಗೆಗಳನ್ನು ಸಾಮ್ರಾಟನು ತಿರುಗಿಟ್ಟನು. ಆ ಬಳಿಕ ಸಾಮ್ರಾಟನು ವಿಶೇಷ ನಿಲುವಂಗಿ ಮತ್ತು ರತ್ನ ಖಚಿತ ಹಿಡಿಕೆಯ ಖಡ್ಗವನ್ನು ಜುಮದತ್-ಉಲ್-ಮುಲ್ಕನಿಗೆ ಗೌರವದ ನಿಲುವಂಗಿ ಮತ್ತು ವಜ್ರದ ಹಿಡಿಕೆಯ ಕಿರುಗತ್ತಿಯನ್ನು ರುಹುಲ್ಲಾಹ ಖಾನನಿಗೂ ಹಾಗೆಯೆ ಉಳಿದವರಿಗೆ ಅವರವರ ಅಂತಸ್ತಿಗನುಗುಣವಾಗಿ ಕಾಣಿಕೆಗಳನ್ನು ನೀಡಿದನು. ಮುತ್ತುಗಳ ಪಂಕ್ತಿಗಳಿಂದ ಕೂಡಿದ ಒಂದು ಲಕ್ಷ ನಾಲ್ಕು ಸಾವಿರ ಬೆಲೆಯುಳ್ಳ ನದ್ರಿ (Nadri) ಪೋಷಾಕನ್ನು ರತ್ನ ಖಚಿತ ಸರಪೇಚ (Sarpech) ರಾಜಕುಮಾರನಿಗೆ ಕೊಡಲಾಯಿತು. ಇದೆಲ್ಲವನ್ನು ಸಾದಾತ್‌ಖಾನನ ಮೂಲಕ ರಾಜಕುಮಾರನಿಗೆ ಕಳಿಸಲಾಯಿತು. ನತದೃಷ್ಟ ಸಾಂಭಾನು ಪುತ್ರರು ಹಾಗೂ ಕುಟುಂಬದೊಡನೆ ಆಸ್ಥಾನಕ್ಕೆ ಬರಬೇಕೆಂದು ಸಾಮ್ರಾಟನು ರುಜುಹಾಕಿ ಝುಲ್ಫಿಕರಖಾನ ಬಹಾದೂರ ಮತ್ತು ಬಹಾದೂರ ಖಾನರಿಗೆ ಫರ್ಮಾನ್ ಕಳಿಸಿದನು. ಆ ಪ್ರಕಾರ ಝುಲ್ಫಿಕಾರಖಾನ ಬಹಾದೂರನು ಶಿವಾಜಿ, ಮಾನಸಿಂಘ, ಮದನ ಸಿಂಘ ಬಂಡುಕೋರ ಸಾಂಭಾನ ಪುತ್ರರು, ಅವನ ತಾಯಿ, ಪತ್ನಿ ಮತ್ತು ಉಳಿದವರೊಂದಿಗೆ ಸಾಮ್ರಾಟನ ಸನ್ನಿಧಿಗೆ ತಲುಪಿದನು. ೨೦೦ ಸುವರ್ಣ ನಾಣ್ಯಗಳನ್ನು ನಜರ ಎಂದು ಮತ್ತು ೨೦೦ ಸುವರ್ಣ ಮೊಹರಗಳನ್ನು ನಿಸಾರ ಎಂದು ಸಾಂಭಾನ ಆಭರಣಗಳುಳ್ಳ ಸಂಪತ್ತಿನಿಂದ ತುಂಬಿದ ಎರಡು ಪೆಟ್ಟಿಗೆಗಳನ್ನು ನೀಡಲಾಯಿತು. ಅದೆಲ್ಲವನ್ನು ಫಜಿಲ್‌ಖಾನನಿಗೆ ಒಪ್ಪಿಸಲಾಯಿತು. ಸರಫರಾಜಖಾನ, ಸಯೀದ ಯಾದಗಾರ, ಹುಸೇನ ಖಾನ, ಸಯೀದ ಅಜಮುಲ್ಲಾಖಾನ, ಮುಜಾಫರ ಖಾನ, ದ್ವಾರಕದಾಸ ಮತ್ತು ಝುಲ್ಫಿಕಾರ ಬಹಾದೂರನ ಜೊತೆ ಇದ್ದವರು ತಮ್ಮ ನಜರ ಮತ್ತು ನಿಸಾರವನ್ನು ಸಲ್ಲಿಸಿದರು. ಆದರೆ ಅವನ್ನೆಲ್ಲ ಸಾಮ್ರಾಟನು ಅವರಿಗೆ ತಿರುಗಿ ಕೊಟ್ಟನು. ಝುಲ್ಫಿಕರ ಖಾನ ಬಹಾದೂರನನ್ನು ಮೇಲ್ದರ್ಜೆಗೇರಿಸಲಾಯಿತು. ಅಲ್ಲದೆ

ಅವನಿಗೆ ಗೌರವ ನೀಲುವಂಗಿ ಮತ್ತು ಇನ್ನುಳಿದ ಶ್ರೇಷ್ಠ ಕೊಡುಗೆಗಳನ್ನು ನೀಡಿ ಗೌರವಿಸಲಾಯಿತು. ಸಾಂಭಾನ ಮೂವರು ಪುತ್ರರನ್ನು ಖಾನನು ಸಾಮ್ರಾಟನಿಗೆ ಪರಿಚಯಿಸಲಾಗಿ ಅವರು ಕುರ್ನಿಸ ಮತ್ತು ತುಸ್ಲೀಮ ವಿಧಿಗಳನ್ನು ಪೂರೈಸಿ ಉನ್ನತರಾಗಲು ಪ್ರತಿಯೊಬ್ಬರಿಗೆ ಅವರವರ ಸ್ಥಾನಕ್ಕನುಗುಣವಾಗಿ 'ರಾಜ' ಪದವಿಯನ್ನು, ಶ್ರೇಷ್ಠ ದರ್ಜೆಯ ಮನಸಬವನ್ನು, ಆನೆಗಳನ್ನು, ಕುದುರೆಗಳನ್ನು ಮತ್ತು ಇನ್ನುಳಿದ ಸೌಕರ್ಯ ಸಾಧನಗಳನ್ನು ನೀಡಲಾಯಿತು. ಅವರ ವಿದ್ಯಮಾನಗಳನ್ನು ನೋಡಿಕೊಳ್ಳಲು ಅಧಿಕಾರಿಗಳನ್ನು ನೇಮಿಸಿ ಅವರ ತರಬೇತಿ ಮತ್ತು ಶಿಕ್ಷಣದ ಜವಾಬ್ದಾರಿಗಾಗಿ ಆಜ್ಞೆ ಹೊರಡಿಸಲಾಯಿತು. ಸಾಂಭಾನ ತಾಯಿ ಮತ್ತು ಹೆಂಡತಿ ರತ್ನ ಖಚಿತ ಆಭರಣಗಳನ್ನು ಮತ್ತು ವಿಧವಿಧದ ವಸ್ತ್ರಗಳನ್ನು ಸ್ವೀಕರಿಸಿದರು.[೧೫] ಖೇಕೋಜಿ, ರಾಣೋಜಿ ಮತ್ತು ಜಾನೋಜಿ ಮುಂತಾದ ಸಾಂಭಾನ ಗಣ್ಯ ಸರದಾರರು ಮತ್ತು ಅವರೊಡನೆ ಬಂದಿದ್ದ ಸಾಂಭಾನ ಪುತ್ರರು ಹಾಗೂ ಆತನ ಕುಟುಂಬದ ಉಳಿದ ಸದಸ್ಯರು ಕೂಡ ಮನಸಬಾಗಳನ್ನು, ನಗದು ಹಣವನ್ನು, ಕುದುರೆಗಳನ್ನು ಮತ್ತು ಬೇರೆ ವಸ್ತುಗಳನ್ನು ಅವರವರ ಸ್ಥಾನಕ್ಕೆ ತಕ್ಕಂತೆ ಪಡೆದರು.[೧೬]

ಹದಿನಾರು ಸೇವಕರು ಮತ್ತು ಬಿಡುಗಡೆ ಹೊಂದಿದ ಮುಹಮ್ಮದ ಅಕ್ಬರನ ಮತ್ತು ಅಬ್ದುಲ್ ಖಾದಿರ್‌ಖಾನನ ಕುಟುಂಬ ಸಾಂಭಾನ ಕುಟುಂಬದೊಡನೆ ಜೊತೆಯಾಗಿ ಬಂದಿದ್ದರು. ಅವರಲ್ಲಿ ಇಬ್ಬರನ್ನು ಅರಮನೆಗೆ ನೇಮಿಸಬೇಕು ಮತ್ತು ಉಳಿದವರನ್ನು ಬಿಡುಗಡೆ ಮಾಡಬೇಕೆಂದು ಆಜ್ಞಾಪಿಸಲಾಯಿತು. ಅಬ್ದುಲ್ ಖಾದಿರ್‌ಖಾನನ ಕುಟುಂಬವನ್ನು ಅವನ ಸೇವಕರಿಗೆ ಒಪ್ಪಿಸಲಾಯಿತು ಮತ್ತು ರಾಹಿರಿ ಕೋಟೆಗೆ ಉತ್ತಮ ಗಡ ಎಂದು ಹೆಸರಿಡಲಾಯಿತು.

ಇಖಲಾಸಖಾನ ಮತ್ತು ಬಹದೂರಖಾನ ದುರ್ದೈವಿ ಸಾಂಭಾ, ನೀಚ ಕಬಕಲಾಸ ಮತ್ತು ಇನ್ನುಳಿದ ಅಯೋಗ್ಯ ಸರದಾರರೊಡನೆ ಸಾಮ್ರಾಟನ ಉನ್ನತ ಹೊಸ್ತಿಲಕ್ಕೆ ಚುಂಬಿಸುಲೋಸುಗ ಸಾಮ್ರಾಜ್ಯ ಶಿಬಿರದ ಸಮೀಪಕ್ಕೆ ತಲುಪಿದರು. ಸಾಮ್ರಾಟನ ಆಜ್ಞೆಯ ಪ್ರಕಾರ ಇಖಲಾಸಖಾನ ಮತ್ತು ಹಮೀದುದ್ದೀನಖಾನರು ನೀಚ ಸಾಂಭಾ ಮತ್ತು ಕಬಕಲಾಸ ಮುಂತಾದವರನ್ನು ಒಂಟೆಯ ಬೆನ್ನ ಮೇಲೆ ಕೂಡಿಸಿದರು ಮತ್ತು ಬಹಳ ಅಪಮಾನದಿಂದ ಅವರನ್ನು ಸಾಮ್ರಾಟನ ಶಿಬಿರಕ್ಕೆ ಕರೆದೊಯ್ದರು. ಅವರು ಸಭಾಗೃಹದ ಬಾಗಿಲಕ್ಕೆ ಬಂದಾಗ ನದಿಯ ಸಮೀಪದಲ್ಲಿರುವ ನ್ಯಾಯಾಲಯದ ಹತ್ತಿರ ಶತ್ರು ನಿಲ್ಲಬೇಕೆಂದು ಆಜ್ಞಾಪಿಸಲಾಯಿತು. ಬಾದಶಾಹನ ಆಜ್ಞೆಯ ಮೇರೆಗೆ ಸಾಭಾನನ್ನು ಮತ್ತು ಅವನ ಸಂಗಾತಿಗಳನ್ನು ಅಲ್ಲಿಯೇ ನಿಲ್ಲಿಸಲಾಯಿತು. ದೇವರ ಪ್ರತಿಬಿಂಬವಾಗಿದ್ದ ಸಾಮ್ರಾಟನಿಗೆ ಸಾಂಭಾನ ಕರುಣಾಜನಕ ಕ್ಷುಲ್ಲಕ ಸ್ಥಿತಿಯನ್ನು ಕಂಡಾಗ ಹೃದಯ ಮಿಡುಕಿತು.[೧೭] ಆ ಬಳಿಕ ಪಶ್ಚಾತ್ತಾಪ ಕಾಣುವ ತನ್ನ ಕಣ್ಣನ್ನು ತೆರೆದು ಉನ್ನತ ಸಿಂಹಾಸನದಿಂದ ಕೆಳಗಿಳಿದು ಬಂದು ಸರ್ವಕರ್ತ ಪರಮಾತ್ಮನಿಗೆ ಪ್ರಾರ್ಥನೆ ಸಲ್ಲಿಸಿದನು. ಆದರೆ ಆ ನತದೃಷ್ಟ ವ್ಯಕ್ತಿ ಹಮ್ಮು ಬಿಮ್ಮಿನಿಂದ ಸಾಮ್ರಾಟನಿಗೆ ತಸ್ಲೀಮ ವಿಧಿಯನ್ನು ಪೂರೈಸಲು ನಿರಾಕರಿಸಿದನು.

ಇಖಲಾಸಖಾನ ಮತ್ತು ಹಮೀನುದ್ದೀನಖಾನ ಇಬ್ಬರೂ ಸಾಂಭಾನಿಗೆ ಹಾಗೆ ಮಾಡಲು ಒತ್ತಾಯ ಮಾಡಿದ್ದು ನಿರರ್ಥಕವಾಯಿತು. ನಂತರ ಸಿಕಂದರಖಾನನು ಶಿಬಿರದ ಹತ್ತಿರ ಇನ್ನೊಂದು ಶಿಬಿರವನ್ನು ಹಾಕಿ ಅಲ್ಲಿ ಅವರನ್ನು ಇಡಲು ಅಪ್ಪಣೆಯಾಯಿತು. ಕಬಕಲಾಸ ಮತ್ತು ಸಾಂಭಾನ ಇನ್ನುಳಿದ ಅನುಯಾಯಿಗಳನ್ನು ಬೇಡಿ ಹಾಕಿ ಬಂಧಿಸಿಡಬೇಕು ಮತ್ತು ಅವರ ಮೇಲೆ ನಿಷ್ಠುರ ನಿಗಾ ಇಡಬೇಕು ಎಂದು ತಿಳಿಸಲಾಯಿತು.[೧೮]

ಸಾಂಭಾನನ್ನು ಸೆರೆಹಿಡಿದ ಬಳಿಕ ಇಖಲಾಸಖಾನನು ಸಾಮ್ರಾಟನಿಗೆ ವಂದನೆ ಸಲ್ಲಿಸಲು ಬಂದನು. ಸಾಮ್ರಾಟನಾಜ್ಞೆಯ ಪ್ರಕಾರ ರಹುಲ್ಲಾಹಖಾನನು ಘಸಾಲಖಾನಾದ ದ್ವಾರದ ಹತ್ತಿರ ಬರಮಾಡಿಕೊಂಡು ಸಾಮ್ರಾಟನ ಸನ್ನಿಧಿಗೆ ಕರೆದೊಯ್ದನು. ಭಾಗ್ಯಶಾಲಿಯಾಗಲು ಮತ್ತು ಉನ್ನತ ಹುದ್ದೆ ಪಡೆಯಲು ಕಾರಣವಾಗಿದ್ದ ಸಂಪೂರ್ಣ ಸ್ವಾಮಿನಿಷ್ಠೆ ಮತ್ತು ಪ್ರಾಮಾಣಿಕ ಭಾವನೆ ಇವುಗಳಿಂದ ಪ್ರೇರಿತನಾದ ಮೇಲ್ಕಾಣಿಸಿದ ಖಾನನು ವಿಶೇಷ ಸಭೆಯಲ್ಲಿ ಕೃತಜ್ಞತಾಭಾವದಿಂದ ತನ್ನ ಹಣೆ ಥಳಥಳಿಸುವಂತಾಗಲು ಐದು ನೂರು ಬಂಗಾರ ನಾಣ್ಯಗಳನ್ನು ನಜರ ಎಂದು ಮತ್ತು ರೂ. ೧,೦೦೦ವನ್ನು ನಿಸಾರವೆಂದು ಸಲ್ಲಿಸಿ ಸಾಮ್ರಾಟನ ಪಾದಗಳನ್ನು ಚುಂಬಿಸಿದನು. ದಯಾಪರನಾದ ಮಹಾಪ್ರಭು ಕರುಣೆಯಿಂದ ತನ್ನ ಮಂಗಲ ಕರಗಳನ್ನು ಆತನ ತಲೆಮೇಲಿರಿಸಿ ಅವನನ್ನು ಮೆಚ್ಚುಗೆಯ ಮಾತುಗಳಿಂದ ಸ್ತುತಿಸಿದನು. ಖಾನೆ–ಊಮಾನ ಫಾಥ ಜಂಗ ಖಾನ ಎಂಬ ಬಿರುದನ್ನು ನೀಡಿ ಅವನ ಮನಸಬವನ್ನು ೧೦೦೦ ಮತ್ತು ೧೦೦೦ ಸ್ವಾರರಿಂದ ಹೆಚ್ಚಿಸಿ ೪೦೦೦೦ ರೂ.ಗಳನ್ನು ಇನಾಮವಾಗಿ ಕೊಟ್ಟನು. ಇದರೊಡನೆ ಒಂದು ವಿಶೇಷ ನೀಲುವಂಗಿ, ರತ್ನ ಖಚಿತ ಹಿಡಿಕೆಯುಳ್ಳ ಒಂದು ಖಡ್ಗ, ಒಂದು ಆನೆ, ಐದು ಕುದುರೆಗಳು ಅವುಗಳ ಬಂಗಾರದ ಅಲಂಕೃತ ಹೊದಿಕೆಯುಳ್ಳ ಕುದುರೆ ಇವುಗಳನ್ನಿತ್ತನು. ಈ ಭವ್ಯ ಪ್ರೀತಿಗಾಗಿ ಖಾನನು ಧನ್ಯವಾದಗಳನ್ನರ್ಪಿಸಿದನು. ಆ ಬಳಿಕ ಬಹಾದೂರಖಾನ ಹಾಗೂ ರುಸ್ತುಂಖಾನರೂ ಕೂಡ ಉನ್ನತ ಬಿರುದುಗಳನ್ನು ಮತ್ತು ಪ್ರೀತಿಯ ಕಾಣಿಕೆಗಳನ್ನು ಪಡೆದರು.

ಎರಡು ದಿನಗಳಾದ ಮೇಲೆ ಸಾಂಭಾನು ತನ್ನ ಗುಪ್ತ ಸಂಪತ್ತನ್ನು, ಆಭರಣಗಳನ್ನು, ವಜ್ರಗಳನ್ನು ಮತ್ತು ಇನ್ನುಳಿದ ವಸ್ತ್ರಗಳನ್ನು ಕುರಿತು ಅವನನ್ನು ಪ್ರಶ್ನಿಸಬೇಕೆಂದು ಮತ್ತು ಸಾಮ್ರಾಜ್ಯದ ಯಾವ ಅಮೀರರಲ್ಲಿ ಯಾರು ಅವನೊಡನೆ ಪತ್ರ ವ್ಯವಹಾರದಲ್ಲಿ ತೊಡಗಿದ್ದಾರೆ ಎನ್ನುವುದನ್ನು ಖಾತ್ರಿಪಡಿಸಿಕೊಳ್ಳಬೇಕೆಂದು ಸಾಮ್ರಾಟನು ರುಹುಲ್ಲಾಹಖಾನನಿಗೆ ಹೇಳಿದನು. "ಸಾಯಲೇಬೇಕಾದ ಮನುಷ್ಯನು ತನ್ನ ಮನಸ್ಸಿಗೆ ಬಂದದ್ದನ್ನು ಹೇಳುತ್ತಾನೆ" ಎಂದು ಸೂಕ್ತಿಯಿದೆ. ಹಾಗೆ ಆ ಗರ್ವಿಷ್ಟ ಮನುಷ್ಯನು (ಸಾಂಭಾನು) ಸಾಮ್ರಾಟನನ್ನು ಕುರಿತು ಹುಚ್ಚುಚ್ಚಾರವಾಗಿ, ಅಶ್ಲೀಲವಾಗಿ ಗಳುಹತೊಡಗಿದನು.[೧೯] ಆತನ ಹೊಲಸು ನಾಲಿಗೆಯಿಂದ ಹೊರಬಿದ್ದ ಎಲ್ಲವನ್ನು ಖಾನನು ಸಾಮ್ರಾಟನಿಗೆ ಹೇಳದೆ ಕೇವಲ ಸೂಚ್ಯವಾಗಿ ಕೆಲವು ಸಂಜ್ಞೆ ನೀಡಿ ತಿಳಿಸಿದನು. ಇದನ್ನು ತಿಳಿದ ಮೇಲೆ ಸಾಮ್ರಾಟನು ಅವನ ಕಣ್ಣು ಕೀಳಲು

ತಿಳಿಸಿದನು. ಹಾಗೆಯೇ ಮಾಡಲಾಗಿತ್ತು.[೨೦] ಆದರೆ ಆ ಸೊಕ್ಕಿನ ಮತ್ತು ದುರಂಕಾರದ ಮನುಷ್ಯ ಅಪಮಾನದಿಂದಾಗಿ ಆ ದಿನದಿಂದ ಆಹಾರ ಸೇವಿಸುವುದನ್ನು ನಿರಾಕರಿಸಿದನು. ಸಾಮ್ರಾಜ್ಯ ಕಾವಲುಗಾರರು ಅವನಿಗೆ ಉಣಿಸಲು ಎಷ್ಟೇ ಪ್ರಯತ್ನ ಪಟ್ಟರೂ ಅವನು ಒಪ್ಪಲಿಲ್ಲ. ಕೆಲವೊಮ್ಮೆ ಆಹಾರವಿಲ್ಲದೆ ಇದ್ದನು. ಈ ವಿಷಯವನ್ನು ಸಾಮ್ರಾಟನಿಗೆ ತಿಳಿಸಲಾಗಿ ಸಾಂಭಾನ ಸಾವು ಸಮೀಪಿಸಿದ್ದರಿಂದ ಅವನನ್ನು ಶಿಕ್ಷಾಗೃಹಕ್ಕೆ ಕರೆದೊಯ್ಯಬೇಕು. ಅಲ್ಲಿ ಅವನ ಒಂದೊಂದು ಅಂಗಾಂಗಗಳನ್ನು ಕತ್ತರಿಸಿ, ಅವನ ತಲೆಯನ್ನು ಔರಂಗಾಬಾದದಿಂದ ಬುರ್ಹಾಣಪುರಕ್ಕೆ ಪ್ರದರ್ಶಿಸುತ್ತ ಒಯ್ದು ನಂತರ ಅದನ್ನು ಶಾಹಾಜಹಾನಬಾದದ ದ್ವಾರಕ್ಕೆ ತೂಗಿ ಬಿಡಬೇಕೆಂದು ಹಜುನಲ್ ಹುಕುಂ ಹೊರಡಿಸಲಾಯಿತು.[೨೧]

ಪ್ರೇಮಗಡವನ್ನು ಜಯಿಸಿದ್ದು :

ಪ್ರೇಮಗಡವನ್ನು ಗೆಲ್ಲಲು ಬಹ್ರಾಮಂದಖಾನನು ರಾಜಕುಮಾರ ಮಹಮ್ಮದ ಅಜಂಶಾಹಾನಿಂದ ವಿಶೇಷ ಅನುಮತಿಯನ್ನು ಕೋರಿದನು. ಸಾಮ್ರಾಜ್ಯ ಸೈನ್ಯದೊಂದಿಗೆ ಅವನು ಅಲ್ಲಿಗೆ ತಲುಪಿ ಅದರ ಮೇಲೆ ಮುತ್ತಿಗೆ ಹಾಕಿದನು. ಆ ಮುತ್ತಿಗೆಯು ಎರಡು ತಿಂಗಳು ೨೦ ದಿನಗಳವರೆಗೆ ಮುಂದುವರೆಯಿತು. ಈ ಅವಧಿಯಲ್ಲಿ ಗುಂಡಿನ ಕಾಳಗ ನಡೆದು ಶತ್ರುಗಳು ಆಗಾಗ ದೊಡ್ಡ ಸೈನ್ಯವನ್ನು ಜಮಾಯಿಸುತ್ತ ಸಾಮ್ರಾಜ್ಯ ಸೈನ್ಯವನ್ನು ಚಕಿತಗೊಳಿಸಿ ಕೆಲ ಸಮಯದ ನಂತರ ಮಾಯವಾದರು. ಕೊನೆಗೆ ಒಂದು ದಿನ ಕೋಟೆಯ ದಂಡಾಧಿಕಾರಿಯಾಗಿದ್ದ ಅಂಬೂಜಿ ದೊಡ್ಡ ಸೈನ್ಯ ಪಡೆಯೊಡನೆ ಸಾಮ್ರಾಜ್ಯ ಸೇನೆಯೊಡನೆ ಹೋರಾಡಲು ಹೊರಬಂದನು. ವೈರಿ ಸೇನೆಗಳು ಹೋರಾಟಕ್ಕೆ ಎದುರಾಗಿ ಅಣಿಯಾಗಿ ನಿಂತವು. ಪ್ರಪ್ರಥಮವಾಗಿ ಬಂದೂಕು ಗುಂಡಿನ ವಿನಿಮಯವಾಯಿತು. ನಂತರ ಕ್ಷಿಪಣಿಗಳ ಮತ್ತು ಕೈಬಾಂಬುಗಳ ಸ್ಫೋಟ ಶುರುವಾಯಿತು. ಆ ಬಳಿಕ ಕುದುರೆ ಸವಾರರು ತಮ್ಮ ಕುದುರೆಗಳನ್ನು ಹುರಿದುಂಬಿಸುತ್ತ ಭೀಕರ ಕಾಳಗವಾಡಿದರು. ಯುದ್ಧದ ಮಧ್ಯದಲ್ಲಿ ಖ್ವಾಜಾ ಖಮರುದ್ದೀನ ಬಕ್ಷಿ ಮತ್ತು ಸಾಮ್ರಾಜ್ಯ ಸೇನೆಯ ವಾರ್ತಾವಾಹಕ ಕೆಲವು ಮನಸಬದಾರರೊಂದಿಗೆ ಮಡಿದರು. ಅದೇ ರೀತಿಯಲ್ಲಿ ಒಂದು ಸಾವಿರ ಉಳಿದ ಜನರು ಸತ್ತರು. ತನ್ನ ಎರಡು ನೂರು ಅನುಯಾಯಿಗಳು ಹಾಗೂ ಐದ ನೂರು ಉಳಿದ ಬಂದೂಕುಧಾರಿಗಳೊಡನೆ ಉತ್ತಮ ಹಜಾರಿ ಕರ್ನಾಟಕಿ ಗಾಯಗೊಂಡನು. ದಂಗೆಕೋರರ ಕಡೆಗೆ ಎರಡು ಸಾವಿರ ಜನರು ಮಡಿದರು. ಇಲ್ಲವೆ ಗಾಯಗೊಂಡರು. ಕೊನೆಗೆ ಯುದ್ಧಭೂಮಿಯಲ್ಲಿ ನಿಲ್ಲುವ ಧೈರ್ಯವಿಲ್ಲದೆ ದಂಗೆಕೋರರು ಓಡಿಹೋದರು. ಅವರ ಪಲಾಯನದ ನಂತರ ಖಾನನು ಫಿರಂಗಿ ನೆಲೆಗಳನ್ನು ಕಟ್ಟಿಸಿ, ಅವುಗಳ ಮೇಲೆ ತೋಪುಗಳನ್ನಿಟ್ಟು, ಕೋಟೆಯ ಗೋಡೆಗಳನ್ನು ಮತ್ತು ರಕ್ಷಣಾ ಗೋಡೆಗಳನ್ನು ಸ್ಫೋಟಿಸಿ ಅವುಗಳ ಕೆಲ ಭಾಗಗಳನ್ನು ನೆಲಸಮಗೊಳಿಸಿದನು. ಬಂದೂಕಿನ ಗುಂಡುಗಳು ಮತ್ತು ಅವಶ್ಯ ಸಾಮಗ್ರಿಗಳ ಕೊರತೆಯಿಂದ ಕಾವಲು ದಂಡಿನ ಸ್ಥಿತಿ ಅಪಾಯದಲ್ಲಿತ್ತು. ಕೋಟೆಯ

ಸೇನಾಧಿಪತಿ ಅಂಬೂಜಿ ಮತ್ತು ಆತನ ಅನುಯಾಯಿಗಳು ಕೋಟೆಯನ್ನು ಸಾಮ್ರಾಜ್ಯ ಸೈನಿಕರಿಗೆ ಒಪ್ಪಿಸದೆ ಬೇರೆ ದಾರಿ ಇಲ್ಲವೆಂದು ಕಂಡುಕೊಂಡರು. ಖಾನನಿಂದ ಅಭಯವನ್ನು ಯಾಚಿಸಿದರು. ಅವನು ಅವರನ್ನು ಭೇಟಿಮಾಡಿ, ಸ್ವಾಂತನಗೊಳಿಸಿ ಸಮಾಧಾನ ಪಡಿಸಿದನು. ಮೀರ ನಿಯಾಮತ್‌ನನ್ನು ಕೋಟೆಯ ರಕ್ಷಣೆಗೆ ನಿಯಮಿಸಿದನು. ಆ ನಂತರ ಕೋಟೆಯ ಗೆಲುವನ್ನು ವರ್ಣಿಸುವ ಓಲೆಯೊಡನೆ ಬಂಗಾರದ ಕೀಲಿಕೈಯನ್ನು ಅವನು ಸಾಮ್ರಾಟನಿಗೆ ಕಳಿಸಿದನು. ಇವುಗಳನ್ನು ಸಾಮ್ರಾಟನೆದುರು ಸಲ್ಲಿಸಲಾಗಿ ಆತನು ಖಾನನ ಕಾರ್ಯವನ್ನು ಬಹುವಾಗಿ ಸ್ತುತಿಸುತ್ತ ಅವನಿಗೆ ರಾಜ ಮರ್ಯಾದೆಯ ಕೊಡುಗೆಗಳನ್ನು ನೀಡಿದನು.

ಸಾತಾರಾ ಕೋಟೆಯನ್ನು ಗೆದ್ದದ್ದು :

ಹಮೀರ ಎಂಬ ಹೆಸರಿನ ಕ್ಷುದ್ರ ಸರದಾರನೊಬ್ಬ ಸಾತಾರಾ ಕೋಟೆಯಲ್ಲಿ ಬಂಡುಕೋರರ ದೊಡ್ಡ ಬಲವೊಂದನ್ನು ಜಮಾಯಿಸಿದ್ದನು. ಮೇಲಿಂದ ಮೇಲೆ ಕೋಟೆಯ ಹೊರಗೆ ಬಂದು ಸಾಮ್ರಾಜ್ಯ ಸೇವೆಯನ್ನು ಚಕಿತಗೊಳಿಸುತ್ತ ಹೋರಾಡುತ್ತಿದ್ದನು. ರಾಜಕುಮಾರ ಅಜಂಶಾಹ ಘಾಜಿ-ಉದ್-ದಿನ್ ಖಾನ ಬಹಾದೂರನನ್ನು ಸಾಮ್ರಾಜ್ಯ ಸೇನೆಯ ಮುಂದಾಳನ್ನಾಗಿ ನಿಯಮಿಸಿ ಕೋಟೆಯನ್ನು ಗೆಲ್ಲಲು ಹೊರಟನು.

ಅನೇಕ ಅಡೆತಡೆಗಳನ್ನು ನಿವಾರಿಸುತ್ತ ಸಾಗಿ ಬಂದು ಕೋಟೆಯಿಂದ ಮೂರು ಕರೋಹ ಅಂತರದಲ್ಲಿ ಬೀಡು ಬಿಟ್ಟನು. ಬೆಟ್ಟದ ನೆತ್ತಿಯ ಮೇಲಿದ್ದ ಕೋಟೆಯ ತುದಿ ಆಕಾಶದಲ್ಲಿ ನಕ್ಷತ್ರಗಳನ್ನು ತಿಕ್ಕುತ್ತಿತ್ತು. ಅದರ ಗೋಪುರಗಳನ್ನು ಹಾಗೂ ಗೋಡೆಗಳನ್ನು ಫಿರಂಗಿ ದಳದಿಂದ ಬಲಪಡಿಸಲಾಗಿತ್ತು. ಅದರ ಇಳಿಜಾರು ಭೂಮಿ ಮತ್ತು ಗಾಢವಾದ ಅರಣ್ಯ ಕೋಟೆಯನ್ನು ದುರ್ಗಮಗೊಳಿಸಿದ್ದವು. ಸಾಮ್ರಾಜ್ಯದ ಅಜೇಯ ಸೈನ್ಯ ಮೂರು ತಿಂಗಳುಗಳವರೆಗೆ ಮುತ್ತಿಗೆ ಹಾಕಿತು. ಈ ಅವಧಿಯಲ್ಲಿ ಗುಂಡಿನ ಕಾಳಗದ ಚಕಮಕಿ ಮುಂದುವರೆಯಿತು. ಆದರೆ ಇಸ್ಲಾಮ ಸೈನಿಕರಿಗೆ ಕೋಟೆಯನ್ನು ಗೆಲ್ಲಲು ಆಗಲಿಲ್ಲ.

ಕಟ್ಟ ಕಡೆಗೆ ಸ್ವತಃ ಸಾಮ್ರಾಟನೇ ಕೋಟೆಯನ್ನು ಗೆದ್ದನು. ಬಂಡುಕೋರರನ್ನು ಬಗ್ಗುಬಡಿಯಲು ಆ ಕಡೆ ತಿರುಗಿದನು. ಸಾಮ್ರಾಟನು ಬಂದೊಡನೆ ರಾಜಕುಮಾರ ಅಜಂ, ಘಾಜಿ-ಉದ್-ದಿನಖಾನ ಬಹಾದೂರ ಬಹ್ರಾಮಂದಖಾನ ಮತ್ತು ಉಳಿದ ಅಮೀರರು ಅವನನ್ನು ಬರಮಾಡಿಕೊಳ್ಳಲು ಮುಂದೆ ಬಂದು ಉಪಚರಿಸುವ ಸೌಖ್ಯವನ್ನು ಸಂಗ್ರಹಿಸಿದರು. ರಾಜಕುಮಾರನ ಶಿಬಿರದಿಂದ ಬಂದು ಕರೋಹ ಅಂತರದಲ್ಲಿ ಸಾಮ್ರಾಟನ ಬಿಡಾರ ಹೂಡಲಾಯಿತು. ಅದನ್ನು ಎಲ್ಲ ಕಡೆಯಿಂದಲೂ ಸುತ್ತುವರೆಯಲು ಅಮೀರರನ್ನು ನಿಯಮಿಸಲಾಯಿತು. ರಕ್ಷಣಾ ಕಂದಕಗಳನ್ನು ನಿರ್ಮಿಸಲಾಯಿತು. ಈ ಸಿದ್ಧತೆಯಾದ ಮೇಲೆ ಗುಂಡಿನ ಕಾಳಗ ಶುರುವಾಯಿತು. ಮೂರು ತಿಂಗಳವರೆಗೆ ಹಗಲು ರಾತ್ರಿ ವಿಪರೀತ ಗುಂಡಿನ ಘರ್ಷಣೆ ನಡೆಯಿತು. ಹೀಗಿದ್ದರೂ ಕೂಡ ಆಗೊಮ್ಮೆ ಈಗೊಮ್ಮೆ ಅಪಾಯಕಾರಿ ಜನಜಂಗುಳಿ ಕ್ಷಿಪ್ರವಾಗಿ ಸಾಮ್ರಾಜ್ಯ ಸೈನ್ಯದ ಮೇಲೆ ಎರಗಿದಾಗ ಬಿರುಸಿನ ಹೋರಾಟ ಸಂಭವಿಸಿದ ನಂತರ ಅವರೆಲ್ಲ ಓಡಿ ಹೋಗುತ್ತಿದ್ದರು. ಕೆಲವು ಸಾರಿ ಸಾಮ್ರಾಜ್ಯ

ಸೈನಿಕರು ಕೋಟೆಯ ಅಡಿಯವರೆಗೆ ರಭಸದಿಂದ ನುಗ್ಗುತ್ತಿದ್ದರು. ಆ ಕಿಡಿಗೇಡಿ ದಂಗೆಕೋರರು ಕೋಟೆಯ ತುದಿಯಿಂದ ಕಲ್ಲುಗಳ ಮಳೆಗರೆಯಲು ಫಿರಂಗಿ ಗುಂಡುಗಳಿಗಿಂತ ಹೆಚ್ಚಿನ ಹಾನಿ ಸಂಭವಿಸಿತು. ಫಿರಂಗಿ ಸ್ಫೋಟ ಮತ್ತು ಕಲ್ಲುಗಳಿಂದಾಗಿ ದೊಡ್ಡ ಸಂಖ್ಯೆಯಲ್ಲಿ ಸೈನಿಕರು ಮತ್ತು ಉಳಿದ ಜನರು ಸತ್ತರು. ಶತ್ರುವಿನ ಈ ಪ್ರಕಾರದ ಚಟುವಟಿಕೆಯಿಂದಾಗಿ ಸಾಮ್ರಾಜ್ಯ ಠಾಣೆಗೆ ತಲುಪುವ ಸಂಪರ್ಕ ಸಾಧನಗಳು ಅಸ್ತವ್ಯಸ್ತವಾದವು. ಆಹಾರ ಧಾನ್ಯಗಳ ಬೆಲೆಗಳು ವಿಪರೀತ ಏರಿದವು. ಸೈನಿಕರು ಮತ್ತು ಅಲ್ಲಾಹನ ಸೃಷ್ಟಿ ಕಷ್ಟಕ್ಕೊಳಗಾಯಿತು. ದೊಡ್ಡ ಸಂಖ್ಯೆಯಲ್ಲಿ ಸೈನಿಕರು ಮತ್ತು ಪ್ರಾಣಿಗಳು ಅಸುನೀಗಿದವು. ಸಾಮ್ರಾಟ ಮತ್ತು ಆತನ ಅಮೀರರು ಎಷ್ಟೇ ಶ್ರಮಿಸಿದರೂ ಅವರ ಯತ್ನಗಳೆಲ್ಲ ವಿಫಲವಾದವು. ಸಾಮ್ರಾಟನು ಈ ಕಾರ್ಯ ಮುಗಿಯುವವರೆಗೆ ಮತ್ತೊಂದು ಯಾವ ಕೆಲಸವನ್ನು ಕೈಕೊಳ್ಳಬಾರದೆಂದು ಬಯಸಿದನು.

ಆದ್ದರಿಂದ ಘಾಜಿ–ಉದ್–ದಿನಖಾನ ಬಹಾದೂರನು ಈ ವಿಷಯ ಕುರಿತು ವಿಚಾರಿಸಿ ಸಾಮ್ರಾಜ್ಯ ಸೈನ್ಯದೊಡನೆ ಪ್ರಮುಖವಾಗಿ ಹೋರಾಡಿದ. ಕೋಟೆಯ ಅಧಿಪತಿ ಹಮೀರರಾವನ ಸಹೋದರ ಕೃಷ್ಣಾಜಿರಾವನಿಗೆ ಹೀಗೆ ಸಂದೇಶವನ್ನು ಕಳುಹಿಸಿದನು: "ನಿಮ್ಮ ಅಯೋಗ್ಯ ಸರದಾರ ಸಾಂಭಾನು ತನ್ನ ಪಾಪಕೃತ್ಯಗಳ ಫಲವಾಗಿ ಪರಮಾತ್ಮನತ್ತ ಸಾಮ್ರಾಜ್ಯವನ್ನು ಎದುರು ಹಾಕಿಕೊಂಡು ಘರ್ಷಣೆಯಲ್ಲಿ ತೊಡಗಿ ತನ್ನ ಅಳಿವನ್ನು ತಾನೇ ತಂದುಕೊಂಡು ಸಾಮ್ರಾಟರ ಕ್ರೋಧಕ್ಕೆ ಆಹುತಿಯಾದದ್ದರಿಂದ ಆ ಕ್ರೋಧವು ದೈವಿ ಪ್ರತೀಕಾರದಂತೆ ಅವನ ಕೈಗಳನ್ನು ಪಾಪದ ಅಸ್ತಿತ್ವದಿಂದ ಮುಕ್ತಗೊಳಿಸಿತು. ಅವನ ಪುತ್ರರು ಮತ್ತು ಬಂಧುಗಳು ಸಪ್ತರಾಷ್ಟ್ರಗಳ ರಾಜರ ಆಶ್ರಯವಾಗಿರುವ ಉನ್ನತ ಆಸ್ಥಾನಕ್ಕೆ ಪ್ರಾರ್ಥಿಸಲಾಗಿ ಅಕ್ಷಮ್ಯ ಅಪರಾಧಗಳನ್ನು ಸಾಂಭಾ ಮಾಡಿದ್ದರೂ ಮಹಾಪ್ರಭುವಿನ ಹೃದಯ ಕರುಣೆಯಿಂದ ಕರಗಲಾಗಿ ಆತನು ಅವರನೆಲ್ಲ ಕ್ಷಮಿಸಿ, ಉನ್ನತ ಸ್ಥಾನಗಳನ್ನು ನೀಡಿ ಅವರಿಗೆ ಕೊಡುಗೆಗಳನ್ನು ದಯಪಾಲಿಸಿದನು. ಆದ್ದರಿಂದ ಶಾಶ್ವತವಾಗಿ ಬಾಳುವ ಮತ್ತು ವೈರಿಯನ್ನು ಪದತಳದಲ್ಲಿ ತುಳಿಯುವ ಈ ಸಾಮ್ರಾಜ್ಯವನ್ನು ಎದುರಿಸುವದೆಂದರೆ ನಿನ್ನ ನಾಶವೆಂದೆ ಪರಿಗಣಿಸಿ. ಆದ್ದರಿಂದ ನಿನ್ನ ವಿಧಿ ನಿನಗೆ ಸರಿ ದಾರಿ ತೋರಿದರೆ ಮತ್ತು ಸುದೈವ ಸಹಕಾರಿಯಾದರೆ ಸಾಮ್ರಾಜ್ಯದ ಅಮೀರರಿಗೆ ನಿನ್ನ ಕೋಟೆಯನ್ನು ಒಪ್ಪಿಸು, ಸಾಮ್ರಾಜ್ಯ ಸೇವೆಗೆ ಸೇರಿ ನಿನ್ನ ಸಮಾನಸ್ಕಂಧರಲ್ಲಿಯೇ ಉನ್ನತ ದರ್ಜೆಯನ್ನು ಪಡೆದು ನಿನ್ನ ಆಶೆಗೆ ತಕ್ಕಂತೆ ಮರ್ಯಾದೆ ಪಡೆದುಕೊಳ್ಳು. ಇಲ್ಲದಿದ್ದರೆ ನಿನ್ನ ಕೃತ್ಯಗಳ ಫಲಗಳನ್ನು ನೀನು ಪಡೆಯುವೆ." ಆತನ ದೈವ ಅವನನ್ನು ಏಳ್ಗೆಯತ್ತ ತೆಗೆದುಕೊಂಡು ಹೋಗಿದ್ದರಿಂದ ಸಾಮ್ರಾಜ್ಯ ಸೇವೆಗೆ ಸೇರುವುದಲ್ಲದೆ ಸಾಮ್ರಾಟನ ಅಂಗೈ ಮುದ್ರೆಯುಳ್ಳ ಲಿಖಿತ ಭರವಸೆಗಾಗಿ ವಿನಂತಿಸಿಕೊಂಡನು. ಖಾನನು ಈ ವಿಷಯವನ್ನು ಸಾಮ್ರಾಟನೆದುರು ಪ್ರಸ್ತಾಪಿಸಲು ಆತನು ಖಾನನ ದೂರಾಲೋಚನೆಯನ್ನು ಮೆಚ್ಚಿದನು. ತನ್ನ ಕೈ ಅಚ್ಚಿನೊಂದಿಗೆ ಅವಶ್ಯವಿದ್ದ ಎಲ್ಲ ಭರವಸೆಗಳನ್ನು ನೀಡುವ ಫರ್ಮಾನುವನ್ನು ಸಿದ್ಧಗೊಳಿಸಿ ಖಾನನಿಗೆ ಕಳಿಸಲು ಸಾಮ್ರಾಟನು ಆಜ್ಞಾಪಿಸಿದನು. ಆ ಪರ್ಮಾನನ್ನು ಕೃಷ್ಣಾಜಿಗೆ ಕಳಿಸಲಾಯಿತು. ಓಲೆ

ತಲುಪಲು ಕೃಷ್ಣಾಜೀ ಹೀಗೆ ಬರೆದನು. "ಖಾನನು ನಾಳೆ ತನ್ನ ಸುಸಜ್ಜಿತವಾದ, ಸಂಘಟಿತ ಸೈನ್ಯದೊಡನೆ ಬರಲಿ ಮುಖ್ಯ ದ್ವಾರದ ಹತ್ತಿರ ಬಂದು ಹಲ್ಲೆ ಮಾಡಲಿ. ನಾನು ಖಾಲಿ ಗುಂಡುಗಳನ್ನು ಹಾರಿಸುವೆ. ಸಂಜ್ಞೆ ಸಿಕ್ಕೊಡನೆ ನಿರ್ಭೀತಿಯಿಂದ ಕೋಟೆಯ ಮಹಾ ದ್ವಾರದೊಳಗೆ ಪ್ರವೇಶಿಸಲಿ" ಆ ಪ್ರಕಾರ ಮರುದಿನ ಬೆಳಿಗ್ಗೆ ದಿನದ ಪ್ರಥಮ ಘಟ್ಟ ಮುಗಿದ ಮೇಲೆ (ಸುಮಾರು ಮುಂಜಾನೆ ೯ ಗಂಟೆ ಆದ ಮೇಲೆ) ದೊಡ್ಡ ಸೈನ್ಯದೊಡನೆ ಪ್ರಮುಖ ಅಮೀರರನ್ನು ಕೂಡಿಕೊಂಡು ಖಾನನು ಅದರೆಡೆಗೆ ನುಗ್ಗಿದನು. ಕೋಟೆಯ ತುದಿಯಿಂದ ಫಿರಂಗಿ ದಳವು ಖಾಲಿ ಗುಂಡುಗಳನ್ನು ಹಾರಿಸಿತು. ಯಾರಿಗೂ ಗಾಯವಾಗಲಿಲ್ಲ. ಕೊನೆಯಲ್ಲಿ ಕೋಟೆಯ ದ್ವಾರವನ್ನು ತಲುಪಿದ ಖಾನನು ಒಳಗೆ ಪ್ರವೇಶಿಸಿದನು. ಕೃಷ್ಣಾಜಿ ಮತ್ತು ಅವನ ಅಧಿಕಾರಿಗಳು ಖಾನನಲ್ಲಿಗೆ ಬಂದು ಅವನಿಗೆ ಶರಣಾದರು. ಕೃಷ್ಣಾಜಿಯನ್ನು ಆಲಂಗಿಸಿಕೊಂಡು ಸಾಮ್ರಾಟನ ದಯೆಯ ವಿಷಯಕ್ಕೆ ಭರವಸೆಯಿತ್ತು. ಖಾನನು ಅವನನ್ನು ಪ್ರಭು ಸನ್ನಿಧಿಗೆ ತಂದು ಪರಿಚಯಿಸಿದನು. ಕೃಷ್ಣಾಜಿ ಕುರ್ನಿಸ ವಿಧಿಯನ್ನು ಅರ್ಪಿಸಿದನು. ಸಾಮ್ರಾಟನು ಅವನಿಗೆ ಮತ್ತು ಅವನ ಅನುಯಾಯಿಗಳಿಗೆ ಉನ್ನತ ಶ್ರೇಣಿಯ ಮನಸಬಗಳನ್ನು ನೀಡಿದನು. ಸಾಮ್ರಾಟನು ವಿಜಯ ದುಂಧಬಿನೊಳಗಲಿ ಎಂದು ಆಜ್ಞೆಯನ್ನಿತ್ತನು. ಈ ಒಳಗಾಗಿಯೇ ಮತ್ತು ಸವಾರರುಳ್ಳ ಮನಸಬವನ್ನು ಹೊದಿದ್ದ ಮಿರ್ಜಾ ಅಲಿ ಅಹ್ಮದನು ೨೦೦ ಜಾಟ ಮತ್ತು ೫೦ ಸವಾರರ ಹೆಚ್ಚಳವನ್ನು ಪಡೆದನಲ್ಲದೆ ಆ ಕೋಟೆಯ ಅಧಿಪತಿಯನ್ನಾಗಿ ನೇಮಿಸಲ್ಪಟ್ಟನು. ಈ ವಿಜಯದ ವಾರ್ತೆಯನ್ನು ಕೇಳಿದ ಸಾಮ್ರಾಜ್ಯದ ವಿಶ್ವಾಸಿಕ ಸೇವಕರು ಸಂತೋಷಪಟ್ಟು ಸರ್ವಶಕ್ತ ಪರಮಾತ್ಮನಿಗೆ ಋಣಿಯಾಗುವಂತೆ ಈ ಬಹುದೊಡ್ಡ ಗೆಲುವನ್ನು ವಿವರಿಸಬೇಕು ಎಂದು ಹೇಳುವ ರಾಜಾಜ್ಞೆಯೊಡನೆ ಕೋಟೆಯ ದೊಡ್ಡ ನಕ್ಷೆಯನ್ನು ಸಿದ್ಧಪಡಿಸಿ ಸಾಮ್ರಾಜ್ಯದ ಎಲ್ಲ ಸುಬೆಗಳಲ್ಲಿ ಕಳಿಸಬೇಕೆಂದು ಅಸದಖಾನನಿಗೆ ಅಪ್ಪಣೆಯಾಯಿತು. ಅಸದಖಾನನು ಆ ಮೇರೆಗೆ ಸಾಮ್ರಾಟನಾಜ್ಞೆಯನ್ನು ಪಾಲಿಸಿದನು.[೨೨]

ಅಡಿ ಟಿಪ್ಪಣೆಗಳು :

೧) "ಬುಧವಾರ, ಪ್ರಥಮ ದಿನ ರಬಿ II ಹಿಜರಿ ಶಕೆ ೧೧೯೮ (೨೫ ಜನೆವರಿ, ೧೬೮೮) ರಂದು ಸಾಮ್ರಾಟನು ವಿಜಾಪುರಕ್ಕೆ ಹೊರಟನು. ಮಂಗಳವಾರ ೧೪ನೇ ದಿನ ರಬಿ, II, ಎ.ಎಚ್. ೧೧೯೮ (೭ಫೆಬ್ರುವರಿ, ೧೬೮೮), ಸಾಮ್ರಾಟನು ಝುಫಾರಾಬಾದ, ಬೀದರಕ್ಕೆ ಬಂದನು. ಮತ್ತು ಕಮಾಠಾಣ ನದಿಯ ದಂಡೆಯ ಮೇಲೆ ವಸತಿ ಕೊಟ್ಟನು." ಎಂ.ಎ.೩೦೮

೨) ಬಹಾದೂರಗಡ ಮತ್ತು ಗುಲಶಾನಬಾದದ ಕಾಫಿರರನ್ನು ಶಿಕ್ಷಿಸಲು ಸೈನ್ಯ ಮತ್ತು ಕೆಲವು ನುರಿತ ಅಮೀರರೊಡನೆ ರಾಜಕುಮಾರ ಮಹಮ್ಮದ ಅಜಂಶಾಹನನ್ನು ಕಳಿಸಲಾಯಿತು. ಮತ್ತೊಂದು ಸೈನ್ಯದೊಂದಿಗೆ ಫಿರೋಜ ಜಂಗನನ್ನು ರಾಜಗಡದ ನೆರೆಹೊರೆಯ ಕೋಟೆಗಳ ಬಲ ಕುಂದಿಸಲು ಕಳಿಸಲಾಯಿತು. ಶೇಖ ನಿಜಾಮ ಹೈದರಾಬಾದಿ ಎಂದು ಇನ್ನೊಂದು ಹೆಸರಿನಿಂದಲೂ ಕರೆಯಲ್ಪಡುತ್ತಿದ್ದ ಮಖಾರುಬ ಖಾನನನ್ನು ಕಾಫಿರ ಸಾಂಭಾನೊಡನೆ ಹೋರಾಡಲು ಕಳಿಸಲಾಯಿತು. ರಾಜಕುಮಾರನ ಸೇನೆ ಅನುಭವಿಕ ೪೦೦೦ ಸೈನಿಕರನ್ನು ಹೊಂದಿತ್ತು." ಕೆ.ಕೆ. II, ೩೦೮.

೩) "೬ ನವೆಂಬರ, ೧೬೯೩ ರಂದು ಪಹಾಡ ಸಿಂಘನ ಮಗ ಕಿರಿಟ ಸಿರ್ಂನು ಸಾಮ್ರಾಜ್ಯ ಸೇನೆಗೆ ೨೫೦ (ಎರಡು ನೂರದಾ ಐವತ್ತು) ಗೌರವ ಸಿಪಾಯಿಗಳನ್ನು ತಂದು ಮೊಟ್ಟ ಪ್ರತಿ-ಸಿಪಾಯಿಗೆ ರೂ. ೨೫ (ಇಪ್ಪತ್ತೈದನ್ನು) ಪಡೆದನು."ಅಖಬರತ, ವರ್ಷ ೩೬.

೪) ಕಬಕಲಾಸನು ಸಾಂಭಾನನ್ನು ಬಿಡಲಿಲ್ಲ. ಕೊನೆವರೆಗೂ ಅವನ ಜೊತೆಯಲ್ಲಿಯೇ ಇದ್ದನು. ನೋಡಿ: ಎಂ.ಎ. ೩೩೧ ಮತ್ತು ಕೆ.ಕೆ. II, ೩೪೦

೫) ಸಾಮ್ರಾಟ ಸೈನ್ಯವು ಜುನ್ಯೆರಕ್ಕೆ ೩, ಜಮಾದ, ೧೧೦೮ (೨೫ ಫೇಬ್ರವರಿ, ೧೬೮೮) ರಂದು ತಲುಪಿತು. "೨೨ ಜಮಾದ ಗುರುವಾರ ಎ.ಎಚ್. ೧೧೦೮ (೧೫ ಮಾರ್ಚ ೧೬೮೮), ರಂದು ಸಾಮ್ರಾಟನು ಆ ಪಟ್ಟಣ ತಲುಪಿದನು." ಎಂ.ಎ.೩೧೦.

೬) ಸಾಕಿ ಅವನಿಗೆ ಕಪಿಕುಲಶ ಎಂದು ಕರೆಯುತ್ತಾನೆ. ಇಲ್ಲಿಯ ಪದ್ಯಗಳನ್ನು ಬಿಟ್ಟಿದೆ. ಫೋಲಿಯೊ ೧೫೦ ಅ ನೋಡಿರಿ.

೭) "ಸಾಂಭಾನ ಕೈಯಲ್ಲಿದ್ದ ಪರನಾಲಾ ಕೋಟೆಯನ್ನು ಕೈವಶಮಾಡಿಕೊಳ್ಳಲು ಮುಖಾರಬಖಾನ ಎಂಬ ಕುಲನಾಮವುಳ್ಳ ಶೇಖ ನಿಜಾಮ ಹೈದರಾಬಾದಿಯನ್ನು ನಿಯಮಿಸಲಾಯಿತು. ಅವನು ಆ ಕಾಫಿರನಿಗೆ ಸಂಬಂಧಿಸಿ ಸಮಾಚಾರ ತರಲು ಗುಪ್ತಚರರನ್ನು ಕಳುಹಿಸಿದನು. ತನ್ನ ಜ್ಞಾತಿಬಾಂಧವರಾದ ಶಿಕ್ಕೆ ಕುಟುಂಬದೊಡನಿದ್ದ ವೈರತ್ವದಿಂದಾಗಿ ಸಾಂಭಾನು ರಾಹಿರಿ ಕೋಟೆಯಿಂದ ಖಿಲ್ನಾಹ ಕೋಟೆಗೆ ಹೋಗಿ ಆ ಕುಟುಂಬದೊಡನೆ ಜಗಳ ಬಗೆಹರಿಸಿಕೊಂಡ ಬಳಿಕ ಈ ಕೋಟೆಗೆ ಸಂಬಂಧಿಸಿ ವ್ಯವಸ್ಥೆ ಒದಗಿಸುವಲ್ಲಿ ಮಾನಸಿಕ ಸಮಾಧಾನ ಹೊಂದಿದ ನಂತರ ತನ್ನ ಮಂತ್ರಿ ಕವಿಕಲಶನು ಸೋಮೇಶ್ವರದಲ್ಲಿ ಕಟ್ಟಿಸಿದ್ದ ಬೃಹತ್ ಕಟ್ಟಡವನ್ನು ಮತ್ತು ಉದ್ಯಾನವನ್ನು ನೋಡಲು ಅಲ್ಲಿ ಉಳಿದುಕೊಂಡು ಮನೋರಂಜನೆ ಮತ್ತು ಭೋಗದಲ್ಲಿ ಆತನು ತೊಡಗಿದ್ದಾನೆಂದು ಗುಪ್ತಚಾರರು ತಿಳಿಸಿದರು." ಎಂ.ಎ.೩೨೦-೨೧, ಹಾಗೆಯೇ ಕೆ.ಕೆ. II, ೩೪೦ ನೋಡಿ.

೮) ಸಾಂಭಾಜಿಗೆ ಶತ್ರು ಸೈನ್ಯ ಬರುವುದನ್ನು ಕುರಿತು ಎಚ್ಚರಿಕೆ ನೀಡಲಾಗಿತ್ತು. ಆದರೆ ಅವನು ಗೂಢಚಾರರ ಪ್ರಯತ್ನವನ್ನು ಹಿಯಾಳಿಸುತ್ತ ಗದ್ದರಿಸಿದ್ದನು. "ಎಚ್ಚರಿಕೆಯಿಲ್ಲದ ನೀವು ಹುಚ್ಚರು ಯಾವ ಮುಘಲ ಸೈನ್ಯ ಇಲ್ಲಿ ಬರಲು ಸಾಧ್ಯ?" ಎಂ.ಎ., ೩೨೧.

"ತನ್ನ ಗೂಢಾಚಾರರ ನಾಲಿಗೆಗಳನ್ನು ಕತ್ತರಿಸಿ ಹಾಕಲು ಅವನು ಆಜ್ಞಾಪಿಸಿದನು. "(ಸ್ಪಷ್ಟವಾಗಿ ಇದು ಕಾಫಿಖಾನನ ಕಲ್ಪನಾ ವೈಖರಿಯ ರೀತಿ) ಕೆ.ಕೆ. II, ೩೮೫.

೯) "ಸಾಂಭಾಜಿ ತ್ವರಿತವಾಗಿ ತನ್ನ ತಲೆಗೂದಲನ್ನು ಮತ್ತು ಗಡ್ಡವನ್ನು ಬೋಳಿಸಿಕೊಂಡು, ತನ್ನ ಮೈಯೆಲ್ಲ. ಭಸ್ಮ ಬಳಿದುಕೊಂಡು ಸನ್ಯಾಸಿ ವೇಷ ಧರಿಸಿದನು. ಆದರೆ ಅವನ ಪೋಷಾಕಿನ ಕೆಳಗಿರುವ ಮುತ್ತಿನ ಕಂಠಹಾರ ಮತ್ತು ಕುದುರೆಯ ಆಯಾಲದ ಸುತ್ತಲಿದ್ದ ಬಂಗಾರದುಂಗುರ ಗಳಿಂದಾಗಿ ಅವನು ಗುರುತಿಸಲ್ಪಟ್ಟನು." ಕೆ.ಕೆ. II, ೩೮೬. "ಇಖಲಾಸಖಾನನು ಶೂರರ ಗುಂಪಿನೊಂದಿಗೆ ಒಳಗೆ ಬಂದು ರಾಜಾನನ್ನು ಮತ್ತು ಅವನ ಮಂತ್ರಿಯನ್ನು ಅವರ ಕೂದಲು ಹಿಡಿದು ಉಳಿದೆಲ್ಲರಿಂದ ಹೊರಗೆಳೆದನು. ಹಾಗೂ ಅವರನ್ನು ತನ್ನ ಆನೆಯ ಮೇಲೆ ಕೂಡಿಸಿ ಸೇನಾನಿಯ ಹತ್ತಿರ ಹೊರತಂದನು."ಎಂ.ಎ. ೩೨೦-೨೨.

೧೦) ತನಗಾದ ಶ್ರಮವನ್ನು ತಾಳ್ಮೆಯಿಂದ ಸಹಿಸಿಕೊಂಡು ಮುಖಾರಬಖಾನನು ಒಮ್ಮೆಲೇ ಸಾಂಭಾನ

ಮೇಲೆ ಗಾಳಿ ವೇಗದಿಂದ ಮಿಂಚಿನೋಪಾದಿಯಲ್ಲಿ ಎರಗಿದನು. ಆ ನೀಚನು ನಾಲ್ಕೈದು ಸಾವಿರ ದಖನಿ ಭರ್ಚಿಧಾರಿಗಳ ಸಹಾಯದಿಂದ ಖಾನನೊಡನೆ ಹೋರಾಡಿದನು. ಕವಿಕುಲಶನು ಅಕಸ್ಮಾತ್ತಾಗಿ ಪೆಟ್ಟು ತಿಂದು ಓಡಿ ಹೋದನು. ಅದೇ ಆಕರ. ೩೧೨

"ಕಬಕಲಾಸ ಅವನನ್ನು (ಸಾಂಭಾನನ್ನು) ಉಳಿಸಲು ಸರ್ವ ಪ್ರಯತ್ನ ಪಟ್ಟನು. ಮರಾಠಾ ದಳದೊಂದಿಗೆ ಮುಂದೆ ಬಂದು ಹೋರಾಟವನ್ನು ಎದುರಿಸಲು ತೊಡಗಿದಾಗ ಅವನ ಬಲ ತೋಳಿಗೆ ಬಾಣ ನಟ್ಟು ಅದು ನಿಶ್ಚೇಷ್ಟಿತ ಅಂಗವಾಯಿತು. ತಾನು ಅಲ್ಲಿಯೇ ಉಳಿಯುವೆನೆಂದು ಉದ್ಗರಿಸುತ್ತ ಕವಿಕಲಶನು ಕುದುರೆಯಿಂದ ಕೆಳಗುರುಳಿದನು. ಹೋರಾಟಕ್ಕೆ ತಿರುಗೇಟು ನೀಡಲು ನಿಂತಿದ್ದ ಸಾಂಭಾ ಕುದುರೆಯಿಂದ ಕೆಳಗೆ ದುಮ್ಮಿಕ್ಕಿ ಅವನೊಡನೆಯೇ ನಿಲ್ಲುವೆನೆಂದು ಘೋಷಿಸಿದನು. ನಾಲ್ಕೈದು ಮರಾಠರು ಕತ್ತರಿಸಲ್ಪಟ್ಟರು. ಆದರೆ ಸಾಂಭಾನ ಉಳಿದ ಜನರು ಅಲ್ಲಿಂದ ಓಡಿ ಹೋದರು. ಕಬಕಲಾಸನನ್ನು ಸೆರೆ ಹಿಡಿಯಲಾಯಿತು." ಕೆ.ಕೆ. II, ೩೮೮.

೧೧) "ವಿಜಯದ ಸಂತೋಷ ಸಂಗೀತು ಆಗಸದಲ್ಲೆಲ್ಲ ಅನುಕರಣಿಸಿತು. ಶಾಂತಿ ಮತ್ತು ಸುರಕ್ಷೆ ಪುನಸ್ಥಾಪಿತವಾದವು. ಅವ್ಯವಸ್ಥೆ ಮಾಯವಾಯಿತು. ಸೈತಾನನನ್ನು ಸರಪಳಿಯಿಂದ ಕಟ್ಟಲಾಯಿತು." ಎಂ.ಎ. ೩೨೦. ಶಿವಾಜಿ ಕಟ್ಟಿದ ಶಾಹಿರಿ ಕೋಟೆಯ ಸಮೀಪದಲ್ಲಿ ಅವನು ಅಬುಲ್‌ರಝಾಕ ಲಾರಿಯೊಡನೆ ಇರುತ್ತಿದ್ದನು. ಶಿವಾಜಿ ಕಾಫಿರ ಮತ್ತು ಬಂಡುಕೋರನಾಗಿದ್ದರೂ ತಿಳುವಳಿಕೆಯುಳ್ಳ ಮನುಷ್ಯನಾಗಿದ್ದನೆಂದು ಅವನಿಗೆ ನೆರೆಹೊರೆಯಲ್ಲಿ ಜನರಿಂದ ತಿಳಿದಿತ್ತು. ಆ ಪ್ರದೇಶವೆಲ್ಲ ನರಕದ ಒಂದು ಮಾದರಿಯಾಗಿದೆ. ಯಾಕೆಂದರೆ ಅದು ಪ್ರಷ್ಟುಬದ್ಧವಾದ ಗುಡ್ಡಗಾಡು ಪ್ರದೇಶವಾಗಿದೆ. ಬೇಸಿಗೆಯಲ್ಲಿ ನೀರು ಬಹು ವಿರಳವಾಗಿದ್ದರಿಂದ ಅಲ್ಲಿಯ ನಿವಾಸಿಗಳಿಗೆ ಬಹಳ ಕಷ್ಟವಾಗಿತ್ತು. ಶಿವಾಜಿ ತನ್ನ ನಿವಾಸದ ಹತ್ತಿರ ಬಾವಿಯೊಂದನ್ನು ತೋಡಿಸಿದ್ದನು. ಬಾವಿಯ ಬಾಯಿಯ ಸುತ್ತ ಕಲ್ಲು ನೆಲವನ್ನು ನಿರ್ಮಿಸಲಾಗಿತ್ತು. ಮತ್ತು ಕಲ್ಲೊಂದನ್ನು ನೆಡಲಾಗಿತ್ತು. ಈ ಕಲ್ಲು ಹಾಸು ಪೀಠದ ಮೇಲೆ ಶಿವಾಜಿ ಕೊಡುತ್ತಿದ್ದ ವ್ಯಾಪಾರಿಗಳ ಹೆಣ್ಣುಮಕ್ಕಳು ಮತ್ತು ಬಡಜನರು ನೀರು ತೆಗೆದುಕೊಳ್ಳಲು ಇಲ್ಲಿಗೆ ಬಂದಾಗ ಅವರ ಮಕ್ಕಳಿಗೆ ಹಣ್ಣುಗಳನ್ನು ಕೊಡುತ್ತಿದ್ದ ಮತ್ತು ತನ್ನ ತಾಯಿ ಸಹೋದರಿಯರೊಡನೆ ಮಾತಾಡುವಂತೆ ಅಲ್ಲಿ ಬಂದ ಸ್ತ್ರೀಯರೊಡನೆ ಮಾತಾಡುತ್ತಿದ್ದ. ಸಾಂಭಾನು ಈ ಉದ್ದಾದ ಪೀಠದ ಮೇಲೆ ಕೂಡುತ್ತಿದ್ದ. ರೈತರ ಪತ್ನಿಯರು, ಹೆಣ್ಣುಮಕ್ಕಳು ನೀರೊಯ್ಯಲು ಅಲ್ಲಿಗೆ ಬಂದಾಗ ಆ ಕಾಡು ನಾಯಿ ತನ್ನೊಂದು ಕೈಯನ್ನು ಅವರ ಕೊಡದ ಮೇಲಿಟ್ಟು ಇನ್ನೊಂದನ್ನು ಅವರ ಟೊಂಕದ ಮೇಲಿಡುತ್ತಿದ್ದ ಮತ್ತು ಅವರನ್ನು ತಾನು ಕೂಡುವ ಪೀಠಕ್ಕೆ ಜಗ್ಗುತ್ತಿದ್ದ. ಹೀಗೆ ಅಸಭ್ಯವಾಗಿ ಅವಿನಯವಾಗಿ ಅವರೊಡನೆ ವ್ಯವಹರಿಸಿ ಅವರನ್ನು ಅಲ್ಲಿ ಒಂದು ಕ್ಷಣ ಕಾಲ ತಡೆಯುತ್ತಿದ್ದ. ಬಡಪಾಯಿ ಹೆಣ್ಣು ತನ್ನನ್ನು ತಾನು ರಕ್ಷಿಸಿಕೊಳ್ಳಲಾರದೆ ತನ್ನ ತಲೆ ಮೇಲಿನ ಕೊಡವನ್ನು ಕೆಳಕ್ಕೆ ಎಸೆಯುತ್ತಿದ್ದಳು. ಆದರೂ ಈ ತರನಾದ ಒರಟಾದ ಅಪಮಾನದಿಂದ ಪಾರಾಗಲು ಸಾಧ್ಯವಿರಲಿಲ್ಲ. ಕೊನೆಗೆ ಅವನ ತಂದೆ ನೆಲೆಮಾಡಿಕೊಟ್ಟ ರೈತರು ಆ ನೆಲವನ್ನು ತ್ಯಜಿಸಿ ಸಮೀಪದಲ್ಲಿದ್ದ ಫಿರಂಗಿಗಳ ಪ್ರದೇಶಕ್ಕೆ ಓಡಿ ಹೋದರು. ಅವನು ತನ್ನ ಕೃತ್ಯಗಳ ಫಲವನ್ನು ಪಡೆದನು" ಕೆ.ಕೆ. II, ೩೯೦.

೧೨) ಅಲ್ಲಿ ಉಪಸ್ಥಿತನಿದ್ದ ವ್ಯಕ್ತಿಯೆಂದರೆ ಮುಖಾರಬ ಖಾನನು ಕೆ.ಕೆ. II. ೩೯೧

೧೩) ಈಶ್ವರದಾಸನು ಸಾತಾರಾವನ್ನು ಸಾಲಹೀರ ಎಂದು ಗೊಂದಲಗೊಳಿಸುತ್ತಾನೆ.

೧೪) ಈಶ್ವರದಾಸನು ರಾಹಿರಿ ಕೋಟೆಯನ್ನು ರಾಜಗಡ ಕೋಟೆಯೆಂದು ತಪ್ಪಾಗಿ ಭಾವಿಸುತ್ತಾನೆ. ಇತಿಖದ ಖಾನ ಇವನನ್ನು ಝುಲ್ಫಿಕರ ಖಾನ ಬಹಾದೂರ ಎಂದು ತಪ್ಪಾಗಿ ತಿಳಿಯುತ್ತಾನೆ. "ಡಿಸೆಂಬರ ೧೬೮೮ ರಷ್ಟು ಹಿಂದೆಯೇ ಇತಿಖತ ಖಾನನನ್ನು (ವಜೀರ ಅಸದಖಾನನ ಮಗ) ರಾಯಗಢವನ್ನು ಮುತ್ತಲು ಕಳಿಸಲಾಯಿತು. ಸುದೀರ್ಘ ಹೋರಾಟದ ನಂತರ ಅವನು ೧೯ ಅಕ್ಟೋಬರ, ೧೬೮೯ ರಂದು ಕೋಟೆಯನ್ನು ಕೈವಶಮಾಡಿಕೊಂಡನು. ಅಲ್ಲಿದ್ದ ಶಿವಾಜಿಯ ಬದುಕಿದ್ದ ವಿಧವೆಯರನ್ನು ಸಾಂಭಾನ ಮತ್ತು ರಾಜಾ ರಾಮನ ಹೆಣ್ಣು ಮಕ್ಕಳ ಮತ್ತು ಪುತ್ರರನ್ನು ಮತ್ತು ಏಳು ವರುಷದ ಬಾಲಕ ಸಾಹುನನ್ನು ಕೈವಶಮಾಡಿಕೊಂಡನು." ನೋಡಿ: ಎಂ.ಎ.೩೩೧ ಮತ್ತು ಕೆ.ಕೆ. II, ೩೮೪.

೧೫) "೨೩ ನವೆಂಬರ ೧೬೮೯ ರಂದು ಕೈದಿಗಳನ್ನು ಗೋರೆಗಾಂವದಲ್ಲಿದ್ದ ಸಾಮ್ರಾಜ್ಯ ಬಿಡಾರಕ್ಕೆ ಒಯ್ಯಲಾಯಿತು". ಮರ್ಯಾದೆ ಮತ್ತು ಏಕಾಂತತೆಯ ದೃಷ್ಟಿಯಿಂದ ಸ್ತ್ರೀಯರನ್ನು ಪ್ರತ್ಯೇಕವಾದ ಶಿಬಿರದಲ್ಲಿ ಮಲಗಿಸಲಾಯಿತು. ೭೦೦೦ ದರ್ಜೆಯ ಸ್ಥಾನವನ್ನು (ಮನಸಬವನ್ನು) ಮತ್ತು ರಾಜಾ ಎಂಬ ಬಿರುದನ್ನು ಸಾಹುನಿಗೆ ಕೊಟ್ಟು ಅವನನ್ನು ಸೆರೆಯಾಳೆಂದು ಸಾಮ್ರಾಜ್ಯ ಶಿಬಿರದ ಹತ್ತಿರ ಇಡಲಾಯಿತು. ಅವನ ಸಹೋದರರಾದ ಮದನ ಸಿಂಘ ಮತ್ತು ಆಧುಸಿಂಘ ಇವರು ತಮ್ಮ ತಾಯಂದಿರು ಮತ್ತು ಅಜ್ಜಿಗಳೊಡನೆ ಇರಲು ಅನುಮತಿಸಲಾಯಿತು. ಅಲ್ಲದೆಅವರಿಗೆ ಯೋಗ್ಯವಾದ ಭತ್ಯ ಮತ್ತು ಅಧಿಕಾರಿಗಳನ್ನು ಒದಗಿಸಲಾಯಿತು. ಎಂ.ಎ.೩೩೨ ಅದರಂತೆ ನೋಡಿ ಕೆ.ಕೆ. II, ೩೮೬.

೧೬) ಸಾಂಭಾನ ಮೂವರು ದಳಪತಿಗಳು ಮತ್ತು ಅವನ ಪುತ್ರರು 'ಮನಸಬಿ ಅಲಿಯಾ' ಕೊಡಲ್ಪಟ್ಟನು. ಎಂದು ಈಶ್ವರದಾಸನು ಹೇಳುತ್ತಾನೆ. ಸಾಮಾನ್ಯವಾಗಿ ೧೦೦೦ ಮತ್ತು ಹೆಚ್ಚಿನ ದರ್ಜೆಯ ಮನಸಬದಾರರು 'ಮನಸಬಿ ಅಲಿಯಾ' ಎಂದು ಉಲ್ಲೇಖಿಸಲ್ಪಟ್ಟಿದ್ದಾನೆ. ಅಠಾರ ಅಲಿ, op-cit, ೨೭೧ ಇದನ್ನು ಗಮನಿಸಿ.

೧೭) ಮುಖಾರಬಖಾನನು ಅವನನ್ನು ಅದೇ ಆನೆಯ ಮೇಲೆ ತನ್ನ ಹಿಂದೆ ಕುಳಿತು ಬರುವಂತೆ ಮಾಡಿದನು; ಉಳಿದ ಸೆರೆಯಾಳುಗಳನ್ನು ಸರಪಳಿ ಹಾಕಿ ಕಟ್ಟಲಾಯಿತು. ಕೆಲವರನ್ನು ಆನೆಗಳ ಮೇಲೆಯೂ ಕೆಲವರನ್ನು ಕುದುರೆಗಳ ಮೇಲೆಯೂ ಎಳೆದೊಯ್ಯಲಾಯಿತು.

೧೮) ಔರಂಗಜೇಬನು ಸಂಪ್ರದಾಯದಂತೆ ಪ್ರಾರ್ಥನೆ ಸಲ್ಲಿಸುತ್ತಿದ್ದಾಗ ಕವಿಕಲಶನು ಹಿಂದಿಯಲ್ಲಿ ಆಶು ಕಾವ್ಯದಲ್ಲಿ ಸಂಭಾಜಿಯನ್ನು ಸಂಬೋಧಿಸುತ್ತ ಹೇಳಿದನು, ಓ ರಾಜನೆ, ಔರಂಗಜೇಬನು ಕೂಡ ನಿನ್ನ ಸನ್ನಿಧಿಯಲ್ಲಿ ಸಿಂಹಾಸನದ ಮೇಲೆ ಕೂಡಲಾರದೆ ಮಂಡಿಯೂರಿ ನಿನಗೆ ನಮಸ್ಕರಿಸಲೇ ಬೇಕು." ಅದೇ ಗ್ರಂಥ, II, ೩೮೮.

೧೯) ಕೆ.ಕೆ. ಹೇಳುವುದೇನೆಂದರೆ ಸಾಂಭಾನ ಅನುಯಾಯಿಗಳು ಕೋಟೆಗಳ ಕೀಲಿಕೈಗಳನ್ನು ಒಪ್ಪಿಸಬೇಕೆಂಬ ಶರತ್ತಿನ ಮೇಲೆ ಸಾಂಭಾ ಮತ್ತು ಕವಿಕಲಶರ ಜೀವವನ್ನುಳಿಸಿ ಅವರನ್ನು ಶಾಶ್ವತ ಬಂಧನದಲ್ಲಿಡಬೇಕು ಎಂದು ಕೆಲವು ರಾಜ ಸಲಹೆಗಾರರು ಸಲಹೆ ನೀಡಿದರು. ಸಾಂಭಾ ಮತ್ತು ಕವಿಕಲಶ ಇಬ್ಬರೂ ಅಶ್ಲೀಲ ಭಾಷೆಯಲ್ಲಿ ಸಾಮ್ರಾಟನೆದುರು ಮನಸ್ಸಿಗೆ ಆಘಾತಕಾರಿಯಾದ ಮಾತುಗಳನ್ನಾಡಿದರು. ಕೆ.ಕೆ. II, ೩೯೦.

೨೦) ಇನ್ನು ಮುಂದೆ ಅಪಮಾನಕಾರಿಯಾಗಿ ಮಾತಾಡದಂತೆ ಸಾಂಭಾ ಮತ್ತು ಕವಿಕಲಶ ಇಬ್ಬರ

ನಾಲಿಗೆಗಳನ್ನು ಕತ್ತರಿಸಿ ಹಾಕಲು ಸಾಮ್ರಾಟನು ಆಜ್ಞೆಯನ್ನಿತ್ತನು. ಆ ಬಳಿಕ ಅವರ ಕಣ್ಣುಗಳನ್ನು ಕೀಳುವುದಿತ್ತು." ಅಲ್ಲೇ, II, ೩೯೧; ಎಂ.ಎ.೩೨೩.

೨೧) "ಆ ಬಳಿಕ ಇನ್ನುಳಿದ ಹತ್ತೆಂಟು ಜನರೊಂದಿಗೆ ಬೇರೆ ಬೇರೆ ಹಿಂಸೆಗೊಳಪಡಿಸಿ ಅವರನ್ನು ಕೊಲ್ಲಬೇಕೆಂದು ಮತ್ತು ಕೊನೆಗೆ ಸಾಂಭಾ ಮತ್ತು ಕವಿಕಲಶ ಇಬ್ಬರ ತಲೆ ಚರ್ಮವನ್ನು ಹುಲ್ಲಿನಿಂದ ತುಂಬಿ ದಕ್ಷಿಣ ಭಾರತದ ಎಲ್ಲ ಪಟ್ಟಣಗಳಲ್ಲಿ ನಗರಗಳಲ್ಲಿ ನಗಾರಿ ಧ್ವನಿ ಮತ್ತು ಕಹಳೆ ಉದುತ್ತ ಪ್ರದರ್ಶಿಸಬೇಕು. ಎಂದು ಆಜ್ಞೆಯಾಯಿತು." ಕೆ.ಕೆ. II, ೩೯೦. "೧೨ನೇ ದಿನ ಜಮಾದ I, ೧೧೯೯ ರಂದು (೩-೩-೧೬೮೯೦) ಗೋರೆಗಾಂವಕ್ಕೆ ಸಾಮ್ರಾಟನು ಬಂದ ನಂತರ ಕವಿಕಲಶನೊಂದಿಗೆ ಸಾಂಭಾನನ್ನು ಖಡ್ಗದಿಂದ ಸೋಮವಾರ ೨೯ನೇ ದಿನ ಜಮಾದ, I , (೧೧ ಮಾರ್ಚ, ೧೬೮೯) ರಂದು ಕೊಲ್ಲಲಾಯಿತು."

ಎಂ.ಎ. ೩೨೫; 'ಇನಶಾ', ೧೫೬ ಬವನ್ನು ಮತ್ತು ಸ್ಟೋರಿಯಾ', II, ೩೧೧ನ್ನು ನೋಡಿರಿ.

೨೨) ಸಾತಾರಾವನ್ನು ೨೧ ಎಪ್ರಿಲ್, ೧೭೦೦ ರಂದು ಸಂಭಾಜಿಯಿಂದ ವಶಪಡಿಸಿಕೊಳ್ಳಲಾಯಿತು.ಇಲ್ಲಿ ಈಶ್ವರದಾಸನು ಸಾತಾರಾವನ್ನು ಸಾಲಹೀರ ಎಂದು ತಪ್ಪಾಗಿ ತಿಳಿದಿದ್ದಾನೆ. ಆ ವಿಜಯದ ಒಳ್ಳೆಯ ವಿವರವನ್ನು ಕೊಡುತ್ತಾನೆ.

■

*

ರಾಜಗಡ ಕೋಟೆಯ ವಿಜಯ, ಸಾಂಭಾನ ತಮ್ಮ ರಾಜಾರಾಮನನ್ನು ಬೆನ್ನಟ್ಟಿದ್ದು ಮತ್ತು ರಾಣಿಯ ಮನೆಗೆ ಅವನು ಬಂದದ್ದು

ಹರಕಾರರು ಸಾಮ್ರಾಟನಿಗೆ ವರದಿ ಮಾಡಿದರು, "ಪಾಪಿಷ್ಠ ಸಾಂಭಾನ ತಮ್ಮನಾದ ರಾಜಾರಾಮನು ರಾಜಗಡದಲ್ಲಿ ಆಶ್ರಯ ಹೊಂದಿದ್ದಾನೆ. ಮತ್ತು ಪ್ರತಾಪರಾವ, ಹಮೀರರಾವ, ರೂಪಾ ಭೊಂಸಲೆ, ಅಂಬೂಜಿ ಖೋಸಲೆ ಮತ್ತು ಉಳಿದ ಸರದಾರರು ಅವನ ಸುತ್ತಲು ನೆರೆದಿದ್ದರು."[1] ತತ್‌ಕ್ಷಣವೇ ಸಾಮ್ರಾಟನು ರಾಜಾ ಕಿಶೋರಸಿಂಘನನ್ನು ಆ ಕೋಟೆಯನ್ನು ಗೆದೆಯಲು ನಿಯಮಿಸಿ ಮೀರ ಇನಾಮತುಲ್ಲಾಹ, ಮೀರ ಅಬ್ಬುಸ್ ಸಮದ, ಮಿರ್ಜಾ ಖಾಲಿಲುಲ್ಲಾಹ ಮುಂತಾದವರು ಮತ್ತು ಐವತ್ತು ಮನಸಬದಾರರು ಆ ರಾಜನೊಡನೆ ಹೋಗಬೇಕೆಂದು ಆಜ್ಞಾಪಿಸಿದನು. ರಾಜಾರಾಮ ಮತ್ತು ಅವನ ಸುತ್ತಲಿದ್ದವರನ್ನು ಜೀವಂತವಾಗಿ ಹಿಡಿಯಬೇಕು. ಇಲ್ಲದಿದ್ದರೆ ಅವರೊಡನೆ ಅವನನ್ನು ಕೊಲ್ಲಬೇಕು. ಆದರೆ ಯಾವ ಕಾಲಕ್ಕೂ ಅವರು ತಪ್ಪಿಸಿಕೊಳ್ಳಬಾರದು. ಹೀಗಾಗುವಂತೆ ಸಮಂಜಸ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಹೇಳಿ ಸಾಮ್ರಾಟನು ಅವನನ್ನು ಕಳಿಸಿಕೊಟ್ಟನು.

ಹಾಗೆ ಅನುಮತಿ ಪಡೆದು ಹೊರಟ ರಾಜಾ ಪ್ರಯಾಣ ಮಾಡಿ ರಾಜಗಡ ಕೋಟೆಗೆ ತಲುಪಿದನು. ಒಂದು ತಿಂಗಳು ಹದಿನೈದು ದಿನಗಳವರೆಗೆ ಫಿರಂಗಿ ಕಾಳಗ ನಡೆಯಿತು. ಅಕಸ್ಮಾತಾಗಿ ತುಪಾಕಿ ಮದ್ದಿನ ಶಸ್ತ್ರಾಗಾರಕ್ಕೆ ಬೆಂಕಿ ಬಿದ್ದು,ಅದರ ಸ್ಫೋಟದಿಂದ ಕೆಲವು ಕಡೆಗಳಲ್ಲಿ ಕೋಟೆ ರಕ್ಷಣಾ ಗೋಡೆ ಹಾರಿಹೋಯಿತು. ಮತ್ತು ಎರಡು ನೂರು ಶತ್ರು ಸೈನಿಕರು ಸಾವಿಗೀಡಾದರು. ಅದರ ಪಾಳು ಗೋಡೆಯ ಕಲ್ಲುಮಣ್ಣು ಸಾಮ್ರಾಜ್ಯ ಸೇನೆಯ ರಕ್ಷಣಾ ಕಂದಕಗಳಲ್ಲಿ ಬಿದ್ದಿತು. ತಬ್ಬಿಬ್ಬಾದ ರಾಜಾರಾಮನು ಸಾಮ್ರಾಜ್ಯದ ಅಧಿಕಾರಿಗಳಿಗೆ ಶರಣಾಗಲು ಮುಂದಾದನು. ಎರಡು ಮೂರು ದಿನಗಳವರೆಗೆ ಶುಭ ಮೂಹುರ್ತದ ನೆವ ಹೇಳುತ್ತ ವಿಳಂಬ ಮಾಡಿದನು. ರಾತ್ರಿ ವೇಳೆಯಲ್ಲಿ ಅವನು ಪ್ರತಾಪ ರಾವ, ಹಮೀರರಾವ ಮತ್ತು ಉಳಿದ ಅಯೋಗ್ಯ ಪ್ರಮುಖರೊಡನೆ ಕೋಟೆಯ ಹೊರಗೆ

ಬಂದು ಪಾರಾಗಿ ಹೋದನು. ರಾಜಾ ರಾಮನ ಪಲಾಯನದ ನಂತರ ರಾಜಾಕಿಶೋರ ಸಿಘನು ಕೋಟೆಯನ್ನು ಪ್ರವೇಶಿಸಿ ಕೋಟೆ ಕೈವಶವಾಗಿದ್ದನ್ನು ಮತ್ತು ರಾಜಾರಾಮನ ಪಲಾಯನವನ್ನು ತಿಳಿಸುವ ಓಲೆಯನ್ನು ರಾಜಕುಮಾರ ಮುಹಮ್ಮದ ಆಜಂನಿಗೆ ಕಳಿಸಲಾಗಿ ಆ ಓಲೆಯನ್ನು ಮತ್ತು ಕೋಟೆಯ ಬಂಗಾರ ಕೀಲಿಕೈಗಳನ್ನು ಪ್ರಭು ಸನ್ನಿಧಿಗೆ ಕಳಿಸಲಾಯಿತು. ಪತ್ರವನ್ನು, ಕೀಲಿಕೈಯನ್ನು ನೋಡಿದ ಮೇಲೆ ಮಹಾಪ್ರಭು ಓಲೆಕಾರನಿಗೆ ರೂ. ನೂರು ಬಹುಮಾನವಾಗಿ ಕೊಟ್ಟು, ರಾಜಕುಮಾರನ ವಕೀಲ ಮೀರ ಘಿಯಾಸುದ್ದೀನನಿಗೆ ಗೌರವ ನಿಲುವಂಗಿಯನ್ನು ನೀಡಿ, ರಾಜಾ ಕಿಶೋರ ಸಿಂಘನ ಮನಸಬವನ್ನು ಎರಡು ನೂರು ಸವಾರರಿಂದ ಹೆಚ್ಚಿಸಿದನು. ಮತ್ತು ಅಬ್ದುಲ್ ಖೈರಖಾನನನ್ನು ಆ ಕೋಟೆಗೆ ಅಧಿಪತಿಯನ್ನಾಗಿ ನಿಯಮಿಸಿದನು.

ಸಯೀದ ಅಬ್ದುಲ್ಲಾಖಾನ ಮತ್ತು ಬಹಾದೂರಖಾನರಿಗೆ ರಾಜಾರಾಮ ಮತ್ತು ಆತನ ಸಂಗಡಿಗರ ವಾಸಸ್ಥಳವನ್ನು ಖಚಿತಪಡಿಸಿಕೊಳ್ಳಬೇಕೆಂದು ಅಪ್ಪಣೆಯಾಯಿತು. ಅವಶ್ಯವಾಗಿ ಬೇಕಾಗಿರುವ ಮಾಹಿತಿಯನ್ನು ಪಡೆದುಕೊಂಡು ಅವರು ತೀವ್ರಗತಿಯಲ್ಲಿ ದಂಡುಗೈಯಬೇಕು. ಮತ್ತು ಈ ದುರ್ದೈವಿ ವ್ಯಕ್ತಿಗಳನ್ನು ಬಂಧಿಸಬೇಕು. ಇಲ್ಲವೆ ಕೊಲ್ಲಬೇಕು ಎಂದು ತಿಳಿಸಬೇಕು.

ರಾಜಾರಾಮನ ಪ್ರಮುಖ ಸರದಾರನಾಗಿದ್ದ ಕೇಶೋಜಿ ಪಂಡಿತ ದುಷ್ಟ ಯೋಜನೆಗಳನ್ನಿಟ್ಟುಕೊಂಡು ದೊಡ್ಡ ಸೈನ್ಯದೊಂದಿಗೆ ಕರ್ನಾಟಕದ ಕಡೆಗೆ ಹೊರಟನೆಂದು ವರದಿ ಬಂದಿತು. ಆದ್ದರಿಂದ ಸಯೀದ ಅಬ್ದುಲ್ಲಾಖಾನ ಮತ್ತು ಬಹಾದೂರಖಾನ ರಾಮನನ್ನು ಬೆನ್ನಟ್ಟುವುದನ್ನು ಮುಂದೂಡಿದರು. ಆ ಪಂಡಿತನನ್ನು ಶಿಕ್ಷಿಸಬೇಕೆಂದು ಅವರಿಗೆ ಅಪ್ಪಣೆಯಾಯಿತು.

ತನ್ಮಧ್ಯ ಪೆಯಿನ (ಘಾಟ)ದ ಫೌಜದಾರ ನಹಾರಖಾನ ವರದಿ ಸಾದರ ಪಡಿಸಿದನು. "ರಾಜಾರಾಮ ತನ್ನ (ಪೌಜಿದಾರಿ) ಪ್ರವೇಶದಲ್ಲಿ ೨೫ ಕರೋಹ ಅಂತರದಲ್ಲಿ ಹಾದು ಹೋದನು. ಮತ್ತು ಬಧುನೂರ ಕಡೆಗೆ ಹೋಗಿದ್ದನು". ಈ ಪಾಪಿಷ್ಠ ದಂಗೆಕೋರರನ್ನು ಶಿಕ್ಷಿಸಲು ಸಾಮ್ರಾಟನು ದೃಢ ನಿರ್ಣಯ ಕೈಗೊಂಡನು. ಜಲ್ಫಿಕಾರ ಖಾನ ಬಹಾದೂರನಿಗೆ ಗೌರವದ ನಿಲುವಂಗಿ, ಸಾಂಭಾನ ಆನೆಯ ಮೇಲೆ ಒಯ್ಯುತ್ತಿದ್ದ ರಾಜ ಧ್ವಜಗಳು, ಬಂಗಾರ ಆಭರಣಾಲಂಕೃತಒಂದು ಕುದುರೆ ರತ್ನ ಖಚಿತ ಖಡ್ಗ, ಬತ್ತಳಿಕೆ ಮತ್ತು ವಿಶೇಷ ಬಿಲ್ಲು ಇವುಗಳನ್ನು ಸಾಮ್ರಾಟನು ಪ್ರದಾನ ಮಾಡಿದನು. ರಾಜಾರಾಮನನ್ನು ದಂಡಿಸಲು ಅವನನ್ನು ನಿಯಮಿಸಿ ಕಳುಹಿಸಿಕೊಟ್ಟನು. ಸರಫರಾಜಖಾನ, ಘಾಜನಫರಖಾನ, ಅಜಮುತುಲ್ಲಾಖಾನ, ಮುಜಾಹಿದಖಾನ, ಬರ್ಖ ಅಂದಾಜ ಖಾನ, ರಾಜಾ ಇಂದರ ಸಿಂಘ, ರಾಜಾ ಶಿವ ಸಿಂಘ, ಖಾಂಡೋಜಿ ಮತ್ತು ಮಾಧೋಜಿ ಮುಂತಾದವರ ಮನಸಬಗಳನ್ನು ಹೆಚ್ಚಿಸಲಾಯಿತು. ಮತ್ತು ಜಲ್ಫಿಕರ ಖಾನನೊಡನೆ ಅವರೆಲ್ಲ ಹೋಗಬೇಕೆಂದು ಆಜ್ಞೆಯಾಯಿತು. ಅದೇ ತೆರನಾಗಿ ಮನೆಯಲ್ಲಿ ಹುಟ್ಟಿದ (ಖಾನಾಜಾದ) ಅಬ್ದುಲಕರೀಂಖಾನನ

ಮನಸಬವನ್ನು ಐದು ನೂರುರಿಂದ ಹೆಚ್ಚಿಸಲಾಯಿತು. ಸಾಮ್ರಾಜ್ಯ ಸೇನೆಯ ಮುಂಚೂಣಿ ಅಧಿಪತಿಯಾಗಿ ನಿಯಮಿಸಲ್ಪಟ್ಟ ಈತನು ಸೇನೆಗಿಂತ ಒಂದು ಮಜಲು ಮುಂದೆ ಸಾಗಬೇಕೆಂದು ಅಪ್ಪಣೆಯಾಯಿತು.

ಜುಲ್ಫಿಕರಖಾನನು ದಂಡು ಪ್ರಯಾಣದ ನಾಲ್ಕೈದು ಮಜಲುಗಳನ್ನು ಕ್ರಮಿಸಿದ್ದನು. ಆಗ ಕರ್ನಾಟಕದ ಕಡೆಗೆ ಹೊರಟು ಅಲ್ಲಿಗೆ ಹೋಗದೆ ಮಾಯವಾಗಿದ್ದ ಕೇಶೋಜಿ ಪಂಡಿತನನ್ನು ಬೆನ್ನಟ್ಟುವುದನ್ನು ಹಜಬುಲ್‌ಹುಕುಂದ ಪ್ರಕಾರ ಸಯೀದ ಅಬ್ದುಲ್ಲಾಖಾನನು ಮುಂದೆ ಹಾಕಿದನು. ಸಯೀದ ಅಬ್ದುಲ್ಲಾಖಾನನು ಮರಳಿ ಬಂದು ಜುಲ್ಫಿಕರಖಾನನನ್ನು ಕೂಡಿಕೊಂಡನು. ಸೈನ್ಯದ ಮುಂಭಾಗದಲ್ಲಿದ್ದ ಈ ಮುಂಚೂಣಿ ನಾಯಕನೆಂದು ನಿಯಮಿಸಲ್ಪಟ್ಟಿದ್ದ ಅಬ್ದುಲ್ ಕರೀಂ ಖಾನನೊಡನೆ ಅಧಿಕಾರ ಹಂಚಿಕೊಂಡನು. ಈಗ ರಾಜಾರಾಮನು ಹಿಂದಿ ಲಿಪಿಯಲ್ಲಿ ಸಯೀದ ಅಬ್ದುಲ್ ಖಾನನಿಗೆ ಪತ್ರ ಬರೆದು ಹೇಳಿದ್ದೇನೆಂದರ, "ನಿನ್ನ ಮುಖಾಂತರ ಸಾಮ್ರಾಟನು ನನ್ನ ಅಪರಾಧವನ್ನು ಮನ್ನಿಸಿದರೆ, ಈ ಕಿಂಚಿತ್ ಮನುಷ್ಯನು ಸಾಮ್ರಾಜ್ಯ ಸೇವೆಗೆ ಸೇರಿ ಒಪ್ಪಿಸಿದ ಯಾವುದೇ ಕೆಲಸ ಮಾಡಲು ಸಿದ್ಧನಿದ್ದೇನೆ". ಆದ್ದರಿಂದ ಮೇಲ್ಕಾಣಿಸಿದ ಖಾನನು ಜುಲ್ಫಿಕರ ಖಾನ ಬಹಾದೂರನಿಗೆ ಕಳಿಸಲಾಯಿತು. ಅದನ್ನು ಓದಿ ಸಾಮ್ರಾಟನು ಖಾನನ ಹೆಸರಿನಲ್ಲಿ ಹಜಬುಲ್ ಹುಕುಂ (ಸಾಮ್ರಾಜ್ಯಾಜ್ಞೆ)ನ್ನು ಕೆಳಗಿನಂತೆ ಕಳಿಸಬೇಕೆಂದು ತಿಳಿಸಿದನು. "ರಾಜಾರಾಮನ ಇಚ್ಛೆಯ ಮೇರೆಗೆ ಅವನಿಗೆ ಭರವಸೆ ನೀಡುವ ಪತ್ರವನ್ನು ಕಳಿಸಿರಿ. ಹಾಗೆ ಈ ಮನುಷ್ಯ ಸುಳ್ಳುಗಾರ, ಮೋಸಗಾರ ಅನ್ನುವುದನ್ನು ಸೇರಿಸಿ, ಈ ಎಲ್ಲ ವಿನಂತಿಗಳು ಮೋಸ ಮತ್ತು ವಂಚನೆ ಇಲ್ಲದೆ ಇಲ್ಲ. ಆದ್ದರಿಂದ ಅವನ ಮಾತುಗಳನ್ನು ಸಂದೇಶವನ್ನು ನಂಬಬೇಡಿ. ನೀನು ಬಹಳ ಎಚ್ಚರದಿಂದ, ಕಾಳಜಿಯಿಂದ ಕ್ರಮಕೈಕೊಳ್ಳು. ಅವನ ವಿನಂತಿ ಕಳಕಳಿಯಿಂದ ಕೂಡಿದ್ದು, ನಿಷ್ಠೆಯುಳ್ಳದ್ದು ಇದ್ದರೆ ನಿನಗೆ ಮರ್ಯಾದೆ ಸಲ್ಲಿಸಲು ಅವನಿಗೆ ಅನುಮತಿ ಕೊಡು. ಆ ಮೇಲೆ ನಿನ್ನ ಶಿಫಾರಸ್ಸಕ್ಕನುಗುಣವಾಗಿ ಅವನಿಗೆ ಮೇಲ್ದರ್ಜೆಯನ್ನು ನೀಡಲಾಗುವುದು".

ಬಧನೂರ ರಾಣಿಯ ವಕೀಲ ಅಂಕೂಜಿ ಆಸ್ಥಾನಕ್ಕೆ ಬಂದು ಸಾಮ್ರಾಟನಿಗೆ ವಂದನೆ ಸಲ್ಲಿಸಿದನು. ಅಲ್ಲಿ ಅವನು ಸ್ವಲ್ಪ ಸಮಯ ಇದ್ದು ಆ ಬಳಿಕ ಹೋದನು. ಅವನಿಗೆ ಒಂದು ಕುದುರೆಯನ್ನು ಕೊಡಲಾಯಿತು. ಮತ್ತು ತನ್ನ ಸಂಗಾತಿ ಬಾಪುಜಿ ಪಂಡಿತನೊಡನೆ ಇನಾಮ ಹಂಚಿಕೊಂಡನು. ಸಾಮ್ರಾಟನು ರಾಣಿಗಾಗಿ ಒಂದು ಓಡಣಿ (ದುಪ್ಪಟ್ಟ) ಒಂದು ದುಶಾಲಾ, ಕಸೂತಿಯುಳ್ಳ ಸೀರೆಯೊಡನೆ ಸ್ತ್ರೀ ಪೋಷಾಕುಗಳನ್ನು ಇತ್ಯಾದಿ ಮತ್ತು ಅವಳ ಮಗನಿಗೆ ಒಂದು ವಿಶೇಷ ನಿಲುವಂಗಿ, ಒಂದು ಆನೆ ಮತ್ತು ಎರಡು ಕುದುರೆಗಳನ್ನು ಕಳಿಸಿದನು. ಕೆಳಗಿನಂತೆ ರಾಣಿಗೆ ಸಂಬಂಧಿಸಿ ಆಜ್ಞೆ ನೀಡಲಾಯಿತು. "ರಾಣಿ ಕೊಡಬೇಕಾಗಿರುವ ಕಾಣಿಕೆಯ ರೂ. ಎಂಟು ಲಕ್ಷದಲ್ಲಿ ಅವಳು ಹೀಗೆ ಕೊಡಬೇಕು.ರೂ ಐದು ಲಕ್ಷ ಸಾಮ್ರಾಟನಿಗೆ, ರೂ. ಎರಡು ಲಕ್ಷ ವಿಜಾಪುರದ ಖಜಾನೆಗೆ ಮತ್ತು ಒಂದು

ಲಕ್ಷ ಜಲ್ಫಿಕರ ಖಾನನಿಗೆ" ಎರಡು ಮೂರು ಅಹದಿಗಳನ್ನು ಹಣ ವಸೂಲಿಗೆ ಒತ್ತಾಯಿಸುವ ಸಜವಾಲವೆಂದು ರವಾನಿಸಲಾಯಿತು.

ಸಂಕ್ಷಿಪ್ತದಲ್ಲಿ ಹೇಳುವುದಾದರೆ ಸಯೀದ ಅಬ್ದುಲ್ಲಾಖಾನನು ರಾಜಾರಾಮನನ್ನು ಬೆನ್ನಟ್ಟುತ್ತ ತಂಬಹಿದ್ರಾ (ತುಂಗಭದ್ರಾ)ನದಿಯ ದಂಡೆಗೆ ಬಂದನು. ಆ ಸ್ಥಳಕ್ಕೆ ರಾಜಾರಾಮನ ನಿಷ್ಠಾವಂತ ಸೇವಕ ಜೆವಾಜಿ ಬಂದನು. ಜೆವಾಜಿಗೆ ಎಲ್ಲ ರೀತಿಯ ವಾಗ್ದಾನ ಮತ್ತು ಭರವಸೆಯನ್ನು ನೀಡಲಾಗಿತ್ತು. ಅವನು ಸಯೀದ ಅಬ್ದುಲ್ಲಾಖಾನನಿಗೆ ವಂದನೆಗಳನ್ನು ಸಲ್ಲಿಸಿದನು. ಖಾನನು ಅವನಿಗೆ ರಾಜಾರಾಮನನ್ನು ಕುರಿತು ಪ್ರಶ್ನಿಸಿದನು. ರಾಜಾ ರಾಮನು ನದಿಯನ್ನು ದಾಟಿ ರಾಣಿ ಬಿದನೂರು ರಾಜ್ಯದಲ್ಲಿ ಪ್ರವೇಶಿಸಿದ್ದಾನೆಂದು ತಿಳಿಸಿದನು. ಜೆವಾಜಿ ಪಂಡಿತನು ಸಾಮ್ರಾಜ್ಯ ಸೇವೆಗೆ ಸೇರುವ ಆಶೆಯಿಟ್ಟುಕೊಂಡು ಬಂದಿರುವುದನ್ನು ಮತ್ತು ರಾಜಾರಾಮನು ರಾಣಿಯ ರಾಜ್ಯಕ್ಕೆ ಹೋದದ್ದನ್ನು ಖಾನನು ಆಸ್ಥಾನಕ್ಕೆ ವರದಿ ಮಾಡಿ ತಿಳಿಸಿದನು. ಜೆವಾಜಿಯ ಉದ್ದೇಶವನ್ನು ಪೂರ್ತಿಯಾಗಿ ತಿಳಿದುಕೊಂಡು ಅವನಿಗೆ ಕೊಡಬಹುದಾದ ಮನಸಬವನ್ನು ಖಾನನು ಸೂಚಿಸಬೇಕು ಮತ್ತು ಆ ಸೂಚನೆಯನ್ನು ಒಪ್ಪಿಕೊಳ್ಳಲಾಗುವುದೆಂದು ಖಾನನಿಗೆ ತಿಳಿಸುವ ಆಜ್ಞೆ ಬಂದಿತು. ಆ ಪ್ರಕಾರ ೩,೦೦೦ ಜಾಟ ಮತ್ತು ೨೦೦೦ ಸವಾರರುಗಳ ಮನಸಬವನ್ನು ಮತ್ತು ಸಹಾಯಧನವೆಂದು ರೂ. ೨೫,೦೦೦ ನಗದು ನೀಡಲು ಸೂಚಿಸಿದನು. ಅದನ್ನು ಒಪ್ಪಿಕೊಳ್ಳಲಾಯಿತು.

ರಾಜಾಜ್ಞೆಯ ಮೇರೆಗೆ ತಂಬಹಿದ್ರಾ (ತುಂಗಭದ್ರಾ) ನದಿಯನ್ನು ದಾಟಿ ರಾಜಾ ರಾಮನನ್ನು ಬೆನ್ನುಹತ್ತಬೇಕೆಂದು ಖಾನನಿಗೆ ತಿಳಿಸಲಾಯಿತು. ಖಾನನು ಆ ಆಜ್ಞೆಯನುಸಾರ ಕಾರ್ಯೋನ್ಮುಖನಾದನು.

ಸಯೀದ ಅಬ್ದುಲ್ಲಾ ಖಾನನಿಂದ ಸಾಮ್ರಾಟನಿಗೆ ಪತ್ರಬಂದಿತು. ಅದು ಹೀಗಿತ್ತು. "ರಾಜಾಜ್ಞೆಯ ಮೇರೆಗೆ ಸಾಮ್ರಾಜ್ಯ ಸೇನೆಯ ಸೇವಕರು ತುಂಬಹಿದ್ರಾ ನದಿಯನ್ನು ದಾಟಿ ಬಿದನೂರು ಸೀಮೆಯೊಳಗೆ ಬಂದರು. ನಮಗೆ ತಿಳಿದಿದ್ದೇನೆಂದರೆ ರಾಜಾರಾಮನು ಬಿದನೂರು ಕೋಟೆಯವರೆಗೆ ಬಂದು ತನ್ನ ಅನುಯಾಯಿಗಳಲ್ಲೊಬ್ಬನನ್ನು ತನ್ನ ಪ್ರವೇಶಕ್ಕೆ ಪ್ರಯತ್ನಿಸಲು ಕೋಟೆಯೊಳಗೆ ಕಳಿಸಿದ್ದನು. ರಾಣಿ ಮತ್ತು ರಾಜಾರಾಮ ಇಬ್ಬರೂ ಒಬ್ಬರಿಗೊಬ್ಬರು ಸೇರುತ್ತಿರಲಿಲ್ಲ. ಹಿಂದಿನಂತೆಯೇ ಈ ಒಬ್ಬರಿಗೊಬ್ಬರು ದ್ವೇಷದಿಂದ ಕೂಡಿದ್ದರು. ಈ ಸುದ್ದಿ ತಿಳಿದೊಡನೆ ರಾಣಿ ಕೋಟೆಯ ಬಾಗಿಲುಗಳನ್ನು ಮುಚ್ಚಿಸಿ ಅವನು ಒಳ ಬರದಂತೆ ಮಾಡಿದಳು. ಈ ಪರಿಸ್ಥಿತಿಯಲ್ಲಿ ರಾಜಾರಾಮನು ಧೈರ್ಯ ಕಳೆದುಕೊಂಡು ತನ್ನ ಕಕ್ಕನಾದ ಅಂಕೋಜಿಯ ಹತ್ತಿರ ಓಡಿದನು. ನಾನು ಅವನ ಬೆನ್ನಟ್ಟುತ್ತ ಅಂಕೋಜಿಗೆ ದೂತನನ್ನು ಕಳಿಸಿ ಅವನಿಗೆ ರಕ್ಷಣೆ ಬೇಕಾಗಿದ್ದರೆ ಅವನು ರಾಜಾರಾಮನನ್ನು ಬಂಧಿಸಿ ಸಾಮ್ರಾಜ್ಯ ಸೇವಕರಿಗೆ ಒಪ್ಪಿಸಬೇಕು. ಇಲ್ಲದಿದ್ದರೆ ಸಾಮ್ರಾಜ್ಯದ ಕೋಪಕ್ಕೆ ಗುರಿಯಾಗುವಿ ಎಂದು ಹೇಳಿ ಕಳಿಸಿದೆ". ಇದರಿಂದ ಭಯಗ್ರಸ್ಥನಾದ ಅಂಕೋಜಿ

ಧರ್ಮ ಸಂಕಟಕ್ಕೊಳಗಾದನು. ರಾಜಾರಾಮನನ್ನು ಸಾಮ್ರಾಜ್ಯ ಸೇವಕರಿಗೆ ಒಪ್ಪಿಸದಿದ್ದರೆ ತಾನು ಸಾಮ್ರಾಜ್ಯದ ಕ್ರೋಧವನ್ನೆದುರಿಸಬೇಕಾಗುತ್ತದೆ. ಆದರೆ ಸಾಮ್ರಾಜ್ಯದ ಆಜ್ಞೆಗನುಸಾರ ವರ್ತಿಸಿದರೆ ತನ್ನ ಸಹೋದರನ ಮಗನಿಗೆ ಅಪರಾಧಕ್ಕಾಗಿ ಜಗತ್ತು ಮುಳುಗುವವರೆಗೂ ಅಪಕೀರ್ತಿಗೀಡಾಗಬೇಕಾಗುವುದು. ಅಸಹಾಯದಿಂದಾಗಿ ರಾಜಾರಾಮನಿಗೆ ಸಾಮ್ರಾಜ್ಯ ಸೇನೆ ಬೆನ್ನಟ್ಟಿದೆ ಎಂದು ತಿಳಿಸಿದನು. ರಾಜಾ ರಾಮನಲ್ಲಿ ದೊಡ್ಡ ಸೈನ್ಯಪಡೆ ಇರಲಿಲ್ಲ. ಅಂಕೋಜಿ ಸಾಮ್ರಾಜ್ಯ ಸೇನೆಯನ್ನು ಎದುರಿಸುವಂತಿರಲಿಲ್ಲ. ಹೀಗಿದ್ದಾಗ ರಾಜಾರಾಮನು ಅವನಲ್ಲಿರುವುದು ಬುದ್ಧಿಗೇಡಿತನ ಆಗುತ್ತಿತ್ತು. ಒಂದೇ ಒಂದು ದಾರಿಯೆಂದರೆ ಬಧನೂರ ರಾಣಿಯ ಮೊರೆ ಹೋಗುವುದಾಗಿತ್ತು. ಆಗ ವೆಂಕೋಜಿಯ ಸಲಹೆಯಂತೆ ರಾಜಾರಾಮ, ಪ್ರತಾಪರಾವ, ಹಮೀರರಾವ ಮತ್ತು ರೂಪಾ ಸಿಂಘ ಭೋಂಸಲೆ ಹೊರಬಂದು ಬಧನೂರ ಕಡೆಗೆ ಸಾಗಿದರು.

ಸಯೀದ ಅಬ್ದುಲ್‌ಖಾನನಿಗೆ ರಾಜಾರಾಮನು ಬಿದನೂರು ಕಡೆಗೆ ಪಲಾಯನ ಮಾಡಿದ್ದು ಗೊತ್ತಾಗಲು ತನ್ನ ಸೈನ್ಯವನ್ನು ಅಣಿಗೊಳಿಸಿ ಅವನ ಬೆನ್ನಟ್ಟಿದನು. ಆದರೆ ಬೆಳಗಾಗುವುದರಲ್ಲಿ ರಾಜಾರಾಮನು ಇಪ್ಪತ್ತು ಕರೋಹ ಅಂತರವನ್ನು ಕ್ರಮಿಸಿದ್ದನು. ಆ ದಾರಿಯಲ್ಲಿ ಅವನ ಮಂದಿರವಿದ್ದರಿಂದ ತನ್ನ ಧಾರ್ಮಿಕ ವಿಧಿಯ ಪ್ರಕಾರ ಪೂಜೆಗೈಯಲು ಅಲ್ಲಿ ನಿಂತನು. ಆ ವೇಳೆಯಲ್ಲಿ ಅನಿರೀಕ್ಷಿತವಾಗಿ ಸಯೀದ ಅಬ್ದುಲ್ಲಾಖಾನನ ಆಗಮನವಾದದ್ದರಿಂದ ಅವನು ದಿಕ್ಕುಗೆಟ್ಟನು. ಆಗ ಗಾಬರಿಗೊಂಡ ರಾಜನಿಗೆ ರೂಪಾಸಿಂಘ ಭೋಂಸಲೆ ಮತ್ತು ಅಂಬಾ ಬೋಂಸಲೆ ಸಮಾಧಾನ ಪಡಿಸುತ್ತ ಹೇಳಿದರು. "ಓ ಸಹೋದರನೆ, ನೀನೇಕೆ ತ್ರುಸ್ತಗೊಳ್ಳುತ್ತಿ?ತಾಳ್ಮೆ ಇರಲಿ. ನಾವಿಬ್ಬರೂ ನಮ್ಮ ಜನರೊಡನೆ ಸಾಗಿ ಹೋಗಿ ಸಾಮ್ರಾಜ್ಯ ಸೇವಕರನ್ನು ಎದುರಿಸುವೆವು. ಅಷ್ಟರಲ್ಲಿ ನಿನ್ನ ಕುದುರೆಯನ್ನು ಹುರಿದುಂಬಿಸಿ ಪಾರಾಗಿ ಹೋಗು".

ಸಯೀದ ಅಬ್ದುಲ್ಲಾಖಾನನು ಆ ದೇವಾಲಯದ ಸನಿಹ ಬರಲು ರೂಪಾಸಿಂಘ ಭೋಂಸಲೆ ಮತ್ತು ಅಂಬಾ ಬೋಂಸಲೆ ತಮ್ಮ ಸೇನಾಪಡೆಗಳನ್ನು ಕೂಡಿಸಿ ಸಾಮ್ರಾಜ್ಯಸೇನೆಯ ಮೇಲೆ ಐದು ನೂರು ಸೈನಿಕರೊಡನೆ ದಾಳಿ ಮಾಡಿದರು. ಇದೊಂದು ರಾಜಾರಾಮನಿಗೆ ಪಾರಾಗಲು ಅವಕಾಶ ಒದಗಿಲಸು ಕೆಲವು ಅನುಯಾಯಿಗಳೊಂದಿಗೆ ಅಲ್ಲಿಂದ ಪಾರಾದನು. ಶತಾಯ ಗತಾಯ ಶ್ರಮಪಟ್ಟು ವೈರಿಯನ್ನು ಜೀವಂತವಾಗಿ ಸೆರೆಹಿಡಿಯಬೇಕೆಂದು ತನ್ನ ಜನರಿಗೆ ಸಯೀದ ಅಬ್ದುಲ್ಲಾಖಾನನು ಆದೇಶ ನೀಡಿದನು. ಸಾಮ್ರಾಜ್ಯದ ವೀರ ಸೈನಿಕನು ಎಲ್ಲೆಡೆಯಿಂದಲೂ ನುಗ್ಗಿ ಬಂದು ರಾಜಾನನ್ನು ಸುತ್ತುವರೆಯಲು ಕಾಳಗ ಶುರುವಾಯಿತು. ಕಾಳಗದಲ್ಲಿ ವೈರಿಯ ಕಡೆಗೆ ಎರಡು ನೂರು ಜನರು ಮಡಿದರು. ಇಲ್ಲವೆ ಗಾಯಗೊಂಡರು. ಖಾನನ ಕಡೆಯಲ್ಲಿಯೂ ಒಂದು ನೂರ ಎಂಭತ್ತು ಸೈನಿಕರು ಅಸುನೀಗಿದರು. ಸಾಮ್ರಾಜ್ಯದ ಶೂರ ಸೈನಿಕರು ರೂಪಾಸಿಂಘ ಭೋಂಸಲೆಯನ್ನು ಅವನ ಎಪ್ಪತ್ತು ಜನರೊಡನೆ ಬಂಧಿಸಿದರು. ಮತ್ತು ಅಂಬಾ ಬೋಂಸಲೆ ಸೋತು ತನ್ನ ಕೆಲವು ಜನರೊಡನೆ ಓಡಿ ಹೋದನು.

ಕೊನೆಗೆ ರೂಪಾಸಿಂಘ ಭೋಂಸಲೆಯ ಜೊತೆಯಲ್ಲಿ ಸಯೀದ ಅಬ್ದುಲ್ಲಾಖಾನನು ತನ್ನ ಬೀಡಾರಕ್ಕೆ ತಲುಪಿದನು.ಅಲ್ಲಿಂದ ಅವನು ಸಾಮ್ರಾಟನಿಗೆ ಓಲೆ ಕಳಿಸಿ ಅದರಲ್ಲಿ ಹೇಳಿದ್ದೇನೆಂದರೆ ರೂಪಾ ಸಿಂಘ ಭೋಂಸಲೆ ಮತ್ತು ಅವನ ಎಪ್ಪತ್ತು ಜನರು ಕೈಸೆರೆಯಾಗಿದ್ದಾರೆ. ಮತ್ತು ರಾಜಾರಾಮನು ತಪ್ಪಿಸಿಕೊಂಡು ಓಡಿಹೋಗಿ ಬಧನೂರ ರಾಣಿಯ ರಾಜ್ಯದಲ್ಲಿ ಆಶ್ರಯ ಬೇಡಲು ಪ್ರವೇಶಿಸಿದ್ದಾನೆ. ಆ ಪತ್ರ ಕೈ ಸೇರಿದಾಗ ಸಾಮ್ರಾಜ್ಯ ಆಜ್ಞೆ(ಹಸ್ಬಲ್ ಹುಕುಂ) ಹೊರಟ ರಾಣಿಗೆ ಕೆಳಗಿನಂತೆ ತಿಳಿಸಿತು. "ರಾಜಾರಾಮನು ನಿಮ್ಮ ರಾಜ್ಯದಲ್ಲಿರುವುದು ಚಕ್ರವರ್ತಿಯ ಮನಸ್ಸಿನ ವಿರುದ್ಧವಿದೆ. ಈ ಆಜ್ಞೆ ಕೈ ಸೇರಿದೊಡನೆ ನೀವು ಅವನನ್ನು ಬಂಧಿಸಿ ನಿಮ್ಮ ಸೈನಿಕರ ಬೆಂಗಾವಲಿನಲ್ಲಿ ಸಯೀದ ಅಬ್ದುಲ್ಲಾನ ಮೂಲಕ ಚಕ್ರವರ್ತಿಯ ಸನ್ನಿಧಿಗೆ ಕಳಿಸಬೇಕು"

ರಾಜಾ ರಾಮನು ರಾಣಿ ಸಂಬಂಧಿಗಳಲ್ಲಿ ಒಬ್ಬನಾಗಿದ್ದನು. ಈ ಸಂಬಂಧದ ಕಾರಣದಿಂದಾಗಿ ಅವಳು ಹಿಂದಿನ ಭಿನ್ನಾಭಿಪ್ರಾಯಗಳನ್ನು ಕಡೆಗಣಿಸಿ ಈಗ ಅವನಿಗೆ ರಕ್ಷಣೆ ಕೊಟ್ಟಳು. ಸಾಮ್ರಾಟನಾಜ್ಞೆಗೆ ಅವಳು ಹೀಗೆ ಉತ್ತರಿಸಿದಳು. "ರಾಜಾ ರಾಮನು ಈ ಸ್ಥಳಕ್ಕೆ ಬಂದಿಲ್ಲ. ಸಯೀದ ಅಬ್ದುಲ್ಲಾಖಾನನು ರೂಪಾಸಿಂಘನನ್ನು ಅವನ ಜನರೊಡನೆ ಸೆರೆಹಿಡಿದಿದ್ದಾನೆ. ಆ ತಲೆ ಮರೆಸಿಕೊಂಡವನು ಅವರಲ್ಲಿರಬೇಕೆಂದು ನನಗೆ ವಿಶ್ವಾಸವಿದೆ." ಆ ಬಳಿಕ ಸಾಮ್ರಾಟನು ಬಹಾದೂರಖಾನ ಮತ್ತು ಸಯೀದ ಅಬ್ದುಲ್ಲಾ ಖಾನ ಇವರಿಗೆ ರಾಣಿಯ ನಾಡೆಲ್ಲವನ್ನು ಆಮೂಲಾಗ್ರ ಶೋಧಿಸಲು ಆಜ್ಞಾಪಿಸಿದನು. ಈ ಆಜ್ಞೆಯ ಅರಿವಾದೊಡನೆ ರಾಣಿ ತನ್ನ ರಾಜ್ಯ ವಿಧ್ವಂಸಗೊಳಿಸುವುದನ್ನು ತಪ್ಪಿಸಲು ಪ್ರಯತ್ನಗೈಯುವಲ್ಲಿ ತೊಡಗಿಕೊಂಡಳು. ಸ್ವತಃ ಅವಳು ತನ್ನ ಕೋಟೆಯನ್ನು ಬಿಟ್ಟು ಭದ್ರ ಕೋಟೆಯೆಂದು ಸುತ್ತೆಲ್ಲ ಹೆಸರಾಗಿದ್ದ ಕೊಮಗಡ ಕೋಟೆಯಲ್ಲಿ ಆಶ್ರಯ ಹೊಂದಿದಳು. ಅಲ್ಲಿಂದ ಮತ್ತೊಂದು ಓಲೆಯನ್ನು ಸಾಮ್ರಾಟನಿಗೆ ಸಲ್ಲಿಸಿದಳು. ಅದು ಹೀಗಿತ್ತು. "ಕೆಲವು ಸ್ವಾರ್ಥಿ ವ್ಯಕ್ತಿಗಳು ರಾಜಾರಾಮನು ನಮ್ಮಲ್ಲಿಗೆ ಬಂದಿದ್ದಾನೆಂದು ನಿಮಗೆ ತಿಳಿಸಿದ್ದಾರೆ. ಇದು ಸುಳ್ಳು. ಅವನು ಬಂದಿದ್ದರೂ ನಮ್ಮಲ್ಲಿ ವೈಮನಸ್ಸಿರುವುದರಿಂದ ನನ್ನಲ್ಲಿ ಅವನಿಗೆ ಆಶ್ರಯ ಕೊಡದ್ದರಿಂದ ಅವನು ತನ್ನ ಕಕ್ಕನ ಹತ್ತಿರ ಹೋದನು. ತಮಗೆ ಸ್ವಾಮಿನಿಷ್ಠೆಯಾದ ನನ್ನಿಂದ ಏನಾದರೂ ತಮ್ಮ ವಿರುದ್ಧ ಘಟಿಸುವುದು ಸಾಧ್ಯವೇ? ಆದರೆ ನನಗೆ ತಮ್ಮ ದಯೆಯಲ್ಲಿ ಸಂಪೂರ್ಣ ನಂಬಿಕೆಯಿದ್ದಿದ್ದರಿಂದ ಕೇಡಿಗರ ಮತ್ತು ಸಡಿಲು ಮಾತುಗಾರರ ಮಾತುಗಳನ್ನು ತಾವು ನಂಬಲು ಸಾಧ್ಯವಿಲ್ಲ ಎಂದು ದೃಢವಾಗಿ ನಂಬುತ್ತೇನೆ. ನನ್ನ ರಾಜ್ಯದಲ್ಲಿ ಶಾಂತಿ ಸ್ಥಾಪಿತವಾಗುವ ಸಲುವಾಗಿ ಈಗ ಕೊಳ್ಳೆಹೊಡೆಯಲು ಕಳಿಸಲ್ಪಟ್ಟ ತಮ್ಮ ಅಜೇಯ ಸೈನ್ಯವನ್ನು ಹಿಂದೆ ಕರೆಸಿಕೊಳ್ಳಲು ತಮ್ಮನ್ನು ಪ್ರಾರ್ಥಿಸುತ್ತೇನೆ."ಯಾರು ಅಲಿ ಬೇಗನ ಮುಖಾಂತರ ಸ್ವೀಕರಿಸಲ್ಪಟ್ಟ ರಾಣಿಯ ಓಲೆಯನ್ನು ಸಾಮ್ರಾಟನಿಗೆ ಸಲ್ಲಿಸಲಾಗಿ ಆತನು ರಾಣಿಯನ್ನು ಕ್ಷಮಿಸಿ ಅಲ್ಲಿಂದ ಸೈನ್ಯವನ್ನು ಹಿಂದೆ ಕರೆಸಿಕೊಂಡನು. ಪ್ರತಿವರ್ಷ ರಾಣಿಯು ರೂ. ಎಂಟು ಲಕ್ಷ ಕಪ್ಪನ್ನು ಕೊಡಬೇಕೆಂದು ಆಜ್ಞೆಯಾಯಿತು. ಇದಕ್ಕಿಂತ ಹೆಚ್ಚಾಗಿ ಅಲಿ ಆದಿಲ್‌ಶಾಹನ ಕಾಲದಲ್ಲಿದ್ದಂತೆ, ವಾಡಿಕೆಯಂತೆ, ತಾಳಕೋಕನದ

ಫೌಜದಾರನ ಅಧೀನದಲ್ಲಿ ಕೆಲಸ ಮಾಡಲು ೫೦೦ ಕುದುರೆ ಸವಾರರನ್ನು ಮತ್ತು ೨೦೦೦ ಕಾಲಾಳುಗಳನ್ನು ತಾಳಕೋಕನಕ್ಕೆ ಕಳಿಸಬೇಕು ಮತ್ತು ೨೫೦೦ ಹುಣಗಳನ್ನು (Luṇ) ಕೊಡಬೇಕೆಂದು ರಾಣಿಗೆ ತಿಳಿಸಲಾಯಿತು. ಅವಳಿಗೆ ಭರವಸೆಗಳನ್ನು ನೀಡುವ ಆಜ್ಞೆಯನ್ನು ಹೊರಡಿಸಲಾಯಿತು.

ಈ ಪರ್ಮಾನ ಮತ್ತು ಕಾಣಿಕೆಗಳು ಕೈ ಸೇರಿದ ನಂತರ ರಾಣಿ ಮತ್ತೊಂದು ಪತ್ರವನ್ನು ಕಳಿಸಿದಳು. ಅದರಲ್ಲಿ ಅವಳು ಸಾಮ್ರಾಟನಿಗೆ ಆತನ ದಯೆಯನ್ನು ಕೊಂಡಾಡುತ್ತ ಧನ್ಯವಾದ ಸಲ್ಲಿಸಿದಳು. ಸಲ್ಲಿಸಬೇಕಾಗಿದ್ದ ಕಪ್ಪಕಾಣಿಕೆಯಲ್ಲಿ (ಪೇಶಕಶ) ಒಂದು ಲಕ್ಷ ಹದಿನೈದು ಸಾವಿರ ಹುಣಗಳನ್ನು (Luṇ) ಎರಡು ಆನೆಗಳು ಮತ್ತು ಹತ್ತು ಕುದುರೆಗಳೊಂದಿಗೆ ಕಳಿಸಲಾಯಿತು. ಆ ಕುದುರೆಗಳಲ್ಲಿ ಎರಡು ಕುದುರೆಗಳು ಬಂಗಾರ ಅಲಂಕೃತ ಹೊದಿಕೆಯುಳ್ಳದ್ದಾಗಿದ್ದವು. ಅವುಗಳನ್ನು ಜೋಟರ ಪಂಡಿತ ಮತ್ತು ಇನ್ನಿಬ್ಬರನ್ನು ತನ್ನ ವಕೀಲರನ್ನಾಗಿ ಕಳಿಸಿದಳು. ಪಂಡಿತನು ಸಾಮ್ರಾಟನಿಗೆ ವಂದನೆ ಸಲ್ಲಿಸಿ, ಐವತ್ತು ಬಂಗಾರ ನಾಣ್ಯಗಳನ್ನು ನಜರ ಎಂದು ನೀಡಿ, ಕುರ್ನಿಸ ವಿಧಿಗಳನ್ನು ಪೂರೈಸಿದನು. ಆ ಬಳಿಕ ಅವನು ಹಣಗಳನ್ನು (Luṇ), ಆನೆಗಳನ್ನು ಮತ್ತು ಕುದುರೆಗಳನ್ನು ನೀಡಲಾಗಿ ಅವುಗಳನ್ನು ಸಾಮ್ರಾಟನು ಸ್ವೀಕರಿಸಿದನು. ಈ ಮೂವರಿಗೂ ಪ್ರತಿಯೊಬ್ಬರಿಗೆ ಶಿರಸ್ತ್ರಾಣಗಳನ್ನು (Sarpech) ಕೊಡಲಾಯಿತು.

ಇದಾದ ಬಳಿಕ ಫಾತು ಜಂಗಖಾನನಿಗೆ ಸಹಾಯಧನವೆಂದು ರೂ. ಐವತ್ತು ಸಾವಿರವನ್ನು, ಒಂದು ಆನೆ ಮತ್ತು ಐದು ಕುದುರೆಗಳನ್ನು ಕೊಡಲಾಯಿತು.

ಶರತ್ತಿನ ಮೇಲೆ ಐದು ನೂರು ಅಶ್ವಾರೋಹಿಗಳುಳ್ಳ ಮನಸಬವನ್ನು ಹೊಂದಿದ್ದ ಇಮತಿಯಾಜಗಡದ ಫೌಜದಾರ ಮತ್ತು ದಳಪತಿಯಾಗಿದ್ದ ರಾಜಾ ಅನುಪ ಸಿಂಘನ ಸವಾರ ದರ್ಜೆಯನ್ನು ಬೇಶರತ್ತಾಗಿ ಘೋಷಿಸಲಾಯಿತು.

೨೫೦೦ ಜಾಟ ಮತ್ತು ೨೫೦೦ ಸವಾರರುಳ್ಳ ಮನಸಬವನ್ನು ಹೊಂದಿದ್ದ ದಳಪತಿ ಮುಹಮ್ಮದ ಸಯೀದನಿಗೆ ಫಿರೋಜಖಾನ ಎಂಬ ಬಿರುದನ್ನು ಕೊಡಲಾಯಿತು.

ಮಿಯಾ ಹಜೀಬನಿಗೂ ಮೇಲೆ ಹೇಳಿದ ಮನಸಬವನ್ನು ಮತ್ತು ಹೈಬತ್‌ಖಾನ ಎಂಬ ಬಿರುದನ್ನು ಕೊಡಲಾಯಿತು.

ಗುಜರಾತದ ಅಹಮದಾಬಾದಲ್ಲಿದ್ದ ಶಾಹ ಆಲಂನ ದರ್ಗಾದ ರಕ್ಷಕರಾಗಿದ್ದ ಸಯೀದ ಮುಹಮ್ಮದ ಮತ್ತು ಸಯೀದ ಜಲಾಲ ಇವರಿಗೆ ಖೀಸಗಳ ಎರಡು ತುಂಡುಗಳೊಡನೆ ಚಿರಾ, ಫರಾಖಿ ಇವುಗಳನ್ನು ಕೊಡಲಾಯಿತು. ಖಾಜಿ-ಉಲ್-ಜೌಜತ್, ಖಾಜಿ ಅಬ್ದುಲ್ಲಾನಿಗೆ ಅವರಿಗೆ ಇವುಗಳನ್ನು ಕಳಿಸಲು ತಿಳಿಸಲಾಯಿತು.

ಜಾಧದ ಸುಬೇದಾರ ಹಿಮ್ಮತಖಾನ ಬಹಾದೂರ ೩೦೦೦ ಜಾಟ್ ಮತ್ತು ೨೦೦೦

ಸವಾರರುಳ್ಳ ಮನಸಬದ ಒಡೆಯನಾಗಿದ್ದನು. ಆತನ ಸವಾರ ದರ್ಜೆ ಶ್ರೇಣಿಯಲ್ಲಿ ೧೫೦೦ ಸವಾರರು ಬೇಶರತ್ತಾಗಿದ್ದರು. ಆದರೆ ಪುನಃ ಪರಿಶೀಲನೆಯ ಬಳಿಕ ೧೫೦೦ ಸವಾರರಲ್ಲಿ ೫೦೦ ಸವಾರರನ್ನು ಬೇಸರತ್ತಾಗಿ ಮಾಡಲಾಯಿತು.

ಅಜಮೀರದ ದಾರುಲ್ ಖೈರದ ನಜೀಮ ಸೈಫ್‌ಖಾನನು ಹಣಕಾಸಿನ ಸಂಕಟವನ್ನು ಎದುರಿಸುತ್ತಿದ್ದರಿಂದ ಅವನಿಗೆ ಶ್ರೇಣೀಕರಣಗೊಳಿಸುವುದರಿಂದ ಮತ್ತು ಪರಿಶೀಲನೆಯಿಂದ ವಿನಾಯಿತಿ ನೀಡಲಾಯಿತು.

ಆಗಾಖಾನನ ಸಾವು :

ಅಕಬರಾಬಾದದ ದಾರುಲ್ ಖಿಲಾಫತ್‌ದ ವರದಿಯ ಪ್ರಕಾರ ಆಗಾಖಾನ ಮರಣದ ವಿಷಯ ತಿಳಿಯಿತು. ಅದರ ವಿವರಗಳು ಇಂತಿವೆ. "ಹುಟ್ಟಿನಿಂದ ತುರಾಣಿ ಆಗಿದ್ದ ಆಗಾಖಾನನನ್ನು ಕಾಬೂಲದಲ್ಲಿ ನಿಯಮಿಸಲಾಗಿತ್ತು. ಉತ್ತಮ ಯೋಧನು ಹಾಗೂ ಯುದ್ಧತಂತ್ರ ನಿಪುಣನೂ ಆಗಿದ್ದ ಅವನನ್ನು ಬಹಳಕಾಲ ಕಾಬೂಲ ಜಿಲ್ಲೆಗೆ ನಿಯಮಿಸಲಾಗಿದ್ದು, ಅವನು ಸಾಮ್ರಾಜ್ಯಕ್ಕೆ ಶ್ರೇಷ್ಠ ಸೇವೆಯನ್ನು ಸಲ್ಲಿಸಿದನು. ಆದರೆ ಸಾಮ್ರಾಜ್ಯದಾಜ್ಞೆಗನುಗುಣವಾಗಿ ಅವನನ್ನು ಆ ಹುದ್ದೆಯಿಂದ ತೆಗೆದು ಹಾಕಿದ್ದರಿಂದ ಸಾಮ್ರಾಟ ಸನ್ನಿಧಿಗೆ ಹೊರಟಿದ್ದನು. ಅಕಬರಬಾದದ ದಾರುಲ್ ಖಿಲಾಫತ್ ಮೂಲಕ ಹೋಗುವಾಗ ಧೋಲಪುರ ಪಟ್ಟಣದ ಹೊರವಲಯ ತಲುಪಿದನು. ಆತನ ಸೈನ್ಯ ಅವ್ಯವಸ್ಥಿತವಾಗಿ ಸಾಗಿತ್ತು. ದುಷ್ಟ ಜಾಟರು ದೊಡ್ಡ ಸಂಖ್ಯೆಯಲ್ಲಿ ಅವನ ಮೇಲೆರಗಿದರು. ಕೆಲವು ಕುದುರೆಗಳನ್ನು ಮತ್ತು ಧಾನ್ಯಗಳನ್ನು ವಶಪಡಿಸಿಕೊಂಡು ಜಾಟರು ಮರಳಿದರು. ಮುನ್ನೆಚ್ಚರಿಕೆ ವಹಿಸದೆ ಸಣ್ಣ ಸೈನ್ಯ ತುಕಡಿಯೊಡನೆ ಅವರನ್ನು ಮೂರು ನಾಲ್ಕು ಕರೋಹ ಅಂತರದವರೆಗೆ ಬೆನ್ನಟ್ಟಿದನು. ಆ ದುಷ್ಟ ದಂಗೆಕೋರರು ತಮ್ಮ ಕುದುರೆಗಳನ್ನು ತಿರುಗಿಸಿ ಖಾನನ ಮೇಲೆ ದಾಳಿ ಮಾಡಿದರು. ಭೀಕರ ಹೋರಾಟ ಸಂಭವಿಸಿತು. ಅದರಲ್ಲಿ ಸುಮಾರು ಇಬ್ಬರು ಜಾಟರು ಹತರಾದರೆ ಖಾನ ಮತ್ತು ಅವನ ಎಂಭತ್ತು ಜನ ಶೂರತನದಿಂದ ಕಾದಾಡುತ್ತ ಅಲ್ಲಿಯೇ ಸಾವಿಗೀಡಾದರು."

ಇದನ್ನು ಕೇಳಿದ ಸಾಮ್ರಾಟನು "ಆಶುರ ಬೇಗ ಮತ್ತು ಅವನ ಅನುಯಾಯಿಗಳು ಎಲ್ಲಿಯೇ ಇದ್ದರೂ ವಾಪಾಸಾಗಿ ಕಾಬೂಲಕ್ಕೆ ಹೋಗಬೇಕು" ಎಂದು ಆಜ್ಞೆ ನೀಡಿದನು.

ಅಡಿ ಟಿಪ್ಪಣೆಗಳು :

೧) ಸಾಂಭಾ ರಾಜಾರಾಮನನ್ನು ಸೆರೆಮನೆಯಲ್ಲಿಟ್ಟಿದ್ದನು. ಸಾಂಭಾನ ಪತನವಾದ ಬಳಿಕ ಅವನ ಮಗ ಸಾಹು (ನಂತರ ೨ನೇ ಶಿವಾಜಿ) ರಾಜ್ಯಕ್ಕೆ ಅಧಿಪತಿಯಾಗಲು ಬಹಳೇ ಚಿಕ್ಕವನಿದ್ದದ್ದರಿಂದ ಮರಾಠಾ ಮಂತ್ರಿಯೊಬ್ಬನು ರಾಜಾ ರಾಮನನ್ನು (ಫೆ.೮ ರಂದು) ಪಟ್ಟಕ್ಕೆ ಕೂಡಿಸಿದನು. "ಪ್ರಹ್ಲಾದ ನಿರಾಜಿ, ಧನಾಜಿ ಜಾಧವ, ಸಂತಾಜಿ ಘೋರ್ಪಡೆ ಇವರೆಲ್ಲ ರಾಜಾರಾಮನ ಅನುಯಾಯಿಗಳಾಗಿ ಅವನನ್ನು ೨೫ ಮಾರ್ಚ ೧೬೮೯ರ ದಿನ ಸಿಂಹಾಸನದ ಮೇಲೆ ಕೂಡಿಸಿದರು."

ಎಂ.ಎ.೩೨೭-೨೮; ಭೀಮಸೇನ, II, ೭೬-ಅ-ಬ ಮತ್ತು ಜೆಢೇ (೫೫) ೩೧.

೨) ರಾಜಾರಾಮನ ಮೇಲೆ ರುಹುಲ್ಲಾಖಾನನು ಸೈನಿಕ ಕಾರ್ಯಾಚರಣೆ ಕೈಕೊಂಡನು. ಎಂ.ಎ.೩೨೮ ಮತ್ತು ಭೀಮಸೇನ, II, ೯೭ ಅ.

೩) ಜೆಢೇ ಘಟನಾವಳಿ ಕ್ರಮ ಗ್ರಂಥದ ಪ್ರಕಾರ ೧೦ ಚೈತ್ರ ಬರಿ (೫ ಎಪ್ರಿಲ್, ೧೬೮೯) ದಿನ ರಾಯಗಡದಿಂದ ರಾಜಾರಾಮನು ಪ್ರತಾಪಗಡಕ್ಕೆ ಪಲಾಯನ ಮಾಡಿದನು. ಅಶ್ವಿನಿ ಕೃಷ್ಣದಲ್ಲಿ (ಸಪ್ಟಂಬರ ೨೬) ರಂದು ಕುದುರೆಯೇರಿ ಓಡಿಹೋಗಿ ಕಾರ್ತಿಕ ಕೃಷ್ಣ ದ್ವಿತೀಯದಿಂದು ವೆಲ್ಲೋರಕ್ಕೆ ತಲುಪಿದನು. (೨೮ ಅಕ್ಟೋಬರ, ೧೬೮೯) ಜೇಢೇ (೫೫) ೩೪.

"ಗೋಕರ್ಣ ಸೋಂಧಾ ಶ್ರೀ ವೆಂಕಟೇಶ್ವರ –ಬೆಂಗಳೂರು" ಮಾರ್ಗವಾಗಿ ಅವನು ಹೋದನು" ಎಂದು ಚಿಟ್ನಿಸ, ೩೨; ಹಾಗೆಯೇ ನೋಡಿ: ಎಂ.ಎ.೩೨೭ ಮತ್ತು ಭೀಮಸೇನ II, ೯೭೬.

೪) "ತನ್ನ ೩೦೦ ಶ್ರೇಷ್ಠ ಅಧಿಕಾರಿಗಳನ್ನು ಕೂಡಿಕೊಂಡು ಬದನೂರ ರಾಜ್ಯವನ್ನು ರಾಜಾರಾಮ ಪ್ರವೇಶಿಸಿದ್ದಾನೆಯೆಂದು ಸಯೀದ ಅಬ್ದುಲ್ಲಾಖಾನ ಬರ್ಹಾನಿಗೆ ತಿಳಿಸಲಾಯಿತು. ಖಾನನು ತನ್ನ ಮಗ ಹಸನ ಅಲಿಯನ್ನು ಮುಂಚೂಣಿ ಸೈನ್ಯದೊಡನೆ ಕಳಿಸಿ ತಾನು ಹಿಂದಿನ ಸೈನ್ಯವನ್ನು ತೆಗೆದುಕೊಂಡು ದಂಡುಗೈದನು. ಮೂರು ದಿನಗಳಲ್ಲಿ ತಂಬಾಹಿದ್ರಾ ನದಿಯ ದಂಡೆಯ ಮೇಲಿರುವ ಸುಭಂಗಡ ಮತ್ತು ಜಾರಾ ಹತ್ತಿರ ಶತ್ರುಗಳನ್ನು ಹಿಂದೆ ಹಾಕಿದರು. ದ್ವೀಪವೊಂದರಲ್ಲಿ ಆಶ್ರಯ ಹೊಂದಿದ್ದ ಮರಾಠರ ಮೇಲೆ ದಾಳಿ ಮಾಡಿ, ಸುತ್ರಗಟ್ಟಿ, ಅವರನ್ನು ಸೋಲಿಸಲಾಯಿತು. ಹಿಂದುರಾವ, ಅಂಕೋಜಿ (ಸಂತಾ ಘೋರ್ಪಡೆ), ಬಹರಾಜಿ ಮತ್ತು ಮಣಿಯಾ ಘೋರ್ಪಡೆ ಇವರನ್ನೊಡಗೊಂಡು ಅವರ ಸರದಾರರನ್ನು ಸೆರೆ ಹಿಡಿಯಲಾಯಿತು. ಆದರೆ ರಾಜಾರಾಮ ತಪ್ಪಿಸಿಕೊಂಡನು." ಎಂ.ಎ.೩೨೯.

೫) "ಕೆಲ ಸಮಯದವರೆಗೆ ರಾಜಾರಾಮನು ಬಧನೂರ ರಾಣಿಯ ರಾಜ್ಯದಲ್ಲಿ ಅಡಗಿದ್ದನು. ಆದರೆ ಜಾನ ನಿಸಾರ ಖಾನನ ನೇತೃತ್ವದಲ್ಲಿ ಮುಘಲಸೇನೆ ಅವಳನ್ನು ಶಿಕ್ಷಿಸಲೋಸುಗ ಅವಳ ರಾಜ್ಯದ ಮೇಲೆ ದಾಳಿ ಮಾಡಲು ಅವಳು ಮದ್ರಾಸ ಪ್ರಾಂತದ ಜಿಂಜಿ ಓಡಿ ಹೋಗುವಂತೆ ಮಾಡಿದಳು. ಸಣ್ಣ ಪ್ರಯಾಣದ ದಂಡವನ್ನಿತ್ತು ಸಾಮ್ರಾಟನೊಡನೆ ರಾಣಿಯು ಶಾಂತಿ ಸಾಧಿಸಿದಳು." ಅದೇ ಆಕರ, ೩೨೯, ವಿವರಗಳಿಗಾಗಿ ನೋಡಿ: ಭೀಮಸೇನ, ಖಖ, ೯೮ಅ, ೧೧೨ಬ,೧೨೮ಬ ಮತ್ತು ೧೨೯ಬ, ೧೩೦ ಬ; ಎಂ.ಎ.೩೯೧, ೪೦೧-೪೦೨, ೪೦೮,೪೯೧-೨೦.

೬) ಔರಂಗಜೇಬ ಕೊನೆಯ ವರ್ಷಗಳಲ್ಲಿ ಘಟಿಸಿದ ಜಾಟ ಯುದ್ಧಗಳ ಪೂರ್ಣ ವಿವರಗಳನ್ನು ಕೊಡುತ್ತಾನೆ. ಆದರೆ ಅವನು ವ್ಯಕ್ತಿಗಳು ಮತ್ತು ತೇದಿಗಳನ್ನು ತಪ್ಪಾಗಿ ವಿವರಿಸಿದ್ದರಿಂದ ಕಿಂಚಿತ್ತಾದರೂ ಇರುವ ನಂಬಲರ್ಹವಾದ ಅಧಿಕೃತ ಇತಿಹಾಸದ ಆಧಾರದ ಮೇಲೆ ಅದನ್ನೆಲ್ಲ ಸರಿಪಡಿಸಲಾಗಿದೆ. 'ಮಾಸಿರಿ ಅಲಂಸೀರಿ' "ಆಗಾಖಾನನು ತನ್ನ ಸ್ತ್ರೀಯರನ್ನೆಲ್ಲ ಪಾರು ಮಾಡಿ ಜಾಟರು ಆಶ್ರಯ ಹೊಂದಿದ ಗೋಪರಿಯ ಮೇಲೆ ದಾಳಿ ಮಾಡಿದನು. ಆದರೆ ಗುಂಡೇಟಿನಿಂದ ಮೃತನಾದನು". ಕೆ.ಕೆ. II, ೩೯೫ (ರಾಜಾರಾಮನು ಜಾಟರ ನಾಯಕನಾಗಿದ್ದನು.)

■

ಆದಿಲಶಾಹಿ ಅರಸು ಮನೆತನ ವಿಜಾಪುರದವರಾದ ನಮಗೆಲ್ಲ ಒಂದು ಹೆಮ್ಮೆ. ರಾಜಕೀಯ ಇತ್ಯಾದಿಗಳನ್ನು ಬಿಟ್ಟರೂ ಶಿಲ್ಪ-ಸಾಹಿತ್ಯಕ್ಷೇತ್ರಗಳಿಗೆ ಅದು ನೀಡಿದ ಕೊಡುಗೆ ಲೋಕಮಾನ್ಯವಾದುದು. ಈ ಕೊಡುಗೆಗಳಲ್ಲಿ ಶಿಲ್ಪದ ಬಗ್ಗೆ ಆಗಾಗ ಆಸಕ್ತಿ ವಹಿಸಿದ ನಾವು, ಸಾಹಿತ್ಯವನ್ನು ಅಲಕ್ಷಿಸುತ್ತ ಬಂದಿದ್ದೇವೆ. ಇದಕ್ಕೆ ಕಾರಣ, ಈ ಸಾಹಿತ್ಯ ದಖಣಿ ಉರ್ದು, ಪರ್ಶಿಯನ್‌ಗಳೆಂಬ ಅಪರಿಚಿತ ಭಾಷೆಗಳಲ್ಲಿರುವುದು ಮತ್ತು ಬಹಳಷ್ಟು ಕೃತಿಗಳು ಅಪ್ರಕಟಿತವಾಗಿರುವುದು. ಹೀಗಿದ್ದೂ ನಮ್ಮ ಸಾಂಸ್ಕೃತಿಕ ಆಸ್ತಿಯಾಗಿರುವ ಈ ಸಾಹಿತ್ಯದ ರಕ್ಷಣೆ, ಅನುವಾದ, ಪ್ರಸಾರ ನಮ್ಮ ಕರ್ತವ್ಯವಾಗಿದೆ.

ಇಂತಹ ಕಾರ್ಯಗಳನ್ನು ಪೂರೈಸುತ್ತ ಬಂದ ನಮ್ಮ 'ವಚನಪಿತಾಮಹ ಡಾ॥ ಫ.ಗು. ಹಳಕಟ್ಟಿ ಸಂಶೋಧನ ಸಂಸ್ಥೆ'ಯ ಮೂಲಕ ಈ ಕರ್ತವ್ಯವನ್ನು ಈಡೇರಿಸಲು ಯೋಚಿಸಿದ ಫಲ 'ಆದಿಲಶಾಹಿ ಸಾಹಿತ್ಯ ಪ್ರಕಟನ ಯೋಜನೆ'. ಈ ಕಾರ್ಯ ಭಾವಿಸಿದಷ್ಟು ಸುಲಭವಲ್ಲ. ಅಲ್ಲಲ್ಲಿ ಚದರಿ ಹೋಗಿರುವ ಪ್ರಕಟಿತ-ಅಪ್ರಕಟಿತ ಕೃತಿಗಳನ್ನು ಶೋಧಿಸುವ, ಸಂಗ್ರಹಿಸುವ, ಅನುವಾದಿಸುವ, ಪರಿಷ್ಕರಿಸಿ ಪ್ರಕಟಿಸುವ ಹಂತಗಳಲ್ಲಿ ವಿದ್ವಾಂಸರು ಶ್ರಮಿಸಬೇಕಾಗುತ್ತದೆ. ನಮ್ಮ ಸುದೈವಕ್ಕೆ ಸಮರ್ಥ ಯೋಜಕರಾದ ಡಾ.ಎಂ.ಎಂ.ಕಲಬುರ್ಗಿಯವರು, ಆದಿಲಶಾಹಿ ಅಭ್ಯಾಸಿಗಳಾದ ಡಾ. ಕೃಷ್ಣ ಕೊಲ್ಹಾರಕುಲಕರ್ಣಿಯವರು ಈ ಯೋಜನೆಯ ಹೊಣೆಹೊತ್ತಿದ್ದಾರೆ. ಸಲಹಾಸಮಿತಿಯ ಸದಸ್ಯರು-ಅನುವಾದಕರು ಈ ಕಾರ್ಯದಲ್ಲಿ ಆಸ್ಥೆವಹಿಸಿದ್ದಾರೆ. ಇವರೆಲ್ಲರ ಸಹಯೋಗದಲ್ಲಿ ಕನ್ನಡಕ್ಕೆ ಹೊಸದೊಂದು ಆಕರ ಸಂಪತ್ತು ಹೊರಬರುತ್ತಲಿರುವುದು ಸಂತೋಷದ ಸಂಗತಿಯಾಗಿದೆ.

ಎಂ. ಬಿ. ಪಾಟೀಲ

ಅಧ್ಯಕ್ಷರು, ಬಿ.ಎಲ್.ಡಿ.ಇ ಸಂಸ್ಥೆ, ಬಿಜಾಪುರ
ಜಲಸಂಪನ್ಮೂಲ ಸಚಿವರು, ಕರ್ನಾಟಕ ಸರಕಾರ

ಮುದ್ರಣ : ಪ್ರಿಂಟ್ ಪಾಯಿಂಟ್, ಮೊ : 97390 67359